ಕಬ್ಬಾಳು : ಸಂಕಥನ

(ಡಾಕ್ಟರ್ ಆಫ್ ಫಿಲಾಸಫಿ (ಪಿ.ಎಚ್.ಡಿ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಬಸವರಾಜು ಬಿ.ಎಸ್.

ಮಾರ್ಗದರ್ಶಕರು
ಡಾ. ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ ೫೮೩೨೭೬
೨೦೧೪

ಕಬ್ಬಾಳು : ಸಂಕಥನ

(ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಬಸವರಾಜು ಬಿ.ಎಸ್.

ಮಾರ್ಗದರ್ಶಕರು
ಡಾ.ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೪

ಘೋಷಣಾ ಪತ್ರ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ **ಕಬ್ಬಾಳು : ಸಂಕಥನ** ಎಂಬ ಮಹಾಪ್ರಬಂಧವು ಡಾ.ಮಂಜುನಾಥ ಬೇವಿನಕಟ್ಟಿ ಅವರ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯನವನ್ನು ಆಧರಿಸಿ ರಚನೆಗೊಂಡಿದ್ದಾಗಿದೆ. ಈ ಮಹಾಪ್ರಬಂಧವನ್ನು ನಾನು ಈ ಮೊದಲು ಯಾವುದೇ ಪದವಿಗಾಗಿ ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವುದಿಲ್ಲವೆಂದು ಹಾಗೂ ಇದು ಬಿಡಿ ಇಲ್ಲವೆ ಇಡಿಯಾಗಿ ಎಲ್ಲಿಯೂ ಪ್ರಕಟಗೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

ಬಸವರಾಜು ಬಿ.ಎಸ್.
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ಸ್ಥಳ: ವಿದ್ಯಾರಣ್ಯ

ದಿನಾಂಕ:

ದೃಢೀಕರಣ ಪತ್ರ

ಕಬ್ಬಾಳು : ಸಂಕಥನ ಎಂಬ ವಿಷಯದ ಕುರಿತು ಬಸವರಾಜು ಬಿ.ಎಸ್. ಇವರು ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದಾರೆ. ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಇದು ಇವರ ಸ್ವತಂತ್ರ ಸಂಶೋಧನ ಅಧ್ಯಯನವಾಗಿದೆ. ಇದನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲಾಗಿದೆ.

ಮಾರ್ಗದರ್ಶಕರು

ಡಾ.ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ಸ್ಥಳ: ವಿದ್ಯಾರಣ್ಯ

ದಿನಾಂಕ:

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಕುಲಪತಿಗಳಾದ ಡಾ.ಹಿ.ಚಿ.ಬೋರಲಿಂಗಯ್ಯ ಅವರಿಗೆ, ಮಾನ್ಯ ಕುಲಸಚಿವರುಗಳಾದ ಡಾ.ಮಂಜುನಾಥ ಬೇವಿನಕಟ್ಟಿ ಹಾಗೂ ಡಾ.ಟಿ.ಪಿ.ವಿಜಯ್ ಅವರುಗಳಿಗೆ ತುಂಬುಹೃದಯದ ಕೃತಜ್ಞತೆಗಳು. ಅಧ್ಯಯನಾಂಗದ ನಿರ್ದೇಶಕರಾದ ಡಾ.ಅಶೋಕಕುಮಾರ ರಂಜೇರೆ ಅವರಿಗೆ ಹಾಗೂ ಮುಖ್ಯಸ್ಥರಾದ ಡಾ.ಮೊಗಳ್ಳಿ ಗಣೇಶ್ ಹಾಗೂ ಡಾ.ಸಿ.ಟಿ.ಗುರುಪ್ರಸಾದ್ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಅಧ್ಯಯನ ಕ್ರಮವನ್ನು ಬೋಧಿಸಿ ಅಧ್ಯಯನಕ್ಕೆ ಪೂರಕವಾದ ವಿಚಾರಗಳನ್ನು ಚರ್ಚಿಸುತ್ತಾ ಹಲವು ಯೋಚನಾ ಕ್ರಮಗಳನ್ನು ತಿಳಿಸಿ ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಮಹಾಪ್ರಬಂಧ ರಚಿಸಲು ಪ್ರೀತಿಯಿಂದ ಅತ್ಯಂತ ಸಹನೆಯಿಂದ ಮಾರ್ಗದರ್ಶನ ಮಾಡಿ ನನ್ನ ಅನಾರೋಗ್ಯದ ಸಂದರ್ಭದಲ್ಲಿ ಆತ್ಮೀಯತೆಯಿಂದ ಧೈರ್ಯತುಂಬಿ ಆತ್ಮವಿಶ್ವಾಸ ಮೂಡಿಸಿ ಮಾರ್ಗದರ್ಶನ ಮಾಡಿದ ಡಾ.ಮಂಜುನಾಥ ಬೇವಿನಕಟ್ಟಿ ಅವರಿಗೆ ಹೃದಯಪೂರ್ವಕ ಕೃತಜ್ಞತೆಗಳು.

ಅಧ್ಯಯನಕ್ಕೆ ಪೂರಕವಾದ ವಿಷಯವನ್ನು ಚರ್ಚೆಯ ಮೂಲಕ ವಿಭಿನ್ನ ರೀತಿಯ ನಿಲುವುಗಳನ್ನು ತಿಳಿಸಿದ ವಿಭಾಗದ ವಿದ್ವಾಂಸರುಗಳಾದ ಡಾ.ಸ.ಚಿ.ರಮೇಶ, ಡಾ.ಹೆಬ್ಬಾಲೆ ಕೆ.ನಾಗೇಶ್ ಅವರಿಗೂ ನನ್ನ ಕೃತಜ್ಞತೆಗಳು.

ಅಧ್ಯಯನಕ್ಕೆ ವಿವಿಧ ತಾತ್ವಿಕ ವಿಚಾರಗಳನ್ನು ಕ್ಷೇತ್ರಕಾರ್ಯದ ಕ್ರಮವನ್ನು ತಿಳಿಸಿ ಆತ್ಮೀಯತೆಯಿಂದ ಸಹಕರಿಸಿದ ಇತಿಹಾಸದ ಪ್ರಾಧ್ಯಾಪಕರಾದ ಡಾ.ಮುನಿರಾಜಪ್ಪ ಅವರಿಗೆ, ಈ ಅಧ್ಯಯನ ವಿಷಯದ ಆಯ್ಕೆಯಲ್ಲಿ ಪ್ರಮುಖಪಾತ್ರವಹಿಸಿದ ಅತ್ಯಂತ ಪ್ರೀತಿಯಿಂದ ಎಲ್ಲಾ ರೀತಿಯಲ್ಲು ಸಹಕರಿಸಿದ ಡಾ.ಕೆ.ಸಿ.ಸುರೇಶ ಅವರಿಗೆ ನನ್ನ ಅಧ್ಯಯನಕ್ಕೆ ವಿಶೇಷ ಆಸಕ್ತಿವಹಿಸಿ ಪ್ರೀತಿಯಿಂದ ಸಹಕರಿಸಿದ ಉಪನ್ಯಾಸಕರಾದ ರುದ್ರೇಶ್, ಜ್ಯೋತಿರ್ಲಿಂಗಯ್ಯ ಹಾಗೂ ಡಾ.ಚಂದ್ರಪ್ಪ ಸೊಬಟಿ ಅವರಿಗೂ ಕೃತಜ್ಞತೆಗಳು.

ಸದಾ ನನ್ನ ಶ್ರೇಯಸ್ಸನ್ನು ಬಯಸುವ ನನ್ನ ಎಲ್ಲಾ ಶ್ರೇಯಸ್ಸಿಗೂ ಕಾರಣರಾದ ನನ್ನ ಕುಟುಂಬ, ನನ್ನ ಎಲ್ಲಾ ಕೆಲಸಗಳನ್ನು ತನ್ನದೆಂದೇ ತಿಳಿದು ಪ್ರೀತಿಯಿಂದ, ಶ್ರದ್ಧೆಯಿಂದ ಸಹಕರಿಸುತ್ತಿರುವ ಹಾಗೂ ಸದಾ ನನ್ನ ಏಳಿಗೆಯನ್ನು ಬಯಸುವ ನಿಷ್ಕಲ್ಮಶ ಸಹೃದಯಿ ನನ್ನ ಅತ್ಯಂತ ಪ್ರೀತಿಯ ಅಣ್ಣನವರಾದ ನಟರಾಜು ಅವರಿಗೆ ನನ್ನ ನಮನಗಳು.

ನನ್ನ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಿ ವಿಭಿನ್ನ ದೃಷ್ಟಿಕೋನದಲ್ಲಿ ಅಧ್ಯಯನ ಮಾಡುವಂತೆ ಪ್ರೀತಿ ಸ್ನೇಹದಿಂದ ಧೈರ್ಯತುಂಬಿದ ಹಿರಿಯ ಸಹೋದರರಾದ ಧರ್ಮವೀರ ಕೆ.ಎಚ್., ವೆಂಕಟರವಣಪ್ಪ, ಮಾನಿಕಪ್ಪ, ಹಾಗೂ ಕಿರಿಯರಾದ ಕುಮಾರಸ್ವಾಮಿ ಬೆಜ್ಜಿಹಳ್ಳಿ, ಸಂದೀಪ ಡಿ.ಡಿ, ಯಲ್ಲಪ್ಪ ಗಲ್ಕರ್,

ಮುನಿರಾಜು, ಅಮರೇಶ್ ಆಲ್ಕೋಡ್, ಅಮರೇಶ ಕೋಲಾರ ಹಾಗೂ ನಾಗರಾಜು, ಓಬಳೇಶ, ವಿಜಯಶಂಕರ ಮತ್ತು ನನ್ನ ಅನನ್ಯ ವಿದ್ಯಾರ್ಥಿನಿಲಯದ ಎಲ್ಲ ಬಂಧುಗಳಿಗೂ ನನ್ನ ನೆನೆಕೆಗಳು.

ನನ್ನ ವಿಭಾಗದ ಸಂಶೋಧನಾರ್ಥಿಗಳಾದ ಮಲ್ಲಿಕಾರ್ಜುನ, ರೇವಣಸಿದ್ದಪ್ಪ, ಪಾಲಯ್ಯ, ರೇಣುಕುಮಾರಿ, ನಿರಂಜನಮೂರ್ತಿ, ಪಾತಲಿಂಗಪ್ಪ ಅವರಿಗೂ ನನ್ನ ನೆನಹುಗಳು. ಕನ್ನಡ ವಿಶ್ವವಿದ್ಯಾಲಯದ ನನ್ನ ಎಲ್ಲ ಆತ್ಮೀಯ ಸಂಶೋಧನಾರ್ಥಿಗಳಿಗೂ ನನ್ನ ನೆನಹುಗಳು.

ನನ್ನ ಸಂಶೋಧನಾ ಕ್ಷೇತ್ರಕಾರ್ಯದಲ್ಲಿ ನನ್ನ ಜೊತೆಗಿದ್ದು ತನ್ನೆಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಸಹಕರಿಸಿದ ಗೆಳೆಯ ಬ್ಯಾಟರಾಜು ಟಿ.ಕೆ., ಉಮೇಶ ಅಸರು, ಸುರೇಶ, ಶಿವರವಿ ಅವರಿಗೆ ನನ್ನ ನೆನಹು.

ನನ್ನ ಸಂಶೋಧನೆ ಬಗ್ಗೆ ನನಗಿಂತಲು ಹೆಚ್ಚು ಕುತೂಹಲವಿರುವ ನನ್ನ ಕ್ಷೇತ್ರಕಾರ್ಯದಲ್ಲಿ ಭಾಗವಹಿಸಿ ಸಂಶೋಧನೆಗೆ ಎಲ್ಲ ರೀತಿಯ ಸಹಕಾರ ನೀಡಿ ನನ್ನನ್ನು ಸಲುಹಿದ ಅತ್ಯಂತ ಪ್ರೀತಿಯ ನನ್ನ ಬಂಧುಗಳಾದ ಶಿವಸ್ವಾಮಿ, ನಿಂಗಯ್ಯ, ಶ್ರೀನಿವಾಸು, ಪ್ರಥಾಪ್, ಲೋಕೇಶ್, ರವಿ, ಮರಿಸ್ವಾಮಿ, ಸತೀಶ, ಮಂಡ್ಯರವಿ, ಮುತ್ತುರಾಜು ತೋಟಹಳ್ಳಿ, ದೊಡ್ಡರಾಜ್, ರಘುನಂದನ್ ಅವರಿಗೆ ನನ್ನ ವಿಶೇಷ ನೆನಹುಗಳು.

ನನ್ನ ಸಂಶೋಧನೆಯ ಬಗ್ಗೆ ನನ್ನಷ್ಟೇ ಹೆಚ್ಚು ಆಸ್ಥೆವಹಿಸಿ, ಕಾಳಜಿವಹಿಸಿ ಎಲ್ಲ ರೀತಿಯ ಸಹಕಾರ ನೀಡಿ ಎಲ್ಲ ಸಂದರ್ಭದಲ್ಲು ನನ್ನ ಜೊತೆಗಿದ್ದು, ಸಂಶೋಧನೆಯ ಬಗ್ಗೆ ಮತ್ತೆ ಮತ್ತೆ ಎಚ್ಚರಿಸಿ ಆತ್ಮಸ್ಥೈರ್ಯ ತುಂಬಿ ನನ್ನ ಆತ್ಮವಿಶ್ವಾಸ ಹೆಚ್ಚಿಸಿದ ಹಾಗೂ ಬಹಳ ನಿರೀಕ್ಷೆಯಿಟ್ಟುಕೊಂಡಿರುವ ಆತ್ಮೀಯ ಗೆಳೆಯ ಅತ್ಯಂತ ಪ್ರೀತಿಯ ವೇದಮೂರ್ತಿ ಮತ್ತು ಮಂಜಣ್ಣ, ಸುಜಾತ ಹಾಗೂ ಮುನಿರತ್ನ ಅವರಿಗೂ ನನ್ನ ನೆನಹುಗಳು.

ನನ್ನ ಸಂಶೋಧನಾ ಕ್ಷೇತ್ರದ ಎಲ್ಲಾ ಜನರಿಗೂ, ನಾನು ಕೇಳಿದಾಗಲೆಲ್ಲ ಮಾಹಿತಿಯನ್ನು ಒದಗಿಸಿದ ಎಲ್ಲ ವಕ್ತೃಗಳಿಗಿಗೂ ನನ್ನ ಕೃತಜ್ಞತೆಗಳು.

ನನ್ನ ವಿಭಾಗದ ಅಜಿತ್, ಬಂಗಾರಪ್ಪ, ಮಾರಪ್ಪ, ಖಾಸಿಂ ಅವರಿಗೂ ಹಾಗೂ ಮಹಾಪ್ರಬಂಧವನ್ನು ಗಣಕಯಂತ್ರದಲ್ಲಿ ಅಂದವಾಗಿ ಸಂಯೋಜಿಸಿಕೊಟ್ಟ ಆತ್ಮೀಯರಾದ ವೀರೇಶ ಕೆ. ಅವರಿಗೆ ನನ್ನ ಕೃತಜ್ಞತೆಗಳು.

ಬಸವರಾಜು ಬಿ.ಎಸ್.

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಮಹತ್ವ ಮತ್ತು ಸ್ವರೂಪ / ೧

೧.೧. ಪ್ರಸ್ತಾವನೆ

೧.೨. ಅಧ್ಯಯನದ ಉದ್ದೇಶ

೧.೩. ಆಕರ ಸಾಮಗ್ರಿ

೧.೪. ಅಧ್ಯಯನ ಕ್ರಮ

೧.೫. ಅಧ್ಯಯನದ ವ್ಯಾಪ್ತಿ

೧.೬. ಇದುವರೆಗು ನಡೆದಿರುವ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ೨

ಕಬ್ಬಾಳು ಗ್ರಾಮ ಭೌಗೋಳಿಕ ಮತ್ತು ಐತಿಹಾಸಿಕತೆ / ೧೩

೨.೧. ಸ್ಥಳನಾಮ ಮತ್ತು ಪದನಿಷ್ಪತ್ತಿ

೨.೨. ಭೌಗೋಳಿಕ ಲಕ್ಷಣಗಳು

೨.೩. ಚಾರಿತ್ರಿಕ ಮತ್ತು ಶಾಸನಶಾಸ್ತ್ರೀಯ ಹಿನ್ನೆಲೆ

೨.೪. ಐತಿಹ್ಯಗಳು

೨.೫. ಸಾರಿಗೆ ವ್ಯವಸ್ಥೆ

ಅಧ್ಯಾಯ ೩

ಕಬ್ಬಾಳು ಗ್ರಾಮದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಮತ್ತು ಧಾರ್ಮಿಕ ಸ್ಥಿತಿಗತಿಗಳು / ೩೨

೩.೧. ಸಾಮಾಜಿಕ ಸ್ಥಿತಿಗತಿ

ಅ. ವಸತಿ ವ್ಯವಸ್ಥೆ

ಆ. ಕುಟುಂಬ ವ್ಯವಸ್ಥೆ

ಇ. ವಿವಾಹ ಪದ್ಧತಿ

ಈ. ಆಹಾರ ಪದ್ಧತಿ

೩.೨. ಆರ್ಥಿಕ ಸ್ಥಿತಿಗತಿ

೩.೩. ರಾಜಕೀಯ ಸ್ಥಿತಿಗತಿ

೩.೪. ಶೈಕ್ಷಣಿಕ ಸ್ಥಿತಿಗತಿ

೩.೫. ಧಾರ್ಮಿಕ ಸ್ಥಿತಿಗತಿ

ಅಧ್ಯಾಯ ೪

ಕಬ್ಬಾಳು ಗ್ರಾಮದ ದೈವಗಳು / ೧೨೧

ಅ. ಕಬ್ಬಾಳಮ್ಮ

ಆ. ಮಾರಮ್ಮ

ಇ. ಭೀಮೇಶ್ವರ ಮತ್ತು ಬಸವೇಶ್ವರ

ಅಧ್ಯಾಯ ೫

ಕಬ್ಬಾಳು ಗ್ರಾಮದ ಜನಪದ ಸಾಹಿತ್ಯ / ೧೫೭

೫.೧. ಜನಪದ ಕಥೆಗಳು

೫.೨. ಜನಪದ ಗೀತೆಗಳು

೫.೩. ಜನಪದ ಗಾದೆಗಳು

೫.೪. ಜನಪದ ಒಗಟುಗಳು

ಅಧ್ಯಾಯ ೬

ಆಚರಣೆಗಳು / ೨೦೩

೬.೧. ಜೀವನಾವರ್ತನ ಆಚರಣೆಗಳು

೬.೨. ವಾರ್ಷಿಕಾವರ್ತನ ಆಚರಣೆಗಳು

೬.೩. ನಂಬಿಕೆಗಳು ಮತ್ತು ವಿಧಿ ನಿಷೇಧಗಳು

ಅಧ್ಯಾಯ ೭

ಕಬ್ಬಾಳು ಗ್ರಾಮ ಮತ್ತು ಸಮಕಾಲೀನತೆ / ೨೪೩

ಅಧ್ಯಾಯ ೮

ಉಪಸಂಹಾರ / ೨೫೨

ಅಧ್ಯಯನದ ಫಲಿತಗಳು / ೨೬೦

ಅನುಬಂಧಗಳು / ೨೬೨

೧. ಜನಪದ ಕಥೆ

೨. ಜನಪದ ಗೀತೆ

೩. ಸಾಂಸ್ಕೃತಿಕ ಪದಕೋಶ

೪. ಗ್ರಂಥಸೂಚಿ

೫. ನಕ್ಷೆ

೬. ಛಾಯಾಚಿತ್ರ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಮಹತ್ವ ಮತ್ತು ಸ್ವರೂಪ

೧.೧. ಪ್ರಸ್ತಾವನೆ

೧.೨. ಅಧ್ಯಯನದ ಉದ್ದೇಶ

೧.೩. ಆಕರ ಸಾಮಗ್ರಿ

೧.೪. ಅಧ್ಯಯನ ಕ್ರಮ

೧.೫. ಅಧ್ಯಯನದ ವ್ಯಾಪ್ತಿ

೧.೬. ಇದುವರೆಗು ನಡೆದಿರುವ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಮಹತ್ವ ಮತ್ತು ಸ್ವರೂಪ

೧.೧. ಪ್ರಸ್ತಾವನೆ

ಭಾರತದ ಇತಿಹಾಸವು ಪ್ರಾಚೀನಕಾಲದಿಂದ ಪ್ರಾರಂಭವಾಗಿ ಇಂದಿನವರೆಗೂ ಹಲವಾರು ಸಂಘರ್ಷದಿಂದಲೇ ಕೂಡಿದೆ. ಅದು ಧರ್ಮ ಧರ್ಮಗಳ ನಡುವೆ ಸಂಸ್ಕೃತಿ ಮತ್ತೊಂದು ಸಂಸ್ಕೃತಿ ನಡುವೆ, ಸಮುದಾಯ-ಸಮುದಾಯಗಳ ನಡುವೆ ಹೀಗೆ ವರ್ಣ ವರ್ಗಗಳ ನಡುವೆ ಸಂಘರ್ಷದಿಂದಲೇ ಕೂಡಿರುವುದು ಇತಿಹಾಸದುದ್ದಕ್ಕೂ ಹಲವಾರು ದಾಖಲೆಗಳು ಸಿಗುತ್ತವೆ. ಮೊದಲಿಗೆ ಮಾತೃಪ್ರಧಾನ ಸಂಸ್ಕೃತಿ ಮತ್ತು ಪಿತೃಪ್ರಧಾನ ಸಂಸ್ಕೃತಿಯಿಂದ ಪ್ರಾರಂಭವಾಗಿ ಆರ್ಯ-ದ್ರಾವಿಡರ ನಡುವೆ ಸಾಗಿದ ಸಂಘರ್ಷ ಇಂದು ಹಲವು ಧರ್ಮಗಳ ಸಮುದಾಯ-ಸಮುದಾಯಗಳ ನಡುವೆ ಉಳಿದು ಬಂದಿದೆ. ಪ್ರಾಚೀನ ಭಾರತದಲ್ಲಿ ಮೂಲ ಕೃಷಿಕ ದ್ರಾವಿಡರು ಮತ್ತು ವಲಸೆಗಾರ ಪಶುಪಾಲಕ ದ್ರಾವಿಡರ ನಡುವೆ ಇದ್ದ ಕಲಹಗಳು ಒಂದು ಹಂತದಲ್ಲಿ ಈ ಎರಡು ಸಂಸ್ಕೃತಿಗಳ ಸಮ್ಮಿಲನವಾಗಿ ಹೊಸ ದ್ರಾವಿಡ ಸಂಸ್ಕೃತಿ ಉದಯವಾಗಿ ಪಶುಪಾಲಕರು ಮೂಲ ಕೃಷಿಕರ ಸಂಸ್ಕೃತಿಯನ್ನು ಅನುಸರಿಸಿದರು. ಇದಕ್ಕೆ ಸಿಂಧೂನಾಗರೀಕತೆಯಲ್ಲಿ ದೊರೆತಿರುವ ಕುರುಹುಗಳೇ ಸಾಕ್ಷಿ. ಆರ್ಯರ ಆಗಮನದ ನಂತರ ಶಾಂತವಾಗಿದ್ದ, ಹೊಂದಾಣಿಕೆಯಿಂದ ಇದ್ದ ಮೂಲ ಕೃಷಿಕ ಮತ್ತು ಪಶುಪಾಲಕರಲ್ಲಿ ವಿಷಬೀಜ ಬಿತ್ತಿ ತನ್ನ ಉಳಿವಿಗಾಗಿ ಒಡೆದು ಆಳುವ ನೀತಿಯಿಂದ ಇವರಿಬ್ಬರಲ್ಲೂ ಕಲಹತಂದರು. ಇದುವರೆಗೂ ಇರದಿದ್ದ ಜಾತಿವ್ಯವಸ್ಥೆಯನ್ನು ತಂದು ಒಂದಾಗಿದ್ದ ದ್ರಾವಿಡರನ್ನು ಎರಡಾಗಿ ಒಡೆದು ನೂರಾರು ಜಾತಿಗಳಾಗಿ ಮಾಡಿದರು. ಇದರಿಂದ ಆರ್ಯರು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಅದು ಇಂದು ಪ್ರತಿ ಹಳ್ಳಿ ಹಳ್ಳಿಯಲ್ಲೂ ಉಳಿದುಕೊಂಡು ಬಂದಿದೆ. ತನ್ನ ಆರ್ಯ ಸಂಸ್ಕೃತಿಯನ್ನು ಬಲವಂತವಾಗಿ ದ್ರಾವಿಡರ ಮೇಲೆ ಹೇರಿದೆ.

ಅಮಾನವೀಯ ಮತ್ತು ಅನಾಗರೀಕತೆಯಿಂದ ಕೂಡಿದ್ದ ಮಾನವ ವಿರೋಧಿ ಆರ್ಯ ಸಂಸ್ಕೃತಿಯನ್ನು ವಿರೋಧಿಸಿ, ಮಾನವೀಯ ಮೌಲ್ಯವನ್ನು ಬಿತ್ತರಿಸಿದ ಬೌದ್ಧಧರ್ಮದ ವಿರುದ್ಧ ಸೋತು ಸುಣ್ಣವಾಗಿದ್ದ ಆರ್ಯಸಂಸ್ಕೃತಿ ತಮ್ಮ ಅಳಿವಿನಂಚಿನಲ್ಲಿದ್ದ ವೈದಿಕ ಸಂಸ್ಕೃತಿಯ ಉಳಿವಿಗಾಗಿ ಬೌದ್ಧಧರ್ಮದಲ್ಲಿದ್ದ ಮಾನವೀಯ ಮೌಲ್ಯಗಳನ್ನು ತನ್ನವಾಗಿಸಿಕೊಂಡು ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡಿತು. ಹಂತಹಂತವಾಗಿ

ಮತ್ತೆ ಪ್ರಾಬಲ್ಯ ಸಾಧಿಸಿದ ಹಿಂದೂ ಧರ್ಮ ಬುದ್ಧನ ಕಾಲಾನಂತರ ಮತ್ತೆ ತನ್ನ ಪ್ರಾಬಲ್ಯಮೆರೆದು ತನ್ನ ಉಳಿವಿಗಾಗಿ ಬೌದ್ಧಧರ್ಮವನ್ನು ನಿರ್ಮೂಲನೆ ಮಾಡಿತು. ಒಂದು ಕಾಲದಲ್ಲಿ ಇಡೀ ಭರತಖಂಡವನ್ನೇ ವ್ಯಾಪಿಸಿದ್ದ ಬೌದ್ಧಧರ್ಮವನ್ನು ನಾಮಾವಶೇಷಗೊಳಿಸಲು ಕೊನೆಗೂ ಸಾಧ್ಯವಾಗಲೇ ಇಲ್ಲ. ಅದು ಜನಪದರಲ್ಲಿ ಗ್ರಾಮದೇವತೆಗಳ ಆಚರಣೆಗಳಲ್ಲಿ ಶಾಕ್ತ, ತಾಂತ್ರಿಕ ಪಂಥವಾಗಿ ದೇಶದ ಪ್ರತಿಹಳ್ಳಿಗಳಲ್ಲೂ ಉಳಿದುಕೊಂಡು ಬಂದಿದೆ.

‘ಇತಿಹಾಸ ಮರೆತವನು ಇತಿಹಾಸ ಸೃಷ್ಟಿಸಲಾರ’ ಎಂಬ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಮಾತು ಸರ್ವಕಾಲಿಕ ಸತ್ಯವಾದುದು. ವರ್ತಮಾನ ಮತ್ತು ಭವಿಷ್ಯದಲ್ಲಿ ಎಂದೆಂದಿಗೂ ಜೀವಂತವಾಗಿರುವ ಈ ಮಾತು ಇತಿಹಾಸದ ಮಹತ್ವವನ್ನು ತಿಳಿಸುತ್ತದೆ. ರಾಜ್ಯದ ಅಥವಾ ರಾಷ್ಟ್ರೀಯ ಜೀವನದ ದಾಖಲೆ ಇತಿಹಾಸವಾದರೆ ಜಾನಪದ ಪ್ರಾಗೈತಿಹಾಸಿಕ ಜೀವನದ ಪರಂಪರಾಗತ ಸಂಗತಿ. ಇತಿಹಾಸಕ್ಕೆ ಜನಪದ ಕತೆ, ಗೀತೆ, ಲಾವಣಿ, ಗಾದೆ, ನಂಬಿಕೆ, ಆಚರಣೆ ಮುಂತಾದ ವಿವಿಧ ಪ್ರಕಾರಗಳ ನಿಕಟವಾದ ಸಂಬಂಧವನ್ನು ಗುರುತಿಸಬಹುದು. ಇವುಗಳಲ್ಲಿ ಅಡಕವಾಗಿರುವ ಜನರ ತಿಳಿವು ಮೌಖಿಕ ಇತಿಹಾಸ (Oral History) ಎನಿಸುತ್ತದೆ. ಜನರ ಜೀವನ ಸಂಸ್ಕೃತಿಯೇ ಇತಿಹಾಸ. ಇತಿಹಾಸವೇ ನಮ್ಮ ಸಂಸ್ಕೃತಿಯಾಗಿರುವಾಗ ಒಂದು ರಾಷ್ಟ್ರ, ರಾಜ್ಯ ಅಥವಾ ಒಂದು ಗ್ರಾಮವೇ ಆಗಿರಲಿ ಅಲ್ಲಿನ ಜನರ ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಜೀವನದ ಸಂದರ್ಭಗಳನ್ನು ಅಧ್ಯಯನ ಮಾಡುವಾಗ ಆದಿಕಾಲದಿಂದ ಆಧುನಿಕ ಕಾಲದವರೆಗೂ ಹಂತ ಹಂತವಾಗಿ ನಡೆದು ಬದಲಾವಣೆ ಹೊಂದಿರುವ ಅಲ್ಲಿನ ಇತಿಹಾಸ ಮತ್ತು ಸಂಸ್ಕೃತಿ ತಿಳಿಯುವುದು ಸೂಕ್ತವೆನಿಸುತ್ತದೆ. ನಮ್ಮ ಜನತೆಯಲ್ಲಿ ನಿಜವಾದ ಬದಲಾವಣೆ ತರುವುದು ಹಿಂದಿನ ಬೇರುಗಳ ಅರಿವಿನ ಮೂಲಕ. ತಾವು ಬದುಕಿದ ಯಾವ ಯಾವ ಕಾಲಘಟ್ಟ, ಹಂತ, ಪರಿಸರ, ಪ್ರಸಂಗ ಎದುರಿಸಿದ್ದು, ಆದಿಕಾಲದಿಂದ ಅನಾದಿಕಾಲದವರೆಗೆ ಬೆಳೆದು ಬಂದ ಬಗೆ ತಿಳಿದಾಗ ಮಾತ್ರ ಮುಂದೆ ಹೇಗೆ ನಡೆಯಬೇಕೆಂಬುದು ಗೊತ್ತಾಗುವುದು. ಈ ಕಾರಣದಿಂದ ಈ ದೇಶದ ಬೆನ್ನೆಲುಬಾದ ಗ್ರಾಮಗಳನ್ನು ಮತ್ತು ಗ್ರಾಮಗಳ ಜೀವನಾಡಿಯಾದ ಗ್ರಾಮದೇವತೆಗಳನ್ನು ಅವುಗಳ ಆಚರಣೆ, ಧಾರ್ಮಿಕ ಸ್ಥಿತಿಗತಿ, ಜನಪದ ಸಾಹಿತ್ಯ, ಗ್ರಾಮದ ಐತಿಹಾಸಿಕತೆ, ಭೌಗೋಳಿಕ ಪರಿಸರ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಏಕಕಾಲದಲ್ಲಿ ಅಧ್ಯಯನಕ್ಕೊಳಪಡಿಸುವ ತುರ್ತು ಇಂದು ಇದೆ. ಪ್ರಸ್ತುತ ಅಧ್ಯಯನ ಈ ನಿಟ್ಟಿನಲ್ಲಿ ಸಾಗಿದೆ.

ಜನಪದ ರೂಪ ಸ್ವರೂಪಗಳನ್ನು ಕುರಿತು ಪ್ರಪಂಚದಾದ್ಯಂತ ಇಂದು ಗಂಭೀರ ಚಿಂತನೆ ನಡೆಯುತ್ತಿದೆ. ಕಳೆದ ಸುಮಾರು ೧೫೦ ವರ್ಷಗಳಲ್ಲಿ ಜಾನಪದದ ಶಾಬ್ದಿಕ ಮತ್ತು ಅಶಾಬ್ದಿಕ ರೂಪಗಳನ್ನು ಸಂಗ್ರಹಿಸಿ, ವರ್ಗೀಕರಿಸಿ ವಿಶ್ಲೇಷಿಸುವ ಕಾರ್ಯ ತುಂಬ ವ್ಯಾಪಕವಾಗಿ ಜರುಗುತ್ತಿದೆ. ಮಾನವ ಕೇಂದ್ರಿತ ಜಾನಪದ, ಜನಾಂಗ, ಗ್ರಾಮ, ಗ್ರಾಮದೇವತೆ, ಸಂಸ್ಕೃತಿ ಅಧ್ಯಯನಕ್ಕೆ ಮೂಲ ಮತ್ತು ಪ್ರಬಲ ಆಕರ ಎನ್ನುವ ಆಧಾರವೇ ಇದಕ್ಕೆ ಪ್ರೇರಣೆ. ಜನಪದ ಜೀವನವನ್ನು ತಲತಲಾಂತರದಿಂದ ರೂಪಿಸಿ ಅದರ ಸರ್ವಮುಖಿ ಕ್ರಿಯೆಗಳನ್ನು ನಿಯಂತ್ರಿಸುವ ಶಕ್ತಿ ಅವರ ಆಚರಣೆ ಮತ್ತು ನಂಬಿಕೆಗಳಾಗಿವೆ. ಇಂತಹ ಸಂಗತಿಗಳ ಕುರಿತ

ಅಧ್ಯಯನ ಸಮಕಾಲೀನ ಸಂದರ್ಭದಲ್ಲಿ ಆಳವಾದ ಸಂಶೋಧನೆಗಳ ಮೂಲಕ ಪರಿಶೀಲಿಸುವ ಅಗತ್ಯ ನಮ್ಮ ಮುಂದಿದೆ.

ಹಳ್ಳಿಗಳು ಮಾನವಿಕ ವಿಜ್ಞಾನಗಳನ್ನು ವಿಶೇಷವಾಗಿ ಆಕರ್ಷಿಸುವ ಅಧ್ಯಯನದ ವಸ್ತುವಾಗಿವೆ. ಭಾರತೀಯ ಹಳ್ಳಿಗಳಿಗಂತೂ ಸಂಸ್ಕೃತಿ ಅಧ್ಯಯನದಲ್ಲಿ ಒಂದು ವಿಶಿಷ್ಟ ಮೌಲ್ಯವಿದೆ. ಇವು ಪ್ರಾಚೀನ ಮತ್ತು ಆಧುನಿಕ ವಿಜ್ಞಾನದ ತಾಕಲಾಟ. ಈ ಎರಡರ ಪ್ರಭಾವವನ್ನು ಮೈಗೂಡಿಸಿಕೊಂಡಂತವು. ಇಂತಹ ವಿಶಿಷ್ಟ ಸ್ಥಿತಿ ಅಮೇರಿಕಾದಂತ ಮುಂದುವರೆದ ರಾಷ್ಟ್ರಗಳ ಹಳ್ಳಿಗಳಿಗೆ ಇರಲಾರದು. ಹೀಗಾಗಿ ಅಲ್ಲಿನ ಅಧ್ಯಯನಕಾರರು ಭಾರತದಂತಹ ದೇಶಗಳ ಹಳ್ಳಿಗಳತ್ತ ವಿಶೇಷವಾಗಿ ಆಕರ್ಷಿತರಾಗಿದ್ದಾರೆ. ಡಾ.ಈಶ್ವರನ್ ಅವರು "ಭಾರತದ ಹಳ್ಳಿಗಳು ಈ ನಾಡಿನ ಪ್ರಾಚೀನ ಸಂಸ್ಕೃತಿಯನ್ನು ಈ ಸಂಸ್ಕೃತಿಯಲ್ಲಿ ಅಡಕವಾಗಿರುವ ಅಪೂರ್ವ ಮೌಲ್ಯವನ್ನು ಕಾಲಪುರುಷನ ಕ್ರೂರ ದಬ್ಬಾಳಿಕೆಯಿಂದ ರಕ್ಷಿಸಿಕೊಂಡು ಬಂದಿವೆ. ಈ ಸಾಂಸ್ಕೃತಿಕ ಸಂಪತ್ತನ್ನು ಕಂಡು ಇಂದು ಔದ್ಯೋಗಿಕ ದೃಷ್ಟಿಯಿಂದ ಮುಂದುವರೆದಿರುವ ಪಶ್ಚಿಮ ಜಗತ್ತಿನ ಜನತೆಯು ಆಶ್ಚರ್ಯಪಟ್ಟಿದೆ" ಎನ್ನುತ್ತಾರೆ. ಹೀಗಿರುವಾಗ ನಾವು ಈ ವಿಶೇಷ ಅವಕಾಶಗಳನ್ನು ಬಳಸಿಕೊಂಡು ನಮ್ಮ ಜಾನಪದ ಅಧ್ಯಯನವನ್ನು ಮತ್ತಷ್ಟು ಸೋಪಜ್ಞಗೊಳಿಸಿಕೊಳ್ಳುವ ಸಾಧ್ಯತೆಯಿದೆ. ಮತ್ತು ಗಟ್ಟಿಗೊಳಿಸಿಕೊಳ್ಳುವ ಪ್ರಯತ್ನ ಮಾಡಬೇಕಾಗಿದೆ. ಒಂದು ಗ್ರಾಮದ ಅಧ್ಯಯನ ಸ್ಥಳೀಯ ನೆಲೆ ಹಾಗೂ ಸಾರ್ವತ್ರಿಕ ನೆಲೆ ಎರಡರಲ್ಲೂ ಮುಖ್ಯವಾಗುತ್ತದೆ. ಅದರ ಇತಿಹಾಸ, ಐತಿಹ್ಯಗಳು ಸ್ಥಳೀಯ ಮಹತ್ವ ಪಡೆದರೆ, ಅದರ ಆಚರಣೆ, ನಂಬಿಕೆ, ಸಂಪ್ರದಾಯಗಳಲ್ಲಿನ ಆಶಯಗಳು ಸಾರ್ವತ್ರಿಕ ಪ್ರಾಮುಖ್ಯತೆ ಪಡೆದು ತೌಲನಿಕ ಅಧ್ಯಯನಕ್ಕೆ ನೆರವಾಗುತ್ತವೆ.

ಪರಂಪರೆಯ ಗರ್ಭದಲ್ಲಿ ಒಟ್ಟು ಜಗತ್ತಿನ ಅಥವಾ ಪ್ರಾದೇಶಿಕವಾಗಿ ಎಲ್ಲೆಯನ್ನು ಗುರುತಿಸಿಕೊಂಡು ಅಧ್ಯಯನವನ್ನು ಮಾಡುವಾಗ ಸಂಸ್ಕೃತಿಯ ಬೇರುಗಳು ಅನಾವರಣಗೊಳ್ಳುತ್ತವೆ. ನನಗೆ ಸಂಸ್ಕೃತಿ ಎಂದು ಕರೆಸಿಕೊಳ್ಳುವಲ್ಲಿಯೂ ಕೂಡ ಇದರ ಹಿಂದೆ ಗ್ರಾಮ ಸಮಾಜ ಎಂಬ ಪರಿಕಲ್ಪನೆ ಮೂಡುವುದು ಸಹಜ. ಗ್ರಾಮ ಸಮುದಾಯ ಸಮಾಜದ ಮುಂದುವರೆದ ಜೀವನ ಸಂಸ್ಕೃತಿಯ ಅನೇಕ ಕಾಲಘಟ್ಟಗಳಲ್ಲಿ ಉಂಟಾದ ಮಾನವನ ಬದುಕಿನ ಸ್ಥಿತ್ಯಂತರಗಳ ನಡುವೆಯೂ ಆಚರಣೆ, ನಂಬಿಕೆ, ಸಂಪ್ರದಾಯ, ಸಾಹಿತ್ಯಗಳನ್ನು ತುಂಬಿಕೊಂಡಿದ್ದು ಇದರ ಜೊತೆಗೆ ಗ್ರಾಮದೇವತೆಯ ಹಿನ್ನೆಲೆ, ಮಹಿಮೆ, ಶಕ್ತಿ ಅಷ್ಟೇ ಕುತೂಹಲದಿಂದ ಅಧ್ಯಯನ ಮಾಡುವಂತೆ ಸಂಶೋಧಕರನ್ನು ಪ್ರೇರೇಪಿಸಿದೆ.

ಸಂಸ್ಕೃತಿ ಎಂದರೆ ಸಮಾಜದ ವ್ಯವಹಾರದಲ್ಲಿ ಕಂಡುಬರುವ ಸಂಪ್ರದಾಯ, ಆಚಾರ ವಿಚಾರಗಳನ್ನು, ಆಹಾರ ವಿಹಾರ, ಉಡುಗೆ ತೊಡುಗೆಗಳನ್ನು ವೈವಿಧ್ಯಪೂರ್ಣ ಚಟುವಟಿಕೆಗಳನ್ನು ಮನದಟ್ಟು ಮಾಡುತ್ತದೆ. ಏಕೆಂದರೆ ಸಂಸ್ಕೃತಿ ಸಾಮಾಜಿಕ ಪ್ರಕ್ರಿಯೆಯಾಗಿದ್ದು, ಸಮಾಜವು ಭೌಗೋಳಿಕ ಸನ್ನಿವೇಶ, ಸಮಯ ಸಂದರ್ಭಗಳನ್ನು ಅವಲಂಬಿಸಿರುತ್ತದೆಯಾದ್ದರಿಂದ ಪ್ರಾದೇಶಿಕವಾಗಿ ಪ್ರತಿಯೊಂದು ಪ್ರದೇಶದ ಸಂಸ್ಕೃತಿಯ ವೈವಿಧ್ಯಗಳನ್ನು ತಿಳಿಯಬೇಕಾದರೆ ಅಲ್ಲಿಯ ಸಮುದಾಯ, ಭಾಷೆ, ಧರ್ಮ, ಸಾಮಾಜಿಕ ಪದ್ಧತಿ, ನೀತಿ, ಅನುಕಂಪ, ಕಟ್ಟುಪಾಡುಗಳು, ಸಹನೆ, ಸಹಬಾಳ್ವೆ, ಸಾಂಸ್ಕೃತಿಕ ವಿಶಿಷ್ಟತೆಗಳು, ನ್ಯಾಯತತ್ಪರತೆ, ಸಾಂಸ್ಕೃತಿಕ

ಪಲ್ಲಟಗಳ ವಿಶಾಲ ಚಿತ್ರಪಟ ಮುಂತಾದ ಅಂಶಗಳನ್ನು ತಿಳಿಯಬೇಕಾದುದು ಅತ್ಯವಶ್ಯಕ. ಈ ದೃಷ್ಟಿಯಿಂದ ಕಬ್ಬಾಳು ಗ್ರಾಮವನ್ನು ಅಧ್ಯಯನಕ್ಕೆ ಅಳವಡಿಸಿಕೊಂಡು ಅದರ ವ್ಯಾಪ್ತಿಯಲ್ಲಿ ಕಂಡುಬರುವ ಸಾಂಸ್ಕೃತಿಕ ವೈಶಿಷ್ಟ್ಯತೆಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಗ್ರಾಮ ಜೀವನವು ಕುಟುಂಬದ ಆಧಾರದ ಮೇಲೆ ನಿರ್ಧರಿಸಲ್ಪಡುತ್ತದೆ. ಗ್ರಾಮದ ಜನರ ನೋವು -ನಲಿವು, ಕೆಲಸ-ಕಾರ್ಯ, ವ್ಯವಹಾರ, ವಿಹಾರ, ಎಲ್ಲವುಗಳಲ್ಲಿ ಕುಟುಂಬದ ಪಾತ್ರ ಹಿರಿದಾದುದು. ವ್ಯಕ್ತಿಗಿಂತ ಕುಟುಂಬವೇ ಮುಖ್ಯ. ಏಕೆಂದರೆ ವ್ಯಕ್ತಿಯ ಹಿತಾಸಕ್ತಿಗಳು ಕುಟುಂಬಕ್ಕೆ ಅಧೀನವಾಗಿರುತ್ತವೆ. ಸಾಮಾನ್ಯವಾಗಿ ಇಲ್ಲಿನ ಕುಟುಂಬಗಳು ಪಿತೃಪ್ರಧಾನವಾಗಿವೆ. ತಂದೆಯೇ ಕುಟುಂಬದ ಹಿರಿಯ ಯಜಮಾನ. ಎಲ್ಲರೂ ಆತನಿಗೆ ತಲೆಬಾಗಿ ನಡೆಯುವುದನ್ನು ಕಾಣಬಹುದು. ಕೆಲವು ಸಂದರ್ಭಗಳಲ್ಲಿ ಕುಟುಂಬದಲ್ಲಿ ಸ್ತ್ರೀಯ ಮಾತುಗಳು ಮುಖ್ಯವಾಗುತ್ತವೆ. ಅವರ ಅಭಿಪ್ರಾಯಗಳಿಗೂ ಮನ್ನಣೆ ಸಿಗುತ್ತದೆ.

ಇಲ್ಲಿ ಕೃಷಿಯೇ ಪ್ರಧಾನವಾಗಿರುವುದರಿಂದ ಕೃಷಿ ಕೆಲಸಗಳಿಗೆ ಹೆಚ್ಚಿನ ಜನಬೇಕಾಗುವುದರಿಂದ ಕುಟುಂಬದ ಕೆಲಸ ಕಾರ್ಯಗಳಲ್ಲಿ ಸ್ತ್ರೀಯರು, ಪುರುಷರು, ಮಕ್ಕಳು, ಹಿರಿಯರು ಆಯಾ ಕೆಲಸದ ಆಧಾರದ ಮೇಲೆ[೨] ಹಂಚಿಕೊಂಡು ಮಾಡುತ್ತಾರೆ. ಮನೆಯ ಹೊರಗಿನ ಹೊಲಗಳ ಕೃಷಿಕಾರ್ಯಗಳನ್ನು ವ್ಯವಹಾರಗಳನ್ನು ಪುರುಷರು ನೋಡಿಕೊಂಡರೆ, ಮನೆಯೊಳಗಿನ ಕೆಲಸಗಳನ್ನು ಮತ್ತು ಮಕ್ಕಳ ಲಾಲನೆ-ಪಾಲನೆ-ಪೋಷಣೆಯನ್ನು ಮಾಡುವುದು ಸ್ತ್ರೀಯರ ಹೊಣೆ. ಇದರ ಜೊತೆಗೆ ಹೊಲ ಮನೆಕೆಲಸಗಳಲ್ಲೂ ಸ್ತ್ರೀಯರು ಭಾಗವಹಿಸುತ್ತಾರೆ. ಬಿತ್ತನೆ ಕೆಲಸ, ನಾಟಿ ಮಾಡುವುದು, ಕಳೆಕೀಳುವ, ಒಕ್ಕುವ ಸಂದರ್ಭದಲ್ಲಿ ಸ್ತ್ರೀಯರಿಲ್ಲದೆ ಕೆಲಸ ಸಾಗುವುದೇ ಇಲ್ಲ. ಹೆಣ್ಣುಮಕ್ಕಳು ತಾಯಂದಿರ ಕೆಲಸಗಳಲ್ಲಿ ಭಾಗಿಯಾದರೆ ಗಂಡುಮಕ್ಕಳು ತಂದೆಯಾದವರಿಗೆ ಅವರವರ ಕೆಲಸಗಳಲ್ಲಿ ನೆರವಾಗುತ್ತಾರೆ. ಹೀಗಿದ್ದರೂ ಇಲ್ಲಿ ಮಕ್ಕಳು ಶಾಲೆಗೆ ಹೋಗುವುದರಿಂದ ವಂಚಿತರಾಗಿಲ್ಲ.

೧.೨. ಅಧ್ಯಯನದ ಉದ್ದೇಶ

ಜಾಗತೀಕರಣ ಮತ್ತು ಆಧುನೀಕರಣದ ಪ್ರಭಾವದಿಂದಾಗಿ ಇತ್ತೀಚಿನ ದಿನಗಳಲ್ಲಿ ಗ್ರಾಮಗಳಲ್ಲಿ ಬದಲಾವಣೆ ಕಾಣುತ್ತಿದೆ. ಅದಕ್ಕೆ ಅನೇಕ ಕಾರಣಗಳನ್ನು ಕೊಡಬಹುದಾದರೂ ಪ್ರಸ್ತುತ ಹಳ್ಳಿಗಳ ಜೀವನ ಸ್ವಲ್ಪಮಟ್ಟಿಗೆ ಸುಧಾರಣೆ ಹೊಂದಿ ಜನರಲ್ಲಿ ಹೊಸ ಚೇತನ ಹುಟ್ಟಿ ಜನರ ನಿತ್ಯ ಬದುಕನ್ನು ಬದಲಾಯಿಸುತ್ತಿದೆಯಾದರೂ, ಪ್ರಾಚೀನ ಕಾಲದಲ್ಲಿನ ಸಾಂಸ್ಕೃತಿಕ ಚಟುವಟಿಕೆ, ಜನಪದ ಸಾಹಿತ್ಯ, ಆಚರಣೆ, ಚಾರಿತ್ರಿಕ ಮಹತ್ವಪೂರ್ಣ ಅಂಶಗಳು, ಐತಿಹಾಸಿಕ ದಾಖಲೆಗಳು, ಶಾಸನಗಳು ಮುಂತಾದ ಚರಿತ್ರೆ ಕಟ್ಟುವಲ್ಲಿ ಸಂಸ್ಕೃತಿ ಪ್ರತೀಕವಾಗಿದ್ದಂತಹ ಅಂಶಗಳು, ಇಂದಿನ ಸಿಮೆಂಟ್ ಸಂಸ್ಕೃತಿಯಡಿಯಲ್ಲಿ ಮುಳುಗಿ ಹೋಗುತ್ತಿವೆ. ಆದ್ದರಿಂದ ಇಂತಹ ಸಂದಿಗ್ಧ ಸ್ಥಿತಿಯನ್ನು ಅರಿತು ಪ್ರಸ್ತುತ ಅಧ್ಯಯನವು ಜಾಗತೀಕರಣದ ದಾಳಿಯಿಂದಾಗಿ ಕಬ್ಬಾಳು ಪ್ರದೇಶವು ಪರಿವರ್ತನೆ ಎಂಬ ನಗರ ಬೆಳವಣಿಗೆಯ ಕ್ರಮವನ್ನು ಅನುಸರಿಸುತ್ತಿರುವುದರಿಂದ ಮುಂದಿನ ದಿನಮಾನಗಳಲ್ಲಿ ಪ್ರಸ್ತುತ ಪ್ರದೇಶದ ಜನಪದ ಸಾಹಿತ್ಯ, ಕಲೆ, ಸಂಪ್ರದಾಯಗಳ ಹತ್ತಾರು ಅಂಶಗಳು ಮರೆಯಾಗುವ ಸಂದೇಹವಿರುವುದರಿಂದ ಈ ಎಲ್ಲಾ ಅಂಶಗಳನ್ನು ಅತ್ಯಂತ ತುರ್ತಾಗಿ ಸಂಗ್ರಹಿಸುವುದು ಅನಿವಾರ್ಯವಾಗಿದೆ. ಅಷ್ಟೇ ಅಲ್ಲದೆ ಅಧ್ಯಯನಕ್ಕೆ ಪೂರಕವಾದ ಕಬ್ಬಾಳು ಗ್ರಾಮದ

ದುರ್ಗ, ಅಲ್ಲಿನ ಗ್ರಾಮದೇವತೆ, ಕಬ್ಬಾಳು ದುರ್ಗದ ಮೇಲಿನ ಐತಿಹಾಸಿಕ ಕೋಟೆ, ಭೌಗೋಳಿಕ ನೈಸರ್ಗಿಕ ವಿವರಗಳು, ಶಾಸನಗಳು, ಸಾಮಾಜಿಕ, ಆರ್ಥಿಕ ವ್ಯವಸ್ಥೆಗಳು, ಕುಟುಂಬ ಪದ್ಧತಿ ಮೊದಲಾದ ಅಂಶಗಳ ಅಧ್ಯಯನ ಮಾಡುವುದು ತೀರಾ ಅಗತ್ಯವಿದೆ.

ಇತ್ತೀಚೆಗೆ ಜನಪ್ರಿಯವಾಗುತ್ತಿರುವ ಅಧ್ಯಯನ ಕ್ರಮವು ಸಾಮಾನ್ಯವಾಗಿ ಇಂದು ನಡೆಯುತ್ತಿರುವ ಜಾಗತೀಕರಣದ ಪ್ರಕ್ರಿಯೆಗೆ ಪ್ರಾದೇಶಿಕ ಅಧ್ಯಯನಗಳನ್ನು ಮುಖಾಮುಖಿಯಾಗಿಸುತ್ತಿದೆ. ಭೌತಿಕ ಸಾರಿಗೆ ಸಂಪರ್ಕಗಳು, ಮಾಧ್ಯಮಗಳು, ಬಹುರಾಷ್ಟ್ರೀಯ ಸಂಸ್ಥೆಗಳು ಜಗತ್ತಿನ ಬೇರೆ ಬೇರೆ ಖಂಡಗಳನ್ನು ಹತ್ತಿರ ಹತ್ತಿರ ತರುತ್ತಿವೆ. ಇಂಥ ಸಂದರ್ಭದಲ್ಲಿ ಪ್ರಾದೇಶಿಕ ಅಧ್ಯಯನಗಳು ಜಾಗತೀಕರಣಕ್ಕೆ ಪರ್ಯಾಯವಾಗಿ ನಿರ್ದಿಷ್ಟ ಪ್ರದೇಶವೊಂದರ ಸಾಂಸ್ಕೃತಿಕ ಅನನ್ಯತೆಯನ್ನು ಸ್ಥಾಪಿಸುತ್ತವೆ ಮತ್ತು ಸಂಸ್ಕೃತಿಯೊಂದರ ಸೂಕ್ಷ್ಮ ವಿಶ್ಲೇಷಣೆಗೆ ಬದ್ಧವಾಗುತ್ತ ಸ್ಥೂಲ ವಿಶ್ಲೇಷಣೆಯನ್ನು ನಿರಾಕರಿಸುತ್ತವೆ. ಆಧುನಿಕೋತ್ತರ ಅಧ್ಯಯನದ ವಿಧಾನಗಳು ಪ್ರಾದೇಶಿಕತೆಯನ್ನು ಬಲವಾಗಿ ಸಮರ್ಥಿಸುತ್ತವೆ. ನಿರ್ದಿಷ್ಟ ಪ್ರದೇಶವೊಂದರ ಅನನ್ಯತೆಯ ಹುಡುಕಾಟದ ಜೊತೆಗೆ ಜಾಗತೀಕರಣ ಮತ್ತು ಆಧುನೀಕರಣದ ದಾಳಿಯಿಂದ ಕಬ್ಬಾಳು ಹೇಗೆ ತನ್ನ ತನವನ್ನು ಉಳಿಸಿಕೊಂಡಿದೆ ಎಂಬುದನ್ನು ಶೋಧಿಸುವ ಉದ್ದೇಶವನ್ನಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

ಇತಿಹಾಸ ಪ್ರಜ್ಞೆಯ ಅಭಾವದ ಮೂಲಕ ನಾಗರೀಕ ಜೀವನದ ಇತಿಹಾಸ ಸಂಸ್ಕೃತಿಗಳ ವಿವರಗಳು ನಮಗೆ ವಾಸ್ತವವಾಗಿ ದೊರೆಯುವುದಿಲ್ಲವೆಂದ ಮೇಲೆ ಜಾನಪದ, ಸಾಂಸ್ಕೃತಿಕ, ಸಾಮಾಜಿಕ ಜೀವನದ ಇತಿಹಾಸ ನಮಗೆ ಎಲ್ಲಿ ದೊರೆಯಬೇಕು? ಹೇಗೆ ದೊರೆಯಬೇಕು? ಎಂಬ ಡಾ.ಬೆಟಗೇರಿ ಕೃಷ್ಣಶರ್ಮ ಅವರ ಈ ಪ್ರಶ್ನೆ ಜಾನಪದ ಅಧ್ಯಯನದ ಅನಿವಾರ್ಯತೆಯನ್ನು ಮತ್ತು ಅಧ್ಯಯನದ ತೀವ್ರತೆಯನ್ನು ತಿಳಿಸುತ್ತದೆ. ಆದ್ದರಿಂದ ಪ್ರತಿಯೊಂದು ಪ್ರದೇಶದ ಸಾಂಸ್ಕೃತಿಕ ಅಧ್ಯಯನದ ಅಗತ್ಯವಿರುವ ಇಂದಿನ ಸಂದರ್ಭದಲ್ಲಿ ಪ್ರಸ್ತುತ ಅಧ್ಯಯನ ಈ ದಿಸೆಯಲ್ಲಿ ಸಾಗಿದೆ.

ಪ್ರಸ್ತುತ ಪ್ರದೇಶವು ಐತಿಹಾಸಿಕ ಪರಂಪರೆಯನ್ನು ಹೊಂದಿರುವುದರ ಜೊತೆಗೆ ಧಾರ್ಮಿಕ ಕೇಂದ್ರವಾಗಿದೆ. ಇಲ್ಲಿನ ಶಾಸನಗಳು, ಐತಿಹ್ಯಗಳು, ಕೋಟೆ, ಕೆರೆ-ಕಟ್ಟೆ, ಬಾವಿಗಳು, ಪ್ರಾಣಿವೈವಿಧ್ಯ, ಜನಪದ ಸಾಹಿತ್ಯ, ಇಲ್ಲಿನ ಜನಪದ ಸಂಪತ್ತು ಮತ್ತು ಸಂಸ್ಕೃತಿಗೆ ಯಾವೊಬ್ಬ ಸಂಶೋಧಕನು ಮನಸೋಲದೆ ಇರಲಾರ. ಇದು ನನ್ನ ಆಸಕ್ತಿಯನ್ನು ಇಮ್ಮಡಿಗೊಳಿಸಿತು. ಅಲ್ಲದೆ ಕಬ್ಬಾಳು ಧಾರ್ಮಿಕ ಕೇಂದ್ರವಾಗಿರುವುದರಿಂದ ಇಲ್ಲಿನ ಗ್ರಾಮದೇವತೆಯ ಜಾತ್ರೆಯ ಬಗ್ಗೆ ಕನಕಪುರ ತಾಲೂಕು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಾಂಸ್ಕೃತಿಕ ಅಧ್ಯಯನಗಳಲ್ಲಿ ಅಲ್ಲಲ್ಲಿ ಪ್ರಸ್ತಾಪಿಸಿರುವುದು ಹೊರತುಪಡಿಸಿ ಸಮಗ್ರವಾದ ಅಧ್ಯಯನಗಳು ನಡೆದಿಲ್ಲ. ಆದ್ದರಿಂದ 'ಕಬ್ಬಾಳು: ಸಂಕಥನ' ಎಂಬ ಶೀರ್ಷಿಕೆಯಡಿಯಲ್ಲಿ ಕಬ್ಬಾಳು ಗ್ರಾಮದ ಪರಿಸರದ ಮೇಲೆ ಸಾಧ್ಯವಾದಷ್ಟು ಮಟ್ಟಿಗೆ ಬೆಳಕು ಚೆಲ್ಲುವಂತ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ.

ಪ್ರಸ್ತುತ ಅಧ್ಯಯನದ ಕೇಂದ್ರಬಿಂದು ಇಲ್ಲಿನ ಗ್ರಾಮದೇವತೆ. ಕಬ್ಬಾಳಮ್ಮ ಮೂಲತಹ ಮಾತೃಮೂಲ ಸಂಸ್ಕೃತಿಯ ದೇವತೆಯಾಗಿದ್ದಾಳೆ. ಫಲವಂತಿಕೆಯ ಸಂಕೇತವಾಗಿರುವ ಕಾಳಪ್ಪ ಆದಿಮ ಮೂಲ ಕೃಷಿಯ ಪ್ರತೀಕವಾಗಿದ್ದಾರೆ. ಅದರ ಆಚರಣೆ, ಸಂದರ್ಭ, ಆಚರಣೆಯ ಮೂಲ ಧಾರ್ಮಿಕ ಸ್ಥಿತಿಗತಿಗಳನ್ನು ಹಲವು

ಜಾನಪದ ಸಿದ್ಧಾಂತದ ಹಿನ್ನೆಲೆಯಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ. ಗ್ರಾಮದೇವತೆಯ ಮೂಲಕ ಕಾಲಕಾಲದಲ್ಲಿ ಮಾನವ ಬೆಳೆದುಬಂದ ಬಗೆ ಗೊತ್ತಾಗುತ್ತದೆ. ಮಾನವನ ಜೊತೆ ಗ್ರಾಮದೇವತೆ, ಗ್ರಾಮದೇವತೆಯ ಜೊತೆ ಮಾನವನ ಚರಿತ್ರೆ ಬೆಳೆದುಬಂದದ್ದನ್ನು ತಿಳಿಯಬಹುದು. ದೇವತೆಯ ಮೂಲಕ ಕಬ್ಬಾಳಿನ ಚರಿತ್ರೆಯ ಜೊತೆಗೆ ಅಲ್ಲಿನ ಭೌಗೋಳಿಕ ಪರಿಸರ, ದಟ್ಟವಾದ ಕಾಡು ಮತ್ತು ಅಲ್ಲಿನ ವೈಶಿಷ್ಟ್ಯಗಳನ್ನು ತಿಳಿಯಲು ಸಾಧ್ಯವಾಗಿದೆ.

ಗ್ರಾಮದೇವತೆ ಮನುಷ್ಯನ ಮನಸ್ಸಿನ ಕೂಸು. ಅವಳ ಉಡುಗೆ-ತೊಡುಗೆ, ಆಹಾರ-ವಿಹಾರ, ಅಲಂಕಾರ, ಪೂಜೆ, ಉತ್ಸವ, ಜಾತ್ರೆ, ರೂಢಿ, ಸಂಪ್ರದಾಯಗಳಲ್ಲಿ ಮನುಷ್ಯನ ಮನಸ್ಸು ಕೆಲಸ ಮಾಡಿದೆ. ಗ್ರಾಮದೇವತೆ ಕಬ್ಬಾಳಮ್ಮನ ಮೇಲೆ ಹಾಡು, ಕಥೆಕಟ್ಟಿ, ತ್ರಿಪದಿಗಳನ್ನು ಕಟ್ಟಿದ್ದು ಮನುಷ್ಯನ ಮನಸ್ಸೆ. ಆದ್ದರಿಂದ ಇಲ್ಲಿನ ಜನರ ಮನಸ್ಸಿನ ಸುತ್ತ ಕಬ್ಬಾಳಮ್ಮ, ಕಬ್ಬಾಳಮ್ಮನ ಸುತ್ತ ಇಲ್ಲಿನ ಜನರ ಮನಸ್ಸು ಒಂದಕ್ಕೊಂದು ಒಲಿದುಕೊಂಡಿರುವುದನ್ನು ಕಾಣುತ್ತೇವೆ. ಮನಶಾಸ್ತ್ರೀಯ ಅಧ್ಯಯನದ ಹಿನ್ನೆಲೆಯಲ್ಲಿ ನೋಡಿದಾಗ ಮನುಷ್ಯನ ಮನಸ್ಸೆ ಗ್ರಾಮದೇವತೆಯ ಪ್ರೀತಿ, ಪ್ರೇಮ, ಕನಸು, ವರ, ಶಾಪ, ಕಳವು, ಮೋಸ, ವಂಚನೆ, ಸೇಡು ಇತ್ಯಾದಿಗಳಿಗೆ ಕಾರಣ ಎಂಬುದು ತಿಳಿಯುತ್ತದೆ. ಈ ಹಿನ್ನೆಲೆಯಲ್ಲಿ ಗ್ರಾಮದೇವತೆಯ ಆಚರಣೆಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

ಇಲ್ಲಿನ ಮತ್ತೊಂದು ಆಶ್ಚರ್ಯ ಮತ್ತು ಕುತೂಹಲವನ್ನು ಉಂಟು ಮಾಡಿದ ವಿಷಯ ಧಾರ್ಮಿಕ ಸ್ಥಿತಿಗತಿಗಳು. ಇಲ್ಲಿ ಯಾವ ಧರ್ಮದ ಆಚರಣೆಗಳು ಇಂದಿಗೂ ಜೀವಂತವಾಗಿ ಉಳಿದುಕೊಂಡು ಬಂದಿವೆ ಎಂಬುದನ್ನು ವಿಶ್ಲೇಷಣೆಗೊಳಪಡಿಸಿ, "ಭಾರತದ ಇತಿಹಾಸ ಬೌದ್ಧಧರ್ಮ ಮತ್ತು ಹಿಂದೂ ಧರ್ಮದ ನಡುವೆ ನಡೆದ ಹೋರಾಟವೇ ಹೊರತು ಬೇರೇನು ಅಲ್ಲ" ಎಂಬ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮಾತಿನ ಹಿನ್ನೆಲೆಯಲ್ಲಿ ಇಲ್ಲಿನ ಧಾರ್ಮಿಕ ಸ್ಥಿತಿಗತಿಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

೧.೩. ಆಕರ ಸಾಮಗ್ರಿ

ಒಂದು ಪ್ರದೇಶದ ಸಾಂಸ್ಕೃತಿಕ ಚರಿತ್ರೆ ತಿಳಿಯಲು ಅನೇಕ ಬಗೆಯ ಆಕರ ಸಾಮಗ್ರಿಗಳ ಮೊರೆ ಹೋಗುವುದು ಅನಿವಾರ್ಯ. ಒಂದು ನಾಡಿನ ಇತಿಹಾಸ ರಚನೆಗೆ ಸಂಬಂಧಿಸಿದ ಮಾಹಿತಿಯನ್ನು ಮುಖ್ಯವಾಗಿ ಪ್ರಾಚ್ಯವಸ್ತು ಮತ್ತು ಸಾಹಿತ್ಯಿಕ ಆಕರಗಳು ಒದಗಿಸುತ್ತವೆ. ಪ್ರಾಚ್ಯವಸ್ತುಗಳಲ್ಲಿ ಶಾಸನ ಹಾಗೂ ಸ್ಮಾರಕಗಳು ಸೇರ್ಪಡೆಯಾದರೆ, ಸಾಹಿತ್ಯಿಕ ಆಕರಗಳಲ್ಲಿ ದೇಶೀಯ ಮತ್ತು ವಿದೇಶಿಯ ಬರವಣಿಗೆಗಳು ಮುಖ್ಯವಾಗುತ್ತವೆ. ಪ್ರಸ್ತುತ 'ಕಬ್ಬಾಳು: ಸಂಕಥನ' ಅಧ್ಯಯನದಲ್ಲಿ ಶಾಸನಗಳು, ಸ್ಮಾರಕಗಳು, ಸಾಹಿತ್ಯಿಕ, ದೇಶಿ ಮತ್ತು ವಿದೇಶಿ ಬರವಣಿಗೆಗಳು, ಅಲ್ಲಿನ ವಕ್ತೃಗಳ ಮಾಹಿತಿಗಳು, ಛಾಯಾಚಿತ್ರಗಳನ್ನು ಆಕರವಾಗಿ ಬಳಸಿಕೊಂಡಿದ್ದೇನೆ.

೧.೪. ಅಧ್ಯಯನ ಕ್ರಮ

ಒಂದು ಪ್ರದೇಶದ ಸಾಂಸ್ಕೃತಿಕ ಅಧ್ಯಯನ ಮಾಡುವಾಗ ಅಲ್ಲಿ ಲಭ್ಯವಿರುವ ಸಾಹಿತ್ಯಿಕ ಮತ್ತು ಮೌಖಿಕ ಆಧಾರಗಳು ಮುಖ್ಯವಾಗುತ್ತವೆ. ಸಾಂಸ್ಕೃತಿಕ ಅಧ್ಯಯನದಲ್ಲಿ ಬಹುಮುಖ್ಯವಾದುದು ಕ್ಷೇತ್ರಕಾರ್ಯ.

ಕ್ಷೇತ್ರಕಾರ್ಯದ ಮೂಲಕ ಕಂಡುಬಂದ ದೇವಾಲಯಗಳ ಅಧ್ಯಯನದೊಂದಿಗೆ ಅವುಗಳ ಭಾವಚಿತ್ರಗಳನ್ನು ಸಂಗ್ರಹಿಸಲಾಯಿತು. ಸಂಗ್ರಹಿಸಿದ ವಿಷಯಗಳನ್ನು ಪಟ್ಟಿಕೆಗಳಲ್ಲಿ ದಾಖಲಿಸಲಾಯಿತು. ಕ್ಷೇತ್ರಕಾರ್ಯದ ಮೂಲಕ ಕಂಡುಬಂದ ದೇವಾಲಯಗಳು, ಜಾತ್ರೆ, ಉರುಸು, ಜೀವನಾವರ್ತನ ಆಚರಣೆ, ವಾರ್ಷಿಕಾವರ್ತನ ಆಚರಣೆಗಳ ಅವಲೋಕನ ಭಾವಚಿತ್ರಗಳನ್ನು ಸಂಗ್ರಹಿಸಿ ವಿಷಯಾನುಕ್ರಮದಲ್ಲಿ ಹೊಂದಿಸಿಕೊಳ್ಳಲಾಯಿತು. ಇವುಗಳಿಗೆ ಸಂಬಂಧಿಸಿದಂತೆ ವಕ್ತೃಗಳನ್ನು ಮತ್ತು ಹಲವು ವಿದ್ವಾಂಸರುಗಳನ್ನು ಸಂದರ್ಶಿಸಿ ದಾಖಲಿಸಿಕೊಂಡು ಇವೆಲ್ಲವುಗಳ ಆಧಾರದಿಂದ ಅಲ್ಲಿನ ಚಾರಿತ್ರಿಕ, ಸಾಂಸ್ಕೃತಿಕ ನೆಲೆಬೆಲೆಯನ್ನು ಅರಿಯಲು ಸಾಧ್ಯವಾಯಿತು.

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಈ ಮಾದರಿಯಲ್ಲಿ ಮತ್ತು ಪ್ರಸ್ತುತ ವಿಷಯಕ್ಕೆ ಪೂರಕವಾದ ಸಂಶೋಧನಾ ಮಹಾಪ್ರಬಂಧಗಳನ್ನು ಅಧ್ಯಯನ ಮಾಡಿ ಪೂರಕ ಮಾಹಿತಿಗಳನ್ನು ಪಡೆಯಲಾಯಿತು. ಅವುಗಳಲ್ಲಿ 'ಕನಕಗಿರಿ: ಒಂದು ಸಾಂಸ್ಕೃತಿಕ ಸಂಕಥನ', 'ಅಥಣಿ ಪರಿಸರದ ವಾಲ್ಮೀಕಿ ಸಮುದಾಯ', 'ರಾಮನಗರ ಜಿಲ್ಲೆಯ ಸ್ಥಳನಾಮಗಳು', 'ಹೈದರಾಬಾದ್ ಕರ್ನಾಟಕದ ಗ್ರಾಮದೇವತೆಗಳು: ಜಾನಪದೀಯ ಅಧ್ಯಯನ', 'ಗ್ರಾಮದೇವತೆಗಳ ಅಧ್ಯಯನ ಒಂದು ಸಾಂಸ್ಕೃತಿಕ ಶೋಧ', 'ಗ್ರಾಮದೇವತೆಗಳು', 'ಜಾತ್ರೆಗಳು' ಮುಂತಾದವುಗಳಿಂದ ಪೂರಕ ಮಾಹಿತಿಯನ್ನು ಸಂಗ್ರಹಿಸಿ ಸಂದರ್ಭಕ್ಕನುಸಾರವಾಗಿ ಬಳಸಿಕೊಳ್ಳಲಾಗಿದೆ. ಹೀಗಾಗಿ ಅಧ್ಯಯನಕ್ಕೆ ಸಂಬಂಧಪಟ್ಟ ಗ್ರಂಥವಾರು ಕ್ಷೇತ್ರಕಾರ್ಯದ ಮೌಖಿಕ ಆಧಾರಗಳನ್ನು ಸಂಗ್ರಹಿಸಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

೧.೫. ಅಧ್ಯಯನದ ವ್ಯಾಪ್ತಿ

ಯಾವುದೇ ಒಂದು ಸಾಂಸ್ಕೃತಿಕ ಅಧ್ಯಯನ ನಡೆಸಬೇಕಾದರೆ ಅದರ ಆಳ ಹರವುಗಳನ್ನು, ವಿಸ್ತಾರಗಳನ್ನು, ವ್ಯಾಪ್ತಿಯನ್ನು ನಿಗದಿಪಡಿಸಿಕೊಳ್ಳಬೇಕು. ಹಾಗಾದಾಗ ಮಾತ್ರ ಅಧ್ಯಯನಕ್ಕೆ ಒಂದು ನಿರ್ದಿಷ್ಟ ಗುರಿಗಳು ಸಿಗುತ್ತವೆ ಮತ್ತು ಪ್ರಸ್ತುತ ಅಧ್ಯಯನಕ್ಕೆ ನ್ಯಾಯ ಒದಗಿಸಲು ಸಾಧ್ಯವಾಗುತ್ತದೆ. ಪ್ರಸ್ತುತ ಅಧ್ಯಯನವು ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ 'ಕಬ್ಬಾಳು' ಅಧ್ಯಯನದ ಕ್ಷೇತ್ರವಾಗಿದೆ. ಕಬ್ಬಾಳು ಮತ್ತು ಅದಕ್ಕೆ ಹೊಂದಿಕೊಂಡಂತೆ ಇರುವ ಹೊಸಕಬ್ಬಾಳನ್ನು ಅಧ್ಯಯನದಲ್ಲಿ ಸೀಮಿತಗೊಳಿಸಲಾಗಿದೆ. ಕಬ್ಬಾಳಿನ ಮುಂದುವರೆದ ಅಥವಾ ವಿಸ್ತರಣೆ ಹೊಂದಿರುವ ಭಾಗವಾಗಿರುವ ಹೊಸಕಬ್ಬಾಳು ಕಬ್ಬಾಳಿನ ಒಂದು ಭಾಗವಾಗಿಯೇ ಇದೆ. ಆದ್ದರಿಂದ ಒಟ್ಟಾರೆಯಾಗಿ 'ಕಬ್ಬಾಳು: ಸಂಕಥನ' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಸೀಮಿತಗೊಳಿಸಿಕೊಂಡು ಅಧ್ಯಯನಕ್ಕೊಳಪಡಿಸಲಾಗಿದೆ.

ಹಾಗಾಗಿ ಪ್ರಸ್ತುತ ಪ್ರದೇಶವನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡಲು ಅಧ್ಯಯನದ ಅನುಕೂಲಕ್ಕಾಗಿ ಹಲವು ಭಾಗಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ. ಪ್ರಸ್ತುತ ಮಹಾಪ್ರಬಂಧವು ಒಟ್ಟು ೦೮ ಅಧ್ಯಾಯಗಳನ್ನು ಒಳಗೊಂಡಿದ್ದು, ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ, ಅಧ್ಯಯನ ಕ್ರಮ, ಆಕರ ಸಾಮಗ್ರಿಗಳನ್ನು ಸ್ಪಷ್ಟಪಡಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ 'ಕಬ್ಬಾಳು ಗ್ರಾಮದ ಭೌಗೋಳಿಕ ಮತ್ತು ಐತಿಹಾಸಿಕತೆ' ಎಂದಿದ್ದು ಇದರಲ್ಲಿ ಗ್ರಾಮದ ಸ್ಥಳನಾಮ ಮತ್ತು ಪದನಿಷ್ಪತ್ತಿ ತೆಗೆದಿದ್ದು, ಭೌಗೋಳಿಕ ಲಕ್ಷಣಗಳು, ಅಲ್ಲಿನ

ಪರಿಸರ, ವಾಯುಗುಣ, ಅರಣ್ಯ ಸಂಪತ್ತು, ಸಾರಿಗೆ ಸಂಪರ್ಕ, ಚಾರಿತ್ರಿಕ ಹಿನ್ನೆಲೆ, ಗ್ರಾಮದ ಪ್ರಾಚೀನತೆ ಬಗ್ಗೆ ಚರ್ಚಿಸಿದ್ದು, ಶಾಸನ ಶಾಸ್ತ್ರೀಯ ಮತ್ತು ಐತಿಹ್ಯಗಳ ಹಿನ್ನೆಲೆಯಲ್ಲಿ ವಿವರಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ 'ಕಬ್ಬಾಳು ಗ್ರಾಮದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಮತ್ತು ಧಾರ್ಮಿಕ ಸ್ಥಿತಿಗತಿ' ಎಂದಿದ್ದು ಗ್ರಾಮದಲ್ಲಿನ ಸಮುದಾಯ, ಕುಟುಂಬ ಪದ್ಧತಿ, ವಸತಿ ವ್ಯವಸ್ಥೆ, ವಿವಾಹ ಪದ್ಧತಿ, ಆಹಾರ ಪದ್ಧತಿ ಬಗ್ಗೆ ವಿವರವಾಗಿ ತಿಳಿಸಲಾಗಿದೆ. ಆರ್ಥಿಕ ಸ್ಥಿತಿಗತಿ, ಶೈಕ್ಷಣಿಕ ಸ್ಥಿತಿ, ರಾಜಕೀಯ, ಧಾರ್ಮಿಕ ಸ್ಥಿತಿಯ ಹಿನ್ನೆಲೆಯನ್ನು ಗಮನಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ "ಕಬ್ಬಾಳು ಪರಿಸರದ ದೈವಗಳು" ಎಂದು ವಿಭಾಗಿಸಿಕೊಂಡಿದ್ದು ಅಧ್ಯಯನದ ಕೇಂದ್ರಬಿಂದುವಾಗಿದೆ. ಗ್ರಾಮದೇವತೆ ಕಬ್ಬಾಳಮ್ಮನ ಮೂಲಇತಿಹಾಸ, ಮೂಲಸ್ಥಳ, ಅವಳು ವಲಸೆಬಂದ ಬಗೆಯನ್ನು ಹಾಗೂ ಕಬ್ಬಾಳಮ್ಮ ಆದಿಮ ಸಂಸ್ಕೃತಿಯಾದ ಮಾತೃಪ್ರಧಾನ ದೇವತೆಯಾಗಿದ್ದು ಈ ಹಿನ್ನೆಲೆಯಲ್ಲಿ ವಿಶ್ಲೇಷಣೆಗೊಳಪಡಿಸಿದ್ದು ಆ ಪ್ರದೇಶದಲ್ಲಿರುವ ಮಾರಮ್ಮ, ಭೀಮೇಶ್ವರ, ಬಸವೇಶ್ವರ ಮುಂತಾದ ಪಿತೃಪ್ರಧಾನ ದೇವತೆಗಳ ಆಚರಣೆಗಳ ಹಿನ್ನೆಲೆಯನ್ನು ವಿವರಿಸಲಾಗಿದೆ.

ಐದನೇ ಅಧ್ಯಾಯದಲ್ಲಿ "ಕಬ್ಬಾಳು ಗ್ರಾಮದ ಜನಪದ ಸಾಹಿತ್ಯ" ಎಂದಿದ್ದು ಕಥೆ, ಗಾದೆ, ಗೀತೆ, ಒಗಟುಗಳು ಎಂದು ವಿಂಗಡಿಸಿ ಕಬ್ಬಾಳಮ್ಮನ ಬಗ್ಗೆ ಕಟ್ಟಿ ಹಾಡಿರುವ ಅಪಾರವಾದ ಜನಪದ ಗೀತೆಗಳು ಕಥೆಗಳ ಹಿನ್ನೆಲೆಯಲ್ಲಿ ಅಲ್ಲಿನ ಸಂಸ್ಕೃತಿಯನ್ನು ಅರಿಯುವ ಪ್ರಯತ್ನ ಮಾಡಲಾಗಿದೆ.

ಆರನೆಯ ಅಧ್ಯಾಯ "ಕಬ್ಬಾಳು ಗ್ರಾಮದ ಆಚರಣೆಗಳು" ಎಂದು ವಿಂಗಡಿಸಿಕೊಂಡಿದ್ದು, ವಾರ್ಷಿಕ ಆಚರಣೆಗಳು ಮತ್ತು ಜೀವನಾವರ್ತನ ಆಚರಣೆಗಳೆಂದು ವಿಂಗಡಿಸಿ ನಂಬಿಕೆ, ವಿಧಿ, ನಿಷೇಧ, ಸಂಪ್ರದಾಯ, ಹಬ್ಬಗಳು, ಹರಕೆಗಳು, ಅಲ್ಲಿನ ಜನರ ಜೀವನ ಸಂಸ್ಕತಿಯನ್ನು ತಿಳಿಸುವ ಪ್ರತಿಬಿಂಬದಂತಿವೆ. ಆಚರಣೆಗಳ ಹಿನ್ನೆಲೆಯಲ್ಲಿ ಜನರ ಸಂಬಂಧಗಳನ್ನು ಚರ್ಚಿಸಲಾಗಿದೆ.

ಅಧ್ಯಾಯ ಏಳರಲ್ಲಿ 'ಕಬ್ಬಾಳು ಗ್ರಾಮ ಮತ್ತು ಸಮಕಾಲೀನತೆ' ಎಂದು ವಿಂಗಡಿಸಿದ್ದು ಕಬ್ಬಾಳು ಗ್ರಾಮ ಹಿಂದೆ ಹೇಗಿತ್ತು, ಪ್ರಸ್ತುತ ಸಂದರ್ಭದಲ್ಲಿ ಜಾಗತೀಕರಣ, ಆಧುನೀಕರಣದೊಂದಿಗೆ ಹೇಗೆ ಹೊಂದಾಣಿಕೆ ಮಾಡಿಕೊಂಡಿದೆ ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಾಯ ಎಂಟರಲ್ಲಿ 'ಸಮಾರೋಪ' ಕುರಿತು ಒಟ್ಟು ಅಧ್ಯಯನದ ನೋಟ, ಅಧ್ಯಯನದ ಫಲಿತಗಳನ್ನು ಒಳಗೊಂಡಿದೆ. ನಂತರ ಅನುಬಂಧ ಚಿತ್ರಸಂಪುಟ ಇತ್ಯಾದಿಗಳನ್ನು ಒಳಗೊಂಡಿದೆ.

ಹೀಗೆ ಈ ಮಹಾಪ್ರಬಂಧದ ರಚನೆಗೆ ಬೇಕಾಗಿರುವ ಪೂರಕ ಸಾಮಗ್ರಿಗಳನ್ನು ಇತರ ಗ್ರಾಮಾಧ್ಯಯನ ಮತ್ತು ಗ್ರಾಮ ದೇವತೆಗಳ ಅಧ್ಯಯನ ಕೃತಿಗಳಿಂದ, ಸ್ಥಳೀಯರಿಂದ, ವಿದ್ವಾಂಸರಿಂದ ಕಬ್ಬಾಳಿನ ಬಗೆಗೆ ಈಗಾಗಲೇ ಪ್ರಕಟವಾಗಿರುವ ಕೆಲವು ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಆ ವಿಷಯವನ್ನು ಅಧ್ಯಯನಕ್ಕೆ ಪೂರಕವಾಗಿ ಪ್ರಾಸಂಗಿಕವಾಗಿ ವಿಷಯದ ಸಮಗ್ರವಾದ ಚರ್ಚೆಯ ಖಚಿತತೆಗಾಗಿ ಬಳಸಿಕೊಳ್ಳಲಾಗಿದೆ. ಈ ಸಂಶೋಧನೆ ಸಮಗ್ರ ಅಧ್ಯಯನದ ಪ್ರಯತ್ನವೇ ಹೊರತು ಸಂಪೂರ್ಣ ಅಧ್ಯಯನವಲ್ಲ ಎಂಬುದನ್ನು ಪ್ರಾಮಾಣಿಕವಾಗಿ ವಿನಯ ಪೂರ್ವಕವಾಗಿ ತಿಳಿಯಬಸುತ್ತೇನೆ.

೧.೬. ಇದುವರೆಗು ನಡೆದಿರುವ ಅಧ್ಯಯನಗಳ ಸಮೀಕ್ಷೆ

ಕರ್ನಾಟಕದಲ್ಲಿ ಜಾನಪದ ಅಧ್ಯಯನ ತುಂಬಾ ಗಂಭೀರವಾಗಿಯೇ ನಡೆಯುತ್ತಲಿದೆ. ಆದರೆ ಪಾಶ್ಚಾತ್ಯದೇಶಗಳಿಗೆ ಹೋಲಿಸಿದರೆ ಇಲ್ಲಿಯ ಕೆಲಸ ಕಡಿಮೆ ಎಂದೇ ಹೇಳಬಹುದು. ಹಿಂದೆ ಪ್ರಭುಗಳ ರಾಜರುಗಳ ಮೂಲಕ ದೇಶವನ್ನು ಅಳೆಯುತ್ತಿದ್ದರು. ಆದರೆ ಇಂದು ಸಾಮಾನ್ಯ ಜನಗಳ ಹಿನ್ನೆಲೆಯಲ್ಲಿ ಭಾರತವನ್ನು ನೋಡುವ ಪ್ರಯತ್ನಗಳು ಸಾಧ್ಯವಾಗುತ್ತಿವೆ. ನೈಜ ಭಾರತದ ಸ್ಥಿತಿಗತಿಗಳನ್ನು ಕಂಡುಕೊಳ್ಳುವ ಆಯಾಮವಾಗಿ ಜಾನಪದ ಹುಟ್ಟಿಕೊಂಡಿದೆ. ಸಂಬಂಧಕ್ಕಾಗಿ ಜಾನಪದ ಒಡನಾಟಕ್ಕಾಗಿ ಜಾನಪದ ಎಂಬ ಮನೋಧರ್ಮ ಬೆಳೆಯತೊಡಗಿತು. ಸ್ವಾತಂತ್ರ್ಯದ ಸಂದರ್ಭದಲ್ಲಿ ಹಳ್ಳಿಗಳು ನಾಶವಾಗುತ್ತವೆ ಎಂಬ ಕೂಗಾಟವೆದ್ದಾಗ 'ಜಾನಪದ ನಾಶವಾಗುತ್ತದೆ ಅದು ನಾಶವಾಗುವ ಮುನ್ನ ಉಳಿಸಬೇಕು' ಎಂದು ಜಾನಪದ ವಿದ್ವಾಂಸರ ಅಭಿರುಚಿ ಆಶಕ್ತಿಯಿಂದ ಗ್ರಾಮಾಧ್ಯಯನಗಳಿಗೆ ಹೆಚ್ಚು ಒತ್ತು ನೀಡಲಾಯಿತು.

ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ಅರ್ಚಕ ಬಿ.ರಂಗಸ್ವಾಮಿಯವರ 'ಹುಟ್ಟಿದ ಹಳ್ಳಿ' ಕನ್ನಡದಲ್ಲಿ ಬಂದ ಗ್ರಾಮಾಧ್ಯಯನದ ಮೊದಲ ಗ್ರಂಥ. ದಕ್ಷಿಣ ಕರ್ನಾಟಕದ ಒಂದು ಹಳ್ಳಿಯ ಸಾಮಾಜಿಕ, ಆರ್ಥಿಕ, ಧಾರ್ಮಿಕ ಜೀವನವನ್ನು ತಮ್ಮ ಉತ್ಸಾಹ ಅಭಿಮಾನ ಆಸಕ್ತಿಯಿಂದ ಚಿತ್ರಿಸಿದ್ದಾರೆ. ಆ ಸಂದರ್ಭದಲ್ಲಿ ಇಂದಿನ ವಿದ್ವಾಂಸರಿಗಿರುವ ವೈಜ್ಞಾನಿಕ ಸಲಕರಣೆಗಳಿರಲಿಲ್ಲ, ಆದರೂ ಅಲ್ಲಿನ ಗ್ರಾಮೀಣ ಸೊಗಡನ್ನು ಸಂದರ್ಶನ, ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ ಚಿತ್ರಿಸಿದ್ದಾರೆ. ಅಂದಿನ ಗ್ರಾಮೀಣ ಬದುಕಿನ ಆರ್ಥಿಕ ದುಸ್ಥಿತಿಗೆ ಕಾರಣವನ್ನು ಸರಿಯಾಗಿ ಗುರುತಿಸಲಿಲ್ಲವಾದರು ಅವರ ಸಂಪ್ರದಾಯ ಬದ್ಧವಾದ ಗ್ರಹಿಕೆಗಳ ಪರಿಮಿತಿ ಇದೆ. ಅದನ್ನು ಹೊರತುಪಡಿಸಿದರೆ 'ಹುಟ್ಟಿದಹಳ್ಳಿ' ಇಂದಿಗೂ ಈ ದಿಶೆಯಲ್ಲಿ ಕೆಲಸಮಾಡುವ ವಿದ್ವಾಂಸರಿಗೆ ಮಾರ್ಗದರ್ಶಕ ಗ್ರಂಥವಾಗಿಯೇ ಉಳಿದಿದೆ.

ಶ್ರೀರಾಮ ಇಟ್ಟಣ್ಣವರ ಅವರು 'ಹಲಗಲಿ: ಗ್ರಾಮ ಜಾನಪದ' ಎಂಬ ಶೀರ್ಷಿಕೆಯಡಿಯಲ್ಲಿ ದೇಶದಲ್ಲಿ ಜನಸಾಮಾನ್ಯರ ಬದುಕನ್ನು ಪ್ರಧಾನಹಂತಕ್ಕೆ ತರುವ ಪ್ರಯತ್ನ ಮಾಡಿದ್ದಾರೆ. ಹಿಂದೆ ಭಾರತದಲ್ಲಿ ರಾಜಮಹಾರಾಜರ ಕಾಲದಿಂದಲೂ ಜನಸಾಮಾನ್ಯರನ್ನು ಕಡೆಗಣಿಸುತ್ತಾ ಬಂದಿದ್ದಾರೆ. ಜನಸಾಮಾನ್ಯರ ಸಾಂಸ್ಕೃತಿಕ ಬದುಕು ಇತಿಹಾಸದ ಒಂದು ಪ್ರಮುಖ ಭಾಗವೇ ಆಗುತ್ತದೆ ಎಂಬ ಅರಿವು ಹಿಂದಿನವರಿಗೆ ಇಲ್ಲವಾಗಿತ್ತು. ಆದ್ದರಿಂದ ಜನಸಾಮಾನ್ಯರು ಇತಿಹಾಸದಿಂದ ದೂರ ಉಳಿದಿದ್ದಾರೆ. ಆದ್ದರಿಂದ ಜನಸಾಮಾನ್ಯರ ಬದುಕನ್ನೂ ಗ್ರಾಮೀಣ ಸಮುದಾಯವನ್ನೂ ಇಡಿಯಾಗಿ ಇತಿಹಾಸ ದೃಷ್ಟಿಯಿಂದ ಉಳಿಸುವ ದಾಖಲಿಸುವ ಪ್ರಯತ್ನವನ್ನು ಇಟ್ಟಣ್ಣನವರು ಮಾಡಿದ್ದಾರೆ. ಹೀಗಾಗಿ ಆಯಾ ಕಾಲದ ಜನಪದ ಸಂಸ್ಕೃತಿ ಹೇಗಿತ್ತು ಎಂದು ತಿಳಿಯಲಾರದೇ ಹೋದದ್ದು ಬಹುದೊಡ್ಡ ಕೊರತೆಯಾಗಿದೆ. ಇಂದು ಆ ಕೊರತೆಯನ್ನು ನೀಗಿಸಲು ಒಂದೊಂದು ಗ್ರಾಮವನ್ನು ಆರಿಸಿಕೊಂಡು ಸೂಕ್ಷ್ಮವಾಗಿ ಅಧ್ಯಯನ ನಡೆಸಬೇಕೆಂಬುದು ಇಟ್ಟಣ್ಣವರ ಉದ್ದೇಶ ಮತ್ತು ಆಶಯವಾಗಿದೆ. ಈ ದೃಷ್ಟಿಯಿಂದ ಹಲಗಲಿ ಗ್ರಾಮದ ಜಾನಪದವನ್ನು ಸಾಂಸ್ಕೃತಿಕವಾಗಿ ಕಟ್ಟಿಕೊಟ್ಟಿದ್ದಾರೆ.

'ಚನ್ನಾದೇವಿಯ ಅಗ್ರಹಾರ' ಎಂಬ ಕೃತಿಯಲ್ಲಿ ಡಾ.ಟಿ.ಗೋವಿಂದರಾಜು ಅವರು ಆ ಹಳ್ಳಿಯ ಚರಿತ್ರೆಯನ್ನು ಜಾನಪದ ವಿವರಗಳೊಂದಿಗೆ ಕಟ್ಟಿಕೊಡುವ ವಿಶಿಷ್ಟ ಬಗೆಯ ಕೃತಿಯಾಗಿದೆ. ಚನ್ನಾದೇವಿ

ಅಗ್ರಹಾರ ದಕ್ಷಿಣ ಕರ್ನಾಟಕದ ಬಯಲು ಸೀಮೆಯ ಒಂದು ಹಳ್ಳಿ. ತಮಗೆ ದೊರೆತ ಜಾನಪದ ಮಾಹಿತಿಗಳನ್ನು ಸಾಮಾಜಿಕ ಸಂಗತಿಗಳನ್ನು ಅನುಸರಿಸಿ ಹಳ್ಳಿಯ ಸಮಸ್ತ ಜಾನಪದವನ್ನು ಅಗೆದು ಶೋಧಿಸಿದ್ದಾರೆ. ಅದನ್ನು ವಿಶ್ಲೇಷಿಸಿ ಜಾಗರೂಕತೆಯಿಂದ ವಿಮರ್ಶಿಸಿದ್ದಾರೆ. ತಾವು ಸಂಗ್ರಹಿಸಿದ ಅಗಾಧ ಪ್ರಮಾಣದ ಮಾಹಿತಿಗಳೇ ಓದುಗರಿಗೆ ಹಲವು ಸಾಮಾಜಿಕ ಸಂಗತಿಗಳನ್ನು ಆರ್ಥಿಕ ವಿಚಾರಗಳನ್ನು ಸ್ಪಷ್ಟವಾಗಿ ತಿಳಿಸುತ್ತಿವೆ. ವಕ್ತೃಗಳಿಂದ ಸಂಗ್ರಹಿಸಿದ ವಿಷಯವನ್ನು ನಿರೂಪಿಸುವಲ್ಲಿ ಅವರ ವಸ್ತು ನಿಷ್ಠ ಶೈಲಿ ಗಮನಾರ್ಹವಾಗಿದ್ದು, ಇವರ ಭಾಷಾಶೈಲಿ ಮತ್ತು ನಿರೂಪಣಾ ವಿಧಾನ ವಿಶಿಷ್ಟತೆಯಿಂದ ಕೂಡಿದೆ. ಯಾವುದೇ ಅತಿಯಾದ ವಿವರಣೆಗೆ ಅಥವಾ ರಂಜನೆಗೆ ತೊಡಗದೆ ತಮಗೆ ದೊರೆತ ಮಾಹಿತಿಯನ್ನು ಸರಳವಾಗಿ ನಿರೂಪಿಸುವ ಕ್ರಮ ಚನ್ನಾಗಿದೆ. ಅಧಿಕೃತವಾಗಿ ಕ್ಷೇತ್ರಕಾರ್ಯದ ಮೂಲಕ ವಿವಿಧ ಮಗ್ಗುಲುಗಳಿಂದ ಸೂಕ್ಷ್ಮವಾಗಿ ಅಧ್ಯಯನ ಮಾಡಿ ಪರೀಕ್ಷಿಸಿದ್ದಾರೆ. ಬದಲಾಗುತ್ತಿರುವ ಭಾರತೀಯ ಸಂದರ್ಭದಲ್ಲಿ ಒಂದು ಸ್ಥಿತ್ಯಂತರದ ಗ್ರಾಮೀಣ ಬದುಕಿನ ಸಂಕೀರ್ಣತೆಯನ್ನು ಅದರ ಜಾನಪದ ವಿವರಗಳ ಮೂಲಕ ದಾಖಲಿಸುವ ಪ್ರಯತ್ನ ಮಾಡಿದ್ದಾರೆ. ಇವರ ಶ್ರದ್ಧೆ, ಶ್ರಮ, ಆಸಕ್ತಿ ಎಲ್ಲವೂ ಬರವಣಿಗೆಯ ಉದ್ದಕ್ಕೂ ಕಂಡುಬರುತ್ತದೆ. ಸಂಕ್ರಮಣಾವಸ್ಥೆಯಲ್ಲಿರುವ ಒಂದು ಅಗ್ರಹಾರದ ಸ್ಪಷ್ಟ ಚಿತ್ರಣ ಇಲ್ಲಿದೆ.

ಪ್ರೊ.ಎಚ್.ವಿ.ನಾಗೇಶ್ ಅವರ 'ಗ್ರಾಮಾಂತರ' ಕೃತಿಯು ಹಲವು ಹತ್ತು ದೃಷ್ಟಿಕೋನಗಳಿಂದ ಪ್ರಸ್ತುತ ಪರಿಸ್ಥಿತಿಯಲ್ಲಿ ಅತ್ಯಂತ ಮುಖ್ಯವಾಗಿದೆ. ಪ್ರಸ್ತುತ ಗ್ರಂಥದಲ್ಲಿ ಭಾರತವನ್ನು ಒಳಗೊಂಡಂತೆ ಪ್ರಪಂಚದ ೧೨ ದೇಶಗಳಿಗೆ ಸೇರಿದ ಸುಮಾರು ೩೦ ಗ್ರಾಮಗಳನ್ನು ಆಯ್ದುಕೊಂಡು ಅಧ್ಯಯನಕ್ಕೊಳಪಡಿಸಿ ಸಂಗ್ರಹಿಸಿಕೊಟ್ಟಿದ್ದಾರೆ. ಅವುಗಳಲ್ಲಿ ಹಿಂದುಳಿದ ಗ್ರಾಮಗಳು, ಮುಂದುವರೆಯುತ್ತಿರುವ ಗ್ರಾಮಗಳು, ವ್ಯಾಪಾರದ ದೃಷ್ಟಿಯಿಂದ ಬೆಳೆಯುವ ಗ್ರಾಮಗಳು, ನಗರದಂಚಿನಲ್ಲಿರುವ ನಗರವಾಗಿ ಪರಿವರ್ತನೆಗೊಳ್ಳುತ್ತಿರುವ ಗ್ರಾಮಗಳು, ಸಮಾಜವಾದಿ ಜಗತ್ತನ್ನು ಪ್ರತಿನಿಧಿಸುವ ಗ್ರಾಮಗಳು, ಆದಿವಾಸಿ ಬೀಡುಗಳು ಹೀಗೆ ವಿವಿಧ ಬಗೆಯ ಗ್ರಾಮ ಸಮುದಾಯಗಳಿವೆ. ಏಷ್ಯಾ, ಆಫ್ರಿಕಾ, ಲ್ಯಾಟಿನ್ ಅಮೇರಿಕಾ, ಚೀನಾ, ರಷ್ಯಾ, ಯುರೋಪ್ ಖಂಡಗಳನ್ನು ಒಳಗೊಂಡಂತೆ ವಿಶ್ವದ ವಿವಿಧ ಭಾಗಗಳಿಗೆ ಪ್ರಾತಿನಿಧ್ಯ ಕೊಟ್ಟಿದ್ದಾರೆ.

ಪ್ರಸ್ತುತ ಈ ಅಧ್ಯಯನದಲ್ಲಿ ಮೂರು ಭಾಗಗಳಾಗಿ ವಿಂಗಡಿಸಿಕೊಂಡು ಭಾಗ ಒಂದರಲ್ಲಿ ಗ್ರಾಮೀಣ ವಿಶ್ವ ಎಂದು ವಿಂಗಡಿಸಿ ವಿಶ್ವದ ಒಂದು ಸ್ಥೂಲ ಪರಿಚಯ ಮಾಡಿಕೊಟ್ಟಿದ್ದಾರೆ. ಭಾಗ ಎರಡರಲ್ಲಿ ವಿಶ್ವದ ಗ್ರಾಮಗಳು ಎಂದು ವಿಭಾಗಿಸಿ ವಿಶ್ವದ ಆಯ್ದ ಗ್ರಾಮಗಳಲ್ಲಿ ಏರುತ್ತಿರುವ ಜನಸಂಖ್ಯೆಯಿಂದ ಭೂಮಿವಂಚಿತವಾಗುತ್ತಿರುವ ರೈತರು, ಆಧುನಿಕತೆಯ ಪ್ರಭಾವಕ್ಕೆ ಒಳಗಾದ ಹಳ್ಳಿಗಳು, ಹಿಂದುಳಿದ ಹಳ್ಳಿಗಳು, ಜನಸಂಖ್ಯೆಯಿಂದ ಬದಲಾದ ಜನಜೀವನ. ಮೀನುಗಾರರಹಳ್ಳಿ, ಹೊಟ್ಟೆಪಾಡಿನ ಕೃಷಿಯ ಅವಸಾನ, ಅಗ್ರಹಾರ ಗ್ರಾಮ ಹೀಗೆ ವಿವಿಧ ರೀತಿಯ ಹಳ್ಳಿಗಳ ಅಧ್ಯಯನ ಮಾಡಿದ್ದಾರೆ. ಭಾಗ ಮೂರರಲ್ಲಿ ಗ್ರಾಮಾಂತರ ನೋಟಗಳು ಎಂಬ ಭಾಗದಲ್ಲಿ ಭಾರತದ ಹಳ್ಳಿಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಿದ್ದು ರೈತರ ಹೋರಾಟ, ಅಸಹಕಾರ ಚಳುವಳಿ, ಜಾತಿಯ ಬಿಲಗಳು, ಅಂಬೇಡ್ಕರ್ ದೃಷ್ಟಿ, ಜಾತ್ರೆಗಳು, ಸಮಾಜ ವಿಜ್ಞಾನ ಒನ್ನೆಲೆಯಲ್ಲಿ, ಹೀಗೆ ವೈವಿದ್ಯಮಯ, ವಿಫುಲವಾದ, ವೈವಿದ್ಯಪೂರ್ಣವಾದ ಉಪಯುಕ್ತ ಮಾಹಿತಿಯನ್ನು ಸಂಗ್ರಹಿಸಲು ಅರ್ಥಶಾಸ್ತ್ರ, ಮಾನವಶಾಸ್ತ್ರ, ಸಮಾಜಶಾಸ್ತ್ರಜ್ಞರಾಗಿ ಆ ದೃಷ್ಟಿಯಲ್ಲಿ

ಕೆಲಸಮಾಡಿದ್ದಾರೆ. ಗ್ರಾಮಾಂತರ ವಿಶ್ವ, ಅದರ ಪರಿವರ್ತನೆ ಮತ್ತು ಸಮಸ್ಯೆಗಳನ್ನು ಕೇಂದ್ರಬಿಂದುವನ್ನಾಗಿ ಇಟ್ಟುಕೊಂಡು ನೋಡುವ ಇವರು ಅದಕ್ಕೆ ಪರಿಹಾರೋಪಾಯಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿಯೇ ಇರುತ್ತವೆ ಎನ್ನುವ ದೃಷ್ಟಿ ಇವರದು.

ಜಗತ್ತಿನ ಬೇರೆ ಬೇರೆ ದೇಶಗಳ ಹಳ್ಳಿಗಳ ಜೀವನಕ್ರಮದಲ್ಲಿ ಆಗುತ್ತಿರುವ ತೀವ್ರವಾದ ಕ್ರಾಂತಿಕಾರಕ ಮಾರ್ಪಾಟುಗಳು ನಮ್ಮಲ್ಲಿ ಇನ್ನೂ ಮಂಡಲದ ಹಾವಿನಂತೆ ಮಂದಗತಿಯಲ್ಲಿ ಸಾಗುತ್ತಿವೆ. ಈ ಹಿನ್ನೆಲೆಯಲ್ಲಿ ಜಗತ್ತಿನ ಇತರ ದೇಶಗಳಲ್ಲಿ ಜೀವನಕ್ರಮ, ಆಧುನಿಕ ವಿಜ್ಞಾನ, ತಂತ್ರಜ್ಞಾನ ಮತ್ತು ಸಾಮಾಜಿಕ ಜ್ಞಾನಗಳ ಚೌಕಟ್ಟಿನಲ್ಲಿ ಬದಲಾಗುತ್ತಿರುವ ಪರಿಯನ್ನು ಪ್ರೊ.ಎಚ್.ವಿ.ನಾಗೇಶ್ ಅವರ ಗ್ರಾಮಾಂತರ ಕೃತಿ ಸ್ಪಷ್ಟವಾಗಿ ನಮ್ಮ ಮುಂದೆ ಚಿತ್ರಿಸಿದೆ. ಕ್ಷೇತ್ರಕಾರ್ಯ ಮತ್ತು ಸೂಕ್ಷ್ಮ ಅಧ್ಯಯನಗಳ ಫಲವಾಗಿ ಮೂಡಿಬಂದಿರುವ ಈ ಕೃತಿಯು ಗ್ರಾಮಾಂತರ ಭಾರತವನ್ನು ಅದರ ಸಮಸ್ಯೆಗಳನ್ನು ಮತ್ತು ಪರಿಹಾರೋಪಾಯಗಳನ್ನು ಅರ್ಥಮಾಡಿಕೊಳ್ಳಬೇಕೆನ್ನುವವರಿಗೆ ಇದೊಂದು ಪ್ರಮುಖ ಆಕರ ಗ್ರಂಥವಾಗಿದೆ.

ಚೆನ್ನಣ್ಣ ವಾಲೀಕಾರ 'ಒಂದು ಗ್ರಾಮದ ಜಾಪದೀಯ ಅಧ್ಯಯನ' ಎಂಬ ಕೃತಿಯು ಹೈದರಾಬಾದ್ ಕರ್ನಾಟಕದಲ್ಲಿರುವ ತಮ್ಮ ಹಳ್ಳಿಯ ಚರಿತ್ರೆಯ ಏಳು ಬೀಳುಗಳನ್ನು, ಸಮಕಾಲೀನ ಸಂದರ್ಭವನ್ನು ಕ್ಷೇತ್ರಕಾರ್ಯದ ಮೂಲಕ ಅಲ್ಲಿ ದೊರೆತ ಜಾನಪದೀಯ ವಿವರಗಳೊಂದಿಗೆ ಅವರು ಚಿತ್ರಿಸಿದ್ದಾರೆ. ಸೃಜನಶೀಲ ಬರಹಗಾರರಾದ ವಾಲೀಕಾರರ ಶೈಲಿ ಕಥನಾತ್ಮಕವಾದುದು. ಅವರ ನಿರೂಪಣಾ ಶೈಲಿಯು ಕುತೂಹಲಕಾರಿಯಾದರೂ ಕಥೆಯೆ ಪ್ರಧಾನವಾಗಿದೆ. ಗ್ರಾಮೀಣ ಸಮಾಜದ ಮೌಲ್ಯ ಮತ್ತು ವಿವರ, ವಿಮರ್ಶೆ ಚೆನ್ನಾಗಿದ್ದು ವಸ್ತುಸ್ಥಿತಿಗೆ ಸಮೀಪವಿದೆ.

ಈ ಮೇಲಿನ ಎಲ್ಲಾ ಗ್ರಾಮಾಧ್ಯಯನಗಳನ್ನು ಗಮನಿಸಿದಾಗ ಇದುವರೆಗೂ ನಡೆದಿರುವ ಅಧ್ಯಯನಗಳು ಹೆಚ್ಚಾಗಿ ಧಾರ್ಮಿಕ ಹಿನ್ನೆಲೆಯಲ್ಲೇ ನೋಡುವುದನ್ನು ಕಾಣುತ್ತೇವೆ. ಅದನ್ನು ಅರ್ಥೈಸಲು ಸಾಮಾಜಿಕ ಮತ್ತು ಆರ್ಥಿಕ ನೆಲೆಗಟ್ಟನ್ನು ಬಳಸಬೇಕು. ಈ ಹಿನ್ನೆಲೆಯಲ್ಲಿ ಧಾರ್ಮಿಕ ಸಂಬಂಧಗಳ ಜೊತೆಗೆ ಸಾಮಾಜಿಕ ಮತ್ತು ಆರ್ಥಿಕ ಸಂಬಂಧಗಳನ್ನು ಪರಿಗಣಿಸಬೇಕಾಗುತ್ತದೆ. ಭಾರತದಂತಹ ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ ಇದುವರೆಗೂ ಮೇಲ್ವರ್ಗದವರ ಸಂಸ್ಕೃತಿಗೆ ಗೌರವ ಸಿಕ್ಕಿದೆ. ಸಿಗದಿದ್ದರೆ ಬಲವಂತ(ಬುದ್ಧಿವಂತಿಕೆ)ವಾಗಿಯೂ ದಕ್ಕಿಸಿಕೊಳ್ಳುವ ಶಕ್ತಿಯು ಅವರಿಗಿದೆ. ಅದು ಚರಿತ್ರೆಯಲ್ಲೂ ದಾಖಲಾಗಿದೆ. ಆದರೆ ಕೆಳವರ್ಗದವರ ಸಂಸ್ಕೃತಿಗೆ ಬೆಲೆಯೂ ಸಿಕ್ಕಲಿಲ್ಲ. ಗೌರವವೂ ದೊರಕಲಿಲ್ಲ. ಚರಿತ್ರೆಯಲ್ಲಿ ಸ್ಥಾನವು ದೊರೆಯಲಿಲ್ಲ. ಅಂದರೆ ಇದುವರೆಗೆ ಯಾವ ಸಂಸ್ಕೃತಿಗೆ ಜನ ಜೀವನಕ್ಕೆ ಮೌಲ್ಯ ಮತ್ತು ಮಾನವೀಯತೆ ದೊರಕಲಿಲ್ಲವೋ ಅಂತಹವರ ಬದುಕನ್ನು ಸಂಗ್ರಹಿಸುವ, ಬೆಲೆ ಕಟ್ಟುವ ಕೆಲಸ ಇಂದು ನಡೆಯಬೇಕಾಗಿದೆ ಎನ್ನುವ ಆಶಯಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಅಧ್ಯಾಯ ೨

ಕಬ್ಬಾಳು ಗ್ರಾಮ ಭೌಗೋಳಿಕ ಮತ್ತು ಐತಿಹಾಸಿಕತೆ

೨.೧. ಸ್ಥಳನಾಮ ಮತ್ತು ಪದನಿಷ್ಪತ್ತಿ

೨.೨. ಭೌಗೋಳಿಕ ಲಕ್ಷಣಗಳು

೨.೩. ಚಾರಿತ್ರಿಕ ಮತ್ತು ಶಾಸನಶಾಸ್ತ್ರೀಯ ಹಿನ್ನೆಲೆ

೨.೪. ಐತಿಹ್ಯಗಳು

೨.೫. ಸಾರಿಗೆ ವ್ಯವಸ್ಥೆ

ಅಧ್ಯಾಯ ೨

ಕಬ್ಬಾಳು ಗ್ರಾಮ ಭೌಗೋಳಿಕ ಮತ್ತು ಐತಿಹಾಸಿಕತೆ

೨.೧. ಸ್ಥಳನಾಮ ಮತ್ತು ಪದನಿಷ್ಪತ್ತಿ

ಸ್ಥಳನಾಮವೆಂದರೆ ಊರ ಹೆಸರು ಎಂದರ್ಥ. ಗ್ರೀಕ್ ಭಾಷೆಯಲ್ಲಿ TOPOS ಎಂದರೆ ಸ್ಥಳಗಳು NOMOS ಎಂದರೆ ಹೆಸರುಗಳು. ಆದ್ದರಿಂದ ಸ್ಥಳಗಳ ಹೆಸರುಗಳನ್ನು ಅಧ್ಯಯನ ಮಾಡುವ ವಿಜ್ಞಾನಕ್ಕೆ TOPONOMY ಎಂದು ಕರೆಯಲಾಗುತ್ತದೆ. ಗ್ರಾಮನಾಮ ಅಥವಾ ಸ್ಥಳನಾಮಗಳು ವ್ಯಷ್ಠಿಯ ಆಸ್ತಿಯಾಗಿರದೆ ಸಮಷ್ಟಿಯ ಆಸ್ತಿಯಾಗಿವೆ. ಉಳಿದ ನಾಮಗಳಿಗಿಂತಲೂ ಹೆಚ್ಚಾಗಿ ಗ್ರಾಮನಾಮವನ್ನು ಜನರ ಬಾಯಲ್ಲಿ ಹೆಚ್ಚು ಹೆಚ್ಚು ಬಳಸುವುದರಿಂದ ಅಧಿಕ ವ್ಯತ್ಯಾಸಕ್ಕೆ ಕಾರಣವಾಗುತ್ತದೆ. ಸ್ಥಳನಾಮಗಳು ರೂಪ ದೃಷ್ಟಿಯಿಂದ ಅಧಿಕ ವ್ಯತ್ಯಾಸಪಡೆದುಕೊಂಡಿರುತ್ತವೆ. ಇದರಿಂದ ತನ್ನ ನಿಜ ಅರ್ಥವನ್ನು ಕಳೆದುಕೊಂಡಿರುವುದರಿಂದ ಸಹಜವಾಗಿಯೇ ನಿಜ ಅರ್ಥವನ್ನು ಹುಡುಕುವ ಕುತೂಹಲ ಕೆರಳುವುದು ಸಹಜವಾಗಿದೆ. "ವ್ಯಕ್ತಿಗೊಂದು ಹೆಸರು ಅನಿವಾರ್ಯ ಹೇಗೋ ಹಾಗೆಯೆ ಆತ ನೆಲೆಸಿದ ಸ್ಥಳಕ್ಕೂ ಒಂದು ಹೆಸರು ಅನಿವಾರ್ಯ. ತಾನು ನೆಲೆಸಿದ ನೆಲೆಗೊಂದು ಹೆಸರಿಡುವ ಪದ್ಧತಿ ಅಥವಾ ಪ್ರಕ್ರಿಯೆ ಇಂದು ನಿನ್ನೆಯದಲ್ಲ. ಅದು ಮನುಷ್ಯನಷ್ಟೇ ಪ್ರಾಚೀನವಾದುದು. ತನ್ನ ಸಮುದಾಯದಲ್ಲೇ ಮನುಷ್ಯ ತನ್ನನ್ನು ತಾನು ಗುರುತಿಸಿಕೊಳ್ಳಲೋಸುಗ ಹೆಸರಿಟ್ಟುಕೊಳ್ಳುವಂತೆ ತಾನು ವಾಸಿಸುವ ಜಾಗಕ್ಕೂ ಹೆಸರಿಟ್ಟು ತನ್ನ ಸುತ್ತ ಮುತ್ತಲಿನ ನಿಸರ್ಗವೇ ಆತನಿಗೆ ಆಧಾರವಾಗಿ ಕಂಡಿರುವುದರಲ್ಲಿ ಆಶ್ಚರ್ಯವಿಲ್ಲ. ಆದ್ದರಿಂದ ಪ್ರಾಚೀನ ಸ್ಥಳನಾಮಗಳು ನಿಸರ್ಗವಾಚಿ ಹೆಸರುಗಳನ್ನೇ ಒಳಗೊಂಡಿರುವುದು ವಿಶೇಷವಾಗಿದೆ"(ಕೆ.ಸಿ.ಸುರೇಶ, ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ, ಪುಟ.೩, ಕವಿವಿ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ).

ಸ್ಥಳನಾಮಗಳಿಗೆ ಸಾಮಾನ್ಯ ನಾಮಗಳಿಗೆ ಕೊಡಬೇಕಾದ ಪ್ರಾಧಾನ್ಯಕ್ಕಿಂತ ಹೆಚ್ಚು ಪ್ರಾಧಾನ್ಯ ಕೊಡಬೇಕಾಗಿದೆ. ನಮ್ಮ ಪೂರ್ವಿಕ ವಿದ್ಯಾಸಂಪನ್ನತೆ, ಸೌಂದರ್ಯ ಪ್ರಜ್ಞೆ, ಧಾರ್ಮಿಕ ದೃಷ್ಟಿ, ಅಂದಿನ ಜನರ ವೃತ್ತಿ, ನೈಸರ್ಗಿಕ ಸಂಪತ್ತು, ಭಾಷಾ ಚರಿತ್ರೆ, ಮಾನವಶಾಸ್ತ್ರ ಮೊದಲಾದ ಅನೇಕ ವಿಷಯಗಳನ್ನು ತನ್ನ ಗರ್ಭದಲ್ಲಿ ಅಡಗಿಸಿಟ್ಟುಕೊಂಡಿವೆ. ಸ್ಥಳನಾಮಗಳು ಕೇವಲ ಸ್ಥಳನಾಮಗಳಾಗಿ ಉಳಿಯದೆ ಮಾನವ ಸಂಸ್ಕೃತಿಯ ಕುರುಹುಗಳಾಗಿ ಉಳಿದಿವೆ. ಸ್ಥಳನಾಮಗಳು ಹಿಂದಿನಂತೆ ಹುಟ್ಟುತ್ತವೆ. ಈಗಲೂ ಹುಟ್ಟುತ್ತಲೆ ಬೆಳೆಯುತ್ತವೆ, ಬದಲಾಗುತ್ತಿವೆ. ಹುಟ್ಟಿದ ಸಂದರ್ಭವನ್ನು ಅದರ ಅರ್ಥವನ್ನು ಗ್ರಹಿಸುವುದೇ ಸ್ಥಳನಾಮ

ಅಧ್ಯಯನದ ಪ್ರಮುಖವಾದ ಉದ್ದೇಶವಾಗಿದೆ. ಸ್ಥಳನಾಮಗಳ ಅಧ್ಯಯನದಿಂದ ಒಂದು ಜನಾಂಗದ ಅಭಿರುಚಿ, ಅನುಭವ, ಸೃಜನಶೀಲ ಶಕ್ತಿಯನ್ನು ಅರಿಯಬಹುದು. ಸ್ಥಳನಾಮಗಳಿಗೆ ಅವುಗಳದೇ ಆದ ಅರ್ಥವಿರುತ್ತದೆ. ಅರ್ಥರಹಿತವಾದ ಸ್ಥಳನಾಮಗಳು ಇರುವುದಿಲ್ಲ. ಊರುಗಳಿಗೆ ಆಯಾ ಹೆಸರುಗಳು ಪ್ರಾಪ್ತವಾಗಲು ಇಂಥವೇ ಕಾರಣಗಳಿವೆ ಎಂದು ಖಚಿತವಾಗಿ ಹೇಳಲಿಕ್ಕೆ ಬಾರದಿದ್ದರೂ ಕೆಲವಾದರೂ ಊರುಗಳ ಹೆಸರು ಬರಲು ಇರುವ ಕಾರಣಗಳನ್ನು ಗುರುತು ಮಾಡಬಹುದು. ಆಯಾ ಊರುಗಳಿಗೆ ಆಯಾ ಹೆಸರುಗಳು ಹೇಗೆ ಬಂದವು? ಎಂಬುದನ್ನು ಅಧ್ಯಯನ ಮಾಡಿದರೆ ಅದೊಂದು ರೀತಿಯಲ್ಲಿ ಆ ಊರಿನ ಹಿನ್ನಲೆಯನ್ನು, ಭೌಗೋಳಿಕ ಪರಿಸರವನ್ನು ಇತಿಹಾಸವನ್ನು ಸಂಸ್ಕೃತಿಯನ್ನು ಅಭ್ಯಾಸಿಸಿದಂತಾಗುತ್ತದೆ. ಸ್ಥಳನಾಮಗಳನ್ನು ಕೇವಲ ಭಾಷಾ ವೈಜ್ಞಾನಿಕ ವಿಧಾನದಿಂದ ಅಧ್ಯಯನ ಮಾಡದೆ ಶಾಸನಶಾಸ್ತ್ರೀಯ ಭೂವಿವರಣಾತ್ಮಕ ಮಾನವಶಾಸ್ತ್ರೀಯ ವಿಧಾನಗಳೊಂದಿಗೆ ಅಂತರ್‌ಶಿಸ್ತೀಯ ಅಧ್ಯಯನ ಮಾಡುವುದರಿಂದ ನಮ್ಮ ಪರಿಶೀಲನೆಗಳು ಹೆಚ್ಚು ಕರಾರುವಕ್ಕಾಗಬಲ್ಲದೆಂಬುದು 'ಕಬ್ಬಾಳು' ಸ್ಥಳನಾಮ ಕುರಿತು ವಿವೇಚಿಸಿದಾಗ ಎಷ್ಟು ಸತ್ಯ ಎಂಬುದು ಮನದಟ್ಟಾಗುತ್ತದೆ.

ಕಬ್ಬಾಳು ಸ್ಥಳನಾಮ ನಿಷ್ಪತ್ತಿ ಕುರಿತಂತೆ ಅಲ್ಲಿನ ಜನರನ್ನು ಕೇಳಿದಾಗ ಅವರು ನೇರವಾಗಿ, ಖಂಡಾ ತುಂಡಾಗಿ ಗ್ರಾಮದ ಅಧಿದೇವತೆಯಾದ ಕಬ್ಬಾಳಮ್ಮನ ಕಡೆ ಬೊಟ್ಟು ಮಾಡಿ ತೋರಿಸುತ್ತಾರೆ. ಕಬ್ಬಾಳಮ್ಮನ ಆವಾಸ ಸ್ಥಾನವಾದ ಊರಿಗೆ (ಕಬ್ಬಾಳಮ್ಮ ನೆಲೆಸಿರುವ ಊರಾದ್ದರಿಂದ) 'ಕಬ್ಬಾಳು' ಎಂದು ನಾಮಕರಣಗೊಂಡಿದೆ ಎಂದು ಹೇಳುತ್ತಾರೆ. ಈ ಸ್ಥಳ ಪುರಾಣ ದೇವಸ್ಥಾನಗಳಿಗೆ ಸಂಬಂಧಿಸಿದ ಪುರೋಹಿತವರ್ಗವು ಸ್ಥಳನಾಮಗಳನ್ನು ದೇವರಿಗೆ, ಋಷಿಮುನಿಗಳಿಗೆ, ಪವಾಡಗಳಿಗೆ ಗಂಟುಹಾಕಿರುವಂತಿದೆ. ಇದಕ್ಕೆ ಪೂರಕವಾಗಿ ಕಬ್ಬಾಳು ಗ್ರಾಮದ ಕಬ್ಬಾಳಮ್ಮನ ಗುಡಿಯ ಹತ್ತಿರ ಕಂಡುಬಂದ ಶಾಸನ(ನಂ.೬೪, ೧೨೯೧)ವು ಹೊಯ್ಸಳರ ಮುಮ್ಮಡಿ ವೀರಬಲ್ಲಾಳನ ಆಳ್ವಿಕೆಗೆ ಸೇರಿದ್ದಾಗಿದೆ. ಈ ಶಾಸನದಲ್ಲಿ ಸ್ಥಳದ ಹೆಸರು 'ಕಬ್ಬಹಾಳು' ಎಂದಿರುವುದನ್ನು ಗಮನಿಸಬೇಕು. ಅಂದಾಗ ಕಬ್ಬಾಳುವಿನ ಪ್ರಾಚೀನ ರೂಪ 'ಕಬ್ಬಹಾಳು' ಎಂದಾಯಿತು. ಸ್ಥಳನಾಮಗಳು ಸಾಮಾನ್ಯವಾಗಿ ಸಮಾಸ ಪದಗಳಾಗಿದ್ದು ಮೊದಲನೆಯ ಘಟಕವು ವಿಶಿಷ್ಟಾರ್ಥವನ್ನು ಎರಡನೆಯದು ಸಾಮಾನ್ಯಾರ್ಥವನ್ನು ನಿರ್ದೇಶಿಸುತ್ತದೆ. ಇವುಗಳನ್ನು ಕ್ರಮವಾಗಿ ನಿರ್ದಿಷ್ಟ ಮತ್ತು ವಾರ್ಗಿಕ ಆಕೃತಿಮಗಳೆಂದು ಕರೆಯಲಾಗಿದೆ.

ಕಬ್ಬಾಳು ಇಲ್ಲಿ ನಿರ್ಧಿಷ್ಟ, ಹಾಳು-ವಾರ್ಗಿಕ, ಇಂಥ ವಾರ್ಗಿಕಗಳು ಭೌಗೋಳಿಕ ವ್ಯಾಪ್ತಿ ಮತ್ತು ಹಂಚಿಕೆಯನ್ನು ಪರಿಶೀಲಿಸಿದರೆ ನಿರ್ದಿಷ್ಟವು, ಪ್ರಾಕೃತಿಕ ಚಹರೆ, ಕುಲ, ಚಾರಿತ್ರಿಕ ಮನೆತನ, ಭಾಷೆ, ಉಪಭಾಷೆ ಅಥವಾ ಸಂಸ್ಕೃತಿಗಳ ಪ್ರಭಾವದ ಸ್ವರೂಪವನ್ನು ಕಂಡುಕೊಳ್ಳಬಹುದಾಗಿದೆ. ನಿರ್ದಿಷ್ಟವಾದ 'ಕಬ್ಬ' ಎಂದರೆ ಕಾವ್ಯ, ಕವನ, ಕುದುರೆಯ ಬಾಯಲ್ಲಿ ಸೇರಿಸಿ ಕಟ್ಟುವ ಉಕ್ಕಿನ ತುಂಡು(ಸಂಕ್ಷಿಪ್ತ ಕನ್ನಡ ನಿಘಂಟು, ಪುಟ.೨೨೬, ಕ.ಸಾ.ಪ.ಬೆಂಗಳೂರು, ೨೦೦೧)ಎಂಬರ್ಥಗಳಿವೆ. ಕಬ್ಬಾಳು ಸ್ಥಳವಿರುವ ಕನಕಪುರ ತಾಲ್ಲೂಕಿನಲ್ಲಿ ಜನರಾಡುವ ಭಾಷೆಯಲ್ಲಿ 'ಕೆಬ್ಬಳ್ಳಿ', 'ಕೆಬ್ಬರೆ', 'ಕೆಮ್ಮಾಳೆ' ಎಂಬ ಸ್ಥಳಗಳಿವೆ. ಕೆಬ್ಬಳ್ಳಿಯನ್ನು ಸರ್ಕಾರಿ ದಾಖಲೆಯಲ್ಲಿ 'ಕೆಬ್ಬೆಹಳ್ಳಿ' ಎಂದೇ ಹೆಸರಿಸಲ್ಪಟ್ಟಿದೆ. ಕೆಬ್ಬೆಹಳ್ಳಿ ಕೆಂಪು>ಕೆಬ್ಬೆ+ಹಳ್ಳಿ, ಕೆಬ್ಬರೆ, ಕೆಂಪು>ಕೆಬ್ಬೆ+ಅರೆ, ಕೆಮ್ಮಾಳೆ:ಕೆಂಪು>ಕೆಮ್+ಮಾಳವೆಂದು ಕೆಬ್ಬೆ, ಕೆಮ್‌ಗಳು ಕೆಂಪು, ಕೆಂಪುತನವನ್ನು

ಒಳಗೊಂಡಿದೆ(ಸುರೇಶ ಕೆ.ಸಿ, ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ, ಪುಟ.೮೫, ಕವಿವಿ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ೨೦೧೧).

ಭೌಗೋಳಿಕವಾಗಿ ಕಬ್ಬಾಳು ಸ್ಥಳವೂ ಕೂಡ ಕೆಂಪು ಮಣ್ಣನ್ನು ಹೊಂದಿರುವ ಭೂಪ್ರದೇಶವಾಗಿದೆ. ಕೆಬ್ಬೆ>ಕಬ್ಬ ಎಂದು ಜನರಾಡುವ ನುಡಿಯಲ್ಲಿ ಸೇರಿಕೊಂಡಿರುವ ಸಂಭವ ಹೆಚ್ಚಿದೆ. ಇದಕ್ಕೆ ಪೂರಕವಾಗಿ ಅಲ್ಲಿನ ಭೂಪ್ರದೇಶದ ಮೇಲ್ಮೈಯನ್ನೇ ತನ್ನ ನಿರ್ಧಿಷ್ಟದಲ್ಲಿ ಸೇರಿಸಿಕೊಂಡಿರುವುದರಲ್ಲಿ ಅನುಮಾನವಿಲ್ಲ. ಆದ್ದರಿಂದ ಕಬ್ಬಾಳುವಿನ 'ಕಬ್ಬ'ದಲ್ಲಿನ ನಿರ್ಧಿಷ್ಟವು ವರ್ಣವನ್ನು ಸೂಚಿಸುವುದು. ವಾರ್ಗಿಕವಾದ 'ಹಾಳು' ವಾಸ್ತವ್ಯವಾಚಿ ಪದ. ದ್ರಾವಿಡ ಮೂಲದ ವಾರ್ಗಿಕ ತಮಿಳು ಮಲಯಾಳಂಗಳಲ್ಲಿ 'ಪಾಳ' ಎಂದೂ ತುಳುವಿನಲ್ಲಿ ಪಾಳು ಎಂದು ಕನ್ನಡದಲ್ಲಿ 'ಹಾಳ್' 'ಹಾಳು' ಎಂದು ಬಳಕೆಯಾಗಿದೆ. ಹಾಳ್, ಪಾಳ್ ಮುಂತಾದ ರೂಪಗಳ ಮೂಲ 'ಪಡು'ವಿನಲ್ಲಿದೆ. ಕನ್ನಡದಲ್ಲಿ ಈ ಶಬ್ದಗಳಲ್ಲಿ ಪಾಳುಬಿದ್ದ ಭೂಮಿ ಸಾಗುವಳಿ ಮಾಡದ ಭೂಮಿ, ಒಣಗಿದ ಭೂಮಿ ಎಂಬರ್ಥಗಳಿವೆ. ಭೂಮಿ, ಗದ್ದೆ, ದತ್ತಿ, ದಾನಿ, ಕೆಟ್ಟ, ಬಂಜರು ಎಂಬ ಅರ್ಥವನ್ನು ಕೊಡುತ್ತದೆ. ಹಾಳ>ಹಾಳುವಾಗಿದೆ"(ಅದೇ, ಪುಟ.೭೫) ಕೆಂಪು ಮಣ್ಣಿನ ಸಾಗುವಳಿ ಮಾಡದ ಭೂಮಿ ಕೆಂಪುಬಣ್ಣದ ಪಾಳುಬಿದ್ದ ಭೂಮಿ ಕೆಂಪುಬಣ್ಣದ ಒಣಗಿದ ಭೂಮಿ ಎಂಬರ್ಥವನ್ನು ಕೊಡುತ್ತದೆ. ಕಬ್ಬಾಳು ಸಹಜವಾಗಿಯೇ ಊರಿನ ಭೌಗೋಳಿಕ ಸ್ವರೂಪವನ್ನು ತಿಳಿಸಿಕೊಡುವುದಾಗಿದೆ.

ಕಬ್ಬಾಳಮ್ಮನ ಹೆಸರಿನಿಂದ ನಿಷ್ಪತ್ತಿಯಾಗುವ ದೈವಮೂಲದ ಕಬ್ಬಾಳು ಹಾಗೂ ಭೌಗೋಳಿಕ ಸ್ವರೂಪವನ್ನು ತಿಳಿಸಿಕೊಡುವ 'ಕಬ್ಬಹಾಳು' ಈ ಎರಡೂ ಸಂದರ್ಭಗಳನ್ನು ಗಮನಿಸಿದಾಗ "ಗ್ರಾಮನಾಮಗಳ ಇತಿಹಾಸದಲ್ಲಿ ನಿಸರ್ಗವಾಚಿ ಹೆಸರುಗಳೇ ಮೊದಲು ಹುಟ್ಟಿದವೆಂದು ಹೇಳಬಹುದು. ಇದು ಗ್ರಾಮನಾಮದ ಇತಿಹಾಸದಲ್ಲಿ ತಲೆದೋರಿದ ಪ್ರಥಮ ಘಟ್ಟವಾಗಿದೆ"(ಡಾ.ಎಂ.ಎಂ.ಕಲಬುರ್ಗಿ, ಕನ್ನಡನಾಮ ವಿಜ್ಞಾನ, ಪುಟ.೬೨-೬೩, ೧೯೯೫). ಎಂದಾಗ ಸಾಂಸ್ಕೃತಿಕ ಸ್ಥಳನಾಮಗಳು ನಂತರ ಉದಯಿಸಿದವು ಎಂಬುದು ಸ್ಪಷ್ಟವಾಗುತ್ತದೆ. ಇನ್ನು ಅಲ್ಲಿನ ಅಧಿದೈವವಾದ ಕಬ್ಬಾಳಮ್ಮನಿಗೆ ಈ ಸ್ಥಳದ ಹೆಸರೇ ಹೇಗೆ ಬಂದಿತು? ಎಂದು ವಿಚಾರ ಮಾಡುವುದಾದರೆ ಕಬ್ಬಾಳಮ್ಮನ ಗುಡಿಗೆ ಒಂದು ಪಾಂಚಾಳರ ಸಂಬಂಧವಾದ ಶಾಸನ ದೊರೆತಿದೆ(ನಂ.೬೫/೧೪೨೬). ಇದು ಇಮ್ಮಡಿ ದೇವರಾಯನ ಆಳ್ವಿಕೆಯ ಕಾಲಕ್ಕೆ ಸೇರಿದ್ದಾಗಿದೆ. ಈ ಶಾಸನದಲ್ಲಿ ಕಬ್ಬಾಳಮ್ಮನನ್ನು ಕಾಳಿಕಾದೇವಿ ಎಂದಿರುವುದು ಕಾಣುತ್ತದೆ. ಭೌಗೋಳಿಕ ಸ್ವರೂಪವನ್ನು ತಿಳಿಸಿಕೊಡುವ ಕಬ್ಬಹಾಳು>ಕಬ್ಬಾಳುವಾಗಿ ಜನರ ನುಡಿಯಲ್ಲಿ ಉಚ್ಚಾರಣೆಗೊಳ್ಳುತ್ತಿರುವುದು ಸ್ಪಷ್ಟ. ಅದೇ ಸ್ಥಳನಾಮವಾದ ಕಬ್ಬಾಳು, ವಿಜಯನಗರ ಅರಸರ ಆಳ್ವಿಕೆಯ ಕಾಲಾನಂತರದಲ್ಲಿ 'ಕಾಳಿಕಾದೇವಿ' ಕಬ್ಬಾಳುವಿನಲ್ಲಿರುವ ಅಮ್ಮ ಕಬ್ಬಾಳಮ್ಮ ಆಗಿರುವುದು ಸ್ಪಷ್ಟವಾಗುತ್ತದೆ. ಹೈದರ್ ಆಲಿಖಾನ್ ಈ ಕಬ್ಬಾಳುವಿಗೆ 'ಜಾಫರಾಬಾದ್ ಎಂದು ಪ್ರತಿನಾಮಕರಣ ಮಾಡಿದರೂ ಹೈದರ್ ಮತ್ತು ಟಿಪ್ಪುವಿನ ಪತನಾನಂತರ 'ಜಾಫರಾಬಾದ್' ಹೆಸರನ್ನು ಜನರು ಒಪ್ಪದೇ ಕಬ್ಬಾಳು ಸ್ಥಳನಾಮವಾಗಿಯೇ ಇರುವುದು ಕಂಡುಬರುತ್ತದೆ.

ಭೌಗೋಳಿಕ ಲಕ್ಷಣಗಳು

ಕಬ್ಬಾಳು ಗ್ರಾಮ ಸಾತನೂರು ಹೋಬಳಿ, ಕನಕಪುರ ತಾಲೂಕು, ರಾಮನಗರ ಜಿಲ್ಲಾ ವ್ಯಾಪ್ತಿಗೆ ಒಳಪಟ್ಟಿದೆ. ಕನಪುರ ತಾಲ್ಲೂಕು ಕರ್ನಾಟಕ ರಾಜ್ಯದಲ್ಲೇ ಎರಡನೇ ಅತೀ ದೊಡ್ಡ ತಾಲ್ಲೂಕಾಗಿದ್ದು, ಐತಿಹಾಸಿಕವಾಗಿ, ಚಾರಿತ್ರಿಕವಾಗಿ, ಭೌಗೋಳಿಕವಾಗಿ ಹಾಗೂ ರಾಜಕೀಯವಾಗಿ ತನ್ನ ಛಾಪನ್ನು ಮೂಡಿಸಿದ್ದು ಅನೇಕ ಧಾರ್ಮಿಕ ಕ್ಷೇತ್ರಗಳು ಮತ್ತು ಪ್ರವಾಸಿ ತಾಣಗಳನ್ನು ಒಳಗೊಂಡಿದೆ. ಇಂಥಹ ಧಾರ್ಮಿಕ ಹಾಗೂ ಪ್ರವಾಸಿ ತಾಣವಾಗಿರುವ ಕಬ್ಬಾಳು ಗ್ರಾಮ ಕನಕಪುರ ತಾಲ್ಲೂಕಿನಲ್ಲಿ ಪ್ರಸಿದ್ಧವಾಗಿರುವ ಐತಿಹಾಸಿಕ ಮತ್ತು ಧಾರ್ಮಿಕ ಕ್ಷೇತ್ರವಾಗಿದೆ.

ಪೂರ್ವ ಘಟ್ಟಗಳ ತೋಳಿಗೆ ಚಾಚಿಕೊಂಡಿರುವ ಕಬ್ಬಾಳು ಸಹಜವಾಗಿ ಬೆಟ್ಟಗುಡ್ಡಗಳಿಂದ ಆವೃತವಾದ ಪ್ರದೇಶವಾಗಿದೆ. ಅಚ್ಚಲು ಬೆಟ್ಟ, ಎಲವಳ್ಳಿಬೆಟ್ಟ, ಭೀಮನಕಿಂಡಿಬೆಟ್ಟ, ತೈಲೂರು ಬೆಟ್ಟ, ಕಬ್ಬಾಳು ಬೆಟ್ಟಗಳು ಸುತ್ತುವರೆದು ಮಧ್ಯದಲ್ಲಿ ಸಮತಟ್ಟಾದ ಭೂಪ್ರದೇಶವಿದ್ದು ಕೃಷಿಮಾಡಲು ಯೋಗ್ಯವಾಗಿದ್ದು ಇದನ್ನು 'ಕಬ್ಬಾಳು ಕುಳಿ' ಎಂದೇ ಕರೆಯಲಾಗುತ್ತದೆ. ಸುಮಾರು ಹದಿನೈದು ಊರುಗಳು ಈ ಕುಳಿಯೊಳಗೆ ಸೇರುತ್ತವೆ. ಕಬ್ಬಾಳು ಕೆಂಪು ಮಣ್ಣಿನಿಂದ ಕೂಡಿದ ಭೂಮಿಯಾಗಿದ್ದು ಇದನ್ನು ಕೆಮ್ಮೊಣ್ಣು, ಕೆಬ್ಬೆಮಣ್ಣು ಎಂದು ಕರೆಯುತ್ತಾರೆ. ರಾಗಿ ಮತ್ತು ನೆಲಗಡಲೆ ಬೆಳೆಯಲು ಯೋಗ್ಯವಾದ ಮಣ್ಣಾಗಿದೆ. ಕಬ್ಬಾಳು ಪ್ರದೇಶವು ಸಮುದ್ರ ಮಟ್ಟದಿಂದ ಸುಮಾರು ೨೫೦೦ ಅಡಿಗಳ ಎತ್ತರದಲ್ಲಿದೆ. ಭೂಪಟದಲ್ಲಿ ಈ ಸ್ಥಳವನ್ನು ಉತ್ತರ ಅಕ್ಷಾಂಶ ೧೨ ಡಿಗ್ರಿ-೨೨ ಮತ್ತು ಪೂರ್ವರೇಖಾಂಶ ೭೭ ಡಿಗ್ರಿ-೨೯ ಡಿಗ್ರಿಗಳಲ್ಲಿ ಗುರುತಿಸಬಹುದಾಗಿದೆ. ವಾರ್ಷಿಕ ಸರಾಸರಿ ಗರಿಷ್ಠ ಉಷ್ಣಾಂಶ ೩೩.೪ ಸೆಲ್ಸಿಯಸ್ ಹಾಗೂ ಕನಿಷ್ಠ ೨೧.೭. ಸೆಲ್ಸಿಯಸ್ ಇದೆ. ದಾಖಲಾಗಿರುವ ಅತಿ ಹೆಚ್ಚು ಉಷ್ಣಾಂಶ ೩೮.೯. ಸೆಲ್ಸಿಯಸ್ ಹಾಗೂ ಅತಿ ಕಡಿಮೆ ಉಷ್ಣಾಂಶ ೧೧.೪ ಸೆಲ್ಸಿಯಸ್. ಈ ಪ್ರದೇಶದ ಹವಾಮಾನ ಉಷ್ಣಪ್ರಧಾನವಾದದ್ದು. ಸಾಮಾನ್ಯವಾಗಿ ಆರೋಗ್ಯಕರವಾಗಿರುತ್ತದೆ. ಬೇಸಿಗೆಯ ದಿನಗಳಲ್ಲಿ ಉಷ್ಣಾಂಶ ಸ್ವಲ್ಪ ಹೆಚ್ಚಾದರು ಉಳಿದ ದಿನಗಳಲ್ಲಿ ಹವಾಮಾನ ತುಂಬಾ ಹಿತಕರವಾಗಿರುತ್ತದೆ.

ಕಬ್ಬಾಳು ಕನಕಪುರ ತಾಲ್ಲೂಕು ಸೇರಿದಂತೆ ಬಹುಮಟ್ಟಿಗೆ ಕಣಶಿಲೆಯ ಪ್ರದೇಶ. ಹೆಚ್ಚಾಗಿ ಈ ಭಾಗದಲ್ಲಿ ಇದೇ ಕಣಶಿಲೆ ತಾಲ್ಲೂಕಿನ ಎಲ್ಲೆಡೆಯೂ ಕಂಡುಬರುವ ಕಣಶಿಲೆಗಳು ಅಗ್ನಿಶಿಲೆಯ ಮುಖ್ಯ ಪ್ರಬೇಧವಾಗಿವೆ. ಇವು ಶಿಲಾದ್ರವದ ಭೂಮಿಯ ನೇಮಿಭಾಗಕ್ಕೆ ಚಿಮ್ಮಿ, ಆರಿ ಘನೀಭವಿಸಿದವು. "ಸುಮಾರು ಐನೂರು ಕೋಟಿ ವರ್ಷಗಳಿಗೂ ಹಿಂದೆ ರೂಪಗೊಂಡ ಈ ಪ್ರದೇಶದ ಶಿಲೆಗಳು ಆರ್ಷೇಯ ಶಿಲಾಕಲ್ಪದ ಕಾಲದವು. ಆದಿ ಜೀವಕಲ್ಪದವು. ಕೆಲ ಪ್ರದೇಶಗಳಲ್ಲಿ ಮಾತ್ರವೇ ಗೋಚರಿಸುತ್ತವೆ. ಹಾಗಾಗಿ ಕನಕಪುರ ತಾಲ್ಲೂಕಿನ ಖನಿಜಗಳು ವಿರಳವಾಗಿವೆ. ಕರ್ನಾಟಕದ ಆರ್ಷೇಯ ಶಿಲಾಕಲ್ಪದ ಪೆನಿನ್ಸುಲಾರ್ ನೈಸ್ ಮತ್ತು ಗ್ರಾನೈಟ್ ಬಿಜಿನೆಸ್ ಕನಕಪುರದ ಬಹುಭಾಗವನ್ನು ಕವಿದು ಆವರಿಸಿಕೊಂಡಿದೆ"(ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ, ಕನಕಪುರ ಎಂಬ ಕಾನಕಾನಹಳ್ಳಿ ಚರಿತ್ರೆ, ಪುಟ.೬). ಅಲ್ಲದೆ ಪೂರ್ವ ಘಟ್ಟಗಳಿಂದ ಬೇರ್ಪಟ್ಟ ಗ್ರಾನೈಟ್ ಹೊಡೆ ಸಾಲುಗಳು ಬಳ್ಳಾರಿಯ ದಕ್ಷಿಣ ಭಾಗದಿಂದ ಚಿತ್ರದುರ್ಗ, ಶಿವಗಂಗೆ, ಮಾಗಡಿ, ರಾಮನಗರ, ಕನಕಪುರ, ಕಬ್ಬಾಳಿನ ಮೂಲಕ ಶಿವನಸಮುದ್ರದವರೆಗೆ ೪೦೦ ಕಿ.ಮೀ. ಉದ್ದ ಹಾಗೂ ೩೦ ಕಿ.ಮೀ.

ಅಗಲಕ್ಕೆ ಹರಡಿನಿಂತಿದೆ. “ಈ ಪ್ರದೇಶದಲ್ಲಿಯೇ ಕ್ಲೋಸ್‌ಪೇಟ್ ಗ್ರಾನೈಟ್ ಎಂಬ ರೀತಿಯ ಶಿಲೆಗಳು ಕನಕಪುರ ಪ್ರದೇಶದಲ್ಲಿ ೧೬ ರಿಂದ ೩೨ ಕಿ.ಮೀಟರ್‌ವರೆಗೆ ಹರಡಿವೆ. ಈ ಪ್ರದೇಶದ ಶೇಕಡಾ ೭೫ ಭಾಗ ಗ್ರಾನೈಟ್ ವ್ಯಾಪಾರದಿಂದ ಕೂಡಿದ್ದು ೨೦ ರಿಂದ ೧೩೦ ಮೀಟರ್ ದಪ್ಪದ ಪದರ ಹೊಂದಿದೆ”(ಅದೇ ಪುಟ.೬). ಇಂತಹ ಕಣಶಿಲೆ ಬೋಳುಗುಂಡುಗಳ ಬೆಟ್ಟಗುಡ್ಡಗಳು ಕನಕಪುರದ ಕಬ್ಬಾಳಿನಿಂದ ರಾಮನಗರದವರೆಗೆ ಹರಡಿಕೊಂಡಿವೆ. ಗಡುಸಾದ ದಪ್ಪಕಣದ ಸ್ಫಟಿಕ ರಚನೆಯ ಅತ್ಯಂತ ಗಟ್ಟಿ ಗುಣಧರ್ಮದ ಈ ಗ್ರಾನೈಟ್‌ಗಳು ಕನಕಪುರ ತಾಲ್ಲೂಕಿನಾದ್ಯಂತ ಕಬ್ಬಾಳು ಪ್ರದೇಶದ ಸುತ್ತಮುತ್ತ ವಿವಿಧ ಬಣ್ಣಗಳಲ್ಲಿ ದೊರೆಯುತ್ತದೆ.

ಅರಣ್ಯಗಳು

ರಾಮನಗರ ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿಯೇ ಅತಿ ಹೆಚ್ಚಿನ ಅರಣ್ಯ ಪ್ರದೇಶವನ್ನು ಹೊಂದಿರುವ ತಾಲ್ಲೂಕು ಎಂದರೆ ಕನಕಪುರ. ತಾಲ್ಲೂಕಿನ ಒಟ್ಟು ವಿಸ್ತೀರ್ಣದಲ್ಲಿ ಶೇ.೩೦ಕ್ಕಿಂತ ಹೆಚ್ಚಾಗಿದೆ. ಕಬ್ಬಾಳು ಬೆಟ್ಟ, ಬಿಳಿಕಲ್ಲು ಬೆಟ್ಟ, ಸಂಗಮ, ಮೇಕೆದಾಟು, ತೇರುಬೀದಿ, ಹುಣಸನಹಳ್ಳಿ, ಚಿಂದಲವಾಡಿ, ಹೊಸದುರ್ಗ ಮೊದಲಾದ ಪ್ರದೇಶಗಳಲ್ಲಿ ದಟ್ಟಕಾಡುಗಳನ್ನು ಕಾಣಬಹುದು. ಇಷ್ಟೇ ಅಲ್ಲದೇ ಬಹುತೇಕ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಸಾಮಾನ್ಯ ಅರಣ್ಯ ಪ್ರದೇಶ ಇರುವುದು ವಿಶೇಷವಾಗಿದೆ. ಕಬ್ಬಾಳು ಬೆಟ್ಟ ದಟ್ಟವಾದ ಅರಣ್ಯದಿಂದ ಕೂಡಿದ್ದು ಬೆಟ್ಟಗಳ ನಡುವಣ ಕಣಿವೆಗಳನ್ನು ಆಕ್ರಮಿಸಿದ ಗಿಡಮರಗಳಿಂದಲೂ ಕುರುಚಲು ಪೊದೆಗಳಿಂದಲೂ ಆಗಿದೆ. ಕಬ್ಬಾಳಿನ ಅರಣ್ಯಪ್ರದೇಶವು ಹಿಂದೆ ಶ್ರೀಗಂಧದ ಮರಗಳು ಎಥೇಚ್ಛವಾಗಿದ್ದು ಇಂದು ಕಡಿಮೆಯಾಗಿವೆ. ಹೊನ್ನೆ, ಬೀಟೆ, ತೇಗ, ಜಾಲಿ, ಕಗ್ಗಲಿಮರ, ಬೇಲದಮರ, ಚುಜ್ಜಲಿ, ಬೆಪ್ಪಾಲೆ, ಬೇವು, ಬೆಟ್ಟದನೆಲ್ಲಿ, ಬಿದಿರುಗಳಿಂದ ಕೂಡಿದ್ದು ದುರ್ಗಮವಾಗಿದೆ. ಇದು ಚನ್ನಪಟ್ಟಣ ಅರಣ್ಯವಲಯ ಪ್ರದೇಶಕ್ಕೆ ಒಳಪಟ್ಟಿದ್ದು, ಜಪಾನ್ ದೇಶದ ಮತ್ತು ವಿಶ್ವಬ್ಯಾಂಕಿನ ನೆರವಿನಿಂದ ಇಲ್ಲಿನ ಇಳಿಜಾರು ಪ್ರದೇಶಗಳಲ್ಲಿ ಸಾಮಾಜಿಕ ಅರಣ್ಯಪ್ರದೇಶಗಳಲ್ಲಿ ನೀಲಗಿರಿ, ಬಿದಿರು, ಸರ್ವೆ ನೆಡುತೋಪುಗಳನ್ನು ಬೆಳೆಸಲಾಗುತ್ತಿದೆ. ಬೇಲದಮರ, ಬೆಟ್ಟದನೆಲ್ಲಿ, ನೇರಳೆ ಮತ್ತು ಹುಣಸೆ ಹಣ್ಣಿನ ಮರಗಳು, ಕಾರೆಹಣ್ಣಿನ ಗಿಡಗಳು ಎಥೇಚ್ಛವಾಗಿವೆ.

ಮಾರುತಗಳು

ಕಬ್ಬಾಳು ಪ್ರದೇಶ ಸಮುದ್ರಮಟ್ಟದಿಂದ ೭೦೦ ರಿಂದ ೯೦೦ ಮೀಟರ್‌ಗಳ ಸರಾಸರಿ ಎತ್ತರದಲ್ಲಿದೆ. ಆದರೆ ಕಬ್ಬಾಳು ಬೆಟ್ಟಮಾತ್ರ ಸಮುದ್ರ ಮಟ್ಟದಿಂದ ೧೦೬೮ ಮೀಟರ್ ಎತ್ತರದಲ್ಲಿದೆ. ಕಬ್ಬಾಳು ಪ್ರದೇಶವನ್ನು ಸುತ್ತುವರೆದಿರುವ ಬೆಟ್ಟಗಳ ಸಾಲುಗಳು ಪೂರ್ವಘಟ್ಟಗಳ ಕವಲುಗಳಾಗಿದ್ದು ಉತ್ತರದ ಕಡೆಗೆ ಬೆಳೆದು ಬಂದಿವೆ. ಈ ಬೆಟ್ಟಗಳ ಮಧ್ಯೆ ಇರುವ ಪ್ರದೇಶ ಸಮತಟ್ಟಾದ ಪ್ರದೇಶವಾಗಿದೆ. ವರ್ಷದಲ್ಲಿ ಮೇ ತಿಂಗಳಿಂದ ನವೆಂಬರ್ ತಿಂಗಳವರೆಗೆ ನೈರುತ್ಯ ಮಾರುತುಗಳು ಬೀಸಿ ವಾರ್ಷಿಕ ಸರಾಸರಿ ೮೪೫ ಮಿ.ಮೀ. ಮಳೆಯಾಗುತ್ತದೆ.

ಗ್ರಾಮದ ಭೌತಿಕ ಸ್ವರೂಪ

ಯಾರೆ ಒಬ್ಬ ನಗರವಾಸಿ ಅಥವಾ ಸಂದರ್ಶಕನೊಬ್ಬ ನಗರವನ್ನು ಬಿಟ್ಟು ಹೊರಬಂದು ಕಬ್ಬಾಳು ಗ್ರಾಮವನ್ನು ಸಮೀಪಿಸುತ್ತಿದ್ದಂತೆ ಬೇರೊಂದು ವಿಶ್ವವನ್ನು ಪ್ರವೇಶಿಸುತ್ತಿರುವ ಅನುಭವವಾಗುತ್ತದೆ. ಅದರಲ್ಲೂ

ಬೆಂಗಳೂರು, ಮೈಸೂರುನಂತಹ ಮಹಾನಗರಗಳಿಂದ ಬಂದಂತಹವರಿಗೆ ಇಂತಹ ಅನುಭವ ಸಹಜವಾಗೇ ಆಗುತ್ತದೆ. ರಸ್ತೆಯುದ್ದಕ್ಕೂ ಇಕ್ಕೆಲಗಳಲ್ಲಿ ನೂರಾರು ವರ್ಷಗಳ ಇತಿಹಾಸ ಸಾರುವ ಆಲದ ಹೆಮ್ಮರಗಳು, ಊರಿನ್ನು ಸಮೀಪಿಸುತ್ತಿದ್ದಂತೆಯೆ ಇಕ್ಕೆಲಗಳಲ್ಲಿ ಅಂಗಡಿ ಮುಂಗಟ್ಟು, ಮಧ್ಯದಲ್ಲಿ ದುತ್ತೆಂದು ಎದುರುಗೊಳ್ಳುವ ಕಬ್ಬಾಳಮ್ಮನ ಮಹಾದ್ವಾರ ಊರಿಗೆ ಸ್ವಾಗತವನ್ನು ನೀಡುತ್ತವೆ. ಕಬ್ಬಾಳುಗ್ರಾಮ ಉತ್ತರ ದಕ್ಷಿಣಾಭಿಮುಖವಾಗಿ ಹಬ್ಬಿದ್ದರು ಊರಿನ ಬೀದಿಗಳು ಪೂರ್ವ ಪಶ್ಚಿಮಾಭಿಮುಖವಾಗಿವೆ. ಸೂರ್ಯೋದಯ ಮತ್ತು ಸೂರ್ಯಾಸ್ತಮದ ಸಮಯದಲ್ಲಿ ಸೂರ್ಯನ ಎಳೆಬಿಸಿಲು ಬೀದಿಗಳಲ್ಲಿ ಹರಿಯುತ್ತದೆ. ಕಬ್ಬಾಳಮ್ಮನ ದೇವಸ್ಥಾನವು ಸೂರ್ಯೋದಯದ ಕಡೆ ಮುಖ್ಯದ್ವಾರವನ್ನು ಹೊಂದಿದೆ. ಅಂದರೆ ಪೂರ್ವದಿಕ್ಕಿಗೆ ಇದೆ. ದೇವಾಲಯದ ಬಲಗಡೆ ಹೊಂದಿಕೊಂಡಂತೆ ಹಳೆಯ ಕಬ್ಬಾಳು ಇದ್ದು ದೇವಾಲಯದ ಎಡಗಡೆ ಸ್ವಲ್ಪದೂರದಲ್ಲಿ ಹೊಸಕಬ್ಬಾಳು ಇದೆ. ಸಾತನೂರಿನಿಂದ ಚನ್ನಪಟ್ಟಣವನ್ನು ಸಂಪರ್ಕಿಸುವ ರಸ್ತೆಯು ಕಬ್ಬಾಳಿನ ಪೂರ್ವದ ಅಂಚಿನಲ್ಲಿ ಸಾಗಿದೆ. ಊರಿನ ಬಹುಭಾಗ ರಸ್ತೆಯ ಎಡಭಾಗಕ್ಕೆ ಅಂದರೆ ಪಶ್ಚಿಮಕ್ಕೆ ಇದೆ.

ಗ್ರಾಮದ ಪೂರ್ವದಿಕ್ಕಿಗೆ ರಸ್ತೆಯ ಬಲಭಾಗಕ್ಕೆ ತೆಂಗು, ಬಾಳೆ, ರೇಷ್ಮೆಯ ತೋಟಗಳು ಮತ್ತು ಗದ್ದೆಗಳಿಂದ ಕೂಡಿದ್ದು, ದೂರದಿಂದಲೇ ಕಾಣುವ ಹೊಲಗದ್ದೆಗಳು, ಮರಗಿಡಗಳು ಹಸಿರು, ಹಕ್ಕಿ ಪಕ್ಷಿಗಳ ಹಾರಾಟ, ದನಕರುಗಳು ವಿರಳವಾಗುತ್ತಿದ್ದರೂ ಅವುಗಳ ಕೂಗಾಟ, ಪಶ್ಚಿಮ ದಿಕ್ಕಿಗೆ ಊರಿನ ಬೆನ್ನೆಲುಬಾಗಿ ನಿಂತಿರುವ ಕಬ್ಬಾಳು ದುರ್ಗದುದ್ದಕ್ಕೂ ಅರಣ್ಯ ಪ್ರದೇಶ ಆವರಿಸಿಕೊಂಡಿದೆ. ಕಬ್ಬಾಳು ಗ್ರಾಮ ಸಮೀಪಿಸುತ್ತಿದ್ದಂತೆ ನಮಗೆ ಕಬ್ಬಾಳಮ್ಮನ ಹೆಬ್ಬಾಗಿಲ ಕಮಾನಿನಾಕಾರದ ಬೃಹದಾಕಾರದ ಹೆಬ್ಬಾಗಿಲು ನಮ್ಮನ್ನು ಸ್ವಾಗತಿಸುತ್ತದೆ. ರಸ್ತೆಯ ಎರಡೂ ಬದಿಯು ವ್ಯಾಪಾರದ ಅಂಗಡಿಗಳಿಂದ ಕೂಡಿದ್ದು ಅವುಗಳಲ್ಲಿ ಹೊರಡುವ ಧ್ವನಿಸುರುಳಿಗಳು ಕಬ್ಬಾಳಮ್ಮನ ಕಥೆ, ಕಾವ್ಯ, ಭಕ್ತಿಗೀತೆಗಳ ನಾದ ಪ್ರತಿ ಅಂಗಡಿ ಮಳಿಗೆಗಳಲ್ಲಿ ಕೇಳಿಬರುತ್ತಿರುತ್ತದೆ.

೨.೨. ಚಾರಿತ್ರಿಕ ಮತ್ತು ಶಾಸನಶಾಸ್ತ್ರೀಯ ಹಿನ್ನೆಲೆ

ಕಬ್ಬಾಳು ಗ್ರಾಮದ ಪಶ್ಚಿಮಕ್ಕೆ ಇರುವ ಬೆಟ್ಟದಲ್ಲಿ ಕೋಟೆ ಇರುವುದರಿಂದ ಕಬ್ಬಾಳು ದುರ್ಗವೆಂತಲೂ ಕರೆಯುತ್ತಾರೆ. ಕೋಟೆಯನ್ನು ಗಾಥೇಕರಾಜ ಎಂಬ ಪಾಳೇಗಾರ ಕಟ್ಟಿಸಿದ ಎಂದು ಮೈಸೂರು ಗೆಜೆಟಿಯರ್‌ನಲ್ಲಿ ಉಲ್ಲೇಖಗೊಂಡಿದೆ. "ಸಮುದ್ರ ಮಟ್ಟದಿಂದ ೧೦೬೪ ಮೀಟರ್ ಎತ್ತವಿರುವ ಶಂಖಾಕೃತಿಯಿಂದ ಕೂಡಿದ ಗಿರಿದುರ್ಗ. ದುರ್ಗದ ಮೇಲೆ ಶಿಥಿಲವಾದ ಕೋಟೆಯಿದೆ. ಈ ದುರ್ಗವನ್ನು ಒಂದು ಕಡೆಯಿಂದ ಮಾತ್ರ ಹತ್ತಲು ಸಾಧ್ಯ. ಬಂಡೆಯಲ್ಲಿಯೇ ಮೆಟ್ಟಿಲುಗಳನ್ನು ಅತಿ ಚಿಕ್ಕದಾಗಿ ಕೊರೆದು ನಿರ್ಮಿಸಲಾಗಿರುವುದರಿಂದ ಹತ್ತಲು ತುಂಬಕಷ್ಟ. ಈ ಕೋಟೆಯು ಶತ್ರುಗಳ ಆಕ್ರಮಣಕ್ಕೆ ತುತ್ತಾಗುವ ಸಾಧ್ಯತೆ ಕಡಿಮೆ. ಏಕೆಂದರೆ ಇದೊಂದು ಕಡಿದಾದ ಮತ್ತು ಕಿರುಮೆಟ್ಟಿಲು ಇರುವುದರಿಂದ ಒಬ್ಬೊಬ್ಬರೆ ನಿಧಾನವಾಗಿ ಎಚ್ಚರಿಕೆಯಿಂದ ಸಾಗಬೇಕಾಗುತ್ತದೆ. ಆದ್ದರಿಂದ ಶತ್ರುಗಳ ಪಾಲಿಗೆ ದುರ್ಭೇಧ್ಯವಾದ ಕೋಟೆಯಾಗಿತ್ತು. ತಮಗೆ ಆಗದವರನ್ನು ಸೆರೆಹಿಡಿದು ಕೊಲ್ಲುವುದಕ್ಕಾಗಿ ಸುಮಾರು ೧೮ನೇ ಶತಮಾನದವರೆಗೂ ಈ ದುರ್ಗವನ್ನು ಬಳಸುತ್ತಿದ್ದುದು ಕಂಡುಬರುತ್ತದೆ"(ಸುರೇಶ.ಕೆ.ಸಿ., ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ, ಪುಟ.೧೪೨, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ). ಕಬ್ಬಾಳಮ್ಮನ ಗುಡಿಯ ಹತ್ತಿರದ ಶಾಸನದಲ್ಲಿ ಕಜಂತರ ಕುಲದ ಕಬ್ಬನಾಳು

ಸೋಮೇಗೌಡನ ಮಗ ಶೌರಣ್ಣನು ಸಾರನೆಂಬುವವನು ಹನಿಯೂರ ಸಂತೆಗೆ ಹೋಗಿ ಬರುತ್ತಿದ್ದಲ್ಲಿ ಕಳ್ಳರು ಮೇಲೆಬಿದ್ದಾಗ ಶೌರಣ್ಣನು ಈ ಹೋರಾಟದಲ್ಲಿ ಸ್ವರ್ಗಸ್ಥರಾದನೆಂದಿದೆ. ಈ ಶಾಸನವು ಹೊಯ್ಸಳ ಅರಸನಾದ ಮುಮ್ಮಡಿ ವೀರಬಲ್ಲಾಳನ(೧೨೯೨-೧೩೪೩) ಆಳ್ವಿಕೆಗೆ ಸೇರಿದ ಶಾಸನವಾದ್ದರಿಂದ ಕಬ್ಬಾಳು ಗ್ರಾಮವು ಹೊಯ್ಸಳರ ಕಾಲದಿಂದಲೂ ಪ್ರಸಿದ್ಧವಾದ ಗ್ರಾಮ ಎಂದಾಗುತ್ತದೆ. ಅಲ್ಲದೆ ಹೊಯ್ಸಳರ ಪ್ರಭುತ್ವಕ್ಕೆ ಒಳಪಟ್ಟಿತ್ತು ಎಂಬುದು ದೃಢವಾಗುತ್ತದೆ. ಆಬಾಧಿತವಾಗಿ ಈ ಗ್ರಾಮವು ವಂಶಪಾರಂಪರ್ಯವಾಗಿ ಹೊಯ್ಸಳರ ರಾಜಮನೆತನದವರಿಂದ ಆಳಲ್ಪಟ್ಟಿದೆ. ಕಬ್ಬಾಳು ಗ್ರಾಮವು ಹೊಯ್ಸಳ ರಾಜರ ಪ್ರಭುತ್ವವನ್ನು ಕಂಡ ಗ್ರಾಮವಾಗಿದೆ. ಕಬ್ಬಾಳುವನ್ನೊಳಗೊಂಡು ಅಕ್ಕಪಕ್ಕದ ಗ್ರಾಮಗಳಾದ ಸಾತನೂರು, ಹೊಸಳ್ಳಿ, ಸೂರನಹಳ್ಳಿ ಗ್ರಾಮಗಳು ಹೊಯ್ಸಳರ ಸೋಮೇಶ್ವರ ಇವನ ಮಗ ೩ನೇ ನರಸಿಂಹ, ಮುಮ್ಮಡಿ ವೀರ ಬಲ್ಲಾಳನ ಆಳ್ವಿಕೆಗೆ ಸೇರಿದ ಮಾಹಿತಿಯು ಶಾಸನಗಳಿಂದ ಲಭ್ಯವಾಗುತ್ತದೆ.

ಸಾತನೂರು ಗ್ರಾಮದ ಶಿವಾಲಯಕ್ಕೆ ಭೂಮಿದಾನ ನೀಡಿದ ಸಂಗತಿಯನ್ನು ದಾಖಲಿಸುವ ಒಂದು ಶಾಸನವು(ನಂ.೪೮, ಸು.೧೨೫೦) ಸಾತನೂರು ಹೋಬಳಿ ಕಬ್ಬಾಳು ಗ್ರಾಮದ ಕೋಟೇಶ್ವರ ದೇವಾಲಯಕ್ಕೆ ಭೂಮಿದಾನ ಮಾಡಿದ್ದನ್ನು ಹೇಳುವ ಇನ್ನೊಂದು ಶಾಸನವೂ(ನಂ.೬೬, ೧೨೫೦) ತಮಿಳು ಶಾಸನಗಳಾಗಿದ್ದು ಇವು ಬಹುಶಃ ಹೊಯ್ಸಳ ಸೋಮೇಶ್ವರನ ಆಳ್ವಿಕೆಯ ಕಾಲದಲ್ಲಿ(೧೨೩೫-೫೩) ಹುಟ್ಟಿದವಾಗಿರಬೇಕು.ಸಾತನೂರು ಹೋಬಳಿಗೆ ಸೇರಿದ ಹೊಸಹಳ್ಳಿ ಗ್ರಾಮದಲ್ಲಿ ಕಂಡುಬರುವ ವೀರಗಲ್ಲು(ನಂ.೭೧, ೧೨೮೯) ಸೋಮೇಶ್ವರನ ಮಗ ೩ನೆಯ ನರಸಿಂಹನ ಕಾಲಕ್ಕೆ ಸೇರಿದ್ದಾಗಿದೆ(೧೨೫೩-೯೨) (ಡಾ.ಟಿ.ವಿ.ವೆಂಕಟಾಚಲಶಾಸ್ತ್ರೀ, ಕನಕಪುರ ಎಂಬ ಕಾನಕಾನಹಳ್ಳಿಯ ಚರಿತ್ರೆ, ಪುಟ.೩೦, ೨೦೦೭) ರಾಜಕೀಯ ಏರಿಳಿತಗಳನ್ನು ಕಂಡ ಕಬ್ಬಾಳು ಹೊಯ್ಸಳರ ನಂತರ ವಿಜಯನಗರ ಸಾಮ್ರಾಜ್ಯಕ್ಕೆ ಸೇರಲ್ಪಟ್ಟಿತು. "ಕಬ್ಬಾಳು ಗ್ರಾಮದ ಕಬ್ಬಾಳಮ್ಮನ ಗುಡಿಗೆ ಉತ್ತರದಲ್ಲಿ ಒಂದು ಪಾಂಚಾಳರ ಸಂಬಂಧವಾದ ಶಾಸನ ದೊರೆತಿದೆ(ನಂ.೬೫, ೧೪೨೯). ಇದು ಇಮ್ಮಡಿ ದೇವರಾಯ ಮಹಾರಾಜನ (ಪ್ರೌಢದೇವರಾಯನೆಂದು ಪ್ರಸಿದ್ಧನಾಗಿದ್ದಾನೆ.) ಆಳ್ವಿಕೆಯ ಕಾಲಕ್ಕೆ (೧೨೨೪-೪೬) ಸೇರಿದ್ದಾಗಿದೆ. ಇದರಲ್ಲಿ ಚಿನ್ನ ಭಂಡಾರದ ಅಡ್ಡುಕದ ಸಮಯ ಚಕ್ರವರ್ತಿ ನಖರಾಚಾರ್ಯರ ಮಕ್ಕಳು ಮಲೇಪಾಚಾರ್ಯರು ಮತ್ತು ಇತರ ವಾಜರುಗಳು ಎತ್ತಿರಾಯಾಚಾರ್ಯ, ಕೆಳಲೆಯ ನಾಡಿಗೆ ಮುಖ್ಯನಾದ ಚೆನ್ನಾಚಾರ್ಯನ ಮಗ ಮಳೂರ ದಿವ್ವೋಜ, ವಿರುಪ್ಪೋಜ, ಬಲ್ಲೋಜ, ಕೂಡಲೂರ ಮಾಯೋಜ, ನಿಟ್ಟೂರ ಬೋಮ್ಮೋಜ ಹೀಗೆ ಸಮಸ್ತ ನಗರ್ತರೂ ಪಾಂಚಾಳರು ಪೆರುಗಾಳ ಮಲ್ಲೋಜ ಬೈರೋಜ ಎಂಬುವರಿಗೆ ಕಬಹಾಳು ಸ್ಥಳ ಹಿರಿಯೂರು ಇಲ್ಲಿಯ ಅಕ್ಕ ಸಾಲಿಕೆಯನ್ನು ಅನುಭವಿಸಿಕೊಂಡು ಬರುವಂತೆ ಶಾಸನ ಹಾಕಿಸಿದ್ದಾರೆ. ಸ್ಥಳವೊಂದರಲ್ಲಿ ಇತರರ ಸ್ಪರ್ಧೆ ಸಂಘರ್ಷಗಳಿಲ್ಲದ ಹಾಗೆ ತಮ್ಮ ವೃತ್ತಿ ಜೀವನ ನಡೆಸುತ್ತ ಒಂದು ಸಂತತಿ ಕರ ಕುಶಲಿಗಳು ನೆಮ್ಮದಿಯ ಬದುಕು ಮಾಡುವಂತೆ ಮಾಡಿಕೊಡುವ ಸರ್ವ ಸಮ್ಮತವಾದ ಈ ಒಡಂಬಡಿಕೆ ಶ್ಲಾಘಾರ್ಯವಾಗಿದೆ. ಇಲ್ಲಿಯೇ ಕಬ್ಬಾಳಮ್ಮನನ್ನು ಕಾಳಿಕಾದೇವಿ ಎಂದಿರುವುದು ಕಾಣುತ್ತದೆ"(ಅದೇ, ಪುಟ.೪೩). ಇದಕ್ಕೆ ಪೂರಕವಾಗಿ ಕಬ್ಬಾಳಮ್ಮನ ದೇವಾಲಯವು ವಿಜಯನಗರಕಾಲದ ವಾಸ್ತು ಶೈಲಿಯನ್ನೇ ಒಳಗೊಂಡ ರಚನೆಯಾಗಿದೆ.

ನಂತರದಲ್ಲಿ ವಿಜಯನಗರ ಸಾಮ್ರಾಜ್ಯದ ಸಾಮಂತರಾದ ಮೈಸೂರು ಒಡೆಯರ ಕಾಲದಲ್ಲಿ ಕಬ್ಬಾಳು ಕರಿ ನೀರಿನ ಶಿಕ್ಷೆಯನ್ನು ವಿಧಿಸುವ ಕೇಂದ್ರವಾಗಿತ್ತು. ದೇವರಾಜನ ರಾಜಾವಳಿ ಕಥೆ 'ವಂಶ ರತ್ನಾಕರ', ಸಿ.ಹಯವದನರಾಯರ 'ಮೈಸೂರು ಚರಿತ್ರೆ' ಹಾಗೂ ಕರ್ನಲ್‌ವಿಲ್ಕ್ಸ್‌ನ ಬರವಣಿಗೆಯಲ್ಲಿ ಕಬ್ಬಾಳು ದುರ್ಗದ ಕರಿನೀರಿನ ಶಿಕ್ಷೆಯ ಇತಿಹಾಸ ದಾಖಲಾಗಿದೆ. ಮೈಸೂರು ಒಡೆಯರ ವಿವಿಧ ಅರಸರ ಆಳ್ವಿಕೆಗೆ ನೇರವಾಗಿ ಒಳಪಟ್ಟಿರುವುದು ಕಂಡುಬರುತ್ತದೆ.

ಮೈಸೂರು ಅರಸರಾದ ೧ನೇ ಕೃಷ್ಣರಾಜ ಒಡೆಯರಿಗೆ (೧೭೧೪-೩೨) ಸಂತಾನಪ್ರಾಪ್ತಿಯಿಲ್ಲದ್ದರಿಂದ ಅಂಕನಹಳ್ಳಿಯ ದೇವರಾಜು ಅರಸು ಅವರ ಪುತ್ರನನ್ನು ದತ್ತು ಪುತ್ರನನ್ನಾಗಿ ಮಾಡಿಕೊಂಡರು. ಇವರೇ ಚಾಮರಾಜ ಒಡೆಯರು(೧೭೩೨-೩೪). ಇವರ ಆಳ್ವಿಕೆಯ ಕಾಲಾವಧಿಯಲ್ಲಿ ದಳವಾಯಿ ದೇವರಾಜಯ್ಯ, ಇವರ ತಮ್ಮ ಕರಾಚೂರಿ ನಂಜರಾಜಯ್ಯ ಸ್ವಲ್ಪಕಾಲ ದಳವಾಯಿತನ ಮಾಡುತ್ತಿದ್ದರು. ಇವರನ್ನು ದೊರೆಯು ಅಧಿಕಾರದಿಂದ ಕೆಳಗಿಳಿಸಿ ತನಗೆ ಆಪ್ತರಾದ ಅಧಿಕಾರಿಗಳನ್ನು ನೇಮಿಸಿಕೊಂಡಿದ್ದರು. ಇದರಿಂದ ಕುಪಿತಗೊಂಡ ದಳವಾಯಿಗಳು ಪಿತೂರಿಯಿಂದ ಚಾಮರಾಜ ಒಡೆಯರ ಸೈನ್ಯದಲ್ಲಿ ಮುಖ್ಯಸ್ಥನಾಗಿದ್ದ ಮದ್ದಗಿರಿ ಮಲ್ಲರಾಜಯ್ಯನ ಹತ್ತಿರ ನೌಕರಿಯಲ್ಲಿದ್ದ ಗುಲಾಂ ಹೈದರ್ ಎಂಬ ಜಮಾದಾರನಿಗೆ ಲಂಚಕೊಟ್ಟು ತನ್ನ ಕಡೆ ಮಾಡಿಕೊಂಡನು. ಇವರೆಲ್ಲರ ಸಹಾಯದಿಂದ ಪದಚ್ಯುತಗೊಂಡ ದಳವಾಯಿ ನಂಜರಾಜಯ್ಯನು ತನ್ನ ಜನರನ್ನು ಅರಮನೆಗೆ ನುಗ್ಗಿಸಿ, ನಾಗೋಜಿರಾಯನೆಂಬ ಜಮಾದಾರನನ್ನು ಸಂಧಾನಕ್ಕಾಗಿ ದೊರೆಯ ಬಳಿ ಕಳುಹಿಸಿಕೊಟ್ಟನು. ದೊರೆ ಮತ್ತು ನಂಜರಾಯ್ಯನ ನಡುವೆ ಸಂಧಾನ ವಿಫಲಗೊಂಡಾಗ ಒತ್ತಾಯ ಪೂರ್ವಕವಾಗಿ ದೊರೆಯ ರಾಜಲಾಂಛನ, ಪಟ್ಟದ ಕತ್ತಿಯನ್ನು ಸಿಂಹಾಸನದ ಮೇಲಿರಿಸಿದ ಮೇಲೆ, ರಾಜನ ಪರಿವಾರವನ್ನು ಸೆರೆ ಹಿಡಿದು ಪಹರೆಯಲ್ಲಿ ಬಲಾತ್ಕಾರವಾಗಿ ಕಬ್ಬಾಳು ದುರ್ಗಕ್ಕೆ ಸಾಗಿಸಿದನು. ರಾಜ ಚಾಮರಾಜ ಒಡೆಯರನ್ನು ದಳವಾಯಿ ದೇವಯ್ಯ, ಸರ್ವಾಧಿಕಾರಿ ವೀರಶೆಟ್ಟಿ, ಪ್ರಧಾನಿ ಗೋಪಿನಾಥಯ್ಯ ಮೊದಲಾದ ರಾಜನ ಆಪ್ತರಾಗಿದ್ದ ಏಳು ಜನರನ್ನು ಸಹ ಸರ್ವಾಧಿಕಾರಿಯಾದ ದಳವಾಯಿ ದೇವರಾಜಯ್ಯನು ಕಬ್ಬಾಳು ದುರ್ಗದ ಸೆರೆಯಲ್ಲಿರಿಸಿದನು. ಚಾಮರಾಜ ಒಡೆಯರು ಮತ್ತು ಅವರ ಕುಟುಂಬ ವರ್ಗದವರು ಕಬ್ಬಾಳು ದುರ್ಗದ ಅಹಿತಕರ ವಾತಾವರಣ ಕರಿನೀರಿನ ಶಿಕ್ಷೆ ಮತ್ತು ಸನ್ನಿವೇಶಗಳ ಫಲವಾಗಿ ಬಹಳಬೇಗ ಅವರೆಲ್ಲ ಸಾವನ್ನಪ್ಪಿದರು. "ಈ ಶಿಕ್ಷೆ ಕುರಿತ ಕಥನ ಇನ್ನು ವಿಸ್ತೃತವಾಗಿ 'ವಂಶಾರತ್ನಾಕರ'ದಲ್ಲಿಯೂ(ಪುಟ.೧೫೫-೧೬೨) ಸಿ.ಹಯವದನರಾಯರ ಮೈಸೂರು ಚರಿತ್ರೆಯಲ್ಲಿಯೂ ನಿರೂಪಿತಗೊಂಡಿದೆ. ಈ ಸಂಗತಿಯನ್ನು ದೇವಚಂದ್ರನು ೧ನೆಯ ಕೃಷ್ಣರಾಜನು ೧೮ವರ್ಷ ರಾಜ್ಯದಲ್ಲಿದ್ದು, ಕ್ರಿ.ಶ. ೧೬೫೩ರಲ್ಲಿ ಕಾಲವಾದ ಮೇಲೆ ಆತ ಅಪ್ರಾಪ್ತನಾದ್ದರಿಂದ ಆ ವಂಶದಲ್ಲಿಯ ಹದಿನೆಂಟು ವರ್ಷದ ಚಾಮರಾಜನೆಂಬಂಗೆ ಪಟ್ಟಮಂ ಕಟ್ಟಿ ಮೂರುವರ್ಷ ನಡೆಸುವಾಗ ದಳವಾಯಿಗಳೊಳ್ ವಿರುದ್ಧಮಾಗೆ ಆತನಂ ಕಬ್ಬಾಳು ದುರ್ಗಕ್ಕೆ ಹಾಕಲಲ್ಲಿಯೇ ತೀರಿ ಹೋದ ಎಂದು ತನ್ನ ರಾಜಾವಳಿ ಕಥೆಯಲ್ಲಿ ನಿರೂಪಿಸಿದ್ದಾನೆ(ಉದೃತ. ಸುರೇಶ ಕೆ.ಸಿ, ರಾಮನಗರ ಜಿಲ್ಲೆಯ ಸ್ಥಳನಾಮಗಳು ಒಂದು ಅಧ್ಯಯನ, ಪುಟ.೧೪೩).

ಬೆಟ್ಟದ ಚಾಮರಾಜ ಒಡೆಯರ್ ಕಾಲದಲ್ಲಿ(೧೭೭೦-೧೭೭೬) ಹೈದರ್ ಆಲಿಖಾನ್ ಸರ್ವಾಧಿಕಾರಿಯಾಗ್ಗಿಸು. ಆತನು ಬಳ್ಳಾರಿ, ಗುತ್ತಿ ಮೊದಲಾದ ಗಡಿಗಳ ಪ್ರದೇಶಗಳ ಮೇಲೆ ದಾಳಿಮಾಡಿ

ವಶಪಡಿಸಿಕೊಂಡ ವೇಳೆಯಲ್ಲಿ ಗುತ್ತಿಯ ಮುರಾರಿರಾವ್ ಘೋರ್ಪಡೆ ಎಂಬ ಸರದಾರನು ಹೈದರನ ಕೈಸೆರೆಯಾದನು. ಆತನ ಸಮಸ್ತ ಸಂಪತ್ತನ್ನು ದೋಚಿದ ಹೈದರ್ ಸರದಾರನನ್ನು ಶ್ರೀರಂಗಪಟ್ಟಣದ ಸೆರೆಯಲ್ಲಿಟ್ಟು ನಂತರದಲ್ಲಿ ಮುರಾರಿರಾಯ ಮತ್ತು ಅವನ ಪರಿವಾರವನ್ನು ಕಬ್ಬಾಳು ದುರ್ಗದಲ್ಲಿ ಸೆರೆಯಲ್ಲಿಟ್ಟನು. ಅಲ್ಲಿ ಹೈದರ್‌ನ ಅಪ್ಪಣೆಯಂತೆ ೧೭೭೯ರಲ್ಲಿ ಅವನನ್ನು ವಧಿಸಲಾಯಿತು. ಮುಂದೆ ೧೫ ವರ್ಷಗಳ ಕಾಲ ಸೆರೆಯಲ್ಲಿದ್ದ ಸರದಾರನ ಪರಿವಾರದವರನ್ನು ಹೈದರ್‌ನ ಮಗ ಟಿಪ್ಪು ೧೭೯೧ರಲ್ಲಿ ಅವರನ್ನೆಲ್ಲ ಕಬ್ಬಾಳು ದುರ್ಗದಲ್ಲಿಯೇ ಸಾಮೂಹಿಕವಾಗಿ ಕೊಲ್ಲಿಸಿದನು.

ಬೆಟ್ಟದ ಚಾಮರಾಜ ಒಡೆಯರ್‌ನ ನಂತರ ಮೈಸೂರು ಸಿಂಹಾಸವನ್ನೇರಿದವನು ಖಾಸಾ ಚಾಮರಾಜ ಒಡೆಯರ್ ಕಾಲದಲ್ಲಿ(೧೭೭೬-೧೭೯೮) ಟಿಪ್ಪುವಿನ ಸರ್ವಾಧಿಕಾರತ್ವದ ಉತ್ತುಂಗದ ದಿನಗಳು. ಟಿಪ್ಪುವು ನರಗುಂದದ ಕೋಟೆಯನ್ನು ದೇಸಾಯಿ ಕಾಳಾಪಹಿತನೆಂಬುವನ ವಶದಲ್ಲಿತ್ತು. ಆ ಕೋಟೆಯನ್ನು ಗೆದ್ದುದ್ದೆ ಆದರೆ ಮರಾಠರನ್ನು ಎದುರಿಸಲು ಸುಲಭವಾಗುವುದೆಂದು ಬಗೆದು, ಗಡಿತಂಟೆಯ ನೆಪ ತೆಗೆದು ನರಗುಂದದ ಮೇಲೆ ದಾಳಿ ಮಾಡಿದನು. ದೇಸಾಯಿ ಕಾಳಾಪಂಡಿತನು ಟಿಪ್ಪುವಿನ ದಾಳಿಯನ್ನು ಧೈರ್ಯದಿಂದ ಎದುರಿಸಿದನಾದರೂ ಕೊನೆಯಲ್ಲಿ ಶರಣಾಗತನಾಗಬೇಕಾದ ಸಂದರ್ಭ ಒದಗಿ ಬಂದಿತು. ಅವನಿಗೆ ರಕ್ಷಣೆ ಕೊಡುವ ವಂಚನೆಯ ಮಾತನಾಡಿ ಅವನನ್ನು ಮತ್ತು ಅವನ ರಾಜ ಪರಿವಾರವನ್ನು ಸೆರೆ ಹಿಡಿದನು. ಪಹರೆಯಲ್ಲಿ ಕೋಳಹಾಕಿ ಬಂಧಿಗಳಾಗಿ ಮಾಡಿ ಮೊದಲು ಶ್ರೀರಂಗಪಟ್ಟಣಕ್ಕೆ ಸಾಗಿಸಿ ಅಲ್ಲಿಂದ ಕಬ್ಬಾಳು ದುರ್ಗಕ್ಕೆ ಸಾಗಿಸಲಾಯಿತು. ಅಲ್ಲಿ ಕಾಳಾಪಂಡಿತನು ೧೭೮೫ರ ವೇಳೆಗೆ ಅಲ್ಲಿಯೇ ಅನಾರೋಗ್ಯಕ್ಕೆ ಒಳಗಾಗಿ ಸತ್ತನು.

ಟಿಪ್ಪು ಪುಣೆಯ ಪೇಶ್ವೆಗಳ ಮೇಲೆ ಮುನ್ನಡೆದು ಹರಪನಹಳ್ಳಿ ಮತ್ತು ರಾಯದುರ್ಗಗಳ ನಡುವೆ ಬಂದು ಬೀಡು ಬಿಟ್ಟಿದ್ದಾಗ ಅವನೊಂದಿಗೆ ಸಂದರ್ಶನಕ್ಕಾಗಿ ಬಂದಿದ್ದ ಆ ಸ್ಥಳಗಳ ಇಬ್ಬರು ಸರದಾರನನ್ನು ವಂಚನೆಯಿಂದ ಟಿಪ್ಪು ಬಂಧಿಸಿ ಮೊದಲು ಬೆಂಗಳೂರಿಗೆ ಸಾಗಿಸಿ, ನಂತರ ಕಬ್ಬಾಳು ದುರ್ಗಕ್ಕೆ ರವಾನಿಸಿ ಬಂಧಿಗಳನ್ನಾಗಿ ಮಾಡಿದನು. ಅವರು ಆ ಅಹಿತಕರ ವಾತಾವರಣದಲ್ಲಿಯೇ ಸವೆದು ಸಾಯುವಂತೆ ಮಾಡಿದ ಘಟನೆ ೧೭೮೭ರಲ್ಲಿ ನಡೆಯಿತು. ಹೈದರ್ ಮತ್ತು ಟಿಪ್ಪುವಿನ ಕಾಲದಲ್ಲಿ ತನ್ನ ವಿರೋಧಿಗಳನ್ನು ಅಂತ್ಯಗೊಳಿಸುವುದಕ್ಕಾಗಿ ಕಬ್ಬಾಳು ದುರ್ಗವನ್ನು ಬಳಸಿಕೊಂಡಿರುವುದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಈ ದುರ್ಗದ ಮಹತ್ವವನ್ನು ಕಂಡು ಕಬ್ಬಾಳು ದುರ್ಗದ ಕೋಟೆಯನ್ನು ದುರಸ್ತಿಗೊಳಿಸಿ ಅದಕ್ಕೆ 'ಜಾಫರ್‌ಬಾದ್' ಎಂದು ಪ್ರತಿನಾಮಕರಣ ಮಾಡಿದರೂ ಆ ಹೆಸರು ಪ್ರಚಾರಕ್ಕೆ ಬರಲಿಲ್ಲ. ೧೮೬೪ರಲ್ಲಿ ಇಲ್ಲಿಯ ಫಿರಂಗಿಗಳನ್ನು, ಮದ್ದನ್ನು ನಾಶಪಡಿಸಿ ಇಲ್ಲಿದ್ದ ಸಿಬ್ಬಂಧಿಯನ್ನು ಮೈಸೂರಿಗೆ ಸ್ಥಳಾಂತರಿಸಲಾಯಿತು. ಹೀಗೆ ಕಬ್ಬಾಳು ದುರ್ಗದ ಇತಿಹಾಸ ಹೊಯ್ಸಳ ಅರಸರಿಂದ ಹಿಡಿದು ಟಿಪ್ಪು ಮತ್ತು ಟಿಪ್ಪುವಿನ ಸಾವಿನ ನಂತರ ಒಡೆಯರ ಆಳ್ವಿಕೆಗೆ ಒಳಪಟ್ಟಿದ್ದ ಒಂದು ಐತಿಹಾಸಿಕ ಸ್ಥಳವಾಗಿದೆ.

ಶಾಸನಗಳನ್ನು ರಾಜವಂಶಗಳ ಇತಿಹಾಸಕ್ಕಾಗಿ ಪರಿಶೀಲಿಸುವ ಸಾಂಪ್ರದಾಯಿಕ ಕ್ರಮವನ್ನು ಮುರಿದು ಅವುಗಳಲ್ಲಿನ ಸಾಂಸ್ಕೃತಿಕ ಅಂಶಗಳಿಗೆ ಹೆಚ್ಚು ಒತ್ತುಕೊಟ್ಟು ಶಾಸನಗಳನ್ನು ಅಧ್ಯಯನ ಮಾಡುವುದು

ಅರ್ಥಪೂರ್ಣವಾಗಿದೆ. ಆಧುನಿಕವಾಗಿ ಶಾಸನಗಳ ಭಾಷೆ, ವಸ್ತು, ಶಿಲ್ಪ, ಲಿಪಿ ಮುಂತಾಗಿ ಬೇರೆ ಬೇರೆ ರೀತಿಯ ಅಧ್ಯಯನಗಳು ನಡೆದಿವೆ. 'ಶಾಸನ' ಎಂದರೆ ರಾಜಾಜ್ಞೆ ಎನ್ನುವ ಮೂಲಾರ್ಥ ಇರಬಹುದಾದರೂ ರಾಜ್ಯವ್ಯವಸ್ಥೆ ಮತ್ತು ಅದು ಪ್ರತಿನಿಧಿಸುವ ಸಾಂಸ್ಕೃತಿಕ ಸ್ವರೂಪವನ್ನು ಶಾಸನಗಳು ಹಿಡಿದಿಟ್ಟಿವೆ. ಒಂದು ಪ್ರದೇಶದ ಸಾಂಸ್ಕೃತಿಕ ವಿವರಗಳಿಗಾಗಿ ಶಾಸನಗಳನ್ನು ಪರಿಶೀಲಿಸುವುದು ಸೂಕ್ತ ಎಂಬ ಕಾರಣದಿಂದ ಪ್ರಸ್ತುತ ಕಬ್ಬಾಳು ಮತ್ತು ಕಬ್ಬಾಳು ಸುತ್ತಮುತ್ತಲಿನ ಕಬ್ಬಾಳು ಕುಳಿಯಲ್ಲಿನ ಶಾಸನಗಳನ್ನು ಗಮನಿಸುವುದು ಸೂಕ್ತವೆನ್ನಬಹುದು.

ಕಬ್ಬಾಳಿನಲ್ಲಿ ದೊರೆತಿರುವ ಎರಡು ಶಾಸನಗಳಿದ್ದು ಒಂದು ದಾನ ಮತ್ತು ಧರ್ಮ ಶಾಸನವಾದರೆ, ಮತ್ತೊಂದು ವೀರಗಲ್ಲಿನ ಶಾಸನವಾಗಿದೆ. ಇಲ್ಲಿ ದೊರೆತಿರುವ ಶಾಸನಗಳು ನಿರ್ಣಾಯಕ ರಾಜಕೀಯ, ಯುದ್ಧ ಘಟನೆಗಳನ್ನು ಹೊಂದಿರದ ಶಾಸನಗಳಾಗಿರುವುದರಿಂದ ಇಲ್ಲಿನ ಶಾಸನಗಳು ಹೆಚ್ಚು ಪ್ರಾಧಾನ್ಯತೆಯನ್ನು ಗಳಿಸಲಿಲ್ಲ. ಆದರೂ ಇಲ್ಲಿನ ಶಾಸನ ಕಬ್ಬಹಾಳ ಎಂದು ಆ ಗ್ರಾಮದ ಹೆಸರನ್ನು ಉಲ್ಲೇಖಿಸಿದೆ. ಕಬ್ಬಾಳು ಮತ್ತು ಸುತ್ತಮುತ್ತಲಿನಲ್ಲಿ ದೊರೆತಿರುವ ಶಾಸನಗಳು ಕಬ್ಬಾಳಿನ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ. "ಸಾತನೂರು ಗ್ರಾಮದ ಶಿವಾಲಯಕ್ಕೆ ಭೂಮಿದಾನ ಮಾಡಿದ ಸಂಗತಿಯನ್ನು ದಾಖಲಿಸುವ ಒಂದು ಶಾಸನವು (ನಂ.೪೮, ಸು.೧೨೫೦) ಸಾತನೂರು ಹೋಬಳಿ ಕಬ್ಬಾಳು ಗ್ರಾಮದ ಕೋಟೇಶ್ವರ ದೇವಾಲಯಕ್ಕೆ ಭೂಮಿದಾನ ಮಾಡಿದ್ದನ್ನು ಹೇಳುವ ಇನ್ನೊಂದು ಶಾಸನವು(ನಂ.೬೬, ಸು.೧೨೫೦) ತಮಿಳು ಶಾಸನಗಳಾಗಿದ್ದು, ಇವು ಬಹುಶಃ ಹೊಯ್ಸಳ ಸೋಮೇಶ್ವರನ ಆಳ್ವಿಕೆಯ ಕಾಲದಲ್ಲಿ(೧೨೩೫-೫೩) ಹುಟ್ಟಿದವಾಗಿರಬಹುದು. ಈ ಎರಡನೆಯ ಶಾಸನದ ವಿಚಾರ ವಿಶೇಷವಾಗಿ ಗಮನಿಸತಕ್ಕುದಾಗಿದೆ. ಶ್ರೀಕೇಶವ ಚತುರ್ವೇದಿ ಮಂಗಲಂ ಎಂಬ ಪ್ರತಿನಾಮದ ಕಡಪದ ಜಮೀನುದಾರ ಕಡಪದ ಮಾರಯ್ಯನೆಂಬುವನು ದಾನಿ ಎಂಬುದು ಕುತೂಹಲದ ಸಂಗತಿ(ಡಾ.ಟಿ.ವಿ.ವೆಂಕಟಾಲಚಶಾಸ್ತ್ರಿ, ಕನಕಪುರ ಎಂಬ ಕಾನಕಾನ ಹಳ್ಳಿಯ ಚರಿತ್ರೆ).

ಚರಿತ್ರೆಯಲ್ಲಿ ಸಹಜವಾದ ಸಾವು ಮನುಷ್ಯನನ್ನು ಕಾಡಿರುವುದಕ್ಕಿಂತಲೂ ಬಾಳಿನ ಯಾತ್ರೆಯನ್ನು ಪೂರ್ಣಗೊಳಿಸದೆ ಬೇರೆ-ಬೇರೆ ಕಾರಣಗಳಿಗೆ ತಮ್ಮ ಪ್ರಾಣವನ್ನು ಅರ್ಪಿಸಿದವರ ಬಗ್ಗೆ ಹೆಚ್ಚು ಪ್ರೀತಿ, ಗೌರವ, ಆದರ, ಅಭಿಮಾನ ಮತ್ತು ಭಯಗಳು ಸೃಷ್ಟಿಯಾಗಿವೆ. ಸಾವಿನ ಬಗ್ಗೆ ಮತ್ತು ಸಾವಿನ ನಂತರದ ಜೀವನದ ಬಗ್ಗೆ ಅನೇಕ ರೀತಿಯ ಕಲ್ಪನೆಗಳು ಬೆಳೆದುಬಂದಿವೆ. ಇವೆಲ್ಲ ಬಹುಶಃ ಮನುಷ್ಯನು ಭೀತಿಯಿಂದ ಪಾರಾಗಲಿಕ್ಕೆ ಅಥವಾ ತಮ್ಮವರ ಬಗ್ಗೆ ತಮಗಿರುವ ಪ್ರೀತಿ ಆದರಗಳನ್ನು ವ್ಯಕ್ತಪಡಿಸಲು ಮಾಡಿಕೊಂಡ ಉಪಾಯ ಅಥವಾ ಪರಿಹಾರ ಮಾರ್ಗ ಅಥವಾ ಪ್ರತಿಷ್ಠೆಯು ಇರಬಹುದೆನಿಸುತ್ತದೆ.

"'ವೀರ' ಎಂಬ ಪದ ವ್ಯಕ್ತಿಯ ಪರಾಕ್ರಮ, ಶಕ್ತಿ ಪೌರುಷ ಮುಂತಾದ ದೈಹಿಕ ಗುಣಗಳನ್ನು ಸೂಚಿಸುವ ಗುಣವಾಚಕವಾಗಿ ಬಳಕೆಯಲ್ಲಿದೆ. 'ವೀರ' ಎಂಬುದಕ್ಕೆ 'ಬೀರ' ಎಂಬ ತದ್ಭವ ರೂಪವೂ ಬಳಕೆಯಲ್ಲಿದೆ. ವ್ಯಕ್ತಿಗಳು ಸತ್ತರೆ ಅವರ ಸ್ಮರಣೆಗೆ ಸ್ಮಾರಕಗಳನ್ನು ನಿರ್ಮಿಸುವುದು ಸಾಮಾನ್ಯ. ಆದರೆ ಯುದ್ಧಗಳಲ್ಲಿ ಹೋರಾಡಿ ಮಡಿದ ವೀರನಿಗೆ ರಾಜನಿಗೆ ಕೀರ್ತಿಯನ್ನು ತಂದುಕೊಟ್ಟ ವೀರ ಮರಣವನ್ನಪ್ಪಿದವರಿಗೆ, ಗರುಡರಿಗೆ ಶತ್ರುಗಳೊಡನೆ ಕಾದಾಡಿ ಸತ್ತ ವೀರಯೋಧರ ಸ್ಮರಣಾರ್ಥವಾಗಿ

ವೀರಗಲ್ಲುಗಳನ್ನು ನೆಡುವ ಸಂಪ್ರದಾಯ ಚರಿತ್ರೆಯಲ್ಲಿ ಕಂಡು ಬರುತ್ತದೆ(ಕೆ.ಕೃಷ್ಣಪ್ಪ, ಹೊಸಕೋಟೆ ತಾಲೂಕು ಒಂದು ಸಾಂಸ್ಕೃತಿಕ ಅಧ್ಯಯನ, ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಬೆಂಗಳೂರು ವಿಶ್ವವಿದ್ಯಾನಿಲಯ, ೨೦೦೨, ಪುಟ.೭೮). ಹೀಗೆ ಮಾಡುವುದರಿಂದ ಸತ್ತ ಆ ವ್ಯಕ್ತಿಗೆ ಗೌರವ ಸೂಚಿಸುವುದಷ್ಟೇ ಅಲ್ಲ, ಅವನು ಮೆರೆದ ವೀರತ್ವಕ್ಕಾಗಿ ಅಭಿಮಾನ ತಳೆಯುವುದು, ಆ ವ್ಯಕ್ತಿಯ ಬಗ್ಗೆ ಭಕ್ತಿಭಾವಗಳನ್ನು ಬೆಳೆಸಿಕೊಂಡು ಪೂಜಿಸುವುದು ಕೂಡ ಕಂಡುಬರುತ್ತದೆ.

ಸಾಮಾನ್ಯವಾಗಿ ಶಾಸನ ವೀರಗಲ್ಲುಗಳನ್ನು ಜನರ ಗಮನ ಸೆಳೆಯುವುದಕ್ಕೆ ಮತ್ತು ಅವುಗಳ ಬಗ್ಗೆ ಜನರಲ್ಲಿ ಭಾವನಾತ್ಮಕವಾದ ಸಂಬಂಧವನ್ನು ನೇಯುವ ದೃಷ್ಟಿಯಿಂದ ಜನಸಂಚಾರವಿರುವ ಸ್ಥಳಗಳಲ್ಲಿ ಘಟನೆಗಳಿಗೆ ಸಂಬಂಧವಿರುವ ಸ್ಥಳಗಳಲ್ಲೇ ಸ್ಥಾಪಿಸುತ್ತಾರೆ. ಒಂದು ಸಾರಿ ಜನರ ಗಮನಕ್ಕೆ ಬಂದರೆ ನಂತರದಲ್ಲಿ ಅವು ಜನರ ಆಸ್ಥಿಯಾಗಿ ಮಾರ್ಪಾಡುತ್ತವೆ. ಜನರ ಬದುಕಿನೊಂದಿಗೆ ಉಳಿದುಬಿಡುತ್ತವೆ. ಕಾಲಾಂತರದಲ್ಲಿ ಬೇರೆ ಬೇರೆ ನಂಬಿಕೆಗಳಿಗೆ, ಕಲ್ಪನೆಗಳಿಗೆ ಎಡೆಮಾಡಿಕೊಡುತ್ತವೆ. ಅನೇಕಬಾರಿ ಅವುಗಳ ಅಸ್ತಿತ್ವವನ್ನು ಉಳಿಸಿಕೊಳ್ಳಲು ಕಷ್ಟಪಡಬೇಕಾಗುತ್ತದೆ. ಈ ಕಾರಣದಿಂದಾಗಿ ಇವುಗಳನ್ನು ರಸ್ತೆಯ ಬದಿಯಲ್ಲಿ, ಮರಗಳ ಕೆಳಗೆ ಹಾಳು ಮಂಟಪಗಳ ಬಳಿ, ಗುಡಿಯ ಅಕ್ಕ-ಪಕ್ಕ ನಿರ್ವಸಿತವಾದ ಸಾರ್ವಜನಿಕ ಸ್ಥಳಗಳಲ್ಲಿ ಕಂಡುಬರುತ್ತವೆ.

ಕಬ್ಬಾಳು ಕುಳಿಯ ಬೊಮ್ಮನಹಳ್ಳಿ ಎಂಬ ಗ್ರಾಮದಲ್ಲಿ ಎರಡು ಶಾಸನಗಳಿದ್ದು, ಅವುಗಳು ಉಲ್ಲೇಖವಾಗಿಲ್ಲ. ಅವುಗಳಲ್ಲಿ ಒಂದು ಉಬ್ಬುಶಿಲ್ಪಗಳಿಂದ ಕೂಡಿದುದಾದರೆ ಮತ್ತೊಂದು ಉಬ್ಬುಶಿಲ್ಪಗಳ ಜೊತೆಗೆ ಅಕ್ಷರಗಳು ತಮಿಳಿನ ಅಕ್ಷರಗಳಾಗಿದ್ದು ಉಬ್ಬುಶಿಲ್ಪಗಳು ಬಿಲ್ಲುಬಾಣಗಳನ್ನು ಹಿಡಿದು ಯುದ್ಧಕ್ಕೆ ಹೋಗುವ ರೀತಿಯಲ್ಲಿ ಇವೆ. ಇದು ಚೌಡಯ್ಯ ಎಂಬುವವರ ಮನೆಯ ಹಿಂದೆ ಹಿತ್ತಲಲ್ಲಿ ಇದೆ. ಮತ್ತೊಂದು ಊರಿನ ಸರ್ಕಾರಿ ಕಿರಿಯ ಪಾಠಶಾಲೆ ಹತ್ತಿರ ಆಂಜನೇಯ ದೇವಸ್ಥಾನದ ಮುಂದೆ ಮೊದಲು ದೊಡ್ಡ ಅರಳಿಕಟ್ಟೆ ಇದ್ದ, ಪಶ್ಚಿಮಕ್ಕೆ ದಾರಿಯ ಪಕ್ಕದಲ್ಲೇ ಇದೆ. ಇದು ಬರಿಯ ಉಬ್ಬು ಶಿಲ್ಪಗಳಿಂದ ಕೂಡಿದ್ದು, ಆನೆ, ಕುದುರೆ, ಬಿಲ್ಲು ಬಾಣಗಳ ಗುರುತುಗಳನ್ನು ಒಳಗೊಂಡಿದೆ. ಇದರ ಬಗ್ಗೆ ಅರಿವಿಲ್ಲದ ಜನರು ಇದಕ್ಕೆ ಬಣ್ಣ ಬಳಿದು ಹೂಮುಡಿಸಿ ಕುಂಕುಮ ಹಚ್ಚಿ ಪೂಜಿಸುತ್ತಾರೆ. ಈ ರೀತಿಯ ವೀರಗಲ್ಲಿನ ಶಾಸನಗಳು ಹೆಚ್ಚು ಪ್ರಾಚೀನವಾದವುಗಳು. ಕಾಲಕ್ರಮೇಣವಾಗಿ ವೀರರನ್ನು ಶಿಲ್ಪಗಳ ಮುಖಾಂತರವಾಗಿ ಕಾಣಿಸುವುದು ರೂಢಿಗೆ ಬಂದಿದೆ.

ಸಾಮಾನ್ಯವಾಗಿ ಶಿಲ್ಪಗಳಿರುವ ವೀರಗಲ್ಲುಗಳಲ್ಲಿ ಯುದ್ಧದಲ್ಲಿ ಮಡಿದ ವೀರನನ್ನು ಸ್ವರ್ಗಕ್ಕೇರಿಸುವ ಕಲ್ಪನೆಯಿರುತ್ತದೆ. ವೀರಗಲ್ಲಿನ ತಳಭಾಗ ವೀರನು ಮಡಿದ ಹೋರಾಟ ಶಿಲ್ಪವಿದ್ದು ಅನಂತರ ಹೋರಾಟದಲ್ಲಿ ಸತ್ತ ವೀರರನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುವುದು, ಮೂರನೇ ಹಂತದಲ್ಲಿ ವೀರನು ಸ್ವರ್ಗವಾಸಿಯಾಗಿರುವ ಶಿಲ್ಪಗಳನ್ನು ಹಂತ-ಹಂತವಾಗಿ ಮೂಡಿಸಲಾಗಿರುತ್ತದೆ. ಈ ರೀತಿಯ ಶಿಲ್ಪದ ವಿವರಗಳು ವೀರಗಲ್ಲಿನ ತಳಭಾಗದಲ್ಲಿ ಆರಂಭವಾಗಿ ಮೇಲಕ್ಕೆ ಹೋಗುತ್ತವೆ. ಭೂಲೋಕದಲ್ಲಿ ಯುದ್ಧ ನಡೆಯುವುದು ಭೂ ಲೋಕದ ಮೇಲೆ ಸ್ವರ್ಗ ಇರುವುದು ಆದ್ದರಿಂದ ಭೂಲೋಕದ ಮೇಲಿರುವ ಸ್ವರ್ಗಕ್ಕೆ ವೀರನು

ಹೋಗುತ್ತಾನೆ ಎಂಬ ನಂಬಿಕೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸುವ ಸಲುವಾಗಿ ಈ ವಿಧಾನವನ್ನು ಅನುಸರಿಸಲು ಕಾರಣವೆಂದು ಡಾ.ಆರ್.ಶೇಷಶಾಸ್ತ್ರಿಯವರು ಅಭಿಪ್ರಾಯಪಟ್ಟಿದ್ದಾರೆ.

ಬಿಲ್ಲು ಹಿಡಿದು ಯುದ್ಧಕ್ಕೆ ಹೊರಟ ವೀರರು ತಲೆಯೆತ್ತಿ ವೀರಗಚ್ಚೆಯನ್ನು ಧರಿಸಿ ಮುನ್ನುಗ್ಗುವ ಚಿತ್ರಗಳು ಸಾಮಾನ್ಯ ಖಡ್ಗ ಮತ್ತು ಗುರಾಣಿಗಳನ್ನು ಹಿಡಿದು ಯುದ್ಧ ಮಾಡುವ ವೀರಗಲ್ಲಿನ ಶಿಲ್ಪಗಳು ಈ ಪ್ರದೇಶದಲ್ಲಿ ಕಂಡುಬಂದಿವೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ಶಾಸನ ಸಂಪುಟ. ೯

ಕಬ್ಬಾಳು ಶಾಸನ ಸಂಖ್ಯೆ ೬೪

ಸಾತನೂರು ಹೋಬಳಿ ಕಬ್ಬಾಳು ಗ್ರಾಮಕ್ಕೆ ಉತ್ತರಕ್ಕೆ ಕಬ್ಬಾಳಮ್ಮನ ಗುಡಿಗೆ ಉತ್ತರ ದಿಕ್ಕಿನ ವೀರ ಗುಡಿಯಲ್ಲಿ

೧. ಸ್ವಸ್ತಿ ಶ್ರೀ ಮತುಪ್ರತಾಪಚಕ್ರವರ್ತಿ ಹೋಸಳ

೨. ಶ್ರೀ ವೀರಬಲ್ಲಾಳ ದೇವರು ಪ್ರಿಥ್ವೀ ರಾಜ್ಯಂಗೆ

೩. ಯುತ್ತಿರಲು ಶಕವರುಷಸಾಸಿರದ

೪. ೨೦೧ ನೆಯ ಖರಸಂವತ್ಸರದ ಮಾರ್ಗಸಿರ

೫. ಬ ಬುಕಜಂತರಕುಲದ ಕಬ್ಬಹಾಳ ಸೋ

೬. ಮಗ ಉಂಡನ ಮಗಶಾಲುರಣ್ಣನೂಸಾದನು

೭. ಹನಿಯೂರ ಸಹನೆಯೂರಸಂತೆಗೆ ಹೋಗಿಬರುತ್ತಿದ್ದಲ್ಲಿ ಕಳ್ಳ

೮. ರುತಾಗಿ ಕಾದಿಸ್ವರ್ಗಸ್ತನಾದ ಆತನಕಡೆ

೯. ಸೋಮಗೌಂಡನು ಆತನ ಅಂಣಂದರು ಮಾಡಿಸಿ

೧೦. ದಕಲ್ಲು ಮಂಗಳಮಹಾಶ್ರೀಶ್ರೀ

ಕಬ್ಬಾಳಮ್ಮನ ಗುಡಿಗೆ ಉತ್ತರದಲ್ಲಿ (ಪ್ರಮಾಣ ೪೨x೨೪) ಶಾಸನ ಸಂಖ್ಯೆ ೬೫

೧. ಸಲುಮ್ಯಸಂವತ್ಸರದ ಜೇಷ್ಟಸು ೨ ಸೋಸ್ವಸ್ತಿ

೨. ಸಮಸ್ತುಪ್ರಸಸ್ತ ಸಹಿತಂ... ದೇವ

೩. ಪೆರಸದೇವ ದಿವ್ಯಶ್ರೀಪಾದ ಪದ್ಮಾ

೪. ರಾದಕರಪ್ಪ ಶ್ರೀ ಮುಳಾಯಿರಾಯ ರಾಜದಾನಿಶ್ರೀ

೫. ಪ್ರತಾಪದೇವರಾಯ ಮಹಾರಾಯರ... ತನಯಚಿ

೬. ನಬಂಡಾರದ ಅದುಕದನಳೆಯ ಚಿಕಣ್ಣನಂದಾ

೭. ಚಾರೆಯರ ಮಕ್ಕಳು ಮಲೆಪಾಚಾರೆಯರು ವಿತ್ತಿರಾಯಾಚಾ

೮. ರೆಯೆಕೆಳಲೆಯನಾಡಿಗೆ ಮುಖ್ಯವಾದ ಚೆಂಣಚಾ

೯. ರೆಯ ಮಗ... ಗಂಸ್ವದೇಶ ಮುಳೂರದಿವೋಜವಿನ

೧೦. ಯ್ಯರ ಉರವಿರುಪೋಜ ಬಲ್ಲಾಜ ಕೂಡಲೂರ ಮಾಯೋ

೧೧. ಜ... ವಲೋಜಬಯಿಚೆ.. ಸುಳರಿಯ ಅಂಮ

೧೨. ಹೊದ ಬಿತ್ತಿಯೆ ದೊಂದಾಜನಿಟ್ಟುರ ಬೋ ಮೋಜಯಿಂ

೧೩. ಹಲುವರೊಳಗಾದ ಸಮಸ್ತ ನಗರತರ ಪಂಚಾಳಲು

೧೪. ...ವಾಳಮರೋ ಜಿ ಬಯಿರೋಜನಿನವರಿಗೆ ಕೊಟ್ಟ ಸಾ

೧೫. ಸಾನದಕ್ರಮವೆಂತೆಂದಡೆ..... ಕಬಹಾಳಸ್ಥಳ

೧೬. ಪಹಳ್ಳಿಹಿರಿಯೂರಬ...ಮರಕೆಲಿಕಸಾಲಿಕೆ

೧೭. ......ಆನುಬಸುವಿರಿ (ಮುಂದೆ ಕಾಣುವುದಿಲ್ಲ)

ಐತಿಹ್ಯಗಳು

ಐತಿಹ್ಯಗಳು ವಾಸ್ತವವಾಗಿ ನಡೆದಿದೆ ಎಂದು ನಂಬಿಕೊಂಡು ಬಂದಿರುವ ಮತ್ತು ಚರಿತ್ರೆಯ ನಿರ್ಮಿತಿಗೆ ಅಗತ್ಯವಾದ ಭೌತಿಕ ಆಧಾರವೊಂದನ್ನು ಅದರ ಮೂಲಸ್ವರೂಪದಲ್ಲಿಯೇ ಒದಗಿಸಿ ಅಸಾಮಾನ್ಯ ಘಟನೆಯೊಂದರ ಸುತ್ತ ಹೆಣೆದಿರುವ ಕಥೆಯಾಗಿವೆ. ಪ್ರಾಚೀನ ಕಾಲದ ಯಾವುದೋ ಒಂದು ಸಣ್ಣ ಚಾರಿತ್ರಿಕ ಘಟನೆಯ ಸುತ್ತ ಪರಂಪರಾನುಗತವಾಗಿ ಬಂದಿರಬಹುದಾದ ಸನ್ನಿವೇಷಗಳು ಬೆಳೆದು, ತಲೆಮಾರುಗಳ ಮೂಲಕ ಹರಿದು ಬರುವಾಗ ಕಥೆಯಾಗಿ ರೂಪಾಂತರಗೊಂಡರೆ ಅಂಥವನ್ನು ಐತಿಹ್ಯಗಳೆನ್ನಲಾಗುತ್ತದೆ. ಐತಿಹ್ಯಗಳು ನಿರ್ಧಿಷ್ಟ ಸ್ಥಳ, ವ್ಯಕ್ತಿ, ಧಾರ್ಮಿಕ, ಸಾಮಾಜಿಕ ಅಂಶಗಳ ಸುತ್ತ ಹೆಣೆದು ಕೊಂಡಿರುತ್ತವೆ. ವ್ಯಕ್ತಿಗಳಿಗೆ, ಸ್ಥಳಗಳಿಗೆ, ಘಟನೆಗಳಿಗೆ ಸಂಬಂಧಿಸಿದಂತೆ ಯಾವುದೋ ನಿರ್ಧಿಷ್ಟ ಹಿನ್ನಲೆಯಲ್ಲಿ ಹುಟ್ಟಿಕೊಳ್ಳುವ ಐತಿಹ್ಯಗಳು ವಾಸ್ತವವಾಗಿ ನಡೆದಿವೆ ಎಂದು ನಂಬಿಕೊಂಡು ಬಂದಿರುವ ಅಸಾಮಾನ್ಯ ಘಟನೆಯೊಂದರ ಸುತ್ತ ಹೆಣೆದಿರುವ ಕಥೆಯೇ ಐತಿಹ್ಯಗಳೆನಿಸುತ್ತವೆ.

ಕಾಲಮಾನದ ದೃಷ್ಟಿಯಿಂದ ಸಾಕಷ್ಟು ದೂರವನ್ನು ಕಾಪಾಡಿಕೊಂಡು ಬಂದಿರುವ ಪುರಾಣಗಳನ್ನು ವರ್ತಮಾನಕ್ಕೆ ಜೋಡಿಸಿಕೊಳ್ಳುವ ಅವಸರದಲ್ಲೂ ಐತಿಹ್ಯಗಳು ಸೃಷ್ಟಿಯಾಗುತ್ತವೆ. ವರ್ತಮಾನದ ಸ್ಪರ್ಶ ಇರುವುದೇ ಅದಕ್ಕೆ ಬಲವಾದ ಕಾರಣ. ರಿಚರ್ಡ್ ಎಂ.ಡಾರ್ಸನ್ ಐತಿಹ್ಯಗಳನ್ನು ವ್ಯಕ್ತಿಪ್ರಧಾನ, ಸ್ಥಳಪ್ರಧಾನ, ಘಟನಾಪ್ರಧಾನಗಳೆಂದು ಮೂರು ಬಗೆಯಾಗಿ ವಿಂಗಡಿಸಿಕೊಂಡಿದ್ದಾರೆ. ವ್ಯಕ್ತಿಪ್ರಧಾನ ಐತಿಹ್ಯದಲ್ಲಿ ಅಸಾಮಾನ್ಯವಾದ ಅಥವಾ ವಿಶಿಷ್ಟವಾದ ವ್ಯಕ್ತಿಯೊಬ್ಬನ ಸಾಧನೆಯ ನಿರೂಪಣೆ ಇರುತ್ತದೆ. ಸ್ಥಳ ಪ್ರಧಾನ ಐತಿಹ್ಯದಲ್ಲಿ ವ್ಯಕ್ತಿಗಳಿಗಿಂತ ಸ್ಥಳಕ್ಕೆ ಹೆಚ್ಚಿನ ಮಹತ್ವ ಸಂದಾಯವಾಗುತ್ತದೆ. ಬೆಟ್ಟ, ಕೆರೆ, ಕಲ್ಲು, ಗುಡಿ ಇತ್ಯಾದಿಗಳನ್ನು ಉದಾಹರಿಸಬಹುದು. ಘಟನಾಪ್ರಧಾನ ಐತಿಹ್ಯದಲ್ಲಿ ಸ್ಥಳ ಮತ್ತು ವ್ಯಕ್ತಿಗಿಂತ ನಿರ್ಧಿಷ್ಟ ಘಟನೆಯೇ ಪ್ರಧಾನವಾಗಿರುತ್ತದೆ. ಕೆಲವೊಮ್ಮೆ ವ್ಯಕ್ತಿಯೇ ಪ್ರಧಾನವಾಗುತ್ತಾನೆ.

ಕಬ್ಬಾಳು ಪರಿಸರದಲ್ಲೂ ಇಂತಹ ನಿಗೂಢ ಸತ್ಯಗಳನ್ನು ಗರ್ಭದಲ್ಲಿ ಹುದುಗಿಸಿಕೊಂಡು ಜನರನ್ನು ಸಾಂಕೇತಿಕವಾಗಿ ಆಳುತ್ತಿರುವ ಐತಿಹ್ಯಗಳು ಇಲ್ಲಿನ ಜನರ ನಂಬಿಕೆಗಳನ್ನು ಮತ್ತಷ್ಟು ಗಟ್ಟಿಗೊಳಿಸಿವೆ. ಕಬ್ಬಾಳಮ್ಮನನ್ನು ಕುರಿತಂತೆ ಅನೇಕ ಐತಿಹ್ಯಗಳು ದಂತಕತೆಗಳು ಪ್ರಚಲಿತವಾಗಿವೆ. "ಸ್ಮಿತ್ ಥಾಮ್ಸನ್

ಎಂಬ ಪಾಶ್ಚಾತ್ಯ ವಿದ್ವಾಂಸ ಐತಿಹ್ಯವು ಸಂಪ್ರದಾಯ ಮತ್ತು ಸಾಹಸದ ಕಥೆಗಳು, ಕಟ್ಟುಕಥೆಗಳು ಎಂದು ವರ್ಗೀಕರಿಸಿದ್ದಾರೆ. ಇವೆಲ್ಲ ತ್ಯಾಗ, ಬಲಿದಾನಗಳ ಸಂಕೇತಗಳಾಗಿ ರೂಪುಗೊಂಡಿವೆ. ಜನರ ನಂಬಿಕೆಯ ಮೇರೆಗೆ ಪರಂಪರಾನುಗತವಾಗಿ ಹರಿದು ಬಂದಿರುವ ಈ ಪುರಾಣ ಮತ್ತು ಐತಿಹ್ಯಗಳು ನಮ್ಮ ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ"(ಡಾ.ಬಸವರಾಜು ತೋಟಹಳ್ಳಿ, ಗ್ರಾಮ ದೇವತೆಗಳ ಅಧ್ಯಯನ ಒಂದು ಸಾಂಸ್ಕೃತಿಕ ಶೋಧ, ಪುಟ.೧೭೫). ಇವೆಲ್ಲವು ವ್ಯಕ್ತಿಗಳ ಬದುಕಿನಲ್ಲಿ ಹಿಂದೆ ನಡೆದಿರಬಹುದಾದ ಬದುಕಿನ ಚಿತ್ರಣವಾಗಿದ್ದು, ಸ್ಥಳೀಯವಾಗಿ ಹಾಗೂ ಸಂಚಾರಿ ಸ್ಥಳೀಯ ದೇವತೆಗಳಾಗಿ ಮೂಡಿ ಪ್ರಸಿದ್ಧಿಗೆ ಬಂದಿವೆ. ತಮ್ಮ ಬದುಕಿನ ಸುತ್ತ ಒಂದು ವಾಸ್ತವಿಕವೆಂಬಂತೆ ಕತೆಯನ್ನು ಕಟ್ಟಿಕೊಂಡು ತಾವು ಸಾಮಾನ್ಯ ಮನುಷ್ಯರಿಗಿಂತ ಭಿನ್ನ ಎಂದು ತಮ್ಮ ಶಕ್ತಿ ಸಾಮರ್ಥ್ಯದ ಪ್ರದರ್ಶನದಿಂದ ಜನರನ್ನು ಮಾನಸಿಕವಾಗಿ ಮರಳು ಮಾಡುತ್ತವೆ. ಇವು ಎಂದೋ ಮುಗಿದು ಹೋದಂತಹ ಘಟನೆಗಳಾಗಿದ್ದರೂ ಜನರಿಗೆ ಭಯ ಭಕ್ತಿಯನ್ನು ಮೂಡಿಸುತ್ತವೆ.

ಕಬ್ಬಾಳಮ್ಮ ಮೂಲತಃ ಕೊಂಗರ ಸೀಮೆಯ ಕೊಂಗನಾಡು ಎಂದು ಕರೆಯುವ ಈಗಿನ ತಮಿಳುನಾಡಿನವಳು. ತಮಿಳುನಾಡಿನಿಂದ ಇಲ್ಲಿಗೆ ಬಂದು ನೆಲೆಸಿದ ಕಥೆಯ ಒಂದು ಐತಿಹ್ಯ ಹೀಗಿದೆ. ತಮಿಳುನಾಡಿನ ಎಲ್ಲೆಗೆ ಸೇರಿದ 'ಮಡಿವಾಳ' ದೇವತೆಗಳ ತವರು ಮನೆಯಾಗಿತ್ತು. ಶಿವನಂಕಾರ ಎನ್ನುವವನು ಗಂಡು ದೇವರು ಆಗಿದ್ದು ಇವನು ಸ್ತ್ರೀದೇವತೆಗಳಿಗೆಲ್ಲ ಅಣ್ಣನಾಗಿದ್ದ. ಈ ಕ್ಷೇತ್ರವನ್ನು ಆಳುತ್ತಿದ್ದ ಪಾಳೆಯಗಾರ ಶ್ರೀಗಂಧದ ಸೌದೆಗಳಿಂದ ತೊಂಬತ್ತು ದಿವಸ ಕೊಂಡ ಬೇಯಿಸಿ, ಅರವತ್ತು ಖಂಡುಗ ಹರಳನ್ನು ಕೊಂಡಕ್ಕೆ ಸುರಿದು ಬೇಯಿಸಿ ನಿಜವಾದ ದೇವರಾಗಿದ್ದರೆ ಕೊಂಡದಲ್ಲಿ ಇಳಿದು ಬರಲಿ ಎಂದು ಸವಾಲು ಒಡ್ಡುತ್ತಾನೆ. 'ಶಿವನಾಂಕಾರ' ದೇವತೆಗಳನ್ನು ಕರೆದು ನುಗ್ಗಲು ಹೇಳಿದಾಗ ಎಲ್ಲಾ ದೇವತೆಗಳು ಹೆದರಿ ದಿಕ್ಕಾಪಾಲಾಗಿ ಓಡಿಹೋಗುತ್ತವೆ. ಆಗ ಸ್ಪುರದ್ರೂಪಿ ಕಬ್ಬಾಳಮ್ಮ ಕೊಂಡ ಹಾಯಲು ಒಪ್ಪಿಕೊಂಡು ಬಾಗಿಲು ಬಳಿ ಬಂದು ಹಬೆಗೆ ಬೆಂದು ಬಾಡಿ ಸೋಲನ್ನು ಒಪ್ಪಿಕೊಂಡಾಗ ಶಿವನಂಕಾರ 'ನೀನು ಕಬ್ಬಾಳಿಗೆ ಹೋಗಿ ಕರಿಯ ದುರ್ಗಿಯಾಗು' ಎಂದು ಶಾಪಕೊಟ್ಟ ಆದ್ದರಿಂದ ಕಬ್ಬಾಳಿಗೆ ಬಂದು ನೆಲೆನಿಂತು ಕರಿದುರ್ಗಿಯಾದಳು.

ಮತ್ತೊಂದು ಐತಿಹ್ಯದ ಪ್ರಕಾರ ಕಬ್ಬಾಳಮ್ಮ ತಮಿಳುನಾಡಿನಿಂದ ವಲಸೆ ಬಂದ ಪ್ರಕರಣ ತಿಳಿಯುತ್ತದೆ. ಇದರಲ್ಲಿ ಕಬ್ಬಾಳಮ್ಮನನ್ನು ವೀರಶೈವಳನ್ನಾಗಿ ಮಾಡಲಾಗಿದೆ. ತಮಿಳುನಾಡನ್ನು ಆಳುತ್ತಿದ್ದ ರಾಜ ಭಜಂತ್ರಿ ಜಾತಿಯವನಾಗಿದ್ದು ವೀರಶೈವಳಾದ ಕಬ್ಬಾಳಮ್ಮನನ್ನು ಮದುವೆಯಾಗಲು ಕೇಳಿದಾಗ ಇವರ ನಡುವೆ ಜಾತಿ ಪ್ರಶ್ನೆ ಅಡ್ಡಬಂದು ರಾತ್ರೋರಾತ್ರಿ ಕಬ್ಬಾಳಮ್ಮ ಕುದುರೆಯನ್ನೇರಿ ತಂಗಿಯಾದ ಬಿಸಿಲಮ್ಮನನ್ನು ಕರೆದುಕೊಂಡು ಕಬ್ಬಾಳಿನಲ್ಲಿ ನೆಲೆಯಾಗಿದ್ದ ಮಾರಮ್ಮಂದಿರನ್ನು ಪಗಡೆಯಾಟದಲ್ಲಿ ಸೋಲಿಸಿ ದೇವಸ್ಥಾನವನ್ನು ಆಕ್ರಮಿಸಿ ನೆಲೆಯಾದಳು ಎಂದು ಒಂದು ಐತಿಹ್ಯ ಹೇಳಿದರೆ ಮತ್ತೊಂದು ಐತಿಹ್ಯದ ಪ್ರಕಾರ ಕಬ್ಬಾಳಿನಲ್ಲಿದ್ದ ಮಾರಮ್ಮಂದಿರನ್ನು ಬೇಡಿಕೊಂಡು ನನಗೂ ಸ್ವಲ್ಪ ಜಾಗಕೊಡಿ ಎಂದು ಸ್ವಲ್ಪಜಾಗ ಪಡೆದು ಇಬ್ಬರು ಮಾರಮ್ಮಗಳನ್ನು ತಳ್ಳಿ ಮಧ್ಯದಲ್ಲೆ ನೆಲೆಯಾದಳು.

ತಮಿಳುನಾಡಿನಿಂದ ಬಂದಂತಹ ಕಬ್ಬಾಳಮ್ಮ ಉಳಿದುಕೊಳ್ಳಲು ಜಾಗವಿಲ್ಲದೆ ಕಬ್ಬಾಳು ದುರ್ಗಕ್ಕೆ ಹೋಗುತ್ತಾಳೆ. ಅಲ್ಲಿ ದುರ್ಗವನ್ನು ಆಳುತ್ತಿದ್ದ ಭೀಮೇಶ್ವರ ನಿನಗೆ ನೆಲೆಗೊಳ್ಳಲು ಸ್ಥಳಬೇಕಾದರೆ ನನ್ನ

ಜೊತೆ ಪಗಡೆ ಆಟದಲ್ಲಿ ಗೆಲ್ಲು ನಿನಗೆ ಬೆಟ್ಟವನ್ನು ಬಿಟ್ಟುಕೊಡುತ್ತೇನೆ ಎನ್ನುತ್ತಾನೆ. ಕಬ್ಬಾಳಮ್ಮ ಪಗಡೆ ಆಟದಲ್ಲಿ ಭೀಮೇಶ್ವರನನ್ನು ಸೋಲಿಸುತ್ತಾಳೆ. ಆಗ ಭೀಮೇಶ್ವರ ನೀನು ಬೆಟ್ಟದ ಮೇಲೆ ನೆಲೆನಿಂತರೆ ಭಕ್ತರು ನಿನ್ನ ದರ್ಶನ ಪಡೆಯಲು ಬೆಟ್ಟ ಹತ್ತಿಬರಲು ಕಷ್ಟವಾಗುತ್ತದೆ. ಆದ್ದರಿಂದ ನೀನು ಬೆಟ್ಟದ ಕೆಳಗಿರುವ ಕಬ್ಬಾಳು ಊರಿನಲ್ಲಿ ನೆಲೆಗೊಳ್ಳು ಎಂದು ಹೇಳುತ್ತಾನೆ. ಅಂದಿನಿಂದ ಕಬ್ಬಾಳಮ್ಮ ಕಬ್ಬಾಳಿನಲ್ಲಿ ನೆಲೆಗೊಳ್ಳುತ್ತಾಳೆ.

ಮತ್ತೊಂದು ಐತಿಹ್ಯದ ಪ್ರಕಾರ ಕಬ್ಬಾಳಮ್ಮನ ಜಾತಿ ಮತ್ತು ವಲಸೆಯ ಬಗ್ಗೆ ಹೀಗೆ ಹೇಳುತ್ತಾರೆ. ಅತ್ತಿಹಳ್ಳಿಯಲ್ಲಿ ಬ್ರಾಹ್ಮಣರ ಮನೆಯಲ್ಲಿ ಜೀತಕ್ಕೆ ಇದ್ದ ಮಾದಿಗರ ಹುಡುಗ ಆ ಮನೆಯ ಮಕ್ಕಳ ಪಾಠ ಪ್ರವಚನವನ್ನು ಆಲಿಸಿ ಕಲಿತುಕೊಂಡು ದೇಶಾಂತರ ಹೊರಟವನು ತಮಿಳುನಾಡಿನ ಒಬ್ಬ ಬ್ರಾಹ್ಮಣನ ಮನೆಗೆ ಹೋಗಿ ನಾನೂ ಸಹ ಬ್ರಾಹ್ಮಣ ಎಂದು ಸುಳ್ಳು ಹೇಳಿ ಮನೆಗೆ ಸೇರಿಕೊಂಡು ಆ ಬ್ರಾಹ್ಮಣನ ಮಗಳನ್ನೇ ಮದುವೆಯಾಗಿ ನೆಲೆಯಾಗಿದ್ದನು. ವಯಸ್ಸಾದ ತನ್ನ ತಾಯಿ ವಿಧಿಯಿಲ್ಲದೆ ಹುಡುಕಿಕೊಂಡು ಬಂದಾಗ ಬ್ರಾಹ್ಮಣ ಜನರಂತೆಯೇ ಮುಂಡೆ ಬಾಳಿನ ವೇಷಭೂಷಣಗಳನ್ನು ಹಾಕಿಸಿ ಕರೆದುಕೊಂಡು ಹೋದರು. ಊಟ ಮಾಡುವಾಗ 'ಏನ್ ತಿಂದ್ರೇನ್ ಕುನ್ನ ಎಮ್ಮೆ ನಾಲಗೆ ತಿಂದಂಗಾದದೆ"? ಎಂದು ಮುದುಕಿ ಹೇಳಿದಾಗ ಜಾತಿ ಯಾವುದೆಂದು ಬ್ರಾಹ್ಮಣರ ಮಗಳಿಗೆ ಗೊತ್ತಾಗಿ, ಜಾತಿ ಕೆಡಿಸಿಬಿಟ್ಟ ಎಂದು ತನ್ನಷ್ಟಕ್ಕೆ ತಾನೆ ಮೈಗೆಲ್ಲ ಬೆಂಕಿ ಹಚ್ಚಿಕೊಂಡು ಬದುಕುಳಿದು ಕಬ್ಬಾಳಿಗೆ ಬಂದು ಮೊದಲೇ ನೆಲೆಯಾಗಿದ್ದ ಮಾರಮ್ಮಂದಿರನ್ನು ನನಗಿಷ್ಟು ಜಾಗ ಕೊಡಿ ಎಂದು ಕೇಳಿ ದೇವಸ್ಥಾನದಲ್ಲಿ ನೆಲೆಯಾದಳು.

ಕಬ್ಬಾಳಮ್ಮ ಕಳ್ಳನೊಬ್ಬನನ್ನು ಕಾಪಾಡಿದ ಐತಿಹ್ಯ ಒಂದಿದೆ. ಟಿಪ್ಪು ಸುಲ್ತಾನ್ ದುರ್ಗದ ನೆತ್ತಿಯ ಮೇಲೆ ಇರುವ ಸೆರೆಮನೆಯಲ್ಲಿ ಸೆರೆಹಿಡಿದ ಕಳ್ಳನೊಬ್ಬನನ್ನು ಬೆಟ್ಟದ ಮೇಲೆ ಸೆರೆಹಿಡಿದಿಟ್ಟಿದ್ದನಂತೆ. ಆ ಕಳ್ಳ ನನ್ನನ್ನು ನೇಣುಗಂಬಕ್ಕೆ ಏರಿಸುವ ಮೊದಲೇ ನನ್ನನ್ನು ಕಾಪಾಡು ತಾಯಿ ಕಬ್ಬಾಳಮ್ಮ ನನ್ನನ್ನು ಕಾಪಾಡಿದರೆ ನಿನಗೆ ಚಿನ್ನದ ಕಿರೀಟ ಮಾಡಿಸಿಕೊಡುವೆ ಎಂದು ಹರಕೆ ಹೊತ್ತನು. ಆಗ ಕಬ್ಬಾಳಮ್ಮ ಮಾಯಾರೂಪತಾಳಿ ಗಾರುಡಿಗನ ವೇಷತಾಳಿ ಕೋಟೆಯ ಕಾವಲುಗಾರರಿಗೆ ಎಚ್ಚರವಿಲ್ಲದ ಮಾಯಾ ನಿದ್ರೆಕೊಟ್ಟು ಆ ಕಳ್ಳನನ್ನು ರಕ್ಷಿಸಿದಳು ಎಂದು ಕಥೆ ಇದ್ದರೆ, ಕಳ್ಳನನ್ನು ಬೆಟ್ಟದ ಮೇಲಿನಿಂದ ತಳ್ಳಿದಾಗ ಕಬ್ಬಾಳಮ್ಮ ಸೆರಗೊಡ್ಡಿ ಆತುಕೊಂಡಳು ಎಂಬ ಇನ್ನೊಂದು ಪಾಠಾಂತರವಿದೆ. ಬದುಕಿದ ಕಳ್ಳನು ಚಿನ್ನದ ಕಿರೀಟ ಮತ್ತು ಕೊಂಬಿನ ಟಗರೊಂದನ್ನು ಕಬ್ಬಾಳಮ್ಮನ ಬೆಟ್ಟದ ಬುಡದಲ್ಲಿ ಕಟ್ಟಿಹಾಕಿ ತಗೋ ಎಂದು ಹೇಳಿ ಹೊರಟು ಹೋಗುತ್ತಾನೆ. ಕಬ್ಬಾಳಮ್ಮ ಪೂಜಾರಿಯ ಕನಸಿನಲ್ಲಿ ಬಂದು ಕಿರೀಟವನ್ನು ಕೊಂಬಿನ ಟಗರನ್ನು ಒಪ್ಪಿಸುವಂತೆ ಹೇಳುತ್ತಾಳೆ. ಪೂಜಾರಿಯು ಮಧ್ಯರಾತ್ರಿಯಲ್ಲೇ ಎಲ್ಲರನ್ನು ಕರೆತಂದು ಕಿರೀಟವನ್ನು ತೆಗೆದು ತಂದು ಕಬ್ಬಾಳಮ್ಮನಿಗೆ ಧರಿಸುತ್ತಾನೆ. ಈಗಲೂ ಅದೇ ಕಿರೀಟ ಧರಿಸುತ್ತಾರೆ ಎಂದು ಹೇಳುತ್ತಾರೆ.

ಕಬ್ಬಾಳಮ್ಮನ ತಂಗಿ ಬಿಸಿಲಮ್ಮ ಹುಣಸನಹಳ್ಳಿಯಲ್ಲಿ ನೆಲೆಗೊಂಡು ಮಕ್ಕಳ ಜೊತೆಯಲ್ಲಿ ಸುಖ-ಸಂತೋಷದಿಂದ ಇರುತ್ತಾಳೆ. ಕಬ್ಬಾಳಮ್ಮನಿಗೆ ಮಕ್ಕಳಿಲ್ಲದ ಕಾರಣ ಬಿಸಿಲಮ್ಮನ ಮಕ್ಕಳನ್ನೇ ಅಕ್ಕರೆಯಿಂದ ನೋಡಿಕೊಳ್ಳುತ್ತಿರುತ್ತಾಳೆ. ಹೀಗೆ ಒಂದು ದಿನ ಕಬ್ಬಾಳಮ್ಮ ಮಕ್ಕಳನ್ನು ನೋಡಬೇಕೆಂಬ ಆಸೆಯಿಂದ ಸಿಹಿ

ತಿಂಡಿ ತೆಗೆದುಕೊಂಡು ತಂಗಿಯ ಮನೆಗೆ ಹೋಗಲು, ಮನೆಗೆ ಬರುತ್ತಿರುವುದನ್ನು ಕಂಡಂತಹ ಬಿಸಿಲಮ್ಮ "ಉರುಕಾತಿ ಬತ್ತಾವ್ಳೆ, ಮಕ್ಕಳಿಲ್ಲದ ಬಂಜೆ ನನ್ನ ಮಕ್ಕಳು ನೋಡಿ ಕರುಬುತ್ತಾಳೆ". ಅವಳ ದೃಷ್ಟಿಗೆ ಮಕ್ಕಳು ಬೀಳುವುದು ಬೇಡವೆಂದು ಪಂಜರದಲ್ಲಿ ಕವುಚಿಬಿಡುತ್ತಾಳೆ. ಒಂದು ಮಗು ಮಾತ್ರ ಹೊರಗಡೆ ಆಟವಾಡಲು ಹೋಗಿರುತ್ತದೆ. ಮಕ್ಕಳೆಲ್ಲಿ? ಎಂದು ಕೇಳಿದಾಗ ಎಲ್ಲರೂ ಆಟವಾಡಲು ಹೊರಗೆ ಹೋಗಿದ್ದಾರೆ ಎಂದು ಸುಳ್ಳು ಹೇಳುತ್ತಾಳೆ. ಕಬ್ಬಾಳಮ್ಮ ತನ್ನ ಮಾಯಾಶಕ್ತಿಯಿಂದ ಕಣ್ಣು ತೆರೆದು ನೋಡಲು ಪಂಜರದಲ್ಲಿ ಕವುಚಿರುತ್ತಾಳೆ. ಆಗ ಕಬ್ಬಾಳಮ್ಮ ನನ್ನನ್ನು ಮಕ್ಕಳಿಲ್ಲದ ಬಂಜೆ ನಿನ್ನ ಮಕ್ಕಳನೋಡಿ ಕರುಬುತ್ತಾಳೆ ಅಂತತಾನೆ ನೀನು ಸುಳ್ಳು ಹೇಳಿರುವುದು? ನೀನು ಪಂಜರದೆಲಿ ಕವುಚಾಕಿರುವ ನಿನ್ನ ಮಕ್ಕಳೆಲ್ಲ ಕಲ್ಲಾಗಲಿ ಎಂದು ಶಾಪಕೊಡುತ್ತಾಳೆ. ಆಡೋಕೋಗಿರುವ ಮಗ ಬಂದು ನನ್ನ ಜಾತ್ರೇಲಿ ಸಿಡಿಯಾಡಲಿ 'ಸಿಡಿರಣ್ಣ' ಎಂದು ಹೆಸರಾಗಲಿ. ಇನ್ನು ನಿನ್ನ ಮನೆಗೆ ಕಾಲಿಡುವುದಿಲ್ಲ. ಇಷ್ಟ ಇದ್ರೆ ನೀನೇ ಬಾ ಎಂದು ಕೋಪದಿಂದ ಬೈದು ಬಂದುಬಿಡುತ್ತಾಳೆ. ಈ ಕತೆ ಮಾರಮ್ಮನ ಪುರಾಣದ ಕತೆಗಿಂತಲೂ ಭಿನ್ನ ಪಾಠವನ್ನು ಹೊಂದಿದೆ. ಮಾರಮ್ಮನ ಪುರಾಣದಲ್ಲಿ ಸಿಡಿರಣ್ಣ ಮಾರಮ್ಮನ ಮಗನಾಗಿ ಕಂಡುಬಂದರೆ, ಕಬ್ಬಾಳಮ್ಮ ಮಕ್ಕಳಿಲ್ಲದ ಬಂಜೆಯಾಗಿ, ಸಿಡಿರಣ್ಣ ಬಿಸಿಲಮ್ಮನ ಮಗನಾಗಿ ಬರುತ್ತಾನೆ. ಬಿಸಿಲಮ್ಮನ ಮಕ್ಕಳು ಪಂಜರದಲ್ಲಿಯೇ ಕುಳಿತು ಕಲ್ಲಾಗಿರುವ ದೃಶ್ಯ ಹುಣಸನಹಳ್ಳಿ ಬಿಸಿಲಮ್ಮನ ದೇವಸ್ಥಾನದೊಳಗೆ ಇಂದಿಗೂ ಕಂಡುಬರುತ್ತದೆ.

ಕಬ್ಬಾಳಮ್ಮ ಮೊದಲು ಬೆಟ್ಟದ ಮೇಲೆ ನೆಲೆನಿಂತು ಎಲ್ಲರೂ ಬೆಟ್ಟ ಹತ್ತಿ ಪೂಜೆ ಮಾಡಲು ಸಾಧ್ಯವಿಲ್ಲ ಎಂದು ಕೆಳಗೆ ಬಂದು ನೆಲೆಗೊಂಡಳು ಎಂಬ ಐತಿಹ್ಯದಲ್ಲಿ ಕಬ್ಬಾಳಮ್ಮ ಬೆಟ್ಟವನ್ನು ಇಳಿಯಲು ಮೂರೇ ಮೂರು ದಾಪುಗಳಿಗೆ ಇಳಿದಳಂತೆ ಆದ್ದರಿಂದ ಅವಳ ಹೆಜ್ಜೆ ಇಟ್ಟ ಸ್ಥಳದಲ್ಲಿ ದೇವಸ್ಥಾನಗಳಿವೆ. ಮೊದಲ ಹೆಜ್ಜೆ ಬೆಟ್ಟದ ಮೇಲೆ ಎರಡನೇ ಹೆಜ್ಜೆ ತಾಳು ಬೆಟ್ಟದಲ್ಲಿ ತಾಳೆಕಟ್ಟೆ ಎಂಬ ಕೆರೆಯಲ್ಲಿದೆ. ಇಲ್ಲಿ ಒಂದು ಸಣ್ಣ ಹಳೇಕಾಲದ ಕಲ್ಲಿನ ಹಾಸುಬಂಡೆಗಳಿಂದ ಚೋಳರ ಕಾಲದಲ್ಲಿ ಮಾಡಿರುವಂತ ಗುಡಿ ಇದೆ. ನಂತರ ಮೂರನೆ ಹೆಜ್ಜೆ ಕಬ್ಬಾಳಮ್ಮನ ದೇವಸ್ಥಾನವಿರುವಲ್ಲಿ ಇಟ್ಟಳೆಂಬ ಐತಿಹ್ಯವಿದೆ. ಅಲ್ಲಿ ಕಬ್ಬಾಳಮ್ಮ ನೆಲೆಗೊಂಡ ಮೂಲ ದೇವಸ್ಥಾನವಿದೆ. ಬೆಟ್ಟದ ಮೇಲಿರುವ ಸುರಂಗಮಾರ್ಗ ಕಬ್ಬಾಳು ದುರ್ಗದಿಂದ ಶ್ರೀರಂಗ ಪಟ್ಟಣದವರೆಗೂ ಮತ್ತು ಅಲ್ಲಿಂದ ಮೈಸೂರಿನವರೆಗೂ ಸಂಪರ್ಕವಿದೆ, ಟಿಪ್ಪುಸುಲ್ತಾನ್ ಅದನ್ನು ಮಾಡಿಕೊಂಡಿದ್ದನಂತೆ ಎಂದು ಹಲವರು ಹೇಳುತ್ತಾರೆ. ಇದು ಸತ್ಯಕ್ಕೆ ದೂರವಾದುದೇ ಎಂದು ಹೇಳಬಹುದು. ಬೆಟ್ಟದ ಮೇಲೆ ಸುರಂಗ ಇದೆ. ಅದು ಯಾತಕ್ಕಾಗಿ ಮಾಡಿದ್ದರು ಮತ್ತು ಅದು ಎಲ್ಲಿಂದ ಎಲ್ಲಿಯವರೆಗೆ ಇದೆ ಎಂದು ಹೇಳುವುದು ಕಷ್ಟವಾಗುತ್ತದೆ.

ಕಬ್ಬಾಳಮ್ಮನ ಗಂಡ ರಂಗಸ್ವಾಮಿ ಎಂದು ಹೇಳುವ ಕಲ್ಲು ದೇವಸ್ಥಾನದ ಪಕ್ಕದಲ್ಲೇ ಇದೆ. ಕಬ್ಬಾಳಮ್ಮ ತನ್ನ ಗಂಡ ರಂಗಸ್ವಾಮಿಯ ಜೊತೆಯಲ್ಲಿ ಒಂದು ಪಂದ್ಯವನ್ನು ಕಟ್ಟುತ್ತಾಳೆ. ಮೂರು ಕಾಸುಕೊಟ್ಟು ಸಂತೆಗೆ ಹೋಗಿ ಮನೆಗೆ ಬೇಕಾದಂತ ಸಾಮಾನುಗಳೆಲ್ಲ ತೆಗೆದುಕೊಂಡು ಕೊಟ್ಟಿರುವ ಕಾಸು ಓಂದಕ್ಕೆ ತಂದುಕೊಡಬೇಕು. ಇಲ್ಲದಿದ್ದರೆ ನೀನು ಪಂದ್ಯದಲ್ಲಿ ಸೋತ ಹಾಗೆ ಎಂದು ಹೇಳುತ್ತಾಳೆ. ರಂಗಸ್ವಾಮಿ ಸಂತೆಗೆ ಹೋಗಿ ಸಾಮಾನು ತರದೆ ಹಾಗೇ ಓಂದಕ್ಕೆ ಬಂದು ಸೋಲನ್ನು ಒಪ್ಪಿಕೊಳ್ಳುತ್ತಾನೆ. ಕಬ್ಬಾಳಮ್ಮ ಮೂರುಕಾಸು ತಕೊಂಡು ಸಂತೆಗೆ ಹೋಗಿ ಮಾಯದ ಸುಂಟರಗಾಳಿ ಎಬ್ಬಿಸಿ ಕಣ್ಣಿಗೆ ಧೂಳುತುಂಬಿ ಮನೆಗೆ

ಬೇಕಾದ ಸಾಮಾನುಗಳನ್ನೆಲ್ಲಾ ತಂದು ತೋರಿಸುತ್ತಾಳೆ. ಅಂದಿನಿಂದ ಪಂದ್ಯದಲ್ಲಿ ಸೋತದ್ದರಿಂದ ಗಂಡನಾದ ರಂಗಸ್ವಾಮಿಯ ತಲೆಮೇಲೆ ಮೂರು ಹಿಡಿ ಕೆಂಡ ಹುಯ್ಯುವುದು ಇಂದಿಗೂ ನಡೆದುಕೊಂಡು ಬಂದಿದೆ.

೨.೫. ಸಾರಿಗೆ ವ್ಯವಸ್ಥೆ

ಪ್ರಾರಂಭದಲ್ಲಿ ಕಬ್ಬಾಳಿಗೆ ಖಾಸಗಿ ಬಸ್ಸುಗಳೇ ಸೌಲಭ್ಯವನ್ನು ಒದಗಿಸುತ್ತಿದ್ದವು. ತದನಂತರ ಕರ್ನಾಟಕ ರಾಜ್ಯರಸ್ತೆ ಸಾರಿಗೆ ಬಸ್ಸುಗಳ ವ್ಯವಸ್ಥೆಯೂ ಹೆಚ್ಚಾಗಿದೆ. ಕನಕಪುರ ತಾಲ್ಲೂಕಿನಿಂದ ೨೦ ಕಿ.ಮೀ.ಗಳ ದೂರದಲ್ಲಿರುವ ಕಬ್ಬಾಳು ತನ್ನ ನಾಲ್ಕು ದಿಕ್ಕಿಗೂ ರಸ್ತೆ ಸಂಪರ್ಕವನ್ನು ಹೊಂದಿದೆ. ಪೂರ್ವದಿಕ್ಕಿಗೆ ಕನಕಪುರ, ಉತ್ತರ ದಿಕ್ಕಿಗೆ ಚನ್ನಪಟ್ಟಣ ಹಾಗೂ ದಕ್ಷಿಣಕ್ಕೆ ಸಾತನೂರು ಮತ್ತು ಪಶ್ಚಿಮಕ್ಕೆ ಹಲಗೂರು ಮತ್ತು ಚನ್ನಪಟ್ಟಣ ಸೇರಿಸುವ ರಸ್ತೆಯನ್ನು ಹೊಂದಿದ್ದು ಪಶ್ಚಿಮದ ರಸ್ತೆಯನ್ನು ಹೊರತುಪಡಿಸಿ ಉಳಿದ ಮೂರು ದಿಕ್ಕಿನಿಂದಲೂ ಸಾರಿಗೆ ವ್ಯವಸ್ಥೆಯಿದೆ. ೧೯೮೦-೮೫ಕ್ಕೂ ಮೊದಲು ಕೇವಲ ಖಾಸಗಿ ಸಾರಿಗೆ ವ್ಯವಸ್ಥೆಯನ್ನು ಹೊಂದಿದ್ದ ಕಬ್ಬಾಳು, ಅಂದು ಕರ್ನಾಟಕ ರಾಜ್ಯದಲ್ಲೇ ಆದಾಯ ಮತ್ತು ಸೌಲಭ್ಯ ಒದಗಿಸುವುದರಲ್ಲಿ ಮೊದಲ ಸ್ಥಾನವನ್ನು ಪಡೆದಿದ್ದ ಕರ್ನಾಟಕ ರಾಜ್ಯರಸ್ತೆ ಸಾರಿಗೆ ಕನಕಪುರ ಘಟಕ ರಾಜ್ಯ ಸಾರಿಗೆ ಬಸ್ಸುಗಳ ವ್ಯವಸ್ಥೆಯನ್ನು ಒದಗಿಸುತ್ತಿದೆ. ಒಂದು ಕನಕಪುರದಿಂದ ವೆಂಕಟರಾಯನ ದೊಡ್ಡಿ ಮಾರ್ಗವಾಗಿ ಕಬ್ಬಾಳಿಗೆ ಪ್ರತಿದಿನ ಐದು ಬಾರಿ ವಾಹನದ ವ್ಯವಸ್ಥೆ ಇದೆ. ಮತ್ತೆ ಕನಕಪುರದಿಂದ ಗೇರಹಳ್ಳಿ ಮಾರ್ಗವಾಗಿ ಪ್ರತಿ ದಿನಕ್ಕೆ ಐದು ಬಾರಿ, ಹಾಗೂ ಕನಕಪುರದಿಂದ ಸಾತನೂರು ಮಾರ್ಗವಾಗಿ ಪ್ರತಿದಿನ ಎರಡು ಬಾರಿ ಕನಕಪುರದಿಂದ ಸಾರಿಗೆ ವ್ಯವಸ್ಥೆ ಇದೆ.

ಹಾಗೆಯೇ ರಾಜ್ಯದ ರಾಜಧಾನಿ ಬೆಂಗಳೂರು ಮಹಾನಗರದಿಂದಲೂ ರಾಜ್ಯ ಸಾರಿಗೆಯ ಒಂದು ಬಸ್ಸು ಪ್ರತಿದಿನ ಎರಡುಬಾರಿ ತನ್ನ ಸೇವೆಯನ್ನು ಒದಗಿಸುತ್ತದೆ. ಚನ್ನಪಟ್ಟಣ ಘಟಕದಿಂದ ಕಬ್ಬಾಳು ಮಾರ್ಗವಾಗಿ ಸಾತನೂರಿಗೆ ಒಂದು ಬಸ್ಸಿನ ವ್ಯವಸ್ಥೆಯಿದೆ. ಮತ್ತು ರಾಮನಗರ ಘಟಕದಿಂದ ಕಬ್ಬಾಳು ಅಲ್ಲಿಂದ ಸಾತನೂರು ಮಾರ್ಗವಾಗಿ ಮುತ್ತತ್ತಿಗೆ ಒಂದು ಬಸ್ಸಿನ ವ್ಯವಸ್ಥೆ ಇದೆ. ಇದಿಷ್ಟು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಒದಗಿಸಿರುವ ಸಾರಿಗೆ ಸೌಲಭ್ಯ.

ಆದರೆ ಖಾಸಗಿ ಬಸ್ಸುಗಳ ಸಂಖ್ಯೆ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳ ಸಂಖ್ಯೆಗಿಂತಲೂ ಅಧಿಕವಾಗಿವೆ. ಇವು ಚೆನ್ನಪಟ್ಟಣದಿಂದ ಕಬ್ಬಾಳು ಮಾರ್ಗವಾಗಿ ಸಾತನೂರಿಗೆ ಸಂಪರ್ಕ ಕಲ್ಪಿಸುತ್ತವೆ. ಬೆಂಗಳೂರಿನಿಂದ ಚನ್ನಪಟ್ಟಣ ಮಾರ್ಗವಾಗಿ ಕಬ್ಬಾಳಿಗೆ ಅಲ್ಲಿಂದ ಸಾತನೂರಿಗೆ ಎರಡು ಬಸ್ಸುಗಳು ಪ್ರತಿದಿನ ನಾಲ್ಕು ಬಾರಿಯಂತೆ ಓಡಾಡುತ್ತವೆ. ಮತ್ತೆ ಉಳಿದೆಲ್ಲ ಬಸ್ಸುಗಳು ಚನ್ನಪಟ್ಟಣದಿಂದ ಕಬ್ಬಾಳು ಮಾರ್ಗವಾಗಿ ಸಾತನೂರಿಗೆ ಸಂಪರ್ಕ ಕಲ್ಪಿಸುತ್ತವೆ. ಪ್ರತಿದಿನ ಒಟ್ಟು ೧೫ ಖಾಸಗಿ ವಾಹನಗಳು ಪ್ರತಿದಿನ ತಮ್ಮ ಸೇವೆಯನ್ನು ಒದಗಿಸಿದರೆ ಸರ್ಕಾರಿ ಬಸ್ಸುಗಳು ಒಟ್ಟು ೬ ಬಸ್ಸುಗಳು ತಮ್ಮ ಸೇವೆ ಒದಗಿಸುತ್ತವೆ.

ಇಷ್ಟೇ ಅಲ್ಲದೆ ಆಟೋ ರಿಕ್ಷಾಗಳು ಕೂಡ ತಮ್ಮ ಸೇವೆ ಒದಗಿಸುತ್ತವೆ. ಒಟ್ಟು ೨೦ ಆಟೋರಿಕ್ಷಾಗಳು ಸಾತನೂರಿಂದ ಕಬ್ಬಾಳಿಗೆ ಸಂಪರ್ಕ ಸೇವೆ ಒದಗಿಸುತ್ತವೆ. ರಾಷ್ಟ್ರೀಯ ಹೆದ್ದಾರಿ ೨೦೯ ಸಂಖ್ಯೆಯ ಹೆದ್ದಾರಿ ಬೆಂಗಳೂರಿನಿಂದ ಕನಕಪುರ ಮಾರ್ಗವಾಗಿ ಸಾತನೂರು, ಮಳವಳ್ಳಿ, ಕೊಳ್ಳೇಗಾಲದಿಂದ ಚಾಮರಾಜನಗರದಿಂದ

ದಿಂಡಿನಗಲ್‌ನ್ನು ಸಂಪರ್ಕಿಸುತ್ತದೆ. ಇದು ಕಬ್ಬಾಳಿಗೆ ಸಾತನೂರಿನಿಂದ ೬.ಕಿ.ಮೀ.ಗಳಷ್ಟು ದೂರದಲ್ಲಿದೆ. ಕಬ್ಬಾಳಿನಿಂದ ಇತರೆ ಎಲ್ಲ ನಗರ ಪ್ರದೇಶಗಳಿಗೆ ಸಂಪರ್ಕ ಹೊಂದುವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿ ಪಕ್ಕದಲ್ಲೇ ಇರುವುದರಿಂದ ಕೆಲವೇ ಗಂಟೆಗಳಲ್ಲಿ ಮಹಾನಗರಗಳನ್ನು ತಲುಪಬಹುದು. ಇಷ್ಟೆಲ್ಲಾ ವ್ಯವಸ್ಥೆ ಇದ್ದರೂ ಕೂಡ ಕಬ್ಬಾಳಮ್ಮನ ವಿಶೇಷ ಪೂಜಾದಿನಗಳಲ್ಲಿ ಬಾನುವಾರ ಮತ್ತು ಮಂಗಳವಾರ ಬಸ್ಸುಗಳ ಅಭಾವ ತಲೆದೋರುತ್ತದೆ. ಅಷ್ಟು ಸಂಖ್ಯೆಯಲ್ಲಿ ಕಬ್ಬಾಳಮ್ಮನ ಭಕ್ತರು ಪ್ರತಿ ಭಾನುವಾರ ಸೇರುತ್ತಾರೆ. ಮತ್ತು ಶಾಲಾ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ಉತ್ತಮ ಸಾರಿಗೆ ವ್ಯವಸ್ಥೆ ಇರುವುದು ತುಂಬಾ ಒಳ್ಳೆಯದಾಗಿದೆ.

ಅಧ್ಯಾಯ ೩

ಕಬ್ಬಾಳು ಗ್ರಾಮದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಮತ್ತು ಧಾರ್ಮಿಕ ಸ್ಥಿತಿಗತಿಗಳು

೩.೧. ಸಾಮಾಜಿಕ ಸ್ಥಿತಿಗತಿ

- ಅ. ವಸತಿ ವ್ಯವಸ್ಥೆ
- ಆ. ಕುಟುಂಬ ವ್ಯವಸ್ಥೆ
- ಇ. ವಿವಾಹ ಪದ್ಧತಿ
- ಈ. ಆಹಾರ ಪದ್ಧತಿ

೩.೨. ಆರ್ಥಿಕ ಸ್ಥಿತಿಗತಿ

೩.೩. ರಾಜಕೀಯ ಸ್ಥಿತಿಗತಿ

೩.೪. ಶೈಕ್ಷಣಿಕ ಸ್ಥಿತಿಗತಿ

೩.೫. ಧಾರ್ಮಿಕ ಸ್ಥಿತಿಗತಿ

ಅಧ್ಯಾಯ ೩

ಕಬ್ಬಾಳು ಗ್ರಾಮದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಮತ್ತು ಧಾರ್ಮಿಕ ಸ್ಥಿತಿಗತಿಗಳು

೧

೩.೧. ಸಾಮಾಜಿಕ ಸ್ಥಿತಿಗತಿ

ಗ್ರಾಮ ಸಮುದಾಯಗಳ ಮಹತ್ವ ತಿಳಿಯಬೇಕಾದರೆ ಮಾನವ ಸಮಾಜದ ಇತಿಹಾಸವನ್ನು ನೋಡಿದಾಗ ಅದರ ಅರಿವು ಮನದಟ್ಟಾಗುತ್ತದೆ. ಗ್ರಾಮ ಮಾನವರ ಅತ್ಯಂತ ಮುಖ್ಯ ವಾಸಸ್ಥಾನ. ಗ್ರಾಮವೆಂದರೆ ನಾವು ಬೆಳೆದ ತೊಟ್ಟಿಲು, ಗ್ರಾಮ ಎಂದಿನಿಂದಲೂ ನಮಗೆ ಆಹಾರ ಮತ್ತು ಕಚ್ಚಾ ವಸ್ತುಗಳನ್ನು ಕೊಟ್ಟು ಪೋಷಿಸುತ್ತ ಬಂದಿದೆ. ಗ್ರಾಮಗಳು ಎಂದಿನಿಂದಲೂ ನಗರಗಳಿಗೆ ಆಹಾರವನ್ನು ಮಾತ್ರವಲ್ಲ ಜನಸಂಖ್ಯೆಯನ್ನು ಕೊಡುತ್ತ ಬಂದು ನಗರಗಳು ಬೆಳೆಯುವಂತೆ ಮಾಡಿವೆ. ವಿಶ್ವದ ನೈಸರ್ಗಿಕ ಸಂಪತ್ತನ್ನು ಕಾಪಾಡುವುದು ಗ್ರಾಮಸಮುದಾಯದ ವಿಶಿಷ್ಟ ಹೊಣೆಯಾಗಿದೆ. ಯುದ್ಧ, ಬರಗಾಲ, ಕ್ರಾಂತಿ ಮುಂತಾದ ಸಾಮಾಜಿಕ ಸಂಕ್ರಾಂತಿ ಕಾಲಘಟ್ಟಗಳಲ್ಲಿ ಗ್ರಾಮ ಸಮಾಜವು ಎಲ್ಲರಿಗೂ ರಕ್ಷಣೆ ನೀಡಿದೆ. ಬೆಳೆಯುತ್ತಿರುವ ನಗರೀಕರಣದ ಪ್ರಭಾವದ ದಿನಗಳಲ್ಲೂ ನಗರ ವಾಸಿಗಳು ಗ್ರಾಮದ ಬಲವಿಲ್ಲದೆ ಬದುಕಲಾರರು ಎಂಬ ಸ್ಥಿತಿಯುಂಟಾಗಿದೆ. ಗ್ರಾಮವ್ಯವಸ್ಥೆಯು ನಮ್ಮ ಸಂಸ್ಕೃತಿಯ ತಿರುಳನ್ನು ರಕ್ಷಿಸಿದೆ ಹಾಗೂ ಪೋಷಿಸುತ್ತಿದೆ.

ಹೀಗೆ ಗ್ರಾಮವು ದೇಶವನ್ನು ಸದೃಢಗೊಳಿಸುವಲ್ಲಿ, ಸಂಪದ್ಭರಿತಗೊಳಿಸುವಲ್ಲಿ, ದೇಶದ ಸರ್ವತೋಮುಖ ಬೆಳವಣಿಗೆಯಲ್ಲಿ ಬಹುಮುಖ್ಯ ಪಾಲನ್ನು ಹೊಂದಿರುವುದರಿಂದ ಇಂದಿನ ದಿನಮಾನಗಳಲ್ಲೂ ಗ್ರಾಮಾಧ್ಯಯನ ಅವಶ್ಯ ಎನ್ನುವುದು ಅನಿವಾರ್ಯವಾಗಿದೆ. "ದೀರ್ಘ ಇತಿಹಾಸವುಳ್ಳ ಭಾರತದ ಸಂಸ್ಕೃತಿ ಅಥವಾ ಚೀನಾದ ಸಂಸ್ಕೃತಿ ಗ್ರಾಮದ ಬೆಂಬಲವಿಲ್ಲದೆ ಉಳಿಯುತ್ತಿರಲಿಲ್ಲ" ಎಂಬ ಮಾತು ಇದನ್ನು ಇಮ್ಮಡಿಗೊಳಿಸುತ್ತದೆ.

ಕಬ್ಬಾಳು ಗ್ರಾಮವು ಮೂಲತಃ ಎಲ್ಲ ಊರುಗಳಂತಲ್ಲ. ಭೌಗೋಳಿಕವಾಗಿ ಇದಕ್ಕೆ ಕಬ್ಬಾಳು ಬೆಟ್ಟದ ಹಿನ್ನಲೆಯಿದೆ. ಕೆರೆ, ತೋಟ, ಹೊಲ, ಗದ್ದೆಗಳ ಪ್ರದೇಶವನ್ನು ಮತ್ತು ಅರಣ್ಯವನ್ನು ತನ್ನ ಸುತ್ತಮುತ್ತಲಿನಲ್ಲಿರಿಸಿಕೊಂಡಂತಿದೆ. ಚಾರಿತ್ರಿಕವಾಗಿ ಕರ್ನಾಟಕ ರಾಜ್ಯವನ್ನಾಳಿದ ಹಲವಾರು ರಾಜಮನೆತನಗಳ ಪ್ರಭಾವ ಕೂಡ ಇದರ ಮೇಲಿದೆ. ಹೈದರಾಲಿ, ಟಿಪ್ಪುಸುಲ್ತಾನ್ ಇವರು ಕಬ್ಬಾಳು ದುರ್ಗವನ್ನು ಸೆರೆಹಿಡಿದ ವೈರಿ ರಾಜರು ಮತ್ತು ಸೈನಿಕರನ್ನು ಶಿಕ್ಷೆಗೊಳಪಡಿಸಲು ಉಪಯೋಗಿಸುತ್ತಿದ್ದರು. ಸಾಂಸ್ಕೃತಿಕವಾಗಿ ಹಲವು

ಸಮುದಾಯಗಳು ಒಟ್ಟಿಗೆ ಬಾಳಿ ಬದುಕುತ್ತಿರುವ ಹಿನ್ನಲೆಯಿದೆ. ಜಾತ್ರೆ, ಪರಿಷೆ, ಹಬ್ಬ-ಹರಿದಿನ, ಜಾನಪದಗಳ ಹಿನ್ನಲೆ ಇದೆ.

ಕಬ್ಬಾಳು ಗ್ರಾಮ ಸಮುದಾಯವು ಒಂದು ಗ್ರಾಮ ಎನಿಸಿಕೊಳ್ಳಲು ಇರಬೇಕಾದ ಎಲ್ಲ ಲಕ್ಷಣಗಳನ್ನು ಒಳಗೊಂಡಿದೆ. ಈ ಗ್ರಾಮವು ಶಾಶ್ವತವಾದ ನೆಲೆಯನ್ನು ಹೊಂದಿದೆ. ಅದರ ಗಾತ್ರ ಚಿಕ್ಕದಾಗಿದ್ದು, ಜನಸಾಂದ್ರತೆಯು ಸಾಧಾರಣವಾಗಿದೆ.

ಈ ಗ್ರಾಮವು ಕೇಂದ್ರೀಕೃತ ಗ್ರಾಮಗಳ ಲಕ್ಷಣವನ್ನು ಹೊಂದಿದ್ದು, ಹೊಲಗಳ ಮಧ್ಯದಲ್ಲಿ ಮನೆಗಳು ಇದ್ದು, ಮನೆಗಳು ಒಂದಕ್ಕೊಂದು ಬಹಳ ಹತ್ತಿರದಲ್ಲಿರುತ್ತವೆ. ವಾಸವಿರುವ ಮನೆಗಳ ಎಡಬಲಕ್ಕೆ ಅಥವಾ ಹಿಂದೆ ಆ ಮನೆಗಳಿಗೆ ಸಂಬಂಧಿಸಿದ ಹೊಲಗಳಿದ್ದು, ಮನೆಗಳ ಸಂಖ್ಯೆ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಾಗಿದೆ.

ಗ್ರಾಮದ ಭೌತಿಕ ಸ್ವರೂಪ

ಯಾರೇ ಒಬ್ಬ ನಗರವಾಸಿ ಅಥವಾ ಸಂದರ್ಶಕನೊಬ್ಬ ತಾನಿರುವ ನಗರವನ್ನು ಬಿಟ್ಟು ಹೊರ ಬಂದು ಗ್ರಾಮವೊಂದರ ಸಮೀಪ ಬರುತ್ತಲೇ ಬೇರೊಂದು ವಿಶ್ವವನ್ನು ಪ್ರವೇಶಿಸುತ್ತಿರುವ ಅನುಭವ ಉಂಟಾಗುವಂತೆ, ಕಬ್ಬಾಳು ಗ್ರಾಮ ಸಮೀಪಿಸುತ್ತಿದ್ದಂತೆ ಅಂತಹ ಅನುಭವ ಉಂಟಾಗುತ್ತದೆ. ಅದರಲ್ಲೂ ಬೆಂಗಳೂರು ಮೈಸೂರಿನಂತಹ ಮಹಾನಗರಗಳಿಂದ ಬಂದಂತಹ ಸಂದರ್ಶಕರಿಗೆ ಇಂತಹ ಅನುಭವ ಸಹಜವಾಗಿ ಉಂಟಾಗುತ್ತದೆ.

ಗ್ರಾಮದ ಪೂರ್ವ ದಿಕ್ಕಿಗೆ ತೆಂಗು, ಬಾಳೆ, ರೇಷ್ಮೆಯ ತೋಟಗಳು ಮತ್ತು ಗದ್ದೆಗಳಿಂದ ಕೂಡಿದ್ದು, ದೂರದಿಂದಲೇ ಕಾಣುವ ಹೊಲಗದ್ದೆಗಳ ಹರಹು, ಮರಗಿಡಗಳ ಹಸಿರು, ಪಕ್ಷಿಗಳ ಓಡಾಟ, ದನಕರುಗಳ ಚೀರಾಟ ಮುಂತಾದವು, ಪಶ್ಚಿಮ ದಿಕ್ಕಿಗೆ ಆವರಿಸಿರುವ ಅರಣ್ಯ ಪ್ರದೇಶ, ಉತ್ತರ ಮತ್ತು ದಕ್ಷಿಣಾಭಿಮುಖವಾಗಿ ಚನ್ನಪಟ್ಟಣದಿಂದ ಸಾತನೂರು ಮಾರ್ಗದ ತಾಲ್ಲೂಕು ಮಟ್ಟದ ರಸ್ತೆ ಊರಿನ ಪೂರ್ವದಿಕ್ಕಿನ ಅಂಚಿನಲ್ಲಿ ಹಾದು ಹೋಗಿದೆ. ರಸ್ತೆಯ ಇಕ್ಕೆಲಗಳಲ್ಲಿ ಬೃಹದಾಕಾರವಾಗಿ ಬೆಳೆದು ನಿಂತಿರುವ ಹೆಮ್ಮರಗಳು ಶತಶತಮಾನಗಳಷ್ಟು ಹಳೆಯ ಮರಗಳಾಗಿದ್ದು, ಇವು ಹೆಚ್ಚಾಗಿ ಆಲದ ಮರಗಳೇ ಆಗಿವೆ. ಇವು ಮೌರ್ಯರ ಸಾಮ್ರಾಟ ಅಶೋಕನ ಕಾಲದವು ಎಂದು ಹೇಳುತ್ತಾರೆ.

ಕಬ್ಬಾಳು ಗ್ರಾಮ ಸಮೀಪಿಸುತ್ತಿದ್ದಂತೆ ಕಬ್ಬಾಳಮ್ಮ ಗ್ರಾಮದೇವತೆಯ ಬೃಹದಾಕಾರ ಕಮಾನಿನಾಕಾರದ ಹೆಬ್ಬಾಗಿಲು ನಮ್ಮನ್ನು ಸ್ವಾಗತಿಸುತ್ತದೆ. ರಸ್ತೆಯ ಎರಡೂ ಬದಿಯು ವ್ಯಾಪಾರದ ಅಂಗಡಿಗಳಿಂದ ಕೂಡಿದ್ದು, ಅವುಗಳಲ್ಲಿ ಹೊರಡುವ ಧ್ವನಿಸುರುಳಿ ಕಬ್ಬಾಳಮ್ಮನ ಕಥೆ, ಕಾವ್ಯ, ಹೆಚ್ಚಾಗಿ ಭಕ್ತಿ ಗೀತೆಗಳ ನಾದ ಪ್ರತಿ ಅಂಗಡಿ ಮಳಿಗೆಯಲ್ಲೂ ಕೇಳಿಬರುತ್ತಿರುತ್ತದೆ. ಇಲ್ಲಿ ಹೆಚ್ಚಿನವು ತಾಯಿಯ ಪೂಜಾಸಾಮಾಗ್ರಿ ಹೂ, ಹಣ್ಣು, ಜವನದ ಅಂಗಡಿಗಳೇ ಆಗಿವೆ.

ಅ. ವಸತಿ ವ್ಯವಸ್ಥೆ

ಕಬ್ಬಾಳು ಗ್ರಾಮವು ಕೇಂದ್ರೀಕೃತ ಗ್ರಾಮಗಳ ಲಕ್ಷಣವನ್ನು ಹೊಂದಿದ್ದು, ಊರಿನ ಸುತ್ತಲೂ ಹೊಲ,

ಗದ್ದೆ, ತೋಟಗಳಿಂದ ಕೂಡಿದೆ. ಗ್ರಾಮದಲ್ಲಿನ ಮನೆಗಳು ಒಂದರ ಪಕ್ಕದಲ್ಲಿ ಒಂದನ್ನು ವ್ಯವಸ್ಥಿತವಾಗಿ ಕಟ್ಟಲಾಗಿದೆ. ಬೀದಿಗಳು ಪೂರ್ವ ಪಶ್ಚಿಮ ಅಭಿಮುಖವಾಗಿ ಇದ್ದು ಸೂರ್ಯನ ಉದಯ ಸಮಯದಲ್ಲಿ ಮತ್ತು ಸೂರ್ಯಾಸ್ತಮ ಸಮಯದಲ್ಲಿ ಬೀದಿಗಳು ಸೂರ್ಯನ ಕಿರಣಗಳಿಂದ ಕಂಗೊಳಿಸುತ್ತವೆ. ಇಲ್ಲಿನ ಮನೆಗಳು ಬಹುತೇಕ ಹೆಂಚಿನ ಮಾಡುಗಳಿಂದ ಮಾಡಿದ ಮನೆಗಳಾಗಿವೆ. ಇಲ್ಲಿನ ಮೂಲ ಹಳೆಯ ಮನೆಗಳು ನಾಡ ಹಂಚಿನ ಮನೆಗಳಾಗಿದ್ದು, ತುಂಬ ಹಳೆಯದಾಗಿವೆ. ಈ ಮನೆಗಳನ್ನು ಕೈ ಹಂಚಿನ ಮನೆಗಳು, ನಾಡಹಂಚಿನ ಮನೆಗಳು, ತೊಟ್ಟಿಹಟ್ಟಿ ಹೀಗೆ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಈ ನಾಡಹಂಚಿನ ಮನೆಗಳು ತುಂಬಾ ವಿಶಾಲವಾಗಿದ್ದು, ಮಧ್ಯ ತೊಟ್ಟಿ ಇರುತ್ತದೆ. ತೊಟ್ಟಿಹಟ್ಟಿಗಳ ಮಧ್ಯದಲ್ಲಿ ತೊಟ್ಟಿ ಇದ್ದು, ಗಾಳಿ, ಬೆಳಕು ಎಥೇಚ್ಛವಾಗಿ ಬರುತ್ತದೆ. ಮನೆಯ ಮೇಲ್ಛಾವಣೆಯನ್ನು ನಾಲ್ಕು ದಿಕ್ಕಿನಲ್ಲಿ ಕೂಡ, ಮೇಲಿನ ನಾಲ್ಕು ಕಡೆಯಿಂದ ಅರ್ಧದಿಂದ ಮನೆಯ ಮಧ್ಯಕ್ಕೆ ಇಳಿಜಾರಾಗಿ ತೊಟ್ಟಿಗೆ ವಾಲಿಸಿರುತ್ತದೆ. ಮತ್ತರ್ಧ ನಾಲ್ಕು ದಿಕ್ಕಿಗೆ ಹೊರಗಡೆ ಇಳಿಜಾರಾಗಿ ಬಿಟ್ಟಿರುತ್ತಾರೆ. ಮಳೆಯ ನೀರು ಅರ್ಧ ಮನೆಯ ಮಧ್ಯದಲ್ಲಿರುವ ತೊಟ್ಟಿಯಲ್ಲಿ ಇಳಿದರೆ ಮತ್ತೆ ಅರ್ಧ ಮನೆಯ ಹೊರಗೆ ನಾಲ್ಕು ದಿಕ್ಕಿಗೂ ಹಂಚುಗಳ ಮೂಲಕ ಇಳಿದು ಹೋಗುತ್ತದೆ. ಮನೆಯ ಒಳಗಿಳಿದ ನೀರು ತೊಟ್ಟಿಯ ಸಣ್ಣ ಪೈಪಿನ ಮೂಲಕ ಹೊರ ಹೋಗುತ್ತದೆ. ಆದ್ದರಿಂದ ಇವುಗಳನ್ನು ತೊಟ್ಟಿಯ ಹಟ್ಟಿ ಎಂದು ಕರೆಯುತ್ತಾರೆ.

ಸೀಮೆಯ ಹಂಚಿನ ಮನೆಗಳನ್ನು ಇತ್ತೀಚಿಗೆ ಹೆಚ್ಚಿನದಾಗಿ ನಿರ್ಮಿಸಿಕೊಂಡಿದ್ದಾರೆ. ಯಾವುದೇ ಹೊಸಮನೆಯ ನಿರ್ಮಾಣ ಮಾಡಿದರೆ ಸೀಮೆಯ ಹೆಂಚುಗಳು ಸಾಮಾನ್ಯವಾಗಿ ಬಳಕೆಯಾಗುತ್ತವೆ. ಕಾರಣ ನಾಡಹಂಚುಗಳು ಹೆಚ್ಚು ಗಟ್ಟಿಯಾಗಿಲ್ಲದ ಕಾರಣ ಬೇಗ ಹಾಳಾಗುವುದರಿಂದ ಅವುಗಳ ಬಳಕೆ ಕ್ರಮೇಣ ಕಡಿಮೆಯಾಗಿ ಮಂಗಳೂರು ಹೆಂಚು ಎಂದೇ ಕರೆಯಲಾಗುವ ಸೀಮೆ ಹಂಚುಗಳ ಮನೆಗಳ ನಿರ್ಮಾಣ ಕಳೆದ ಹದಿನೈದು-ಇಪ್ಪತ್ತು ವರ್ಷಗಳಿಂದ ಬಳಕೆಯಲ್ಲಿವೆ. ಇವುಗಳನ್ನು ತಿಕಡಿ ಮನೆಗಳು ಎಂದು ಕರೆಯುತ್ತಾರೆ.

ಈ ಮನೆಗಳು ಹಿಂದೆ ಮತ್ತು ಮುಂದೆ ಅಂದರೆ ಬೀದಿಯಕಡೆ ಮತ್ತು ಮನೆ ಹಿಂದೆ ಹಿತ್ತಲ ಕಡೆ ಎರಡೂ ಕಡೆ ಇಳಿಜಾರಿನಿಂದ ಕೂಡಿರುತ್ತವೆ. ಮನೆಯ ಮಧ್ಯದ ಗೋಡೆ ಎತ್ತರವಾಗಿದ್ದು ಹಿತ್ತಲ ಮತ್ತು ಬೀದಿಯ ಕಡೆ ಹಂತ ಹಂತವಾಗಿ ವಾಟಕೊಟ್ಟು ಇಳಿಜಾರು ಮಾಡಿರುತ್ತಾರೆ. ಮುಂದೆ ಬೀದಿಯ ಕಡೆ ಹತ್ತಿರ ಜಾಗದಲ್ಲಿ ಪಡಸಾಲೆಯನ್ನು ಮಾಡಿ ಹಂಚಿನ ಸೂರಿಗೆ ೪ ಕಂಬಗಳನ್ನು ಕೊಟ್ಟು ನಿಲ್ಲಿಸುವುದು ಹಾಗೆಯೇ ಮನೆಯ ಗೋಡೆಗಳನ್ನು ಸಿಮೆಂಟಿನಲ್ಲಿ ಪ್ಲಾಸ್ಟಿಂಗ್ ಮಾಡಿ ಎಲ್ಲಾ ಮನೆಗಳಿಗೂ ಸುಣ್ಣ ಬಣ್ಣ ಬಳಿದಿದ್ದಾರೆ.

ಮನೆಯ ಒಳಗೆ ದೇವರಮನೆ, ಅಡುಗೆಮನೆ, ಒಂದು ವಿಶೇಷವಾದ ಕೋಣೆ ಇರುತ್ತದೆ. ಒಂದು ವಿಶಾಲವಾದ ಹಜಾರ ಇರುತ್ತದೆ. ದೇವರಮನೆ ಕೆಲವು ಮನೆಗಳಲ್ಲಿ ಮಾತ್ರ ಪ್ರತ್ಯೇಕವಾಗಿದ್ದು, ಬಹುತೇಕ ಮನೆಗಳಲ್ಲಿ ಹಜಾರದ ಒಂದು ಮೂಲೆಯಲ್ಲೇ ದೇವರ ಫೋಟೋಗಳನ್ನು ಇಟ್ಟುಕೊಂಡಿದ್ದಾರೆ.

ಹಿಂದೆ ಮಣ್ಣಿನ ಗೋಡೆಗಳಿಂದಲೇ ಮನೆಗಳನ್ನು ಕಟ್ಟುತ್ತಿದ್ದರು. ಬಿದಿರಿನ ಗಳಗಳು ಬೊಂಬುಗಳನ್ನು ಉಪಯೋಗಿಸಿ ಮೇಲ್ಛಾವಣಿಗೆ ಇಳಿಬಿಟ್ಟು ಅದರ ಮೇಲೆ ಕಾಡಿನಲ್ಲಿ ಸಿಗುತ್ತಿದ್ದ ಹಂಚಿ ಹುಲ್ಲು ಅಥವಾ

ನಾಲೆ ಹುಲ್ಲನ್ನು ಕುಯ್ದು ತಂದು ದಟ್ಟವಾಗಿ ಜೋಡಿಸಿ ಕಟ್ಟುತ್ತಿದ್ದರು. ನಂತರ ತೆಂಗಿನ ಗರಿಗಳನ್ನು ಹೆಣೆದು ಒಂದರ ಪಕ್ಕದಲ್ಲಿ ಒಂದನ್ನು ಜೋಡಿಸಿ ನೀರು ಒಳಗೆ ಸುರಿಯದಂತೆ ಇಳಿಜಾರಾಗಿ ಕಟ್ಟುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಅಂತಹ ಒಂದು ಮನೆಯೂ ಕಾಣಸಿಗುವುದಿಲ್ಲ.

ಇತ್ತೀಚಿನ ದಿನಗಳಲ್ಲಿ ಆಧುನೀಕರಣ, ನಗರೀಕರಣದ ಪ್ರಭಾವದಿಂದ ಇಲ್ಲಿನ ವಸತಿ ವ್ಯವಸ್ಥೆಯಲ್ಲಿ ಬದಲಾವಣೆಗಳುಂಟಾಗಿವೆ. ಮಣ್ಣಿನ ಗೋಡೆಗಳಿಗೆ ಬದಲಾಗಿ ಸಿಮೆಂಟಿನಿಂದ ಕಟ್ಟಿದ ಗೋಡೆಗಳು, ನಾಟಿ ಇಟ್ಟಿಗೆಗೆ ಬದಲಾಗಿ ಯಂತ್ರದಿಂದ ಅಚ್ಚಾದ ಇಟ್ಟಿಗೆಗಳ ಉಪಯೋಗವೇ ಹೆಚ್ಚಾಗಿದೆ. ನಾಡಹೆಂಚುಗಳು ಮತ್ತು ಸೀಮೆ ಹೆಂಚುಗಳಿಗೆ ಬದಲಾಗಿ ಸಿಮೆಂಟಿನಿಂದ ಮಾಡಿದ ಸೀಟುಗಳನ್ನು(ತಗಡು) ಮನೆಯ ಮೇಲ್ಛಾವಣಿಗೆ ಬಳಸುವುದು ಸಾಮಾನ್ಯವಾಗಿದೆ. ಕಾರಣ ಇದು ಬೇರೆ ಸೀಮೆಹೆಂಚುಗಳಿಗಿಂತ ಕಡಿಮೆ ಖರ್ಚು ಮತ್ತು ಬಾಳಿಕೆ ಬರುತ್ತದೆ ಹಾಗೂ ಕೆಲಸವು ಬೇಗ ಮುಗಿಯುತ್ತದೆ.

ಆರ್ಥಿಕವಾಗಿ ಸದೃಢವಾದ ವ್ಯಕ್ತಿಗಳು ತಮ್ಮ ವಾಸದ ಮನೆಗಳನ್ನು ಆಧುನಿಕವಾಗಿ ನಗರವಾಸಿಗಳಂತೆ ತಾರಸಿ (ಬಿಲ್ಡಿಂಗ್) ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಇದು ಇಲ್ಲಿರುವ ಎಲ್ಲಾ ಸಮುದಾಯದ ಜನರಲ್ಲೂ ಸಾಮಾನ್ಯವಾಗಿದೆ. ಈ ಮನೆಗಳಲ್ಲಿ ಎಲ್ಲವು ಸುಸಜ್ಜಿತವಾದ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದೆ. ಅಡುಗೆ ಮನೆ, ದೇವರ ಕೋಣೆ, ಪ್ರತ್ಯೇಕ ಮಲಗುವ ಕೋಣೆಗಳು, ಶೌಚಾಲಯಗಳು, ವಿಶಾಲವಾದ ಹಜಾರಗಳು ವ್ಯವಸ್ಥಿತವಾಗಿ ನಿರ್ಮಿಸಿದ್ದಾರೆ.

ಗ್ರಾಮ ಪಂಚಾಯಿತಿಯ ವತಿಯಿಂದ ಗ್ರಾಮ ನೈರ್ಮಲ್ಯದ ವತಿಯಿಂದ ಗ್ರಾಮದ ಎಲ್ಲಾ ಮನೆಗಳಿಗೂ ಸುಲಭ ಶೌಚಾಲಯದ ವ್ಯವಸ್ಥೆಯನ್ನು ಒದಗಿಸಿದ್ದರೂ ಅರ್ಧದಷ್ಟು ಜನರು ಬಯಲು ಶೌಚಾಲಯವನ್ನೇ ಆಶ್ರಯಿಸುತ್ತಾರೆ. ಕರ್ನಾಟಕ ಸರ್ಕಾರ ಸುವರ್ಣ ಗ್ರಾಮ ಯೋಜನೆಯಡಿಯಲ್ಲಿ ಗ್ರಾಮಪಂಚಾಯ್ತಿ ಮೂಲಕ ಬಸವ ವಸತಿ ಯೋಜನೆಯಲ್ಲಿ ೨೦೧೧-೧೨ನೇ ಸಾಲಿನಲ್ಲಿ ವಸತಿ ನಿರ್ಮಿಸಲು ಐವತ್ತು ಸಾವಿರ ರೂಪಾಯಿಗಳ ಅನುದಾನ ನೀಡುತ್ತಿದೆ. ಇದು ಎಲ್ಲಾ ಜಾತಿಯ ಜನರಿಗೂ ನೀಡಲಾಗುತ್ತದೆ. ಮತ್ತು ೨೦೧೨-೧೩ನೇ ಸಾಲಿನಿಂದ ೭೫ ಸಾವಿರ ರೂಗಳನ್ನು ನೀಡಲಾಗುತ್ತಿದೆ.

ಇಂದಿರಾ ಅವಾಸ್ ಯೋಜನೆಯಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ೫೦ ಸಾವಿರ ರೂಗಳ ಅನುದಾನ ನೀಡಲಾಗುತ್ತಿದೆ. ಈ ಯೋಜನೆ ಅಡಿಯಲ್ಲಿ ಎಲ್ಲಾ ಮನೆಗಳೂ ಸಿಮೆಂಟಿನ ಶೀಟುಗಳಿಂದ ಮತ್ತು ಸೀಮೆ ಹೆಂಚಿನಿಂದ ನಿರ್ಮಾಣಮಾಡಿದ ಮನೆಗಳೇ ಹೆಚ್ಚಾಗಿವೆ. ಸುಮಾರು ೮೦ರಷ್ಟು ಮನೆಗಳು ಸೀಮೆ ಹೆಂಚು ಮತ್ತು ಸಿಮೆಂಟಿನ ಶೀಟುಗಳಿಂದ ಕಟ್ಟಿದ ಮನೆಗಳಾಗಿವೆ.

ಓಂದಿನ ಕಾಲದಲ್ಲಿ ಒಂದೊಂದು ಸಮುದಾಯದ ಜನರು ಒಂದೊಂದು ಪ್ರತ್ಯೇಕ ಬೀದಿಗಳಲ್ಲಿ ವಾಸಿಸುತ್ತಿದ್ದರು. ಆದರೆ ಇಂದು ಅಂತಹ ಪರಿಸ್ಥಿತಿ ಬದಲಾಗಿದೆ. ಪರಿಶಿಷ್ಟರು ಊರ ಹೊರಗೆ ಅವರ ಬೀದಿಗಳು ಇರುತ್ತಿದ್ದವು. ಈಗ ಎಲ್ಲ ಮನೆಗಳು ಅಕ್ಕಪಕ್ಕದಲ್ಲಿ ನಿರ್ಮಾಣಗೊಂಡಿವೆ. ಇದು ಬದಲಾವಣೆಯತ್ತ ಸಾಗುತ್ತಿರುವ ಸೂಚನೆಗಳಾಗಿವೆ.

ಹಿಂದೆ ತೊಟ್ಟಿಮನೆ ಅಥವಾ ಕಂಬದ ಮನೆ ಎಂದು ಕರೆಯುವ ಮನೆಗಳಲ್ಲಿ ತಾವು ಕೃಷಿ ಮಾಡಲು ಅವಶ್ಯವಿರುವ ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಆಡು, ಎತ್ತುಗಳು ಮುಂತಾದವೆಲ್ಲವುಗಳನ್ನು ತಮ್ಮ ಮನೆಯಲ್ಲೇ ಒಂದು ಕಡೆ ವ್ಯವಸ್ಥಿತವಾಗಿ ಕಟ್ಟಲಾಗುತ್ತಿತ್ತು. ಅವುಗಳಿಗೆ ಕೊಟ್ಟಿಗೆಯನ್ನು ಮಾಡಿ ಮನೆಯೊಳಗೆ ಕೂಡಿ ಮಳೆ, ಗಾಳಿ, ಬಿಸಿಲುಗಳಿಂದ ರಕ್ಷಿಸುವಂತೆ ನೋಡಿಕೊಳ್ಳುತ್ತಿದ್ದರು. ಇದಕ್ಕೆ ಇನ್ನೂ ಒಂದು ಕಾರಣ ಎಂದರೆ ಇಲ್ಲಿನ ಜನಗಳು ತಮ್ಮ ಪ್ರತಿನಿತ್ಯದ ಕೆಲಸಗಳಿಗೆ ಮುನ್ನ ಎದ್ದ ತಕ್ಷಣ ಹಸುಗಳ ಮುಖ ನೋಡುವುದು ವಾಡಿಕೆಯಾಗಿತ್ತು. ತದನಂತರವೇ ಇವರ ದಿನನಿತ್ಯದ ಕೆಲಸ ಪ್ರಾರಂಭವಾಗುತ್ತಿತ್ತು. ಹೀಗೆ ಇಲ್ಲಿನ ಜನರಲ್ಲಿ ಜಾನುವಾರುಗಳ ಸಂಬಂಧ ಅನ್ಯೋನ್ಯವಾಗಿತ್ತು.

ಈ ಸಂಪ್ರದಾಯ ಇಂದಿಗೂ ಉಳಿದು ಬಂದಿದ್ದು, ಇತ್ತೀಚಿನ ದಿನಗಳಲ್ಲಿ ರಾಸು(ಹಸು)ಗಳ ಸಂಖ್ಯೆ ಕಡಿಮೆಯಾಗಿ ಈ ಸಂಪ್ರದಾಯಗಳಲ್ಲಿ ಬದಲಾವಣೆಗಳು ಕಂಡುಬರುತ್ತಿವೆ. ಒಟ್ಟಾರೆಯಾಗಿ ಕಬ್ಬಾಳು ಗ್ರಾಮದಲ್ಲಿ ಎಲ್ಲಾ ರೀತಿಯ ಎಲ್ಲಾ ವಿಧದ ಮನೆಗಳು ಇವೆ. ಹಿಂದಿನ ಕಾಲದ ನಾಡಹಂಚಿನ ತೊಟ್ಟಿಹಟ್ಟಿ ಮನೆಗಳೂ ಇವೆ. ಆಧುನಿಕ ಕಾಲದ ನಗರವಾಸದ ಮನೆಗಳು ಇತ್ತೀಚೆಗೆ ಹೆಚ್ಚಾಗುತ್ತಿವೆ.

ಆ. ಕುಟುಂಬ ವ್ಯವಸ್ಥೆ

ಕುಟುಂಬವೇ ಸಮಾಜದ ಮೂಲ. ಸಾಮಾಜಿಕ ಸಂಸ್ಥೆಗಳನ್ನು ಅವಲೋಕಿಸಿದಾಗ ಕುಟುಂಬ ಅವುಗಳಲ್ಲೆಲ್ಲಾ ಚಿಕ್ಕ ಸಂಸ್ಥೆ. ಇದು ಇತರ ಎಲ್ಲಾ ಸಂಸ್ಥೆಗಳಿಗೂ ಮೂಲ. ಏಕೆಂದರೆ ಇತರ ಎಲ್ಲಾ ಸಂಸ್ಥೆಗಳು ನಿಂತಿರುವುದು ಕುಟುಂಬದ ಆಧಾರದ ಮೇಲೆ. ಅವು ತನ್ನ ಸದಸ್ಯರ ಬಲಸತ್ವವನ್ನು ಪಡೆಯುವುದು ಕುಟುಂಬದಿಂದ. ಅಲ್ಲದೆ ಅದು ಎಲ್ಲಾ ಸಮಾಜಗಳಿಗೂ ಸರ್ವಸಾಮಾನ್ಯವಾದದ್ದು. ಇವೆಲ್ಲವುಗಳಿಗಿಂತ ದೊಡ್ಡ ಸಮಾಜದಲ್ಲಿರುವ ಮತ್ತು ಇರಬಹುದಾದ ಎಲ್ಲಾ ಅಂಶಗಳು ಕುಟುಂಬದಲ್ಲಿವೆ. ಮಕ್ಕಳ ಆಟಕ್ಕೆ ಅದರ ವಿದ್ಯಾಭ್ಯಾಸಕ್ಕೆ, ಧಾರ್ಮಿಕ ಬೆಳವಣಿಗೆಗೆ ಶಿಸ್ತನ್ನು ಪಾಲಿಸುವ ಅಭ್ಯಾಸಕ್ಕೆ ಕುಟುಂಬವು ಮೂಲಕೇಂದ್ರ.

ಸಮಾಜದಲ್ಲಿರುವ ಎಲ್ಲಾ ಸಂಸ್ಥೆಗಳು, ಪಂಗಡಗಳು, ವೃತ್ತಿಗಳು ಎಲ್ಲಾ ರೀತಿಯ ನೀತಿಗಳೂ, ಜೀವನದ ಎಲ್ಲಾ ಅವಸ್ಥೆಗಳೂ, ಎಲ್ಲಾ ಆಶ್ರಮಗಳು, ಸಂಬಂಧಗಳೂ ಹುಟ್ಟು ಪಡೆದಿರುವುದು ಕುಟುಂಬದಿಂದ. ತನ್ನವರು, ಬೇರೆಯವರು, ಸ್ವ-ಜಾತಿ, ಪರಜಾತಿ, ಸ್ವಬಳಗ, ನೆರೆಹೊರೆ, ರಕ್ತಸಂಬಂಧ, ಬಂಧು-ಬಳಗ, ಸ್ನೇಹಿತರು, ಶತ್ರುಗಳು, ದಾಸ, ಧಣಿ, ಧನಿಕ, ದರಿದ್ರ, ಸೇವಕ, ಸಹೋದ್ಯೋಗಿ ಮುಂತಾದ ಸಾಮಾಜಿಕ ಬೇಧಗಳು ಹುಟ್ಟಿರುವುದು ಕುಟುಂಬ ಜೀವನದಿಂದ. ಮನೆ-ಮಠ, ತೋಟ-ತುಡಿಕೆ, ಹಣ-ಆಸ್ತಿ ಮುಂತಾದ ಆಸ್ತಿಪಾಸ್ತಿಗಳೂ, ಕೃಷಿ, ವ್ಯಾಪಾರ, ಕೈಗಾರಿಕೆ ಮುಂತಾದ ಜೀವನ ಮಾರ್ಗಗಳು, ಉದ್ಯಮಿಗಳು, ಕಸುಬಿನವರು, ಕೋಮಿನವರು ಹುಟ್ಟಿರುವುದು ಕುಟುಂಬ ಜೀವನದಿಂದ. ತಂದೆ-ತಾಯಿ, ಮಗ-ಸೊಸೆ, ಮಗಳು-ಅಳಿಯ, ಮಾವ-ಅತ್ತೆ, ಅಜ್ಜ-ಅಜ್ಜಿ, ಅಣ್ಣ-ತಮ್ಮ, ಅಕ್ಕ-ತಂಗಿ ಮುಂತಾದ ಬಂಧುವಾಚಕ ಶಬ್ದಗಳು, ಬಾಂಧವ್ಯಗಳು ಹುಟ್ಟಿರುವುದು ಕುಟುಂಬ ಜೀವನದಿಂದ.

ಕಬ್ಬಾಳು ಗ್ರಾಮದಲ್ಲಿ ಸಂಬೋಧನೆಗಳು ಎರಡು ಮುಖ್ಯ ವಲಯದಲ್ಲಿ ನಿರ್ಧಾರಿತವಾಗುತ್ತವೆ. ಒಂದು ವೈಯಕ್ತಿಕ ವಲಯ ಮತ್ತೊಂದು ಸಾಮಾಜಿಕ ವಲಯ. ವೈಯಕ್ತಿಕ ವಲಯದಲ್ಲಿ ಹೆತ್ತವರು-ಒಡಹುಟ್ಟಿದವರು,

ಮದುವೆಯಾದವರು, ಮೊದಲಾದ ಹಿರಿಯ ಕಿರಿಯರಿದ್ದು, ಇಲ್ಲಿ ಸಂಬಂಧ ಹಾಗೂ ವಯೋಮಾನದ ಸಂಬೋಧನೆಯ ಮಾನದಂಡಗಳಾಗಿದ್ದರೆ ಸಾಮಾಜಿಕ ವಲಯದಲ್ಲಿ ವಯಸ್ಸು, ಜಾತಿ ಹಾಗೂ ಅಂತಸ್ತು ಮುಖ್ಯವಾಗುತ್ತವೆ.

ಪ್ರಸ್ತುತ ಪ್ರದೇಶದಲ್ಲಿ ಪಿತೃಪ್ರಧಾನ ಕುಟುಂಬ ಬಹುಮಟ್ಟಿಗೆ ಅಸ್ತಿತ್ವದಲ್ಲಿರುವುದನ್ನು ಕಾಣಬಹುದು. "ಪಿತೃಮೂಲೀಯ ವ್ಯವಸ್ಥೆ ಹಲವು ಅರ್ಥಗಳಲ್ಲಿ ಪಿತೃಪ್ರಧಾನ ವ್ಯವಸ್ಥೆ, ಆಸ್ತಿಯ ಕೇಂದ್ರೀಕರಣ, ಬೇಸಾಯದ ಪ್ರಗತಿ, ಅಧಿಕಾರದ ಸರ್ವಾಧಿಕಾರತ್ವ, ಕೈಗಾರಿಕೆ ಮತ್ತು ತಾಂತ್ರಿಕ ಬೆಳವಣಿಗೆ ಮತ್ತು ಅವುಗಳಲ್ಲಿನ ನೈಪುಣ್ಯಗಳು ಸ್ತ್ರೀಯ ಪ್ರಾಮುಖ್ಯತೆಯನ್ನು ಕುಗ್ಗಿಸಿ ಪಿತೃಪ್ರಧಾನ ಕುಟುಂಬದ ಹುಟ್ಟಿಗೆ ಕಾರಣವಾದವೆಂದು ಹಲವು ಮಾನವಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ"(ಡಾ.ಕವಿತಾ ರೈ, ವಿವಾಹ ಮತ್ತು ಕುಟುಂಬ, ಮಂಟಪ ಮಾಲೆ, ೧೪೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭, ಪುಟ.೨೦). ಹೀಗೆ ಪ್ರಾಚೀನ ಕಾಲದಲ್ಲಿ ಮಾತೃಪ್ರಧಾನ ಇದ್ದರೂ ಆಧುನಿಕ ಕಾಲದ ಸಮಾಜಗಳಲ್ಲಿ ಪಿತೃಮೂಲೀಯ ಕುಟುಂಬ ಅಸ್ತಿತ್ವದಲ್ಲಿರುವ ಹಾಗೆ ಪ್ರಸ್ತುತ ಪ್ರದೇಶದಲ್ಲಿ ಪಿತೃಪ್ರಧಾನವಾದ ಕುಟುಂಬಗಳೇ ಇವೆ. ಇಷ್ಟಿದ್ದರೂ ಕೂಡ ಸಂಸಾರದ ಒಳಗೆ ಮಾತೃಗಳನ್ನು ಅಲ್ಲಗಳೆಯುವ ಹಾಗಿಲ್ಲ.

ಪಿತೃಮೂಲೀಯ ಕುಟುಂಬದಲ್ಲಿ ಹಿರಿಯ ಪುರುಷನೇ ಮನೆಯ ಯಜಮಾನ, ನಿರಂಕುಶಪ್ರಭು, ಸರ್ವಾಧಿಕಾರಿಯಾಗಿದ್ದಾನೆ. ತನಗೆ ಇಷ್ಟ ಬಂದ ರೀತಿಯಲ್ಲಿ ನಡೆದುಕೊಳ್ಳುವ ಹಕ್ಕು ಆತನಿಗೆ ಇದೆ. ಕುಟುಂಬಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳಲ್ಲಿ ಅವನದೇ ಅಂತಿಮ ತೀರ್ಮಾನ. ಆರ್ಥಿಕ, ರಾಜಕೀಯ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಆತನಿಗೆ ಸ್ವತಂತ್ರವಾದ ಅಧಿಕಾರವಿರುತ್ತದೆ. ಹಾಗೆಂದ ಮಾತ್ರಕ್ಕೆ ಇಲ್ಲಿನ ಕುಟುಂಬಗಳಲ್ಲಿ ಮನೆಯ ಯಜಮಾನ ತನ್ನ ಅಧಿಕಾರವನ್ನು ದುರುಪಯೋಗ ಪಡಿಸುತ್ತಿದ್ದಾನೆಂದೇನಲ್ಲ. ಇಲ್ಲಿ ಕೆಲವು ವಿಷಯಗಳಲ್ಲಿ ಮಹಿಳೆಯರ ಪಾಲು ಇದ್ದೇ ಇದೆ.

ಪಿತೃಪ್ರಧಾನ ಕುಟುಂಬಗಳಲ್ಲಿ ಮಕ್ಕಳು ತಂದೆಯ ವಂಶಕ್ಕೆ ಸೇರುತ್ತಾರೆ. ಆದಕಾರಣ ಮಕ್ಕಳು ಹುಟ್ಟಿದ ನಂತರ ತಮ್ಮ ತಂದೆಯ ಮನೆತನದ ಹೆಸರಿಡುವುದು ಇಲ್ಲಿ ಇಂದಿಗೂ ಉಳಿದು ಬಂದಿದೆ. ಕುಟುಂಬದ ಆಸ್ತಿಯಲ್ಲಿ ಗಂಡುಮಕ್ಕಳಿಗೆ ಮಾತ್ರ ಪಾಲು ಪಡೆಯುವ ಹಕ್ಕಿರುತ್ತದೆ. ಇತ್ತೀಚಿಗೆ ನ್ಯಾಯಲವು ನೀಡಿರುವ ತೀರ್ಪಿನ ಪ್ರಕಾರ ಹೆಣ್ಣುಮಕ್ಕಳಿಗೂ ಆಸ್ತಿಯಲ್ಲಿ ಹಕ್ಕಿದೆ ಎಂಬ ಹಿನ್ನಲೆಯಲ್ಲಿ ಹೆಣ್ಣುಮಕ್ಕಳಿಗೆ ಆಸ್ತಿಯನ್ನು ನೀಡುವುದಿದ್ದರೂ, ಹೆಚ್ಚು ಗಂಡುಮಕ್ಕಳ ಕಡೆಗೆ ಒಲವಿರುವುದು ಕಾಣಬಹುದು. ಅನುವಂಶೀಯ ಅಧಿಕಾರ ಮತ್ತು ಸ್ಥಾನಮಾನಗಳು ಗಂಡು ಸಂತತಿಗೆ ಮೀಸಲಾಗಿರುತ್ತದೆ. ಇಲ್ಲಿನ ಹೆಣ್ಣುಮಕ್ಕಳು ವಿವಾಹವಾದ ಮೇಲೆ ಆಕೆಯ ಗಂಡನ ಮನೆಯಲ್ಲಿ ವಾಸಿಸುತ್ತಾಳೆ. 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು' ಎಂಬ ಗಾದೆ ಇಲ್ಲಿನ ಕುಟುಂಬಕ್ಕೆ ಸರಿಹೊಂದುತ್ತದೆ.

ಪ್ರಸ್ತುತ ಪ್ರದೇಶದಲ್ಲಿ ವಿಭಕ್ತಕುಟುಂಬಗಳೇ ಹೆಚ್ಚು. ನಿರ್ಧಿಷ್ಟವಾಗಿ ಗಂಡ-ಹೆಂಡತಿ ಮತ್ತು ಅವರ ಮಕ್ಕಳು ಒಂದೇ ಮನೆಯಲ್ಲಿ ವಾಸವಾಗಿರುವ ವಿಭಕ್ತ ಕುಟುಂಬವೇ ಸರಳ ಕುಟುಂಬವಾಗಿದೆ. ಇದನ್ನು ದಾಂಪತ್ಯ ಕುಟುಂಬವೆಂದು ಸಹ ಕರೆಯುತ್ತಾರೆ. ಗ್ರಾಮೀಣ ವ್ಯವಸಾಯ ಮತ್ತು ಗೃಹ ಕೈಗಾರಿಕೆಗಳ

ಕ್ಷೀಣಿಸುವಿಕೆ, ಶೈಕ್ಷಣಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿ, ಕೈಗಾರಿಕೀಕರಣ, ಸ್ತ್ರೀಯರ ಶಿಕ್ಷಣ ಮತ್ತು ಆರ್ಥಿಕ ಸ್ವಾತಂತ್ರ್ಯ, ಪಾಶ್ಚಿಮಾತ್ಯ ಸಂಸ್ಕೃತಿಗಳ ಪ್ರಭಾವ, ಪ್ರಜಾಪ್ರಭುತ್ವ, ಆಧುನಿಕ ಕಾಯಿದೆಗಳು ಈ ಮುಂತಾದ ಅಂಶಗಳು ಸರಳ ಕುಟುಂಬದ ರಚನೆಗೆ ಕಾರಣವಾಗಿವೆ. ಅಲ್ಲದೆ ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿ, ಸಾರಿಗೆ-ಸಂಪರ್ಕ, ಶಿಕ್ಷಣದಲ್ಲಿನ ಪ್ರಗತಿ, ಆರೋಗ್ಯ ಸೌಲಭ್ಯಗಳ ಹೆಚ್ಚಳ, ಉದಾರತ್ವ, ವ್ಯಕ್ತಿ ಪ್ರಾಧಾನ್ಯ ಮುಂತಾದ ವಾಸ್ತವವಾದ ಬೆಳವಣಿಗೆಗಳು ಸರಳ ಕುಟುಂಬ ರಚನೆಗೆ ಪೂರಕವಾಗಿವೆ. ರಾಜ್ಯದ ರಾಜಧಾನಿ ಬೆಂಗಳೂರು ಪ್ರಸ್ತುತ ಪ್ರದೇಶಕ್ಕೆ ಹತ್ತಿರವಾಗಿದ್ದು, ಇದರ ಸಂಪರ್ಕ ಹೆಚ್ಚಾಗಿದ್ದು ನಗರೀಕರಣದ ಪ್ರಭಾವ ಕೂಡ ಈ ಪ್ರದೇಶದ ಮೇಲಾಗಿದ್ದು, ವಿಭಕ್ತ ಕುಟುಂಬಗಳ ರಚನೆಗೆ ಕಾರಣವಾಗಿದೆ.

ಇಲ್ಲಿ ಕುಟುಂಬದೊಳಗೆ ಒಬ್ಬರನ್ನೊಬ್ಬರು ಸಂಬೋಧಿಸುವುದನ್ನು ಕಾಣುತ್ತೇವೆ. ಸಂಬೋಧನೆಗಳು ವ್ಯಕ್ತಿಯ ಸಂಬಂಧವನ್ನಷ್ಟೇ ಅಲ್ಲ ಆತನ ಮನಸ್ಸಂಸ್ಕಾರವನ್ನೂ ಸೂಚಿಸುತ್ತವೆ. ಬದಲಾದ ಕಾಲಕ್ಕನುಗುಣವಾಗಿ ಸಂಬೋಧಿಸುವ ರೀತಿಯೂ ಬದಲಾಗುತ್ತದೆ. ಕಬ್ಬಾಳು ಪರಿಸರದಲ್ಲಿ ವೈಯಕ್ತಿಕವಾಗಿ ಮತ್ತು ಸಾಮಾಜಿಕವಾಗಿ ಸಂಬೋಧನೆಗಳನ್ನು ಮಾಡುತ್ತಾರೆ. ವೈಯಕ್ತಿಕ ವಲಯದಲ್ಲಿ ಹೆತ್ತವರು-ಒಡಹುಟ್ಟಿದವರು, ಮದುವೆಯಾದವರು ಮೊದಲಾದ ಹಿರಿ-ಕಿರಿಯರಿದ್ದು, ಇಲ್ಲಿ ಸಂಬಂಧ ಹಾಗೂ ವಯೋಮಾನ ಸಂಬೋಧನೆಯ ಮಾನದಂಡಗಳಾಗಿದ್ದರೆ ಸಾಮಾಜಿಕ ವಲಯದಲ್ಲಿ ವಯಸ್ಸು, ಜಾತಿ ಹಾಗೂ ಅಂತಸ್ತುಗಳು ಮುಖ್ಯ ಪಾತ್ರವಹಿಸುತ್ತವೆ.

ಹೊಸತಲೆಮಾರಿನ ಕೆಲವರು ಆಧುನಿಕ ನಗರ ಜೀವನದ ಪ್ರಭಾವಕ್ಕನುಗುಣವಾಗಿ ಅಮ್ಮನನ್ನು 'ಅಕ್ಕ' ಎಂದೂ, ಅಪ್ಪನನ್ನು 'ಅಣ್ಣ' ಎಂದೂ ಕರೆದರೆ ಹಿರಿಯ ಸೋದರನನ್ನು 'ಅಣ್ಣಯ್ಯ' ಎಂದೂ ಸಂಬೋಧಿಸುತ್ತಾರೆ. ಹಳಬರು ಅಮ್ಮನನ್ನು 'ಅವ್ವ' ಎಂದು ಕರೆಯುತ್ತಾರೆ. ಇಂದಿಗೂ ಇದು ಉಳಿದುಕೊಂಡು ಬಂದಿದೆ. ಆದರೆ ಇತ್ತೀಚಿನ ದಿನಮಾನಗಳಲ್ಲಿ ಚಿಕ್ಕ ಮಕ್ಕಳುಗಳು 'ಅಮ್ಮ'ನನ್ನು 'ಅಮ್ಮ', 'ಮಮ್ಮಿ'(Mummy) ಎಂದೂ, ಅಪ್ಪನನ್ನು 'ಡ್ಯಾಡಿ'(Daddy) ಎಂಬ ಆಂಗ್ಲ ಭಾಷೆಯ ಪದಗಳ ಬಳಕೆ ಹೆಚ್ಚಾಗುತ್ತಿದೆ.

ಸಂಬಂಧದಲ್ಲಿ ಹೆಚ್ಚು ಪ್ರೀತಿ ಗೌರವ ತುಂಬಿದ್ದರೆ ಆಗ ಸಂಬೋಧನೆಯಲ್ಲಿ ಚಿಕ್ಕಪ್ಪ ಎನ್ನುವುದನ್ನು 'ಚಿಚ್ಚ', 'ಕಾಕಯ್ಯ' ಎಂದೂ ಚಿಕ್ಕಮ್ಮನನ್ನು 'ಚಿಚ್ಚಿ', 'ಚಿಕ್ಕಿ' ಎಂದೂ ಸಂಬೋಧಿಸಿದರೆ, ಭಾವ/ಮಾವ ಎಂಬುವರನ್ನು 'ಮಾಮ' ಎಂದೂ ಕರೆಯುತ್ತಾರೆ. ಹೆಣ್ಣು ಕೊಟ್ಟ ಅತ್ತೆಯನ್ನು 'ಅಕ್ಕ' 'ಅವ್ವ' 'ಅಮ್ಮ' ಎಂದೂ ಮಾವನನ್ನೂ 'ಅಪ್ಪ' ಎಂದು ಸಂಬೋಧಿಸುತ್ತಾರೆ.

ಗಂಡ-ಹೆಂಡತಿಯರು ಮಾತನಾಡುವಾಗ ಗೌರವದಿಂದ ತನ್ನ ಪತ್ನಿಯನ್ನು ಮಾತನಾಡಿಸುವ ಪತಿಯಾದರೆ 'ಇದ್ದೀಯಾ', 'ಎಸಾ', 'ಎಲಾ' ಎಂದೂ ಕರೆದರೆ ಅಷ್ಟು ಪ್ರೀತಿ ಇಲ್ಲದವರು 'ಏನೇ' ಎಂದು ಸಂಬೋಧಿಸುತ್ತಾರೆ. ಬೇರೆಯವರೊಡನೆ ತನ್ನ ಪತ್ನಿಯ ಬಗ್ಗೆ ಮಾತನಾಡುವಾಗ 'ನಮ್ಮನೆವಳು' ಎಂದೋ, ಮಕ್ಕಳೊಡನೆಯಾದರೆ 'ನಿಮ್ಮವ್ವ', 'ನಿಮ್ಮಮ್ಮ' ಎಂದು ಸಂಬೋಧಿಸಿದರೆ ಇತ್ತೀಚಿನವರು ತನ್ನ ತರುಣ ಪತ್ನಿಯನ್ನು ಹೆಸರಿನಿಂದಲೇ ಕರೆಯುತ್ತಾರೆ. ಹೆಂಡತಿ ತನ್ನ ಗಂಡನ ಹೆಸರನ್ನು ನೇರವಾಗಿ ಹೇಳುವಂತಿಲ್ಲ.

ಆದ್ದರಿಂದ ಅನ್ಯರೊಡನೆ 'ನಮ್ಮ ಯಜಮಾನ್ರು', 'ನಮ್ಮನೇವ್ರು', 'ನಮ್ಮ ಗೌಡ್ರು' ಅಥವಾ 'ಇವರು' ಎಂದೋ, ಮಕ್ಕಳೊಡನೆ 'ನಿಮ್ಮಪ್ಪ', 'ನಿಮ್ಮಣ್ಣ' ಎಂದೂ, 'ತಂಗಿ', ತಮ್ಮನೊಡನೆ 'ನಿಮ್ಮಾವ', 'ನಿಮ್ಮಾಮ' ಎಂದು ಕರೆಯುತ್ತಾರೆ. ಕೆಲವೊಮ್ಮೆ 'ಏನೂಂದ್ರೆ', 'ನೋಡೊಂದ್ರೆ', 'ಏನ್ರೀ', 'ರೀ'.... ಹೀಗೆ ಸಂಬೋಧಿಸಿ ಗಮನ ಸೆಳೆಯುತ್ತಾರೆ.

ಅಕ್ಕ ತಂಗಿಯರ ಮಕ್ಕಳು ಇಬ್ಬರಿಗೂ ಮಕ್ಕಳೆಂದೇ ಸಂಬಂಧದಲ್ಲಿ ಗುರುತಿಸಲಾಗುತ್ತದೆ. ಇದನ್ನು ಕುರಿತು ವಕ್ತೃ ಕೆಂಪಹೊನ್ನಮ್ಮ ಅವರು "ಅಕ್ಕನ ಹೊಟ್ಟೇಲಿ ಆರು ತಿಂಗಳು, ತಂಗಿ ಹೊಟ್ಟೇಲಿ ಮೂರು ತಿಂಗಳು' ಅಂತ ಅಕ್ಕ ತಂಗಿಯರಿಬ್ಬರೂ ಅವರನ್ನು ಸಾಕಬಹುದಾದ್ದರಿಂದ ಅವರು ಮಕ್ಕಳೇ ಆಗುತ್ತಾರೆ" ಎನ್ನುತ್ತಾರೆ.

ಒಟ್ಟಾರೆ, ಇಲ್ಲಿನ ಕುಟುಂಬ ಪದ್ದತಿ ಹಿಂದೂ ಸಮಾಜದ ಪುರುಷ ಪ್ರಧಾನ ಕುಟುಂಬದ ಎಲ್ಲಾ ಲಕ್ಷಣಗಳನ್ನು ಹೊಂದಿದೆ ಎಂದು ಹೇಳಬಹುದು. ಅವರ ಈ ಬಂಧುತ್ವ ವ್ಯವಸ್ಥೆ ಅವರ ಹಲವು ಸಂಪ್ರದಾಯ, ನಡವಳಿಕೆಗಳಲ್ಲಿ ಪರಿಣಾಮಕಾರಿಯಾಗಿ ಪ್ರಭಾವ ಬೀರಿರುವುದನ್ನು ಇಲ್ಲಿ ಗುರುತಿಸಬಹುದು.

೩. ವಿವಾಹ ಪದ್ಧತಿ

ವಿವಾಹ ಮತ್ತು ಕುಟುಂಬ ಯಾವುದೇ ಸಮಾಜದ ಮೂಲಭೂತ ಅವಶ್ಯ ಮತ್ತು ಅನಿವಾರ್ಯ ಸಂಸ್ಥೆಗಳು. ಅವು ಒಂದೇ ನಾಣ್ಯದ ಎರಡು ಮುಖಗಳಂತೆ ಪರಸ್ಪರ ಪೂರಕ. ಸ್ತ್ರೀಪುರುಷರು ಆ ಎರಡೂ ಸಂಸ್ಥೆಗಳ ಆಧಾರ ಘಟಕಗಳು. ಕುಟುಂಬ ವ್ಯವಸ್ಥೆಗೆ ವಿವಾಹವೇ ಹೆಬ್ಬಾಗಿಲು, ವಿವಾಹ ಸಂಸ್ಥೆಗೆ ಕುಟುಂಬ ಪದ್ಧತಿಯೇ ಅಡಿಗಲ್ಲು. ಇವು ಸಾಮಾಜಿಕವಾಗಿ ಬಹಳ ಪ್ರಾಮುಖ್ಯತೆ ಗಳಿಸಿರುವ ಸಂಸ್ಥೆಗಳು.

ಸ್ತ್ರೀಪುರುಷರಿಗೆ ಏರ್ಪಡುವ ಧಾರ್ಮಿಕ ಮತ್ತು ಸಾಮಾಜಿಕ ಸಂಬಂಧದಲ್ಲಿ ವಿವಾಹ ಬಹುಮುಖ್ಯ ಪಾತ್ರವಹಿಸುತ್ತದೆ. ಈ ಸಂಬಂಧ ನಿರ್ದಿಷ್ಟ ಧಾರ್ಮಿಕ ಮತ್ತು ಸಾಮಾಜಿಕ ಕಲಾಪಗಳ ವಿಧಿ ಆಚರಣೆಗಳ ಮೂಲಕ ಸಾಧ್ಯವಾಗುತ್ತದೆ. ಸ್ತ್ರೀಪುರುಷರ ವೈಯಕ್ತಿಕ ಹಾಗೂ ಸಾಮಾಜಿಕ ಹಿತಕ್ಕಾಗಿ ಜರುಗುವ ಸಂಯೋಗವೇ ವಿವಾಹ. ಮಾನವ ಸಮಾಜದಲ್ಲಿ ಮಾತ್ರ ಕಂಡುಬರುವ ಈ ಪ್ರಬಲ ಸಂಸ್ಥೆ ವಿಶಿಷ್ಟವಾದುದು.

ಇತಿಹಾಸ ಪೂರ್ವದ ಆದಿಮಾನವನಿಗೆ ಕುಟುಂಬ ವಿವಾಹ ಸಂಸ್ಥೆಗಳ ಕಲ್ಪನೆ ಇರಲಿಲ್ಲ. ಪ್ರಾಣಿಗಳಲ್ಲಿರುವಂತೆ ಕೇವಲ ಲೈಂಗಿಕ ಪ್ರವೃತ್ತಿಯಷ್ಟೇ ಜೀವನದ ನಿರಂತರತೆಗೆ, ಸಂತಾನಾಭಿವೃದ್ಧಿಗೆ ಕಾರಣವಾಗಿತ್ತು. ಆದಿಮಾನವ ಒಂದೆಡೆ ನೆಲೆನಿಂತು ಪ್ರಕೃತಿಯ ಕಣ್ಣು ತೆರೆದು ಅದರ ರಹಸ್ಯವನ್ನು ಬೇಧಿಸಲು ಅರಿತಾಗ ನಾಗರೀಕತೆ ಸಂಸ್ಕೃತಿ ಪ್ರಾರಂಭವಾಯಿತು. ಅದು ಸ್ತ್ರೀ ಪುರುಷ ಜೊತೆ ಬಾಳಿಗೂ ನಾಂದಿಯಾಯಿತು. ಮುಂದೆ ಅವರ ಸಂತಾನ ಸಂಬಂಧವಾಗಿ ಅವರಿಬ್ಬರನ್ನು ಒಂದೆಡೆ ಸ್ಥಿರವಾಗಿ ನೆಲೆಗೊಳಿಸಲು ವಿವಾಹ ಅನಿವಾರ್ಯವಾಯಿತು. ಇದರಿಂದ ತಾಯಿ ತಂದೆ ಮಕ್ಕಳೆಂಬ ಒಕ್ಕೂಟ ಸ್ಥಾಪನೆಯಾಗಿ ವಿವಾಹ ಒಂದು ಸಾಮಾಜಿಕ ಸಂಸ್ಥೆಯಾಗಿ ಬೆಳೆದು ಬಂದಿದೆ. ಈ ಬೆಳವಣಿಗೆಯ ಹಂತದಲ್ಲಿ ಸ್ತ್ರೀ ಪುರುಷರ ಸಾಮಾಜಿಕ ಬಂಧುತ್ವಕ್ಕೆ ಕ್ರಮೇಣ ಧಾರ್ಮಿಕ ನಂಬಿಕೆ, ಕಲ್ಪನೆಗಳು ಬೆರೆತು ವಿವಾಹ ಸಂಸ್ಥೆಗೆ ಹೊಸ ಆಯಾಮ ದೊರೆಯಿತು.

ಆಹಾರ, ನಿದ್ರೆಗಳಷ್ಟೇ ಮೂಲಭೂತ ಪ್ರವೃತ್ತಿಯಾದ ಕಾಮ ಕೂಡ ಮನುಷ್ಯನಿಗೆ ಪ್ರಬಲ ಹಾಗೂ ಸಹಜವಾದುದು. ಇದು ಒಂದು ಕಾಲದಲ್ಲಿ ಲೈಂಗಿಕ ಸ್ವಚ್ಛಂದತೆಗೆ ಕಾರಣವಾಗಿತ್ತು. ಆದರೆ ವಿವಾಹ ಸಂಸ್ಥೆ ರೂಪುಗೊಂಡ ಮೇಲೆ ಸ್ವಚ್ಛಂದತೆಗೆ ಕಡಿವಾಣ ಬಿತ್ತು. ತದನಂತರ ಸ್ತ್ರೀಪುರುಷರು ತಮ್ಮ ದಾಂಪತ್ಯ ಬದುಕಿಗಾಗಿ ಸಮಾಜದ ಸಮ್ಮತಿ ಅಥವಾ ಅಂಗೀಕಾರವನ್ನು ಧರ್ಮಸಮ್ಮತವಾದ ವಿವಾಹ ಸಂಸ್ಕಾರದ ಮೂಲಕ ಪಡೆಯತೊಡಗಿದರು. ಹೀಗಾಗಿ ವಿವಾಹ ಧಾರ್ಮಿಕ ಪರವಾನಗಿಯ ಮುದ್ರೆಯನ್ನು ಪಡೆದುಕೊಂಡಿತು.

ವಿವಾಹವನ್ನು ಸಂಸ್ಕಾರ ಪ್ರಜ್ಞೆಯಿಂದ, ವಿವಿಧ ಕಲಾಪಗಳಿಂದ ಧಾರ್ಮಿಕ ವಿಧಿ ನಿಷೇಧಗಳಿಂದ ಆಚರಿಸುವುದೇ ಭಾರತೀಯರಿಗೆ ವಿವಾಹ ಧಾರ್ಮಿಕ ಸಂಸ್ಥೆಯೂ ಹೌದು. ಸಾಮಾಜಿಕ ಸಂಸ್ಥೆಯೂ ಹೌದು, ಹದಿನಾರು ಸಂಸ್ಕಾರಗಳಲ್ಲಿ ವಿವಾಹವೂ ಒಂದು ಮುಖ್ಯ ಸಂಸ್ಕಾರ, ಸ್ತ್ರೀಗೆ ವಿವಾಹದಿಂದಲೇ ಸಂಸ್ಕಾರ ವಿದಿ ಪ್ರಾರಂಭವಾಗುವುದು. ಬ್ರಹ್ಮಚರ್ಯ, ಸನ್ಯಾಸ, ವಾನಪ್ರಸ್ಥ ಮುಂತಾದ ಆಶ್ರಮಗಳಿಗೆ ಗೃಹಸ್ಥಾಶ್ರಮವೇ ಅಡಿಗಲ್ಲಾದರೆ ಗೃಹಸ್ಥಾಶ್ರಮಕ್ಕೆ ವಿವಾಹವೇ ಅಡಿಗಲ್ಲು, ಆದ್ದರಿಂದ ಮನುಷ್ಯ ಸಮಾಜದ ವಿವಾಹ ಪದ್ಧತಿಯ ಅಧ್ಯಯನ ಕುತೂಹಲ ಮತ್ತು ಆಕರ್ಷಕವಾಗಿದೆ.

ಈ ಹಿನ್ನಲೆಯಲ್ಲಿ ಪ್ರಸ್ತುತ ಕಬ್ಬಾಳು ಪರಿಸರದಲ್ಲಿನ ವಿವಾಹ ಪದ್ಧತಿಗಳು ಹಲವು ವೈಶಿಷ್ಟ್ಯ ಮತ್ತು ವೈವಿಧ್ಯಪೂರ್ಣವಾಗಿದೆ. ಆದ್ದರಿಂದ ಇದರ ಅಧ್ಯಯನ ವಿಶಿಷ್ಟವಾಗಿರುವುದಷ್ಟೇ ಅಲ್ಲ ಸಾಂಸ್ಕೃತಿಕ ದೃಷ್ಟಿಯಿಂದ ಕೂಡ ಉಪಯುಕ್ತ.

ಕಬ್ಬಾಳು ಗ್ರಾಮವು ಹಲವು ಜಾತಿ, ಸಮುದಾಯಗಳಿಂದ ಸಮ್ಮಿಲನಗೊಂಡಿರುವ ಗ್ರಾಮವಾಗಿರುವುದರಿಂದ ಪ್ರತಿಜಾತಿ, ಪ್ರತಿಸಮುದಾಯಗಳ ಆಚರಣೆಗಳಲ್ಲಿ ವೈವಿಧ್ಯತೆಯಿಂದ ಕೂಡಿವೆ. ಮೇಲು ವರ್ಗದಿಂದ ಕೆಳವರ್ಗದವರೆಗೂ ಅವರು ತಮ್ಮದೇ ಆಚಾರ ವಿಚಾರ ನೀತಿ ನಿಯಮಾವಳಿಗಳಿಗನುಗುಣವಾಗಿ ವಿವಾಹ ಸಂಬಂಧಪಟ್ಟ ಆಚರಣೆಗಳನ್ನು ಇಂದಿಗೂ ಮೈಗೂಡಿಸಿಕೊಂಡು ಬಂದಿದ್ದರೂ ಈ ಎಲ್ಲಾ ಸಮುದಾಯಗಳಲ್ಲಿ ವಿವಾಹ ಸಂಬಂಧ ಆಚರಣೆಗಳಲ್ಲಿ ಬಹುತೇಕ ಸಾಮ್ಯತೆಯಿಂದ ಕೂಡಿವೆ.

ವಿವಾಹ ಪೂರ್ವದಲ್ಲಿ ನಡೆಸುವ ವಿವಾಹ ವಿಧಿ, ಸಿದ್ಧತೆಗಳು ವಿವಾಹಕ್ಕೆ ಬೇಕಾದ ಕೆಲವು ಅಗತ್ಯಗಳು ವಧುವರರ ವಯೋಮಾನ, ವಧುವರರ ಲಕ್ಷಣ ಮತ್ತು ಆಯ್ಕೆಯ ಕ್ರಮ, ಹೆಣ್ಣನ್ನು ಕೇಳುವ ಕ್ರಮ ಹಾಗೂ ನಿಶ್ಚಿತಾರ್ಥ, ನಂತರ ವಿವಾಹದ ದಿನದ ಕಾರ್ಯಕ್ರಮಗಳು, ಮದುವೆ ಮನೆ, ಮದುವೆ ಮಂಟಪ, ಅದರ ಅಲಂಕಾರ, ಹೆಣ್ಣು ಮತ್ತು ಗಂಡುಗಳನ್ನು ಕರೆತರುವುದು ದೇವರನ್ನು ತರುವುದು, ಚಪ್ಪರ, ದಾರಾ ಮೂಹೂರ್ತ, ಆರತಾಕ್ಷತೆ ನಂತರ ನೆರವಿ ಅಥವಾ ಬೀಗರ ಊಟ ಇನ್ನೂ ಮುಂತಾದ ಆಚರಣೆಗಳು ಅತಿಮುಖ್ಯವಾಗಿ ಕಂಡುಬರುತ್ತವೆ.

ವಿವಾಹಕ್ಕೆ ಮೊದಲು ಹೆಣ್ಣು ಗಂಡುಗಳ ವಿವಾಹದ ವಯಸ್ಸು ನಿರ್ಧರಿಸುವುದು ಸಾಮಾನ್ಯರೂಢಿ. ವೇದೋತ್ತರ ಕಾಲದಲ್ಲಿದ್ದಂತ ಬಾಲ್ಯ ವಿವಾಹ ಪದ್ಧತಿ ಇಲ್ಲಿ ಕಾಣುವುದಿಲ್ಲ. ಸಾಮಾನ್ಯವಾಗಿ ಗಂಡಿಗೆ ಇಪ್ಪತ್ತೈದು ವರ್ಷ ಹೆಣ್ಣಿಗೆ ಇಪ್ಪತ್ತು ವರ್ಷಗಳ ನಂತರ ಮದುವೆ ನಿಶ್ಚಯಿಸುವುದು ಸಾಮಾನ್ಯವಾಗಿದೆ.

ಇದು ಗಂಡು ಹೆಣ್ಣುಗಳ ಕನಿಷ್ಠ ವಯಸ್ಸಾಗಿದ್ದು, ಈ ವಯಸ್ಸುದಾಟಿದ ನಂತರವೇ ಬಹುತೇಕ ವಿವಾಹ ನಿಶ್ಚಯವಾಗಿರುವುದನ್ನು ಕಾಣುತ್ತೇವೆ.

ವಧು-ವರರ ಆಯ್ಕೆ ಮಾಡುವಲ್ಲಿ ಅವರ ಗುಣ, ಲಕ್ಷಣ, ಎತ್ತರ, ಬಣ್ಣ, ಆಕಾರ ಈ ಎಲ್ಲಾ ಅಂಶಗಳನ್ನು ಗಮನಿಸುತ್ತಾರೆ. ವಧುವಿಗೂ, ವರನಿಗೂ ಸರಿಯಾದ ಹೊಂದಾಣಿಕೆಯಾದಾಗ ಮಾತ್ರ ಒಪ್ಪಿಗೆ ಸೂಚಿಸಲಾಗುತ್ತದೆ. ಪ್ರಾಚೀನ ಕಾಲದಂತೆ ಮನೆಯ ಹಿರಿಯರ ತೀರ್ಮಾನವೇ ಅಂತಿಮವಲ್ಲ. ಹುಡುಗ ಮತ್ತು ಹುಡುಗಿಯ ಒಪ್ಪಿಗೆಯ ನಂತರವೇ ಮುಂದಿನ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಆದ್ದರಿಂದ ವಧುವರರ ಪಾತ್ರ ಬಹುಮುಖ್ಯವಾಗುತ್ತದೆ.

ಸಾಮಾನ್ಯವಾಗಿ ಇಂದಿಗೂ ಇರುವ ಸಂಪ್ರದಾಯದಲ್ಲಿ ಹುಡುಗ ಹುಡುಗಿ ಒಪ್ಪಿದರೂ ಕುಲ, ಗೋತ್ರಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುವುದು ಇಂದಿಗೂ ಉಳಿದು ಬಂದಿದೆ. ವಧು ವರರ ಕುಲ ಒಂದೇ ಆಗಿದ್ದರೆ ಆ ವಿವಾಹವು ನೆರವೇರುವುದಿಲ್ಲ. ಇವರಿಬ್ಬರ ಕುಲ ಬೇರೆ ಬೇರೆಯಾಗಿದ್ದಾಗ ಮಾತ್ರ ವಿವಾಹ ಸಂಬಂಧ ಏರ್ಪಡುತ್ತದೆ. ಕಬ್ಬಾಳು ಗ್ರಾಮದ ಪರಿಸರದಲ್ಲಿರುವ ಎಲ್ಲಾ ಸಮುದಾಯಗಳು ತಮ್ಮ ತಮ್ಮ ಜಾತಿ ಒಳಗೇ ವಿವಾಹವಾಗುವುದು ಸಾಮಾನ್ಯ ಸಂಗತಿಯಾಗಿದೆ. ಜಾತಿ, ಸಮುದಾಯಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ಅಂತರಜಾತಿ ವಿವಾಹಕ್ಕೆ ವಿರೋಧವಿದೆ. ಮುಂದೆ ಬದುಕಿ ಬಾಳಬೇಕಾದ ಹೆಣ್ಣು-ಗಂಡು ಸ್ಥಿರವಾಗಿ, ಶಾಶ್ವತವಾಗಿ ಜೊತೆಯಾಗಿರಲಿ ಎಂದು ವಿವಾಹ ಪದ್ಧತಿಯಲ್ಲಿ ಅವರ ಲಕ್ಷಣ, ಯೋಗ್ಯತೆ, ಅರ್ಹತೆ, ನಡತೆ, ಜಾತಿ, ಕುಲ ಮುಂತಾದವುಗಳನ್ನು ಪರಿಗಣಿಸುತ್ತಾರೆ. ಉತ್ತಮ ಚಾರಿತ್ರ್ಯ, ಒಳ್ಳೆಯ ಜ್ಞಾನ, ಆರೋಗ್ಯ, ಐಶ್ವರ್ಯವುಳ್ಳವನಿಗೆ ಕನ್ಯೆಯನ್ನು ಕೊಟ್ಟು ಹಾಗೆಯೇ ಉತ್ತಮ ನಡತೆ, ಸೌಂದರ್ಯ, ಒಳ್ಳೆಯ ಚಾರಿತ್ರ್ಯ, ಜನಬಾವಣಿಕೆಯನ್ನು ಉಳ್ಳ ವಧುವನ್ನು ಮನೆತುಂಬಿಸಿಕೊಳ್ಳಬೇಕೆಂಬುದು ಎಲ್ಲರ ಆಶಯವಾಗಿದೆ.

ಸಂಬಂಧಗಳು

ಹುಡುಗರು ಸೋದರತ್ತೆಯ ಮಗಳು, ಸೋದರ ಮಾವನ ಮಗಳು, ಅಕ್ಕನ ಮಗಳು, ಮಾವನ ಮಕ್ಕಳನ್ನು ಮದುವೆಯಾಗುವುದು ಸಾಮಾನ್ಯ. ಹುಡುಗಿಯು ಕೂಡ ಸೋದರತ್ತೆಯ ಮಗ, ಸೋದರಮಾವನ ಮಗ, ಅತ್ತೆಯ ಮಗ, ಮಾವನ ಮಗನನ್ನು ಮದುವೆಯಾಗುತ್ತಾರೆ. ಇದನ್ನು ವರಸೆ ಎಂದೂ ಕೂಡ ಕರೆಯಲಾಗುತ್ತದೆ. ತೋಟದ ಕಾಯಿ ತೋಟಕ್ಕೆ ಬೀಳಲಿ ಎಂಬ ಗಾದೆ ಮಾತಿನಂತೆ ನಮ್ಮ ಮನೆ ಮಗಳು ನಮ್ಮ ಮನೇಲೆ ಇರಲಿ ಎಂದು ಸಂಬಂಧಗಳಲ್ಲೇ ವಿವಾಹವಾಗುವ ಸಂದರ್ಭಗಳು ಅಲ್ಲಲ್ಲಿ ನಡೆಯುತ್ತವೆ. ಇದಲ್ಲದೆ ಹೊರಗಿನ ಸಂಬಂಧಗಳು ಕೂಡ ಬೆಳೆಯುವುದು ಇಂದಿನ ದಿನಮಾನಗಳಲ್ಲಿ ಬಹುಸಂಖ್ಯಾತವಾಗಿವೆ.

"ಅಕ್ಕನ ಮಕ್ಕಳು, ಮಾವನ ಮಕ್ಕಳನ್ನೇ ಮದುವೆಯಾಗಲು ನಮ್ಮ ಮನಸ್ಸು ಒಪ್ಪುವುದಿಲ್ಲ. ಏಕೆಂದರೆ ನಾವು ಚಿಕ್ಕಂದಿನಿಂದಲೂ ಜೊತೆಯಾಗಿ ಆಟ ಆಡಿ ಬೆಳೆದಿರುತ್ತೇವೆ. ಹಾಗಾಗಿ ಅವರನ್ನೇ ವರಿಸುವುದು ಇಷ್ಟವಾಗುವುದಿಲ್ಲ. ಮತ್ತು ಹೀಗೆ ಸಂಬಂಧದೊಳಗೆ ಮದುವೆಯಾಗುವುದರಿಂದ ನಮಗೆ ಹುಟ್ಟುವ ಮಕ್ಕಳು ಅಂಗವಿಕಲತೆಯಿಂದ ಹುಟ್ಟುವ ಮಕ್ಕಳಾಗುತ್ತವಂತೆ" ಎನ್ನುತ್ತಾರೆ (ಜಗದೀಶ್, ೩೦). ಹೀಗೆ ವಿವಾಹ ಸಂಬಂಧಗಳಲ್ಲಿ ಬದಲಾವಣೆಯಾಗುತ್ತಿರುವುದು ಎಲ್ಲಾ ಸಮುದಾಯ, ಜಾತಿಗಳಲ್ಲೂ ಇದೆ.

ಮನವಾಳುಕ್ತನ

ಮನೆಯಲ್ಲಿ ಗಂಡು ಮಕ್ಕಳಿಲ್ಲದೆ ಹೆಣ್ಣುಮಕ್ಕಳನ್ನೇ ಹೊಂದಿದ್ದರೆ ಮತ್ತು ಹೆಚ್ಚು ಆಸ್ತಿ ಹೊಂದಿದ್ದರೆ ಹೆಣ್ಣುಮಕ್ಕಳನ್ನು ಹೊರಗೆ ಕೊಡದೆ ಅವರನ್ನು ಮನೆಯಲ್ಲಿಯೆ ಉಳಿಸಿಕೊಳ್ಳಲು ಒಳ್ಳೆಯ ವರನನ್ನು ನೋಡಿ ಮದುವೆ ಮಾಡಿ, ನಮ್ಮ ಹೊಲ, ಮನೆ, ಆಸ್ತಿಯನ್ನೆಲ್ಲ ನೋಡಿಕೊಂಡು ಇರುವಂತೆ ಮಾಡುತ್ತಾರೆ. ಅಂದರೆ ಮನೆ ಅಳಿಯನನ್ನಾಗಿ ಮಾಡಿಕೊಳ್ಳುವುದು ಅಂದರೆ ವಧುವನ್ನು ಮನೆಗೆ ತರುವಂತೆ ವರನನ್ನು ಮನೆಯಲ್ಲಿಟ್ಟುಕೊಳ್ಳುವುದು.

ಹೆಣ್ಣು ನೋಡುವುದು

ಮದುವೆಗೆ ಮುಖ್ಯವಾಗಿ ಬೇಕಾಗಿರುವುದು ಹೆಣ್ಣು ಮತ್ತು ಗಂಡು. ಇದು ಮದುವೆಯ ಪ್ರಾರಂಭದ ಮೊದಲ ಹೆಜ್ಜೆ. ಮದುವೆ ಎಂಬುದು ಜನುಮ ಜನುಮದ ಋಣಾನುಂಬಧ, ಗಂಡು ಹೆಣ್ಣಿನ ಪವಿತ್ರ ಸಂಬಂಧವಾಗಿದೆ. ಎಲ್ಲೋಹುಟ್ಟಿದ ಗಂಡು ಮತ್ತೆಲ್ಲೋ ಹುಟ್ಟಿದ ಹೆಣ್ಣು ಆಕಸ್ಮಿಕ ಬೇಟಿಯಾಗಿ ಪರಿಚಯವುಂಟಾಗಿ ಮದುವೆಯ ಪವಿತ್ರ ಬಂಧನಕ್ಕೊಳಗಾಗುವುದನ್ನು ಜನುಮ ಜನುಮದ ಅನುಬಂಧವೇ ಸರಿ. ಒಂದು ಹೆಣ್ಣು ತರುವುದು ಅಷ್ಟೊಂದು ಸುಲಭವಾಗಿರಲಿಲ್ಲ. 'ಒಂದು ಒಳ್ಳೆ ಹೆಣ್ಣು ನೋಡಿ ಹೆಣ್ಣು ತರಲು ಏಳು ಜೊತೆ ಎಕ್ಕಡ ಸವೀತಿದ್ದೋ' ಎಂಬ ಮಾತು ಅವರು ಹೆಣ್ಣಿಗಾಗಿ ಹುಡುಕಾಟ ಮಾಡುವುದನ್ನು ಒತ್ತಿ ಹೇಳುತ್ತದೆ. 'ಬೆಟ್ಟದ ಸಾಲ್ನಲ್ಲಿ ದನ ತರಬೇಕು ತುಂಬಿದ ಮನೇಲಿ ಹೆಣ್ಣು ತರ್ಬೇಕು' ಎಂಬ ಮಾತುಗಳು ಹೆಣ್ಣಿಗಿದ್ದ ಗುಣ ಶ್ರೇಷ್ಠತೆಯನ್ನು ತಿಳಿಸುತ್ತವೆ. ಹೆಣ್ಣು ನೋಡಲು ಏಳುಜನ, ಒಂಬತ್ತು ಜನ ಹೀಗೆ ಬೆಸಸಂಖ್ಯೆಯಲ್ಲಿ ಹೋಗುತ್ತಾರೆ. ಮೊದಲು ನೇರವಾಗಿ ಹುಡುಗಿ ಮನೆಗೆ ಹೋಗದೆ ಬೇರೆಯವರ ಮುಖಾಂತರ ಅಕ್ಕಪಕ್ಕದವರನ್ನು ಕೇಳಿ ತಿಳಿದು ಹುಡುಗಿಯನ್ನು ನೋಡುತ್ತಾರೆ. ಅವರ ತಂದೆ-ತಾಯಿ ಮನೆತನ ಎಲ್ಲವನ್ನು ತಿಳಿದುಕೊಂಡು ಹೆಣ್ಣನ್ನು ನೋಡುತ್ತಾರೆ. ಹೆಣ್ಣು ಒಪ್ಪಿಗೆಯಾದರೆ ನಂತರ ಮಾತುಕತೆಗೆ ಕುಳಿತುಕೊಳ್ಳುತ್ತಾರೆ.

ಹೆಸರು ಬಲ

ವಿವಾಹಕ್ಕೆ ಮೊದಲು ಹುಡುಗ ಹುಡುಗಿ ಒಪ್ಪಿದ ಮೇಲೆ ಮನೆಯವರೆಲ್ಲ ಒಪ್ಪಿದ ನಂತರ ಎರಡೂ ಕಡೆಯ ಹಿರಿಯರು ಕೂಡಿ ಜೋತಿಷಿ ಹತ್ತಿರ ಹೋಗಿ ಹುಡುಗ ಹುಡುಗಿಯರ ಹೆಸರು ಸರಿಯಾಗಿ ಹೊಂದಾಣಿಕೆಯಾಗುತ್ತದೆಯೆ, ಗ್ರಹಗತಿಗಳು ಚೆನ್ನಾಗಿವೆಯೇ ಇತ್ಯಾದಿ ನೋಡಿ ಸರಿಹೊಂದಿದರೆ ಮುಂದಿನ ಕಾರ್ಯಕ್ರಮ ಹಮ್ಮಿಕೊಳ್ಳುತ್ತಾರೆ. ಒಂದು ವೇಳೆ ಸರಿಬರದಿದ್ದರೆ ಈ ಸಂಬಂಧವನ್ನು ನಿಲ್ಲಿಸಿ ಬೇರೆ ಸಂಬಂಧಗಳ ಹುಡುಕಾಟ ಮಾಡಿ, ಎಲ್ಲಾ ರೀತಿಯಲ್ಲಿ ಸರಿಯಾಗಿ ಹೊಂದಾಣಿಕೆ ಇದ್ದು, ಹೆಸರು ಬಲ ಸರಿಹೊಂದಿದರೆ ಮದುವೆ ನಿಶ್ಚಯಿಸುತ್ತಾರೆ.

ಮಾತುಕತೆ ಅಥವಾ ಒಪ್ಪಿಳ್ಯ

ಹೆಸರು ಬಲದ ನಂತರ ಹೆಸರುಬಲ ಸರಿಯಾಗಿ ಬಂದರೆ ಹುಡುಗ ಮತ್ತು ಹುಡುಗಿಯ ಕಡೆಯ ಹಿರಿಯರು ತಂದೆ ತಾಯಿಗಳು ಮತ್ತು ಹತ್ತಿರದ ಸಂಬಂಧಿಕರು ಸೇರಿ ಮದುವೆಯ ಸಂಬಂಧ ಮಾತುಕತೆಗೆ ಕೂರುತ್ತಾರೆ. ವರದಕ್ಷಿಣೆ ವರೋಪಚಾರಕ್ಕೆ ಸಂಬಂಧಿಸಿದಂತೆ ಕೊಡುವುದು ಪಡೆಯುವುದು ಎಲ್ಲ ಒಪ್ಪಿಗೆಯಾದ

ಮೇಲೆ ವೀಳ್ಯದ ಎಲೆಯನ್ನು ಅದಲು ಬದಲು ಮಾಡಿಕೊಳ್ಳುತ್ತಾರೆ. ಇದನ್ನೇ ಒಪ್ಪಿಳ್ಯ ಎಂದುಕರೆಯಲಾಗುತ್ತದೆ. ಇದು ಹುಡುಗ ಮತ್ತು ಹುಡುಗಿಯ ಇಬ್ಬರ ಕಡೆಯು ಒಪ್ಪಿತವಾಗಿ ಸಮ್ಮತಿ ಸೂಚಿಸಿದಂತೆಯೇ ಸರಿ.

ವೀಳ್ಯದಶಾಸ್ತ್ರ (ಎಂಗೇಜ್‌ಮೆಂಟ್) ಅಥವಾ ನಿಶ್ಚಿತಾರ್ಥ

ವೀಳ್ಯದ ಶಾಸ್ತ್ರವು ಮದುವೆಗೆ ಮುಂಚೆ ನಡೆಯುವ ಶಾಸ್ತ್ರವಾಗಿದೆ. ಇತ್ತೀಚಿನ ಪರಿಭಾಷೆಯಲ್ಲಿ ಇಂಗ್ಲೀಷ್‌ನ ಎಂಗೇಜ್‌ಮೆಂಟ್ ಎಂಬ ಶಬ್ದ ಹೆಚ್ಚು ಬಳಕೆಯಲ್ಲಿದೆ. ಇಲ್ಲಿ ಅನಕ್ಷರಸ್ಥರೂ ಕೂಡ ಈ ಶಬ್ದವನ್ನು ಬಳಸುವುದು ಸರ್ವೇಸಾಮಾನ್ಯವಾಗಿದೆ. ಸಾಮಾನ್ಯವಾಗಿ ವೀಳ್ಯದ ಶಾಸ್ತ್ರವು ವಧುವಿನ ಮನೆಯಲ್ಲಿ ನಡೆಯುತ್ತದೆ. ಹುಡುಗನ ಕಡೆಯವರು ಹುಡುಗಿಯ ಮನೆಗೆ ಬಂದು ಗುರು ಹಿರಿಯರು ಸಂಬಂಧಿಕರು ಊರಿನ ಹಿರಿಯರು ಬಂದು ಈ ಶಾಸ್ತ್ರದಲ್ಲಿ ಪಾಲ್ಗೊಳ್ಳುತ್ತಾರೆ. ಈ ಶಾಸ್ತ್ರವು ಮುಗಿದರೆ ಮದುವೆ ನಿಶ್ಚಯ ಆದ ಹಾಗೆಯೇ. ಈ ವೀಳ್ಯದ ಶಾಸ್ತ್ರ ಅಥವಾ ನಿಶ್ಚಿತಾರ್ಥ ಮುಗಿಸಿದ ನಂತರ ಯಾವುದೇ ಸಂಬಂಧಗಳು ಮುರಿದು ಬಿದ್ದ ಉದಾಹರಣೆಗಳಿಲ್ಲ.

ಈ ಶಾಸ್ತ್ರವನ್ನು ಮದುವೆಗೆ ಮೂರು ತಿಂಗಳು ಮೊದಲೇ ನಡೆಯುತ್ತಿದ್ದುದು ಇತ್ತೀಚಿನ ದಿನಮಾನಗಳಲ್ಲಿ ಮದುವೆ ದಿನದ ಹಿಂದಿನ ರಾತ್ರಿ ಹೆಚ್ಚಾಗಿ ನಡೆಯುತ್ತವೆ. ಕಾರಣ ಸಮಯದ ಉಳಿತಾಯ ಮತ್ತು ಹಣದ ಉಳಿತಾಯ ಎರಡೂ ದೃಷ್ಟಿಯಲ್ಲಿಟ್ಟುಕೊಂಡು ಹೀಗೆ ಮಾಡುತ್ತಾರೆ.

ಮದುವೆಗೂ ಮೊದಲು ಮಾಡುವ ಈ ಶಾಸ್ತ್ರಕ್ಕೆ ಗಂಡಿನ ಕಡೆಯವರು ಮತ್ತು ಹೆಣ್ಣಿನ ಕಡೆಯವರು ಒಬ್ಬರಿಗೊಬ್ಬರು ಒಪ್ಪಿಗೆಯಾದ ಮೇಲೆ ಅವರವರ ಕುಲದವರನ್ನೆಲ್ಲ ಕರೆಸಿ ಇಳೇವು ತಿದ್ದುವುದರ ಮೂಲಕ ಇವರಿಬ್ಬರ ಕುಲವನ್ನು ಕೂಡಿಸುವುದು ಈ ಶಾಸ್ತ್ರದ ಮುಖ್ಯಘಟ್ಟ. ವಿಳ್ಯೇವು ತಿದ್ದುವಾಗ ಹೊಲೇರ ಹೊನ್ನಯ್ಯ, ಕುಂಬಾರ ಗುಂಡಯ್ಯ, ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ ಈ ಎಲ್ಲರೂ ಬರುತ್ತಾರೆ ಎಂಬುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ.

ಹೊನ್ನಯ್ಯ ಬರುವಾಗ ಸಣ್ಣ ಮಲ್ಲಿಗೆ ಸರ
ಹೊನ್ನಯ್ಯ ಇಳ್ಯಾಕೆ ಬರುವಾಗ | ಈ ಮನೆಗೆ
ಸಣ್ಣಮಲ್ಲೀಗೆ ವನಮಾಲೆ
ಸಣ್ಣ ಮಲ್ಲೀಗೆ ವನ ಮಾಲೆ | ಹಾಕಂಡು
ಹೊನ್ನಯ್ಯ ಇಳ್ಯಾಕೆ ಬರುತ್ತಾರೆ.

ಗುಂಡಯ್ಯ ಬರುವಾಗ ದುಂಡುಮಲ್ಲಿಗೆ ಸರ
ಗುಂಡಯ್ಯ ಇಳ್ಯಾಕೆ ಬರುವಾಗ | ಈ ಮನೆಗೆ
ದುಂಡು ಮಲ್ಲಿಗೆ ವನಮಾಲೆ
ದುಂಡುಮಲ್ಲಿಗೆ ವನಮಾಲೆ | ಹಾಕಂಡು
ಗುಂಡಯ್ಯ ಇಳ್ಯಾಕೆ ಬರುತಾರೆ.

ಹೀಗೆ ಎಲ್ಲಾ ಸಮುದಾಯದ ಮುಖ್ಯಸ್ಥರುಗಳು ಬಂದು ವೀಳ್ಯೇವು ತಿದ್ದಿ ಎರಡು ಕುಲವನ್ನು ಒಂದು ಮಾಡುತ್ತಿದ್ದರು. ಈ ಪ್ರಕಾರವಾಗಿಯೇ ಇಂದಿಗೂ ವೀಳ್ಯೆ ತಿದ್ದುವಾಗ ಊರಿನ ಯಜಮಾನರುಗಳು ಗಂಡು

ಮತ್ತು ಹೆಣ್ಣಿನ ಎರಡೂ ಕಡೆಯ ಊರಿನ ಯಜಮಾನರುಗಳು ಖಡ್ಡಾಯವಾಗಿ ಭಾಗವಹಿಸುವುದು ಇಂದಿಗೂ ಉಳಿದು ಬಂದಿದೆ.

ಮೂರು ಕರಿಯ ಕಂಬಳಿ ಮೂರು ಬಿಳಿಯ ಕಂಬಳಿ
ಕುರುಬುಗೌಡಗೇದ ರತ್ನಗಂಬಳಿ | ಮ್ಯಾಲೆ
ಬಂದುಕುಂತವರೆ ಕುಲದೋರು
ಬಂದು ಕುಂತವರೆ ಕುಲದೋರ ಹಣೆಯ ಮ್ಯಾಲೆ
ಗಂಧ ತಳ ತಳನೆ ಹೊಳೆದಾವೋ
ನನ್ನ ಕುಲದೋರು ಆನೆದಿಂಬಾದೋರು
ಮಾಲಿಂಗಿ ಸೀಮೆ ಮಣೆ ಮ್ಯಾಲೆ | ಕೂತುಕೊಂಡು
ನೂರೊಂದು ಅಸೆಯ ಬರೆದಾರೋ

ಊರಿನ ಮುಖ್ಯಸ್ಥರ ಕುಲದೋರ ಹಣೆಯಮ್ಯಾಲೆ ಗಂಧ ಹೊಳೆಯುತ್ತದೆ. ಎದೆಯ ಮ್ಯಾಲೆ ಲಿಂಗ ಹೊಳೆಯುತ್ತವೆ. ಇವರ ಸಮ್ಮುಖದಲ್ಲಿ ಗಂಡು ಮತ್ತು ಹೆಣ್ಣಿನ ಎರಡೂ ಕಡೆಯವರು ಒಪ್ಪಿ ಒಪ್ಪಿಳ್ಯವನ್ನು ಅದಲು ಬದುಲು ಮಾಡಿಕೊಳ್ಳುತ್ತಾರೆ. ಹೀಗೆ ವೀಳ್ಯವನ್ನು ಅದುಲು ಬದಲು ಮಾಡಿಕೊಂಡರೆ ಮುಗಿಯಿತು. ಅರ್ಧಭಾಗದ ಮದುವೆ ಮುಗಿದಹಾಗೆ. ಆ ಹೆಣ್ಣನ್ನು ಬೇರೆಯಾರೂ ಹೆಣ್ಣು ನೋಡುವುದಕ್ಕೆ ಬರುವುದಿಲ್ಲ. ಒಪ್ಪಂದ ಆದಮೇಲೆ ಆ ಹೆಣ್ಣನ್ನು ಯಾವುದೇ ಕಾರಣಕ್ಕೂ ಬಿಡುವಂತಿಲ್ಲ. 'ಒಂದು ಹೆಣ್ಣನ್ನು ತರಬಹುದೇ ಹೊರತು ತಂದಂತಹ ಹೆಣ್ಣನ್ನು ಬುಡುಕೆ ಆಗೊಲ್ಲ' ಎನ್ನುತ್ತಾರೆ ಗೌರಮ್ಮ. (ವಕ್ತೃ)

ಎಲ್ಲಾ ಕುಲದವರು ಸೇರಿ ಊರಿನ ಮುಖ್ಯಸ್ಥರ ಎದುರಿಗೆ ಒಪ್ಪಿಳ್ಯೆವನ್ನು ಬದಲಾಯಿಸಿಕೊಂಡ ಮೇಲೆ ಅವರ ಕುಲ ಒಂದಾದಂತೆಯೇ ಸರಿ. ಆ ಕಾರಣದಿಂದಲೇ ಎರಡೂ ಕಡೆಯ ಊರಿನ ಯಜಮಾನರ ಸಮ್ಮುಖದಲ್ಲಿ ಒಪ್ಪಿಳ್ಯವನ್ನು ಬದಲಾಯಿಸಿಕೊಳ್ಳುವುದು. ಜನಪದರು ಸಮಾಜದ ನಡುವೆ ಬದುಕಿ ಬಾಳುವುದರಿಂದ ಅವರ ಮನ್ನಣೆಗೆ ಎಲ್ಲರೂ ಮಣಿಯಬೇಕು. ಯಜಮಾನರ ಮಾತು ಮೀರಿ ಯಾರು ನಡೆಯುವುದಿಲ್ಲ. ಈ ಸಂಪ್ರದಾಯ ಈ ಪ್ರದೇಶದಲ್ಲಿ ಇಂದಿಗೂ ಉಳಿದುಕೊಂಡು ಬಂದಿದೆ.

ವೀಳ್ಯದ ಶಾಸ್ತ್ರ ಹೆಣ್ಣಿನ ಮನೆಯಲ್ಲಿ ನಡೆಯುವುದು ಸಂಪ್ರದಾಯ. ಗಂಡಿನ ಕಡೆಯವರು ಹೆಣ್ಣಿನ ಮನೆಗೆ ವೀಳ್ಯಶಾಸ್ತ್ರಕ್ಕೆ ಬೇಕಾದ ಎಲ್ಲಾ ವಸ್ತುಗಳನ್ನು ಕೊಂಡೊಯ್ಯಬೇಕು. ಕಳಸ, ಕನ್ನಡಿ, ವಿಭೂತಿಗಟ್ಟಿ, ಹೆಣ್ಣಿಗೆ ಸೀರೆ, ಬಳೆ, ಅರಿಸಿನ, ಕುಂಕುಮ, ಹೂವು, ಎಲ್ಲಾ ತರಹದ ಹಣ್ಣುಗಳು, ಬಾಳೆಗೊನೆ, ಒಂಬತ್ತಚ್ಚು ಬೆಲ್ಲ, ಕೊಬ್ಬರಿ, ನೀರುಗಾಯಿ, ಎಲೆ, ಅಡಿಕೆ, ಕಡ್ಲೆ, ಕಡ್ಲೆಪುರಿ ಮುಂತಾದ ಎಲ್ಲವನ್ನು ತರುತ್ತಾರೆ. ಏಕೆಂದರೆ ಹೆಣ್ಣನ್ನು ನಮ್ಮ ಕಡೆ ಮಾಡಿಕೊಳ್ಳುವುದಕ್ಕೆ ಎಲ್ಲವನ್ನು ಕೊಂಡೊಯ್ದು ಶಾಸ್ತ್ರ ಮಾಡಿ ಹೆಣ್ಣನ್ನು ಒಪ್ಪಂದ ಮಾಡಿಕೊಳ್ಳುತ್ತಾರೆ.

ಒಂಬತ್ತು ಜನ ಮುತ್ತೈದೆಯರ ಕೈಯಲ್ಲಿ ಹೆಣ್ಣಿಗೆ ಅರಿಸಿನ ಕುಂಕುಮ ಇಕ್ಕಿಸಿ, ಗಂಡೋರು ತರುವ ವಸ್ತುಗಳನ್ನು ಹೆಣ್ಣಿಗೆ ಮೊಡ್ಲು ತುಂಬಿ ಶಾಸ್ತ್ರಮಾಡಿ ಹೆಣ್ಣಿನ ಕೈಲಿ ಕಳಸ ಕನ್ನಡಿ ಇಟ್ಟಿರುವ ತಟ್ಟೆಯನ್ನು

ಕೊಟ್ಟು ಮನೆಗೆ ಕರೆದೊಯ್ಯುತ್ತಾರೆ. ಇದಾದ ನಂತರ ಹೆಣ್ಣು ಗಂಡಿಗೆ ಮೀಸಲು ಎಂದೇ ಅರ್ಥ. ನಂತರ ತಂದಿರುವ ಎಲೆ ಅಡಿಕೆಯನ್ನು ಊರಿನ ಪ್ರತಿಯೊಂದು ಮನೆಗೂ ತಪ್ಪದೇ ನೀಡಬೇಕು. ಒಂದು ವೇಳೆ ಕೊಡದಿದ್ದ ಪಕ್ಷದಲ್ಲಿ ನ್ಯಾಯ ಪಂಚಾಯ್ತಿ ಮಾಡಿಸುವುದು ಇದೆ. ಒಂದು ಊರು ಅಂದ ಮೇಲೆ ಅದರ ಸಮುದಾಯದ ಪ್ರತಿಯೊಂದು ಮನೆಗೂ ವೀಳ್ಯವನ್ನು ನೀಡಬೇಕು. ಒಂದು ವೇಳೆ ಆ ಮನೆಯವರು ಇಲ್ಲ ಅಂದರೆ ಪಕ್ಕದ ಮನೆಯವರ ಕೈಗೆ ಹೇಳಿ ನೀಡಬೇಕು. ಇಲ್ಲವಾದರೆ ಅವರು ಬಂದ ಮೇಲೆ ಹೋಗಿ ತಲುಪಿಸಬೇಕು. ಯಾವುದೇ ಮನೆಯವರಿಗೆ ಕೊಡಲಿಲ್ಲವೆಂದಾಗ ಅವರು ಊರಿನ ಕುಳ ಅಲ್ಲವೆಂದೇ ಅರ್ಥ. ಆದಕಾರಣ ಪ್ರತಿಯೊಂದು ಮನೆಗೂ ತಲುಪಿಸುವುದು ಕಡ್ಡಾಯವಾಗಿದೆ. ಹಾಗೆಯೇ ಪ್ರತಿಮನೆಯವರು ಅದನ್ನು ಪಡೆದುಕೊಳ್ಳಬೇಕು, ನಿರಾಕರಿಸುವಂತಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಮದುವೆಗಳನ್ನು ಸಮುದಾಯ ಭವನ, ಛತ್ರಗಳಲ್ಲಿ ಮಾಡುವುದರಿಂದ ವೀಳ್ಯಶಾಸ್ತ್ರವನ್ನು ಮದುವೆಯ ಹಿಂದಿನ ದಿನದ ರಾತ್ರಿ ಮಾಡುತ್ತಾರೆ. ಆ ಕಾರಣದಿಂದ ಮನೆ ಮನೆಗೆ ವೀಳ್ಯ ಕೊಡುವ ಸಂಪ್ರದಾಯ ಕಡಿಮೆಯಾಗುತ್ತಿದೆ.

ಲಗ್ನ ಕಟ್ಟಿಸುವುದು

ಮದುವೆ ಒಂದು ವಾರ ಇದೆ ಎನ್ನುವ ಹಾಗೆ ಲಗ್ನಕಟ್ಟಿಸುತ್ತಾರೆ. ಲಗ್ನ ಕಟ್ಟಿಸಿದ ಮೇಲೆ ಹೆಣ್ಣೇ ಆಗಲಿ ಅಥವಾ ಅವರ ಮನೆಯವರೇ ಆಗಲಿ ಯಾರೂ ಮಾಂಸಾಹಾರ ಸೇವನೆ ಮಾಡುವಂತಿಲ್ಲ. ಅಂಟು ಮುಟ್ಟು ಮಾಡುವಂತಿಲ್ಲ. ಎಲ್ಲವೂ ಶುದ್ಧವಾಗಿಯೇ ನಡೆಯಬೇಕು.

ನೀರುಯ್ಯುವ ಶಾಸ್ತ್ರ

ಮದುವೆ ಇನ್ನು ಎಂಟು-ಹತ್ತು ದಿನಗಳು ಬಾಕಿ ಉಳಿದಿವೆ ಅನ್ನುವಾಗಲೇ ನೀರುಯ್ಯುವಶಾಸ್ತ್ರ ಪ್ರಾರಂಭವಾಗುತ್ತದೆ. ಮದುವೆಗಂಡು ಮತ್ತು ಹೆಣ್ಣುಗಳಿಗೆ ಮದುವೆ ಸಂದರ್ಭದಲ್ಲಿ ಮಾಡುವ ಮುಖ್ಯಶಾಸ್ತ್ರಗಳಲ್ಲಿ ಇದೂ ಒಂದಾಗಿದೆ. ನೀರುಯ್ಯುವ ಶಾಸ್ತ್ರದ ಮುಕಾಂತರ ಹೆಣ್ಣು ಗಂಡುಗಳನ್ನು ದೈಹಿಕವಾಗಿ ಸದ್ದಗೊಳಿಸುವ ಕಾರ್ಯ ಇದಾಗಿದೆ. ಈ ಶಾಸ್ತ್ರದಿಂದ ಹೆಣ್ಣು ಗಂಡುಗಳ ಸೌಂದರ್ಯವೂ ಹೆಚ್ಚುತ್ತದೆ.

ಹಿಂದೆ ನೀರುಯ್ಯುವ ಶಾಸ್ತ್ರವನ್ನು ಒಂಬತ್ತು ದಿನ, ಏಳುದಿನ, ಐದು ದಿನಗಳಿಂದ ಪ್ರಾರಂಭಮಾಡುತ್ತಿದ್ದರು. ಆದರೆ ಇಂದು ಮೂರು ದಿನ ಇಲ್ಲವೇ ಕೆಲವರು ಒಂದೇ ದಿನಕ್ಕೆ ಈ ಶಾಸ್ತ್ರ ಮಾಡುತ್ತಾರೆ. ನೀರುಯ್ಯುವ ಶಾಸ್ತ್ರದಲ್ಲಿ ಹರಿಸಿನ ಎಣ್ಣೆ ಸ್ನಾನಮಾಡಿಸುತ್ತಾರೆ. ಹರಿಸಿನ ವತ್ತು ಕೈಎಣ್ಣೆ (ಹರಳೆಣ್ಣೆ)ಯನ್ನು ಮೈಗೆಲ್ಲಾ ಹಚ್ಚಿ ಸ್ನಾನಮಾಡಿಸುತ್ತಾರೆ. ಹರಿಸಿನ ಮತ್ತು ಎಣ್ಣೆಯಿಂದ ಚರ್ಮದ ಕಾಂತಿ ಹೆಚ್ಚಾಗುತ್ತದೆ. ಮತ್ತು ಸೀಗೆಕಾಯಿಯಿಂದ ಎಣ್ಣೆಯ ಜಿಡ್ಡು ಹಸನಾಗುತ್ತದೆ. [೧]

ನೀರುಯ್ಯುವ ಶಾಸ್ತ್ರದಲ್ಲೂ ಮುತ್ತೈದೆಯರು ಬಂದು ಸ್ನಾನಮಾಡಿಸುತ್ತಾರೆ. ಏಳು ಜನ, ಐದು ಜನ ಮುತ್ತೈದೆಯರು ಒಂದು ತಟ್ಟೆಯಲ್ಲಿ ಹರಿಸಿನ, ಒಂದು ತಟ್ಟೆಯಲ್ಲಿ ಹರಳೆಣ್ಣೆ, ಒಂದು ತಟ್ಟೆಯಲ್ಲಿ ಸೀಗೆಕಾಯಿ ಪುಡಿ, ಮತ್ತೊಂದು ತಟ್ಟೆಯಲ್ಲಿ ಕಳಸ, ಕನ್ನಡಿ, ವಿಭೂತಿಗಟ್ಟಿ, ಅಕ್ಕಿ, ಮತ್ತೊಂದು ತಟ್ಟೆಯಲ್ಲಿ ಎಲೆ, ಅಡಿಕೆ ಇವು ಮುಖ್ಯವಾಗಿ ಈ ಶಾಸ್ತ್ರಕ್ಕೆ ಬೇಕೇ ಬೇಕು. ನೀರುಯ್ಯುವಾಗ ಸೋಬಾನೆ ಪದ ಹಾಡುತ್ತಾ ನೀರುಯ್ಯುತ್ತಾರೆ.

ಹರಿಸಿನಾ ಇಕ್ಕೂರ ಹಸನಾಗಿ ಇಕ್ಕೀರಿ
ಹಸನಾದ ಕಡಗ ನಿಮ್ಮ ಕೈಲಿ
ಹಸನಾದ ಕಡಗ ನಿಮ್ಮ ಕೈಲಿ ಅಕ್ಕಾದಿರಾ
ಹಸನಾಗಿ ಬರಲಿ ಊಗಾರೆಣ್ಣೆ

ಎಣ್ಣೆ ಇಕ್ಕೂರ ಚೆನ್ನಾಗಿ ಇಕ್ಕೀರಿ
ಚಿನ್ನಾದ ಕಡಗ ನಿಮ್ಮ ಕೈಲೀ
ಚಿನ್ನಾದ ಕಡಗ ನಿಮ್ಮ ಕೈಲಿ ಅಕ್ಕಾದೀರಾ
ಚೆನ್ನಾಗಿ ಬರಲಿ ಊಗಾರೆಣ್ಣೆ

ನೀರುಯ್ಯುವ ಶಾಸ್ತ್ರದಲ್ಲಿ ಮದುವೆ ಗಂಡು ಹೆಣ್ಣಿಗೆ ಹಸಿರಿನ ಮತ್ತು ಎಣ್ಣೆ ಎಷ್ಟು ಮುಖ್ಯ ಎಂಬುದು ತಿಳಿಯುತ್ತದೆ. ಎಣ್ಣೆ ಹರಿಸಿನ ಹಚ್ಚುವವರ ಕೈಲಿರುವ ಕಡಗ ಅವರ ಮುತ್ತೈದೆತನವನ್ನು ಹೇಳುತ್ತದೆ.

ಇಂದು ನಮ್ಮಲ್ಲಿ ಕಂದನಿಗುಯ್ದಾ ನೀರು
ಅಂಗಾಲ ದಾಟಿ ಹೊಳೆದಾಟಿ
ಅಂಗಾಲ ದಾಟಿ ಹೊಳೆದಾಟಿ ಸಮುದ್ರವಾ
ನಿಂಬೀ ವಾಲಾಡಿ ಬೆಳೆದಾವೋ...

ನಾಳೇ ನಮ್ಮಲ್ಲಿ ಬಾಲನಿಗುಯ್ದು ನೀರೂ
ಬಾಕಾಲ ದಾಟಿ ಹೊಳೆದಾಟೀ...
ಬಾಕಾಲ ದಾಟಿ ಹೊಳೆದಾಟೀ ಸಮುದ್ರವಾ
ಬಾಳೆ ವಾಲಾಡಿ ಬೆಳೆದಾವೋ...

ಮದುಮಕ್ಕಳಿಗೆ ಹುಯ್ದ ಹರಿಸಿನ ನೀರು ಮನೆ ಬಾಕಲನ್ನು ದಾಟಿ ತಮ್ಮ ಹಿತ್ತಲಲ್ಲಿದ್ದ ನಿಂಬೆ, ಬಾಳೆ, ಗಂಧ ಹುಲುಸಾಗಿ ಬೆಳೆದು ವಾಲಾಡುತ್ತಿದ್ದವು. ನೀರು ಹುಯ್ದು ಮುಗಿದ ಮೇಲೆ ಹೊಸ ಬಟ್ಟೆ ಧರಿಸಿ ಹಸೆಮಣೆ ಮೇಲೆ ನಿಲ್ಲಿಸಿ ವಿಭೂತಿ ತಿಲಕ ಇಟ್ಟು ಅಕ್ಕಿ ಇಡಿಯುತ್ತಾರೆ. ನಂತರ ಸಿಹಿಯಾದ ಓಳಿಗೆ ಊಟ ಉಣಬಡಿಸುತ್ತಾರೆ.

ಊರಿನಲ್ಲಿ ಗಂಡು ಹೆಣ್ಣಿನ ಸಂಬಂಧಿಕರು ಪ್ರತಿದಿನ ಒಬ್ಬೊಬ್ಬರು ಒಂದೊಂದು ಮನೆಗೆ ಮದುಮಕ್ಕಳನ್ನು ಕರೆದೊಯ್ದು ಎಣ್ಣೆಸ್ನಾನ ಮಾಡಿಸಿ ಸಿಹಿಊಟ ಬಡಿಸುತ್ತಾರೆ. ಮದುಮಕ್ಕಳು ಬಡವಾಗಿದ್ದರೂ ಹರಿಸಿನ ನೀರು ಮೈಮೇಲೆ ಬಿದ್ದರೆ ಮೈತುಂಬಿಕೊಳ್ಳುತ್ತಾರೆ. "ರಾಚಕ್ಕ ಮಗ್ಳು ಮದ್ವೆ ಎಷ್ಟಿ ದಿನ ಇದ್ದದು ಮಗ್ಳು ಯಾಕೆ ಸೊರಗ್ಬುಟ್ಟದೆ ಎನ್ನುವ ಗೌರಮ್ಮನ ಮಾತಿಗೆ ಹರಿಸಿನ ನೀರ್ ಇನ್ನೂ ಹುಯ್ದಿಲ್ಲ ಕಣವ್ವ ಹೂದಿದಿದ್ರೆ ಎಲ್ಲಿ ಇವುಳ್ನ ಹೊರಾಕೆ ಕರ್ಕಬತ್ತಿದ್ದೋ, ಇವುಳ್ಗೆ ವಸಿ ಹುಸಾರ್ ತಪ್ಪುಟ್ಟು ಇಂಗಾಗವ್ಳೆ ಮದ್ವೆ ಎಂಟು ದಿನಾ ಅಂತಾನೇ ಹರಿಸಿನದ್ ನೀರಾಕ್ತೀವಿ ಆಮೇಲೆ ಮನೇಲೆ ಇರ್ತಾಳಲ್ಲ ಸರೋಯ್ತಾಳೆ" ಎನ್ನುತ್ತಾರೆ(ರಾಚಕ್ಕ). ಈ ನೀರುಯ್ಯುವ ಶಾಸ್ತ್ರದ ಮೂಲಕ ಮದುಮಕ್ಕಳನ್ನು ಮದುವೆಗೆ ಸಿದ್ಧಗೊಳಿಸುತ್ತಾರೆ.

ವಿವಾಹದ ಕಾಲ ಮತ್ತು ಮುಹೂರ್ತ

ಹಿಂದೆ ವಿವಾಹವು ಆರು, ಏಳು ದಿನಗಳ ಕಾಲ ನಡೆಯುತ್ತಿತ್ತು. ಇಂದು ಕಾಲ ಬದಲಾಗಿ ಎರಡು ದಿನಗಳಿಗೆ ಬಂದಿದೆ. ಕೆಲವು ಒಂದೇ ದಿನದಲ್ಲಿ ಮುಕ್ತಾಯವಾಗುವ ವಿವಾಹಗಳೂ ಇವೆ. ಇಲ್ಲಿ ಸಾಮಾನ್ಯವಾಗಿ ಎಲ್ಲಾ ಮದುವೆಗಳು ಎರಡು ದಿನಗಳು ನಡೆಯುವುದು ಸಾಮಾನ್ಯವಾಗಿದೆ. ಮೊದಲನೆಯ ದಿನ ಚಪ್ಪರ, ಎರಡನೆಯ ದಿನ ಧಾರೆಮೂಹೂರ್ತ.

ಚಪ್ಪರ

ಮದುವೆ ಅಂದರೆ ಗಂಡಿನ ಕಡೆಯವರು ಅಥವಾ ಹೆಣ್ಣಿನ ಕಡೆಯವರು ಯಾರೇ ಮಾಡಿದರು ಮದುವೆ ಮನೆ ಮುಂದೆ ದೊಡ್ಡದಾದ ಚಪ್ಪರ ಹಾಕಲಾಗುತ್ತದೆ. ಚಪ್ಪರ ಹಾಕುವಾಗಲು ಶಾಸ್ತ್ರ ಸಮಯ ಮುಖ್ಯವಾಗುತ್ತದೆ. ಒಳ್ಳೆಯ ಕಾಲ ನೋಡಿ ಚಪ್ಪರದ ಕೊನೆಗಳನ್ನು ನೆಡುತ್ತಾರೆ. ನೆಡುವಾಗ ಚಪ್ಪರದ ಕೊನೆಗೆ ಪೂಜೆ ಮಾಡಿ ನೆಡುತ್ತಾರೆ. ಚಪ್ಪರವನ್ನು ಹಾಕುವಾಗ ಎಷ್ಟು ಕಂಬದ ಚಪ್ಪರ ಹಾಕಬೇಕು ಎಂಬ ನೀತಿ ನಿಯಮಗಳಿವೆ. ಅದರ ಆಧಾರದಲ್ಲಿಯೇ ಚಪ್ಪರ ಹಾಕುತ್ತಾರೆ. ಇಡೀ ಚಪ್ಪರದ ತುಂಬೆಲ್ಲ ಹೊಂಗೆ ಸೊಪ್ಪು, ಮಾವಿನ ಸೊಪ್ಪು, ತೆಂಗಿನ ಗರಿಗಳಿಂದ ಮುಚ್ಚುತ್ತಾರೆ. ಕಂಬಗಳಿಗೆ ತೆಂಗಿನ ಗರಿಗಳಿಂದ ಹೆಣೆದು ಮುಚ್ಚುತ್ತಾರೆ. ಇಡೀ ಚಪ್ಪರದ ಸುತ್ತಲೂ ತೆಂಗಿನ ಗರಿಗಳನ್ನು ಹೆಣೆದು ಕಮಾನಿನ ರೀತಿಯಲ್ಲಿ ಕಟ್ಟುತ್ತಾರೆ. ನಂತರ ಚಪ್ಪರಕ್ಕೆ ಹೂವಿನಿಂದ ಅಲಂಕರಿಸುತ್ತಾರೆ. ಪ್ರತಿಯೊಂದು ಕಂಬಕ್ಕೆ ಬಾಳೆದಿಂಡನ್ನು ಕಟ್ಟಿ ಚಪ್ಪರದ ಮೇಲ್ಭಾವಣಿಗೆ ಮಾವಿನ ಸೊಪ್ಪು ಮತ್ತು ರೋಡಿನ ಪಕ್ಕದಲ್ಲಿರುವ ಕೆಂಪು ಹೂಗಳ ಗುಚ್ಚಿ ಎರಡನ್ನು ಸೇರಿಸಿ ಅಲ್ಲಲ್ಲಿ ನೇತುಹಾಕಲಾಗುತ್ತದೆ. ಚಪ್ಪರದ ಪ್ರತಿಮೂಲೆಗಳಿಗೆ ಎಳನೀರನ್ನು ನೇತುಹಾಕಿ ಮಧ್ಯದಲ್ಲಿ ಈಚಲು ಮರದ ಕಾಯಿ ತುಂಬಿದ ಗೊನೆಗಳನ್ನು ನೇತುಹಾಕುತ್ತಾರೆ. ನಂತರ ಸಣ್ಣ ಸಣ್ಣ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗುತ್ತದೆ. ಒಟ್ಟಾರೆ ಮದುವೆಯ ಚಪ್ಪರ ಹಸಿರು ತೋರಣಗಳಿಂದ ಕಂಗೊಳಿಸುತ್ತಿರುತ್ತದೆ.

ಗಂಡು ಮತ್ತು ಹೆಣ್ಣುಗಳಿಬ್ಬರಿಗೂ ಅರಿಸಿಣ ನೀರಿನ ಸ್ನಾನ ಮಾಡಿಸುತ್ತಾರೆ. ವಿವಾಹದ ದಿನ ಮೂರು ದಿನ ಅಥವಾ ಐದು ದಿನ ಅಥವಾ ಏಳು ದಿನಗಳು ಇರುವಾಗಿನಿಂದಲೂ ಸ್ನಾನ ಮಾಡಿಸುತ್ತಾರೆ. ಅರಿಸಿನ ನೀರಿನ ಸ್ನಾನಮಾಡಿದ ಮೇಲೆ ವಧುವರರು ಮನೆಯಿಂದ ಹೊರ ಹೋಗುವಂತಿಲ್ಲ. ಊರುಬಿಟ್ಟು ಎಲ್ಲೂ ಹೊರಗೆ ಕಳುಹಿಸುವುದಿಲ್ಲ. ಕಾರಣ ಹಸಿ ಮೈ ಎಂದು ಹೇಳಿ ಒಳ್ಳೆಯ ಊಟ ತಿನಿಸುಗಳನ್ನು ಮಾಡಿ ಉಣಬಡಿಸುತ್ತಾರೆ. ಮದುವೆ ಹೆಣ್ಣು ಗಂಡುಗಳು ಮೈ ಕೈ ತುಂಬಿಕೊಂಡು ಸೌಂದರ್ಯದಿಂದ ಕೂಡಿರಬೇಕು ಎನ್ನುವುದೇ ಇದರ ಉದ್ದೇಶ.

ಚಪ್ಪರದ ದಿನ ಸಂಜೆ ಹೆಣ್ಣಿನ ಕಡೆಯವರು ಮದುವೆ ಮಾಡಿದರೆ ಗಂಡಿನ ಕಡೆಯವರು ಬರುತ್ತಾರೆ. ಗಂಡಿನ ಕಡೆಯವರು ಮದುವೆ ಮಾಡಿದರೆ ಹೆಣ್ಣಿನ ಕಡೆಯವರನ್ನು ಬರಮಾಡಿಕೊಂಡು ಅತ್ಯಂತ ಆತ್ಮೀಯತೆಯಿಂದ ಅವರನ್ನು ಸ್ವಾಗತಿಸಿ ಊರಿನ ದೇವಸ್ಥಾನದ ಹತ್ತಿರ ಇರಿಸುತ್ತಾರೆ. ಬಂದವರಿಗೆ ನೀರು ಪಾನಕ ಕೊಟ್ಟು, ಅವರ ಯೋಗಕ್ಷೇಮ ವಿಚಾರಿಸಿ ನಂತರ ಆರತಿಗಳೊಂದಿಗೆ ವಾದ್ಯ ಮೇಳಗಳೊಂದಿಗೆ

ಎತ್ತಿನ ಗಾಡಿಯನ್ನು ಸಿಂಗರಿಸಿ ಬಣ್ಣ ಬಣ್ಣದ ಹೂಗಳಿಂದ ಅಲಂಕರಿಸಿ ಎತ್ತುಗಳಿಗೂ ಸಿಂಗರಿಸಿ ಗಾಡಿಯ ಮೇಲೆ ಕುರ್ಚಿಯನ್ನಿಟ್ಟು ಅದರ ಮೇಲೆ ಗಂಡು ಅಥವಾ ಹೆಣ್ಣನ್ನು ಕೂರಿಸಿ, ಪಂಜು ಮತ್ತು ದೀಪಗಳ ಬೆಳಕಿನಲ್ಲಿ ನೃತ್ಯ ಮಾಡಿಕೊಂಡು ಮೆರವಣಿಗೆ ಮೂಲಕ ಅವರನ್ನು ಮದುವೆ ಮನೆಗೆ ಕರೆದೊಯ್ಯಲಾಗುತ್ತದೆ. ಮೆರವಣಿಗೆ ಉದ್ದಕ್ಕೂ ಸೋಬಾನೆ ಪದಗಳನ್ನು ಹಾಡಲಾಗುತ್ತದೆ. ಗಂಡು ಮತ್ತು ಹೆಣ್ಣಿಗೆ ಅರಿಸಿನ ಸ್ನಾನ ಮಾಡಿಸುವಾಗಲು ಕೂಡ ಸೋಬಾನೆ ಪದಗಳನ್ನು ಹಾಡಲಾಗುತ್ತದೆ. ನಂತರ ಅವರಿಗೆ ರತ್ನೀರು ತೆಗೆದು ಒಳಗೆ ಬರಮಾಡಿಕೊಂಡು ಊಟ ಉಪಚಾರ ಮಾಡುತ್ತಾರೆ.

ಚಪ್ಪರದ ಊಟ

ಮದುವೆ ದಿನದ ಹಿಂದಿನ ರಾತ್ರಿ ಅಂದರೆ ಚಪ್ಪರದ ದಿನದ ರಾತ್ರಿ ಊಟವನ್ನು ಚಪ್ಪರದ ಊಟ ಎಂದು ಕರೆಯುತ್ತಾರೆ. ಚಪ್ಪರದ ಊಟ ಮದುವೆ ದಿನದ ಊಟದಷ್ಟು ಭೂರಿಬೋಜನವಲ್ಲದಿದ್ದರು ಸಾಧಾರಣವಾಗಿರುತ್ತದೆ. ಅನ್ನ, ಸಾರು, ಅಪ್ಪಳ, ಉಪ್ಪಿನಕಾಯಿ, ಒಂದು ಪಲ್ಯ, ಸಿಹಿಯಾದ ಪಾಯಸ ಮಾಡುತ್ತಾರೆ. ಚಪ್ಪರದ ಊಟ ಹೆಣ್ಣು ಗಂಡನ್ನು ಕರೆದುಕೊಂಡು ಬಂದ ನಂತರವೇ ಊಟ. ಅದು ಮಧ್ಯರಾತ್ರಿ ಹನ್ನೆರಡು ಗಂಟೆ ಆದ್ರೂ ಸೈ. ನಂತರವೇ ಊಟ. ಆದರೆ ಇತ್ತೀಚಿನ ದಿನಗಳಲ್ಲಿ ಚಪ್ಪರದ ಊಟ ಮದುವೆಯ ದಿನ ಊಟಕ್ಕಿಂತಲೂ ಹೆಚ್ಚಾಗೇ ಇರುತ್ತದೆ.

ದೇವರು ತರುವುದು

ಮದುವೆ ದಿನ ಎಲ್ಲ ಕೆಲಸ ಕಾರ್ಯಗಳು ಪ್ರಾರಂಭವಾಗುವುದೇ ದೇವರು ತರುವುದರ ಮೂಲಕ, ದೇವರು ತರಲು ಹೊಸ ಹೊಸ ಮಣ್ಣಿನ ಗಡಿಗೆಗಳನ್ನು ತಂದು ಹೂ, ಹಣ್ಣು, ಕಾಯಿಗಳ ಜೊತೆ ಪೂಜೆ ಮಾಡಲು ಬೇಕಾಗುವ ಎಲ್ಲಾ ವಸ್ತುಗಳನ್ನು ತೆಗೆದುಕೊಂಡು ವಾದ್ಯ ಮೇಳಗಳ ಜೊತೆ ದೇವರ ಗುಡ್ಡರು ಹೋಗಿ ಹೊಸಗಡಿಗೆಗಳನ್ನು ತೊಳೆದು ಹೊಸ ನೀರು ತುಂಬಿ, ವಿಭೂತಿ ಬಳಿದು ಹೂ ಮುಡಿಸಿ ಪ್ರತಿ ಗಡಿಗೆಯ ತುಂಬಿದ ಬಾಯಿಗೆ ಅಡಿಕೆ ಹೊಂಬಾಳೆಯನ್ನು ಇಟ್ಟು ಅಕ್ಷತೆ ಗಂಟನ್ನು ಪ್ರತಿಗಡಿಗೆಯ ಕೊರಳಿಗೆ ಕಟ್ಟಿ ದೇವರ ಗುಡ್ಡರಿಂದ ಪೂಜೆ ಮಾಡಿಸಿ ಗಂಡು ಹೆಣ್ಣಿನ ಒಡಹುಟ್ಟಿದ ಅಣ್ಣ ತಮ್ಮ, ಅಕ್ಕ ತಂಗಿಯರು ಗಡಿಗೆಗಳನ್ನು ಹೊರುವರು. ವಾದ್ಯ ಮೇಳಗಳ ಜೊತೆ ದೇವರು ತರುವುದು ನಡೆಯುತ್ತದೆ. ದೇವರು ತರುವಾಗ ದೇವರ ಗಡಿಗೆ ಹೊತ್ತವರ ಮೈ ಮೇಲೆ ದೇವರು ಬರುವುದು ಅಲ್ಲಲ್ಲಿ ನಡೆಯುತ್ತದೆ. ತಲೆಯ ಮೇಲೆ ಹೊಸನೀರು ತುಂಬಿದ ಗಡಿಗೆ ಇದ್ದರೂ ಮೈಮೇಲೆ ದೇವರು ಬಂದೋ ಅಥವಾ ಬಂದಂತೆ ಮಾಡಿಯೋ ಒಟ್ಟಿನಲ್ಲಿ ತಮ್ಮ ದೇಹದ ಹಿಡಿತ ತಪ್ಪಿ ಬೇರೊಬ್ಬರು ಪರಕಾಯ ಪ್ರವೇಶಮಾಡಿದಂತೆ ಅವರ ನಡೆನುಡಿ ಎಲ್ಲವೂ ದೇವರು ಮಾತಾಡುವ ಹಾಗೆ ಶಿಷುಮಗ, ಶಿಷ್ಯ, ಸೇವಕ ಎಂಬ ಮಾತುಗಳು ಅವರ ಬಾಯಿಂದ ಹೊರಟು ಎಲ್ಲರನ್ನು ತನ್ನತ್ತ ಸೆಳೆದು ಎಲ್ಲರನ್ನು ಭಯ ಭಕ್ತಿಯಿಂದ ನೆನೆಯುವಂತೆ ಮಾಡುತ್ತಾರೆ. ಇದರಿಂದ ದೇವರು ತರುವ ಕಾರ್ಯ ಬಹಳ ಅಚ್ಚುಕಟ್ಟಾಗಿ ಅರ್ಥಗರ್ಭಿತವಾಗಿ ಕೂಡಿರುತ್ತದೆ.

ಚಪ್ಪರದ ಕೊನೆ ತರುವುದು

ಚಪ್ಪರದ ಕೊನೆ ಎಂದರೆ ಕೋಲುಗಳ್ಳಿಯನ್ನು ತನ್ನ ಹಸಿರು ತುಂಬಿದ ತೊಗಟೆಯನ್ನು ತೆಗೆದು ಬೆಳ್ಳಗೆ ಮಾಡಿ ತಾಳನ್ನು ಸಮತಟ್ಟಾಗಿ ಕಡಿದು ತುದಿಯಲ್ಲಿ ತ್ರಿಶೂಲದ ರೀತಿಯಲ್ಲಿ ಕವಲೊಡೆದ ಮೂರು

ನಾಲ್ಕು ಕವಲು ಇರುವಂತೆ ಕವಲುಗಳು ಅರ್ಧ ಅಡಿಗೂ ಹೆಚ್ಚು ಉದ್ದ ಇರುವಂತೆ ಮಾಡಿ ಮೂರು ನಾಲ್ಕು ಅಡಿ ಉದ್ದದ ಕಳ್ಳಿಯನ್ನು ಕಡಿದು ಅದಕ್ಕೆ ಹರಿಸಿನ ಕುಂಕುಮವಿಟ್ಟು, ಅಕ್ಷತೆ ಬುತ್ತಿ ಕಟ್ಟಿ, ಸೋದರ ಮಾವನ ಕೈಯಲ್ಲಿ ಒಂದು ಜಮ್ಮನೇರಳೆ ಮರದ ರೆಕ್ಕೆಯ ತುದಿಯನ್ನು ಕೊಟ್ಟು ಅವನಿಗೆ ಅರಿಸಿನ ಕುಂಕುಮ ಇಕ್ಕಿ ಬಾಯಿಗೆ ಅರ್ದಸುಲಿದ ಒಂದು ಬಾಳೆಹಣ್ಣನ್ನು ತುರುಕಿ ವಾದ್ಯ ಮೇಳಗಳ ಜೊತೆ ಮೆರವಣಿಗೆಯಲ್ಲಿ ಕರೆತರುತ್ತಾರೆ. ತಂದು ಧಾರಾಮೂರ್ತವಾಗುವ ಚಪ್ಪರದ ಮದ್ಯದ ಕಂಬಕ್ಕೆ ಕಟ್ಟುತ್ತಾರೆ.

ಗಂಡು ಕರೆತರುವುದು

ಚಪ್ಪರದ ದಿನದ ರಾತ್ರಿ ಹೆಣ್ಣು ಕರೆತಂದರೆ ದಾರೆಯ ದಿನ ಬೆಳಿಗ್ಗೆ ಗಂಡನ್ನು ಕರೆತರುತ್ತಾರೆ. ಹೆಣ್ಣನ್ನು ಕರೆತಂದ ಅಷ್ಟೇ ವಿಜೃಂಬಣೆಯಿಂದ ಗಂಡನ್ನು ಕರೆತರುತ್ತಾರೆ. ಶೃಂಗಾರಮಾಡಿದ ಎತ್ತು ಗಾಡಿ, ವಾದ್ಯ ಮೇಳಗಳ ಜೊತೆಗೆ ನೃತ್ಯವನ್ನು ಮಾಡುತ್ತಾ ಕರೆತರುತ್ತಾರೆ. ನೃತ್ಯ ಮಾಡುವಾಗ ಹೆಣ್ಣಿನ ಮತ್ತು ಗಂಡಿನ ಕಡೆಯ ಹುಡುಗರು ಹಠದಿಂದಲೇ ನಾವು ಅವರಿಗಿಂತ ಕಡಿಮೆ ಇಲ್ಲ ಎಂಬ ಭಾವನೆಯಿಂದಲೇ ನೃತ್ಯ ಮಾಡಲು ತೊಡಗುತ್ತಾರೆ.

ಧಾರಾ ಮುಹೂರ್ತ

ವಿವಾಹದ ದಿನದಂದು ವಾದ್ಯ ಮತ್ತು ಮೇಳದವರಿಗೆ ದಾರಾಮುಹೂರ್ತವಾಗುವವರೆಗೂ ಬಿಡುವಿರುವುದಿಲ್ಲ. ಪ್ರತಿಯೊಂದು ಶುಭ ಕಾರ್ಯಗಳೂ ವಾದ್ಯ ಮೇಳವಿಲ್ಲದೆ ನಡೆಯುವುದಿಲ್ಲ. ಮುಂಜಾನೆ ಎದ್ದು ತಮ್ಮ ಕೆಲಸ ಪ್ರಾರಂಭಿಸಿದರೆ ಎಲ್ಲ ಕಾರ್ಯ ಮುಗಿಯುವವರೆಗೂ ನುಡಿಸುತ್ತಲೇ ಇರಬೇಕು. ಮುಂಜಾನೆ ಎದ್ದು ಮೊದಲು ದೇವರು ತರುವುದು ನಂತರ ಎಲ್ಲಾ ಕೆಲಸಗಳಿಗೂ ಚಾಲನೆ ನೀಡಿದಂತೆ. ದೇವರು ತರಲಿಕ್ಕೆಂದೇ ಹೊಸ ಗಡಿಗೆಗಳನ್ನು ನೀರಿರುವಲ್ಲಿಂದ ಅಷ್ಟೂ ಗಡಿಗೆಗಳನ್ನು ತೊಳೆದು ಹೊಸ ನೀರು ತುಂಬಿ ಆ ಗಡಿಗೆಗಳಿಗೆ ಅರಿಸಿನ, ಕುಂಕುಮ, ವಿಭೂತಿ ಹಚ್ಚಿ, ಹೂ ಮುಡಿಸಿ ಪೂಜೆ ಮಾಡಿ ಅಲ್ಲಿಂದ ತಲೆಯ ಮೇಲೆ ಹೊತ್ತು ತರುತ್ತಾರೆ.

ದೇವರು ತರುವಾಗ ವಧುವರರ ಸಹೋದರ ಸಹೋದರಿಯರ ಕೈಯಲ್ಲಿ ತರಿಸುವುದು ಸಂಪ್ರದಾಯವಾಗಿದೆ. ಒಡಹುಟ್ಟಿದವರ್‍ಯಾರು ಇಲ್ಲದಿದ್ದರೆ ಚಿಕ್ಕಪ್ಪ, ದೊಡ್ಡಪ್ಪನವರ ಮಕ್ಕಳಾದರೂ ಅವರ ಕೈಯಲ್ಲೇ ದೇವರನ್ನು ತರಿಸುತ್ತಾರೆ. ನಂತರ ಹೆಣ್ಣು ಅಥವಾ ಗಂಡನನ್ನು ದೇವಸ್ಥಾನದ ಹತ್ತಿರ ಬಿಟ್ಟುಬರುವುದು. ಮತ್ತೆ ಚಪ್ಪರದ ಕೊನೆ ತರುವುದು. ಈ ಚಪ್ಪರದ ಕೊನೆಯನ್ನು ಹಾಲಗಳ್ಳಿ ಎಂಬ ಗಿಡದಿಂದ ತಂದಿರುತ್ತಾರೆ. ಈ ಕಳ್ಳಿಯಿಂದ ಉದ್ದನೆಯದಾದ ತುದಿಯಲ್ಲಿ ಮೂರು ಕವಲಿರುವ ಹಾಗೆ ಅದನ್ನು ಕತ್ತರಿಸಿ ಅದರ ತೊಗಟೆಯನ್ನು ತೆಗೆದು ಹಸನುಗೊಳಿಸಿ ತಂದಿರುತ್ತಾರೆ. ಅದನ್ನು ತಂದು ದಾರಾಮುಹೂರ್ತ ನಡೆಯುವ ಚಪ್ಪರದ ಕೆಳಗಿನ ಕಂಬಕ್ಕೆ ತಂದು ಕಟ್ಟುತ್ತಾರೆ. ಈ ಚಪ್ಪರದ ಕೊನೆಯನ್ನು ಹುಡುಗನ ಅಥವಾ ಹುಡುಗಿಯ ಸೋದರ ಮಾವನೇ ತರುವುದು ಶಾಸ್ತ್ರೋಕ್ತವಾಗಿದೆ. ಸೋದರ ಮಾವನ ಕೈಯಲ್ಲಿ ಈ ಚಪ್ಪರದ ಕೊನೆ ಕೊಟ್ಟು ಪೂಜೆಗೆ ಒಂದು ಜಂಬು ನೇರಳೆ ಮರದ ರೆಕ್ಕೆಯನ್ನು ಕೊಡುತ್ತಾರೆ. ಅವನ ಮುಖಕ್ಕೆ ಕುಂಕುಮ ಬಳಿದು ಬಾಯಲ್ಲಿ ಒಂದು ಬಾಳೆಹಣ್ಣನ್ನು ಇಟ್ಟು ಮೆರೆಸಿಕೊಂಡು ವಾದ್ಯ ಮೇಳಗಳ ಜೊತೆಯಲ್ಲಿ ಕರೆತರುತ್ತಾರೆ.

ನಂತರ ಗಂಡನ್ನು ದೇವಸ್ಥಾನದಿಂದ ಕರೆತರಲು ಮತ್ತೆ ಹೋಗುತ್ತಾರೆ. ಮದುವೆ ಹೆಣ್ಣಿನ ತಂದೆ ಅಥವಾ ಅಣ್ಣ ತಮ್ಮಂದಿರ ಕೈಯಲ್ಲಿ ಗಂಡಿಗೆ ಕೊಡಲು ಇಟ್ಟಿರುವ ಒಡವೆಗಳು, ವಸ್ತ್ರ, ವಾಚು, ಉಂಗುರ ಎಲ್ಲವನ್ನು ತೊಡಿಸುತ್ತಾರೆ. ಹೆಣ್ಣಿನ ತಂದೆ ಗಂಡಿಗೆಕಾಲು ತೊಳೆದು ಪೂಜೆ ಮಾಡಿ ಎತ್ತಿನ ಗಾಡಿಯಲ್ಲಿ ವಾದ್ಯ ಮೇಳಗಳ ಜೊತೆ ಮೆರವಣಿಗೆಯಲ್ಲಿ ಕರೆತರುತ್ತಾರೆ.

ಮಾಂಗಲ್ಯ ಧಾರಣೆ

ವಧುವರರನ್ನು ಶೃಂಗರಿಸಿ ಮುಹೂರ್ತದ ಸಮಯಕ್ಕೆ ಸರಿಯಾಗಿ ಕರೆತರುತ್ತಾರೆ. ವಧುವನ್ನು ವಿವಿಧ ರೀತಿಯ ಒಡವೆ ವಸ್ತ್ರಗಳಿಂದ ಅಲಂಕರಿಸಿ ಪಾದಾಲಂಕಾರ, ಕಟಿಯ ಅಲಂಕಾರ, ಬಾಹುಗಳ ಅಲಂಕಾರ, ಕಂಠಾಲಂಕಾರ, ಮುಖಾಲಂಕಾರ, ಕೇಶಾಲಂಕಾರ ಮಾಡಿ ಧಾರೆ ಸೀರೆ ಉಡಿಸಿ ಹಸೆಮಣೆಗೆ ಕರೆತರುತ್ತಾರೆ. ಗಂಡಿನಮುಖ ಹೆಣ್ಣಿಗೆ ಹೆಣ್ಣಿನ ಮುಖ ಗಂಡಿಗೆ ಕಾಣಿಸದ ಹಾಗೆ ಅಡ್ಡಲಾಗಿ ಒಂದು ಬಿಳಿಯ ವಸ್ತ್ರವನ್ನು ಅಡ್ಡ ಹಿಡಿದು ಹೆಣ್ಣನ್ನು ಗಂಡಿನ ಸುತ್ತ ಮೂರು ಸುತ್ತು ಸುತ್ತಿಸಿ ನಂತರ ಇಬ್ಬರ ತಲೆಯ ಮೇಲೆ ಅಕ್ಕಿ ಹಾಕಿಸಿ ಹೆಣ್ಣಿನ ಕಾಲಿನ ಹೆಬ್ಬೆರಳನ್ನು ಗಂಡಿನ ಬಲಗಾಲಿನ ಹೆಬ್ಬೆರಳಿನಿಂದ ಮೆಟ್ಟಿಸಿ ತಾಳಿಗೆ ಗಂಡಿನಿಂದ ಪೂಜೆ ಮಾಡಿಸಿ ಮೊದಲೇ ನಿಶ್ಚಯವಾಗಿರುವ ಸಮಯಕ್ಕೆ ಸರಿಯಾಗಿ ವರನಿಂದ ವಧುವಿನ ಕೊರಳಿಗೆ ಮಾಂಗಲ್ಯಧಾರಣೆ ಮಾಡಿಸುತ್ತಾರೆ. ವಾದ್ಯ ಮೇಳಗಳು ಮೊಳಗುವುದರೊಂದಿಗೆ ಮಾಂಗಲ್ಯಧಾರಣೆ ಮಾಡಲಾಗುತ್ತದೆ.

ಹಾಲೆರೆಯುವುದು

ಮಾಂಗಲ್ಯಧಾರಣೆಯಾದ ನಂತರ ವಧುವರರ ಎರಡೂ ಕೈಗಳನ್ನು ಕೂಡಿಸಿ ಹಿಡಿಸಿ ಅವರ ಕೈಗಳ ಮೇಲೆ ಒಂದು ತೆಂಗಿನ ಕಾಯಿಟ್ಟು, ಅವರಿಬ್ಬರನ್ನು ಎದುರು ಬದುರು ಕೂರಿಸಿ ಕೆಳಗೆ ಒಂದು ಬಕೆಟ್ಟಿನಲ್ಲಿ ಹಾಲನ್ನು ತುಂಬಿ ಅವರ ಅಂಗೈ ಮೇಲಿರುವ ತೆಂಗಿನ ಕಾಯಿ ಮೇಲೆ ಹಾಲನ್ನು ಮೂರು ಸಾರಿ ಸುರಿಯುವುದೇ ಹಾಲೆರೆಯುವುದು. ಹೀಗೆ ಮದುವೆಗೆ ಬಂಧುಗಳು ಬಂದು ಹಾಲೆರೆಯುವ ಸಂದರ್ಭದಲ್ಲಿ ದಾರೆಹುಯ್ಯೋ ಪದಗಳನ್ನು ಹಾಡುತ್ತಾರೆ.

ಕಾಳಸಿನಾಲ ಕರೆದು ಬಟ್ಟಾಲ ತುಂಬಿ
ರಾಯ ವಜ್ಜುರುನ ಕೈಯ್ಯದಾರೆ
ರಾಯವಜ್ಜುರುನ ಕೈಯ್ಯದಾರೈತಾವಂತ
ಬಾರಿ ಮದ್ದಾನೇ ಮರಿಮರುತೋ ||ಕಲ್ಯಾಣವೇ ಗೌರಿ||

ಹಸೆಮ್ಯಾಲೆ ಕೂತುಕಂಡು ಹಸೆಯೆನೆ ನೋಡಿಯೆ
ದೇಸವಂತ್ನ ನೋಡೇ ಬಲದೇಲೀ
ದೇಸವಂತ್ನ ನೋಡೆ ಬಲದೇಲಿ ಹೆಣ್ಣಮ್ಮ
ಅಸಮಾನು ಚಿನ್ನ ಹೊಳೆದಂಗೇ ||ಕಲ್ಯಾಣವೇ ಗೌರಿ||

ಮದುವೆಗೆ ಆಗಮಿಸಿರುವ ಪ್ರತಿಯೊಬ್ಬ ಬಂಧುಗಳು ಕೂಡ ಒಂದು ರೂ ನಾಣ್ಯವನ್ನು ಅವರ ಕೈ ಮೇಲಿರುವ ತೆಂಗಿನ ಕಾಯಿ ಮೇಲಿಟ್ಟು ಅದರ ಮೇಲೆ ಹಾಲೆರೆಯುವ ಪದ್ಧತಿ ಇಂದಿಗೂ ನಡೆದುಕೊಂಡು

ಉಳಿದುಬಂದಿದೆ. ಪ್ರತಿಯೊಬ್ಬರು ವಧುವರರ ತಲೆಯ ಮೇಲೆ ಅಕ್ಷತೆ ಕಾಳನ್ನು ಹಾಕಿ ಹಾಲೆರೆದು ಬರುತ್ತಾರೆ. ಅವರ ಬಾಳೆಲ್ಲ ಸುಖ, ಶಾಂತಿ, ನೆಮ್ಮದಿಯಿಂದ ಕೂಡಿರಲಿ ಅವರ ಬಾಳು ಹಾಲು ಸಾಗರ ವಾಗಲಿ ಎಂಬ ನಂಬಿಕೆ ಈ ಶಾಸ್ತ್ರದಲ್ಲಿದೆ.

ಅರತಕ್ಷತೆ (ಒಸಗೆ)

ದಾರಾಮುಹೂರ್ತವಾದ ನಂತರದ ಭಾಗ ಇದು. ಮದುವೆಗೆ ಬಂದಂತ ಎಲ್ಲರೂ ವಧುವರರನ್ನು ಮಾತನಾಡಿಸಿ ಶುಭಹಾರೈಸಿ ತಾವು ತಂದಿದ್ದಂತಹ ಉಡುಗೊರೆಗಳನ್ನು ವಧುವರರಿಗೆ ಕೊಟ್ಟು ಶುಭ ಹಾರೈಸಿ ಬರುತ್ತಾರೆ. ಹಿಂದಿನ ಮದುವೆಗಳಲ್ಲಿ ಒಸಗೆಯನ್ನು ಮದುವೆ ಶಾಸ್ತ್ರ ಎಲ್ಲ ಮುಗಿದ ಮೇಲೆ ಕೊನೆಯ ದಿನ ಇಡುತ್ತಿದ್ದರು. ಆದರೆ ಇದು ಇಂದು ಬಹುಮುಖ್ಯವಾದ ಘಟ್ಟವಾಗಿದೆ. ತಾಳಿಕಟ್ಟುವ ಮೊದಲೇ ಮದುವೆ ಹಿಂದಿನರಾತ್ರಿ ಈ ಶಾಸ್ತ್ರವನ್ನು ಇಟ್ಟುಕೊಳ್ಳುತ್ತಾರೆ. ಇಂದು ಇಂತಹ ಮದುವೆಗಳೇ ಹೆಚ್ಚಾಗಿ ನಡೆಯುತ್ತಿವೆ. ಇದು ನಗರಗಳ ಸಂಪ್ರದಾಯವಾಗಿದ್ದು, ಛತ್ರಗಳಲ್ಲಿ ನಡೆಯುವ ಬಹುತೇಕ ವಿವಾಹಗಳು ಇದೇ ಮಾದರಿಯಲ್ಲಿ ನಡೆಯುತ್ತವೆ. ಆದರೆ ಹಳ್ಳಿಗಳಲ್ಲಿ ನಡೆಯುವ ಮದುವೆಗಳು ಇಂದಿಗೂ ಕೂಡ ಹಿಂದಿನ ಸಂಪ್ರದಾಯವನ್ನು ಉಳಿಸಿಕೊಂಡು ಬಂದಿವೆ.

ಊಟೋಪಚಾರ

ಇದು ಕೂಡ ಮದುವೆಯಲ್ಲಿ ಒಂದು ಬಹುಮುಖ್ಯವಾದ ಘಟ್ಟವೇ ಆಗಿದೆ. ಮದುವೆಯ ಊಟವೇ ಬೇರೆ ರೀತಿಯಲ್ಲಿ ವಿಶಿಷ್ಟ ವೈವಿದ್ಯದಿಂದ ಕೂಡಿರುತ್ತದೆ. ತರತರದ ತಿಂಡಿ-ತಿನಿಸುಗಳು, ಸಿಹಿ ಸಿಹಿಯಾದ ಲಾಡು, ಬೂಂದಿ, ಪಾಯಸಗಳೊಂದಿಗೆ ಎಲ್ಲರ ಮನ ತಣಿಸುವುದು ಮದುವೆಯ ಊಟ, ಮದುವೆಯ ಒಟ್ಟು ಖರ್ಚುಗಳಲ್ಲಿ ಊಟಕ್ಕೆ ಹೆಚ್ಚಿನದಾಗಿ ಖರ್ಚುಮಾಡಲಾಗಿರುತ್ತದೆ. ಏಕೆಂದರೆ ಜನರ ಮನದಲ್ಲಿ ಉಳಿಯುವುದು ಕೊನೆಯದಾಗಿ ಮದುವೆಯ ಊಟ.

ಮದುವೆಯಾದ ನಂತರ ಗಂಡು ಹೆಣ್ಣುಗಳು ಯಾರು ಮದುವೆ ಮಾಡಿರುವುದಿಲ್ಲ(ಗಂಡಿನ ಕಡೆ ಅಥವಾ ಹೆಣ್ಣಿನ ಕಡೆಯವರು ಯಾರೇ ಆಗಿದ್ದರು) ಅವರ ಮನೆಗೆ ಹೋಗುತ್ತಾರೆ. ಮದುವೆ ಮಾಡಿಲ್ಲದವರು ಮೂರು ದಿನಗಳ ನಂತರ ಬೀಗರ ಔತಣ ಕೂಟವನ್ನು ಇಟ್ಟುಕೊಳ್ಳುತ್ತಾರೆ.

ಬೀಗರ ಊಟ

ಮದುವೆ ಮಾಡಿಲ್ಲದವರು ಮದುವೆಯಾದ ಮೂರುದಿನಕ್ಕೆ ತಮ್ಮ ಊರಿನಲ್ಲೇ ಬೀಗರ ಊಟವನ್ನು ಏರ್ಪಡಿಸುತ್ತಾರೆ. ಸಾಮಾನ್ಯವಾಗಿ ಅದು ಮಾಂಸದ ಊಟವಾಗಿರುತ್ತದೆ. ಮಧ್ಯಾಹ್ನದ ಹೊತ್ತಿಗೆ ಬೀಗರು ಬರುವುದು ಸಾಮಾನ್ಯ. ಬಂದಂತಹ ಬೀಗರನ್ನು ದೇವಸ್ಥಾನದ ಹತ್ತಿರ ಕೂರಿಸಿ ಅವರಿಗೆ ಮಜ್ಜಿಗೆ, ಪಾನಕ ತಂಪಾದ ಪಾನಿಯಗಳನ್ನು ಕೊಟ್ಟು ಅವರ ಯೋಗಕ್ಷೇಮ ವಿಚಾರಿಸುವುದು ಸಂಪ್ರದಾಯ ಬದ್ಧವಾಗಿ ಅವರನ್ನು ಬೀಗರ ಮನೆಗೆ ಕರೆತರುತ್ತಾರೆ. ಎಲ್ಲರೂ ಊಟ ಮುಗಿದ ಮೇಲೆ ಗಂಡು ಹೆಣ್ಣುಗಳನ್ನು ಕರೆದುಕೊಂಡು ಪುನಃ ತಮ್ಮ ಮನೆಗೆ ಬರುತ್ತಾರೆ.

ಈ. ಆಹಾರ ಪದ್ಧತಿ

ಮನುಷ್ಯ ಹಸಿವು ನಿವಾರಿಸಿಕೊಳ್ಳಲು ಆಹಾರ ಸೇವಿಸುತ್ತಾನೆ. ಒಂದು ಕಾಲಕ್ಕೆ ಕೇವಲ ಹಸಿಯಾದ ಆಹಾರ ಪದಾರ್ಥಗಳನ್ನು ಸೇವಿಸುತ್ತಿದ್ದ ಮಾನವ ಬೆಂಕಿಯ ಆವಿಷ್ಕಾರವಾದ ಮೇಲೆ ರುಚಿಯ ಬೆನ್ನುಹತ್ತಿ ಬಗೆ ಬಗೆಯ ಅಡುಗೆ ಮಾಡಿಕೊಳ್ಳುತ್ತಾ, ಹಲವಾರು ರೀತಿಯ ಅಡುಗೆ ಪದಾರ್ಥಗಳನ್ನು ಕಂಡುಹಿಡಿದು ಬೇಯಿಸಿಕೊಂಡು ತಿನ್ನುವುದನ್ನು ಕಲಿತ. ಹೀಗೆ ಅಡುಗೆಯ ಅಭಿರುಚಿ ವ್ಯಕ್ತಿಯಿಂದ ವ್ಯಕ್ತಿಗೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗುತ್ತ ವೈವಿಧ್ಯಮಯ ಆಹಾರ ಪದಾರ್ಥಗಳು ಬೆಳಕಿಗೆ ಬಂದವು.

ಪ್ರಾದೇಶಿಕವಾಗಿ ಭೌಗೋಳಿಕ ವಾಯುಗುಣಗಳಿಗೆ ತಕ್ಕಂತೆ ಮನುಷ್ಯನ ಜೀವನಾವಶ್ಯಕತೆಯುಳ್ಳ ಊಟೋಪಚಾರ, ವಸ್ತ್ರವಿನ್ಯಾಸಗಳಲ್ಲಿ ಬದಲಾವಣೆಗಳು ಕಂಡುಬರುತ್ತವೆ. ಈ ಮೇಲಿನ ವಿಶ್ಲೇಷಣೆಯನ್ನು ಆಧಾರವಾಗಿಟ್ಟುಕೊಂಡು ಕರ್ನಾಟಕದ ಪ್ರಾದೇಶಿಕವಾರು ಊಟೋಪಚಾರಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಪ್ರಸ್ತುತ ಪ್ರಾದೇಶಿಕವು ದಕ್ಷಿಣ ಕರ್ನಾಟಕದ ಕನಕಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವುದರಿಂದ ಸಾಮಾನ್ಯವಾಗಿ ಈ ಪ್ರದೇಶದ ಆಹಾರ ಪದ್ಧತಿಯನ್ನೇ ಅಳವಡಿಸಿಕೊಂಡಿರುವುದನ್ನು ಕಾಣುತ್ತೇವೆ. ಪ್ರತಿಯೊಂದು ಸಮುದಾಯವು ಆಹಾರದ ಪದ್ಧತಿಯಲ್ಲಿ ತನ್ನದೇ ಆದ ವಿಶಿಷ್ಟ ರೀತಿಗಳನ್ನು ಅನುಸರಿಸುತ್ತಾ ಬಂದಿರುವುದು ಕಂಡುಬರುತ್ತದೆ. ಆಹಾರವು ಒಂದು ಸಮುದಾಯದಲ್ಲಿ ಜೀವಂತವಾಗಿದ್ದುಕೊಂಡು ಆರ್ಥಿಕ ಸ್ಥಿತಿಗತಿಯನ್ನು ಪರಿಚಯಿಸುವ ಪ್ರಮುಖ ಭೂಮಿಕೆಯಾಗಿದೆ. ಕನಕದಾಸರು ಹೇಳುವಹಾಗೆ ಮನುಷ್ಯನ ಹಲವಾರು ವೃತ್ತಿಗಳನ್ನು ಕೈಗೊಂಡು ಭಂಗಬಿದ್ದ, ವ್ಯಂಗ್ಯವಾಡಿ, ದುಡಿಯುವುದು, ಗಳಿಸುವುದು, ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ, ಆಹಾರಕ್ಕಾಗಿ ನಿತ್ಯವೂ ದುಡಿಯಲೇಬೇಕು. ಮನುಷ್ಯನಿಗೆ ಆಹಾರವಿಲ್ಲದಿದ್ದರೆ ಬದುಕೇ ಇಲ್ಲ, ಉಸಿರೂ ಇಲ್ಲ, ನಡಿಗೆಯೂ ಇಲ್ಲ. ಆಹಾರ ಕೇವಲ ಮನುಷ್ಯನಿಗೆ ಮಾತ್ರವಲ್ಲದೆ ಪ್ರಕೃತಿಯಲ್ಲಿ ಹುಟ್ಟಿರುವ ಪ್ರತಿಯೊಂದು ಜೀವಿಗೂ ಅಗತ್ಯವಾಗಿದೆ.

ಉತ್ತರ ಕರ್ನಾಟಕದಲ್ಲಿ ರೊಟ್ಟಿ ಹೆಚ್ಚಾಗಿ ಕಂಡುಬಂದರೆ ದಕ್ಷಿಣ ಕರ್ನಾಟಕದಲ್ಲಿ ಮುದ್ದೆ ಅನ್ನ ಆಹಾರ ಪದ್ಧತಿಯಾಗಿದೆ. ಪ್ರಸ್ತುತ ಅಧ್ಯಯನಕ್ಕೊಳಪಡಿಸಿರುವ ಪ್ರದೇಶವು ದಕ್ಷಿಣ ಕರ್ನಾಟಕ ಆಹಾರ ಪದ್ಧತಿಯನ್ನು ಬಹುತೇಕವಾಗಿ ಹೋಲುತ್ತದೆ. ಇಲ್ಲಿನ ಅಡುಗೆ ಪದ್ಧತಿಯನ್ನು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.

ಅ. ಸಸ್ಯ ಆಹಾರದ ಅಡುಗೆ

ಆ. ಮಾಂಸಾಹಾರದ ಅಡುಗೆ

ಸಸ್ಯ ಆಹಾರದ ಅಡುಗೆ

ಸಸ್ಯಾಹಾರ ಅಡುಗೆಯಲ್ಲಿ ಸಿಹಿ ಅಡುಗೆ ಮತ್ತು ಖಾರದ ಅಡುಗೆ ಎಂದು ವಿಂಗಡಿಸಿದರೆ, ಸಿಹಿ ಅಡುಗೆಯಲ್ಲಿ ತಿಂಡಿ, ಊಟ, ಪಾನೀಯವೆಂದು, ಖಾರದ ಅಡುಗೆಯಲ್ಲಿ ತಿಂಡಿ ಮತ್ತು ಊಟ ಎಂದು ವಿಂಗಡಿಸಬಹುದು.

ಪ್ರಸ್ತುತ ಪ್ರದೇಶದ ಅಡುಗೆ ವಿಧಾನವನ್ನು ಆರ್.ಎಸ್.ಬಾಗ್ಸ್ ಅವರ ವರ್ಗೀಕರಣ ಮಾದರಿಯಲ್ಲಿ ವಿಂಗಡಿಸಿಕೊಳ್ಳಬಹುದು.

೧. ದಿನನಿತ್ಯದ ಅಡುಗೆಗಳು ಅಥವಾ ಸಾಮಾನ್ಯ ಅಡುಗೆ

೨. ವಿಶೇಷ ಸಂದರ್ಭದ ಅಡುಗೆ ಅಥವಾ ಹಬ್ಬ ಹರಿದಿನದ ಅಡುಗೆ

ದಿನನಿತ್ಯದ ಅಡುಗ್ಗೆ ಅಥವಾ ಸಾಮಾನ್ಯ ಅಡುಗೆಗಳು

ಕಬ್ಬಾಳು ಪ್ರದೇಶದ ಮುಖ್ಯ ಆಹಾರ ಧಾನ್ಯ ರಾಗಿ. ಅನ್ನ ಇಲ್ಲಿಗೆ ಸುಮಾರು ಮೂರು ನಾಲ್ಕು ದಶಕಗಳ ಹಿಂದೆ ಬಡವರಿಗೆ ಹಬ್ಬ ಹರಿದಿನಗಳು, ಇತರೆ ಧಾರ್ಮಿಕ ಆಚರಣೆಯ ದಿನಗಳಲ್ಲಿ ಮಾತ್ರ ವಿಶೇಷ ಊಟವಾಗಿತ್ತು. ಆದರೆ ಇಂದು ನೀರಾವರಿ ಸೌಲಭ್ಯದಿಂದಾಗಿ ರಾಗಿ ಬಿಟ್ಟರೆ ಭತ್ತದ ಬೆಳೆ ಎರಡನೇ ಸ್ಥಾನದಲ್ಲಿದೆ. ದಿನಿತ್ಯದ ಆಹಾರವಾಗಿ ರಾಗಿಮುದ್ದೆ (ಹಿಟ್ಟು), ಸಾರು, ಅನ್ನ, ಚೆಟ್ನಿ, ಕಾರ ಮುಖ್ಯವಾಗಿರುತ್ತವೆ.

ರಾಗಿಮುದ್ದೆ

ಕಬ್ಬಾಳಿನ ಪ್ರಧಾನ ಹಾಗೂ ಅತಿಮುಖ್ಯವಾದ ಆಹಾರ ರಾಗಿ ಮುದ್ದೆ. ಬಡವ ಬಲ್ಲಿದ, ನಗರ, ಗ್ರಾಮಗಳೆಂಬ ತಾರತಮ್ಯತೆಗಳಿಲ್ಲದೆ, ಎಲ್ಲಾ ಕಾಲದಲ್ಲೂ ಎಲ್ಲಾ ಸಂದರ್ಭದಲ್ಲೂ ಯಾವುದೇ ಎಗ್ಗು ತೆಗ್ಗುಗಳಿಲ್ಲದೆ ಬಳಸುವ ಆಹಾರ ರಾಗಿ ಮುದ್ದೆ.

ರಾಗಿಯನ್ನು ಬೀಸುವ ಕಲ್ಲಿನಿಂದ ಅಥವಾ ಇತ್ತೀಚಿನ ದಿನಗಳಲ್ಲಿ ಮಿಲ್ಲುಗಳಿಂದ ಹಿಟ್ಟುಮಾಡಿಕೊಂಡು, ಮುದ್ದೆ ಮಾಡುವುದಕ್ಕೆ ಹಿಟ್ಟಿನ ಮಡಕೆಗೆ ನೀರುಹಾಕಿ ಸ್ವಲ್ಪ ಹಸಿಹಿಟ್ಟು ಹಾಕಿ, ಅದು ಉಕ್ಕುಬಂದಮೇಲೆ ಸ್ವಲ್ಪ ಹಿಟ್ಟಿನ ಹೆಸರನ್ನು ಬೇರೊಂದು ಪಾತ್ರೆಗೆ ಬಸಿದುಕೊಂಡು, ಹಸಿಹಿಟ್ಟು ಸುರಿದು ಹಿಟ್ಟು ಗಟ್ಟಿಯಾಗದಿರಲೆಂದು ನಾಲ್ಕೈದು ಉಪ್ಪಿನ ಹರಳನ್ನು ಹಾಕಿ ಹಿಟ್ಟಿನ ದೊಣ್ಣೆಯಿಂದ ತಿರುವಿ ಗಂಟುಗಳಿಲ್ಲದೆ ಮೇಣದ ಹಾಗೆ ಆಗುವಂತೆ ದೊಣ್ಣೆಯಿಂದ ಚೆನ್ನಾಗಿ ಬೆರಸುತ್ತಾರೆ. ನಂತರ ಹಸ್ಕಲ್ಲಿನ ಮೇಲೆ ರಾಗಿ ಮುದ್ದೆಯನ್ನು ಮಾಡಿ ಮುದ್ದೆ ಮಾಡುವ ಮಡಿಕೆಯಲ್ಲಿ ತುಂಬಿ ಮಡಿಕೆಯನ್ನು ನೀರಿನಿಂದ ಒರೆಸಿ ಒಲೆಯ ಬೂದಿಯನ್ನು ವಿಭೂತಿಯಾಗಿ ಬಳಿದು ನಮಸ್ಕರಿಸುತ್ತಾರೆ.

ಸಾರು

ಇಲ್ಲಿ ಹೆಚ್ಚಾಗಿ ಸಾರಿಗೆ ಉಪಯೋಗಿಸುವ ಅವರೆಕಾಳು, ತರಗುಣಿ, ಹುರಳಿಕಳು, ಕಡಲೇಕಾಳು, ತೊಗರಿಕಾಳು ಮುಂತಾದ ದ್ವಿದಳ ಧಾನ್ಯಗಳ ಜೊತೆಗೆ ತಾವೇ ಸ್ವತಃ ಬೆಳೆದ ಮೂಲಂಗಿ, ಸೀಮೆ ಬದನೆ ಅಥವಾ ಚಪ್ಪರದ ಅವರೆಕಾಯಿ, ಬದನೆಕಾಯಿ, ಹಿರೇಕಾಯಿ, ಸೋರೇಕಾಯಿ, ಕುಂಬಳಕಾಯಿ, ನೆಲ್ಲವರೆಕಾಯಿ, ಅವರೆಕಾಯಿ, ಗೋರಿಕಾಯಿ, ತುಪ್ಪೀರೆಕಾಯಿ, ಹಾಗಲಕಾಯಿ, ಈರುಳ್ಳಿ ಹೂವು, ನುಗ್ಗೇಕಾಯಿ, ಅಡ್ಲಕಾಯಿ ಮುಂತಾದ ತರಕಾರಿಗಳು, ದಂಟು, ಕೀರೆಸೊಪ್ಪು, ಅರಿವೆಸೊಪ್ಪು, ಸಬ್ಬಸೀಗೆಸೊಪ್ಪು, ಬೆರಿಕೆಸೊಪ್ಪು, ಸೀಗೆ ಸೊಪ್ಪು ಇನ್ನು ಹಲವಾರು ಸೊಪ್ಪುಗಳನ್ನ ಸಾರಿಗೆ ಉಪಯೋಗಿಸುತ್ತಾರೆ.

ಇಲ್ಲಿ ದಿನನಿತ್ಯ ಮಾಡುವ ಸಾರೆಂದರೆ ಉಪ್ಸಾರು, ಸೊಪ್ಪಿನಸಾರು, ಬಸ್ಸಾರು, ಮಸೊಪ್ಪು ಇತ್ಯಾದಿ. ಮೇಲೆ ಉದಾಹರಿಸಿದ ಯಾವುದೇ ಕಾಳನ್ನು ಸೊಪ್ಪಿನ ಜೊತೆಗೆ ಬೇಯಿಸಿ ಕಾಳಿನೊಂದಿಗೆ ಉಪ್ಪು,

ಮೆಣಸು, ಜೀರಿಗೆ, ಬೆಳ್ಳುಳ್ಳಿ ಸುಟ್ಟು ಅಥವಾ ಬೇಯಿಸಿದ ಮೆಣಸಿನಕಾಯಿ ಬೆಳ್ಳುಳ್ಳಿ ಇವೆಲ್ಲವನ್ನು ಉಪ್ಪಾರಾದರೆ ಹಸ್ಕಲಿನ ಮೇಲೆ ಅರೆದು ಕಾರ ತುಂಬಿಟ್ಟುಕೊಳ್ಳುವ ಸಾಸರಿಗೆ (ಬಟ್ಟಲು) ತುಂಬಿಟ್ಟುಕೊಂಡು, ಕಾಳು ಸೊಪ್ಪು ಬೆಂದನೀರನ್ನು ಬೇರ್ಪಡಿಸಿ ಸೊಪ್ಪುಸೋರಾಕಿ, ಸೊಪ್ಪು ಬೇರೆ ನೀರು ಬೇರೆ ಮಾಡುತ್ತಾರೆ. ಊಟಕ್ಕೆ ಎಷ್ಟು ಉಪ್ಪುಸಾರು ಬೇಕು ಅಷ್ಟಕ್ಕೆ ಬೇಕಾದಷ್ಟು ಕಾರವನ್ನು ಒಬ್ಬೊಬ್ಬರಿಗೂ ಬೇರೆ ಬೇರೆಯೇ ಬಡಿಸುತ್ತಾರೆ. ಕಾರ ಹೆಚ್ಚು ತಿನ್ನುವವರು ಹೆಚ್ಚಾಗಿ, ಕಡಿಮೆ ತಿನ್ನುವವರು ಕಡಿಮೆ ಬಡಿಸಿಕೊಂಡು ಊಟ ಮಾಡಬಹುದು. ಇದು ಉಪ್ಪುಸಾರು.

ಬಸ್ಸಾರು

ಬಸ್ಸಾರಿಗೆ ಯಾವ ಸೊಪ್ಪನ್ನು ಹಾಕುತ್ತೇವೆಯೋ ಆ ಸೊಪ್ಪಿಗೆ ಹೊಂದುವಂತ ಕಾಳುಗಳನ್ನು ಹಾಕಿ ಚೆನ್ನಾಗಿ ಬೇಯಿಸಿಕೊಳ್ಳಬೇಕು. ಮೊದಲು ಕಾಳುಗಳನ್ನು ಬೇಯಿಸಿಕೊಂಡು ನಂತರ ಸೊಪ್ಪನ್ನು ಹಾಕಿ ಬೇಯಿಸಬೇಕು. ಜೊತೆಗೆ ರುಚಿಗೆ ಒಂದೆರಡು ಟೊಮೊಟೋ ಹಣ್ಣನ್ನು ಸೊಪ್ಪಿನ ಜೊತೆಯಲ್ಲೇ ಬೇಯಿಸಿಕೊಂಡು ಆದಮೇಲೆ ಸೊಪ್ಪು ಕಾಳನ್ನು ಬಸಿದು ನೀರನ್ನು ಬೇರ್ಪಡಿಸಿ ಆ ನೀರಿಗೆ ಉಪ್ಪು ಕಾರದ ಪುಡಿ, ಹುಣಸೆ ಹುಳಿಯನ್ನು ಹಾಕಿ ಚೆನ್ನಾಗಿ ಬೇಯಿಸಿ ಬೆಳ್ಳುಳ್ಳಿಯನ್ನು ಸ್ವಲ್ಪ ಹೆಚ್ಚಾಗಿಯೇ ಹಾಕಿ ಚೆನ್ನಾಗಿ ಕುದಿಸಿ ಒಗ್ಗರಣೆ ಕೊಡುವುದು. ಮತ್ತು ಸೊಪ್ಪುಕಾಳನ್ನು ಒಗ್ಗರಣೆ ಮಾಡುವುದರಿಂದ ಈರುಳ್ಳಿ ಇರುವುದರಿಂದ ತಿನ್ನಲು ಚೆನ್ನಾಗಿರುತ್ತದೆ ಎನ್ನುತ್ತಾರೆ ಜಯಮ್ಮ.

ಮಸೊಪ್ಪು

ಸೊಪ್ಪನ್ನು ಚೆನ್ನಾಗಿ ಬೇಯಿಸಿ ಒಂದು ಮಳ್ಳು ಹೆಚ್ಚಾಗಿ ಬೇಯಿಸಬೇಕು. ಬೆಳ್ಳುಳ್ಳಿ, ಉಪ್ಪು, ಕಾರ, ಕಾಳು ಎಲ್ಲವನ್ನು ಜೊತೆಯಲ್ಲಿ ಹಾಕಿ ಬೇಯಿಸಿ ಚೆನ್ನಾಗಿ ಬೆಂದ ಸೊಪ್ಪನ್ನು ಬಸಿದುಕೊಂಡು ಮಸೆಯುವ ಕೋಲಿನಿಂದ ಚೆನ್ನಾಗಿ ಮಸೆದು ನಂತರ ಅದೇ ನೀರನ್ನು ಮಸೆದು ಸೊಪ್ಪಿಗೆ ಹಾಕಿ ಕಲಸಿ ಒಗ್ಗರಣೆಮಾಡುವುದು.

ಅವರೆ ಕಾಳುಳಿ

ಒಣಗಿರುವ ಅವರೆಕಾಳುಗಳನ್ನು ಹದವಾಗಿ ಹುರಿದುಕೊಂಡು, ಮೊದಲೇ ಉಪ್ಪು, ಕಾರ, ಬೆಳ್ಳುಳ್ಳಿ, ಹುಣಸೆಹುಳಿ ಬೇಯುತ್ತಿರುವ ಪಾತ್ರೆಗೆ ಹುರಿದ ಅವರೆಕಾಳನ್ನು ಹಾಕಿ ಎರಡು ಮೂರು ಮಳ್ಳು ಮಳ್ಳಿಸಿದರೆ ಅವರೆಕಾಳುಳಿ ತಯಾರಾಗುತ್ತದೆ. ಇದಕ್ಕೆ ಹುಣಸೆ ಹಣ್ಣಿನ ಹುಳಿಯನ್ನು ಸ್ವಲ್ಪ ಹೆಚ್ಚಾಗಿಯೇ ಹಾಕುತ್ತಾರೆ. ಅವರೆಕಾಳಿನ ಹುಳಿಯ ಜೊತೆಗೆ ಈರುಳ್ಳಿ ನೆಂಚಿಕೊಂಡು ಹುಳಿ ಕುಡಿದರೆ ಕೆಮ್ಮು ನೆಗಡಿ ವಾಸಿಯಾಗುತ್ತದೆ ಎನ್ನುತ್ತಾರೆ ವೆಂಕಟಮ್ಮ.

ಬೆರಿಕೆ ಸೊಪ್ಪಿನ ಸಾರು

ಹೊಲ, ಗದ್ದೆ, ತೋಟಗಳಲ್ಲಿ ಸಿಗುವಂತ ಸೀಗೆಸೊಪ್ಪು, ಅಣ್ಣೇಸೊಪ್ಪು, ಕರಿಗಣಿಕೆಸೊಪ್ಪು, ಹೊನಗೊನೆ ಸೊಪ್ಪು, ಗಣಿಕೆಸೊಪ್ಪು, ಬೇಳೆಸೊಪ್ಪು, ಕಿಲಕೀರೆ ಸೊಪ್ಪು, ಅಕ್ಕೊರದಿ ಸೊಪ್ಪು, ಕೆಂಪುಗಣಿಕೆಸೊಪ್ಪು, ಕುಂಬಳ ಕುಡಿ, ನಗ್ಗುಲಕುಡಿ, ನುಗ್ಗೇಕುಡಿ, ಕಿರುಗೋನಿಸೊಪ್ಪು, ಮುಳಗೀರೆಸೊಪ್ಪು, ತುಪ್ಪೀರೆಸೊಪ್ಪು ಓಗೆ ಇನ್ನು ಮುಂತಾದ ಹಲವಾರು ಸೊಪ್ಪುಗಳನ್ನು ತಂದು ಕಾಳಿನೊಂದಿಗೆ ಬೇಯಿಸಿ ಮಾಡುವಂತ

ಉಪ್ಪುಸಾರಿಗೆ ಬೆರಕೆಸೊಪ್ಪಿನ ಸಾರು ಎನ್ನುತ್ತಾರೆ. ಹುಳಿಸಾರು, ಬಸ್ಸಾರು, ಮಸೊಪ್ಪು ಇವುಗಳನ್ನು ಮಾಡಲು ಬಳಸುವ ಮಸಾಲೆ ಪುಡಿಯನ್ನು ಕೊತ್ತಂಬರಿ ಬೀಜ, ಮೆಣಸು, ಜೀರಿಗೆ, ಸಾಸಿವೆ, ಹುರಿದ ಕಡ್ಲೆಕಾಳು, ಹೆಸರುಬೇಳೆ, ಉದ್ದಿನಬೇಳೆ, ಅಕ್ಕಿ, ಕರಿಬೇವಿನ ಸೊಪ್ಪು, ಮೆಣಸಿನಕಾಯಿ, ಚಕ್ಕೆ ಲವಂಗಗಳನ್ನು ಹದವಾಗಿ ಹುರಿದು ಒರಳು ಕಲ್ಲಿನಲ್ಲಿ ಕುಟ್ಟಿ ಮಸಾಲೆ ಪುಡಿಮಾಡಿರುತ್ತಾರೆ. ಇದನ್ನು ಕಾರದ ಪುಡಿ ಎಂದು ಕರೆಯುತ್ತಾರೆ. ಯಾವುದೇ ಸಾರು ಮಾಡಿದರೂ ಈ ಪುಡಿಯನ್ನು ಹಾಕೇ ಸಾರು ಮಾಡುತ್ತಾರೆ.

ಸಾರುಗಳಿಗೆ ಒಗ್ಗರಣೆ ಕೊಡುವ ವಿಧಾನಗಳು ಇಲ್ಲಿ ಬೇರೆ ಬೇರೆಯೆ ಇವೆ. ಕಲ್ಲು ಒಗ್ಗರಣೆ ಅಂದರೆ ಬಿಳಿಯ ಬಣ್ಣದ ಒಂದು ಬೆಣಚುಕಲ್ಲನ್ನು ತಂದು ಚೆನ್ನಾಗಿ ತೊಳೆದು ಒಗ್ಗರಣೆಗೆ ಹಾಕುತ್ತಾರೆ. ಸೌಟಿನ ಒಗ್ಗರಣೆ, ದೊಡ್ಡಪ್ರಮಾಣದಲ್ಲಿ ಅಡುಗೆ ಮಾಡುವಾಗ ಕರಿಹೆಂಚನ್ನು (ನಾಟಿಹೆಂಚು) ಚೆನ್ನಾಗಿ ಕಾಯಿಸಿ ಅದಕ್ಕೆ ಎಣ್ಣೆಬಿಟ್ಟು ಬೆಳ್ಳುಳ್ಳಿ ಮತ್ತು ಈರುಳ್ಳಿಯನ್ನು ಜಜ್ಜಿ ಹಾಕಿ ಒಗ್ಗರಣೆ ಮಾಡುತ್ತಾರೆ. ಇತ್ತೀಚೆಗಂತು ಕಬ್ಬಿಣದ ಅಥವಾ ಅಲ್ಯೂಮಿನಿಯಂ ಬಾಂಡಲಿಯಲ್ಲಿ ಒಗ್ಗರಣೆ ಮಾಡುವುದು ರೂಢಿಯಾಗಿದೆ.

ವಿಶೇಷ ಸಂದರ್ಭದ ಅಡುಗೆ ಅಥವಾ ಹಬ್ಬ ಹರಿದಿನಗಳ ಅಡುಗೆ

ಕಬ್ಬಾಳು ಪರಿಸರದ ದಿನನಿತ್ಯ ಮಾಡುವ ಅಡುಗೆಗಳಿಗಿಂತಲೂ ವಿಶೇಷವಾದ ಸಂದರ್ಭಗಳಲ್ಲಿ ಹಬ್ಬ-ಹರಿದಿನಗಳಲ್ಲಿ, ಮದುವೆ, ತಿಥಿಗಳಲ್ಲಿ ನಾಮಕರಣ ಮುಂತಾದ ಸಂದರ್ಭದಲ್ಲಿ ವಿಶೇಷವಾಗಿ ಅಡುಗೆ ತಯಾರು ಮಾಡುತ್ತಾರೆ. ಈ ಸಂದರ್ಭಗಳಲ್ಲಿ ಮಾಂಸಾಹಾರಿ ಮತ್ತು ಸಸ್ಯಾಹಾರಿ ಎರಡೂ ಬಗೆಯ ಅಡುಗೆಗಳನ್ನು ಮಾಡುತ್ತಾರೆ. ಸಂಕ್ರಾಂತಿ, ಯುಗಾದಿ, ಗೌರಿ, ಮಾರ್ನಮಿ, ದೀಪಾವಳಿ, ಶಿವರಾತ್ರಿ, ಶ್ರಾವಣಮಾಸ ಮುಂತಾದ ಸಂಪ್ರದಾಯದ ಹಬ್ಬಗಳಲ್ಲಿ ಸಿಹಿ ಅಡುಗೆಯ ಜೊತೆಗೆ ಮಾಂಸದ ಅಡುಗೆಯನ್ನು ಮಾಡುತ್ತಾರೆ.

ಸಿಹಿ ಅಡುಗೆಗಳು

ಯುಗಾದಿ ಹಬ್ಬದ ಸಂದರ್ಭದಲ್ಲಿ ಸಸ್ಯಹಾರಿ ಮತ್ತು ಮಾಂಸಹಾರದ ಅಡುಗೆಗಳನ್ನು ತಯಾರು ಮಾಡುತ್ತಾರೆ. ಮೊದಲ ದಿನ ಸಸ್ಯಾಹಾರವನ್ನು ಮತ್ತು ಮಾರನೆಯ ದಿನ ವರ್ಷದ ತೊಡಕುವಿನಲ್ಲಿ ಮಾಂಸಾಹಾರವನ್ನು ಮಾಡುತ್ತಾರೆ. ಮದುವೆ, ನಾಮಕರಣ ಹಬ್ಬಗಳ ಜೊತೆಗೆ ವಿಶೇಷ ದಿನಗಳಲ್ಲಿ ಸಿಹಿ ಅಡಿಗೆ ಬೋಜನ ಸಾಮಾನ್ಯವಾಗಿರುತ್ತದೆ. ಇಂತಹ ಸಂದರ್ಭಗಳಲ್ಲಿ ಒಬ್ಬಟ್ಟು (ಹೋಳಿಗೆ), ಪಾಯಸ, ಕಾಯಾಲು, ಕಡುಬು, ಶ್ಯಾವಿಗೆ, ಬೂಂದಿ, ಜಿಲೇಬಿ, ಮೈಸೂರು ಪಾಕು ಮೊದಲಾದ ಸಿಹಿ ತಿಂಡಿಯನ್ನು ಮಾಡುತ್ತಾರೆ. ಒಬ್ಬಟ್ಟು, ಪಾಯಸ, ಕಾಯಾಲು ಸಿಹಿ ಅಡುಗೆಯಲ್ಲಿ ಸಾಮಾನ್ಯವಾಗಿರುತ್ತದೆ.

ಒಬ್ಬಟ್ಟು (ಹೋಳಿಗೆ)

ಒಬ್ಬಟ್ಟನ್ನು ತಯಾರಿಸಲು ಕಡಲೆಬೇಳೆ, ತೆಂಗಿನಕಾಯಿ, ಬೆಲ್ಲ, ಏಲಕ್ಕಿ, ಮೈದಾಹಿಟ್ಟು ಮತ್ತು ಎಣ್ಣೆ ಬೇಕಾದ ವಸ್ತುಗಳು. ಕಡಲೆಬೇಳೆಯನ್ನು ನೀರಿನಲ್ಲಿ ಚೆನ್ನಾಗಿ ಬೇಯಿಸಿಕೊಂಡು ನೀರನ್ನು ಬಸಿಯಬೇಕು. ಮೊದಲೇ ತುರಿದು ಇಟ್ಟುಕೊಂಡಿದ್ದ ತೆಂಗಿನಕಾಯಿ ಮತ್ತು ಬೆಲ್ಲವನ್ನು ಸಿಹಿಗೆ ತಕ್ಕಷ್ಟು ಹಾಕಿ ಒಳ್ಳುಕಲ್ಲಿನಲ್ಲಿ ರುಬ್ಬಿಕೊಳ್ಳುತ್ತಾರೆ. ಜೊತೆಗೆ ಏಲಕ್ಕಿಯನ್ನು ಹಾಕಿ ಪ್ರತಿ ಒಳ್ಳಿಗೂ ರುಬ್ಬಬೇಕು. ಇದನ್ನು ಹೂರಣ ಎಂದು

ಕರೆಯುತ್ತಾರೆ. ಮೈದ ಹಿಟ್ಟನ್ನು ಮೊದಲು ನೀರಿನಲ್ಲಿ ಕಲಸಿ ಗಟ್ಟಿಯಾಗಿ ಮಾಡಿ ನಂತರ ಕಡಲೆಕಾಯಿ ಎಣ್ಣೆಯಿಂದ ಚೆನ್ನಾಗಿ ಕಲಸಿ ಇಟ್ಟುಕೊಂಡು ಮೇಣದ ರೀತಿ ಮಾಡಿಕೊಂಡು ಒಬ್ಬಟ್ಟಿನ ಆಕಾರಕ್ಕೆ ಎಷ್ಟು ಬೇಕೋ ಅಷ್ಟನ್ನು ತೆಗೆದು ಚೆಪ್ಪಟೆಯಾಗಿ ಅಗಲಮಾಡಿ ಅದರೊಳಗೆ ಹೂರಣವನ್ನು ಇಟ್ಟು ಮೈದ ಹಿಟ್ಟಿನಿಂದ ಮುಚ್ಚಬೇಕು. ನಂತರ ಅದನ್ನು ಬಾಳೆ ಎಲೆಯ ಮೇಲೆ ಇಟ್ಟು ತಟ್ಟಿ ರೊಟ್ಟಿಯಾಕಾರ ಮಾಡಿ ಹೆಂಚಿನ ಮೇಲೆ ಸುಡುತ್ತಾರೆ.

"ಒಬ್ಬಟ್ಟಿನಲ್ಲಿ ಕಾಯೊಬ್ಬಟ್ಟು ಮತ್ತು ಬೇಳೆ ಒಬ್ಬಟ್ಟು ತಯಾರಿಸುತ್ತಾರೆ. ಕಾಯೊಬ್ಬಟ್ಟಿಗೆ ಕೊಬ್ಬರಿಕಾಯಿ ಮತ್ತು ಬೆಲ್ಲ, ಏಲಕ್ಕಿಯನ್ನು ಮಾತ್ರ ಹಾಕುತ್ತಾರೆ. ಇದು ಎಷ್ಟು ದಿನವಾದರೂ ಹಳಸುವುದಿಲ್ಲ. ಒಂದು ತಿಂಗಳಿನವರೆಗೆ ಇಡಬಹುದು ಎನ್ನುತ್ತಾರೆ. ಆದರೆ ಬೇಳೆ ಒಬ್ಬಟ್ಟು ಬೇಗ ಹಳಸುತ್ತದೆ" ಎನ್ನುತ್ತಾರೆ (ಚೆನ್ನಬಸಮ್ಮ, ವಕ್ತೃ).

ಕಾಯಾಲು ಹಾಲುಕೀರು

ತೆಂಗಿನಕಾಯಿಯನ್ನು ತುರಿದುಕೊಂಡು ಒರಳುಕಲ್ಲಿನಲ್ಲಿ ನುಣ್ಣಗೆ ರುಬ್ಬಿಕೊಂಡು ಅದಕ್ಕೆ ಏಲಕ್ಕಿಕಾಯಿ ಮತ್ತು ಬೆಲ್ಲವನ್ನು ಹಾಕಿ ಚೆನ್ನಾಗಿ ಕುದಿಸಿದರೆ ಕಾಯಾಲು ತಯಾರಾಗುತ್ತದೆ. ಒಬ್ಬಟ್ಟಿಗೆ ಕಾಯಾಲು ಇರಲೇಬೇಕು.

ಕಡುಬು

ಗೌರಿ ಗಣೇಶನ ಹಬ್ಬಗಳಲ್ಲಿ ಇಲ್ಲಿ ಎಲ್ಲರ ಮನೆಯಲ್ಲೂ ತಪ್ಪದೇ ತಯಾರಿಸುತ್ತಾರೆ. ಏಕೆಂದರೆ ಗಣೇಶನಿಗೆ ಕಡುಬು ತುಂಬ ಪ್ರಿಯವಾದ ಆಹಾರವಂತೆ.

ಗಣೇಶ ಬಂದ
ಕಾಯಿ ಕಡುಬ ತಿಂದ
ಚಿಕ್ಕೆರೆಲಿ ಬಿದ್ದ
ದೊಡ್ಡಕೆರೇಲಿ ಎದ್ದ

ಎಂಬ ಮಾತುಗಳಲ್ಲೇ ತಿಳಿಯುತ್ತದೆ. ಗಣೇಶನಿಗೆ ಕಡುಬು ಪ್ರಿಯವಾದುದು ಎಂದು. ಆದ್ದರಿಂದ ಎಲ್ಲರ ಮನೆಯಲ್ಲೂ ಕಡುಬು ಮಾಡುತ್ತಾರೆ. ಅಕ್ಕಿಯನ್ನು ಹುರಿದು ಒರಳುಕಲ್ಲಿನಲ್ಲಿ ಕುಟ್ಟಿ ಅಥವಾ ಮಿಲ್ಲಿನಲ್ಲಿ ಬೀಸಿಕೊಂಡಿರುತ್ತಾರೆ. ಮೊದಲೆ ಕುದಿಯುವ ನೀರಿಗೆ ಸ್ವಲ್ಪ ಬೆಲ್ಲವನ್ನು ಹಾಕಿ ಚೆನ್ನಾಗಿ ಕುದಿಸಿ ಕುದಿದ ನೀರಿಗೆ ಅಕ್ಕಿಯ ಹಿಟ್ಟನ್ನು ಹಾಕಿ ದೊಣ್ಣೆಯಿಂದ ತಿರುವಿ ಚೆನ್ನಾಗಿ ಜಡಿದು ಮೊಣಕೈಗಾತ್ರದಷ್ಟು ದಪ್ಪವಾಗಿ ಮಾಡಿಕೊಂಡು ಅದನ್ನು ತಟ್ಟಿ ಅಗಲಮಾಡಿ ಅದರೊಳಕ್ಕೆ ಎಳ್ಳು ಬೆಲ್ಲವನ್ನು ಕುಟ್ಟಿ ಪುಡಿಮಾಡಿಟ್ಟುಕೊಂಡಿದ್ದು ಅದನ್ನು ಸ್ವಲ್ಪ ಸ್ವಲ್ಪ ಅದರೊಳಕ್ಕೆ ಹಾಕಿ ಅದನ್ನು ಅರ್ಧಭಾಗಕ್ಕೆ ಮಡಿಚಿದರೆ ಅರ್ಧಚಂದ್ರಾಕೃತಿಯಲ್ಲಿ ಬರುತ್ತದೆ. ಇದನ್ನು ಕಾಯಾಲು ಅಥವಾ ಪಾಯಸದ ಜೊತೆ ತಿನ್ನುತ್ತಾರೆ.

ಶ್ಯಾವಿಗೆ

ಶ್ಯಾವಿಗೆಯನ್ನು ಅಕ್ಕಿ ಹಿಟ್ಟಿನಿಂದ ಮಾಡುತ್ತಾರೆ. ಕಡುಬು ಮಾಡಲು ಬೇಯಿಸಿದ ಹಾಗೆ ಹಿಟ್ಟನ್ನು

ತಯಾರಿಸಿಕೊಂಡು ಶ್ಯಾವಿಗೆ ಒತ್ತುವ ಮಣೆಯಿಂದ ಒತ್ತಿ ಬೇಕಾದ ಆಕಾರಕ್ಕೆ ಮಾಡಿಕೊಂಡು ಕಾಯಾಲಿನ ಜೊತೆಯಲ್ಲಿ ತಿನ್ನುತ್ತಾರೆ.

ಪಾಯಸ

ಪಾಯಸವನ್ನು ರವೆಯಿಂದ ಮತ್ತು ಅಕ್ಕಿಯ ನುಚ್ಚಿನಿಂದ ತಯಾರು ಮಾಡುತ್ತಾರೆ. ಅಕ್ಕಿಯನ್ನು ನುಚ್ಚುಮಾಡಿ ಹುರಿದುಕೊಂಡು ಕಾದ ನೀರಿಗೆ ಬೆಲ್ಲ ಹಾಕಿ ಕುದಿಸಿ ಆ ಕುದಿದ ನೀರಿಗೆ ಅಕ್ಕಿಯನುಚ್ಚನ್ನು ಹಾಕಿ ತಿರುವಿದರೆ ತೆಳ್ಳಗೆ ಪಾಯಸ ತಯಾರಾಗುತ್ತದೆ. ಅದಕ್ಕೆ ಸ್ವಲ್ಪ ಕಾಯಿ ತುರಿ ಏಲಕ್ಕಿ ಜಜ್ಜಿ ಹಾಕಿದರೆ ಉರಕ್ಕಿ ಪಾಯಸ ತಿನ್ನಲು ಸಿದ್ಧವಾಗುತ್ತದೆ.

ಬೆಲ್ಲದನ್ನ

ದೇವರಿಗೆ ತಳಿಗೆ ಮಾಡುವ ಸಂದರ್ಭದಲ್ಲಿ ಬೆಲ್ಲದನ್ನವನ್ನು ಮಾಡುತ್ತಾರೆ. ಕುದಿಯುತ್ತಿರುವ ಬೆಲ್ಲದ ನೀರಿಗೆ ಅಕ್ಕಿಯನ್ನು ತೊಳೆದು ಹಾಕಿ ಜೊತೆಗೆ ತೆಂಗಿನಕಾಯಿಚೂರು ಮತ್ತು ಏಲಕ್ಕಿಯನ್ನು ಹಾಕುತ್ತಾರೆ. ಇದನ್ನು ತಳಿಗೆ ಎಂದು ಕರೆಯುತ್ತಾರೆ.

ಗಿಣ್ಣು

ಗಿಣ್ಣು, ಗಿನ್ನನ್ನ, ಗಿಣ್ಣನ್ನ ಎಂದೆಲ್ಲಾ ಕರೆಯುವ ಈ ಅನ್ನ ವಿಶೇಷವಾದುದು. ವಿಶೇಷ ಸಂದರ್ಭದಲ್ಲಿ ಮಾತ್ರ ಸಿಗುವಂತದ್ದು. ಹಸುವಿನ ಹಾಲಿನಲ್ಲಿ ಮಾಡುವಂತ ಈ ಗಿಣ್ಣು ಇಲ್ಲಿ ಅಮೃತ ಸಮಾನವೇ ಸರಿ. ಹಸು ಕರು ಹಾಕಿದ ಮೇಲೆ ಸುಮಾರು ಒಂದು ವಾರದವರೆಗೂ ಗಿಣ್ಣಾಲುಕೊಡುತ್ತದೆ. ಆ ಹಾಲನ್ನು ಕರೆದು ಒಂದು ಪಾತ್ರೆಗೆ ತುಂಬಿಟ್ಟು ನಂತರ ಈ ಗಿಣ್ಣು ಹಾಲನ್ನು ಹಾಕಿ ಅನ್ನ ಮಾಡುತ್ತಾರೆ. ಚೆನ್ನಾಗಿ ಕುದಿಯುತ್ತಿರುವ ನೀರಿಗೆ ಅಕ್ಕಿಗೆ ಬೇಕಾಗುವಷ್ಟು ಬೆಲ್ಲವನ್ನು ಹಾಕಿ ಚೆನ್ನಾಗಿ ಕುದಿಸಿ ಬೆಲ್ಲ ಕರಗಿಸಿ ಮೇಲೆ ಅಕ್ಕಿಯನ್ನು ಹಾಕಿ ಕೊಬ್ಬರಿ ತುರಿ, ಏಲಕ್ಕಿಯನ್ನು, ನಂತರ ಗಿಣ್ಣು ಹಾಲನ್ನು ಹಾಕಿ ಅನ್ನ ಮಾಡುತ್ತಾರೆ. ಇದು ತುಂಬ ಪೌಷ್ಠಿಕವಾದ ಆಹಾರ. ಅಷ್ಟುಬೇಗ ಕೆಡುವುದೂ ಇಲ್ಲ. ಇದನ್ನು ಬಿಸಿ ತಿಂದರೆ ಅಷ್ಟು ರುಚಿಸುವುದಿಲ್ಲ. ರಾತ್ರಿ ಮಾಡಿಟ್ಟು ಬೆಳಿಗ್ಗೆ ಎದ್ದು ತಿಂದರೆ ತುಂಬ ರುಚಿಯಾಗಿರುತ್ತದೆ ಎನ್ನುತ್ತಾರೆ ಸಿದ್ದಮ್ಮ.

ತಾಳ್ದ

ಇದು ಕಾರದಿಂದ ಕೂಡಿರುವ ಪದಾರ್ಥ. ತಾಳ್ದದಲ್ಲಿ ಹಲಸಿನಕಾಯಿ ತಾಳ್ದ, ಅವರೆಕಾಳು ತಾಳ್ದ ಎಂದು ಮಾಡುತ್ತಾರೆ. ಹಲಸಿನ ಕಾಯಿ ತಾಳ್ದವನ್ನು ಊರಲ್ಲಿ ಪರ, ಸಾವೆಯ ಸಂದರ್ಭದಲ್ಲಿ ಮಾಡುತ್ತಾರೆ. ಇದನ್ನು ಸಾಮಾನ್ಯವಾಗಿ ಸುಗ್ಗಿಯ ಸಂದರ್ಭದಲ್ಲಿ ಮಾಡುತ್ತಾರೆ. ತೆಂಗಿನಕಾಯಿಗಿಂತಲೂ ಸ್ವಲ್ಪ ದೊಡ್ಡದಾಗಿರುವ ಎಳೆಯ ಹಲಸಿನ ಕಾಯಿಗಳನ್ನು ಕಿತ್ತು ತಂದು ಮೇಲಿರುವ ಮುಳ್ಳು ಮತ್ತು ಸಿಪ್ಪೆಯನ್ನು ಒರೆದು, ಕೆತ್ತಿ, ಸಣ್ಣ ಸಣ್ಣದಾಗೆ ಚಿತ್ರಿಸಿಟ್ಟುಕೊಂಡು ಎಲ್ಲಾ ತರದ ಕಾಳುಗಳನ್ನು ಬೇಯಿಸಿ ಎಲ್ಲಾತರದ ತರಕಾರಿಗಳನ್ನು ಹಾಕಿ ಜೊತೆಗೆ ಈ ಕತ್ತರಿಸಿ ಚಿತ್ರಿಸಿದ ಹಲಸಿನಕಾಯಿ ದುದ್ದೆಯನ್ನು ತೊಳೆದು ಹಾಕಿ ಚೆನ್ನಾಗಿ ಬೇಯಿಸುತ್ತಾರೆ. ಕಾರ ಸಾಂಬಾರಗಳನ್ನು ಉಪ್ಪು, ಉಳಿಯನ್ನು ಹಾಕಿ ಚೆನ್ನಾಗಿ ಬೇಯಿಸಿ

ಗಟ್ಟಿಯಾಗಿ ಗೊಜ್ಜು ಮಾಡುತ್ತಾರೆ. ಇದಕ್ಕೆ ಹುಚ್ಚೆಳ್ಳು ಪುಡಿಯನ್ನು ವಿಶೇಷವಾಗಿ ಹಾಕುತ್ತಾರೆ. ನಂತರ ಇದಕ್ಕೆ ಒಗ್ಗರಣೆಕೊಟ್ಟು ಇಳುಕುತ್ತಾರೆ.

ಕರಗದ್ದೆ ಅನ್ನ ಕೀರೇಯ ಪಲ್ಯವು
ದೀರ ಬಸುರಾಯರ ಮಠದೇಲಿ
ದೀರ ಬಸುರಾಯರ ಮಠದೇಲಿ ಸಲ್ಲುಸುರು
ಬಾರೀಯ ಬಿರುದು ಹೊರುವೂರು

ದಾರು ಈರೇಕಾಯ ನಾರು ತಗ್ದು ಈಡಾಡಿ
ಒಳ್ಳೆಣ್ಣೆ ಬುಟ್ಟು ಹದಗೂಡಿ
ಒಳ್ಳೆಣ್ಣೆ ಬುಟ್ಟು ಹದಗೂಡಿ ತಾಳುದ್ವ
ದೀರ ಬಸುರಾಯರ ಮಠದೇಲಿ
ದೀರ ಬಸುರಾಯರ ಮಠದೇಲಿ ಸಲ್ಲುಸೂರು
ಬಾರೀಯ ಬಿರಿದು ಹೊರವೋರು

ಬಟ್ಟು ಕುಂಬಳಕಾಯ ತೊಟ್ಟುತಗ್ದು ಈಡಾಡಿ
ಒಳ್ಳೆಣ್ಣೆಬುಟ್ಟು ಹದಗೂಡಿ
ಒಳ್ಳೆಣ್ಣೆಬುಟ್ಟು ಹದಗೂಡಿ ತಾಳುದ್ವ
ಧೀರಬಸುರಾಯರ ಮಠದೇಲಿ
ಧೀರ ಬಸುರಾಯರ ಮಠದೇಲಿ ಸಲ್ಲಿಸೂರು
ಬಾರೀಯಬಿರಿದು ಹೊರುವೂರು

ಈ ಮೇಲಿನ ತ್ರಿಪದಿ ರೂಪದ ಹಾಡುಗಳಲ್ಲಿ ಇಲ್ಲಿನ ಜನಪದರು ಅಡುಗೆಯ ಸಂಸ್ಕೃತಿಯನ್ನು ವ್ಯಕ್ತಪಡಿಸಿದ್ದಾರೆ. ಹಿರೇಕಾಯಿ, ಕುಂಬಳಕಾಯಿಯನ್ನು ತಾಳ್ದ ಮಾಡಲು ಒಳ್ಳೆಣ್ಣೆಯನ್ನು ಉಪಯೋಗಿಸುತ್ತಿದ್ದರು. ಹಿಂದೆ ಮಠಗಳಲ್ಲಿ ಪರಮಾಡುವಾಗ ಮಠಕ್ಕೆ ತಮ್ಮ ಕೈಲಾದ ಸಹಾಯವನ್ನು ಜನರು ದವಸ ಧಾನ್ಯ ಹಣ್ಣು ತರಕಾರಿ ರೂಪದಲ್ಲಿ ನೀಡುತ್ತಿದ್ದರು. ಆ ಸಂದರ್ಭದಲ್ಲಿ ಅದರ ಅವಶ್ಯಕತೆಯೂ ಅವರಿಗೆ ಇತ್ತು. ಮಠವನ್ನು ಎಲ್ಲಾ ಜನಸಾಮಾನ್ಯರ ನೆರವಿನಿಂದ ನಡೆಸುತ್ತಿದ್ದರು. ಪ್ರತಿವರ್ಷವು ಮಠಗಳಿಗೆ ತಮ್ಮಲ್ಲಿ ತಮ್ಮದುಡದಲ್ಲಿದ್ದ ಕಾಣಿಕೆಯನ್ನು ಸುಗ್ಗಿಯ ಕಾಲದಲ್ಲಿ ಸಲ್ಲಿಸುತ್ತಿದ್ದರು. ಅದು ರಾಗಿ, ಅಕ್ಕಿ, ಕುಂಬಳಕಾಯಿ, ಅವರೆಕಾಯಿ, ಹಿರೇಕಾಯಿ, ಹಲಸಿನಕಾಯಿ ರೂಪದಲ್ಲಿತ್ತೆಂದು ತಿಳಿದುಬರುತ್ತದೆ. ಕೊಟ್ಟಂತ ತರಕಾರಿಗಳನ್ನು ನಾರು, ತೊಟ್ಟು ತೆಗೆದು ಹೇಗೆ ಒಳ್ಳೆಣ್ಣೆ ಬುಟ್ಟು ಹುರಿಯುತ್ತಿದ್ದರು ಎಂಬುದನ್ನು ಈ ಮೇಲಿನ ಸಾಲುಗಳು ತಿಳಿಸುತ್ತವೆ.

ಗುಗ್ಗರಿ

ಗಣೇಶನ ಹಬ್ಬದ ಸಂದರ್ಭದಲ್ಲಿ ಗಣೇಶನ ವಿಸರ್ಜನೆ ಮಾಡಿದ ಮೇಲೆ ಪ್ರಸಾದವಾಗಿ ಕೊಡಲು ಈ

ಗುಗ್ಗರಿಯನ್ನು ಮಾಡುತ್ತಾರೆ. ಕಡಲೇ ಕಾಳನ್ನು ಒಂದು ದಿನ ಮುಂದೆ ನೆನೆಸಿ, ಚೆನ್ನಾಗಿ ನೆನೆದ ಮೇಲೆ ಕಾಳನ್ನು ಸೋರಾಕಿ ನೀರನ್ನು ತೆಗೆದು ಇದಕ್ಕೆ ಈರುಳ್ಳಿ, ಬೆಳ್ಳುಳ್ಳಿ, ಹಸಿಮೆಣಸಿನಕಾಯಿ, ಕೊತ್ತಂಬರಿ ಸೊಪ್ಪು, ಎಣ್ಣೆ, ಎಲ್ಲವನ್ನು ಸಿದ್ದಪಡಿಸಿಟ್ಟುಕೊಂಡು ಒಗ್ಗರಣೆ ಕೊಡುತ್ತಾರೆ. ಒಗ್ಗರಣೆಯಲ್ಲೇ ಚೆನ್ನಾಗಿ ಬೇಯಿಸಿ ರುಚಿಗೆ ತಕ್ಕಷ್ಟು ಉಪ್ಪು ಮತ್ತು ಮೆಣಸಿನಪುಡಿ ಹಾಕಿ ಕೊನೆಗೆ ಕೊತ್ತಂಬರಿ ಸೊಪ್ಪನ್ನು ಹಾಕಿ ಕೆಳಗಿಳಿಸುತ್ತಾರೆ. ಕೆಲವು ಸಾರಿ ಕಡಲೆಕಾಳನ್ನು ನೆನೆಸಲು ಸಮಯ ಸಿಗದಿದ್ದರೆ ನೀರಿನಲ್ಲಿ ಚೆನ್ನಾಗಿ ಬೇಯಿಸಿ ನೀರನ್ನು ಬಸಿದು ಒಗ್ಗರಣೆಯನ್ನು ಕೊಡುತ್ತಾರೆ.

ಇತ್ತೀಚಿನ ದಿನಗಳಲ್ಲಿ ನಾಗರೀಕತೆಯು ಬೆಳೆದಂತೆಲ್ಲಾ ನಗರಗಳ ಪ್ರಭಾವದಿಂದ ಊಟ ತಿಂಡಿಗಳಲ್ಲಿ ಬದಲಾವಣೆಗಳಾಗುತ್ತಿವೆ. ಹಬ್ಬಹರಿದಿನಗಳಲ್ಲಿ ಮದುವೆ ಸಮಾರಂಭಗಳಲ್ಲಿ ಬೇರೆ ಬೇರೆ ತಿಂಡಿ ಊಟಗಳನ್ನು ಮಾಡುವುದು ಉಂಟು. ಪಲಾವು, ಗೀರೈಸ್, ಜೀರೋರೈಸ್, ಚಿತ್ರಾನ್ನ, ಪುಳಿಯೊಗರೆ, ಇಡ್ಲಿ, ದೋಸೆ, ವಡೆ, ಬಜ್ಜಿ, ಬೋಂಡಾಗಳು ಹೆಚ್ಚು ಹೆಚ್ಚು ಪ್ರಚಾರವಾಗಿವೆ. ಆದರೆ ಇವೆಲ್ಲ ವಿಶೇಷವಾದ ಮದುವೆ ಸಮಾರಂಭಗಳಲ್ಲಿ ಹೆಚ್ಚು. ಆದರೆ ಮನೆಗಳಲ್ಲಿಯೂ ಇತ್ತೀಚಿಗೆ ಇದು ಬೆಳೆಯುತ್ತಿದೆ ಎಂಬುದನ್ನು ಗುರುತಿಸಬಹುದು.

ಮಾಂಸದೂಟ, ಮಾಂಸಾಹಾರ

ಕಬ್ಬಾಳು ಪರಿಸರದಲ್ಲಿ ಮಾಂಸಾಹಾರಿ ಸಸ್ಯಾಹಾರಿಗಳೆಂದು ಬೇಧವಿಲ್ಲ. ಏಕೆಂದರೆ ಕೇವಲ ಮೂರು ನಾಲ್ಕು ಮನೆಗಳನ್ನು ಬಿಟ್ಟರೆ ಬಹುಸಂಖ್ಯಾತವಾಗಿರುವ ಎಲ್ಲರೂ ಮಾಂಸಾಹಾರಿಗಳೇ ಆಗಿದ್ದಾರೆ. ಈ ಪ್ರದೇಶದಲ್ಲಿನ ಮಾಂಸಾಹಾರಿಗಳು ಸೋಮವಾರ ಮಾಂಸ ತಿನ್ನುವುದಿಲ್ಲ. ಕೆಲವರು ಗುರುವಾರ ಇನ್ನೂ ಕೆಲವರು ಶನಿವಾರ ಮಾಂಸ ತಿನ್ನುವುದಿಲ್ಲ. ಬಹುಸಂಖ್ಯಾತರಿಗೆ ಯಾವುದೇ ವಾರವಿಲ್ಲ ಎಲ್ಲಾ ವಾರಗಳಲ್ಲೂ ಮಾಂಸ ತಿನ್ನುತ್ತಾರೆ.

ಸಾಕು ಪ್ರಾಣಿಗಳಾದ ಕೋಳಿ, ಕುರಿ, ಮೇಕೆ, ಹಸು, ಹಂದಿಗಳಲ್ಲದೆ, ಮೀನು, ಮೊಲ, ಕಾಡಂದಿ, ಕಾಡುಬೆಕ್ಕು, ಕೆಲವು ಪಕ್ಷಿಗಳನ್ನು ಮಾಂಸಕ್ಕಾಗಿ ಉಪಯೋಗಿಸುತ್ತಾರೆ. ಕಾಡಕ್ಕಿ, ಕೌಜುಗ, ನೀರುಕೋಳಿ, ನಾಮದಕೋಳಿ ಮುಂತಾದವುಗಳನ್ನು ತಿನ್ನುತ್ತಾರೆ. ಮಟನ್‌ಸಾರ್, ಮಾಂಸದೆಸ್ರು, ಬಾಡ್ನೆಸ್ರು, ತಲೆಮಾಂಸದಸಾರು, ಕರ್‌ಕಾಲ್‌ಸಾರು, ಮೀನ್‌ಸಾರು, ಮೀನುಳಿ, ಕರ್ಮೀನ್‌ಸಾರು, ಕರ್ಮೀನುಗೊಜ್ಜು, ಸೀಗಡಿಸಾರು, ಸೀಗಡಿಕಾರ, ಕೊರಬಾಡು, ಕೊರಬಾಡು ಸಾರು, ತಲೆಕಾಲ್‌ಸಾರು, ಬೋಟಿಗೊಜ್ಜು ಮುಂತಾದ ಪ್ರಕಾರಗಳಲ್ಲಿ ಮಾಂಸಾಹಾರವನ್ನು ಸೇವಿಸುತ್ತಾರೆ.

ಮಾಂಸದ ಸಾರು

ತಂದಂತಹ ಮಾಂಸವನ್ನು ತಮಗೆ ಬೇಕಾದ ಗಾತ್ರಕ್ಕೆ ಸಣ್ಣದಾಗಿ ಕುಯ್ದು ತುಂಡುಗಳನ್ನಾಗಿ ಮಾಡಿಕೊಂಡು ನೀರಲ್ಲಿ ಸುಣ್ಣಹಾಕಿ ಚೆನ್ನಾಗಿ ತೊಳೆದು, ಪಾತ್ರೆಯಲ್ಲಿ ಎಣ್ಣೆ, ಈರುಳ್ಳಿ, ಬೆಳ್ಳುಳ್ಳಿಯನ್ನು ಹಾಕಿ, ಒಗ್ಗರಣೆ ಮಾಡಿ ಚೆನ್ನಾಗಿ ಬೇಯಿಸುವುದು. ಬೆಂದಂತ ಮಾಂಸಕ್ಕೆ ಮೊದಲೇ ರುಬ್ಬಿಟ್ಟುಕೊಂಡಿದ್ದ ಮಸಾಲೆಯನ್ನು ಅಂದರೆ ಚೆಕ್ಕೆ, ಲವಂಗ, ಗಸಗಸೆ, ಹುರಿಗಡಲೆ, ತೆಂಗಿನಕಾಯಿ, ಕೊತ್ತಂಬರಿ ಸೊಪ್ಪು, ಪುದೀನ,

ಮೆಣಸಿನಕಾಯಿ, ಸುಟ್ಟ ಈರುಳ್ಳಿ, ಎಲ್ಲವನ್ನು ಒರಳುಕಲ್ಲಿನಲ್ಲಿ ರುಬ್ಬಿಕೊಂಡು ಬೆಂದಂತಹ ಮಾಂಸಕ್ಕೆ ರುಬ್ಬಿದ ಮಸಾಲೆಯನ್ನು ಹಾಕಿ ಚೆನ್ನಾಗಿ ಬೇಯಿಸುತ್ತಾರೆ. ನಂತರ ಮಾಂಸದ ಸಾರು ತಯಾರಾಗುತ್ತದೆ. ಮದುವೆಯಾದ ನಂತರ ಮೂರು ದಿನಕ್ಕೆ ನೆರವಿ (ಬೀಗರ ಊಟ) ಮಾಡುವಾಗ ಈ ಮಾಂಸದ ಊಟ ಇದ್ದೇ ಇರುತ್ತದೆ. ತಿಥಿಗಳಿಗೆ, ಕೆಲವರು ನಾಮಕರಣಕ್ಕೆ, ಸಾವೆಗಳಲ್ಲಿ ಕಡ್ಡಾಯವಾಗಿ ಮಾಡುತ್ತಾರೆ.

ತಲೆಮಾಂಸ ಅಥವಾ ತಲೆಕಾಲ್‌ಸಾರು

ಕುರಿ ಅಥವಾ ಮೇಕೆಯ ತಲೆ ಮತ್ತು ನಾಲ್ಕು ಕಾಲುಗಳನ್ನು ಬೆಂಕಿಯಲ್ಲಿ ಸುಡಬೇಕು. ಅದರಲ್ಲಿದ್ದ ಕೂದಲನ್ನು ತುಪ್ಪಟ ಎನ್ನುತ್ತಾರೆ. ಆ ತುಪ್ಪಟ ಸುಟ್ಟು ಕರಕಲಾಗಿ ಅದನ್ನು ಒಂದು ಚಾಕುವಿನಿಂದ ಎರೆದು ಉದುರಿಸಿ ಕಾಲಿನ ಗೊರಸಲನ್ನು ಬಿಸಿ ಇರುವಾಗಲೇ ತೆಗೆದು ಬಿಸಾಕಲಾಗುತ್ತದೆ. ತಲೆಯನ್ನು ಬಾಯಿಯ ಮೂಲಕ ಒಂದು ದೊಣ್ಣೆಯನ್ನು ಹಾಕಿ ಬೆಂಕಿಯಲ್ಲಿ ಚೆನ್ನಾಗಿ ಸುಟ್ಟು ಮೇಲಿದ್ದ ಕೂದಲು ತುಪ್ಪಟವನ್ನು ಚೆನ್ನಾಗಿ ಎರೆದು ಉದುರಿಸಿ ಸುಟ್ಟ ತಲೆ ಮತ್ತು ಕಾಲುಗಳನ್ನು ಬಿಸಿ ನೀರಿನಲ್ಲಿ ನೆನೆದ ನಂತರ ಸುಣ್ಣ ಮತ್ತು ರಾಗಿಹಿಟ್ಟು ಬೆರೆಸಿ ಚೆನ್ನಾಗಿ ತಿಕ್ಕಿ ತೊಳೆಯುತ್ತಾರೆ. ಹೀಗೆ ತೊಳೆದಾಗ ಕಪ್ಪಾಗಿದ್ದ ತಲೆಕಾಲುಗಳು ಬೆಳ್ಳಗಾಗುತ್ತವೆ. ಅದನ್ನು ಕತ್ತರಿಸಿ ಪ್ರತ್ಯೇಕವಾಗಿಯೇ ಬೇಯಿಸಲಾಗುತ್ತದೆ. ಮೂಳೆಗಳೇ ತುಂಬಿರುವ ತಲೆಮಾಂಸ ಇತರೆ ಮಾಂಸದ ಸಾರಿಗಿಂತ ಹೆಚ್ಚು ರುಚಿಯಾಗಿರುತ್ತದೆ. ಕಾಯಿಲೆ ಕಸಾಲೆಗಳಿಂದ ಸವೆದವರಿಗೆ, ಬಾಣಂತಿಯರಿಗೆ, ಕೈಕಾಲು ಮುರಿದು ಕಟ್ಟಿಸಿಕೊಂಡವರಿಗೆ ವಾರದಲ್ಲಿ ಕನಿಷ್ಟ ಒಂದು ದಿನವಾದರೂ ತಲೆಕಾಲು ಸಾರು ಮಾಡಿ ಕೊಡುತ್ತಾರೆ. ಇದು ತುಂಬ ಒಳ್ಳೆಯದೆಂದೂ ಕೂಡ ಭಾವಿಸಲಾಗಿದೆ. ಅದರಂತೆಯೇ ಉಪಯೋಗಿಸುತ್ತಾರೆ. ಗರಡಿಮನೆಗೆ ಹೋಗುವ ಯುವಕರು, ವ್ಯಾಯಾಮ ಶಾಲೆಗೆ ಹೋಗುವ ಯುವಕರು ಮುಂಜಾನೆ ಎದ್ದು ತಲೆಕಾಲಿನ ಸೂಪನ್ನು ಕುಡಿಯುತ್ತಾರೆ. ದೇಹ ದಷ್ಟಪುಷ್ಟವಾಗಿರುತ್ತದೆ ಎನ್ನುತ್ತಾರೆ.

ಕೊರಬಾಡು (ಒಣಬಾಡು)

ಒಣಬಾಡನ್ನು ಈ ಪ್ರದೇಶದಲ್ಲಿ ಕೊರಬಾಡು ಎಂದೇ ಕರೆಯುತ್ತಾರೆ. ಮನೆಯಲ್ಲಿ ಕಡಿದ ಕುರಿ, ಮೇಕೆಯ ಮಾಂಸದಲ್ಲಿ ಒಂದಿಷ್ಟು ಭಾಗವನ್ನು ಎತ್ತಿ ಸಣ್ಣ ಸಣ್ಣದಾಗಿ ಕುಯ್ದು ದಾರದ ಹಾಗೆ ಮಾಡಿ ಒಂದು ಉದ್ದನೆಯ ಕೋಲಿಗೆ ಎರಡೂ ಕಡೆ ದಾರಕಟ್ಟಿ ನೇತುಹಾಕಿದ ಆ ಕೋಲಿಗೆ ಈ ಕುಯ್ದ ಬಾಡನ್ನು ಕೋಲಿನ ಮೇಲೆ ದಾರದ ರೀತಿ ಇಳಿಬಿಟ್ಟು ಒಣಗಿಸುವುದು. ಹೀಗೆ ನಾಲ್ಕು ಐದು ದಿನಗಳ ಕಾಲ ಚೆನ್ನಾಗಿ ಬಿಸಿಲಿನಲ್ಲಿ ಒಣಗಿಸಿದ ಮಾಂಸಕ್ಕೆ ಕೊರಬಾಡು ಎನ್ನುತ್ತಾರೆ. ಕೊರಬಾಡನ್ನು ಹೆಚ್ಚಾಗಿ ದನದ ಮತ್ತು ಕೋಣದ ಮಾಂಸದಲ್ಲಿ ಮಾಡುತ್ತಾರೆ. ಕಬ್ಬಾಳಮ್ಮನಿಗೆ ಕೋಣ ಬಲಿಕೊಡುವ ಕುರುಹು ಇನ್ನು ಅಲ್ಪಸ್ವಲ್ಪ ಉಳಿದಿದೆ.

೩.೨. ಆರ್ಥಿಕ ಸ್ಥಿತಿಗತಿ

ಪಶುಪಾಲನೆಯ ನಂತರ ಕೃಷಿಯು ಮಾನವರ ಮೂಲ ವೃತ್ತಿಯಾಗಿ ವಿಕಸಗೊಂಡು ಇಂದಿಗೂ ಉಳಿದುಕೊಂಡು ಬಂದಿದೆ. ಗ್ರಾಮೀಣ ಸಂಸ್ಕೃತಿ ರೂಪತಳೆಯುವ ಕಾಲಕ್ಕೆ ಮನುಷ್ಯ ಕಾಡನ್ನು ಅಥವಾ

ಕಾಡನ್ನೇ ನಾಡನ್ನಾಗಿ ಪರಿವರ್ತಿಸಿ ಒಂದೆಡೆ ನೆಲೆನಿಂತು ತನ್ನ ಬದುಕಿಗೆ ಪಶುಪಾಲನೆ ಮತ್ತು ಕೃಷಿಯನ್ನು ಆಧರಿಸಿ ಜೀವನ ಕ್ರಮವನ್ನು ರೂಪಿಸಿಕೊಂಡನು. ಹೀಗೆ ವ್ಯವಸಾಯ ಅಥವಾ ಕೃಷಿಯನ್ನು ಅವಲಂಬಿಸಿದ ಮಾನವನ ಇತಿಹಾಸದಲ್ಲಿ ಗ್ರಾಮಸಮುದಾಯಗಳು ಏಳಿಗೆಯನ್ನು ಪಡೆದು ವಿವಿಧ ರೀತಿಯ ಸಾಮಾಜಿಕ ಲಕ್ಷಣಗಳು ಕಾಣಿಸಿಕೊಂಡವು. ವೃತ್ತಿವಿವರಗಳು, ವೈಯಕ್ತಿಕ ಸುಖ-ದುಃಖಗಳು ಕೌಟುಂಬಿಕ ರೀತಿನೀತಿಗಳು, ಸಹಕಾರ ಸಂಬಂಧಗಳು, ಧಾರ್ಮಿಕ ಅಂಶಗಳು ಮುಂತಾದುವು ಗ್ರಾಮೀಣ ಸಂಸ್ಕೃತಿಯನ್ನು ಹೆಚ್ಚು ಸಮೃದ್ಧಗೊಳಿಸಿದವು. ಇಂತಹ ಗ್ರಾಮ ಸಂಸ್ಕೃತಿ ಪ್ರಧಾನವಾಗಿ ಕೃಷಿಗೆ ಸಂಬಂಧಿಸಿರುವುದು ಸಹಜವಾಗಿದೆ. ಆದರೆ ಕೃಷಿ ಪದ್ಧತಿಯು ಭೌಗೋಳಿಕವಾಗಿ ಬೇರೆ ಬೇರೆ ಪ್ರದೇಶಗಳ ಪ್ರಾಕೃತಿಕ ಸನ್ನಿವೇಶ, ಸಂದರ್ಭಗಳನ್ನು ಅನುಸರಿಸಿ ಮತ್ತು ಸಾಮಾಜಿಕ ಸ್ವರೂಪವನ್ನು ಆದರಿಸಿ ರೂಪಿತವಾಗಿರುತ್ತದೆ. ಆದುದರಿಂದ ಕೃಷಿ ಸಂಸ್ಕೃತಿಯ ಸ್ವರೂಪವನ್ನು ಆಯಾ ಪ್ರಾದೇಶಿಕ ಪರಿಸರವನ್ನು ಅನುಸರಿಸಿ ಪರ್ಯಾಯೋಚಿಸುವುದರ ಜೊತೆಗೆ ಕೃಷಿಯನ್ನು ಅವಲಂಬಿಸಿರುವ ಜನಪದರ ಆರ್ಥಿಕ ಸ್ಥಿತಿಗತಿಯನ್ನು ನಿರ್ಧರಿಸುವಲ್ಲಿ ಕೃಷಿಯ ಪಾತ್ರ ಅರಿಯುವುದು ಅಗತ್ಯವಾಗಿದೆ.

ಪ್ರಸ್ತುತ ಕಬ್ಬಾಳು ಗ್ರಾಮೀಣ ಪ್ರದೇಶವೇ ಆಗಿದ್ದು, ಕೃಷಿಗೆ ಯೋಗ್ಯವಾದ ಭೂಮಿ ಮತ್ತು ಪರಿಸರವನ್ನು ಹೊಂದಿದೆ. ಉತ್ತರ, ದಕ್ಷಿಣ ಮತ್ತು ಪೂರ್ವದಿಕ್ಕಿನಲ್ಲಿ ಬಯಲು ಪ್ರದೇಶದ ಪರಿಸರವನ್ನು ಹೊಂದಿದ್ದು ಕೆರೆ ಕಟ್ಟೆಗಳನ್ನು ಹೊಂದಿದೆ. ಪಶ್ಚಿಮ ದಿಕ್ಕಿಗೆ ಕಬ್ಬಾಳುಬೆಟ್ಟ ಇದ್ದು ಕಬ್ಬಾಳಿನಿಂದ ಪಶ್ಚಿಮಾಭಿಮುಖವಾಗಿ ಬೆಟ್ಟಗಳ ಸಾಲು. ಆ ಸಾಲು ಕಂಚನಹಳ್ಳಿವರೆಗೂ ಹಬ್ಬಿದ್ದು ಇದು ಪಶ್ಚಿಮ ಘಟ್ಟಗಳನ್ನು ಸಂಪರ್ಕಿಸುತ್ತದೆ. ಈ ಸಾಲು ಬೆಟ್ಟಗಳ ತಪ್ಪಲಿನವರೆಗೂ ಕೃಷಿ ಮಾಡುವ ಭೂಮಿ ಹೊಂದಿಕೊಂಡಿದೆ. ಮಿಶ್ರ ಬೇಸಾಯ ಪದ್ಧತಿಯನ್ನು ಅನುಸರಿಕೊಂಡು ಬರುತ್ತಿರುವ ವಿಶಿಷ್ಟತೆಯನ್ನು ಕಾಣಬಹುದಾಗಿದೆ. ಇಲ್ಲಿನ ಪರಿಸ್ಥಿತಿ ಕರ್ನಾಟಕದ ಇತರೆ ಬೇರೆ ಬೇರೆ ಪ್ರದೇಶಗಳಲ್ಲಿ ಕಂಡುಬರುತ್ತಾದರೂ ಜಾನಪದೀಯವಾಗಿ ಸಾಂಸ್ಕೃತಿಕವಾಗಿ ಅನೇಕ ವೈಶಿಷ್ಟ್ಯಗಳಿಂದ ಕೂಡಿದೆ. ಇವುಗಳನ್ನು ಸಾಂಪ್ರದಾಯಿಕ ಮತ್ತು ವಾಣಿಜ್ಯ ಬೇಸಾಯ ಎಂದು ವಿಂಗಡಿಸಿ ಅಧ್ಯಯನಕ್ಕೊಳಪಡಿಸಲಾಗಿದೆ.

ಸಾಂಪ್ರದಾಯಿಕ ಕೃಷಿ ಪದ್ಧತಿ

ದೇಸೀ ಜ್ಞಾನಕ್ಕೆ ಪೂರಕವಾಗುವ ನಿಸರ್ಗದ ಸಮತೋಲನಕ್ಕೆ ಕಾರಣವಾಗುವ ಮಾನವರ ವಿಕಾಸಕ್ಕೆ ಮತ್ತು ಅವನ ಸುತ್ತಲ ಜೀವ ಪರಿಸರದ ವಿಕಾಸಕ್ಕೆ ಕಾರಣವಾಗುವ ಸಹಜವಾದ ಕೃಷಿಯೇ ಸಾಂಪ್ರದಾಯಿಕ ಕೃಷಿ ಅಥವಾ ಸಹಜ ಕೃಷಿಪದ್ಧತಿ ಅಥವಾ ಸಾವಯವ ಕೃಷಿ ಪದ್ಧತಿ. ಹೀಗೆ ಬೇರೆ ಬೇರೆ ಮಾದರಿಗಳು ಭಿನ್ನ ಎಂದು ಕಂಡುಬಂದರೂ ಅವುಗಳ ಮೂಲ ಆಶಯ ಒಂದೇ ಆಗಿದೆ. ಭೂಮಿಯ ಜೈವಿಕ ಸತ್ವವನ್ನು ನಾಶಮಾಡದೆ ಉತ್ತು ಬಿತ್ತಿ ಬೆಳೆತೆಗೆಯುವುದು. ಅಧಿಕ ಹಣದ ಖರ್ಚಿಲ್ಲದೆ ಹವಾಮಾನಕ್ಕೆ ಹೊಂದಿಕೊಂಡ ಸರಳ ಜ್ಞಾನ ಪ್ರಯೋಗದಲ್ಲಿ ವ್ಯವಸಾಯ ಮಾಡುವುದು. ಹಣದಾಸೆಗೆ ಬಲಿಯಾಗದೆ ನಿರಾಶೆಯನ್ನು ಪಡದೆ ಸಮಸ್ಥಿತಿಯ ಕೃಷಿ ಬದುಕನ್ನು ಕಟ್ಟಿಕೊಳ್ಳುವುದು. ಇದು ನೆಲಕ್ಕೆ ವಿಷ ಉಣಿಸದೆ ನೆಲ, ಜಲ, ಹವಾಮಾನಗಳ ಲಭ್ಯತೆಯನ್ನು ಅರಿತು ಕೃಷಿಜ್ಞಾನವನ್ನು ಬಳಸಿ ಬೆಳಸಿಕೊಂಡಿದೆ. ಈ ಎಲ್ಲ ಸಮಾನಾಂಶಗಳನ್ನು ಗಮನಿಸವರೆ

ಈ ಪದ್ಧತಿಗಳಲ್ಲಿ ಸ್ಥಳೀಯ ಜ್ಞಾನ ಪ್ರಧಾನವಾಗಿ ಬಿಂಬಿತವಾಗುವುದರಿಂದ ದೇಶಿ ಜೈವಿಕ ಕೃಷಿ ಪದ್ಧತಿ ಎಂದು ಹೇಳಬಹುದು.

ಇಲ್ಲಿ ಜನಪದರಿಗೆ ಕೃಷಿ ಎಂಬುದು ಕೇವಲ ಹೊಟ್ಟೆಪಾಡಿನ ಕಾರ್ಯವಾಗಿರಲಿಲ್ಲ ಅದೊಂದು ಸಂಸ್ಕೃತಿಯಾಗಿತ್ತು. ಅದು ಮನುಷ್ಯನ ಬದುಕಿಗೆ ಮಾತ್ರ ಸೀಮಿತವಾಗಿದ್ದ ಕಸುಬಾಗಿರಲಿಲ್ಲ. ಪ್ರಕೃತಿಯನ್ನು ಗೌರವಿಸಿ ನಿಸರ್ಗ ಧರ್ಮವನ್ನು ತುಂಬುಹೃದಯದಿಂದ ಗೌರವಿಸಿದಂತೆ ಕಟ್ಟಿಕೊಂಡ ಕಾಯಕವಾಗಿತ್ತು. ಸರ್ಕಾರಿ ಕೆಲಸಬಿಟ್ಟು ಕೃಷಿಯನ್ನೇ ಆಯ್ದುಕೊಂಡಿದ್ದ ಹಲವು ಜನರನ್ನು ಕಾಣಬಹುದು. ಉದಾಹರಣೆಗೆ ಕಬ್ಬಾಳು ಕುಳಿಯಲ್ಲಿನ ಹಲವು ಜನರು ನಲವತ್ತು ಐವತ್ತು ವರ್ಷಗಳ ಹಿಂದಿನ ಘಟನೆಗಳನ್ನು ಹೀಗೆ ನೆನೆಯುತ್ತಾರೆ. "ನಾನು ಐದುಕ್ಕಂಟ ಐದನೇ ತರಗತಿ ಇಸ್ಕೂಲ್ಗೆ ಹೋಗಿದ್ದಿ ಅಮೇಲೆ ಸರ್ಕಾರ್ದ ಕೆಲಸಾನು ಬಂತು. ಇವಾಗ ಭದ್ರಾವತಿಲಿ ಕರೆಂಟು ತಯಾರು ಮಾಡ್ತಾವ್ರಲ್ಲ ಅಲ್ಲೇ ನನ್ಗೆ ಕೆಲ್ಸ ಬಂದು ಎರ್ಡು ವರ್ಷ ಕೆಲ್ಸಾನು ಮಾಡ್ದಿ ಆ ಮೇಲೆ ನಮ್ಮಪ್ಪನು ನಮ್ಮಣ್ಣ ಕೆಲ್ಸ ಬುಡ್ಸಿ ನಮ್ಮೂರ್ಗೆ ಕರಕಂದು ಬರೂವಾಗ ಅಲ್ಲಿದ್ದ ದೊಡ್ಡಸಾಯಾಬ್ರು ಯಾಕ್ರಯ್ಯ ಗೌರ್ಮೆಂಟ್ ಕೆಲ್ಸ ಬುಡುಸ್ಬುಟ್ ಕರಕಂದೋಯ್ತಾ ಇದ್ದೀರಲ್ಲ ಮುಂದ್ಕೆ ಒಳ್ಳೆ ಅನ್ಕೂಲ ಆಯ್ತದೆ ಬ್ಯಾಡ ಕಂಡ್ರಯ್ಯ ಮುಂದ್ಕೆ ಸಂಬಳಾನು ಜಾಸ್ತಿ ಆಯ್ತದೆ ಇಲ್ಲೇ ಇರಿ ಅಂದ್ರು. ಅದ್ಕೆ ನಮ್ಮಣ್ಣ ನಿಮ್ಮ ಸಂಬ್ಳಯಾರುಗ್ಬೇಕು ಸಾಯಬ್ರೆ ನೀವು ಕೊಡು ಮೂರ್ ರೂಪಾಯಿನ ನಾವೇ ನಿಮ್ಗೆ ಕೊಟ್ಬುಡ್ತೀವಿ ನಮ್ಮುಡುಗುನ ಕಳುಸ್ಬುಡಿ, ಊರಲಿ ಹೊಲ ಮನೆ ನೋಡುರ್‍ಯಾರು ಉತ್ತುಬಿತ್ತು ಬೆಳೆಯೋರು ಯಾರು ಮನೇಲಿರೂರ್‍ನ ಹೊರಾಕೆ ಕೆಲಸಕ್ಕೆ ಕಳುಸ್ಬುಟ್ಟು ನಮ್ಮ ಭೂಮಿತಾಯಿ ಮೆಚ್ಚಳೆ, ನಮ್ಮ ಮನೇಲಿರು ಆಡು, ಕುರಿ, ದನ, ಕರ ನೋಡ್ಕಂಡು ಇದ್ರೆ ಸಾಕು ಅನ್ಬುಟ್ಟು ನನ್ನ ಕೆಲ್ಸ ಬುಡುಸ್ಬುಟ್ಟು ಕರಕಂದು ಬಂದ್ಬುಟ್ರು ಕನಪ್ಪ" ಎಂದು ಹೇಳುತ್ತಾರೆ. (ಸಿದ್ದಯ್ಯ, ವಕ್ತೃ)

ಇಲ್ಲಿ ಸರ್ಕಾರದ ನೌಕರಿಗಿಂತಲೂ ತಮ್ಮ ಬದುಕು ಕಟ್ಟಿಕೊಳ್ಳಲು ಕೃಷಿಯನ್ನೇ ಆಯ್ದುಕೊಂಡ ಬಗೆಯು ನಮ್ಮ ಜನಪದರ ಮತ್ತು ಕೃಷಿಯ ನಡುವಿನ ಸಂಬಂಧ, ನಂಬುಗೆಯನ್ನು ಕಾಣುತ್ತೇವೆ. ಆದರೆ ಇಂದು ಜಾಗತೀಕರಣದ ಮಾಯಾ ಜಾಲಕ್ಕೆ ಒಳಗಾಗುತ್ತಿರುವ ಇಂದಿನ ಸ್ಥಿತಿಯಲ್ಲಿ ಕೃಷಿ ಎಂಬುದು ಕೈಸುಟ್ಟುಕೊಂಡ ಕರ್ಮಕಾಂಡವಾಗಿದೆ. ಸಾವಿರಾರು ವರ್ಷಗಳಿಂದ ಕೃಷಿಯನ್ನು ಜೀವನ ಧರ್ಮವಾಗಿಸಿಕೊಂಡು ಬಂದಿದ್ದು ನಮ್ಮ ನೆಲ ಮೂಲ ಜನಪದ ಕೃಷಿ ನೆಲೆ ಕಳೆದುಕೊಳ್ಳುವಂತಾಗಿದೆ. ಭೂಮಿ ಬಿಸಿಲು ಮಳೆ ಹಾಗೂ ಮಾನಗಳಿಗೆ ಹೊಂದಿಕೊಂಡು ಅರಳಿ ರೂಪಗೊಂಡಿದ್ದ ಅನುಭವ ಅನುಸರಣೆ ಮಾಡದೆ ಸುಕ್ಕು ಹಿಡಿಯುತ್ತಿದೆ. ಇಂಥ ಅರಿವಿನ ನೆಲಮೂಲ ವಿಜ್ಞಾನ ಕಳೆದುಹೋಗುತ್ತಿದೆ. ರೈತ ಸಾಲ ತೀರಿಸಲಿಕ್ಕಾಗದೆ ಸಾವಿಗೆ ಶರಣಾಗುವ ದುರ್ಬಲ ಮನಸ್ಥಿತಿಗೆ ಬಂದಿದ್ದಾನೆ.

ಇಂದು ಹಳ್ಳಿಗಳಲ್ಲಿ ದುಡಿಯುವ ಯುವಕರ ಪಡೆ ಉಳಿದಿಲ್ಲ. ನಗರದ ಗಾರ್ಮೆಂಟ್ಸ್‌ಗಳಲ್ಲಿ ಸಿಕ್ಕುವ ಮಾಸಿಕ ಎರಡು ಮೂರು ಸಾವಿರ ರೂಪಾಯಿಗಳ ಜೀತಕ್ಕೆ ಸೇರಿದ್ದಾರೆ. ಇಂದು ಇಲ್ಲಿ ಉಳಿಯುವವರು ಕೈಲಾಗದ ಮುದುಕರು ಮತ್ತು ಮಕ್ಕಳು. ಹಬ್ಬಹರಿದಿನಗಳ ಸಂಭ್ರಮದಲ್ಲಿ ಪಾಲ್ಗೊಳ್ಳಲು ಮಾತ್ರ ನಗರಕ್ಕೆ ಹೋಗಿದ್ದ ಹುಡುಗರು ಹಳ್ಳಿಗಳಿಗೆ ಬರುತ್ತಿದ್ದಾರೆ. ಇಂತ ದಾರುಣತೆಯ ನಡುವೆಯು ಇಲ್ಲಿನ ರೈತರು

ಹಠಮುನಿಯಂತೆ ನೆಲಮೂಲ ಜ್ಞಾನಕ್ಕೆ ನಿಷ್ಠವಾಗಿ ಕೃಷಿ ಕಾಯಕದಲ್ಲಿ ತೊಡಗಿದ್ದಾರೆ. ಆಧುನಿಕ ಕೃಷಿಯ ಪ್ರಭಾವವಿದ್ದರೂ ಹಾಸಿಗೆ ಇದ್ದಷ್ಟು ಕಾಲು ಚಾಚಬೇಕಾದ ಅನಿವಾರ್ಯತೆಯಲ್ಲಿ ಹಲವರು ಸಾಂಪ್ರದಾಯಿಕ ಕೃಷಿಗೆ ಜೋತುಬಿದ್ದಿದ್ದಾರೆ.

ಪ್ರಸ್ತುತ ಪ್ರದೇಶದಲ್ಲಿ ಕೃಷಿಕಸುಬುದಾರರನ್ನು ಬೇಸಾಯಗಾರ, ಆರಂಬಗಾರ, ವ್ಯವಸಾಯಗಾರ, ರೈತ, ಒಕ್ಕಲಿಗ ಮುಂತಾದ ಬೇರೆ ಬೇರೆ ಶಬ್ದಗಳಿಂದ ಕರೆಯುತ್ತಾರೆ. ಇಲ್ಲಿನ ವ್ಯವಸಾಯ ಪದ್ಧತಿ ಸಾಂಪ್ರದಾಯಿಕವಾಗಿದ್ದು ಮಳೆಯನ್ನಾಧರಿಸಿದೆ. ಮುಂಗಾರು ಮತ್ತು ಹಿಂಗಾರು ಮಳೆಮಾರುತಗಳನ್ನಾಧರಿಸಿ ಬೆಳೆ ಬೆಳೆಯುವ ಪದ್ಧತಿ ರೂಢಿಯಲ್ಲಿದೆ. ನೀರಾವರಿ ಪ್ರದೇಶಗಳಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರಾದರೂ ಬೇಸಾಯದ ಬಹುಭಾಗ ಸಾಂಪ್ರದಾಯಿಕ ಮಾದರಿಯಲ್ಲೇ ನಡೆಯುತ್ತದೆ. ಇವುಗಳನ್ನು ಖುಷ್ಕಿ ತರಿ, ಬಾಗಾಯತು ಎಂಬುದಾಗಿ ವಿಂಗಡಿಸಲಾಗಿದೆ. ಇದನ್ನು ಜನಪದರು ಹೊಲ ಗದ್ದೆ, ತೋಟ ಎಂಬುದಾಗಿ ಕರೆಯುತ್ತಾರೆ.

ಖುಷ್ಕಿ

ಮಳೆಯನ್ನಾಧರಿಸಿ ಬೆಳೆಯುವ ಒಣ ಬೇಸಾಯ ಬೆಳೆಗಳಿಗೆ ಖುಷ್ಕಿ ಎಂಬುದಾಗಿ ಕರೆಯುತ್ತಾರೆ. ಈ ಶಬ್ದ ಬಳಕೆಯಲ್ಲಿಲ್ಲ ಸರ್ಕಾರದ ದಾಖಲೆಗಳಲ್ಲಿ ಖುಷ್ಕಿ ಭೂಮಿ, ಬೇಸಾಯ ಮುಂತಾದ ವಿವರಗಳು ದೊರೆಯುತ್ತದೆ. ಜನಪದರು ಇದನ್ನು ಒಣಭೂಮಿ, ಒಣಬೇಸಾಯ ಹೊಲದ ಬೇಸಾಯ ಎಂದು ಕರೆಯುತ್ತಾರೆ. ಕಬ್ಬಾಳು ಪ್ರದೇಶ ಹೆಚ್ಚಾಗಿ ಖುಷ್ಕಿ ಭೂಮಿ ಅಂದರೆ ಒಣಭೂಮಿಯನ್ನೇ ಹೊಂದಿದೆ. ಒಣ ಭೂಮಿಯ ಹೊಲಗಳಲ್ಲಿ ಹೆಚ್ಚಾಗಿ ರಾಗಿ ಬೆಳೆತೆಗೆಯುತ್ತಾರೆ. ಇದು ಈ ಪ್ರದೇಶದ ಪ್ರಮುಖ ಬೆಳೆಯಾಗಿದೆ. ಮತ್ತು ಆಹಾರ ಕ್ರಮದಲ್ಲಿ ಮುಖ್ಯವಾಗಿ ರಾಗಿ ಮುದ್ದೆ ಮುಖ್ಯ. ಉಳಿದಂತೆ ಅವರೆ, ತೊಗರಿ, ಹುರುಳಿ, ಜೋಳ, ಸಾಮೆ, ಹುಚ್ಚೆಳ್ಳು, ನವಣೆ ಮತ್ತು ತರಗುಣಿ, ಹಲಸಂದೆಕಾಳು ಬೆಳೆಗಳು ಒಣಬೇಸಾಯದಲ್ಲಿ ಬೆಳೆಯುವಂತಹ ಸಾಲು ಬೆಳೆಗಳಾಗಿವೆ ಇವು ಬಹುಪಾಲು ಎಲ್ಲಾ ಮಿಶ್ರಬೆಳೆಯಾಗಿದ್ದು ಈ ಬೆಳೆಗಳ ಉದ್ದೇಶ ಆಹಾರ ಪದಾರ್ಥಗಳ ಜೊತೆಗೆ ಬೇಸಾಯಕ್ಕೆ ಅವಶ್ಯಕವಾದ ದನ, ಕರ, ಎತ್ತು, ಎಮ್ಮೆ, ಆಡು, ಕುರಿಗಳಿಗೂ ಆಹಾರವಾಗುವಂತೆ ಮಿಶ್ರ ಬೆಳೆಯನ್ನು ಬೆಳೆಯುವುದಾಗಿದೆ. ಆದ್ದರಿಂದ ಸಾಂಪ್ರದಾಯಿಕವಾದ ಬೇಸಾಯದ ಉತ್ಪನ್ನಗಳು ಬಹುಪಯೋಗಿಯಾಗಿವೆ.

ಬೇಸಾಯ

ನೀರಾವರಿಯಲ್ಲಿ ಬೆಳೆಯುವ ಬೆಳೆಗಳನ್ನು ತರಿಬೇಸಾಯ ಎಂದು ಕರೆಯಲಾಗುತ್ತದೆ. ಇದನ್ನು ಗದ್ದೆ ಎನ್ನುವರು, ಗದ್ದೆಯಲ್ಲಿ ಪ್ರಮುಖವಾಗಿ ಭತ್ತದ ಬೆಳೆ ಮುಖ್ಯವಾಗುತ್ತದೆ. ಗದ್ದೆಗಳು ಸಾಮಾನ್ಯವಾಗಿ ಕೆರೆ ಏರಿ ಕೆಳಗಿರುತ್ತವೆ. ಗೋಡು ಮಣ್ಣಿನಿಂದ ಕಪ್ಪುಮಣ್ಣಿನಿಂದ ಕೂಡಿದ ಫಲವತ್ತಾದ ಭೂಮಿಯಾಗಿರುತ್ತದೆ.

ಬಾಗಾಯತು

ಹೊಲಗದ್ದೆಗಳನ್ನು ಹೊರತುಪಡಿಸಿ ಬೆಳೆಯುವ ತೋಟದ ಬೆಳೆಗಳನ್ನು ಬಾಗಾಯತು ಎಂದು ಕರೆಯುತ್ತಾರೆ. ಇದರಲ್ಲಿ ವಿವಿಧ ತರಕಾರಿ, ಸೊಪ್ಪು, ವಾಣಿಜ್ಯ ಬೆಳೆಗಳು ಮುಂತಾದುವುಗಳನ್ನು ಬೆಳೆಯುತ್ತಾರೆ.

ನಮ್ಮ ರೈತ ಬೇಸಾಯ ಮಾಡುವಾಗ ಮೂರು ಮುಖ್ಯ ಹಂತಗಳು ಬರತ್ತವೆ. ಮೊದಲು ಬಿತ್ತನೆ ಮಾಡುವುದು ನಂತರ ಕುಯಿಲು ಕಟ್ಟಣೆ ಕೊನೆಯದಾಗಿ ಒಕ್ಕಣೆ ಮಾಡುವುದು. ಈ ಮೂರು ಹಂತಗಳಲ್ಲಿ ಹಲವು ಆಚರಣೆ ಸಂಪ್ರದಾಯ ವಿಧಿವಿಧಾನಗಳನ್ನು ಪಾಲಿಸುತ್ತಾನೆ.

ಬಿತ್ತನೆ ಮಾಡುವುದು

ವಿವಿಧ ಹಂತಗಳನ್ನು ಹೊಂದಿರುವ ಕೃಷಿ ಮೊದಲನೆ ಹಂತ ಬಿತ್ತುವುದು. ಮುಂಗಾರು ಬೆಳೆಗಳನ್ನು ಬಿತ್ತುವ ಕಾರ್ಯ ರೋಹಿಣಿ ಮಳೆಯಿಂದಲೇ ಪ್ರಾರಂಭಗೊಂಡು ಅಸಲೆ ಮಳೆವರೆಗೂ ಹೊಲಗಳನ್ನು ಬಿತ್ತುವ ಕಾರ್ಯನಡೆಯುತ್ತದೆ. ಇದಕ್ಕೂ ಮೊದಲು ಬಿತ್ತನೆ ಕಾರ್ಯಕ್ಕೆ ಹೊಲಗಳನ್ನು ಹಸನಗೊಳಿಸಿ ಹದಮಾಡುತ್ತಾರೆ.

ಹೊಲಗಳ ಸುತ್ತ ಅಡ್ಡಾದಿಡ್ಡಿ ಬೆಳೆದಿರುವ ಬೇಲಿಗಳನ್ನು ಒಂದು ಸಮತಟ್ಟಾಗಿ ಕಡಿದು ಸುತ್ತಲೂ ಚೊಕ್ಕಟಮಾಡಿ ತೆವರಿ ಬದುಮೇಲಿನ ಗಿಡಗೆಂಡೆಗಳನ್ನು ಕಿತ್ತು. ಹೊಲದಲ್ಲಿರುವ ಕಲ್ಲುಗುಂಡುಗಳನ್ನು ಒತ್ತಟ್ಟಿಗೆ ಸೇರಿಸಿ ಸ್ವಚ್ಛಗೊಳಿಸುವ ಕಾರ್ಯವನ್ನು ಬೇಲಿಸವರುವುದು ಎನ್ನುತ್ತಾರೆ. "ಮೊದ್ಲು ಮಳೆ ಬರೂಕೆ ಮುಂಚೇನೆ ಬ್ಯಾಸ್ಗೆ ಕಾಲ್ದೇಲಿ ಹೊಲಗಳ ಸುತ್ತ ಬೇಲಿ ಸವರಿ, ಹೊಲದ ಮಧ್ಯ ಇರುವ ಮೆದೆ ಹಾಕುವಾಗ ಹಣೆಕೊಟ್ಟಿದ್ದ ದಿಂಡುಗಳೆಲ್ಲ ಒಂದುಕಡೆ ಎತ್ತಾಕಿ. "ಗುಂದನ್ನ (ಕಳದಲ್ಲಿ ರಾಗಿ ಒಕ್ಕಲು ಬಳಸುವ ಕಲ್ಲುಗುಂಡು) ಹೊಲದ ಒಂದು ಮೂಲೆಗೆ ತಳ್ಳಿ ಗಿಡಗೆಂಡೆಗಳನ್ನು ಕಿತ್ತಾಕಿ ಒಪ್ಪ ಮಾಡ್ಕಂದಿದ್ದರೆ ಮುಂಗಾರುಮಳೆ ಬಿತ್ನೆ ಉಳುಮೆ ಕೆಲಸಕ್ಕೆ ಅನುಕೂಲ ಆಯ್ತದೆ. ಮಳೆ ಬಿದ್ದಾಗ ತಕೊ ಬುಡು ಅಂದ್ರೆ ಆಗಲ್ಲು ಎಲ್ಲ ಮುಂಚಿತವಾಗಿ ಮಾಡ್ಕಂದ್ರೆ ಬಿತ್ನೆ ಟೈಮ್‌ಗೆ ಬಿತ್ನೆ ಮಾಡಬೋದು ಇಲ್ಲಾಂದ್ರೆ ಇಂಗಾಲ ಆಗೋಯ್ತದೆ ಕಣಪ್ಪ" ಅಂತಾರೆ ಕಾಳದುರ್ಗಣ್ಣ. (ವಕ್ತೃ)

''ಹೊಲದ ಮೇಲ್ಮಣ್ಣು ಅತ್ಯಮೂಲ್ಯವಾದುದ್ದಾಗಿದೆ. ಈ ಮೆಲ್ಮಣ್ಣು ಬೆಳೆಗಳಿಗೆ ಅತಿ ಅವಶ್ಯಕ ಎನಿಸಿದೆ. ಆದ್ದರಿಂದ ಮೇಲ್ಮಣ್ಣನ್ನು ರಕ್ಷಿಸುವುದರಿಂದ ಹೊಲದ ಫಲವತ್ತತೆ ಹೆಚ್ಚಾಗುವುದು. ಅಂತಹ ಹೊಲದ ಮೇಲ್ಮಣ್ಣು ಆರೋಗ್ಯವಂತ ಮಣ್ಣು ಎನಿಸುವುದು. ಆರೋಗ್ಯವಂತ ಮಣ್ಣಿನಲ್ಲಿ ಬೆಳೆಗಳು ಆರೋಗ್ಯವಂತವಾಗಿರುತ್ತವೆ. ರಭಸದಿಂದ ಬಿದ್ದ ಮಳೆನೀರಿನಿಂದ ಹಾಗೂ ಬಿರುಗಾಳಿಗೆ ಹೊಲದ ಮೇಲ್ಮಣ್ಣಿನ ಕಣಗಳು ಕೊಚ್ಚಿ ಹೋಗದಂತೆ ಹಾಗು ಹಾರಿಹೋಗದಂತೆ ತಡೆಯುವುದು ಮಣ್ಣಿನ ರಕ್ಷಣೆ ಎನಿಸುವುದು. ಆಗ ಮಣ್ಣಿನ ಆರೋಗ್ಯ ಮತ್ತು ಸತ್ವದ ರಕ್ಷಣೆಯಾಗುತ್ತದೆ. ಮಣ್ಣನ್ನು ರಕ್ಷಿಸಿದರೆ ಮಣ್ಣು ಬೆಳೆಯನ್ನು ರಕ್ಷಿಸುತ್ತದೆ. ಮಣ್ಣು ರೈತರಿಗೆಕಣ್ಣು ಇದ್ದಹಾಗೆ. ಹೇಗೆ ಕಣ್ಣನ್ನು ರಕ್ಷಣೆ ಮಾಡುತ್ತೇವೋ ಅದೇರೀತಿ ಮಣ್ಣಿನ ರಕ್ಷಣೆ ಮಾಡಬೇಕು. ಆಕಾಶದಿಂದಬೀಳುವ ಒಂದೊಂದು ಮಳೆ ಹನಿಯ ಹೊಲದಲ್ಲೇ ಇಂಗಬೇಕು'' (ಸಾಂಪ್ರದಾಯಿಕ ಒಕ್ಕಲುತನ: ಈರಯ್ಯ ಕಿಲ್ಲೇದಾರ ಪು ೧೭, ಕನ್ನಡ ಪುಸ್ತಕ ಪ್ರಾಧಿಕಾರ ೨೦೦೮). ಹೀಗೆ ಜನಪದರಲ್ಲಿ ಭೂಮಿಯ ರಕ್ಷಣೆಗೆ ಹೆಚ್ಚು ಒತ್ತುಕೊಡುತ್ತಾರೆ. ಮಣ್ಣಿನ ರಕ್ಷಣೆ ಮಾಡುತ್ತಾರೆ. ಹೊಲಗಳ ಬದುಗಳಲ್ಲಿ ಒಡ್ಡುಗಳನ್ನು ನಿರ್ಮಿಸಿ ಮಳೆಬಂದರೂ ಭೂಮಿ ಕುಸಿಯದ ಹಾಗೆ ಮಾಡಿ ಬೀಳುವ ಮಳೆ ನೀರು ಹೊಲದಲ್ಲೆ ಇಂಗುವಂತೆ ಮಾಡುತ್ತಾರೆ.

ಹೊನ್ನೇರು

ಹೊನ್ನಾರು ಅಥವಾ ಹೊನ್ನೇರು ಎಂದು ಕರೆಯುವ ಇದು ಕೃಷಿ ವರ್ಷದ ಮೊದಲ ಆಚರಣೆಯಾಗಿದೆ. ಈ ಆಚರಣೆ ರಾಷ್ಟ್ರದ ಎಲ್ಲಾ ಭಾಗಗಳಲ್ಲಿ ಬೇರೆ ಬೇರೆ ಹೆಸರಿನಲ್ಲಿ ಆಚರಣೆಯಲ್ಲಿದೆ. ಆದರೆ ದಕ್ಷಿಣ

ಕರ್ನಾಟಕದ ಭಾಗಗಳಲ್ಲಿ ಹೊನ್ನೇರು ಎಂಬ ಆಚರಣೆ ವಿಶೇಷವಾಗಿ ಆಚರಣೆ ಮಾಡುತ್ತಾರೆ. ಪ್ರಸ್ತುತ ಪ್ರದೇಶದಲ್ಲಿ ಪೂಜೆ ಎಂದು ವಿಶೇಷ ಆಚರಣೆಯಲ್ಲಿದೆ.

ಹೊನ್ನೇರು ಎಂದರೆ ಹೊನ್ನಿನ ಏರು, ಅಂದರೆ ಬಂಗಾರದ ನೇಗಿಲು. ರೈತರು ಮೊದಲ ಮಳೆಬಿದ್ದಾಗ ನೆಲ ಉಳುವ ಸಂಭ್ರಮದಲ್ಲಿರುತ್ತಾರೆ. ವರ್ಷದ ಮೊದಲು ಹೊಲಕ್ಕೆ ಏರುಕಟ್ಟುವಾಗ ಮಾಡುವ ಪೂಜೆ ಹೊನ್ನೇರು ಪೂಜೆ. ದಕ್ಷಿಣ ಕರ್ನಾಟಕದ ಕೆಲವು ಭಾಗಗಳಲ್ಲಿ ಯುಗಾದಿಯ ಮಾರನೆಯ ದಿನ ಉಳಲು ಆರಂಬ ಮಾಡುತ್ತಾರೆ. ಆ ಊರಿನ ಎಲ್ಲಾ ಜನರು ಸೇರಿ ಒಟ್ಟಾಗಿ ಸೇರಿ ಜೋಯಿಸರ ತೀರ್ಮಾನದಂತೆ ಯಾರು ಏರು ಕಟ್ಟಬೇಕು ಎಂದು ತೀರ್ಮಾನದ ಮೇರೆಗೆ ಏರು ಕಟ್ಟುತ್ತಾರೆ. ಆದರೆ ಪ್ರಸ್ತುತ ಕಬ್ಬಾಳು ಕುಳಿಯಲ್ಲಿ ಪ್ರತಿಯೊಬ್ಬ ರೈತರು ತಮ್ಮ ತಮ್ಮ ಹೊಲಗಳಿಗೆ ಮೊದಲು ಏರು ಕಟ್ಟಿದ್ದಾಗ ಹೊನ್ನೇರು ಪೂಜೆಯನ್ನು ತಪ್ಪದೇ ಮಾಡುತ್ತಾರೆ.

ಹೊನ್ನೇರು ಕಟ್ಟುವದಿನ ಮನೆಯ ಎಲ್ಲರಿಗೂ ಸಂಭ್ರಮ. ರೈತ ಅಂದು ಏರು ಕಟ್ಟಲುಬೇಕಾದ ಎಲ್ಲ ವಸ್ತುಗಳನ್ನು ನೇಗಿಲು, ನೊಗ, ಎತ್ತುಗಳು ಎಲ್ಲವನ್ನು ಅಣಿಮಾಡಿಕೊಂಡು ಹೊಲಕ್ಕೆ ಹೋದರೆ, ಮನೆಯಹೆಣ್ಣುಮಕ್ಕಳು ಪೂಜೆಗೆ ಬೇಕಾದ ಸಾಮಾನುಗಳನ್ನು ಹೊಂದಿಸಿಕೊಳ್ಳುವುದು ಅವರ ಕೆಲಸ. ರಾತ್ರಿ ನೆನೆಸಿಟ್ಟ ಅಕ್ಕಿ ಮತ್ತು ಎಳ್ಳಿಗೆ ಬೆಲ್ಲ ಅಥವಾ ಸಕ್ಕರೆ ಬೆರೆಸಿ ಎಳ್ಳು-ಅಕ್ಕಿ ಸಿದ್ಧಪಡಿಸುತ್ತಾರೆ. ಹಿತ್ತಲಲ್ಲಿನ ಹೂ ಗಳನ್ನು ಕೊಯ್ದು ಹೂಕಟ್ಟಿ ಗಂಧದ ಕೊರಡನ್ನು ತೇಯಲು ಮನೆಯ ಮೇಲಿನ ಒಂದು ನಾಟಿಹಂಚನ್ನು ಮಕ್ಕಳ ಕೈಗೆ ಕೊಟ್ಟು, ಗಂಧತೇಯಿಸುತ್ತಾರೆ. ಹೀಗೆ ಹೂ ಎಲೆ, ಅಡಿಕೆ, ಗಂಧ ಚಂದ, ಹರಿಸಿನ, ಕುಂಕುಮ, ವಿಭೂತಿ, ತೆಂಗಿನಕಾಯಿ, ಎಲ್ಲವನ್ನು ಹದಮಾಡಿಕೊಂಡು ಹೊಲಕ್ಕೆ ಕೊಂಡೊಯ್ಯುತ್ತಾರೆ. "ನಾಳಕೆ ಮೊದ್ನೇರು ಕಟ್ತೀವಿ ಅಂತ ಮನೇಲಿ ಹೇಳ್ತರೆ ರಾತ್ರಿನೆ ನಾವು ಪೂಜೆಗೆ ಬೇಕಾದ ಸಾಮಾನೆಲ್ಲ ಹದ ಮಾಡ್ಕತೀವಿ. ಅಕ್ಕಿನ ಉಸಿಹಾಕಿ ಇತ್ಲೇಲಿ ಇರುವ ಹೂವು ಕೊಯ್ಕಂದು ಹೂವಕಟ್ಟಬೇಕು. ಗಂದ ತೇಯ್ಕಬೇಕು ಗಂದಧದಕಡ್ಡಿ ವಿಭೂತಿ, ಹರಿಸಿನ-ಕುಂಕುಮ, ತೆಂಗಿನಕಾಯಿ, ಪತ್ರೆ ಎಲ್ಲವನ್ನು ಹದಮಾಡ್ಕಬೇಕು, ಒಂದು ಚೊಂಬು ತುಂಬಿದ ನೀರು ತಕ್ಕಂಡು ಹೊಲ್ತಾಕೆ ಹೋಗಿ ಏರ್ಗೆ ಪೂಜೆ ಮಾಡ್ಬೇಕು. ನೊಗ, ಮೇಳಿ ಎಲ್ಲಕ್ಕು ಗಂದಚಂದ್ರ ಇಕ್ಕಿ ಕಾಯೊಡೆದು ಪೂಜೆ ಮಾಡಿ ಭೂಮಿತಾಯಿಗೆ ನಮಿಸಿ ನಮ್ಗೆ ಹೆಚ್ಚೊಕ್ಕಲು ಕೊಡವ್ವ ಅಂತಕೇಳ್ಕತೀವಿ, ಕಾಯಿಬೆಲ್ಲ ಏಳ್ಳು ಅಕ್ಕಿ ಎಲ್ಲ ಹಸುಗೊಳಿಗೂ ಸ್ವಲ್ಪ ತಿನ್ನಿಸಿ ನಾವು ತಿಂದು ಮನೆಗೆಬತ್ತೀವಿ" ಎನ್ನುತ್ತಾರೆ. (ಗೌರಮ್ಮ, ವಕ್ತ) ಹೀಗೆ ಮೊದಲ ಪೂಜೆಯಲ್ಲಿ ಹೆಣ್ಣುಮಕ್ಕಳ ಪಾತ್ರವು ಮುಖ್ಯವಾಗುತ್ತದೆ. (ಕಬ್ಬಾಳಮ್ಮನ ಜಾತ್ರೆಯಲ್ಲು ಹೊನ್ನೇರು ಪೂಜೆ ಮಾಡಿ ಜಾತ್ರೆ ಪ್ರಾರಂಭಿಸುತ್ತಾರೆ)

ಇಲ್ಲಿನ ಜನರು ತಮ್ಮ ಜೀವನಕ್ಕೆ ಅನ್ನಕೊಡುವ ಭೂಮಿತಾಯಿಯನ್ನು ಮೊದಲು ಪೂಜಿಸುತ್ತಾರೆ. ಅದೇ ಭೂಮಿಪೂಜೆ ಅಂದರೆ ಹೊನ್ನೇರುಪೂಜೆ.

ಕಟ್ಟೇಯ ಕೆಳಗಾಲ ಪುಟ್ಟ ಗಣಗಲೆ ಹೂವ
ಹತ್ತೆಂಟು ಕೊಡೆ ಕೈತುಂಬ
ಹತ್ತೆಂಟು ಕೊಡೆ ಕೈತುಂಬ ಬಸವಯ್ಯ

ಕೊಂಬು ಚೆಂದುಳ್ಳ ಬಸವಯ್ಯಗೆ

ಏರೀಯ ಕೆಳಗಾಲ ದಾರು ಗಣಗಲೆ ಹೂವ

ಐದಾರು ಕೂದೆ ಕೈತುಂಬ

ಐದಾರು ಕೂದೆ ಕುತುಂಬ

ಕೊಂಬು ಚೆಂದುಳ್ಳ ಬಸವಯ್ಯಗೆ

ಭೂಮಿತಾಯಿಗೆ ಜನಪದರಿಗೆ ಮೊದಲ ಸ್ಥಾನ ನೀಡಿದರೆ ಎರಡನೆಯದಾಗಿ ಮೂಕಬಸವಣ್ಣನಿಗೆ. ಹಸು ಎತ್ತುಗಳು ಇಲ್ಲದೆ ಯಾವ ಕೃಷಿಕಾರ್ಯವು ಕೈಗೂಡುವುದಿಲ್ಲ. ಆದ್ದರಿಂದ ಹೊನ್ನೇರು ಪೂಜೆ ಮಾಡುವಾಗ ತಮ್ಮ ಬದುಕನ್ನು ಬಂಗಾರಗೊಳಿಸುವ ಬಸವಣ್ಣನನ್ನು ಪೂಜಿಸುತ್ತಾರೆ. ಹೊನ್ನೇರುಪೂಜೆಗೆ ಇಂದಿನ ಹಾಗೆ ಮಾರುಕಟ್ಟೆಯಲ್ಲಿ ಹೂಗಳನ್ನು ತಂದು ಪೂಜಿಸುತ್ತಿರಲಿಲ್ಲ. ಹಿಂದೆ ತಮ್ಮ ಮನೆ ಹಿಂದೆ, ಹೊಲದ ಹತ್ತಿರ ಕೆರೆ ಕಟ್ಟೆಯ ಹತ್ತಿರ ಇರುವ ಕಣಗಲೆ ಹೂಗಳನ್ನು ಅದರ ಎಲೆಗಳನ್ನು ಕೂಯ್ದು ತಂದು ಹೂವಿನ ಮದ್ಯ ಮದ್ಯ ಹಸಿರೆಲೆಗಳನ್ನು ಸೇರಿಸಿ ಕಟ್ಟಿ ಹಸುಗಳ ಸುಂದರ ಕೊಂಬುಗಳಿಗೆ ಕಟ್ಟುತ್ತಾರೆ.

ಹೊನ್ನೇರು ಕಟ್ಟುವಾಗ ನುಡಿದ ಹೊನ್ನಾಗವಳಿ

ಹನ್ನೆರಡರಬಿ ಇದಿರಾದೊ

ಹನ್ನೆರಡಬಿ ಇದರಾದೊ ಅಣ್ಣಯ್ಯ

ನಿನ್ನೊಲಕೆ ಹೊನ್ನೇರ ಒಡೆವಾಗ

ಹೊನ್ನೇರು ಕಟ್ಟುವಾಗ ಶುಭಗಳಿಗೆ ನೋಡಿಕಟ್ಟುವ ಪದ್ಧತಿ ಜನಪದರಲ್ಲಿದೆ. ಹೊನ್ನಾಗವಳಿ ಯಾವ ದಿಕ್ಕಿನಲ್ಲಿ ಕೂಗಿತು ಅದು ಮುಖ್ಯವಾಗುತ್ತದೆ. ತುಂಬಿದ ಬಿಂದಿಗೆಗಳು ಎದುರಾದರೆ ಅದು ಶುಭ ಸಂಕೇತವಾಗಿದೆ.

ಹೊಲ ಹದಮಾಡುವುದು

ಹೊಲಗಳನ್ನು ಮೂರು ನಾಲ್ಕು ಬಾರಿ ಉಳುಮೆ ಮಾಡಿ ಮಣ್ಣನ್ನು ಹದಗೊಳಿಸುತ್ತಾರೆ. ಮೊದಲ ಉಳವನ್ನು ಕರಬೆ ಎಂದು ನಂತರ ಉಳುವ ಉಳಗಳನ್ನು ಮೊಗಚಣೇ ಎಂದು ಕರೆಯುತ್ತಾರೆ. ನಂತರ ಗೊಬ್ಬರ ಗೋಡು ಹೊಡೆದು ಅದನ್ನು ಹೊಲಕ್ಕೆ ಎರಚಿ ಹಿಂದೆಯೇ ಮತ್ತೊಂದು ಉಳ ಉಳುತ್ತಾರೆ.ಇದನ್ನು ಗೊಬ್ಬರ ಮರೆಸುವುದು ಎಂದು ಕರೆಯುವರು. ಗೊಬ್ಬರ ಮಳೆಬಂದು ನೀರಿನಲ್ಲಿ ಕೊಚ್ಚಿಕೊಂಡು ಹೋಗುತ್ತದೆ. ಅದನ್ನು ತಮ್ಮ ಹೊಲದಲ್ಲೇ ಉಳಿಯುವ ಹಾಗೆ ಮಾಡಲು ಉಳುಮೆ ಮಾಡಿ ಮಣ್ಣಿನಲ್ಲಿ ಮರೆಯಾಗುವಂತೆ ಮಾಡುವುದೆ ಗೊಬ್ಬರ ಮರೆಸುವುದು.

ಕಣ್ಣು ಕಪ್ಪೋನೆ ಉಬ್ಬು ನೇರುಳ್ಳೋನೆ

ಗೊಬ್ಬುರದ ಗಾಡಿ ವಡುವೋನೆ

ಗೊಬ್ಬುರದ ಗಾಡಿ ವಡುವೋನೆ ಅಣ್ಣಯ್ಯ

ನಿನ್ನಸ್ತ್ರದಲವಳೆ ಸಿಂದೇವಿ

ಇಲ್ಲಿ ಗೊಬ್ಬರ ಅಂದರೆ ಹಸುಗಳ ಸಗಣೆ ಮತ್ತು ಮೂತ್ರ. ಇದು ಹೊಲಗಳಿಗೆ ಬಹುಹಿತ. ಗಾಡಿಯಲ್ಲಿ ತುಂಬಿ ಹೊಲಗಳಿಗೆ ಹೊಡೆಯುವಾಗ ಗೊಬ್ಬರ ಹೊಡೆಯುವವನ ಅವಸ್ಥೆ ಸರಿಯಿರುವುದಿಲ್ಲ

ಬಟ್ಟೆಗಳೆಲ್ಲ ಕೊಳೆಯಾಗಿರುತ್ತದೆ. ಆದರೂ ಬದುಕ ಬಂಗಾರವಾಗಿಸುವ ಮಾತೆ ನಿನ್ನ ವಸ್ತ್ರದಲ್ಲೇ ಇದ್ದಾಳೆಂದು ಹೇಳುವುದಿದೆ. "ಚೆನ್ನಾಗಿ ಕಳಿತ ಸಗಣಿ ಗೊಬ್ಬರದಲ್ಲಿ ಸೂಕ್ಷ್ಮಾಣುಜೀವಿಗಳು ಮತ್ತು ಪೋಷಕಾಂಶಗಳು ನಾಶವಾಗದೆ ಜೀವಂತವಾಗಿರುತ್ತವೆ. ಸೆಗಣಿ ಗೊಬ್ಬರವನ್ನು ಹೊಲಕ್ಕೆ ಹಾಕಿ ಬಹಳ ದಿವಸಗಳವರೆಗೆ ಗುಪ್ಪಿಗುಡ್ಡೆಗಳಾಗಿ ಬಿಡಬಾರದು. ಬಿಸಿಲಿಗೆ ಗೊಬ್ಬರದಲ್ಲಿರುವ ಸೂಕ್ಷ್ಮಪೋಷಕಾಂಶಗಳು ನಾಶವಾಗುತ್ತವೆ. ಮತ್ತು ಸಾರಜನಕದ ಅಂಶವು ಆರಿ ನಷ್ಟವಾಗುವುದು. ಆದ್ದರಿಂದ ಮುಂಚಿತವಾಗಿ ಒಂದು ತಿಂಗಳು ಮೊದಲೆ ಹೊಲದಲ್ಲಿ ಹರಡಿ ಮಣ್ಣಿನಲ್ಲಿ ಮರೆಸಬೇಕು". (ಸಾಂಪ್ರದಾಯಿಕ ಒಕ್ಕಲುತನ ಈರಯ್ಯ ಕಿಲ್ಲೇದಾರ ಪು. ೨೪ ಕನ್ನಡ ಪು.ಪ್ರಾ) ಆಕಾರಣದಿಂದಲೇ ಗೊಬ್ಬರವನ್ನು ಮಣ್ಣಿನಲ್ಲಿ ಬೇಗನೆ ಬೆರೆಸುವುದು ಬಂದಿರಬಹುದು.

"ಗೊಬ್ಬರವನ್ನು ಗಾಡಿಯಲ್ಲಿ ಹೊಡೆದು ಅಲ್ಲಲ್ಲಿ ಗುಡ್ಡೆ ಗುಡ್ಡೆಮಾಡಿ ಬುಟ್ಕತೀವಿ ಗೊಬ್ಬರ ಎರಚಲು ಅನುಕೂಲ ಆಗೂವಂಗೆ, ಗೊಬ್ರ ಎರ್ಚಾದ್ಮೇಲೆ ಹಿಂದಿಂದನೆ ಏರ್‌ಕಟ್ಕಂದು ಉತ್ಬುಡತೀವಿ. ಇಲ್ಲಾ ಅಂದ್ರೆ ಮಳೆಗಿಳೆ ಬಂದ್ಬುಟ್ರೆ ಗೊಬ್ರೆಲ್ಲ ಕೊಚ್ಕೊಂದು ಹೊಟ್ಹೋಯ್ತದೆ ಅದ್ಕೆ ಹಿಂದ್ಗುಂಟನೆ ಏರ್‌ಕಟ್ಕಂದು ಉತ್ಬುಡ್ತೀವಿ ಎನ್ನುತ್ತಾರೆ. (ಕಾಳೇಗೌಡ, ವಕ್ತೃ)

ಸಗಣಿಗೊಬ್ಬರ ಒಮ್ಮೆ ಹಾಕಿದರೆ ಹೊಲದಲ್ಲಿ ಅದರ ಈ ಸತ್ವ ಮೂರು ನಾಲ್ಕು ವರ್ಷದ ಗಂಟ ಹೊಲ್ಕೆ ಗೊಬ್ರನೆ ಬ್ಯಾಡ ಒಂದುಸಾರಿ ಬಿಗ್ಯಾಗಿ ಗೊಬ್ರ ಕೊಟ್ಬುಟ್ರೆ ಮೂರೊರ್ಸದಗಂಟ ಅದರ ಸಾರ ಉಳ್ಕತದೆ. ಆಗ ಮೇಲ್ಗೊಬ್ರ ಗೀಲ್ಗೊಬ್ರ ಯಾವುದು ಬ್ಯಾಡ ಎಷ್ಟೇ ಮಳೆ ಎಷ್ಟೇ ಬಿಸ್ಲು ಒಡುದ್ರು ತಡ್ಕತದೆ ಹೊಲ" ಎನ್ನುತ್ತಾರೆ. (ನಾಥಣ್ಣ, ವಕ್ತೃ)

ಬಿತ್ತನೆ ಬೀಜ

ಬಿತ್ತನೆ ಬೀಜಗಳು ರೈತರ ಹೊಲದಲ್ಲೇ ಉತ್ಪಾದನೆ ಮಾಡಿದಂತವು ಆಗಿವೆ. ಬಿತ್ತನೆ ಬೀಜಗಳನ್ನು ಪ್ರತಿ ವರ್ಷ ಕೊಂಡು ತರಬೇಕಾಗಿಲ್ಲ. ಕಳಪೆ ಗುಣಮಟ್ಟದ ಬೀಜಗಳಿಂದ ಮೋಸ ಹೋಗುವ ಹಾಗೂ ಹಾನಿಗೊಳಗಾಗುವ ತೊಂದರೆ ಇಲ್ಲ. ಬಿತ್ತನೆ ಬೀಜಗಳನ್ನು ಉತ್ಪಾದಿಸಲು ಹಾಗೂ ಸಂಗ್ರಹಿಸಲು ಹೆಚ್ಚು ಖರ್ಚು ಮಾಡಬೇಕಾಗಿಲ್ಲ. ಬೀಜಗಳ ಆಯ್ಕೆ ಮಾಡುವಾಗ ಬೆಳೆಯು ಚೆನ್ನಾಗಿ ಸದೃಢವಾಗಿರಬೇಕು. ತೆನೆ ದೊಡ್ಡದಾಗಿರಬೇಕು. ಕಾಳು ದಪ್ಪ ಆಗಿರಬೇಕು. ಇಂತ ಸಂಗತಿಗಳನ್ನು ರೈತರು ಗಮನಿಸಿ ಹೊಲದಲ್ಲಿ ಬೆಳೆದ ತೆನೆಗಳಲ್ಲಿ ಉತ್ತಮವಾದ ತೆನೆಗಳನ್ನು ಆರಿಸಿಟ್ಟೂ ಚೆನ್ನಾಗಿ ಬಿಸಿಲಿನಲ್ಲಿ ಒಣಗಿಸಿ ಬೇವಿನ ಎಲೆ ಮತ್ತು ಬೂದಿಯನ್ನು ಬೆರೆಸಿ ಮಿಶ್ರಣ ಮಾಡಿ ಸಂಗ್ರಹಿಸಿ ಇಡುತ್ತಾರೆ.

"ಬಿತ್ನೆಕಾಲ್ಕೆ ರಾಗಿ ತರೂಕೆ ಎಲ್ಲೂ ತಿರ್ಗೂಕಾಗಲ್ಲು, ಅದ್ಕೆ ಬಿತ್ನೆ ರಾಗಿನ ನಾವೆ ನಮ್ಮೊಲ್ದೇಲಿಬೆಳ್ದ ಒಳ್ಳೆ ತೆನೆ ಇರುದ ನೋಡಿ ತೆನೆ ಎತ್ಬುಟ್ಟು ಅದ್ನ ಬ್ಯಾರೆ ಒಕ್ಕಿ ಬಿತ್ನೆಗಂತ್ಲೆ ಒಂದುವಾಡೆಗೆ ಹಾಕಿ ಮೆತ್ತಾಕ್ಬುಡ್ತೀನಿ. ಬಿತ್ನೆ ಟೈಮ್ಗೆ ಮೆತ್ತಾಕಿರುವ ವಾಡೆನ ಕಿತ್ತು ರಾಗಿನ ಬಿತ್ತಿ ಉಳುದ್ರೆ ಬ್ಯಾರೆ ಯಾರಾರ ಕೇಳುದ್ರೆ ಕೊಡ್ತೀನಿ. ರಾಗಿ ಚೆನ್ನಾಗೆ ಅದೆ ಚೆನ್ನಾಗೆ ಬತ್ತಾನು ಅದೆ" ಎನ್ನುತ್ತಾರೆ. (ಹೊಟ್ಟಯ್ಯ, ವಕ್ತೃ)

ಬಿತ್ನೆಗೆ ಒಳ್ಳೆಯ ಕಾಳುಗಳನ್ನು ಆರಿಸಿ ತೆಗೆದು ಅವುಗಳಿಗೆ ರಾಗಿ ಹೊಟ್ಟು, ಬೂದಿ, ಬೇವಿನ ಎಲೆ ಬೆರೆಸಿ, ಮೂಡೆಕಟ್ಟುತ್ತಾರೆ. ಕಾಳುಗಳಿಗೆ ಯಾವುದೇ ರೀತಿಯ ಹುಳುಉಪ್ಪಟ್ಟೆ ಬರುವುದಿಲ್ಲ. ಮೂಡೆ ಅಂದರೆ

ನೆಲ್ಲಿನ ಹುಲ್ಲಿನಿಂದ ಮಾಡಿದ ದಪ್ಪ ಉರಿಯಿಂದ ಒಳಗೆ ನಾಲೆಹುಲ್ಲಿನಿಂದ ಮುಚ್ಚುವಂತೆ ಕುಳಿ ಮಾಡಿ ಅದರೊಳಗೆ ಕಾಳುಗಳನ್ನು ಇಟ್ಟು ಅದರ ಮೇಲೆ ನಾಲೆಹಂಚಿ ಹುಲ್ಲನ್ನು ಮುಚ್ಚಿ ಅದರ ಸುತ್ತಲೂ ನೆಲ್ಲುಲ್ಲಿಂದ ಮಾಡಿದ ಉರಿಯಿಂದ ಕಿಂಚಿತ್ತೂ ಜಾಗ ಬಿಡದಂತೆ ಬಿಗಿಯಾಗಿ ಸುತ್ತಿ ಅದರ ಮೇಲೆ ಹಗ್ಗದಿಂದ ಬಿಗಿಯುತ್ತಾರೆ. ಅದು ಥೇಟ್ ನಮ್ಮಭೂಮಿಯಂತೆ ರೇಖಾಂಶಗಳನ್ನು ಮಾತ್ರ ಹೊಂದಿರುವ ಭೂಮಿಯಂತೆಯೇ ಕಾಣುತ್ತದೆ. ಇದರಲ್ಲಿ ವರ್ಷಗಟ್ಟಲೇ ಕಾಳುಗಳನ್ನು ಇಟ್ಟರು ಬೀಜಗಳಿಗೆ ಹುಳಬರುವುದಿಲ್ಲ. ಬಿತ್ತನೆ ಕಾಲಕ್ಕೆ ಮೂಡೆ ಬಿಚ್ಚಿ ಕಾಳು ತೆಗೆದುಕೊಂಡು ಬಿತ್ತನೆ ಮಾಡುತ್ತಾರೆ. ಆದರೆ ಇತ್ತೀಚಿಗೆ ಮೂಡೆ ಮಾಡುವ ಗೊಜಿಗೆ ಯಾರು ಹೋದಂತೆ ಕಾಣಿಸುತ್ತಿಲ್ಲ

ಬೇಲೂರಿನ ಹೆಣ್ಣೆ ಬ್ಯಾಗ್ನೆ ರಾಗಿ ಮಾಡೆ

ಕೂರುಗ್ ನಿಂದವೆ ಹೊಲ್ದೆಲಿ

ಕೂರುಗ್ ನಿಂದವೆ ಹೊಲ್ದೆಲಿ ಹೊತ್ತುಗ್‌ಬಾಲೆ

ನಮ್ಮಣ್ಣೈ ನಿಂದವ್ನೆ ಬಿಸ್ಲೆಲಿ.

ಹೊಲ ಬಿತ್ತುವ ಸಮಯದಲ್ಲಿ ಕೂರ್ಗೆಯನ್ನು ಕಾಯಿಸಬಾರದು. ಏಕೆಂದರೆ ಕೂರ್ಗೆ ಏರು ತಮ್ಮ ಅಕ್ಕಪಕ್ಕದವರ ಎಲ್ಲಹೊಲಗಳನ್ನು ಬಿತ್ತಬೇಕಾಗುತ್ತದೆ. ಬಿತ್ತುವಾಗ ಒಬ್ಬ ಕೂರ್ಗೆ ಹೊಡೆದರೆ ಒಬ್ಬ ರಾಗಿ ಬಿಡುವುದು, ಒಬ್ಬ ಸಾಲು ಬಿಡುವುದು, ಒಬ್ಬ ಹಲುಬೆ ಹೊಡೆಯುವುದು ಇನ್ನು ಮುಂತಾದ ಕೆಲಸಗಳು ಒತ್ತಟ್ಟಿಗೆ ಇರುವುದರಿಂದ ಎಲ್ಲರು ಸೇರಿ ಒಂದುಕಡೆಯಿಂದ ಎಲ್ಲರ ಹೊಲಗಳನ್ನು ಬಿತ್ತುವುದು ಇನ್ನೂ ಇದೆ. ಆದ್ದರಿಂದ ಕೂರ್ಗೆಯನ್ನು ಹೊಲದಲ್ಲಿ ಬಿಸಿಲಿನಲ್ಲಿ ನಿಲ್ಲಿಸದೆ ಬೇಗ ಬಿತ್ತನೆ ರಾಗಿ ತಂದು ಕೊಡು ಎನ್ನುವ ಬಾವ ವ್ಯಕ್ತವಾಗಿದೆ.

ಬಿತ್ತನೆ ಬೀಜಗಳಲ್ಲಿ ಮುಖ್ಯವಾಗಿ ರಾಗಿ, ಅವರೆ, ಜೋಳ, ತೊಗರಿ, ಅಲಸಂದೆ (ತರಗುಣಿ) ಉರುಳಿ ಎಳ್ಳು, ಹುಚ್ಚೆಳ್ಳು, ಹಳ್ಳು, ಕಡಲೆಕಾಯಿ, ಭತ್ತ, ಇಂದಿಗೂ ಇವೆ. ಸಾಮೆ, ಆರ್ಕ, ನವಣೆ, ಸಜ್ಜೆ ಕಣ್ಮರೆಯಾಗಿವೆ.

'ವಕ್ಳ ರಾಗಿ ಬಿತ್ತಿ ವಕ್ಳ ರಾಗಿತರೂ ನನ್ನ ಗಂಡನ್ನ ಕಾಣ್ರ' ಎಂಬ ಗಾದೆ ಭೂಮಿತಾಯಿಯನ್ನು ಸರಿಯಾಗಿ ಸಲುಹದೆ ಸೋಮಾರಿಯಾದರೆ ಅಂತವರಿಗೆ ಭೂಮಿತಾಯಿ ಒಳ್ಳೆದನ್ನು ಕೊಡಲ್ಲ ಒಂದೇಸೇರು ರಾಗಿ ಬಿತ್ತಿದ್ರೆ ಒಂದು ಖಂಡುಗ ರಾಗಿ ಕೊಡುವ ಭೂಮಿತಾಯಿಯನ್ನು ಚೆನ್ನಾಗಿ ಉತ್ತು ಬಿತ್ತು ಒಕ್ಕಲುತನ ಮಾಡಬೇಕು. ಕೃಷಿಕರು ಯಾರೂ ಸೋಮಾರಿಗಳಲ್ಲ ಹಾಗೆ ಮಾಡಿದರೆ ಭೂಮಿತಾಯಿ ಕ್ಷಮಿಸುವುದಿಲ್ಲ.

ಬಿತ್ತುವುದು

ಬಿತ್ತುವುದು ಬಲು ಶಿಸ್ತುಬದ್ಧವಾದ ಕೆಲಸ. ಬಲು ಅಚ್ಚುಕಟ್ಟಿನಿಂದ ಕೂಡಿರುತ್ತದೆ. ಬಿತ್ತುವುದಕ್ಕೆ ಮುನ್ನಾ ದಿನ ಎಲ್ಲವನ್ನು ತಯಾರು ಮಾಡಿಕೊಂಡು ಕಾಯುತ್ತಾರೆ. ಬೆದೆ ನೋಡಿ ಬಿತ್ತು ಎನ್ನುವ ಗಾದೆಮಾತಿನಂತೆ ಬಿತ್ತುವಾಗ ಭೂಮಿ ಒಂದು ರೀತಿಯಲ್ಲಿ ಹದಮಾಡಿ ಇಟ್ಟಂತಾಗಿದ್ದು ಮಣ್ಣಿನಲ್ಲಿ ರಾಗಿ ಚೆಲ್ಲಿದರೆ ತಾನೇ ಮೊಳಗಬೇಕೆಂದು ಹೇಳುತ್ತಾರೆ. ಭೂಮಿಯ ಮಣ್ಣು ಮೃದುವಾಗಿದ್ದರೆ ಮಾತ್ರ ಇದು ಸಾಧ್ಯ. ಬಿತ್ತನೆ ಬೀಜ ಆಳು ಕಾಳು ಹೆಚ್ಚಾಗಿಯೇ ಇರಬೇಕು.

ಬಿತ್ತುವುದಕ್ಕೆ ಕೂರಿಗೆ ಬಹುಮುಖ್ಯ. ಇಲ್ಲಿ ಕೂರಿಗೆಯಲ್ಲಿ ರಾಗಿಬಿತ್ತಿದರೆ ಮಾತ್ರವೇ ಬಿತ್ತನೆ, ಬಿತ್ತುವುದು ಎಂದುಕರೆಯುತ್ತಾರೆ. ಹದ ಸರಿಯಾಗಿದ್ದರೆ ಮಾತ್ರ ಕೂರಿಗೆಯಲ್ಲಿ ಬಿತ್ತುತ್ತಾರೆ. ಇಲ್ಲದಿದ್ದರೆ ಕೈಚೆಲ್ಲೆಯನ್ನು ಮಾಡುತ್ತಾರೆ. ಕೂರಿಗೆಯಲ್ಲಿ ಬಿತ್ತುವಾಗ ಹೊಲ ಮನೆಯಲ್ಲಿ ಸಡಗರವೋ ಸಡಗರ ಹೆಂಗಸರು ಮಕ್ಕಳು, ದೊಡ್ಡವರಾದಿಯಾಗಿ ಎಲ್ಲರಿಗೂ ಅಂದು ಕೆಲಸ ಹೆಚ್ಚಿದ್ದು ಎಲ್ಲರೂ ಶಿಸ್ತು ಬದ್ದಿನಿಂದಲೇ ಕೆಲಸ ಮಾಡುತ್ತಾರೆ.

ಕೂರಿಗೆಯಲ್ಲಿ ನಾಲ್ಕು ತಾಳಿನ ಮತ್ತು ಆರು ತಾಳಿನ ಕೂರ್ಗೆ ಇವೆ. ಈಗ ಹೆಚ್ಚಾಗಿ ನಾಲ್ಕು ತಾಳಿನ ಕೂರಿಗೆಯನ್ನೆ ಬಿತ್ತನೆಗೆ ಬಳಸುತ್ತಾರೆ. ಕೂರಿಗೆ ಹೊಡೆಯುವವನು ತುಂಬಾ ಅನುಭವಸ್ತನಾಗಿರುತ್ತಾನೆ. ಸಾಲು ಹೊಡೆಯುವುದು, ತಿರುಗುವುದು ನೇರವಾಗಿ ಸ್ಕೇಲಿನಲ್ಲಿ ಗೆರೆ ಎಳೆದಷ್ಟೇ ಮಟ್ಟಸವಾಗಿ ಸಾಲು ಹೊಡೆಯುವುದು ನಿಜಕ್ಕೂ ಆಶ್ಚರ್ಯವಾಗುತ್ತದೆ. "ಕೂರ್ಗೆ ಹೊಡೀಕೆ ನಮ್ಗೆ ಏರು ಚೆನ್ನಾಗಿರಬೇಕು ಆಮೇಲೆ ಒಳ್ಳೆ ಹದ ಇರ್ಬೇಕು ನಾನು ಮಾಡುವ ಸನ್ನೆಗಳನ್ನು ಎತ್ತುಗಳು ಕೇಳಿಸ್ಕಂದು ಸಾತ್‌ಕೊಡ್ತವೆ. ನಾವು ಎಂಗ್ ಅಂದ್ರೆ ಅಂಗೇ ಆಯ್ತದೆ ಬಿತ್ನೆ ಕೆಲ್ಸ" ಎನ್ನುತ್ತಾಳೆ. (ಮುದ್ದಣ್ಣ, ವಕ್ತೃ)

ಒಂದು ಕೂರಿಗೆ ಜೊತೆಗೆ ಕೂರಿಗೆ ಒಡೆಯುವವ ಒಬ್ಬ, ರಾಗಿ ಬುಡುವವ ಒಬ್ಬ, ಸಾಲು ಬಿಡುವ ಒಬ್ಬ, ರಾಗಿ, ಸಾಲು ತಂದು ಕೊಡಲಿಕ್ಕೆ ಒಬ್ಬ, ಒಟ್ಟು ನಾಲ್ಕು ಜನ ಒಂದು ಕೂರಿಗೆ ಜೊತೇಲಿ ಇರುತ್ತಾರೆ. ಇವರ ವೇಷಭೂಷಣವೂ ಅಂದು ಬೇರೆಯೇ ಇರುತ್ತದೆ. ರಾಗಿ, ಕಾಳು ಸಾಲು ಬಿಡುವವರು ಒಂದು ಪಂಚೆಯನ್ನು ತಂದು ಹೊಟ್ಟೆಯ ಭಾಗಕ್ಕೆ ಜೋಳಿಗೆ ಇರುವರೀತಿಯಲ್ಲಿ ಎರಡೂ ಕಡೆಯಿಂದ ಹೆಗಲ ಮೇಲೆ ಸುತ್ತಿ ನಡುವನ್ನು ಬಳಸಿ ಬೀಳದಂತೆ ಬಿಗಿಯಾಗಿ ಕಟ್ಟಿರುತ್ತಾರೆ. ಮುಂದಿನ ಜೋಳಿಗೆಯಲ್ಲಿ ರಾಗಿಯನ್ನು ತುಂಬಿಕೊಂಡು ಎರಡೂ ಕೈಯಲ್ಲಿ ಸುಲಭವಾಗಿ ತೆಗೆದುಕೊಂಡು ಕೂರಿಗೆಯ ಬಟ್ಟಲಿಗೆ ಬಿಡುವ ಹಾಗೆ ಮಾಡಿರುತ್ತಾರೆ. ಇದೇ ರೀತಿ ಸಾಲು (ಕಾಳು) ಬಿಡುವವನೂ ಕಟ್ಟಿಕೊಂಡಿರುತ್ತಾರೆ. ಕೂರಿಗೆ ಹೊಡೆಯುವವನು ತನ್ನ ಪಂಚೆಯನ್ನು ಕಳೆಯದಂತೆ ಕಟ್ಟಿರುತ್ತಾರೆ.

ಕೂರ್ಗೆ ಒಡೆವೊನ್ಗೆ ಕುಮ್ಮಿ ಚಲ್ಲಣವೊ
ನಾಗಭೂಷಣದ ನಡುಕಟ್ಟು
ನಾಗಭೂಷಣದ ನಡುಕಟ್ಟು ಅಣ್ಣಯ್ಯ
ನೀ ಕೂರ್ಗೆ ಒಡೆವೋದು ಸಮಕಟ್ಟು

ಕೂರ್ಗೆ ಹೊಡೆಯುವಾತ ಮೊದಲು ಪೂಜೆ ಮಾಡಿ ಗಂಧ ಚಂದ್ರವನ್ನು ಕೂರ್ಗೆಗೆ, ಏರಿಗೆ ಎಲ್ಲಕ್ಕೂ ಇಕ್ಕಿ ತಾನು ಹಣೆಗೆ ಅಚ್ಚುಕೊಂಡು, ಬಟ್ಟೆಗಳು ಮದ್ಯ ಕಳಚದಂತೆ ನಡುವಿಗೆ ನಡಕಟ್ಟನ್ನು ಕಟ್ಟುತ್ತಿದ್ದರು. ಆಗ ಕೂರ್ಗೆಹೊಡೆಯಲು ತೊಂದರೆಯಾಗುತ್ತಿರಲಿಲ್ಲ.

ಬಿತ್ತನೆ ಬೀಜ ಬಂದೂ ಬೆಳ್ಳಿಕೂರ್ಗೆ ಬಂದೂ
ಅಣ್ಣ ನಿನ್ನೊಲ್ಕೆ ಹದವಾದೊ
ಅಣ್ಣ ನಿನ್ನೊಲ್ಕೆ ಹದವಾದೊ ಅಣ್ಣಯ್ಯ
ಶೆಟ್ಟಿಕೂರ್ಗೆ ಹೊಡಿಬಾರೊ

ಆಲದ ಮರದ ಅಡಿಗೆ ಆರುಕೂರ್ಗೆ ನಿಂದೊ
ಕೀರು ಗಂಧಾದ ಒಡೆಯಾನೋ
ಕೀರು ಗಂಧಾದ ಒಡೆಯಾನೊ ಅಣ್ಣಯ್ಯ
ನಿನ್ನತ್ತೆಲ್ಲಿ ಕುಡಿದೊ ತಿಳ್ನೀರ

ಕೂರ್ಗೆಗೆ ಎತ್ತುಕಟ್ಟುವ ಮುನ್ನ ಅವಕ್ಕೆ ಚೆನ್ನಾಗಿ ಮೇವು ಮೇಯಿಸಿ ನೀರುಕುಡಿಸಿ ನಂತರ ಕೂರ್ಗೆಗೆ ಕಟ್ಟುತ್ತಿದ್ದರು. ಏಕೆಂದರೆ ಮುಂಜಾನೆ ಕೂರ್ಗೆಗೆ ಕಟ್ಟಿದ ಎತ್ತುಗಳಿಗೆ ಮುಸ್ಸಂಜೆವರೆಗೂ ಬಿಡುವಿಲ್ಲ ಕೆಲಸ ಬಿತ್ತುವಾಗ ಇರುತ್ತದೆ.

ಹಲುಬೆ ಒಡೆವೋನ ಹಲ್ಲಿನ ಚೆಂದ ನೋಡು
ಹೊಟ್ಟೆತ್ಯಾರಣದ ಎಲೆಯಲ್ಲೊ
ಹೊಟ್ಟೆತ್ಯಾರಣದ ಎಲೆಯಲ್ಲೊ ಅಣ್ಣಯ್ಯ
ನಿನ್ನೆತ್ತೆಲ್ಲಿ ಕುಡುದೊ ತಿಳಿನೀರ

ಬಿತ್ತನೆ ಆದಮೇಲೆ ಬಿತ್ತಿರುವ ಕಾಳು ಮಣ್ಣಲ್ಲಿ ಮರೆಯಾಗಲಿ ಎನ್ನುವ ದೃಷ್ಟಿಯಿಂದ ಅದರ ಮೇಲೆ ಹಲುಬೆ ಹೊಡೆಯುತ್ತಾರೆ. ಕೂರಿಗೆಯನ್ನು ಪೂರ್ವ ಪಶ್ಚಿಮಾಭಿಮುಖವಾಗಿ ಹೊಡೆದರೆ ಹಲುಬೆಯನ್ನು ಅದರ ವಿರುದ್ಧ ದಿಕ್ಕಿನಲ್ಲಿ ಹೊಡೆಯುತ್ತಾರೆ. ಹೊಲದಲ್ಲಿದ್ದ ಅಗ್ಗು ತಗ್ಗು ಎಲ್ಲ ಮುಚ್ಚಿ ಸಮನಾಗುತ್ತದೆ. ಪೈರು ಕೂಡ ಸಮನಾಗಿ ಹುಟ್ಟುತ್ತದೆ ಎನ್ನುತ್ತಾರೆ.

ಊಟ ಒಡೆವೋನ ಉಬ್ಬುವ ಚೆಂದ ನೋಡು
ಹೊಟ್ಟೆ ತೆರಣದ ಎಲೆಯಲ್ಲೊ
ಹೊಟ್ಟೆ ತೆರಣದ ಎಲೆಯಲ್ಲೊ ಅಣ್ಣಯ್ಯ
ನಿನ್ನೆತ್ತೆಲ್ಲಿ ಕುಡುದೊ ತಿಳ್ನೀರ

ಬಿತ್ತಿದ ದಿನವೇ ಮಳೆಬಂದರೆ ಪೈರು ಹುಟ್ಟಿ ಮೇಲೆ ಬರಲು ಕಷ್ಟವಾಗುತ್ತದೆ. ಮಳೆಯಿಂದ ಮೆಲ್ಲಗಿದ್ದ ಮಣ್ಣು ಗಚ್ಚಾಗಿ ಗಟ್ಟಿಯಾಗಿ ಪೈರು ಹುಟ್ಟಲು ತಡೆಯಾಗುತ್ತದೆ. ಇದನ್ನು 'ವಾಟೆ' ಕಟ್ಟುಬಿಟ್ಟದೆ ಎಂದು ಕರೆಯುತ್ತಾರೆ. ಹೊಲ ಹೂದ ಮಳೆಯಿಂದ ಕಟ್ಟಿರುವ ವಾಟೆಯನ್ನು ಮೇಲೆ ಕೆರೆಯಲು ಊಟ ಹೊಡೆಯುತ್ತಾರೆ. ಇದರಿಂದ ಗಟ್ಟಿಯಾಗಿದ್ದ ಮೇಲಿನ ನೆಲ ಮೃದುವಾಗಿ ಪೈರು ಸುಲಭವಾಗಿ ಮೇಲೆ ಬರುತ್ತದೆ. "ಬಿತ್ತುವಾಗ ಮಳೆ ಬರ್ನಿಲ್ಲ ಅಂದ್ರೆ ಒಳ್ಳೆ ಧೂಳ್ ಪೈರು ಹದವಾಗಿ ನಾಲ್ಕೈದು ದಿನ್ಕೆ ಬಂದುಬುಡತ್ತದೆ. ಬಿತ್ತು ದಿನ ಬಿಗಿಯಾಗಿ ಮಳೆ ಹೂದುಬುಟ್ರೆ ನೆಲ ಬಿಗಿಯಾಗಿ ವಾಟೆ ಕಟ್ಟುಡ್ತದೆ ಅವಾಗ ನಾವು ಊಟ ಎಳಿಸ್ಲೇ ಬೇಕು ಇಲ್ದಿದ್ರೆ ಪೈರು ಸರಿಯಾಗಿ ಬರೊಲ್ಲು" ಎನ್ನುತ್ತಾರೆ. (ಮುದ್ದಣ್ಣ, ವಕ್ತೃ)

ಸರಿಯಾದ ಹದ ಸಿಗದಿದ್ದಾಗ ಬಿತ್ತಲು ಸಾಧ್ಯವಾಗುವುದಿಲ್ಲ. ಆಗ ಕೈ ಚೆಲ್ಲೆ ಚೆಲ್ಲುತ್ತಾರೆ. ಇದಕ್ಕೆ ಹೊಲ ಚೆಲ್ಲುವುದು ಎಂದೇ ಕರೆಯುತ್ತಾರೆ. ರಾಗಿಯನ್ನು ಕೈಯಲ್ಲೆ ಸಾಲು ಸಾಲು ಮಾಡಿ ಎರಚುತ್ತಾರೆ. ನಂತರ ಮರದ ನೇಗಿಲಿಂದ ಹೊಲವನ್ನು ಉತ್ತು ಸಾಲುಗಳನ್ನು ಹಾಕಿ ಮೇಲೆ ಹಲುಬೆ ಹೊಡೆಯುತ್ತಾರೆ. ಆದರೆ ಇದರಲ್ಲಿ ಕಳೆ ತೆಗೆಯಲು ತುಂಬ ಕಷ್ಟವಾಗುತ್ತದೆ.

ಹರಗುವುದು

ಬಿತ್ತಿದ ನಂತರ ಪೈರು ಎರಡಿಂಚು ಬೆಳೆದನಂತರ ಹರಗುತ್ತಾರೆ. ಪೈರು ಎಳೆಸಾಗಿದ್ದಾಗ ಹರಗಬೇಕು ಒಂದು ವೇಳೆ ಬಲಿತುಬಿಟ್ಟರೆ ಹರಗಲು ಕಷ್ಟವಾಗುತ್ತದೆ. ಪೈರು ಬೇರು ಬಿಡುವ ಮೊದಲೆ ಹರಗಿದರೆ ಹದವಾಗಿ ತೆಳುವಾಗಿ ಹೊಲ ಸಮಾನವಾಗಿ ಬರುತ್ತದೆ ಇಲ್ಲದಿದ್ದರೆ ಪೈರು ಮಂದ ಆದರೆ ಕೆಂಚಿಡಿದು ನರೆತಂತಾಗಿ ಸರಿಯಾಗಿ ಹೊಡೆಕಡೆಯುವುದೇ ಇಲ್ಲ. "ಹೊಲ ಚೆಲ್ಲಿದ ಒಂಭತ್ತು ದಿನ್ಕೆ ಹರಗೂಕೆ ಏರು ಕಟ್ಬೇಕು ಆಗ ಪೈರ್ನ ನಾವು ಎಂಗ್ಬೇಕು ಅಂಗೆ ಹೊಲ್ದಲಿ ನಿಲ್ಲಿಸ್ಕಬೋದು. ಬಿತ್ತುದು ನಾಕುದಿನ ನಿದಾನ ಆಗೋಗ್ಲಿ ಏನುತೊಂದ್ರೆ ಆಗಲ್ಲು, ಆದರೆ ಹರಗುದು ಅಂಗಲ್ಲ ಯಾವ ಟೈಮ್‌ಗೆ ಹರುಗ್ಬೇಕು ಅದೇಟೈಮ್ಗೆ ಹರಗ್ಬೇಕು ಹದ ಎಂಗಿರ್ಬೇಕು ಅಂದ್ರೆ ಹಸ್ಗೊಳೆದೇಲಿ ಹಾಲ್ಕರದಂಗಿರಬೇಕು" ಎನ್ನುತ್ತಾರೆ. (ನಾಥಣ್ಣ, ವಕ್ತೃ)

ಹರಗಲು ಕುಂಟೆಗಳನ್ನು ಬಳಸುತ್ತಾರೆ. ನಾಲ್ಕು ಚಿಪ್ಪಿನ ಕುಂಟೆ, ಹತ್ತು ಹನ್ನೆರಡು ಚಿಪ್ಪಿನ ದಶಕುಂಟೆ ಈ ಎರಡನ್ನು ಬಳಸುತ್ತಾರೆ. ಮೊದಲು ಅಡ್ಡಲಾಗಿ ಹೊಡೆದರೆ ಎರಡನೇದನ್ನು ಯಾಸೆ ಅಂದರೆ ನೈರುತ್ಯ ಈಶಾನ್ಯ ದಿಕ್ಕಿನ ಕಡೆ ಓರೆಯಾಗಿ ಹರಗುತ್ತಾರೆ. ಆಗ ಹೊಲ ತೆಳುವಾಗಿ ತೆಂಡೆ ಚೆನ್ನಾಗಿ ಹೊಡೆಯುತ್ತದೆ. ಕಳೆ ಕಿತ್ತು ಸಾಲು ಕೆರೆದು ಗೊಬ್ಬರು ಹಾಕಿದ ಮೇಲೆ ಎರಡದ ಮಳೆ ಹುಯ್ಯಬೇಕು. ಹೀಗೆ ಸಮಯಕ್ಕೆ ಸರಿಯಾಗಿ ವ್ಯವಸಾಯ ಮಾಡಿದರೆ ಗೌರಿ ಹೊತ್ತಿಗೆ ಗಡಿಗೆ ಮುಳುಗಬೇಕು ಮಾರ್ಲಮಿ ಹೊತ್ಗೆ ಮಾರುದ್ದ ಒಡೆ ಕಡಿಬೇಕು ಎಂಬ ಗಾದೆಗಳು ನಿಜವಾಗುತ್ತವೆ.

ಕುಯ್ಲು ಕಟ್ಣೆ ಹೊಲಕಟ್ಟುವುದು

ತೆನೆಗಳು ಹಣ್ಣುಗಟ್ಟಲು ಪ್ರಾರಂಭಿಸುತ್ತಿದ್ದಂತೆ ಹೊಲಗಳ ಕುಯ್ಲು ಪ್ರಾರಂಭ ಮಾಡುತ್ತಾರೆ. ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ಕುಯ್ಲು ಕಟ್ಟಣೆ ಕೆಲಸ ಮುಗಿಯುತ್ತದೆ. ರಾಗಿ ಕಟಾವಿಗು ಮೊದಲು ಕೆಲವು ಆಚರಣೆಗಳನ್ನು ಮಾಡುತ್ತಾರೆ ಅದು ಹೆಚ್ಚುಮಾಡುವುದು.

ಹೆಚ್ಚುಮಾಡುವುದು

ಬಿತ್ತುವುದಿಂದ ಹಿಡಿದು ಬೆಳೆಯು ಕೊಯ್ಲಿಗೆ ಬರುವತನಕ ಹಲವು ಆಚರಣೆಗಳನ್ನು ಮಾಡುವ ರೈತರು ಕೊಯ್ಲಿನ ಸಂದರ್ಭದಲ್ಲಿ ಮಾಡುವ ಆಚರಣೆಯೇ ಹೆಚ್ಚುಮಾಡುವುದು. ರಾಮನಗರ, ಮಂಡ್ಯ, ಮೈಸೂರು ಭಾಗಗಳಲ್ಲಿ ಇಂದಿಗೂ ಇದೆ. ಪ್ರಸ್ತುತ ಕಬ್ಬಾಳು ಪ್ರದೇಶದಲ್ಲಿ ಹೆಚ್ಚುಮಾಡದೆ ಹೊಲ ಕುಯ್ಲು ಕಟ್ಣೆ ಮಾಡುವುದಿಲ್ಲ. ಬೆಳೆಬೆಳೆದು ಕಟಾವಿಗೆ ಬಂದ ಸಂದರ್ಭದಲ್ಲಿ ಒಂದು ವಾರ ಮುಂಚೆ ಈ ಆಚರಣೆ ಮಾಡುತ್ತಾರೆ. ಇದನ್ನು ಉತ್ತರ ಕರ್ನಾಟಕದ ಕಡೆ ಹುಲುಸು ಎಂದು ಕರೆಯುತ್ತಾರೆ. ಹೊಲಗದ್ದೆಗಳಲ್ಲಿ ಬೆಳೆದುನಿಂತ ಬೆಳೆಯನ್ನು ಸ್ವಲ್ಪ ಕುಯ್ದು ಅರಿ ಹಾಕಿ ಅದರ ಮೇಲೆ ಮೂರು ಕಲ್ಲುಗಳನ್ನು ಇಟ್ಟು ಅವಕ್ಕೆ ಅರಿಶಿಣ ಕುಂಕುಮವಿಟ್ಟು, ಗಂಧದ ಕಡ್ಡಿ, ಕಾಯಿಗಳಿಂದ ಪೂಜೆ ಮಾಡುತ್ತಾರೆ. ಬೆಳೆಯು ಹೆಚ್ಚಲಿ ಎಂದು ನಮ್ಗೆ ಹೆಚ್ಕೊಕ್ಕಲು ಕೊಡವ್ವ ಎಂದು ಭೂಮಿ ತಾಯಿಯನ್ನು ಪ್ರಾರ್ಥಿಸುತ್ತಾರೆ. ನಂತರ ಆ ಮೂರು ಕಲ್ಲುಗಳ ಮುಂದೆ ಹಾಲು ಅನ್ನ ಎಡೆ ಇಡುತ್ತಾರೆ. ನಂತರ ಸ್ವಲ್ಪವನ್ನು ಹೊಲಗಳಿಗೆ ಎರಚುತ್ತಾರೆ. ಆ ಮೇಲೆ ತಾವೂ ಪ್ರಸಾದವನ್ನು ತೆಗೆದುಕೊಂಡು ಭೂಮಿತಾಯಿಗೆ ಕೃತಜ್ಞತೆಗಳನ್ನು ಸಲ್ಲಿಸುವ ಆಚರಣೆ ಇದಾಗಿದೆ.

ಬಯಲು ಸೀಮೆಯಲ್ಲಿರುವ ಈ ಪ್ರದೇಶದಲ್ಲಿ ಯಾರು ಹೆಚ್ಚುಮಾಡದೆ ಕುಯ್ಲಿನ ಕೆಲಸಕ್ಕೆ ಕೈಹಾಗುವುದಿಲ್ಲ. ಹೆಚ್ಚು ಮಾಡದೆ ಕುಯ್ಲು ಮಾಡಿದರೆ ಬೆಳೆ ಹೆಚ್ಚುವುದಿಲ್ಲ ಎನ್ನುವುದು ಇಲ್ಲಿನ ರೈತಾಪಿ ಜನರ ನಂಬಿಕೆ. ಭೂಮಿತಾಯಿಗೆ ತಾವು ಬೆಳೆದ ಫಸಲಿನಲ್ಲಿ ಸ್ವಲ್ಪಭಾಗವನ್ನು ಅರ್ಪಿಸುವುದರ ಮೂಲಕ ಭೂಮಿತಾಯಿಯನ್ನು ಒಲಿಸಿಕೊಳ್ಳುವುದು ಜನಪದರ ಉದ್ದೇಶವಾಗಿದೆ.

ಹೊಲ ಕುಯ್ಯುವುದು ಸ್ವಲ್ಪ ಕಷ್ಟದ ಕೆಲಸ. ಇಡೀ ಹೊಲವನ್ನು ಕೂತು ಮಂಡಿಯಿಂದಲೇ ಕುಕ್ಕರಗಾಲಿನಲ್ಲಿ ಕೂತು ತೆವಳುತ್ತಾ ತೆವಳುತ್ತಾ, ಕುಯ್ಯುತ್ತಾ, ಕುಯ್ದು ಬೆನ್ನ ಹಿಂದೆಗೆ ಎಳೆಯುತ್ತಾ ನೇರವಾಗಿ ಅರಿ ಹಾಕುತ್ತಾ ಸಾಗುವುದು ಸುಲಭದ ಕೆಲಸವಲ್ಲ. ಒಂದು ಸಾಲಿನಲ್ಲಿ ಇಬ್ಬರು ಕುಯ್ಯುತ್ತಾರೆ. ಅರ್ಧರ್ಧಭಾಗ ಮಾಡಿ ಕುಯುತ್ತಾರೆ. ಇದನ್ನು ಒಂದು ಸಾಲು ಎಂದು ಕರೆಯುವರು. ಹೀಗೆ ಹೊಲಕುಯ್ಯಲು ಆ ಜಮೀನಿನ ವಿಸ್ತೀರ್ಣದ ಮೇಲೆ ಎಷ್ಟು ಎಕರೆ ಇದೆ ಅನ್ನುವುದರ ಮೇಲೆ ಆ ಹೊಲಕ್ಕೆ ಎಷ್ಟು ಸಾಲು ಆಳುಗಳು ಬೇಕು ಎನ್ನುವುದನ್ನು ನಿರ್ಧರಿಸುತ್ತಾರೆ.

ಹೊಲ ಕುಯ್ಯುವಾಗ ಮುಂದೆ ಕುಯ್ಯುವವರು ಗಾಳು ಸಾಲು ಎಂದು, ಹಿಂದೆ ಕುಳಿತು ಕುಯ್ಯುವವರು ಕೋಳು ಸಾಲು ಎಂದೂ ಕರೆಯುವರು. ಆದ್ದರಿಂದ ಗಾಳುಸಾಲು ಕುಳಿತವರು ಎಲ್ಲರಿಗಿಂತಲೂ ಮೊದಲೇ ಕುಯ್ಯುಬೇಕು. ಆದ್ದರಿಂದ ಗಾಳುಸಾಲು ಕುಯ್ಯಲು ಭರಾಟಿ ಇರುವ ಮತ್ತು ಅನುಭವವುಳ್ಳ ಕೆಲಸಗಾರರನ್ನು ಬಿಡುತ್ತಾರೆ. ಹೀಗೆ ಕುಯ್ದ ಹೊಲವನ್ನು ಮೂರು ನಾಲ್ಕು ದಿನ ಚೆನ್ನಾಗಿ ಬಿಸಿಲಿಗೆ ಒಣಗಿಸಿ ನಂತರ ಮೆದೆಹಾಕುತ್ತಾರೆ.

ಹೊಲಕಟ್ಟುವುದು, (ಮೆದೆಹಾಕುವುದು)

ಕುಯ್ದ ಹೊಲವನ್ನು ಮೂರು ನಾಲ್ಕು ದಿನ ಚೆನ್ನಾಗಿ ಬಿಸಿಲಿಗೆ ಒಣಗಿಸಿ ಅರಿ ಮೊಗಚಿ ಒಣಗಿಸಿ ಹದಮಾಡಿಕೊಳ್ಳುತ್ತಾರೆ. ಹೊಲಕಟ್ಟುವ ಮೊದಲು ತಾವು ಎಲ್ಲಿ ಹುಲ್ಲನ್ನು ಒಕ್ಕಲು ಕಣ ಮಾಡುತ್ತಾರೊ ಅಲ್ಲಿ ಮೆದೆಹಾಕಲು ಮೊದಲು ಹಣೆ ಕೊಡುತ್ತಾರೆ. ಹಣೆ ಹುಲ್ಲಿಗೆ ಯಾವುದೇರೀತಿಯ ತೊಂದರೆ ಆಗದಂತೆ ಗೆದ್ದಲು ಹತ್ತದಂತೆ, ಮಳೆಬಂದರೆ ನೀರು ನಿಲ್ಲದಂತೆ ಕಲ್ಲಿನ ದಿಂಡುಗಳನ್ನು ಕೆಳಗೆ ಹಾಕುತ್ತಾರೆ. ಐದರಿಂದ ಆರು ಅಡಿ ಅಗಲ ಮತ್ತು ಉದ್ದ ಆ ಹೊಲದಲ್ಲಿನ ಹುಲ್ಲಿನ ಪ್ರಮಾಣಕ್ಕನುಸಾರವಾಗಿರುತ್ತದೆ. ಹದಿನೈದು ಅಡಿ, ಹದಿನೆಂಟು ಅಡಿ ಹೀಗೆ ಮೊದಲು ಮೆದೆ ಹಾಕುವ ಜಾಗವನ್ನು ಕೆತ್ತಿ ಕೂಳೆಗಳು, ಕಸ ತೆಗೆದು ಹಸನುಗೊಳಿಸಿಕೊಂಡು ಕಲ್ಲುದಿಂಡುಗಳನ್ನು ಅಡ್ಡಲಾಗಿ ಐದು, ಆರು ಅಡಿ ಒಳಗೆ ನಾಲ್ಕು ದಿಂಡುಗಳನ್ನು ಇಟ್ಟು, ಉದ್ದವಾಗಿ ಎಷ್ಟು ಉದ್ದಬೇಕೋ ಅಷ್ಟಕ್ಕೂ ಎರಡು ಅಡಿಗೆ ಒಂದೊಂದು ದಿಂಡು ಇಟ್ಟು ಅಗಲಕ್ಕೆ ಇಟ್ಟಿರುವ ನಾಲ್ಕು ಕಲ್ಲುದಿಂಡಿಗೂ ನೇರವಾಗಿ ಉದ್ದಕೂ ಕಲ್ಲುಗಳನ್ನು ಜೋಡಿಸುತ್ತಾರೆ. ಇದು ಆಯತಾಕಾರದಲ್ಲಿರುತ್ತದೆ. ಇದರ ಮೇಲೆ ಮರದ ತುಂಡುಗಳನ್ನು ದುಡುಕದ ಹಾಗೆ ಇಟ್ಟು ಅಡ್ಡ ಹಾಗೂ ಉದ್ದವಾಗಿ ಎರಡೂ ಕಡೆಯಿಂದ ಮರದ ತುಂಡುಗಳನ್ನು ಮಡುಗುತ್ತಾರೆ. ಇದರ ಮೇಲೆ ಸಣ್ಣಸಣ್ಣ ಕಟ್ಟಿಗೆಗಳನ್ನು ನೇರವಾಗಿ ಇರುವಂತ ನಾಲ್ಕು ಐದು ಅಡಿಯಷ್ಟು ಉದ್ದವಿರುವ, ಅಗಲಕ್ಕೆ ತಕ್ಕಹಾಗೆ ಇರುವ ಬಡಿಗೆಗಳನ್ನು ಹಾಕಿ ಅದರ ಮೇಲೆ ಗಿಡ್ಡಿಮೆಳೆ ಅಥವಾ ರೋಜ್‌ವಾರ್‌ಗಿಡಗಳನ್ನು ಕತ್ತರಿಸಿ ಇದರ ಮೇಲೆ ಮುಚ್ಚುತ್ತಾರೆ.

ಇದು ಸಣ್ಣ ಸಣ್ಣ ಮುಳ್ಳುಗಳಿಂದ ಕೂಡಿರುತ್ತದೆ. ಕೆಳಗಿನಿಂದ ಇಲ್ಲಿ ಹೆಗ್ಗಣಗಳು ಮೆದೆಗೆ ಹತ್ತದಿರಲಿ ಎಂಬ ಕಾರಣಕ್ಕೆ ಈ ಮುಳ್ಳಿಗ ಗಿಡ ಹಾಕುತ್ತಾರೆ. ನಂತರ ಅದರ ಮೇಲೆ ರಾಗಿಯ ಹುಲ್ಲನ್ನು ಹಾಕುತ್ತಾ ಹೋಗುತ್ತಾರೆ.

ಮೆದೆಹಾಕಲು ಅನುಭವವಿರಬೇಕು. ಅದೊಂದು ನೈಪುಣ್ಯ ಕಲೆ. ಎಲ್ಲರಿಗೂ ಆ ಅನುಭವ ಇರುವುದಿಲ್ಲ ಹಾಗಾಗಿ ಹೊಲಕಟ್ಟುವಾಗ ಮೆದೆ ಹಾಕುವ ನೈಪುಣ್ಯ ಹೊಂದಿರುವ ವ್ಯಕ್ತಿಯನ್ನು ಮೆದೆ ಬುಡಲು (ಹಾಕಲು) ಕರೆತರುತ್ತಾರೆ. ಏಕೆಂದರೆ ಮೆದೆ ಎರಡರಿಂದ ಮೂರು ತಿಂಗಳುಗಳವರೆಗೆ ಹೊಲದಲ್ಲೇ ಇರುತ್ತದೆ. ಮಳೆ, ಗಾಳಿಗೆ ನೆನೆಯದಂತೆ ಗಾಳಿಗೆ ಬೀಳದಂತೆ ಗಟ್ಟಿಯಾಗಿ ನಿಲ್ಲುವಂತೆ ಮೆದೆ ಹಾಕಬೇಕು. ಇಲ್ಲವಾದರೆ ಮೆದೆಗೆ ನೀರು ಇಳಿದರೆ ರಾಗಿ ಕೊಳೆತು ಕಪ್ಪಾಗುತ್ತದೆ. "ಮೆದೆ ಹಾಕುನ್ಗೆ ಮೊದ್ಲು ಆ ಹೊಲ್ದಲಿ ಎಷ್ಟು ಹೊರೆ ಹುಲ್ಲು ಕಟ್ಟದೆ ಅನ್ನುದು ತಿಳ್ಕಬೇಕು, ಆ ಹುಲ್ಲು ಜಂಬಾಗಿದ್ದದೊ ಬುರ್ಲೆಯೋ ಅದ್ನೆಲ್ಲ ನೋಡಿ ಮೆದೆ ಬುಡ್ಬೇಕು. ಮೆದೆ ಮಧ್ಯಕಚ್ಚಾಕಂದು, ಎಲ್ಲೆಲ್ಲಿ ತೇರು ಬುಟ್ಕಬೇಕು. ಅದ ಸರಿಯಾಗಿ ಬುಟ್ಕಂದು ಮೆದೆ ಕೆಳಗಿಂದ ಒಂದುವರೆ ಎರಡಡಿಗಂಟ ಹಣೆಕೊಟ್ಟಿರು ಅಳ್ತಿಗೆ ಹುಲ್ಲು ಬುಡ್ಬೇಕು. ಅಮೇಲೆ ಒಂದೊಂದ್ ಚೂರು ವರಾಕೆ ಬುಟ್ಕಂದು, ಹೊಟ್ಟೆ ಬಂದಂಗೆ ಮಧ್ಯಕ್ಕೆ ಕಚ್ಚಾಕಂದು ಬತ್ತಾ ಬಾತ್ತಾ ಹುಲ್ನೋಡ್ಕಂದು ಮುಗೊಳಿ ಮಾಡ್ಬೇಕು" (ಚೌಡಯ್ಯ, ವಕ್ತೃ) ಅಂತಾರೆ ಹೀಗೆ ತಾಳಲ್ಲಿ ಸಮನಾಗಿದ್ದು, ಮಧ್ಯದಲ್ಲಿ ಉಬ್ಬಿದ್ದು, ತುದಿಯಲ್ಲಿ ಸಣ್ಣದಾಗಿರುತ್ತದೆ. ನೀರು ಬಿದ್ದರೂ ಅದು ಜಾರಿ ನೆಲಕ್ಕೆ ಬಿಳುತ್ತದೆ ಅಂತಹ ಬುದ್ದಿವಂತಿಕೆ ಈಗಲೂ ನಮ್ಮ ಜನಪದರಲ್ಲಿದೆ.

ಜೋಳವನ್ನು ಒಂದೂವರೆ ಮೊಳದಷ್ಟೂ ಉದ್ದ ಇರುವಂತೆ ತೆನೆಯನ್ನು ಕತ್ತರಿಸುತ್ತಾರೆ. ಕತ್ತರಿಸಿದ ಎಲ್ಲ ಜೋಳವನ್ನು ಕಂತೆಕಟ್ಟಿ ಕಣಮಾಡಿದ್ದರೆ ಕಣದಲ್ಲಿ ಇಲ್ಲದಿದ್ದರೆ ಅರೆಮೇಲೋ ಅಥವಾ ಮನೆಯ ಪಡಸಾಲೆಗೆ ಅಡ್ಡಲಾಗಿ ಸೊಳ್ಳೆ ಪರೆದೆ ಕಟ್ಟಿ ಕಾಳು ಹೊರಹೋಗದಂತೆ ಮಾಡಿ ಕೈಯಿಂದಲೇ ಕೆಚ್ಚಿಕೊಳ್ಳುತ್ತಾರೆ. ತೊಗರಿ ಹುಚ್ಚೆಳ್ಳು, ಇವೆಲ್ಲ ಅರ್ಧಬುಡ ಸೇರಿಸಿ ಕುಯ್ದು ಹೊರೆಕಟ್ಟಿ ಕಡಿಮೆ ಇದ್ದರೆ ಮದೆ ಮೇಲೆ ಹಾಕುತ್ತಾರೆ. ಕಣ ಮಾಡಿದ ಮೇಲೆ ಕಣವನ್ನು ತಾರಿಸುವುದಕ್ಕೆ (ಸಾರಿಸುವುದು) ಮೊದಲೆ ಒಂದೊಂದು ಅರಿ ಅರಿ ತೆಗೆದು ಕೋಲಿನಿಂದ ಕೆಚ್ಚುತ್ತಾರೆ. ಹೆಚ್ಚಾಗಿದ್ದರೆ ರೋಂಡ್‌ಗುಂದಿಗೆ ಹಾಕುತ್ತಾರೆ. ಅವರೆ ಕಾಯಿಗಳು ಎಲ್ಲಕ್ಕಿಂತ ಕೊನೆಯದಾಗಿ ಬಿಡಿಸುವ ಕಾಳು ಮಂಕರಿಗಳನ್ನು ತೆಗೆದುಕೊಂಡು ಸಾಲು ಸಾಲು ಹಿಡಿದು ತಳ್ಳಾಗಿರುವ (ಚೆನ್ನಾಗಿ ಒಣಗಿದ)ವುಗಳನ್ನೆಲ್ಲ ಊರಿಕೊಳ್ಳುತ್ತಾರೆ.

ಒಕ್ಕಣೆ ಮಾಡುವುದು

ಕೃಷಿಯಲ್ಲಿ ಬಿತ್ತಿ, ಬೆಳೆದು ಕಟಾವುಮಾಡಿದ ನಂತರ ಪಸಲನ್ನು ಮನೆಗೆ ತರುವ ಕಾರ್ಯವೇ ಒಕ್ಕಣೆ ಮಾಡುವುದು. ಪ್ರಕೃತಿಯ ವೇಳಾಪಟ್ಟಿಯಂತೆ ಇಲ್ಲಿ ಜನವರಿ ಮತ್ತು ಫೆಬ್ರವರಿಯಲ್ಲಿ ಒಕ್ಕಣೆ ನಡೆಯುತ್ತದೆ. ರೈತರು ಸಮೃದ್ಧವಾಗಿ ಬೆಳೆದ ರಾಗಿ, ಭತ್ತ, ಜೋಳ, ಅವರೆ, ಹುರುಳಿ, ಮೊದಲಾದ ಧಾನ್ಯಗಳನ್ನು ಹುಲ್ಲಿನಿಂದ ಕಾಳುಗಳನ್ನು ಬೇರ್ಪಡಿಸುವುದು ಅಗತ್ಯ. ಆದರೆ ಹೇಗೆಂದರೆ ಹಾಗೆ ಕಾಳುಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲ. ತೆನೆಯಿಂದ ಕಾಳುಗಳನ್ನು ಬೇರ್ಪಡಿಸುವ ಕೆಲಸ ಕಣದಲ್ಲಿ ಮಾತ್ರಸಾಧ್ಯ. ಆದ್ದರಿಂದ ಮೊದಲು ಕಣ ಮಾಡಿಕೊಳ್ಳುತ್ತಾರೆ.

ಕಣ (ಕಳ)

ಬೆಳೆಯನ್ನು ಕೊಯ್ಲು ಮಾಡಿದ ಸ್ಥಳದಲ್ಲಿ ಮೊದಲೇ ನಿರ್ಧರಿಸಿದ ಹೊಲದಲ್ಲಿ ಕಣಮಾಡುತ್ತಾರೆ. ಆ ಕಣಮಾಡುವ ಸ್ಥಳದಲ್ಲೇ ಮೆದೆಗಳನ್ನು ಹಾಕಿರುತ್ತಾರೆ. ಮೆದೆಯ ಮುಂದೆ ಕಣಮಾಡುವ ಜಾಗದಲ್ಲಿ ಇರುವ ಕೂಳೆ, ಸತ್ತೆ, ಕಳೆಗಳನ್ನೆಲ್ಲ ಕೆತ್ತಿ ನೆಲ ಮಾತ್ರ ಇರುವಹಾಗೆ ಹಸನುಗೊಳಿಸುತ್ತಾರೆ. ಹೆಚ್ಚಾಗಿ ಊರ ಸಮೀಪಕ್ಕೆ ಇರುವ ಹೊಲಗಳಲ್ಲಿ ಅಥವಾ ಸಮೀಪವಾಗಿರುವಂತಹ ತಮ್ಮ ಹೊಲಗಳಲ್ಲೇ ಕಣಮಾಡುತ್ತಾರೆ. ತಮ್ಮ ತಮ್ಮ ಹೊಲ, ಮೆದೆಗಳ ಪ್ರಮಾಣಕ್ಕನುಗುಣವಾಗಿ ದುಂಡಾಗಿ ಕಣದ ಅಗಲವನ್ನು ಮಾಡುತ್ತಾರೆ ಇಪ್ಪತ್ತು ಎತ್ತಿನ ಕಣ, ಹದಿನೈದು ಎತ್ತಿನ ಕಣ, ಹತ್ತು ಎತ್ತಿನ ಕಣ ಮಾಡುತ್ತಾರೆ. ಕೆತ್ತಿದ ಕಣದ ಮಧ್ಯದಲ್ಲಿ ಮೇಟಿ ನೆಟ್ಟು ಒಂದು ಉಳುವ ಹಗ್ಗವನ್ನು ಮೇಟಿಗೆ ಕಟ್ಟಿ ಅದನ್ನು ಸುತ್ತಲೂ ಹಿಡಿದು ಎಲ್ಲಿಯೂ ಓರೆ ಕೋರೆಗಳು ಇರದಂತೆ ರೌಂಡಾಗಿ ಮಾಡುತ್ತಾರೆ. ಕಣಕ್ಕೆ ಸ್ವಲ್ಪ ಹುತ್ತದ ಅಥವಾ ಕೆಮ್ಮಣ್ಣನ್ನು ತಂದು ಹಾಕಿ ಸಂಜೆ ಒಂದುದಿನ ಚೆನ್ನಾಗಿ ನೀರನ್ನು ಹುಯ್ಯುತ್ತಾರೆ. ಮಾರನೆಯ ಮುಂಜಾನೆ ಬೆಳಿಗ್ಗೆ ಹಸುಗಳನ್ನು ಕಟ್ಟಿ ಅಂದರೆ ಎಷ್ಟು ಎತ್ತಿನ ಕಣ ಮಾಡಿರುತ್ತಾರೊ ಅಷ್ಟು ಎತ್ತು ಅಥವಾ ಹಸುಗಳನ್ನು ತಂದು ಸಾಲಾಗಿ ನಿಲ್ಲಿಸಿ ಎಣೆಕಟ್ಟಿ ಹಸುಗಳ ಕಾಲಿನಿಂದ ತುಳಿಸುತ್ತಾರೆ. ತುಳಿದು ತುಳಿದು ಚೆನ್ನಾಗಿ ಬಿಗಿಬರುವವರೆಗೂ ತುಳಿಸಿ ಗಟ್ಟಿಗೊಳಿಸುತ್ತಾರೆ. ಅಥವಾ ಒಂದು ಕುರಿ ಹಿಂಡನ್ನು ತಂದು ಕಳಕ್ಕೆ ಬಿಟ್ಟು ಸುತ್ತಲೂ ಸುತ್ತಿಸಿ ತುಳಿಸುತ್ತಾರೆ. ಹೀಗೆ ಹದವಾದ ಕಣಕ್ಕೆ ನೀರನ್ನು ಚುಮುಕಿಸುತ್ತಾರೆ. ದನ ಕುರಿಗಳಿಂದ ತುಳಿಸುತ್ತಾ ಬಿಗಿಗೊಳಿಸಿ ನಂತರ ಸಾಣೆಬರಲಿನಿಂದ ಎಳೆದು ಗಬ್ಬಡ ಗೊಳಿಸಿ ಕೊನೆಯದಾಗಿ ಮೇಟಿಯ ಕಡೆಯಿಂದ ಸುತ್ತಿ ಸುತ್ತಿ ಇಡೀ ಕಣವನ್ನು ಕೆಂಪಾದ ಸೂರ್ಯನ ಹಾಗೆ ಮಾಡುತ್ತಾರೆ.

ಒಂದುವಾರ ಚೆನ್ನಾಗಿ ಬಿಸಿಲಿಗೆ ಒಣಗಿದ ಮೇಲೆ ಹಸುಗಳ ಸಗಣಿಯಿಂದ ಸಾರಿಸುತ್ತಾರೆ. ಒಂದು ದಿನ ಚೆನ್ನಾಗಿ ಒಣಗಿದ ಮೇಲೆ ಮಾರನೆಯ ದಿನ ಹುಲ್ಲುಒಕ್ಕುವ ಕೆಲಸ ಪ್ರಾರಂಭಿಸುತ್ತಾರೆ. ಹುಲ್ಲು ಹಾಕುವ ದಿನ ಮುಂಜಾನೆ ಬೇಗ ಎದ್ದು ಮನೆಯ ಒಲೆಯಲ್ಲಿನ ಬೂದಿಯನ್ನು ಪಂದರಿಹಿಡಿದು ತಂದು ಉಳುವ ಹಗ್ಗವನ್ನು ಮೇಟಿಗೆ ಕಟ್ಟಿ ಕಣದ ಸುತ್ತಲೂ ಅಳತೆ ಹಿಡಿದು ಬೂದಿಯಿಂದ ಚಕ್ರಾಕಾರದ ಪಟ್ಟಿಹಾಕುತ್ತಾರೆ. ಮತ್ತು ಅರ್ಧಕಣಕ್ಕೆ ಒಂದು ಚಕ್ರಾಕಾರದ ಪಟ್ಟಿ ಬರೆದು ಒಂದು ಕಣವನ್ನು ಸಮಾನವಾಗಿ ನಾಲ್ಕು ಭಾಗವಾಗುವ ರೀತಿಯಲ್ಲಿ ನಾಲ್ಕು ದಿಕ್ಕಿಗೂ ನೇರವಾಗಿ ಪಟ್ಟಿ ಬರೆದು ಪಟ್ಟಿಗಳು ಛೇದಿಸಿರುವಲ್ಲಿ ತ್ರಿಶೂಲ ಮತ್ತು ಬಾಳೆಗೊನೆ ಬಾಗಿದ ಹಾಗೆ ಬರೆಯುತ್ತಾರೆ. ಇದು ಕಣಕ್ಕೆ ಹುಲ್ಲುಹಾಸುವಲ್ಲಿ ಎಷ್ಟಕ್ಕೆ ಹಾಸಬೇಕು ಎಂಬುದಕ್ಕೆ ಸಹಾಯವಾಗುತ್ತದೆ. ಕಣದಲ್ಲಿ ಹುಲ್ಲನ್ನು ಹಾಸುವಾಗ ತೆನೆಗಳೆಲ್ಲ ಮೇಲೆ ಹುಲ್ಲಿನ ಕಣಕಡ್ಡಿ ಕೆಳಗಾಗುವಂತೆ ಒಂದೇ ಕಡೆಯಿಂದ ಜೋಡಿಸುತ್ತಾ ಹಾಸುತ್ತಾರೆ. ಮಧ್ಯಾಹ್ನ ಹನ್ನೊಂದು ಗಂಟೆಗೆ ದಪ್ಪದಾದ ರೌಂಡು ಗುಂದಿಗೆ ಮರಗಳನ್ನು ಕಟ್ಟಿ ಎತ್ತುಗಳಿಂದ ತೆನೆಯನ್ನು ಜೋಡಿಸಿರುವ ಇರುದ್ಧ ದಿಕ್ಕಿನಲ್ಲಿ ಎಳೆಸುತ್ತಾರೆ. ಇದನ್ನು ಗುಂದು ಕಟ್ಟುವುದು ಎಂದು ಕರೆಯುತ್ತಾರೆ.

ಹುಲ್ಲಿನಿಂದ ರಾಗಿ ಬೇರೆಯಾದ ಮೇಲೆ ಮೆರೆಯಿಂದ ಹುಲ್ಲನ್ನು ತಿರುಬಾಕಿ ಮೇಲೆಕೆಳಗೆ ಮಾಡಿ ಮತ್ತೂ ಸ್ವಲ್ಪ ಹೊಡೆದು ಹುಲ್ಲನ್ನು ಬೇರ್ಪಡಿಸಿ ರಾಗಿಯನ್ನು ರಾಶಿ ಮಾಡಿ ಹೊಟ್ಟನ್ನು ತೂರಿ ಶುದ್ಧ ರಾಗಿಯನ್ನು ರಾಶಿಮಾಡುತ್ತಾರೆ.

ರಾಶಿಪೂಜೆ

ಇಲ್ಲಿ ರಾಗಿಯ ರಾಶಿಯನ್ನು ರಾಸ್ಯ ಎಂದು ಕರೆಯುತ್ತಾರೆ. ರಾಸ್ಯವನ್ನು ಮನೆಗೆ ತರುವುದಕ್ಕೂ ಮುಂಚೆ ರಾಸ್ಯ ಪೂಜೆಮಾಡುತ್ತಾರೆ. ಇಲ್ಲಿನ ರೈತರಿಗೆ ರಾಸ್ಯ ಪೂಜೆಯ ಬಗೆಗೆ ಇನ್ನಿಲ್ಲದ ಗೌರವ. ಇದು ಇವರ ಸಂತೃಪ್ತಿಯ ಆಚರಣೆ. ಐದಾರು ತಿಂಗಳು ಉತ್ತು ಬಿತ್ತು ಬೆಳೆದ ಪೈರಿನ ಕಾಳುಗಳನ್ನು ಬೇರ್ಪಡಿಸಿಕೊಂಡು ಊಟ ಮಾಡುವ ಹರ್ಷದ ಹಂತ. ತಾವು ಬೆಳೆದ ಬೆಳೆಯನ್ನು ಕಣದಲ್ಲಿ ರಾಶಿ ಮಾಡುತ್ತಾರೆ. ಎಷ್ಟುದಿವಸವಾದರೂ ರಾಸ್ಯ ಪೂಜೆ ಮಾಡದೆ ಮನೆಗೆ ತರುವಂತಿಲ್ಲ. ರಾಶಿಪೂಜೆಯ ದಿನ ಕಣವನ್ನು ಮತ್ತೆ ತಾರಿಸಿ (ಸಾರಿಸಿ) ಮಣ್ಣು ದೂಳನ್ನು ಬೇರ್ಪಡಿಸುತ್ತಾರೆ. ಇದನ್ನು ನಿಲೆತ್ತುವುದು ಎಂದು ಕರೆಯುತ್ತಾರೆ. ನಂತರ ನಿಲೆತ್ತಿದ ರಾಗಿಯನ್ನು ಕೆಂಪು ಎಂದು ಕರೆಯುತ್ತಾರೆ.

ರಾಸ್ಯ ಪೂಜೆಮಾಡಲು ಮನೆಯ ಹೆಣ್ಣುಮಕ್ಕಳು ಪೂಜಾಸಾಮಗ್ರಿಗಳನ್ನು ತಂದು ಪೂಜೆಮಾಡುತ್ತಾರೆ. ಹೂವು, ಪತ್ರೆ, ಗಂಧದಕಡ್ಡಿ, ಕರ್ಪೂರ, ಗಂಧ, ವಿಭೂತಿ, ತೊಳೆದ ಚೊಂಬಿನ ತುಂಬ ನೀರು, ಹಾಲು, ಎಲೆ, ಅಡಿಕೆ, ಕಾಯಿ ಈ ಎಲ್ಲ ವಸ್ತುಗಳನ್ನು ತಂದು ಹೂಗಳಿಂದ ರಾಸ್ಯದ ಸುತ್ತಲು ರಾಸ್ಯವನ್ನು ಅಲಂಕರಿಸಿ, ಕಣದಲ್ಲಿರುವ ಎಲ್ಲ ಸಾಮಗ್ರಿಗಳಿಗೆ ವಿಭೂತಿ ಇಟ್ಟು ಹರಿಸಿನ, ಕುಂಕುಮ, ಹೂಗಳನಿಟ್ಟು, ರಾಸ್ಯದ ನೆತ್ತಿಗೆ ಬಸವ(ಕುಡ್ಲು)ನ್ನ ಇಟ್ಟು, ಕಾಯಿ ಹೊಡೆದು ಎಳನೀರನ್ನು ತೇರ್ಥ ಹಾಕಿ ರಾಸ್ಯದ ಸುತ್ತ ಮೂರು ಸುತ್ತು ಬಂದು ತೇರ್ಥಹಾಕುತ್ತಾರೆ. ಮತ್ತು ಪೂಜೆಗೆ ತಂದಿದ್ದ ಹಾಲು ಮತ್ತು ನೀರನ್ನು ರಾಸ್ಯಕ್ಕೆ ಹೆಚ್ಚಿಸುತ್ತಾರೆ. ನಂತರವೇ ರಾಸ್ಯವನ್ನು ಇಬ್ಬಳಿಗೆಯಿಂದ ಅಳೆದು ಚೀಲಗಳಿಗೆ ತುಂಬುತ್ತಾರೆ.

ಮನೆಯ ಹೆಣ್ಣುಮಕ್ಕಳು ಅದರಲ್ಲೂ ತಂಗಿಯಾದವಳು ಅಣ್ಣನಿಗೆ ರಾಸ್ಯ ಅಳೆಯಲು ಬೇಕಾದ ಎಲ್ಲಾ ವಸ್ತುಗಳನ್ನು ಸಿದ್ಧಪಡಿಸಿ ಕಣಕ್ಕೆ ತಂದು ರಾಸ್ಯ ಅಳೆಯಲು ಅಣ್ಣನನ್ನು ಕರೆಯುತ್ತಾರೆ. ಇಲ್ಲಿ ಮನೆಗೆ ಬಂದ ಸೊಸೆಯಂದಿರನ್ನು ರಾಸ್ಯ ಅಳೆಯುವಲ್ಲಿಗೆ ಕರೆತರುತ್ತಿರಲಿಲ್ಲ. ಇದಕ್ಕೆ ಒಂದು ಕಥೆಯೂ ಇದೆ. ಮನೆಗೆ ಸೊಸೆಯಾಗಿ ಬಂದವಳು ಮನೆಯ ಎಲ್ಲಾ ಕೆಲಸಗಳನ್ನು ಮಾಡುವ ಪರಿಪಾಠ ಇಂದಿಗೂ ಇದೆ. ಕೇರುವ, ಕುಟ್ಟುವ ಬೀಸುವ ಇತ್ಯಾದಿ ಕೆಲಸಗಳನ್ನು ಮಾಡಬೇಕು. ರಾಸ್ಯವನ್ನು ನೋಡಿದ ಸೊಸೆಯಂದಿರು ಇಷ್ಟೆಲ್ಲಾ ನಾನೇ ಕುಟ್ಟಬೇಕು, ಕೇರಬೇಕು, ಬೀಸಬೇಕು ಎಂದು ಕರುಬುತ್ತಾರೆಂದು ಮನೆಯ ಹಿರಿಯರು ಹೇಳುತ್ತಾರೆ. "ರಾಸ್ಯೆವ್ನ ನೋಡ್ದ ಸೊಸೆ ಇದೆಲ್ಲ ನಾನೇ ಕುಟ್ಬೇಕು, ಕೇರ್ಬೆಕು, ಬೀಸ್ಬೇಕಲ್ಲ ಎಂದು ಕರುಬಿದ್ಲಂತೆ ಆಗ ರಾಸ್ಯೆವೆಲ್ಲ ಮಣ್ಣು ಕಲ್ಲಾಗೋಯ್ತಂತೆ ಅದ್ಕೆ ಕನಪ್ಪ ಮನೆ ಸೊಸೆದಿರ್ನ ರಾಸ್ಯೆವ್ನ ಅಳೀತಕೆ ಕರೀತೀರ್ಲಿಲ್ಲ. ಈಗ ಅದೆಲ್ಲ ಮರುಕತ್ಬುಟ್ಟವರೆ, ಈ ಸೊಸೇದಿರು ಇನ್ನೂ ಅನುಕೊಲ್ವೆ ಆಯ್ತು ಅಂತರೆ, ಈಗ ಯಾರಪ್ಪ ರಾಗಿಮಾಡಾರು, ಮಾಡೂಕ್ತಾನೆ ಬಂದದೆ ಇವ್ಕೆ. ಹೊಯ್ತಾರೆ ಮಿಲ್ಗೆ ತಕಂದು ಹೋಗಿ ಅಲ್ಲೇ ರಾಗಿ ಮಾಡಿಸ್ಕಂದು ಬೀಸೀಸ್ಕಂದು ತತ್ತಾರೆ. ಮೊದ್ಲು ಕೋಳ್ಕೂಗೊತ್ಗೆ ಎದ್ದು ರಾಗಿ ಬೀಸ್ಟೊ ನಮ್ಕಾಲ್ದೆಲಿ, ಇವಾಗ ಇಂಗೋಗಿ ಅಂಗೆ ಬೀಸ್ಕಬತ್ತರೆ ಎಲ್ಲ ಸುಲಭ ಆಗೋಯ್ತು" ಎಂದು ಹೇಳುತ್ತಾರೆ. (ದೊಡ್ಡಮ್ಮ, ವಕ್ತೃ).

ಜನಪದರ ಈ ನಂಬಿಕೆಗೆ ಹಿನ್ನೆಲೆ ಭೂಮಿ ತಾಯಿ ನಮಗೆ ಕೊಟ್ಟಿದ್ದನ್ನು ಮನಸ್ಸು ತುಂಬಿ ಸ್ವೀಕರಿಸಬೇಕು ಯಾವುದನ್ನು ಹೀಗಳೆಯಬಾರದು, ಕರುಬಬಾರದು ಎಂಬುದನ್ನು ತಿಳಿಸುತ್ತದೆ. ಇತ್ತೀಚೆಗೆ ಉಳುಮೆಯಿಂದ

ಒಕ್ಕುವತನಕ ಎಲ್ಲಾ ಟ್ರ್ಯಾಕ್ಟರ್‌ಗಳ ಬಳಕೆಯೇ ಹೆಚ್ಚಾಗಿ ಈ ಎಲ್ಲಾ ಸಂಸ್ಕೃತಿ ಆಚರಣೆಗಳು ನೇಪತ್ಯಕ್ಕೆ ಸರಿಯುತ್ತಿವೆ.

ಮುನಿಮಾಡುವುದು

ಕಣದಲ್ಲಿ ರಾಸ್ಯವನ್ನು ಮನೆಗೆ ತರುವದಿನ ಕಣದಲ್ಲಿಯೇ ಕೋಳಿ ಕೂದು ಮುನಿಯಪ್ಪನಿಗೆ ಎಡೆ ಇಕ್ಕಿ ಶಾಂತಿ ಮಾಡುವುದೇ ಮುನಿಮಾಡುವುದು ಎನ್ನುತ್ತಾರೆ. ನಾಗಪ್ಪ ವರ್ಷವಿಡೀ ಹೊಲ ಕಾಯುತ್ತಾನೆ. ಕೊನೆಯಲ್ಲಿ ಅವನಿಗೆ ಶಾಂತಿ ಮಾಡಲು ಮುನಿ ಮಾಡುವುದರ ಮೂಲಕ ಅವನನ್ನು ಸಮಾಧಾನ ಗೊಳಿಸುತ್ತೇವೆ. ಎಂಬುದು ಇಲ್ಲಿನವರ ನಂಬಿಕೆ.

ಪ್ರತಿವರ್ಷ ಒಕ್ಕಣೆ ಸಮಯದಲ್ಲಿ ರಾಗಿಯನ್ನು ಒಕ್ಕಣೆ ಮಾಡಾದ ಮೇಲೆ ಕೊನೆಯ ದಿನ ಅಂದರೆ ರಾಗಿಯನ್ನು ಕಣದಿಂದ ಮನೆಗೆ ತೆಗೆದುಕೊಂಡು ಹೋಗುವದಿನ ರಾಸ್ಯವನ್ನು ಪೂಜೆಮಾಡಿ ಹೊಲದಲ್ಲಿಯೇ ಮುನಿಯಪ್ಪನಿಗೆ ಕೋಳಿಯನ್ನು ಬಲಿಕೊಡುವುದಕ್ಕೆ ಮುನಿಮಾಡುವುದು.

ಮುನಿಯಪ್ಪ ಅಂದರೆ ನಾಗಪ್ಪ ಅಥವಾ ಸರ್ಪ ಎಂದೇ ಕರೆಯುತ್ತಾರೆ. ಈ ಮುನಿಯಪ್ಪ ಹೊಲದಲ್ಲಿ ಬಿತ್ತನೆ ಮಾಡಿದಂದಿನಿಂದಲೂ ಹೊಲವನ್ನು ಕಾಯುತ್ತಾನೆ. ತಮ್ಮ ಹೊಲದಲ್ಲಿರುವ ಪಸಲನ್ನು, ಸಂಪತ್ತನ್ನು ವರ್ಷವಿಡೀ ತಮ್ಮ ಬದುಕನ್ನು ರಕ್ಷಿಸಿದ ಮುನಿಯಪ್ಪನಿಗೆ ವರ್ಷದ ಒಕ್ಕಣೆಯ ಕೊನೆಯದಿನ ಕೃಷಿಕರು ತಾವು ಬೆಳೆದ ಬೆಳೆಯಲ್ಲಿನ ಸ್ವಲ್ಪಭಾಗವನ್ನು ಮೊದಲು ಮುನಿಯಪ್ಪನಿಗೆ ಅರ್ಪಿಸುವುದು ಜನಪದರಾದ ಕೃಷಿಕರ ಸಂಪ್ರದಾಯವಾಗಿದೆ. ಪ್ರತಿಯೊಬ್ಬರ ಹೊಲಗಳ ತೆವರಿ ಮೇಲೆ ಹುತ್ತಗಳು ಸಾಮಾನ್ಯವಾಗಿರುತ್ತವೆ. ಹುತ್ತಗಳು ನಾಗಪ್ಪ ವಾಸಿಸುವ ವಾಸಸ್ಥಳವಾಗಿರುತ್ತವೆ. ಸರ್ಪ, ನಾಗರ, ಹಾವುಗಳು ಫಲವಂತಿಕೆಯ ಸಂಕೇತಗಳಾಗಿವೆ. ಹಾಗಾಗಿ ಪ್ರತಿಯೊಂದು ಹುತ್ತಗಳನ್ನು ಒಡೆಯದೆ ಹಾಳುಮಾಡದೆ ಅವುಗಳನ್ನು ರಕ್ಷಿಸುತ್ತಾ ಬಂದಿರುವುದು ಇಂದಿಗೂ ಸಹ ಉಳಿದುಕೊಂಡು ಬಂದಿದೆ.

ಇದು ಪ್ರಕೃತಿಯ ವಿರುದ್ಧವಾಗಿ ನಡೆಯದೆ ಪ್ರಕೃತಿಯ ಜೊತೆ ಜೊತೆಯಲ್ಲಿ ಅನುಸಂಧಾನ ಮಾಡಿಕೊಂಡು ನಡೆಯುವ ಜೀವನಶೈಲಿಯಾಗಿದೆ. ತಾವು ಬೆಳೆದಂತಹ ದವಸ ಧಾನ್ಯಗಳನ್ನು ಸ್ವಲ್ಪ ಭಾಗತೆಗೆದು ಮೊದಲು ಪ್ರಕೃತಿಗೆ ಭೂಮಿ ತಾಯಿಗೆ ಅರ್ಪಿಸಿ ದೇವಾನುದೇವತೆಗಳಿಗೆ ಅರ್ಪಿಸುವುದು ಜನಪದರ ಮತ್ತು ಪ್ರಕೃತಿಯ ಸಂಬಂಧವನ್ನು ತಿಳಿಸುತ್ತದೆ. ಮುನಿಯಪ್ಪ, ವಾಸುದೇವ (ಗಾಳಿ), ಮಳೆರಾಯ ಭೂಮಿತಾಯಿ ಇವೇ ಈ ಪ್ರಕೃತಿ ದೈವಗಳನ್ನು ಜನಪದರು ಗಾಢವಾಗಿ, ನಂಬಿದ್ದಾರೆ.

ಮೊದಲು ಬೆಳೆದ ರಾಗಿಯನ್ನು ಸ್ವಲ್ಪತೆಗೆದುಕೊಂಡು ಅದನ್ನು ರಾಗಿ ಕಲ್ಲಿಂದಲೋ ಅಥವಾ ಮಿಲ್ಲಿಗೆ ಹಾಕ್ಸಿ ಹಿಟ್ಟುಮಾಡಿ ತಂದು ಅದರಿಂದಲೇ ಮುದ್ದೆ ಮಾಡುವುದು ಪದ್ಧತಿಯಾಗಿದೆ. ಮುನಿಮಾಡುವುದು ಅಂದರೆ ಬಲಿಕೊಡುವುದು. ಕೋಳಿ ಅಥವಾ ಕುರಿಯನ್ನು ಕುಯ್ಯುವದೂ ಉಂಟು ಮುನಿಮಾಡುವಾಗ ಸಿಹಿ ಊಟ ಮಾಡುವುದಿಲ್ಲ ಮಾಂಸಹಾರವೇ ಮಾಡಬೇಕು. ಹೊಲದಲ್ಲೇ ಒಲೆ ಒಡ್ಡಿ ಕೋಳಿ ಬಲಿಕೊಟ್ಟು ಅಡುಗೆ ಮಾಡಿ ಆ ಹೊಲದಲ್ಲಿ ಬೆಳೆದ ದವಸ ಧಾನ್ಯಗಳಿಂದಲೇ ಅಡುಗೆಮಾಡಿ ವಾಸುದೇವರಿಗೆ ಮುನಿಯಪ್ಪನಿಗೆ, ಮಳೆರಾಯನಿಗೆ ಎಡೆ ಇಕ್ಕಬೇಕು, ರಾಸ್ಯಕೆ, ಮೇಟಿಗೆ ಕಡ್ಲೊಂದ್ರಿಗೆ, ಸಣ್ಲೊಂದ್ರಿಗೆ, ಇಬ್ಬಳಿಗೆ ಎಲ್ಲಕ್ಕೂ

ಬೇರೆ ಬೇರೆ ಎಡೆ ಇಕ್ಕಬೇಕು. ಸಣ್ಣ ಸಣ್ಣ ಮೂರು ಕಲ್ಲುಗಳನ್ನು ತೆಗೆದುಕೊಂಡು ಅದನ್ನು ತೊಳೆದು ಅವುಗಳಿಗೆ ಹರಿಸಿನ ಕುಂಕುಮ, ವಿಭೂತಿ ಇಟ್ಟು ಅವುಗಳನ್ನು ದೇವರು ಒಡ್ಡುವ ಜಾಗದಲ್ಲಿ ಇಟ್ಟು ಅವಕ್ಕೆ ಎಡೆ ಇಟ್ಟು ಪೂಜೆಮಾಡಬೇಕು. ಪೂಜೆ ಮಾಡಲು ಮುನಿ ಸಾಮಾನು ಅಂತಲೇ ಕರೆಯುವ ಸಾಮಾನುಗಳನ್ನು ಪೇಟೆಗೆ ಹೋಗಿ ಗ್ರಂಥಿಕೆ ಅಂಗಡಿಯಿಂದ ತಂದು ಅವುಗಳನ್ನು ದೇವರಿಗೆ ಇಟ್ಟು ಪೂಜೆ ಮಾಡಬೇಕು. ಕರ್ಪೂರ ಮತ್ತು ಸಂಬ್ರಾಣಿ ಹೊಗೆ ಅತ್ಯವಶ್ಯಕವಾಗಿರುತ್ತದೆ. ಜೊತೆಗೆ ಗಂಧದಕಡ್ಡಿ ಬೇಕು. ಕಣದಲ್ಲಿರುವ ಎಲ್ಲ ವಸ್ತುಗಳಿಗೂ ಪೂಜೆ ಮಾಡಿ ತೀರ್ಥ ಹಾಕಿ ಆ ಮೇಲೆ ರಾಸ್ಯವನ್ನು ಮನೆಗೆ ತಂದು ಗುಳಿಗೆ ತುಂಬುತ್ತಾರೆ. ಹಿಂದೆ ಹೊಲಗಳಲ್ಲಿಯೇ ರಾಗಿ ತುಂಬುವ ಗುಳಿಗಳನ್ನು ಮಾಡಿಕೊಂಡಿದ್ದರು. ಪ್ರತಿಯೊಬ್ಬರ ಹೊಲಗಳಲ್ಲಿಯೂ ಈ ರಾಗಿ ತುಂಬುವ ಗುಳಿಗಳಿರುತ್ತಿದ್ದವು.

ಮುನಿಯನ್ನು ಪ್ರತಿವರ್ಷ ಮಾಡಬೇಕು ಇಲ್ಲದಿದ್ದರೆ ಮುನಿಮಾಡದೆ ರಾಗಿಯನ್ನು ಮನೆಗೆ ತಂದರೆ ಮನೆಯಲ್ಲಿ ಯಾರಿಗಾದರೂ ಹೊರಸೂಕನಂಗೆ ಆಗೋದು, ಹೊಟ್ಟೆನೋವು ಹಿಡಿಯುವುದು ಸುಸ್ತು ಸಂಕಟವಾಗುವುದು ಹೀಗಾಗುತ್ತದೆಯಂತೆ. ಮತ್ತೆ ಮನೆಯಲ್ಲಿ ಹೆಚ್ಚೊಕ್ಕಲಾಗುವುದಿಲ್ಲವಂತೆ. ಆದ್ದರಿಂದ ಪ್ರತಿಯೊಬ್ಬರು ಹೊಲದಲ್ಲಿ ಮುನಿಮಾಡುವುದು ಸಹಜವಾಗಿತ್ತು. ಅಷ್ಟೇ ಭಯ ಭಕ್ತಿಯಿಂದ ಕೂಡಿರುತ್ತಿತ್ತು. ಎನ್ನುತ್ತಾರೆ ನಮ್ಮ ಜನಪದರು.

ತೊಟ್ಲುಮುನಿ

ತೊಟ್ಲುಮುನಿಯನ್ನು ಮಕ್ಕಳು ಹುಟ್ಟಿದಾಗ ಮಕ್ಕಳಿಗೆ ಜ್ವರ, ಚಳಿ, ಹೊಟ್ಟೆನೋವು ಹಿಡಿಯುತ್ತಿತ್ತಂತೆ ಆಸ್ಪತ್ರೆಗೆ ಹೋದ್ರು ಜ್ವರ, ಚಳಿ, ಹೋಗುತ್ತಿರಲಿಲ್ಲವಂತೆ. ಆದ್ದರಿಂದ ತೊಟ್ಟಿಲ ಸಮೇತ ಮಕ್ಕಳನ್ನು ಹೊಲಗಳ ಹತ್ತಿರ ಮುನಿ ಮಾಡುವಲ್ಲಿಗೆ ಎತ್ತುಕೊಂಡು ಹೋಗಿ ಮುನಿಮಾಡುತ್ತಿದ್ದರಂತೆ. ಆಗ ಮಕ್ಕಳಿಗೆ ಜ್ವರ, ಚಳಿ, ಹೊಟ್ಟೆನೋವು ಹೋಗುತ್ತಿತ್ತಂತೆ ಮುನಿಮಾಡುವ ಹೊಲಗಳು ಎಲ್ಲೇ ಇರಲಿ ಎಷ್ಟೇ ದೂರವಿರಲಿ ಅಲ್ಲಿಗೇ ಹೋಗಿ ಮುನಿಮಾಡುತ್ತಿದ್ದರು. ಹಳ್ಳಿಗಳಲ್ಲಿ ಇಂದಿಗೂ ಹೊಲಗಳು ಊರಹತ್ತಿರದ ಹೊಲಕ್ಕೆ ಊರತ್ತಿರದ ಹೊಲ ಎಂದೂ ಮತ್ತು ಊರಿಂದ ಕೆಲವು ಮೈಲಿಗಳಷ್ಟು ದೂರ ಇರುವ ಹೊಲಗಳಿಗೆ ತರಿಗೆ ಹೊಲ ಎಂತಲೂ ಇಂದಿಗೂ ಕರೆಯುತ್ತಾರೆ. ಕೆಲವು ತರಿಗೆ ಹೊಲಗಳು ಹೊಳೆಯಿಂದ ಆಚೆ, ಮತ್ತೆ ಕೆಲವು ಹೊಳೆಯಿಂದ ಈಚೆಯೂ ಇವೆ. ಮಳೆಗಾಲ ಸುರುವಾದರೆ ಹೊಳೆಯಿಂದ ಆಚೆ ಇರುವ ಹೊಲಗಳಿಗೆ ಹೋಗಿ ಮುನಿಮಾಡಲು ತುಂಬಾ ಕಷ್ಟವಾಗುತ್ತಿತ್ತಂತೆ.

ಓೀಗೆ ಒಂದು ಬಾರಿ ಹೊಳೆಯಿಂದ ಆಚೆ ಹೊಲಗಳಿರುವ ಮನೆಮಕ್ಕಳಿಗೆ ಜ್ವರ, ಚಳಿ, ಪ್ರಾರಂಭವಾಗಿ ಬಿಡಲೇಇಲ್ಲವಂತೆ. ಮುನಿಮಾಡಲು ಹರಕೆ ಹೊತ್ತರಂತೆ ಮಳೆ ಜೋರಾಗಿ ಹೊಳೆ ಹೆಚ್ಚಾಗಿ ತುಂಬಿ ಹರಿಯುತ್ತಿತ್ತು. ಮಗುವಿನ ತಾಯಿ ಹೊಳೆಮಳೆ ಕಳೀಲಿ ತಕ್ಷಣ ಬಂದು ನಿನ್ನ ಹರಕೆ ತೀರಿಸುತ್ತೇನೆ ಎಂದು ಬೇಡಿಕೊಂಡರು ಜ್ವರ ಕಡಿಮೆಯಾಗಲಿಲ್ಲ ಆದ್ದರಿಂದ ಮಳೆಯಲ್ಲಿಯೇ ತುಂಬು ಹೊಳೆಯನ್ನು ದಾಟಲು ಆಗಲಿಲ್ಲ ತೊಟ್ಟಿಲನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗಿ ಮುನಿಯನ್ನು ಮಾಡಿದರಂತೆ ಆಗ ಮಗುವಿಗೆ ಜ್ವರ ಚಳಿ ಬಿಟ್ಟಿತು ಎಂದು ತಮ್ಮ ತವರು ಮನೆಯ ಘಟನೆಯನ್ನು ನೆನೆಯುತ್ತಾರೆ ವೆಂಕಟಮ್ಮ.

ಜನಪದರಲ್ಲಿ ಧಾನ್ಯ ಶೇಕರಣೆ ಮತ್ತು ಅಳತೆಯ ವಿಧಾನಗಳು

ಆಧುನಿಕ ರೀತಿಯ ಅಳತೆ ಮಾಪನಗಳು ಶೇಖರಣೆಯ ವಿಧಾನಗಳು ಹಳ್ಳಿಯ ಜನಪದರಿಗೆ ಅದರಲ್ಲೂ ಹಳೆಯ ಕಾಲದಲ್ಲಿ ಆವಿಷ್ಕಾರಗೊಂಡಿರಲಿಲ್ಲವಾದುದರಿಂದ ತಮ್ಮಲ್ಲಿ ಲಭ್ಯವಿದ್ದ ವಸ್ತುಗಳಿಂದಲೇ ಬುದ್ಧಿಕೌಶಲ್ಯ ಬಳಸಿ ತಮ್ಮದೇ ಆದ ವಿಶಿಷ್ಟಮಾದರಿಗಳನ್ನು ರೂಪಿಸಿಕೊಂಡಿದ್ದರು. ಇಂತಹ ಹಲವರು ಮಾದರಿಗಳನ್ನು ಪ್ರಸ್ತುತ ಪರಿಚಯ ಮಾಡಿಕೊಳ್ಳುವುದರೊಂದಿಗೆ ಜನಪದ ಸಂಸ್ಕೃತಿಯಲ್ಲಿನ ವೈಶಿಷ್ಟ್ಯವನ್ನು ಗಮನಿಸಬಹುದು.

ಕಣಜ : ರಾಗಿ ಮತ್ತು ಭತ್ತಗಳನ್ನು ಶೇಖರಿಸುವುದಕ್ಕೆ ಬಳಸುತ್ತಾರೆ. ಮಣ್ಣು ಮತ್ತು ಭತ್ತದ ಹುಲ್ಲನ್ನು ಚೆನ್ನಾಗಿ ಮಿದ್ದಿ ವೃತ್ತಾಕಾರದಲ್ಲಿ ಕಣಜಗಳನ್ನು ತಯಾರಿಸುತ್ತಿದ್ದರು. ಇದರ ತಳಭಾಗ ಚಿಕ್ಕದಾಗಿದ್ದು ಮಧ್ಯದಲ್ಲಿ ಉಬ್ಬಿ ವಿಸ್ತಾರವಾಗಿರುತ್ತದೆ. ಮೇಲ್ಭಾಗವು ಒಬ್ಬ ವ್ಯಕ್ತಿ ಸಾವಕಾಸವಾಗಿ ಉಪಾಯದಿಂದ ಒಳಗೆ ಇಳಿದು ಹಾಗೆ ನಿಧಾನವಾಗಿ ಹತ್ತುವಷ್ಟು ಕಿರಿದಾಗಿದ್ದು, ಸುಮಾರು ಆರು ಏಳು ಅಡಿಗಳಷ್ಟು ಎತ್ತರದವರೆಗೆ ಇದ್ದು ಮೂರು ಇಂಚು ದಪ್ಪದಾಗಿರುತ್ತದೆ. ಯಾವುದೇ ಗಾಳಿಬೆಳಕು ಆಡದ ಹಾಗೆ ಸಗಣಿಯಿಂದ ಸಾರಿಸಿರುತ್ತಾರೆ. ಇಂತಹ ಕಣಜವನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸುಲಭವಾಗಿ ಸಾಗಿಸಲು ಅನುಕೂಲವಾಗಿರುವಂತೆ ಒಂದು ಅಡಿಗೆ ತುಂಡಾಗಿಸಿ ಕುಡುಗೋಲಿನಿಂದ ಕೊಯ್ದು ಒಣಗಿಸಿ ಉಂಗುರಗಳಂತೆ ಮಾಡಿರುತ್ತಾರೆ. ಇವನ್ನು ತೆಕ್ಕೆಗಲು ಎಂದು ಕರೆಯುತ್ತಾರೆ. ತೆಕ್ಕೆಗಳ ಮೇಲೆ ಇವುಗಳನ್ನು ನಿಲ್ಲಿಸಿದರೆ ಕಣಜಗಳು ಉಂಟುವುದಿಲ್ಲ ಸಮತಟ್ಟಾಗಿ ಕೂರುತ್ತವೆ.

ಕಣಜಗಳನ್ನು ಬಿದಿರಿನಿಂದ ತೆಳುವಾದ ಅಚ್ಚೆಗಳಿಂದಲೂ ಹೆಣೆದು ಕಣಜಗಳನ್ನು ಮಾಡುತ್ತಾರೆ. ಮೊರಗಳನ್ನು ಹೆಣೆದ ಹಾಗೆಯೇ ಬಹಳ ಒತ್ತಾಗಿ ಹೆಣೆದು ಒಂದಾಳೆತ್ತರದಷ್ಟು ಉದ್ದವಾದ ಅದನ್ನು ಇಬ್ಬರು ಸೇರಿ ಮಾತ್ರ ತಬ್ಬುವಷ್ಟು ದಪ್ಪವಾಗಿ ಹೆಣೆದಿರುತ್ತಾರೆ. ಇದಕ್ಕೂ ಕೂಡ ತೊಪ್ಪೆ ಸಗಣಿಯಿಂದ ಮೆತ್ತಿ ಸಾರಿಸಿ ಚೆನ್ನಾಗಿ ಒಣಗಿಸಿ ಇಟ್ಟಿರುತ್ತಾರೆ. ಇದರ ತಳಭಾಗದಲ್ಲಿ ಸಣ್ಣದಾಗಿ ಒಂದು ತೂತು ಮಾಡಿರುತ್ತಾರೆ. "ಕಣಜ ಒಂದಾಳುದ್ದದ ಎತ್ತರವಾಗಿ ಇರ್ತದಲ್ಲ ನಾವು ಹತ್ತಿ ಅದ್ರೊಳಕೆ ಇಳೀಕಾಗೊಲ್ಲು ಅದ್ಕೆ ನಾವು ಕಣಜದ ತಳಭಾಗ್ದಲೆ ಒಂದೂ ಒಂದುವರೆ ಇಂಚಷ್ಟು ಅಗಲವಾದ ಒಂದು ಎಜ್ಜ (ತೂತು) ಮಾಡಿ ಅದ್ಕೆ ಬೆಣೆ ಒಡ್ಡು ಮುಚ್ಚುಬುಡ್ತೀವಿ ನಮಗೆಬೇಕಾದಾಗ ಆ ಬೆಣೆತಗ್ದು ರಾಗಿ, ಜೋಳ ಸುಲಭವಾಗಿ ಈಚೆಗೆ ತಕ್ಕತಿವಿ" ಅಂತಾರೆ. (ಚೌಡಯ್ಯ) ಹೀಗೆ ಕಣಜಗಳನ್ನು ಮಾಡಿ ಅದಕ್ಕೆ ಸುಣ್ಣಬಣ್ಣ ಬಳಿದು ತಮಗೆ ಬೇಕಾದ ಅನುಕೂಲವಾದ ಮನೆಯ ಒಂದು ಭಾಗದಲ್ಲಿ ಇಡುತ್ತಾರೆ. ಇಂತಹ ಕಣಜಗಳಲ್ಲಿ ಧಾನ್ಯ ಶೇಖರಿಸುವುದರಿಂದ ಇಲಿಗಳ ಕಾಟವನ್ನು ತಪ್ಪಿಸಬಹುದು. ಈ ತರಹದ ಕಣಜಗಳು ಇತ್ತೀಚೆಗೆ ಕಣ್ಮರೆಯಾಗುತ್ತಿದ್ದು ಕಣಜಗಳನ್ನು ಆಧುನಿಕ ರೀತಿಯಲ್ಲಿ ನಿರ್ಮಿಸಿಕೊಳ್ಳುತ್ತಿದ್ದಾರೆ. ಇಟ್ಟಿಗೆ ಮತ್ತು ಸಿಮೆಂಟಿನಿಂದ ಹತ್ತಡಿ ಉದ್ದ ಹತ್ತಡಿ ಅಗಲವಾದ ಚೌಕಾಕಾರವಾಗಿ ತೊಟ್ಟಿಗಳಂತೆ ನಿರ್ಮಿಸುತ್ತಾರೆ. ಇವುಗಳನ್ನು ತೊಟ್ಟಿಕಣಜ ಎಂದು ಕರೆಯುತ್ತಾರೆ. ಐದು, ಆರು ಅಡಿಗಳಷ್ಟು ಎತ್ತರವಾಗಿರುವ ಇಂತಹ ತೊಟ್ಟಿಗಳ ಮೇಲೆ ಮರದ ಹಲಗೆಗಳನ್ನು ಮುಚ್ಚಿ ಮನೆಯಲ್ಲಿ ಅಟ್ಟವಾಗಿಯೂ ಬಳಸುತ್ತಾರೆ. ಒಳಗಿರುವ ದವಸವನ್ನು ತೆಗೆದುಕೊಳ್ಳಲು ನೆಲಮಟ್ಟದಲ್ಲಿ ಒಂದು ಸಣ್ಣ ನಾಲ್ಕು ಅಂಗುಲದ ಕಿಂಡಿಯನ್ನು ಮಾಡಿರುತ್ತಾರೆ. ತಮಗೆ ಬೇಕಾದಾಗ ದವಸಧಾನ್ಯವನ್ನು ಆ

ಕಿಂಡಿಯ ಮೂಲಕ ತೆಗೆದುಕೊಂಡು ಮತ್ತೆ ಮುಚ್ಚುತ್ತಾರೆ. ಹೀಗೆ ದವಸಧಾನ್ಯಗಳನ್ನು ಶೇಖರಣೆ ಮಾಡುವ ವಸ್ತುಗಳಲ್ಲಿ ಕಣಜ ಬಹುಮುಖ್ಯವಾಗಿದೆ.

ಮೂಡೆ

ಮೂಡೆಯು ಸಹ ಒಂದು ರೀತಿಯ ದಾನ್ಯಗಳನ್ನು ಶೇಕರಣೆಮಾಡುವ ಒಂದು ವಸ್ತುವಾಗಿದೆ. ಇದರಲ್ಲಿ ದ್ವಿದಳ ಧಾನ್ಯಗಳಾದ ಅವರೆಕಾಳು, ಅಲಸಂದೆ, ತೊಗರಿ, ಉರುಳಿಕಾಳು ಮುಂತಾದ ಕಾಳುಗಳನ್ನು ಬಿತ್ತನೆ ಬೀಜಕ್ಕೆಂದೆ ಸುರಕ್ಷಿತವಾಗಿ ಇಡುವುದಕ್ಕೋಸ್ಕರ ಮೂಡೆಗಳನ್ನು ಬಳಸುತ್ತಾರೆ. ಮೂಡೆಯನ್ನು ಭತ್ತದ ಹುಲ್ಲಿನಿಂದ ಮಾಡುತ್ತಾರೆ. ಭತ್ತಕೆಚ್ಚಿ ನಂತರ ಹಸುಗಳ ಕಾಲಿನಿಂದ ಚೆನ್ನಾಗಿ ತುಳಿಸಿದ ಹುಲ್ಲನ್ನು ತಂದು ಸ್ವಲ್ಪ ನೀರನ್ನು ಚುಮಿಕಿಸಿ ರಾತ್ರಿ ಪೂರ ಇಬ್ಬನಿಯಲ್ಲಿ ಇಟ್ಟು ಮುಂಜಾನೆ ಎದ್ದು ಇಬ್ಬರು ವ್ಯಕ್ತಿಗಳು ಸೇರಿ ಹುಲ್ಲನ್ನು ಹೊಸೆದು ದಾರದಹಾಗೆ ಸುತ್ತಿಸುತ್ತಿ ಉದ್ದನೆಯ ದಪ್ಪದಾದ ಹಗ್ಗದ ರೀತಿಯಲ್ಲಿ ಮಾಡಿ ಒಂದು ಮರದ ತುಂಡಿಗೆ ಸುತ್ತಿಮಡುಗುತ್ತಾರೆ. ಬಲಿತು ಹಣ್ಣು ಮೆಟ್ಟಿರುವ ಬೆಟ್ಟದ ನಾಲೆ ಹುಲ್ಲನ್ನು ಕುಯ್ದುತಂದು, ಒಂದು ಹಳೆಗೆಯನ್ನು ದಬ್ಬಾಕಿ ಅದರ ಮೇಲೆ ನಾಲೆಹುಲ್ಲನ್ನು ಹಾಕಿ ಪೂರ್ತಿ ಹಳಗೆಯನ್ನು ಹುಲ್ಲಿನಿಂದ ಮುಚ್ಚುತ್ತಾರೆ. ಮುಚ್ಚಿದ ಹಳಯ ನೆತ್ತಿಯ ಮೇಲಿಂದ ಸುತ್ತಿಟ್ಟ ನೆಲ್ಲುಲ್ಲಿನ ದಾರದ ಉಂಡೆಯನ್ನು ಸುತ್ತಿ ಸುತ್ತಿ ಕ್ರಮಬದ್ದವಾಗಿ ಒಂದರ ಪಕ್ಕದಲ್ಲಿ ಒಂದರಂತೆ ಬುಗುರಿಗೆ ದಾರ ಸುತ್ತುವ ಹಾಗೆ ಸುತ್ತಿ ಕೊನೆಗೆ ಹಳಗೆಯನ್ನು ಬಾಯಿ ಮೇಲು ಮಾಡಿ ಮೆಲ್ಲಗ ಆ ಹಳಗೆಯನ್ನು ಹೊರತೆಗೆದು ಅದರೊಳಗೆ ಸ್ವಲ್ಪ ರಾಗಿಯ ಹೊಟ್ಟನ್ನು ಹಾಕಿ ಹಾಗೂ ಕಾಳುಗಳಿಗೂ ರಾಗಿಯ ಹೊಟ್ಟನ್ನು ಬೆರೆಸಿ, ಬೆರೆಸಿದ ಕಾಳುಗಳನ್ನು ಮೂಡೆಯ ಒಳಗೆ ಹಾಕುತ್ತಾರೆ. ನಂತರ ನಾಲೆ ಹುಲ್ಲನ್ನು ಹಾಕಿ ಮುಚ್ಚಿ ಅದರ ಮೇಲೆ ಅದೇ ನೆಲ್ಲುಲ್ಲಿನ ದಾರದಿಂದ ಮುಚ್ಚುತ್ತಾರೆ. ಮುಚ್ಚಿ ನಂತರ ಚಗರೆ ಹುರಿಯಿಂದ ಮೂಡೆಯನ್ನು ಬಿಗಿದು ಕೊರೆದು ಸುತ್ತಲೂ ಸಮವಾಗಿರುವ ಹಾಗೆ ಕೊರೆದು ಕಟ್ಟುತ್ತಾರೆ. ಇದು ಭೂಮಿಯ ರೇಖಾಂಶ ಗೆರೆಗಳ ಹಾಗೆ ಕಾಣುತ್ತದೆ. ಹೀಗೆ ಮಾಡಿದ ಮೂಡೆಗಳನ್ನು ಮನೆಯ ಮೂಲೆಯಲ್ಲಿ ಕಲ್ಲಿನ ಮೇಲೆ ಮಡುಗುತ್ತಾರೆ. ಹೀಗೆ ಮಾಡುವುದರಿಂದ ಮುಂದೆ ಬರುವ "ಬಿತ್ನೆ ಕಾಲಕ್ಕೆ ಯಾರತ್ರನು ಹೋಗಿ ಬೇಡುವಹಾಗಿಲ್ಲ ಅದ್ಕು ಮೊದ್ಲು ಬೀಜ್ಕೆ ಯಾವ ಹುಳ ಉಪ್ಪೆನು ಬೀಳೊಲ್ಲು, ಅಮೇಲೆ ಮನೇಲಿ ಹೆಂಗುಸ್ರು ಮಕ್ಳು ಕೈ ಬಾಯಿ ಆಡ್ಸಂಗೆ ಒಪ್ಪವಾಗಿ ಮಡುಗ್ಬೋದು" ಎನ್ನುತ್ತಾರೆ. (ಸಾತಗಿರಿಗೌಡ, ವಕ್ತೃ)

ವಾಡೆ

ವಾಡೆ ಎಂದರೆ ಬರೇ ಮಣ್ಣಿನಿಂದಲೇ ಮಾಡಿದ ಶುದ್ದವಾದ ಕಣಜದಾಕೃತಿಯನ್ನು ಹೋಲುವ ಆದರೆ ಕಣಜಕ್ಕಿಂತಲು ಸ್ವಲ್ಪ ಚಿಕ್ಕದಾದ ಧಾನ್ಯಗಳ ಶೇಖರಣಾ ಸಾಮಗ್ರಿಯೇ ವಾಡೆ. ಕುಂಬಾರನು ಮಡಕೆ ಮಾಡುವಂತೆ ದೊಡ್ಡದಾಗಿ ಸುಮಾರು ಎರಡು ಅಡಿ ವ್ಯಾಸದ ಸುತ್ತಳತೆಯನ್ನು ಹೊಂದಿದ್ದು ಬಾಯಿ ಮತ್ತು ತಳಭಾಗದಲ್ಲಿ ಇದರ ವ್ಯಾಸ ಚಿಕ್ಕದಾಗಿದ್ದು ಯಾವೊಬ್ಬ ವ್ಯಕ್ತಿಯೂ ಇದರೊಳಗೆ ಇಳಿಯಲು ಸಾಧ್ಯವಾಗುವುದಿಲ್ಲ. ಸುಮಾರು ನಾಲ್ಕರಿಂದ ಐದು ಅಡಿ ಎತ್ತರದಿಂದ ಕೂಡಿರುತ್ತವೆ. ಈ ವಾಡೆಗಳಿಗೆ ಎರಡೂ ಕಡೆ ಬಾಯಿ ತೆರೆದಿರುತ್ತದೆ. ಒಂದು ತುದಿಯನ್ನು ನೆಲದ ಮೇಲೆ ಮಡಗಿ ಸುತ್ತಲೂ ಸಗಣಿಯನ್ನು ಮೆತ್ತುತ್ತಾರೆ. ಈ ವಾಡೆಗಳು

ಸಾಮಾನ್ಯವಾಗಿ ಮನೆಯ ಮೂಲೆಗಳಲ್ಲಿ ಮಡಗುತ್ತಾರೆ. ಅದರೊಳಗೆ ದವಸಧಾನ್ಯ ತುಂಬಿ ಅದರ ಮೇಲೊಂದು ಚಿಕ್ಕದಾದ ಮಡಿಕೆಯನ್ನು ಮಡಗಿ ಎರಡು ಸೇರುವ ಜಾಗದಲ್ಲಿ ಸಗಣಿಯನ್ನು ಮೆತ್ತಿ ಯಾರು ಕೀಳದಹಾಗೆ ಬಿತ್ತನೆ ಕಾಲಕ್ಕೆ ದವಸ ಧಾನ್ಯ ಶೇಖರಣೆ ಮಾಡಿಡುತ್ತಾರೆ.

ಗುಡಾಣ

ಇದನ್ನು ಸಹ ಪೂರ್ತಿ ಮಣ್ಣಿನಿಂದಲೇ ಕುಂಬಾರನು ತಯಾರಿಸಿಡುತ್ತಾನೆ. ಗುಡಾಣ ಎರಡು ಅಥವಾ ಎರಡೂವರೆ ಅಡಿ ಅಷ್ಟು ಎತ್ತರವಾಗಿದ್ದು ದಪ್ಪದಾಗಿ ಗುಂಡಾಗಿ ಇರುತ್ತದೆ. ಇದಕ್ಕೆ ಒಂದೇ ಕಡೆ ಬಾಯಿ ಇರುತ್ತದೆ. ಇದಕ್ಕೆ ಬೇರೆ ಬೇರೆ ಕಡೆಯಲ್ಲಿ ಬಂದ್ಲ ಎಂದು ಕರೆಯುತ್ತಾರೆ.

ಹಳಗೆ

ಹಳಗೆ ಗುಡಾಣವನ್ನೇ ಹೋಲುವ ಮತ್ತೊಂದು ಮಾದರಿಯಾಗಿದೆ. ಇದೂ ಕೂಡ ಮಣ್ಣಿನಿಂದಲೇ ಕುಂಬಾರನು ತಯಾರಿಸಿಕೊಡುತ್ತಾನೆ. ಎರಡು ಅಥವಾ ಮೂರು ಅಡಿಗಳಷ್ಟು ಎತ್ತರವಾಗಿರುತ್ತದೆ. ಗುಡಾಣಕ್ಕೆ ಸ್ವಲ್ಪ ದೊಡ್ಡದು ಆದರೆ ವಾಡೆಗಿಂತ ಸ್ವಲ್ಪ ಚಿಕ್ಕದಾಗಿರುತ್ತದೆ. ಇದಕ್ಕೆ ಒಂದೇ ಕಡೆ ಬಾಯಿ ಹೊಂದಿರುತ್ತದೆ.

ಗುಳಿ

ಗುಳಿ ಎಂಬುದು ಸಹ ದವಸ, ಧಾನ್ಯ ತುಂಬುವ ಕಣಜವೇ. ಇದು ಇತರ ಧಾನ್ಯಸಂಗ್ರಹಣಾ ಮಾದರಿಗಿಂತಲು ಭಿನ್ನವಾದುದಾಗಿದೆ. ಭೂಮಿಯ ಒಳಗೆ ಮಣ್ಣನ್ನು ತೋಡಿ ಹತ್ತರಿಂದ ಹನ್ನೆರಡು ಅಡಿ ಆಳ ತೆಗೆದು ಒಳಗೆ ವಿಶಾಲವಾಗಿ ಮೂರರಿಂದ ನಾಲ್ಕು ಅಡಿ ಅಗಲದಷ್ಟು ಸುತ್ತಳತೆಯಿಂದ ಕೂಡಿರುತ್ತದೆ. ಮೇಲೆ ಕಿರಿದಾಗಿದ್ದು ಒಬ್ಬ ವ್ಯಕ್ತಿ ಮಾತ್ರ ಸಾವಕಾಸವಾಗಿ ಇಳಿಯಲು ಸಾಧ್ಯಾವಾಗುತ್ತದೆ. ಒಳಗೆ ವಾಡೆಯಾಕಾರದಲ್ಲಿ ಇಳಿಜಾರಿನಿಂದ ಸುತ್ತಲೂ ಕೂಡಿರುತ್ತದೆ. ಮಧ್ಯದಲ್ಲಿ ಹೆಚ್ಚು ಉಬ್ಬಿದ್ದು ತಳಭಾಗದಲ್ಲಿ ಸ್ವಲ್ಪ ಕಿರಿದಾಗುತ್ತದೆ. ಮೇಲ್ಬಾಗದಲ್ಲಿ ಒಂದು ಅಗಲವಾದ ಕಲ್ಲಿನಿಂದ ಮುಚ್ಚುತ್ತಾರೆ. ಗುಳಿಯನ್ನು ಸಾಮಾನ್ಯವಾಗಿ ಗಟ್ಟಿಯಾದ ಮಣ್ಣಾಗಿರುವ ಕೆಮ್ಮೊಣ್ಣು ಇರುವಲ್ಲಿ ಮಾಡಿರುತ್ತಾರೆ. ಏಕೆಂದರೆ ಕೆಮ್ಮಣ್ಣು ಕಸಿಯುವುದಿಲ್ಲ ಮತ್ತು ಕರಗುವುದಿಲ್ಲವಾದ್ದರಿಂದ ಈ ಸ್ಥಳದಲ್ಲಿ ಮಾಡುತ್ತಾರೆ. ಹೆಚ್ಚು ನೀರು ಹರಿಯದಿರುವ ಸ್ಥಳಗಳಲ್ಲಿ ಎತ್ತರವಾದ ಸ್ಥಳಗಳಲ್ಲಿ ಗುಳಿಯನ್ನು ತೋಡಿರುತ್ತಾರೆ.

ಹೆಚ್ಚೆಚ್ಚು ಪ್ರಮಾಣದಲ್ಲಿ ಧಾನ್ಯ ಬೆಳೆಯುವವರು ಧೀರ್ಘಕಾಲದವರೆಗೆ ರಾಗಿಯನ್ನು ಸುರಕ್ಷಿತವಾಗಿ ಶೇಖರಿಸಿಡಲು ಈ ಗುಳಿಗಳನ್ನು ಬಳಸುತ್ತಿದ್ದರು. ಈ ರೀತಿ ಶೇಕರಿಸಿಟ್ಟ ರಾಗಿಯು ವರ್ಷಾನುಗಟ್ಟಲೆ ಸುರಕ್ಷಿತವಾಗಿರುತ್ತಿತ್ತು. ಇದನ್ನು ಬೆಳೆ ಸರಿಯಾಗಿ ಬಾರದಿದ್ದಾಗ, ಬರಗಾಲಬಂದಾಗ ಅಥವಾ ಮದುವೆ ಮುಂಜಿ, ಹಬ್ಬ, ಹರಿದಿನಗಳ ವಿಶೇಷ ಸಂದರ್ಭಗಳಲ್ಲಿ ಗುಳಿಯನ್ನು ಕಿತ್ತು ರಾಗಿ ಹೊರತೆಗೆದು ಕೊಳ್ಳುತ್ತಿದ್ದರು. ಎಷ್ಟೋ ವರ್ಷಗಳಾದರು ರಾಗಿಯು ಕೆಡುತ್ತಿರಲಿಲ್ಲ ಹಾಗೆ ಸುರಕ್ಷಿತವಾಗಿಯೇ ಇರುತ್ತಿತ್ತು. ಈ ಗುಳಿಗಳು ಶ್ರೀಮಂತರ ಪ್ರತೀಕಗಳೇ ಆಗಿದ್ದವು. ಹಿಂದೆ ಹಣದ ಬದಲಿಗೆ ದವಸ ಧಾನ್ಯ ಸಾಕುಪ್ರಾಣಿಗಳು, ಹೊಲ ಮನೆಗಳೇ ತುಂಬಿರುತ್ತಿದ್ದವು. ಇದರ ಆಧಾರದ ಮೇಲೆ ಅವರ ಆರ್ಥಿಕ ಸ್ಥಿತಿಗತಿ ನಿರ್ಧರಿಸುತ್ತಿದ್ದರು. ಗುಳಿಗಳನ್ನು ಕೆಲವು ಕಡೆ ಹಗೇವು ಎಂದು ಕರೆಯುತ್ತಾರೆ. ಕಬ್ಬಾಳು ಕುಳಿ ಪ್ರದೇಶದಲ್ಲಿ ಮಾತ್ರ ಗುಳಿ ಎಂದೇ

ಕರೆಯುತ್ತಾರೆ. ಗುಳಿಗಳು ಅವರವರ ಜಮೀನಿನಲ್ಲೆ ಇರುತ್ತಿದ್ದವು. ಆ ಹೊಲಗಳಲ್ಲಿ ಬೆಳೆದ ರಾಗಿಯನ್ನು ಅದೇ ಹೊಲಗಳಲ್ಲಿ ಗುಳಿಮಾಡಿ ತುಂಬಿಡುತ್ತಿದ್ದರು. ಮನೆಗಳಿಗೆ ತಂದು ಇಡಲು ಚೀಲಗಳು, ಉಗ್ರಾಣ ವ್ಯವಸ್ಥೆ ಇರಲಿಲ್ಲವಾದ್ದರಿಂದ ಮತ್ತು ಸ್ಥಳದ ಕೊರತೆಯಿಂದ ಹೊಲಗಳಲ್ಲೇ ಗುಳಿ ಮಾಡಿ ತುಂಬುತ್ತಿದ್ದರು. ಗುಳಿಗಳು ಕೇವಲ ಹೊಲಗಳಲ್ಲಷ್ಟೇ ಅಲ್ಲದೇ ಮನೆಗಳಲ್ಲಿಯೂ ಇರುತ್ತಿದ್ದವು. ಇಂದಿಗೂ ಕೂಡ ಹಳೆಯ ಮನೆಗಳಲ್ಲಿ ಹಜಾರ, ಕೋಣೆಗಳಲ್ಲಿ ರಾಗಿ ಗುಳಿ ಇರುವುದನ್ನು ಹಲವು ಹಳೆಯ ಮನೆಗಳಲ್ಲಿ ಕಾಣಬಹುದು. ಮನೆಯ ಮುಂದಿನ ಬೀದಿಗಳಲ್ಲಿಯು ಕೂಡ ಇಂತಹ ಗುಳಿಗಳಿದ್ದವು.

ಕಬ್ಬಾಳು ಬೆಟ್ಟದ ಮೇಲೆ ದವಸ ಧಾನ್ಯ ತುಂಬುತ್ತಿದ್ದ ಗುಳಿಗಳನ್ನು ಇಂದಿಗೂ ಕಾಣ ಬಹುದಾಗಿದೆ.

ಅಳತೆಯ ಸಾಧನಗಳು

ತಕ್ಕಡಿ ತೂಕದ ಬೊಟ್ಟುಗಳು ಬರುವುದಕ್ಕೆ ಮೊದಲು ಜನಪದರಲ್ಲಿ ಅಳತೆ ಮಾಪನಗಳು ಜಾನಪದೀಯ ಮಾದರಿಯಲ್ಲಿಯೇ ಇದ್ದವು. ಅವುಗಳು ಸಂಸ್ಕೃತಿಯ ಭಾಗವಾಗಿ ಇಂದಿಗೂ ಉಳಿದಿದ್ದು, ತಮ್ಮ ವೈಶಿಷ್ಟ್ಯತೆಯನ್ನು ಬಿಂಬಿಸುತ್ತವೆ. ಪ್ರಾದೇಶಿಕವಾಗಿ ಇವುಗಳನ್ನು ಬೇರೆ ಬೇರೆ ಹೆಸರುಗಳಿಂದ ಹೆಸರಿಸುವ ವಾಡಿಕೆಯಿದೆ.

ಕೊಳಗ

ದವಸ ಧಾನ್ಯಗಳಿಂದ ರಾಗಿ, ಭತ್ತ, ಎಳ್ಳು, ಕಾಳು ಮುಂತಾದ ಪದಾರ್ಥಗಳನ್ನು ಅಳೆಯಲು ಬಳಸುವ ಸಾಧವಾಗಿದೆ. ವೃತ್ತಾಕಾರದಲ್ಲಿ ಇದ್ದು ಒಂದೂವರೆ ಅಡಿ ಎತ್ತರ ಮತ್ತು ಮುಕ್ಕಾಲು ಅಡಿ ವ್ಯಾಸವುಳ್ಳ ತಳಕಟ್ಟಿದ್ದು ಸಿಲಿಂಡರಿನಾಕಾರದಲ್ಲಿರುತ್ತದೆ. ಇದನ್ನು ಕಬ್ಬಿಣದ ತಗಡಿನಿಂದ ಮಾಡಿರುತ್ತಾರೆ. ಒಂದು ಕೊಳಗಕ್ಕೆ ಎರಡು ಇಬ್ಬಳಿಗೆ ಎಂಬ ಲೆಕ್ಕಾಚಾರವಾಗಿ ಮಾಡಿರುತ್ತಾರೆ. ಹೆಚ್ಚು ದವಸ ಧಾನ್ಯ ಅಳೆಯುವಾಗ ಕೊಳಗದಿಂದ ಅಳೆಯುತ್ತಾರೆ.

ಇಬ್ಬಳಿಗೆ

ಇಬ್ಬಳಿಗೆ ಕೊಳಗಕ್ಕಿಂತ ಚಿಕ್ಕದಾಗಿದ್ದು ಐದು ಸೇರು ಪ್ರಾಮಾಣದ ಸಾಧನ. ಇದನ್ನು ಕಬ್ಬಿಣದ ತಗಡಿನಿಂದ ಮಾಡಿರುತ್ತಾರೆ. ಒಂದು ಅಡಿ ಎತ್ತರ ಒಂದು ಅಡಿ ಅಗಲವಾಗಿ ಇರುತ್ತದೆ. ಬಾಯಿ ಸ್ವಲ್ಪ ಅಗಲವಾಗಿದ್ದು ಮಧ್ಯದ ನಡು ಚಿಕ್ಕದಾಗಿದ್ದು ಮತ್ತೆ ಕೆಳಬಾಯಿಯಷ್ಟೇ ಅಗಲವಾಗಿರುತ್ತದೆ. ಇದರಲ್ಲಿ ಅಳೆಯುವುದು ಕೊಳಗದಷ್ಟು ಪ್ರಯಾಸವಾಗಿರುವುದಿಲ್ಲ. ಕೊಳಗದ ಅರ್ಧ ಇಬ್ಬಳಿಗೆ.

ಸೇರು

ಕಡಿಮೆ ಪ್ರಮಾಣದ ದವಸ ಧಾನ್ಯ ಮತ್ತು ಕಾಳು, ಹಿಟ್ಟನ್ನು ಅಳೆಯುವುದಕ್ಕೆ ಹೆಚ್ಚಾಗಿ ಬಳಸುತ್ತಾರೆ.

ಪಡಿ

ಅರ್ಧಸೇರು ತುಂಬುವಸಾಧನ ಇದನ್ನು ಕಬ್ಬಾಳು ಮತ್ತು ಸುತ್ತಮುತ್ತಲ ಪರಿಸರದಲ್ಲಿ ಅಚ್ಚೇರು ಅರ್ಧಸೇರು ಎಂದೆಲ್ಲಾ ಕರೆಯುತ್ತಾರೆ.

ಪಾವು

ಪಡಿಯಲ್ಲಿ ಅರ್ಧ ಅಂದರೆ ಕಾಲು ಸೇರು ತುಂಬುವ ಸಾಧನ ಅತಿ ಕಡಿಮೆ ದವಸ ಧಾನ್ಯಗಳಾದ ಬೇಳೆಕಾಳು ಕಾರದಪುಡಿ ಉಪ್ಪು ಮುಂತಾದವುಗಳನ್ನು ಅಳೆಯಲು ಬಳಸುತ್ತಾರೆ.

ಚಟಾಕು

ಅತ್ಯಂತ ಚಿಕ್ಕದಾದ ಕನಿಷ್ಠ ಪ್ರಮಾಣದ ವಸ್ತುಗಳನ್ನು ಅಳೆಯಲು ಉಪಯೋಗಿಸುವ ಸಾಧನ. ಅಂಗಡಿಗಳಲ್ಲಿ ಚಿಲ್ಲರೆ ಮಾರಾಟಮಾಡುವ ಅಡಿಕೆ, ಸಾಸಿವೆ, ಕಡ್ಡಿಪುಡಿ ಮುಂತಾದವುಗಳನ್ನು ಅಳೆಯಲು ಬಳಸುತ್ತಾರೆ.

ಸೊಲಿಗೆ

ಇದನ್ನು ಹೆಚ್ಚಾಗಿ ದ್ರವರೂಪದ ವಸ್ತುಗಳನ್ನು ಅಳೆಯಲು ಉಪಯೋಗಿಸುತ್ತಾರೆ. ಆದರೆ ಇತರ ವಸ್ತುಗಳಾದ ಉಪ್ಪು, ಕಾರದಪುಡಿ, ಮುಂತಾದ ವಸ್ತುಗಳನ್ನು ಅಳೆಯಲು ಬಳಸುವುದು ಸಾಮಾನ್ಯವಾಗಿದೆ. ಇದಕ್ಕೆ ಹಿಡಿಕೆಯೂ ಇರುತ್ತದೆ. ಚಟಾಕು ಎಂಬುದಕ್ಕಿಂತಲೂ ಸ್ವಲ್ಪ ದೊಡ್ಡದಾಗಿದ್ದು ಪಾವು ಎಂಬ ಸಾಧನಕ್ಕಿಂತ ಚಿಕ್ಕದಾಗಿರುತ್ತದೆ. ಎಣ್ಣೆ, ತುಪ್ಪ ಮುಂತಾದವುಗಳನ್ನು ಅಳತೆಮಾಡಲು ಬಳಸುತ್ತಾರೆ. ಇದರಲ್ಲಿ ಅರ್ಧಭಾಗವನ್ನು ಅಳೆಯುವ ಸಾಧನವೂ ಇದ್ದು ಅದನ್ನು ಅರೆಸೊಲಿಗೆ ಎಂದು ಕರೆಯುತ್ತಾರೆ.

ಉದ್ದವನ್ನು ಅಳೆಯುವುದಕ್ಕೆ ಕೆಲವಾರು ಮಾನದಂಡಗಳಿದ್ದು ಕಬ್ಬಾಳು ಪರಿಸರದ ಜನಪದರ ಪರಿಭಾಷೆಯಲ್ಲಿ ವಿವಿಧ ಹೆಸರುಗಳಿಂದ ಕರೆಯುವ ವಾಡಿಕೆಯಿದೆ. ಮನುಷ್ಯ ದೇಹದ ವಿವಿಧ ಅವಯವಗಳನ್ನು ಹೆಸರಿಸಿಯೇ ಈ ಮಾನದಂಡಗಳ ಕಲ್ಪನೆ ಬೆಳೆದಿರುವುದನ್ನು ಕಾಣಬಹುದು.

ಇಂಚು

ಬೆರಳ ತುದಿಯಲ್ಲಿನ ಒಂದು ಗೆರೆಯವರೆಗಿನ ಉದ್ದಕ್ಕೆ ಇಂಚು ಎಂದು ಕರೆಯುತ್ತಾರೆ. ಅಂತ್ಯಂತ ಕಡಿಮೆ ಉದ್ದವನ್ನು ಅಳೆಯುವುದಕ್ಕೆ ಇದನ್ನು ಉಪಯೋಗಿಸುತ್ತಾರೆ. ಇದಕ್ಕೂ ಕಡಿಮೆಯಾದ ಉದ್ದವನ್ನು ಅಳೆಯಲು ಅರ್ಧ ಇಂಚು, ಕಾಲು ಇಂಚು ಎಂಬುದಾಗಿ ಲೆಕ್ಕಹಾಕುತ್ತಾರೆ. ಅತ್ಯಂತ ಕನಿಷ್ಟ ಪ್ರಮಾಣವನ್ನು ಅಳೆಯಲು ಒಂದು ನೂಲು, ಎರಡು ನೂಲು, ಎಂದು ಕರೆಯುತ್ತಾರೆ. ಇದಕ್ಕೂ ಕನಿಷ್ಟವಾದುದನ್ನು ಚೂರು ಸೂಜಿ ಮೊನೆಗಾತ್ರ, ಒನ್ನಿಂಕ್ರ, ರವಸ್ಟು ಎಂದೆಲ್ಲಾ ಬಳಸುತ್ತಾರೆ.

ಚೋಟುದ್ದ

ಕೈಯಲ್ಲಿನ ತೋರುಬೆರಳು ಮತ್ತು ಹೆಬ್ಬೆರಳನ್ನು ನೆಟ್ಟಗೆ ಚಾಚಿದರೆ ಆಗುವ ಉದಕ್ಕೆ ಚೋಟುದ್ದ ಎಂದು ಕೆರಯುತ್ತಾರೆ. ಇದು ಸುಮಾರು ಐದು ಇಂಚು ಉದ್ದದಷ್ಟು ಬರುತ್ತದೆ.

ಗೇಣುದ್ದ

ಕೈಯಲ್ಲಿನ ಹೆಬ್ಬೆರಳು ಮತ್ತು ಕಿರುಬೆರಳನ್ನು ನೆಟ್ಟಗೆ ಚಾಚಿದರೆ ಬರುವ ಉದ್ದವನ್ನು ಗೇಣುದ್ದ ಎನ್ನುತ್ತಾರೆ. ಇದು ಹತ್ತು ಇಂಚಿಗೂ ಹೆಚ್ಚು ಉದ್ದವಿರುತ್ತದೆ.

ಮೊಳ

ಮಧ್ಯದ ಬೆರಳ ತುದಿಯಿಂದ ಮೊಳಸಂದಿನವರೆಗಿನ ಅಂತರವನ್ನು ಮೊಳದುದ್ದ ಎನ್ನುತ್ತಾರೆ. ಕಬ್ಬಾಳಿನ ದೇವಸ್ಥಾನದ ಮುಂದೆ ಹೂಮಾರುವ ಅಂಗಡಿಗಳೆಲ್ಲೆಲ್ಲ ಹೂವನ್ನು ಮೊಳದ ಅಳತೆಯಲ್ಲೇ ಮಾರುತ್ತಾರೆ. ಭೂಮಿಯನ್ನು ಅಳೆಯುವಾಗಲು ಮೊಳವನ್ನು ಬಳಸುವುದು ಸರ್ವೇಸಾಮಾನ್ಯವಾಗಿದೆ.

ಅರ್ಧಮಾರು

ಒಂದು ಕೈಯನ್ನು ಪಾರ್ಶ್ವಕ್ಕೆ ಭುಜದ ನೇರವಾಗಿ ಪಕ್ಕಕ್ಕೆ ಚಾಚಿದಾಗ ಮಧ್ಯದ ಬೆರಳಿನ ತುದಿ ಮತ್ತು ಎದೆಯ ಮಧ್ಯಬಾಗ ಇವುಗಳ ನಡುವಿನ ಅಂತರವನ್ನು ಅರ್ಧಮಾರು ಎನ್ನುವರು. ಎರಡು ಮೊಳದ ಅಳತೆ ಅರ್ಧಮಾರು ಆಗುತ್ತದೆ.

ಮಾರುದ್ದ

ಎರಡೂ ಕೈಗಳನ್ನು ಅಡ್ಡವಾಗಿ ಎರಡೂ ಪಾರ್ಶ್ವಕ್ಕೆ ನೇರವಾಗಿ ಚಾಚಿದರೆ ಎಡಗೈ ಬೆರಳ ತುದಿಯಿಂದ ಬಲಗೈ ಬೆರಳ ತುದಿಯವರೆಗಿನ ಅಂತರಕ್ಕೆ ಒಂದು ಮಾರು ಎಂದು ಕರೆಯುತ್ತಾರೆ. ನಾಲ್ಕು ಮೊಳದ ಉದ್ದವನ್ನು ಒಂದು ಮಾರು ಎನ್ನುತ್ತಾರೆ. ಇದು ಮಾರುದ್ದ ಎಂದು ಸಾಮಾನ್ಯವಾಗಿ ಬಳಕೆಯಲ್ಲಿದೆ.

ಅಡಿ

ಎರಡೂ ಕೈಗಳ ಮುಷ್ಟಿಯನ್ನಿಡಿದು ಹೆಬ್ಬೆರಳುಗಳನ್ನು ಅಡ್ಡವಾಗಿ ಚಾಚಿ ಒಂದಕ್ಕೊಂದು ಜೋಡಿಸಿದರೆ ಉಂಟಾಗುವ ಅಂತರವನ್ನು ಒಂದು ಅಡಿ ಎನ್ನುತ್ತಾರೆ. ಜನಪದರು ಸಾಂಪ್ರದಾಯಿಕ ರೀತಿಯಲ್ಲಿಯು ಆಧುನಿಕವಾದ ಅಳತೆ ಮಾಪನವನ್ನು ತನ್ನಕಕ್ಷೆಗೆ ಒಳಪಡಿಸಿಕೊಂಡು ಅಳೆಯುವ ವಿಧಾನ ಇದಾಗಿದೆ.

ಆಳವನ್ನು ಲೆಕ್ಕ ಮಾಡುವಾಗಲು ಸಹ ತಮ್ಮ ಪದ್ಧತಿಗಳನ್ನು ಅನುಸರಿಸುವ ಇಲ್ಲಿನ ರೈತ ಮಾದರಿಗಳು ವಿಶಿಷ್ಟವೆನಿಸುತ್ತವೆ.

ಪಾದಮುಳುಗುವಷ್ಟು

ಬಾವಿ, ಕೆರೆಯಲ್ಲಿ ನೀರಿನ ಮಟ್ಟ ಎಷ್ಟಿದೆ ಎಂದು ತಿಳಿಯುವ ಅಳತೆಮಾಪನ ಇಲ್ಲಿನ ಜನಪದರಲ್ಲಿ ಕೆಲವು ಬಗೆಯಲ್ಲಿವೆ. ನೀರಿನಲ್ಲಿ ಇಳಿದಾಗ ಎಷ್ಟು ನೀರಿತ್ತು ಎಂಬುದನ್ನು ಸೂಚಿಸಲು ಕನಿಷ್ಠ ಪ್ರಮಾಣದ ನೀರನ್ನು ಪಾದಮುಳುಗುವಷ್ಟು, ಅದಕ್ಕೂ ಕಡಿಮೆ ಇದ್ದರೆ ಬಟ್ಟೆ ಒದ್ದೆಯಾಗುವಷ್ಟು ಎಂದೆಲ್ಲ ಹೇಳುತ್ತಾರೆ. ಹೆಚ್ಚಿನ ನೀರನ್ನು, ಅದರ ಆಳವನ್ನು ಸೂಚಿಸುವುದಕ್ಕೆ, ಮನುಷ್ಯನ ದೇಹದ ಅಳತೆ ಮಾನದಂಡ ವಾಗಿರುತ್ತದೆ. ಉದಾಹರಣೆಗೆ ಮೊಣಕಾಲುದ್ದ, ಮಂಡಿಗಂಟ, ತೊಡೆವರೆಗೆ, ನಡಿನುದ್ದ, ಎದೆಮಟ್ಟ, ಕುತ್ತಿಗೆಮಟ್ಟ, ಕೊನೆಯದಾಗಿ ಒಂದು ಮಟ್ಟ ಎಂದು ಹೇಳುತ್ತಾರೆ. ಮಟ್ಟ ಎಂದರೆ ಒಂದಾಳುದ್ದ ಅಂದರೆ ಒಬ್ಬ ಮನುಷ್ಯನ ಸಾಮಾನ್ಯ ಎತ್ತರದಷ್ಟು ಲೆಕ್ಕಾಚಾರದಲ್ಲಿ ಬಳಸುತ್ತಾರೆ. ಬಾವಿಯ ಆಳವನ್ನು ಅಳೆಯಲು ಎಷ್ಟು ಮಟ್ಟ ಎಂಬುದರ ಅಳತೆಯಲ್ಲಿ ಹೇಳುತ್ತಾರೆ. ಐದು ಮಟ್ಟು, ಹತ್ತು ಮಟ್ಟ ನೀರಿದೆ ಅಥವಾ ಎರಡಾಳುದ್ದ, ನಾಲ್ಕಾಳುದ್ದ ನೀರಿದೆ ಎಂದು ಸಹ ಹೇಳುತ್ತಾರೆ. ಹೀಗೆ ಮನುಷ್ಯನನ್ನು ತೀರ ಕೆಳಮಟ್ಟ ಅಥವಾ ಎತ್ತರಕ್ಕೇರಿಸದ ಸಾಧಾರಣ ಮಟ್ಟದಲ್ಲಿ ಮನುಷ್ಯನನ್ನು ಸ್ವೀಕರಿಸುವ ದೃಷ್ಟಿ ಜನಪದರಲ್ಲಿ ಆರೋಗ್ಯ ಪೂರ್ಣವಾಗಿದೆ. ಅಂಗೈ ಅಗಲ, ಒಂದಂಗ್ಲ, ಸೂಜಿಮೊನೆಗಾತ್ರ, ರವಸ್ಟು, ನಿಂಕ್ರ ಇತ್ಯಾದಿ.

ಅಂಕಣ

ಮನೆಯನ್ನು ಅಳತೆಮಾಡುವ ಪದ್ಧತಿ ಜನಪದರಲ್ಲಿ ವಿಶಿಷ್ಟ ಬಗೆಯಾಗಿದೆ. ಮನೆಯಲ್ಲಿ ಎರಡು ಗೋಡೆಗಳ ನಡುವಿನ ಅಂತರವನ್ನು ಇಷ್ಟೇ ಪ್ರಮಾಣದಲ್ಲಿದ್ದರೆ ಮನೆ ಭದ್ರವಾಗಿರುತ್ತೆಂದು ತಮ್ಮ ಅನುಭವದಿಂದಲೇ ತಿಳಿದುಕೊಂಡಿರುತ್ತಾರೆ. ಹತ್ತು ಹನ್ನೆರಡು ಅಡಿಗಳಷ್ಟು ಅಗಲವಿದ್ದರೆ ಮನೆಗೆ ಯಾವುದೇ ಅಪಾಯವಿಲ್ಲ ಎಂಬುದು ತಮ್ಮ ಸಾಮಾನ್ಯ ಜ್ಞಾನದಿಂದಲೇ ಹೇಳುತ್ತಾರೆ. ಗೋಡೆಗಳ ಅಂತರ ವಿಸ್ತಾರವಾದಂತೆಲ್ಲ ಅದರ ಉದ್ದವನ್ನು ಸೂಚಿಸಲು ಚಾವಣೆ ಹಾಕಲೂ ದೂಲಗಳನ್ನು ಬಳಸುತ್ತಾರೆ. ಈ ದೂಲಗಳು ಐದು ಅಡಿ ಅಂತರದಲ್ಲಿರುತ್ತವೆ ಆದುದರಿಂದ ಒಂದು ದೂಲಕ್ಕೂ ಮತ್ತೊಂದು ದೂಲಕ್ಕೂ ಇರುವ ನಡುವಿನ ಅಂತರವನ್ನು ಒಂದು ಅಂಕಣ ಎನ್ನುವರು. ಹೀಗೆ ಅಂಕರಣಗಳಲ್ಲಿ ಮನೆಯ ವಿಸ್ತಾರವನ್ನು ಅಳೆಯುತ್ತಾರೆ.

ಸಾಮಾನ್ಯವಾಗಿ ತೊಟ್ಟಿಹಟ್ಟಿ, ತೊಟ್ಟಿಮನೆ, ತಿಕಡಿಮನೆಗಳನ್ನು ಮಾತ್ರ ಹೀಗೆ ದೂಲಗಳನ್ನು ಹಾಕಿ ಅದನ್ನು ಅಂಕಣಗಳಲ್ಲಿ ಅಳೆಯುತ್ತಾರೆ. ಆದರೆ ಇತ್ತೀಚೆಗೆ ಹೆಚ್ಚಾಗಿ ಸಿಮೆಂಟಿನ ಸೀಟಿನ ಮನೆಗಳಿರುವುದರಿಂದ ಈ ರೀತಿ ಅಳತೆ ಮಾಪನಗಳು ಹೋಗಿ ಚದರಗಳಲ್ಲಿ ಅಳತೆ ಮಾಡುವುದು ಸಾಮಾನ್ಯವಾಗಿದೆ. ಐದು ಚದರ, ಹತ್ತುಚದರ ಎಂದು ಅಳೆಯುತ್ತಾರೆ.

ದೂರ ಮತ್ತು ವಿಸ್ತಾರಗಳನ್ನು ಸೂಚಿಸಲು ಸಹ ತಮ್ಮ ದೃಷ್ಟಿಗೆ ಹಿಡಿತಕ್ಕೆ ನಿಲುಕುವ ಪರಿಮಾಣದಲ್ಲಿಯೇ ಸೂಚಿಸುತ್ತಾರೆ. ಉದಾಹರಣೆಗೆ ಕೂಗಳತೆಯ ದೂರ, ಅಂದರೆ ಮನುಷ್ಯ ಜೋರಾಗಿ ಕೂಗಿದರೆ ಎಷ್ಟು ದೂರಕ್ಕೆ ಆ ಶಬ್ದ ಮುಟ್ಟಬಹುದು ಅಷ್ಟೂದೂರ. ಹಾಗೆ ಕಣ್ಣಳತೆಯ ದೂರ, ಮನುಷ್ಯನ ನೋಟಕ್ಕೆ ಯಾವುದೂ ತಡೆಯಿಲ್ಲದೆ ನೋಡಬಹುದಾದಷ್ಟು ದೂರವನ್ನು ಕಣ್ಣಳತೆಯ ದೂರ ಎನ್ನುವರು.

ಕಬ್ಬಾಳು ಪರಿಸರದ ಸಹಕಾರಿ ಜೀವನ ಪದ್ಧತಿ

ಪ್ರಸ್ತುತ ಕಬ್ಬಾಳು ಗ್ರಾಮೀಣ ಸಮುದಾಯಗಳನ್ನೂ ಉಳಿಸಿಕೊಂಡಿರುವ ಸಾಂಪ್ರದಾಯಿಕ ಗ್ರಾಮ ಜೀವನವನ್ನು ಅನುಸರಿಸುತ್ತಿದೆ. ಈ ರೀತಿಯ ಜೀವನವು ಹಲವು ಸಮುದಾಯಗಳ ನಡುವಿನ ಸಾಮರಸ್ಯ, ಸಹಕಾರ ಮತ್ತು ಈ ಸಾಂಘಿಕ ಮನೋಭಾವದಿಂದ ಕೂಡಿರುತ್ತದೆ. ಕಬ್ಬಾಳು ನಗರ ಪ್ರದೇಶಗಳಿಗೆ ಹತ್ತಿರವಾಗಿದ್ದು ಆಧುನಿಕತೆಯ ಗಾಳಿ ಬೀಸಿದರು ಕೆಲವು ನೀತಿ ನಿಯಮಗಳು ಸಂಪ್ರದಾಯಗಳು ಇಂದಿಗೂ ಉಳಿದು ಬಂದಿರುವುದನ್ನು ಕಾಣುತ್ತೇವೆ. "ಆಧುನಿಕತೆಯ ಗಾಳಿ ಬೀಸಿದ ಪರಿಣಾಮವಾಗಿ ಪರಿವರ್ತನೆಯ ಅಲೆಗಳು ರೂಪಿತವಾಗಿ ಸಾಮಾಜಿಕ ಜೀವನದ ಮೇಲೆ ಅಪ್ಪಳಿಸಿದೆ. ಇಂತಹ ಪರಿಸ್ಥಿತಿ ಕೇವಲ ಗ್ರಾಮಕಷ್ಟೇ ಮಾತ್ರವಲ್ಲದೆ ಇಡೀ ಗ್ರಾಮೀಣ ಸಂಸ್ಕೃತಿಗೆ ಬಂದೊದಗಿದ ಸ್ಥಿತಿ ಆದರೂ ತನ್ನ ಹಳೆಯಕಾಲದ ಪದ್ಧತಿಯನ್ನು ಸಂಪೂರ್ಣವಾಗಿ ಬಿಟ್ಟುಕೊಡಲಾಗದೆ. ಹೊಸಸನ್ನಿವೇಶಗಳಿಗೆ ಒಗ್ಗಿಕೊಳ್ಳುವುದಕ್ಕೂ ಕಷ್ಟವಾಗಿ ಒಂದು ರೀತಿಯ ಸಂದಿಗ್ಧತೆ ಸಂಕೀರ್ಣತೆಗಳು ಇಂದಿನ ಗ್ರಾಮೀಣ ಸಮಾಜದ ಜೀವನದಲ್ಲಿ ಎದ್ದುಕಾಣುತ್ತದೆ". (ಕೆ.ಕೃಷ್ಣಪ್ಪ, ಹೊಸಕೋಟೆ ತಾಲ್ಲೂಕಿನ ಒಂದು ಸಾಂಸ್ಕೃತಿಕಅಧ್ಯಯನ, ಅಪ್ರಕಟಿತ, ಪುಟ.೮೯) ಇದು ಕಬ್ಬಾಳಿನ ಗ್ರಾಮ ಪರಿಸರದ ಸಂದಿಗ್ಧತೆಯೂ ಕೂಡ ಆಗಿದೆ. ಗ್ರಾಮ ಸಮಾಜದಲ್ಲಿ ವೈಯಕ್ತಿಕತೆಗಿಂತ ಹೆಚ್ಚಾಗಿ ಸಾಮುದಾಯಕವಾದ ಪ್ರಕ್ರಿಯೆಗಳಿಗೆ ಹೆಚ್ಚಿನ ಮಾನ್ಯತೆಯಿತ್ತು. ಆದರೂ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕವಾದ

ಏರುಪೇರುಗಳನ್ನು ಕಾಣದಕೈಗಳು ಹೇಳುವ ಸತ್ಯವನ್ನು ತಿಳಿಯಲಾಗದೆ ಬದುಕಿನ ಬಂಡಿಯನ್ನು ಮುನ್ನಡೆಸಿಕೊಂಡು ಬಂದ ಜನಪದರು ಹೊಂದಿದ್ದ ವ್ಯವಸ್ಥೆ ಅಚ್ಚರಿ ಹುಟ್ಟಿಸುವಂತದ್ದು. ಅವರು ತೋರಿದ ಜೀವನ ಪ್ರೀತಿ ಅನನ್ಯವಾದುದು. ಸಮುದಾಯಗಳ ನಡುವೆ ಹಂಗುಗಳಿದ್ದರೂ ಆ ಹಂಗನ್ನು ಬಿಟ್ಟು ಬದುಕುವ ರೀತಿ ಕನಿಷ್ಠವಾದರೂ ಅದು ಶ್ರೇಷ್ಠವೇ ಆಗಿರುತ್ತದೆ.

ಸಾಟಿ ಪದ್ಧತಿ

ಕಬ್ಬಾಳು ಗ್ರಾಮದಲ್ಲಿ ಕೇವಲ ಕೃಷಿಕರಷ್ಟೇ ಅಲ್ಲದೆ ಅನೇಕ ಸಮುದಾಯಗಳು ತಮ್ಮ ಕಸುಬಿಗೆ ಬದ್ದವಾದ ಜೀವನ ನಡೆಸುತ್ತಿದ್ದಾರೆ. ಕೃಷಿಕ ತನ್ನ ಉತ್ಪಾದನೆಯನ್ನು ಉಳಿದ ಕಸುಬುದಾರರಿಗೆ ಕೊಟ್ಟು ತನ್ನ ಅಗತ್ಯತೆಗಳನ್ನು ಪೂರೈಸಿಕೊಳ್ಳುತ್ತಿದ್ದ ಪದ್ಧತಿಯನ್ನು ಸಾಟಿ ಪದ್ಧತಿ ಎಂದು ಕರೆಯುತ್ತಾರೆ. ಇದಕ್ಕೆ ವಿನಿಮಯ ಪದ್ದತಿ ಎನ್ನುವರು ವಸ್ತುಗಳನ್ನು ವಿನಿಮಯಮಾಡಿಕೊಳ್ಳುವುದು ತಾವು ಮಾಡಿದ ಕೆಲಸಕ್ಕೆ ಹಣ ಪಡೆಯದೆ ವಸ್ತುವಿನ ರೂಪದಲ್ಲಿ ಪ್ರತಿಫಲ ಪಡೆಯುವುದೂ ಇದೆ. ರೈತರಿಗೆ ಬೇಕಾದ ಮಡಿಕೆ, ಕುಡಿಕೆ, ವಾಡೆ, ಗುಡಾಣಗಳನ್ನು ಮಾಡಿಕೊಟ್ಟು ಕುಂಬಾರ ದವಸದ ರೂಪದಲ್ಲಿ ಅದಕ್ಕೆ ಕಾಣಿಕೆಯನ್ನು ಪಡೆಯುತ್ತಿದ್ದನು. ಮೊದಲೆಲ್ಲಾ ಕೃಷಿಕೆಲಸಕ್ಕೆ, ತಾವು ಮಾಡುತ್ತಿದ್ದ ಕೂಲಿ ಕೆಲಸಕ್ಕೆ ದವಸಧಾನ್ಯಗಳನ್ನೇ ಪಡೆಯುತ್ತಿದ್ದರು. ಅದು ಇತ್ತೀಚೆಗೆ ಬದಲಾಗಿದೆ.

ಅಡದೆ

ಗ್ರಾಮಸಮಾಜದ ಜೀವನದಲ್ಲಿ ಜನರು ತನ್ನೆಲ್ಲ ಕೆಲಸಗಳನ್ನು ತಮಗೆ ತಾವೇ ನಿರ್ವಹಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ನೇಗಿಲು ಕಟ್ಟುವ ಆಚಾರಿಯಾದಿಯಾಗಿ ಕಮ್ಮಾರ, ಅಗಸ, ಗಾಣಿಗ, ಕುಂಬಾರ,ಕ್ಷೌರಿಕ, ತೋಟಿ, ಕಮ್ಮಾರ ನೀರಗಂಟಿ ಮುಂತಾದ ವಿವಿಧ ಜನಸಮುದಾಯಗಳು ತಮ್ಮ ಕೆಲಸಗಳನ್ನು ನಿಷ್ಠೆಯಿಂದ ನಿರ್ವಹಿಸಿ ಗ್ರಾಮಜೀವನದ ಸ್ಥಿರತೆಯನ್ನು ಕಾಪಾಡಿದೆ. ಪ್ರತಿಯೊಬ್ಬರ ಕೆಲಸಕ್ಕೂ ಪ್ರತಿಯಾಗಿ ದವಸ ದಾನ್ಯಗಳನ್ನು ನಿಗದಿಪಡಿಸಿಕೊಂಡು ಹೊಂದಾಣಿಕೆಯಿಂದ ಯಾವುದಕ್ಕೂ ತೊಂದರೆಯಾಗದಂತೆ ನೋಡಿಕೊಳ್ಳಲಾಗುತ್ತಿತ್ತು. ಇದಕ್ಕೆ ಅಡದೆ ಅಥವಾ ಆಯದ ಪದ್ದತಿ ಎಂದು ಕೆಲವು ಕಡೆ ಕರೆಯುವರು. ಕೊಲಾರದ ಕಡೆ ದೊಡ್ಡಬಳ್ಳಾಪುರ ಕಡೆ ಮ್ಯಾರೆ ಪದ್ದತಿ ಎಂದು ಕರೆಯುತ್ತಾರೆ. ಪ್ರತಿವರ್ಷ ನಿಶ್ಚಿತವಾಗಿ ಸುಗ್ಗಿಯ ವೇಳೆ ನಿರ್ದಿಷ್ಟಪಡಿಸಿದಷ್ಟು ದವಸವನ್ನು ಬೇರೆ ಬೇರೆ ಕೆಲಸಗಾರರಿಗೆ ಕೊಟ್ಟು ಅವರಿಂದ ಕೆಲಸ ಮಾಡಿಸಿಕೊಳ್ಳುವುದನ್ನು ಅಡದೆ ಎನ್ನುತ್ತಾರೆ. ಈ ತರಹದ ಕೆಲಸಗಳನ್ನು ಮಾಡುವವರು ಸಹ ನಿಷ್ಠೆಯಿಂದ ನಿಯಮಾನುಸಾರ ಕೆಲಸಗಳನ್ನು ಮಾಡಿ ಅಗತ್ಯತೆಗಳನ್ನು ಪೂರೈಸುವ ಅಲಿಖಿತ ಒಪ್ಪಂದವೇ ಈ ಅಡದೆ ಪದ್ದತಿ.

ಮುಯ್ಯಾಳುಗಳು

ವ್ಯವಸಾಯ ಅಥವಾ ಕೃಷಿಕೆಲಸಗಳು ಒಂಟಿಯಾಗಿ ಮಾಡುವ ಕೆಲಸಗಳಲ್ಲ. ಸಾಮೂಹಿಕವಾಗಿ ನಿರ್ವಹಿಸುವಂತ ಶ್ರಮದಾಯಕವೃತ್ತಿ. ಆದ್ದರಿಂದ ಕೃಷಿಕರ ಮನೆಗಳಲ್ಲಿ ಮಕ್ಕಳಿದ್ದಾದರೆ ಕೃಷಿ ಕೆಲಸ ನಿರ್ವಹಿಸಲು ತುಂಬ ಸಹಕಾರಿಯಾಗುತ್ತದೆ ಎಂಬ ಭಾವನೆ ಕೃಷಿಕರದಾಗಿತ್ತು. ಹೊಲದ ಬಿತ್ತನೆ ಕೆಲಸಗಳಿಂದ ಪ್ರಾರಂಭವಾಗಿ ಕಳೆ ಕೀಳುವುದು, ಹೊಲಗದ್ದೆ ಕೊಯ್ಯುವುದು, ಸುಗ್ಗಿ ಕೆಲಸಗಳು ಮುಂತಾದ ವಿವಿಧ ಕೆಲಸಗಳಲ್ಲಿ ಒಬ್ಬರಿಗೊಬ್ಬರು

ಒತ್ತಾಸೆಯಾಗಿ ಒಬ್ಬರ ಕೆಲಸಕ್ಕೆ ಮತ್ತೊಬ್ಬರು ಸಹಭಾಗಿಯಾಗಿ ದುಡಿದರೆ ಅದಕ್ಕೆ ಪ್ರತಿಯಾಗಿ ಅವರ ಕೆಲಸಗಳಿಗೆ ಸಹಾಯಕವಾಗಿ ದುಡಿದು ಅವರ ಕೆಲಸಗಳನ್ನು ಪೂರೈಸಿಕೊಡುವುದಕ್ಕೆ ಮುಯ್ಯಾಳು ಪದ್ದತಿ ಎನ್ನುವರು. ಒಂದು ದಿನ ಒಬ್ಬರ ಹೊಲಕುಯ್ಯುವ ಕೆಲಸವನ್ನು ಎಲ್ಲರೂ ಸೇರಿ ಮಾಡಿದರೆ ಮತ್ತೆ ಬೇರೆ ದಿನ ಇನ್ನೊಬ್ಬರ ಹೊಲಕುಯ್ಯುವ ಕೆಲಸವನ್ನು ಎಲ್ಲರೂ ಸೇರಿ ಮಾಡುತ್ತಾರೆ. ಒಬ್ಬನ ಕೃಷಿ ಕೆಲಸಗಳಿಗೆ ಯಾರು ಯಾರು ಬಂದಿರುತ್ತಾರೊ ಅವರೆಲ್ಲರ ಕೆಲಸಗಳಿಗೆ ಈತನು ಹೋಗಿ ಮಾಡಿಕೊಡಬೇಕು. ಮುಯ್ಯಿಗೆ ಮುಯ್ಯಿ ತೀರಿಸಬೇಕು. ಇದನ್ನೆ ಮುಯ್ಯಾಳು ಎನ್ನುವರು. ಅನೇಕ ವೇಳೆ ನೇಗಿಲು, ಎತ್ತು, ಗಾಡಿ ಕೆಲಸ ಸಹ ಈ ಮುಯ್ಯಿ ಪದ್ಧತಿಯಲ್ಲಿ ಸಹಬಾಗಿಯಾಗಿರುತ್ತದೆ. “ಈಗೀಗ ಕೃಷಿ ಕೂಲಿ ಹೆಚ್ಚಾಗಿ ದುಬಾರಿ ಆಗ್ಬುಟು ಬಿತ್ತನೆ ಕೆಲ್ಸನೆ ಬ್ಯಾಡ ಅನಿಸ್ಬುಟದೆ. ಅದ್ಕೆ ನಾನು ಐದು ಸಾಲು ಮುಯ್ಯಾಳು ಮಾಡ್ಕಂದು ಹೊಲಕೂಯ್ತಿನಿ ಇಲ್ದಿದ್ರೆ ಒಬ್ಬುನ್ಗೆ ಯಕ್ಕಾಸ ಆಯ್ತದೆ. ಮುಯ್ಯಾಳು ಮಾಡ್ಕಂದ್ರೆ ನಮಗೆ ಬೇಕೆಂದಾಗ ಬತ್ತಾರೆ ನಾವು ಅವರ್ಗೆ ಬೇಕಂದಾಗ ಹೊಯ್ತಿವಿ ನಮ್ಮ ಕೆಲಸ ಸಲೀಸಾಯ್ತದೆ” ಅಂತಾರೆ (ದುರ್ಗೇಗೌಡ, ವಕ್ತೃ). ಇದು ಒಬ್ಬರಲ್ಲೊಬ್ಬರು ಬಾಂಧವ್ಯ ಬೆಳೆಯುವ ಹಾಗೆ ಬೆಸೆಯುತ್ತದೆ. ಇಡೀ ಗ್ರಾಮವೇ ಒಂದು ಕುಟುಂಬದ ಕಲ್ಪನೆಯನ್ನು ತಂದುಕೊಡುತ್ತದೆ.

ಗುತ್ತಿಗೆ

ಭೂ ಒಡೆಯನಿಗೆ ಸಾಗುವಳಿ ಮಾಡುವ ರೈತ ಮೊದಲೇ ನಿರ್ಧರಿಸಿದಂತೆ ಪ್ರತಿವರ್ಷ ದವಸ ಇಲ್ಲವೆ ಹಣದ ರೂಪದಲ್ಲಿ ಇಂತಿಷ್ಟು ಎಂದು ಕೊಟ್ಟು ತಾನು ಏನು ಬೇಕಾದರೂ ಎಷ್ಟು ಬೇಕಾದರೂ ಬೆಳೆ ಬೆಳೆದುಕೊಳ್ಳಬಹುದು. ಇಂತಹ ಒಪ್ಪಂದಕ್ಕೆ ಗುತ್ತಿಗೆ ಪದ್ದತಿ ಎನ್ನುತ್ತಾರೆ. ಗುತ್ತಿಗೆಯಯನ್ನು ಆ ಭೂಮಿಯ ಆಧಾರದ ಮೇಲೆ ನಿರ್ಧರಿಸುತ್ತಾರೆ. ಭೂಮಿಯ ಫಲವತ್ತತೆ, ಭೂಮಿಯ ನೀರಾವರಿಯೇ ಅಥವಾ ತರಿಭೂಮಿಯೇ ಅಥವಾ ಊರಿಗೆ ಹತ್ತಿರವಾಗಿದೆಯೇ ಅಥವಾ ದೂರದ ತರಿಗೆಜಮೀನೆ ಎಂಬೆಲ್ಲಾ ಆಧಾರದ ಮೇಲೆ ನಿರ್ಧರಿಸಿ ಒಂದುವೇಳೆ ನೀರಾವರಿ ಜಮೀನಾಗಿದ್ದರೆ ಹೆಚ್ಚು ಗುತ್ತಿಗೆ ಕೊಡುತ್ತಾರೆ. ತರಿಜಮೀನಾದರೆ ಕಡಿಮೆ ಗುತ್ತಿಗೆ ನೀಡುತ್ತಾರೆ.

ಪಾಲು

ಭೂಮಿ ಹೆಚ್ಚಾಗಿರುವ ರೈತರು ಅಥವಾ ವ್ಯವಸಾಯ ಮಾಡಲಾಗದ ರೈತರು ಸ್ವತಃ ತಾವೇ ವ್ಯವಸಾಯಮಾಡದೆ ಭೂರಹಿತ ಕೃಷಿಕರಿಗೆ ಪಾಲಿಗೆ ಭೂಮಿ ನೀಡುತ್ತಾರೆ. ಅಂದರೆ ಭೂಮಿಯ ಒಡೆಯನಾದವನಿಗೆ ಸಾಗುವಳಿ ಮಾಡಿ ಬೆಳೆ ತೆಗೆದ ರೈತ ತಾನು ಬೆಳೆದ ಫಸಲಿನ ಅರ್ಧಭಾಗವನ್ನು ಕೊಟ್ಟು ಉಳಿದ ಅರ್ಧಭಾಗವನ್ನು ತಾನು ಉಳಿಸಿಕೊಳ್ಳುತ್ತಾನೆ. ಇಂತಹ ಪದ್ದತಿಗೆ ಪಾಲು ಎಂದು ಕರೆಯುತ್ತಾರೆ. ಪಾಲುದಾರಿಕೆಯಲ್ಲಿ ಒಂದು ವರ್ಷದಲ್ಲಿ ಮಳೆ ಚೆನ್ನಾಗಿ ಬೆಳೆ ಚೆನ್ನಾಗಿ ಆಗಿದ್ದರೆ ಪಾಲು ಕೂಡ ಹೆಚ್ಚಾಗುತ್ತದೆ. ಒಂದು ವೇಳೆ ಮಳೆ ಬೀಳದೆ ಬೆಳೆಸರಿಯಾಗಿ ಆಗಿಲ್ಲ ಎಂದರೆ ಎಷ್ಟು ಬೆಳೆಯಾಗಿರುತ್ತದೋ ಅದರಲ್ಲೇ ಅರ್ಧನೀಡುತ್ತಾರೆ. ಬೆಳೆ ಚೆನ್ನಾಗಿ ಬರಲಿ ಅಥವಾ ಬರದಿರಲಿ ಲಾಭವಾಗಲಿ ಅಥವಾ ನಷ್ಟವಾಗಲಿ ಎರಡು ಸಮವಾಗಿ ಹಂಚಿಕೊಳ್ಳುವುದು ಈ ಪಾಲುದಾರಿಕೆಯಲ್ಲಿ ಇದೆ.

ಪ್ರಸ್ತುತ ಈ ಭಾಗದಲ್ಲಿ ವಾರ ಎಂದರೆ ಹೆಂಗಸರು ಕೋಳಿಗಳನ್ನು ವಾರಕ್ಕೆ ಸಾಕುವ ಪದ್ಧತಿಯಿದೆ. ವಾರಕ್ಕೆ ಅಂದರೆ ಕೋಳಿಗಳಿರುವವರ ಹತ್ತಿರ ಇಲ್ಲದವರು ಕೋಳಿಗಳನ್ನು ಪಡೆದು ಅವುಗಳನ್ನು ಸಾಕಿ ಮೊಟ್ಟೆ ಇಕ್ಕಿಸಿ ಮರಿಮಾಡಿ ಅವುಗಳನ್ನು ದೊಡ್ಡವು ಮಾಡಿ ನಂತರ ತಾಯಿಯನ್ನು ಬಿಟ್ಟು ಮರಿಗಳಲ್ಲಿ ಎಷ್ಟು ಇರುತ್ತವೇ ಅವುಗಳಲ್ಲಿ ಅರ್ಧ ಪಾಲು ಹಂಚಿಕೊಳ್ಳುವುದು. ಆರು ಕೋಳಿಮರಿಗಳಿದ್ದರೆ ಕೋಳಿಯ ಯಜಮಾನಿಗೆ ಮೂರು ಮತ್ತು ಸಾಕುವವರಿಗೆ ಮೂರು ಹೀಗೆ ಮರಿಗಳಲ್ಲಿ ಸಮಭಾಗ ಮಾಡಿಕೊಡುವುದು. ಮತ್ತೆ ದೊಡ್ಡದಾದ ತಾಯಿ ಕೋಳಿ ಪಾಲುದಾರರ ಹತ್ತಿರವೇ ಇರುತ್ತದೆ. ಹೀಗೆ ಪ್ರತಿ ಬೀಡಿಗು ಕೋಳಿಯನ್ನು ಸಾಕಿ ಮರಿಗಳನ್ನು ಮಾತ್ರ ಹಂಚಿಕೊಳ್ಳುವುದಕ್ಕೆ ವಾರಕ್ಕೆ ಎಂದು ಕರೆಯುತ್ತಾರೆ. "ಮನೇಲಿ ಕೋಳಿ ಕೊತ್ತಿ ಇರಬೇಕನಪ್ಪ ಬರೂರು ಹೋಗುರು ನಂಟ್ರು ಯತ್ರು ಬತ್ತಾ ಹೋಯ್ತಾ ಇರ್ತರೆ. ಸಮಯ ಸಂದರ್ಭಕ್ಕೆ ಕೋಳಿ ಗೀಳಿ ಇಲ್ದಿದ್ರೆ ಎಂಗೆ, ಮನೇಲಿ ಆರ್ಕಾಳು ಮೂರ್ಕಾಳು ಚೀಕು ಗೀಕು ರಾಗಿ ಇರ್ತವೆ ಅವು ಮೇಯ್ಕೊಂದು ಇರ್ತವೆ. ಅದ್ಕೆ ನಮ್ಮನೇಲಿದ್ದ ಕೋಳಿ ರೋಗಬಂದು ಸತ್ತೋದ ಮೇಲೆ ಕೊಳಿನೇ ಏಳ್ಗೆ ಆಗಿರ್ಲಿಲ್ಲ. ಇವಾಗ ಪಕ್ಕದ ಮನೆ ನಿಂಗಮ್ಮನ ಹತ್ರ ಒಂದುಕೋಳಿನ ವಾರಕ್ಕೆ ಸಾಕಿವ್ನಿ ಈಗ ಮರಿಆಕದೆ" ಅಂತಾರೆ (ಕುಳ್ಳಮ್ಮ, ವಕ್ಕ).

ಮಳೆ

ಜನಪದರ ಬದುಕಿಗೆ ಮಳೆಯ ಆಧಾರ. ಜೀವನ ಎನ್ನುವುದು ನೀರಿಗೆ ಇರುವ ಇನ್ನೊಂದು ಹೆಸರು. ಮಳೆಯನ್ನು ಕುರಿತಂತೆ ಮಾನವ ಬೆಳೆಸಿಕೊಂಡ ನಂಬಿಕೆ, ಆಚರಣೆಗಳಿಗೂ, ಕೃಷಿಗೂ ನೇರ ಸಂಬಂಧವಿದೆ. ಮಳೆ ನಮ್ಮ ಬೇಸಾಯದ ಹತ್ತಿರದ ನೆಂಟ, ಯಾವ ಮಳೆ ಬಂದಾಗ ಯಾವ ಕೃಷಿ ಚಟುವಟಿಕೆ ಆರಂಬಿಸಬೇಕು ಯಾವ ಬೀಜ ಬಿತ್ತಬೇಕು ಎಂಬ ಲೆಕ್ಕಾಚಾರದಲ್ಲಿ ರೈತ ಸಮುದಾಯ ತಪ್ಪುವುದಿಲ್ಲ. ಹಳ್ಳಿಗರಪಾಲಿಗೆ ಮಳೆ ಕೇವಲ ನೀರಲ್ಲ ಜನಪದರ, ರೈತರ ಬದುಕಿನ ಜೀವಧಾರೆ.

ಭಾರತದ ರಾಷ್ಟ್ರಪತಿ ಪ್ರಣಬ್‌ಮುಖರ್ಜಿಯವರು ತಾವು ಭಾರತದ ಹಣಕಾಸು ಮಂತ್ರಿಯಾಗಿದ್ದಾಗ (೨೬.೦೭.೨೦೧೨)ರಂದು ಈ ರೀತಿ ಮಳೆಯನ್ನು ಕುರಿತು ಹೇಳುತ್ತಾರೆ. "ಭಾರತದ ಮಟ್ಟಿಗೆ ಮಳೆರಾಯನೇ ಅಸಲೀ ಫೈನಾನ್ಸ್ ಮಿನಿಷ್ಟರು ನಾನಲ್ಲ" ಎಂದು ನಮ್ಮದೇಶದ ಮಳೆರಾಯ ಕೇವಲ ಹಣಕಾಸು ಸಚಿವರಲ್ಲ ಕೃಷಿ ಸಚಿವರೂ ಆಗಿರುತ್ತಾರೆ. ಆಹಾರ ಮತ್ತು ನಾಗರೀಕ ಸಚಿವರು, ನೀರಾವರಿ ಸಚಿವರೂ ಆಗಿರುತ್ತಾರೆ. ಅಷ್ಟೇಕೆ ಜಲವಿದ್ಯುತ್ ತತ್ವಾರ ಉಂಟುಮಾಡಿ ಹೆಚ್ಚುವರಿ ಕಲ್ಲಿದ್ದಲು ರೈಲನ್ನು ಹೊರಡಿಸಬಲ್ಲ ಇಂಧನ ಸಚಿವರೂ ಆಗುತ್ತಾರೆ. ಬರಗಾಲವನ್ನೋ ಮಹಾಪೂರವನ್ನೋ ಸೃಷ್ಟಿಸಿ ಆಮದು ರಫ್ತು ವಹಿವಾಟನ್ನು ನಿರ್ಧರಿಸಬಲ್ಲ ವಾಣಿಜ್ಯ ಸಚಿವರೂ ಆಗಿರುತ್ತಾರೆ. ಹಳ್ಳಿಗರನ್ನೆಲ್ಲ ಗುಳೇಹೊರಡಿಸಿ ನಗರದ ಕೊಳಗೇರಿಗಳಲ್ಲಿ ತುರುಕಬಲ್ಲ ಸಾರಿಗೆ ಸಚಿವರೂ ಆಗಿರುತ್ತಾರೆ. ಮನಸ್ಸು ಬಂದರೆ ಗ್ರಾಮೀಣಾಭಿವೃದ್ಧಿ, ಪ್ರವಾಸೋದ್ಯಮ ವಿಮಾನಯಾನ ಸಚಿವರು ಆಗಿ ನಾಳೇ ಆತನೇ ಅಸಲಿ ರಾಷ್ಟ್ರಪತಿ ಎಂದು ಹೇಳಬಹುದು". (ಪ್ರಜಾವಾಣಿ ದಿನಪತ್ರಿಕೆ, ೨೬.೦೭.೨೦೧೩ ಪು. ೧) ಇದು ಒಬ್ಬ ರೈತನ ಅಥವಾ ಒಂದು ವರ್ಗದ ಜನರ ಜೀವನ ಬದಲಿಸುವುದಷ್ಟೇ ಅಲ್ಲ ಒಂದು ರಾಷ್ಟ್ರದ ಆರ್ಥಿಕ ಸ್ಥಿತಿಗತಿಗಳನ್ನು ನಿರ್ಧರಿಸಬಲ್ಲ ಶಕ್ತಿ ಮಳೆಗಿದೆ. ಆದ್ದರಿಂದ ರಾಷ್ಟ್ರದ ರಾಷ್ಟ್ರಪತಿಗಿಂತಲೂ ಮಿಗಿಲಾದ ಸ್ಥಾನ ಮಳೆರಾಯನಿಗಿದೆ.

ಮಾನವ ಅಲೆಮಾರಿಯಾಗಿದ್ದಾಗ ಕೃಷಿಕನಲ್ಲದ್ದರಿಂದ ಅವನಿಗೆ ಇರುತ್ತಿದ್ದ ನೀರಿನ ಅಗತ್ಯ ಕಡಿಮೆ ಇತ್ತು. ಆದರೆ ಕೃಷಿಕನಾಗಿ ಸ್ಥಿರ ಜೀವನ ಆರಂಭಿಸಿದ ಮೇಲೆ ಕಾಲಕಾಲಕ್ಕೆ ಮಳೆಬರಬೇಕಾದುದರ ಅಗತ್ಯ ಮತ್ತು ಅದು ಹೆಚ್ಚಾದರೆ ಅಥವಾ ಕಡಿಮೆಯಾದರೆ ಆಗುವ ವಿಕೋಪ ಎಲ್ಲವು ಮನುಷ್ಯನಿಗೆ ಸಾವಿರಾರು ವರ್ಷಗಳಿಂದಲೂ ಅನುಭವ ವೇಧ್ಯವಾಗುತ್ತಾ ಬಂದಿದೆ.

೨೦೦೬ರಲ್ಲಿ ಉತ್ತರಕರ್ನಾಟಕ ಬಹುತೇಕ ದಕ್ಷಿಣ ಕರ್ನಾಟಕವೂ ಸೇರಿ ಮಳೆ ಇಲ್ಲದೆ ಬರಗಾಲ ಪೀಡಿತವಾಗಿತ್ತು. ೨೦೧೦ರಲ್ಲಿ ಇಡೀ ಉತ್ತರ ಕರ್ನಾಟಕ ಮಳೆಯ ಅತಿವೃಷ್ಟಿಯಾಗಿ ತಲ್ಲಣಗೊಂಡು ಅನೇಕ ಗ್ರಾಮಗಳು ಸ್ಮಶಾನವಾದವು. ೨೦೧೩ರಲ್ಲಿ ಉತ್ತರಖಂಡ ರಾಜ್ಯ ಅತಿವೃಷ್ಟಿಯಿಂದ ತತ್ತರಿಸಿ ಹೊಯಿತು. ಇದು ನಮ್ಮ ಕಣ್ಮುಂದೆಯೇ ಇರುವಾಗ ಇನ್ನು ನೂರಾರು ವರ್ಷಗಳ ಹಿಂದೆ ಇಂತ ಅವಘಡಗಳು ನಡೆದಿರಬಹುದು. ಇಂತಹವುಗಳಿಂದ ಬದುಕುಳಿಯಲು ಜನಪದರು ಮಳೆಯನ್ನು ಕುರಿತ ಪ್ರಾರ್ಥನೆ, ಲೆಕ್ಕಾಚಾರಗಳು 'ಶಕುನಗಳು' ನಂಬಿಕೆಗಳು ಇತ್ಯಾದಿಗಳೆಲ್ಲ ಅಂದಿನಿಂದಲೇ ಬಂದಿರುವ ಹಾಗೆ ಕಾಣುತ್ತದೆ. ಕೃಷಿ ಎನ್ನುವುದು ಜಗತ್ತಿನಲ್ಲಿ ಆರಂಭವಾಗಿ ಸುಮಾರು ಹತ್ತುಸಾವಿರ ವರ್ಷಗಳಾದವೆಂಬುದು ಒಂದು ಲೆಕ್ಕಾಚಾರ. ಮಳೆಯನ್ನು ಕುರಿತು ನಂಬಿಕೆ ಆಚರಣೆಗಳೂ ಇಷ್ಟೇ ಹಳೆಯವಾಗಿರಬೇಕು. ಈ ಆಚರಣೆಗಳು ಜಗದ ಎಲ್ಲ ಕಡೆ ಕಂಡುಬರುತ್ತವೆ. ಆದರೆ ಮಳೆಯನ್ನು ಕುರಿತ ತೀವ್ರ ಲೆಕ್ಕಾಚಾರ ಶಾಸ್ತ್ರಗಳು ಭಾರತ, ಈಜಿಪ್ಟ್, ಚೀನದಂತಹ ಕೆಲವೇ ದೇಶಗಳಲ್ಲಿ ಚೆನ್ನಾಗಿ ಬೆಳವಣಿಗೆ ಹೊಂದಿರುವಂತೆ ಕಾಣುತ್ತದೆ. ಎನ್ನುತ್ತಾರೆ. ಡಾ.ಎಸ್.ಪಿ.ಪದ್ಮಪ್ರಸಾದ್.

ಮಳೆ ನಕ್ಷತ್ರಗಳು

ಕ್ರ.ಸಂ.	ಮಳೆಯ ಹೆಸರು	ಅವಧಿ
೧.	ಉತ್ತರಾಷಾಢ	ಜನವರಿ ೧೧ ರಿಂದ ೨೩
೨.	ಶ್ರಾವಣ	ಜನವರಿ ೨೪ ರಿಂದ ಫೆಬ್ರವರಿ ೫
೩.	ಧನಿಷ್ಠ	ಫೆಬ್ರವರಿ ೬ ರಿಂದ ಫೆಬ್ರವರಿ ೧೮
೪.	ಶತಬಿಷ್ಠ	ಫೆಬ್ರವರಿ ೧೫ ರಿಂದ ಮಾರ್ಚ್ ೩
೫.	ಪೂರ್ವಾಭಾದ್ರ	ಮಾರ್ಚ್ ೪ ರಿಂದ ಮಾಚ್ ೧೬
೬.	ಉತ್ತರಭಾದ್ರ	ಮಾರ್ಚ್ ೧೭ ರಿಂದ ಮಾರ್ಚ್ ೨೯
೭.	ರೇವತಿ	ಮಾರ್ಚ್ ೩೦ ರಿಂದ ಏಪ್ರಿಲ್ ೧೨
೮.	ಅಶ್ವಿನಿ	ಏಪ್ರಿಲ್ ೧೩ ರಿಂದ ಏಪ್ರಿಲ್ ೨೬
೯.	ಭರಣಿ	ಏಪ್ರಿಲ್ ೨೭ ರಿಂದ ಮೇ ೧೦
೧೦.	ಕೃತ್ತಿಕಾ	ಮೇ ೧೧ ರಿಂದ ಮೇ ೨೩
೧೧.	ರೋಹಿಣಿ	ಮೇ ೨೪ ರಿಂದ ಜೂನ್ ೬
೧೨.	ಮೃಗಶಿರ	ಜೂನ್ ೭ ರಿಂದ ಜೂನ್ ೨೦

೧೩.	ಆರಿದ್ರಾ	ಜೂನ್ ೨೧ ರಿಂದ ಜುಲೈ ೪
೧೪.	ಪುನರ್ವಸು	ಜುಲೈ ೫ ರಿಂದ ಜುಲೈ ೧೯
೧೫.	ಪುಷ್ಯ	ಜುಲೈ ೨೦ ರಿಂದ ಆಗಸ್ಟ್ ೨
೧೬.	ಆಶ್ಲೇಷ	ಆಗಸ್ಟ್ ೩ ರಿಂದ ಆಗಸ್ಟ್ ೧೬
೧೭.	ಮಗೆ	ಆಗಸ್ಟ್ ೧೭ ರಿಂದ ಆಗಸ್ಟ್ ೨೯
೧೮.	ಹುಬ್ಬೆ	ಆಗಸ್ಟ್ ೩೦ ರಿಂದ ಸೆಪ್ಟೆಂಬರ್ ೧೨
೧೯.	ಉತ್ತರೆ	ಸೆಪ್ಟೆಂಬರ್ ೧೩ ರಿಂದ ಸೆಪ್ಟೆಂಬರ್ ೨೬
೨೦.	ಹಸ್ತ	ಸೆಪ್ಟೆಂಬರ್ ೨೭ ರಿಂದ ಅಕ್ಟೋಬರ್ ೯
೨೧.	ಚಿತ್ತೆ	ಅಕ್ಟೋಬರ್ ೧೦ ರಿಂದ ಅಕ್ಟೋಬರ್ ೨೪
೨೨.	ಸ್ವಾತಿ	ಅಕ್ಟೋಬರ್ ೨೫ ರಿಂದ ನವೆಂಬರ್ ೬
೨೩.	ವಿಶಾಖ	ನವೆಂಬರ್ ೭ ರಿಂದ ನವೆಂಬರ್ ೧೮
೨೪.	ಅನುರಾಧ	ನವೆಂಬರ್ ೧೯ ರಿಂದ ಡಿಸೆಂಬರ್ ೧
೨೫.	ಜೇಷ್ಠ	ಡಿಸೆಂಬರ್ ೨ ರಿಂದ ಡಿಸೆಂಬರ್ ೧೪
೨೬.	ಮೂಲ	ಡಿಸೆಂಬರ್ ೧೫ ರಿಂದ ಡಿಸೆಂಬರ್ ೨೭
೨೭.	ಪೂರ್ವಾಷಾಢ	ಡಿಸೆಂಬರ್ ೨೮ ರಿಂದ ಜನವರಿ ೧೦

ನಮ್ಮ ರಾಶಿ ಚಕ್ರದಲ್ಲಿ ಅಶ್ವಿನಿಯಿಂದ ರೇವತಿವರೆಗೆ ೨೭ ನಕ್ಷತ್ರಗಳಿವೆ. ಈ ಎಲ್ಲಾ ನಕ್ಷತ್ರಗಳ ಹೆಸರಲ್ಲಿ ಮಳೆಯನ್ನು ಹೇಳಲಾಗುತ್ತಾದರೂ ನಿಜವಾಗಿ ಮಳೆಯಾಗುವುದು ೧೫ ನಕ್ಷತ್ರಗಳ ಅವಧಿಯಲ್ಲಿ ಮಾತ್ರ. ಸೂರ್ಯ ಒಂದು ನಕ್ಷತ್ರರಾಶಿಯನ್ನು ಪ್ರವೇಶಿಸಿ ಅಲ್ಲಿರುವ ಕಾಲದಲ್ಲಿ ಆಗುವ ಮಳೆಯನ್ನು ಆ ನಕ್ಷತ್ರದ ಮಳೆ ಎನ್ನಲಾಗುತ್ತದೆ. ಆದರೆ ಜನಪದರಿಗೆ ೨೭ ಮಳೆ ನಕ್ಷತ್ರಗಳ ಕರಾರುವಕ್ಕಾದ ಜ್ಞಾನವಿಲ್ಲ. ತಾನು ಬೆಳೆಯುವ ಬೆಳೆಯ ಅವಧಿಯಲ್ಲಿ ಮಳೆನಕ್ಷತ್ರಗಳು ಮತ್ತು ಬೆಳೆಗಳು ಕೊನೆಗೊಳ್ಳುವ ದಿನದವರೆಗಿನ ವರ್ತನೆಗಳನ್ನಷ್ಟೆ ಗಮನಿಸಿ ಜನಪದ ಪಂಚಾಂಗವನ್ನು ರಚಿಸಿಕೊಂಡು ತನ್ನ ಅನುಭವ ಕೋಶದಲ್ಲಿ ಅಡಗಿಸಿಟ್ಟುಕೊಂಡಿದ್ದಾರೆ. ಉತ್ತರಾಷಾಢದಿಂದ ಪೂರ್ವಾಷಾಡದವರೆಗಿನ ೨೭ ಮಳೆ ನಕ್ಷತ್ರಗಳಲ್ಲಿ ಹೆಚ್ಚು ಮಳೆಬಾರದ ಬೆಳೆ ತೆಗೆಯಲಾಗದ ಆರಂಭದ ಆರು ನಕ್ಷತ್ರಗಳು ಮತ್ತು ಕೊನೆಯ ಪೂರ್ವಾಷಾಡ ಜನಪದರಿಗೆ ಅಗತ್ಯವೆನಿಸಲಿಲ್ಲ. ಇಲ್ಲಿ ಮಳೆಗಾಲದ ಪ್ರಾರಂಭದಿಂದ ಅಂತ್ಯದವರೆಗೆ ಮಳೆಗಳು ನೆನಪಿನಲ್ಲಿ ಉಳಿದಿದ್ದು ಅವುಗಳ ವರ್ತನೆಗಳ ಬಗ್ಗೆ ಖಂಡಿತವಾಗಿ ಮಾತನಾಡುವ ರೀತಿ ವೈಶಿಷ್ಟ್ಯಪೂರ್ಣವಾಗಿದೆ.

ನಿಸರ್ಗ ಮಳೆಗಾಲ, ಗಾಳಿ, ಬಿರುಗಾಳಿ ಯಾರ ಕೈಯಲ್ಲೂ ಸಿಕ್ಕಿಲ್ಲ. ಪ್ರವಾಹ, ಭೂಕಂಪ,ಬರಗಾಲ ಯಾರಿಗೂ ಹೇಳಿ ಕೇಳಿ ಬರುವುದಿಲ್ಲ. ಇಂದಿನ ಕಂಪ್ಯೂಟರ್ ವಿಜ್ಞಾನಿಗಳೆಲ್ಲರಿಗೂ ಇದು ದೊಡ್ಡ ಸವಾಲಾಗಿದೆ. ಅದೇನೇ ಇರಲಿ ರೈತರ ಅನುಭವ ಮಾತ್ರ ರೈತರಿಗೆ ದಾರಿ ತೋರಿಸಬಲ್ಲದು. ಯಾವ ಹಂಗಾಮಿನಲ್ಲಿ ಯಾವ ಮಳೆ ಆಗುವುದು, ಅಥವಾ ಇಲ್ಲ ಎಂದು ಅಂದಾಜಿನ ಮೇಲೆರೈತರು ಆಯಾ ಬೆಳೆಗಳನ್ನು ಮಾಡುತ್ತ

ಬಂದಿದ್ದಾರೆ. ಯಾವ ಬೆಳೆ ಯಾವ ಮಳೆಗೆ ಚೆನ್ನಾಗಿ ಬರುವುದು. ಯಾವ ಮಳೆ ಬೆಳೆಗೆ ಹಾನಿಕರ ಎಂಬ ಬಗ್ಗೆ ರೈತರಲ್ಲಿ ತಮ್ಮದೇ ಆದ ನಂಬಿಕೆಗಳಿವೆ.

ಇಲ್ಲಿನ ರೈತರು ಎಲ್ಲ ಮಳೆಗಳ ಬಗ್ಗೆ ತಿಳಿದುಕೊಳ್ಳುವಗೋಜಿಗೆ ಹೋಗುವುದಿಲ್ಲ. ಮಳೆಗಾಲ, ಚಳಿಗಾಲ, ಬೇಸಿಗೆಕಾಲ ಈ ಮೂರು ಕಾಲಮಾನಗಳ ಪರಿಚಿತ ಅನುಭವ ಹೊಂದಿರುವ ರೈತ ತನ್ನ ಬೆಳೆಯ ಚಟುವಟಿಕೆಗಳು ಮತ್ತು ಅದರ ಅವಶ್ಯಕತೆಗಳನ್ನು ಕುರಿತಷ್ಟೇ ಯೋಚಿಸುವ ಪ್ರಾಯೋಗಿಕ ಕರ್ಮಿ. ಬೇಸಿಗೆಯ ಬಿಡುವನ್ನು ತನ್ನ ಕೃಷಿ ಸಿದ್ಧತೆಗಳಿಗೆ, ಪದಾರ್ಥಗಳ ಶೇಖರಣೆಗೆ, ಹಬ್ಬ, ಜಾತ್ರೆ, ಮದುವೆ ಚಟುವಟಿಕೆಗಳಲ್ಲಿ ಕಳೆದರೆ ಮಳೆಗಾಲ ಮತ್ತು ಚಳಿಗಾಲಗಳಲ್ಲಿ ತನ್ನ ಕೃಷಿ ಕೆಲಸಗಳಲ್ಲಿ ತೊಡಗಿಸಿಕೊಂಡಿರುತ್ತಾನೆ. ಹೀಗಾಗಿ ಪ್ರಸ್ತುತ ಪ್ರದೇಶದ ರೈತನಿಗೆ ಮಳೆ ನಕ್ಷತ್ರದ ಆರಂಭ ರೇವತಿ ಮಳೆಯಿಂದ.

ರೇವ್ತಿ ಎಂಬುದಾಗಿ ಗ್ರಾಮ್ಯ ಭಾಷೆಯಲ್ಲಿ ಕರೆಯುವ ರೇವತಿ ಮಳೆ ಹುಯ್ದರೆ ಇಡೀ ವರ್ಷ ಸುಭಿಕ್ಷವಾಗಿರುತ್ತದೆ. ಪ್ರಾರಂಭದಲ್ಲಿ ಬೀಳುವ ಮಳೆ ಆ ವರ್ಷದ ಭವಿಷ್ಯದ ಬೆಳೆಯ ಭರವಸೆಯನ್ನು ನೀಡುತ್ತದೆ. ಒಂದು ಮಳೆಯ ನಕ್ಷತ್ರ ಮುಕ್ತಾಯವಾಗಿ ಮತ್ತೊಂದರ ಆರಂಭದಲ್ಲಿ ಮಳೆ ಬಂದರೆ ಒಳ್ಳೆಯ ಶಕುನವೆಂದು, ಕೆಲವು ಮಳೆಗಳು ಅಂತ್ಯವಾದದಲ್ಲಿ ಬಂದರೆ ಒಳ್ಳೆಯದೆಂದು ನಂಬುತ್ತಾರೆ.

ಅಶ್ವಿನಿ ಮಳೆ ಅಡಿಕೆ ತೆಂಗಿಗೆ ಕೇಡು ಎಂಬ ನಂಬಿಕೆಯಿದೆ. ಈ ಮಳೆ ಬಂದರೆ ಹಣ್ಣು ಹಂಪಲು, ತೆಂಗು, ಅಡಿಕೆ ಮುಂತಾದ ಬೆಳೆಗಳಿಗೆ ಕೆಟ್ಟದ್ದು, ರೋಗರುಜಿನಗಳು ಹೆಚ್ಚಾಗಿ ಫಸಲು ಕಡಿಮೆಯಾಗುತ್ತದೆ. ಅಶ್ವಿನಿ ಮಳೆ ಬಂದು ಎಲ್ಲವೂ ನಾಶಮಾಡುತ್ತದೆ ಎಂಬ ನಂಬಿಕೆ ಇದೆ. 'ಭರಣಿಮಳೆ ಬಂದರೆ ಧರಣಿ ತುಂಬ ಬೆಳೆ' ಎಂಬ ಗಾದೆ ಆ ಮಳೆಯ ಹಿನ್ನೆಲೆಯನ್ನು ತಿಳಿಸುತ್ತದೆ. ಭರಣಿ ಮಳೆಗೆ ಎಳ್ಳು ಬಿತ್ತನೆ ಮಾಡುತ್ತಾರೆ. ಈ ಮಳೆಗೆ ಬಿತ್ತನೆ ಮಾಡಿದರೆ ಎರಡು ಬೆಳೆಯನ್ನು ತೆಗೆಯಬಹುದು ಎಂಬುದು ರೈತರ ಆಶಯ. ಮೊದಲು ಎಳ್ಳು ಬಿತ್ತನೆ ಮಾಡಿ ಅದು ಕಟಾವು ಮಾಡಿದ ಮೇಲೆ ಹಿಂದೆಯೆ ಹೊಲಗದ್ದೆಗಳನ್ನು ಹಸನು ಮಾಡಿ ರಾಗಿಯನ್ನು ಬಿತ್ತನೆ ಮಾಡುತ್ತಾರೆ. ರಾಗಿಗೆ ಸ್ವಲ್ಪ ಇಂಗಾಲ ಆದರೆ ಹುರುಳಿಯನ್ನಾದರೂ ಬಿತ್ತನೆ ಮಾಡುತ್ತಾರೆ. "ಎಳ್ಳು ಬೆಳೆ ಚೆನ್ನಾಗಾದ್ರೆ ನಮ್ಮ ಕಷ್ಟುಕಾಯ್ತದೆ. ಭರಣಿಮಳೆ ಚೆನ್ನಾಗಿ ಬಿದ್ರೆ ಎಳ್ಳು ಚೆನ್ನಾಗಾಯ್ತದೆ. ನಾವು ಇದ್ಕೆ ಹಾಕುವ ಬಂಡವಾಳ ಕಡಿಮೆ ಆದಾಯ ಜಾಸ್ತಿ ಬತ್ತದೆ, ಆದ್ರೆ ರಾಗಿ ಬಿತ್ನೆಗೆ ಬಂಡವಾಳ ಜಾಸ್ತಿ ಹಾಕಬೇಕು ಆದ್ರೆ ಆದಾಯ ಕಡಿಮೆ, ಕೆಲ್ಸನು ಜಾಸ್ತಿ ತಗಾ ಆಯ್ತದೆ ಕನಪ್ಪ ಅದ್ಕೆ ಎಳ್ಳು ಬೆಳೆ ರೈತನ ಕಷ್ಟ ನೀಸ್ತದೆ- ಎನ್ನುತ್ತಾರೆ. (ವೆಂಕಟಗಿರಿಯಣ್ಣ, ವಕ್ತೃ) ಈ ಮಳೆಯಲ್ಲಿ ಬಿತ್ತನೆ ಮಾಡಿದರೆ ಬೀಜಗಳು ರೋಗ ತಡೆಯುವ ಶಕ್ತಿಯನ್ನು ಪಡೆಯುತ್ತವೆ. ಇಳುವರಿಯೂ ಹೆಚ್ಚಾಗುತ್ತದೆ ಎನ್ನುತ್ತಾರೆ.

ರೋಹಿಣಿ ಮಳೆಯನ್ನು 'ರೋಣಿ' ಎನ್ನುವರು. 'ರೋಣಿ ಮಳೆಗೆ ಓಣೆಯಲ್ಲಾ ಕಾಳು' ಎಂಬಂತೆ ರೋಹಿಣಿ ಮಳೆಗೆ ಬಿತ್ತನೆ ಮಾಡಲು ಪ್ರಶಸ್ತವಾದ ಕಾಲ ಎಂದು ಹೇಳುತ್ತಾರೆ. ಮುಂದೆಬರುವ ಮೃಗಶಿರ ಜಿಟಿ ಜಿಟಿ ಜಿಡಿಮಳೆ ಹಿಡಿಯುತ್ತದೆ. ಆಗ ಬಿತ್ತನೆ ಮಾಡಲು ಸಾಧ್ಯವಿಲ್ಲ ಹದ ಸರಿಯಾಗುವುದಿಲ್ಲ ಎನ್ನುತ್ತಾರೆ.

ಮೃಗಶಿರ ಮಳೆ ಧಾರಾಕಾರವಾಗಿ ಬೀಳುತ್ತದೆ. ಇದನ್ನು 'ಆದ್ರಿ- ಮಳೆ ಎಂದು ಕರೆಯುತ್ತಾರೆ. ಇದು ಎಲ್ಲಾ ರೀತಿಯ ಬಿತ್ತನೆಗೂ ಒಳ್ಳೆಯದು ಎಂಬ ನಂಬಿಕೆಯಿದೆ. ವಿವಿಧ ಕಾಯಿ ಪಲ್ಲೆಗಳ ಬೀಜಗಳನ್ನು ಈ

ಮಳೆಯಲ್ಲಿ ಬಿತ್ತುತ್ತಾರೆ. ಹೀಗಾಗಿ 'ಆದ್ರಿ ಮಳೆಯಲ್ಲಿ ಬಿತ್ತಿದರೆ ಆರುಕಾಯಿ ಹೆಚ್ಚು' ಎಂಬ ಗಾದೆಯೇ ಇದೆ. ಆದ್ರಿಮಳೆ ಗುಡುಗಬಾರದು ಒಂದುವೇಳೆ ಗುಡುಗಿದರೆ ಆದ್ರಿಮಳೆ ಮುಗಿಯುವತನಕ ಬರುವುದಿಲ್ಲ ಎನ್ನುತ್ತಾರೆ. ಆದ್ದರಿಂದ ಆದ್ರಿಮಳೆ ಆರಂಭದ ೯-೧೦ ದಿನಗಳು ಇಡೀ ವರ್ಷದ ಬದುಕನ್ನು ನಿರ್ಧರಿಸುತ್ತದೆ. ಆದ್ರಿಮಳೆ ಬರದಿದ್ರೆ ದರಿದ್ರ ಎಂಬ ಗಾದೆಯೂ ಇದೆ.

ಪುನರ್ವಸು ಮಳೆಯನ್ನು ಚಿಕ್ಕಅಸಲೆ ಅಥವಾ 'ಚಿಕ್ಕುಸ್ಲು' ಮಳೆ ಎಂದೂ, ಪುಷ್ಯ ಮಳೆಯನ್ನು ದೊಡ್ಡ ಅಸಲೆ ಅಥವಾ 'ದೊಡ್ನುಸ್ಲು' ಮಳೆ ಎಂದೇ ಕರೆಯುತ್ತಾರೆ. ಈ ಎರಡೂ ಮಳೆಗಳು ರಾಗಿ ಬಿತ್ತನೆಗೆ ಸೂಕ್ತ ಕಾಲ. ಆದ್ರಿ ಮಳೆಯಲ್ಲಿ ಬಿತ್ತನೆ ಕೆಲಸ ಮುಗಿಸದಿದ್ದರೆ ದೊಡ್ನುಸ್ಲು ಮಳೆಯೊಳಗೆ ಬಿತ್ತನೆ ಕೆಲಸ ಮುಗಿಸಬೇಕು ಇಲ್ಲವಾದರೆ ಬೆಳೆಗೆ ಹಿಂಗಾಲವಾಗಿ ಬೆಳೆ ಬರುವುದಿಲ್ಲ ಎನ್ನುತ್ತಾರೆ. ಆಶ್ಲೇಷಾ ಮಳೆಯನ್ನು ಅಸಲೆ ಮಳೆ ಎಂದು ಕರೆಯುತ್ತಾರೆ. ಈ ಅಸಲೆ ಮಳೆಗೆ ಬಿತ್ತನೆ ಮಾಡುವುದರಿಂದ ಬೆಳೆ ನಿಶ್ಚಿತವಾಗಿ ಬರುವುದಿಲ್ಲ ಎಂಬ ನಂಬಿಕೆ. ಹಾಗೆ ಬೆಳೆಗಳಿಗೆ ಹೆಚ್ಚು ರೋಗ ರುಜಿನಿಗಳು ಬರುತ್ತವೆ ಎಂಬ ನಂಬಿಕೆ ಇದೆ. ಗಾಳಿ ಹೆಚ್ಚಾಗಿ ಬೀಸಿ ಚಳಿಯಿಂದ ನಡುಗಿಸುತ್ತದೆ. ಹೀಗಾಗಿ ರೈತರು "ಆಸಿ ಬೀಸಿ ಅಸಲೆ ಮಳೆ ಬೀಸಿ ಬೀಸಿ ಬಡಿದಾಗ ಹೇಸಿ ನನ ಜನಮ ಹೆಣ್ಣಾಗಿ ಹುಟ್ಟಬಾರದೇ" ಎಂದು ಬಯಸಿದ್ದಾರೆ. ಹೆಂಗಸರಾದರೆ ಒಲೆಯ ಮುಂದೆ ಬೆಚ್ಚಗೆ ಕುಳಿತಿರಲು ಈ ರೀತಿ ಹೇಳಿರಬಹುದು.

ನಂತರ ಬರುವ ಮಳೆ ಮಘಾ ಮಳೆ ಅಂದರೆ ಇಲ್ಲಿ 'ಮಕ್ಕೆ' ಮಳೆ ಎಂದೇ ಕರೆಯುತ್ತಾರೆ. ಇದು ನಂಬಲರ್ಹ ಮಳೆ. ನಾಲ್ಕೂಪಾದಗಳಲ್ಲೂ ಒಳ್ಳೆಯ ಮಳೆಯಾಗುತ್ತದೆ ಎಂಬ ನಂಬಿಕೆ ಇದೆ. ನಂತರ ಬರುವ ಮಳೆ ಉಬ್ಬೆ ಮಳೆ 'ಉಬ್ಬೆ ಮಳೆ ಹೆಚ್ಚಾದರೆ ನೆಲ್ಲು ಬೆಳೆ ನೆಲಕ್ಕೆ ಬೀಳುತ್ತದೆ' ಎನ್ನುತ್ತಾರೆ (ಕರಿಯಣ್ಣ). ಗಾಳಿ ಹೆಚ್ಚು ಬೀಸಿ ರೋಗದ ಸಾಧ್ಯತೆಗಳು ಅಧಿಕವಾಗಿರುತ್ತವೆ. ಹೆಚ್ಚು ಮಳೆ ಸುರಿಸುವ ಲಕ್ಷಣವೇ ಈ ಮಳೆಗೆ ಇಲ್ಲ.

ನಂತರ ಬರುವ ಮಳೆ 'ಉತ್ತರೆ' ಇದನ್ನು 'ಉತ್ರೆ' ಮಳೆ ಎಂದು ಕರೆಯುತ್ತಾರೆ. ಈ ಮಳೆ ಹಿಂಗಾರಿನ ಬೆಳೆಗಳಿಗೆ ಅತಿ ಅವಶ್ಯ ಈ ಮಳೆ ಬಸವಣ್ಣನಿಗೆ ಭಾಷೆ ಕೊಟ್ಟಿದೆಯಂತೆ 'ಉತ್ತರೆ ಮಳೆ ಹುಸಿಯಾದರೆ ಸತ್ಯರು ಹುಸಿಯಾಡಿದರೆ ಜನವಿನ್ನೆತ್ತ ಬಾಳುವದು' ಎಂದು ಸರ್ವಜ್ಞ ಉತ್ತರಿ ಮಳೆಯ ಮಹತ್ವ ಕುರಿತು ಹೇಳಿದ್ದಾರೆ.

ನಂತರ ಹಸ್ತಾ ಮಳೆ ಆದರೆ 'ಹಸ್ತ ಆಗದಿದ್ರೆ ಹಲ್‌ಕಿಸ್ಟ'. ಉತ್ತರೆ ಮಳೆಯಂತೆ ಹಸ್ತ ಕೂಡ ಹಿಂಗಾರಿನ ಬೆಳೆಗಳಿಗೆ ಅತ್ಯವಶ್ಯಕ ಈ ಎರಡೂ ಮಳೆಗಳು ಆಗದಿದ್ದರೆ ಹಿಂಗಾರಿನಲ್ಲಿ ಬರಬೀಳುವುದು. ಉತ್ತರೆ ಕೈ ಕೊಟ್ಟರು ಅತ್ತೆ ಕಾಪಾಡುತ್ತಾಳೆ ಎಂಬ ಬರವಸೆ. ಜನಪದ ಕಥೆಗಳ ಪ್ರಕಾರ ಉತ್ತರೆ ಸೊಸೆಯಾಗಿಯು ಹಸ್ತ ಅತ್ತೆ ಮಳೆಯಾಗಿಯೂ ಬರುತ್ತಾರೆ. ಈ ಮಳೆಯಲ್ಲಿ ಗಾಳಿ ಬೀಸಿದರೆ ಮಳೆಬರುವುದಿಲ್ಲ. ಅತ್ತೆ ಮಳೆಯಲ್ಲಿ ಎಲೆ ಅಲುಗಾಡಿದರೂ ಚಿತ್ತೆ ಮಳೆಯಲ್ಲಿ ಒಂದು ಹನಿ ಮಳೆ ಬರುವುದಿಲ್ಲ. ಎಂಬ ಗಾದೆ ಮಾತು ಜನಪದರ ಮಳೆ ಮಾರುತಗಳ ಸೂಕ್ಷ್ಮಗಮನಿಸುವಿಕೆಯನ್ನು ತಿಳಿಸುತ್ತದೆ.

ಇನ್ನು ಚಿತ್ತೆ ಮನಸಿಚ್ಚೆಯ ಮಳೆ ಮನಸಿಗೆ ಬಂದರೆ ಆಗುವುದು ಇಲ್ಲದಿದ್ದರೆ ಹೋಗುವುದು. ಇದನ್ನು ಕುರುಡು ಮಳೆ ಎಂದೂ ಕರೆಯುತ್ತಾರೆ. ಕಣ್ಣಕಂಡಲ್ಲಿ ಆಗುವುದು ಇಲ್ಲದಿದ್ದರೆ ಇಲ್ಲ. ಒಂದು

ಹೊಲಕ್ಕೆ ಊದರೆ ಊಯಿತು ಪಕ್ಕದ ಹೊಲಕ್ಕೆ ಇಲ್ಲವೇ ಇಲ್ಲ. ಎತ್ತಿನ ಒಂದು ಕೊಂಬು ನೆನೆದರೆ ಮತ್ತೊಂದು ಕೊಂಬು ನೆನೆಯುವುದೇ ಇಲ್ಲ ಹಾಗೆ ಮಳೆ ಬೀಳುತ್ತದೆ. ನಂತರ ಬರುವುದು ಸ್ವಾತಿ ಮಳೆ ಇದು ಬಹುತೇಕ ಕೊನೆಯ ಮಳೆಯಾಗಿದೆ. 'ಸ್ವಾತಿ ಮಳೆ ಆದ್ಮೇಲೆ ಇನ್ನಾತ್ರ ಮಳೆ' ಎನ್ನುತ್ತಾರೆ ಇಲ್ಲಿನ ಜನಪದರು. ವಿಶಾಖ ಮಳೆಯನ್ನು 'ಇಸಾತಿ' ಮಳೆ ಎಂದೂ ಕರೆಯುತ್ತಾರೆ. ಈ ಮಳೆಗೆ ಹಿಂಗಾರಿನ ಬೆಳೆಯಲ್ಲಿ ಇರುವಂತ ಕೀಟ, ಹುಳ' ಉಪ್ಪಟಿಗಳೆಲ್ಲ ಸಾಯುತ್ತವೆ ಎಂಬ ನಂಬಿಕೆ ಇದೆ.

ನಂತರದ ಮಳೆಗಳು ಅನಿಶ್ಚಿತವಾಗಿವೆ. ಆದರೂ ಕೇಡು ಮಳೆಗಳು ಎಂದು ಕರೆಯುತ್ತಾರೆ. ಸುಗ್ಗಿಯ ಕಾಲದಲ್ಲಿ ಮಳೆಯಾದರೆ ಕಣದಲ್ಲಿರುವ ರಾಶಿ, ಹೊಟ್ಟು, ಹುಲ್ಲು ತೊಯ್ಯುತ್ತವೆ ಆದ್ದರಿಂದ ಈ ಮಳೆಗಳು ರೈತರಿಗೆ ಹಾನಿಕಾರಕವಾಗಿವೆ.

ರೈತರು ನಿಜವಾಗಿಯೂ ಫಲಾಪೇಕ್ಷೆ ಇಲ್ಲದ ಬದುಕು. ಮಳೆ ಆಗಿಯೇ ಆಗುತ್ತದೆ ಎಂಬ ಬರವಸೆಯಿಂದ ನೇಗಿಲು, ಕುಂಟೆ ಹೊಡೆಯುತ್ತಾರೆ. ಹೊಲಕ್ಕೆ ಗೊಬ್ಬರ ಗೋಡು ಹೊಡೆಯುತ್ತಾರೆ. ಬಿತ್ತುತ್ತಾರೆ. ಹರಗುತ್ತಾರೆ. ಸಾಲು ಕೆರೆಯುತ್ತಾರೆ. ಎಡೆ ಕುಂಟೆ ಹೊಡೆಯುತ್ತಾರೆ. ಕಳೆ ಕಸ ಕಿತ್ತು ಹೊಲ ಹಸನುಗೊಳಿಸುತ್ತಾರೆ. ತನ್ನಪಾಲಿನ ಕರ್ತವ್ಯವನ್ನು ತಾನು ಮಾಡುತ್ತಾನೆ. ಫಲಬರಲಿ ಬಿಡಲಿ ಎಲ್ಲಾ ಮಳೆರಾಯನೇ ಕಾಯಲಿ ಇಲ್ಲ ಕೊಲ್ಲಲಿ ಎಂದುಮಳೆರಾಯನ ಮೇಲೆ ಬಾರಹಾಕಿ ಸುಮ್ಮನಾಗುತ್ತಾನೆ. 'ಜನಗೋಳು ಎಂಗವರೊ ಮಳೆಯೂ ಅಂಗೆ ಆಗದೆ' ಎಂದು ಜನರು ನೈತಿಕವಾಗಿ ಅಧಃಪತನ ಹೊಂದುತ್ತಿರುವುದರ ಸಂಕೇತವಾಗಿ ಮನುಷ್ಯನ ನಡೆತೆಗೆ ಮಳೆಯನ್ನು ಹೋಲಿಸುವ ಪರಿಸ್ಥಿತಿ ರೈತರದ್ದಾಗಿದೆ. ಮನುಷ್ಯರ ಮೇಲೆ ಮಳೆರಾಯಗೆ, ಮರುಕವಿಲ್ಲದಿದ್ದರೂ ದನಕರುಗೊಳ ಮರಣನೋಡಿದರೆ ಮಳೆ ಬಿದ್ದಿತು ಎಂಬ ಆಶಾಭಾವನೆ ರೈತರ ಮನದಲ್ಲಿ ಹಸಿರಾಗಿಯೇ ಇದೆ.

ಮಳೆಯ ಶಾಸ್ತ್ರಗಳು

ಉಳುಮೆ, ಬಿತ್ತನೆ, ನಾಟಿ, ಅಂತರ ಬೇಸಾಯ ಮುಂತಾದ ಪ್ರಮುಖ ಕೃಷಿ ಕೆಲಸಗಳು ಆಗಬೇಕಾದ ಸಮಯದಲ್ಲಿ ಹದವಾಗಿ ಮಳೆಯಾಗದಿದ್ದರೆ ರೈತರ ಪಾಡು ಹೇಳತೀರದು. ಸಕಾಲಕ್ಕೆ ಬೀಜ ಭೂಮಿಗೆ ಬೀಳದಿದ್ದರೆ ಮುಂದಿನ ದಿನಗಳಲ್ಲಿ ತಾವು ಮತ್ತು ತಮ್ಮನ್ನು ಆಶ್ರಯಿಸಿದ ಜೀವಾದಿಗಳ ಸ್ಥಿತಿಯನ್ನು ನೆನೆದೇ ಆತನಿಗೆ ದಿಗಿಲಾಗುತ್ತದೆ. ಮಳೆ ಬಾರದಿದ್ದುದಕ್ಕೆ ಕಾರಣವೇನಿರಬಹುದು ಎಂಬ ಜಿಜ್ಞಾಸೆ ಕಾಡತೊಡಗುತ್ತದೆ. ದೇವರು ಕೋಪಗೊಂಡಿರಬಹುದು ಅಥವಾ ತಮ್ಮಿಂದ ಯಾವುದೋ ಅಚಾತುರ್ಯವಾಗಿರಬಹುದು ಎಂದು ಚಿಂತಿಸುವ ಅವರು ಅವುಗಳ ಪರಿಹಾರಕ್ಕೆ ನಾನಾ ವಿಧವಾದ ಆಚರಣೆಗಳ ಮೊರೆ ಹೋಗುತ್ತಾರೆ.

ಧೂಳ್‌ಮರಿ

ಮಳೆ ಬಾರದಿದ್ದಾಗ ಮಳೆಯನ್ನು ಬರಿಸಲು ಕಬ್ಬಾಳಮ್ಮನ ಹೆಸರಿನಲ್ಲಿ ಮರಿ ಬಲಿಕೊಡುವುದನ್ನು ದೂಳ್ ಮರಿ ಎಂದು ಕರೆಯುತ್ತಾರೆ. ಊರಿನಲ್ಲಿ ಪ್ರತಿಯೊಂದು ಮನೆಯಲ್ಲಿಯೂ ಊರೊಟ್ಟಿನ ದುಡ್ಡು ಎತ್ತಿ ಆ ಹಣದಲ್ಲಿ ಆಡುಗಳನ್ನು ತಂದು ಊರಿನ ಎಲ್ಲರೂ ಸೇರಿ ಅಂದು ಮರಿಗಳಿಗೆ ಹೂವಿನ ಹಾರ ಹಾಕಿ ಇಡೀ ಊರಿನಲ್ಲಿ ತಮಟೆ ನಗಾರಿಗಳೊಂದಿಗೆ ಮೆರವಣಿಗೆ ಮಾಡುತ್ತಾರೆ. ಪ್ರತಿಮನೆಯಲ್ಲಿ ಬೆಲ್ಲದ ಪಾನಕಮಾಡಿ

ಹೊಸದೊಂದು ಚೊಂಬಿಗೆ ತುಂಬಿ ಹೆಂಗಸರು ಅದಕ್ಕೆ ಹೂ ಮುಡಿಸಿ ಬೇವಿನ ಸೊಪ್ಪನ್ನು ಹಾಕಿ ಕೈಯಲ್ಲೊ ಅಥವಾ ತಲೆಯ ಮೇಲೆ ಹೊತ್ತುಕೊಂಡು ಮೆರವಣಿಗೆಯಲ್ಲಿ ಪಾಲುಗೊಳ್ಳುತ್ತಾರೆ. ಮೆರವಣಿಗೆ ಮುಗಿದ ನಂತರ ಊರಿನ ಪಕ್ಕದಲ್ಲೆ ಇರುವ ಬಯಲಿನಲ್ಲಿ ಮರಿಗಳ ಮೇಲೆ ಪೂಜಾರಿಯು ಬೆಲ್ಲದ ಪಾನಕ ಮತ್ತು ಬೇವಿನ ಸೊಪ್ಪನ್ನು ಹಾಕಿ ಪೂಜೆಮಾಡುತ್ತಾನೆ. ಪೂಜೆ ಮಾಡಿದ ನಂತರ ಹೆಂಗಸರು ತಂದಿದ್ದ ಪಾನಕವನ್ನು ಮರಿಗಳ ಮೈಮೇಲೆ ಚುಮುಕಿಸುತ್ತಾರೆ. ಆಗ ಮರಿಗಳು ಮೈಯನ್ನು ಒದರುತ್ತವೆ. ಒಂದು ವೇಳೆ ಮರಿಗಳು ಮೈ ಕೊಡವಲಿಲ್ಲ ಅಂದರೆ ಆ ಮರಿಯನ್ನು ಕಬ್ಬಾಳಮ್ಮ ಒಪ್ಪಿಸಿಕೊಳ್ಳಲಿಲ್ಲ ಎಂದೇ ಅರ್ಥ. ಮತ್ತೆ ಕಬ್ಬಾಳಮ್ಮನ ಹೆಸರನ್ನು ಹೇಳಿ 'ತಾಯಿ ಒಪ್ಪಿಸಿಕೊಳ್ಳವ್ವ' ಎಂದು ಮತ್ತೆ ಪಾನಕದ ತೀರ್ಥ ಹಾಕುತ್ತಾರೆ. ಮೈ ಕೊಡವಿದ ಮರಿಗೆ ತಾಯಿ ಒಪ್ಪಿಗೆ ಕೊಟ್ಟಿದ್ದಾಳೆ ಎಂದು ಅರ್ಥವಾಗುತ್ತದೆ. ನಂತರ ಮರಿಗಳನ್ನು ಕಡಿದು ರಕ್ತವನ್ನು ಧೂಳು ಮಣ್ಣಿಗೆ ಹರಿಸಿ ಒಣಗಿ ಬಾಯಾರಿದ ಭೂಮಿಯನ್ನು ಥಣಿಸುತ್ತಾರೆ. ಮಳೆ ಬೆಳೆ ಚೆನ್ನಾಗಿ ಆಗುವಂತೆ ಮಾಡು ಕಬ್ಬಾಳು ದುರ್ಗಿ ಎಂದು ಬೇಡಿಕೊಳ್ಳುತ್ತಾಳೆ.

ಹೀಗೆ ಹಿಂದೆ ಹದಿನೈದು ಹದಿನೆಂಟು ವರ್ಷಗಳ ಹಿಂದೆ ಇಡೀ ಕಬ್ಬಾಳು ಕುಳಿಯಲ್ಲಿ ಆವರ್ಷವಿಡೀ ಮಳೆ ಬಾರದೆ ವ್ಯವಸಾಯ ಮಾಡಲಾಗದೆ ಜನರ ಜೊತೆಗೆ ದನಕರುಗಳ ಗೋಳು ಕೇಳಲಾಗುತ್ತಿರಲಿಲ್ಲ. ಆ ವರ್ಷ ಕಬ್ಬಾಳು ದೇವಸ್ಥಾನದಲ್ಲಿ ಪೂಜಾರಿಗಳು ಕಬ್ಬಾಳಮ್ಮ ಕಬ್ಬಾಳು ಕುಳಿಯ ಮೇಲೆ ಮುನಿಸಿಕೊಂಡದ್ದಾಳೆಂದು ಹೇಳಿ ಕಬ್ಬಾಳಮ್ಮ ತಮ್ಮ ಅಣ್ಣನ ಮನೆ ಹೆಬ್ಬೆಟ್ಟಕ್ಕೆ ಹೋಗಿದ್ದಾಳೆ ಎಂದು ಹೇಳಿ ಅವಳಿಗೆ ಶಾಂತಿಮಾಡಿ ಕರೆತರಲು ಇಡೀ ಕಬ್ಬಾಳು ಕುಳಿಯ ಮೂವತ್ತಮೂರು ಹಳ್ಳಿಗಳೂ ಕಬ್ಬಾಳಿನಲ್ಲಿ ಮರಿ ಒಪ್ಪಿಸಬೇಕು ಎಂದು ಹೇಳಿದರು. ಅಂದು ಮಂಗಳವಾರದ ದಿನ ಕಬ್ಬಾಳು ಕುಳಿಯ ಪ್ರತಿಯೊಂದು ಊರಿನವರು ಮರಿಗಳನ್ನು ಊರೊಟ್ಟಿನಲ್ಲಿ ಒಪ್ಪಿಸಿದರು ಅಂದು ರಾತ್ರಿಯೇ ಮಳೆ ಧಾರಾಕಾರವಾಗಿ ಸುರಿದಿತ್ತು ಎನ್ನುತ್ತಾರೆ.

ಎತ್ತಿನ ಶಾಸ್ತ್ರ

ಇದು ಈ ಭಾಗದಲ್ಲಿರುವ ವಿಶೇಷವಾದ ಶಾಸ್ತ್ರ. ತುಂಬಾ ದಿನ ಮಳೆ ಬಾರದಿದ್ದರೆ ಗ್ರಾಮಸ್ಥರೆಲ್ಲ ಒಂದೆಡೆ ಸೇರಿ ಎತ್ತಿನ ಶಾಸ್ತ್ರಮಾಡುವ ತೀರ್ಮಾನ ತೆಗೆದುಕೊಳ್ಳುತ್ತಾರೆ. ಒಂದು ಎತ್ತನ್ನು ತಂದು ಅದಕ್ಕೆ ಅರಿಸಿನ ಕುಂಕುಮವಿಟ್ಟು ಪೂಜಿಸಿ ಸ್ವಲ್ಪದೂರ ನಡೆದಾಡಿಸುತ್ತಾರೆ. ಆ ಎತ್ತು ಹಾಗೆ ನಡೆಯುವಾಗ ಬೇಗ ಗಂಜಲ ಹುಯ್ದರೆ ಬೇಗ ಮಳೆಬರುತ್ತದೆ ಎಂತಲೂ ಹತ್ತಿರದ ಮಳೆ ಬರುತ್ತದೆ ಎಂದೂ ಅದಕ್ಕೆ ಬದಲಾಗಿ ತುಂಬಾ ಹೊತ್ತಿನ ನಂತರ ಗಂಜಲ ಹುಯ್ದರೆ ತಡವಾಗಿ ಮಳೆ ಬರುತ್ತದೆ ದೂರದ ಮಳೆ ಎಂತಲೂ ತೀರ್ಮಾನಕ್ಕೆ ಬರುತ್ತಾರೆ.

ಮಳೆರಾಯನ ಮಾಡುವುದು

ಈ ಪ್ರದೇಶದಲ್ಲಿ ಮಳೆರಾಯನನ್ನು ಮಾಡುವ ರೂಢಿಯಲ್ಲಿದೆ. ತುಂಬದಿನ ಮಳೆ ಬಾರದಿದ್ದಾಗ ಈ ಆಚರಣೆಯನ್ನು ಮಾಡುವುದು ರೂಢಿಯಲ್ಲಿದೆ. ಕೆರೆಯಲ್ಲಿ ಜೇಡಿಮಣ್ಣನ್ನು ತಂದು ಅದರಲ್ಲಿ ಬಸವಣ್ಣನು ಮೂರ್ತಿ ಮಾಡಿ ಗ್ರಾಮಸ್ಥರೆಲ್ಲ ಸೇರಿ ಒಬ್ಬಹುಡುಗನ ತಲೆಯ ಮೇಲೆ ಒಂದು ಮಣೆ ಇಟ್ಟು ಅದರ ಮೇಲೆ ಮಣ್ಣಿನ ಬಸವನ ಮೂರ್ತಿ ಇಟ್ಟು ಊರೆಲ್ಲ ಮೆರವಣಿಗೆ ಮಾಡುತ್ತಾರೆ. ಈ ಸಂದರ್ಭದಲ್ಲಿ ಎಲ್ಲರು ಲಯಬದ್ಧವಾಗಿ ಹೇಳುವ ಮಳೆದೇವನನ್ನು ಕರೆಯುವ ಈ ಪದಗಳು ಆಕರ್ಷಕ ಮತ್ತು ಅರ್ಥಪೂರ್ಣವಾಗಿವೆ.

ಹುಯ್ಯೋ ಹುಯ್ಯೋ ಮಳೆರಾಯ

ಹೂವಿನ ತೋಟಕೆ ನೀರಿಲ್ಲ

ಬಾರೊ ಬಾರೊ ಮಳೆರಾಯ ಬಾಳಿ ತೋಟಕೆ ನೀರಿಲ್ಲ

ಕೆಚ್ಚೊ ಕೆಚ್ಚೊ ಮಳೆರಾಯ ಕೆರೆಕಟ್ಟೆಗೆ ನೀರಿಲ್ಲ

ಉಯ್ಯಪ್ಪೋ ಮಳೆರಾಯ

ಎಂದು ಹಾಡುತ್ತಾ ಮನೆ ಮನೆಯಲ್ಲಿ ಸುತ್ತಿ ಅಕ್ಕಿ, ಅಸೀಟು, ಬೇಳೆ ಎಲ್ಲ ಸಂಗ್ರಹಿಸಿ ಕೊನೆದಿನ ಊರ ದೇವಸ್ಥಾನದ ಹತ್ತಿರ ಅಥವಾ ಊರ ಹೊರಗೆ ಅಡುಗೆ ಮಾಡಿ ಬಂದವರಿಗೆ ಅನ್ನ ಹಾಕುತ್ತಾರೆ ಇದು ಮೂರು ನಾಲ್ಕು ದಿನ ಮಾಡುವುದು.

ಮತ್ತು ಒಂದು ರೀತಿಯಲ್ಲಿ ಹಾಗೆಯೇ ಒಂದೇ ದಿನ ಮಾಡುವ ಮಳೆರಾಯನನ್ನು ಮಾಡುತ್ತಾರೆ. ಬಸವಣ್ಣನ ಮಣ್ಣಿನ ಮೂರ್ತಿ ಮಾಡಿ ಅಂದು ರಾತ್ರಿ ಮನೆ ಮನೆಯೆಲ್ಲಾ ಬಿಕ್ಷೆ ಬೇಡುತ್ತಾರೆ. ಒಬ್ಬನ ತಲೆ ಮೇಲೆ ಮೂರ್ತಿಯನ್ನು ಇಟ್ಟು, ಒಬ್ಬನಿಗೆ ಸೀರೆಯನ್ನು ಉಡಿಸಿ, ಮತ್ತೊಬ್ಬನಿಗೆ ಪಂಚೆ ಉಡಿಸಿ ಅವನ ಹೆಗಲ ಮೇಲೆ ಒಂದು ಮರದ ನೇಗಿಲನ್ನು ಇಟ್ಟು ಅವರು ಊರು ಬಿಟ್ಟು ಹೋಗುವಂತೆ ನಟಿಸುತ್ತಾರೆ.

.....ಆಗ ಊರಿನ ಜನರು ಎಲ್ಲಿಗೆ ಹೊರಟಿದ್ದೀರಿ ಎಂದು ಕೇಳುತ್ತಾರೆ. ಅವರು ಮಳೆ ಇಲ್ಲ ಬೆಳೆಯಿಲ್ಲ ಅದ್ಕೆ ನಾವು ಊರುಬಿಟ್ಟು ಹೊಯ್ತೀವಿ ಅಂತ ಹೊರಡುತ್ತಿರುತ್ತಾರೆ. ಆದರೆ ಊರಿನವರು ಇಲ್ಲ ಇಲ್ಲ ಮಳೆ ಬರ್ತದೆ ಬನ್ನಿ ಹೋಗಬೇಡಿ ಎಂದು ತಡೆದು ಕರೆತರುತ್ತಾರೆ.

ಇಲ್ಲಿ ಊರಲ್ಲಿ ಇಂತ ಗುಳೇ ಹೋಗುವುದನ್ನಾದರು ನೋಡಿ ಮಳೆ ಹುಯ್ಯುತ್ತದೆ ಎಂದು ಜನಪದರ ನಂಬಿಕೆಯಾಗಿದೆ.

ತಪ್ಲೆಶಾಸ್ತ್ರ

ಮಳೆಬಾರದಿದ್ದ ಸಂದರ್ಭದಲ್ಲಿ ಮೂರು ತಪ್ಲೆ (ಚೊಂಬು)ಗಳಲ್ಲಿ ಹೊಸ ನೀರನ್ನು ತುಂಬಿ ಅವಕ್ಕೆ ಎಕ್ಕದ ಎಲೆಯನ್ನು ಮುಚ್ಚುತ್ತಾರೆ. ಅವುಗಳನ್ನು ಮೂರು ಮಕ್ಕಳ ಕೈಯಲ್ಲಿ ಕೊಟ್ಟು ಪೂಜಿಸಿ ಅವುಗಳನ್ನು ಒಬ್ಬೊಬ್ಬರ ಕೈಯಲ್ಲಿ ಒಂದೊಂದು ಚೊಂಬು ಕೊಟ್ಟು ಉಲ್ಟಾ ಹಿಡಿದುಕೊಂಡು ನಡೆಯಲು ಹೇಳುತ್ತಾರೆ. ಮಕ್ಕಳು ಹಾಗೆಯೇ ನೀರು ತುಂಬಿದ ತಪ್ಪೆಲೆಗಳನ್ನು ಉಲ್ಟಾ ಹಿಡಿದು ನಡೆಯುತ್ತಾರೆ. ಹೀಗೆ ನಡೆಯುವಾಗ ಆ ಚೊಂಬಿನಲ್ಲಿನ ಕಚ್ಚಿಸಿದ್ದ ಎಲೆ ಎಲ್ಲಿ ಕಳಚಿ ಬೀಳುತ್ತದೆಯೋ ಅಂದರೆ ದೂರ ಹೋಗಿ ಬಿದ್ದರೆ ದೂರದ ಮಳೆ ಬರುತ್ತದೆ ಎಂತಲೂ ಹತ್ತಿರದಲ್ಲೇ ಕಳಚಿ ಬಿದ್ದರೆ ಬೇಗ ಮಳೆ ಬರುತ್ತದೆ ಎಂದು ನಂಬುತ್ತಾರೆ.

ಮೂರು ಚೊಂಬುಗಳಿಗೂ ಆ ಸಂದರ್ಭದಲ್ಲಿ ಹಿಂದೆ ಮುಂದೆ ಬರಬೇಕಾಗಿದ್ದಂತ ಮಳೆಗಳ ಹೆಸರನ್ನು ಹೇಳಿ ಈ ಶಾಸ್ತ್ರಮಾಡುತ್ತಾರೆ. ಆಯಾ ಚೊಂಬುಗಳು ಎಷ್ಟು ದೂರದಲ್ಲಿ ಕಳಚಿ ಬೀಳುತ್ತವೆಯೋ ಅಂದರೆ ಬೇಗ ಕಳಚಿಬಿದ್ದರೆ ಆ ಮಳೆ ಬೇಗ ಬರುತ್ತದೆ ಎಂತಲೂ ಸ್ವಲ್ಪ ದೂರ ಹೋದ ಮೇಲೆ ಕಳಚಿಬಿದ್ದರೆ ಆ ಮಳೆ ಬರುವುದು ಅನುಮಾನ ಎಂದು ಬಾವಿಸಿಕೊಳ್ಳುತ್ತಾರೆ.

ವಾಣಿಜ್ಯ ಕೃಷಿ

ಪ್ರಸ್ತುತ ಪ್ರದೇಶದ ಆರ್ಥಿಕ ಸ್ಥಿತಿಗತಿ ನಿರ್ಧರಿಸುವಲ್ಲಿ ಕೃಷಿಯು ಮುಖ್ಯವಾಗುತ್ತದೆ. ಎರಡು ರೀತಿಯ ಕೃಷಿಪದ್ಧತಿಗಳನ್ನು ಈ ಪ್ರದೇಶ ಮೈಗೂಡಿಸಿಕೊಂಡಿದೆ. ಒಂದು ವಾಣಿಜ್ಯ ಕೃಷಿ, ಮತ್ತೊಂದು ಸಾಂಪ್ರದಾಯಿಕ ಕೃಷಿ. ವಾಣಿಜ್ಯ ಬೆಳೆಗಳಿಗೆ ಇಲ್ಲಿನ ಮಣ್ಣು ಸೂಕ್ತವಾದುದಾಗಿದೆ. ಆದರೆ ಯಾವುದೇ ನದಿಯಾಗಲಿ ನಾಲೆನೀರಾಗಲೀ, ಅಣೆಕಟ್ಟೆಯಾಗಲೀ ಇಲ್ಲಿ ಇಲ್ಲ. ಅಂತರ್ಜಲವೇ ಇಲ್ಲಿನ ವಾಣಿಜ್ಯ ಬೆಳೆಯ ಮುಖ್ಯನೀರಿನ ಸೆಲೆಯಾಗಿದೆ. ಕೊಳವೆ ಬಾವಿಗಳ ಮೂಲಕವೇ ಇಲ್ಲಿನ ವಾಣಿಜ್ಯ ವ್ಯವಸಾಯವನ್ನು ಮಾಡುತ್ತಾರೆ. ಇದಲ್ಲದೆ ಊರಿನ ಸುತ್ತಮುತ್ತಲೂ ಕೆರೆ ಕಟ್ಟೆಗಳಿವೆ ಸುಮಾರು ಎಂಟು ಕೆರೆಗಳು ಊರಿನ ಸುತ್ತಮುತ್ತಲಿವೆ. ದೊಡ್ಡಕೆರೆ, ಬಾಳೆಕಟ್ಟೆ, ದೊಂಗನಕಟ್ಟೆ, ಕಲ್ಯಾಣಿ, ಚೆಬ್ಬೆಕಟ್ಟೆ, ಚೌಳುನಕಟ್ಟೆ, ಭದ್ರಯ್ಯನಕೆರೆ, ಮುಂತಾದವು ಎಂಟು ದಿಕ್ಕಿಗೂ ಇವೆ. ಮಳೆಗಾಲದಲ್ಲಿ ಸಮೃದ್ಧವಾಗಿ ಮಳೆಯಾದರೆ ಈ ಎಲ್ಲಾ ಕಟ್ಟೆಗಳು ತುಂಬುತ್ತವೆ. ಮಳೆ ಸಮೃದ್ಧವಾಗಿ ಬೀಳದಿದ್ದರೆ ಕೆರೆಗಳು ತುಂಬುವುದಿಲ್ಲ. ಬೆಳೆಯು ಸಮೃದ್ಧವಾಗಿ ಬೆಳೆಯಲು ಆಗುವುದಿಲ್ಲ.

ಈ ಎಲ್ಲಾ ಕೆರೆಗಳು ವ್ಯವಸಾಯಕ್ಕೆ ಯೋಗ್ಯವಾದವುಗಳೇನಲ್ಲ. ದೊಡ್ಡಕೆರೆ, ಭದ್ರಯ್ಯನಕೆರೆ, ದೊಂಗನಕಟ್ಟೆ ಸದ್ಯದಲ್ಲಿ ನೀರಾವರಿಯಲ್ಲಿ ಅದರಲ್ಲೂ ಮಳೆಗಾಲದಲ್ಲಿ ಇಲ್ಲಿನ ನೀರು ಉಪಯೋಗವಾಗುತ್ತದೆ. ಕಬ್ಬಾಳು ಬೆಟ್ಟ ಕಾಡು ಎತ್ತರವಾಗಿ ಮತ್ತು ವಿಶಾಲವಾಗಿರುವುದರಿಂದ ಮಳೆ ಮಾರುತಗಳನ್ನು ಆಕರ್ಷಿಸಿ ತಡೆದು ಮಳೆಬೀಳಿಸುತ್ತವೆ. ಹಾಗಾಗಿ ಸಾಮಾನ್ಯವಾಗಿ ಇಲ್ಲಿನ ಕೆರೆಗಳು ತುಂಬುತ್ತವೆ. ಕೆರೆಯ ಏರಿಯ ಕೆಳಗಿರುವುದನ್ನು ಗದ್ದೆಬಯಲೆಂದು ಕರೆಯುತ್ತಾರೆ. ಈ ಭೂಮಿ ಎರೆ ಮಣ್ಣಿನಿಂದ ಕೂಡಿದ್ದು ಹೆಚ್ಚು ಫಲವತ್ತತೆಯಿಂದ ಕೂಡಿದೆ. ಈ ಗದ್ದೆಗಳಲ್ಲಿ ಸಾಮಾನ್ಯವಾಗಿ ಭತ್ತ ಮತ್ತು ತೆಂಗು ಬೆಳೆ ಸಾಮಾನ್ಯವಾಗಿದೆ.

ರೇಷ್ಮೆ, ತೆಂಗು, ಬಾಳೆ, ಮಾವು, ಎಳ್ಳು, ತೊಗರಿ, ಕಡಲೆಕಾಯಿ, ಶೇಂಗಾ, ಟಮೋಟ, ಬದನೆ, ಸೌತೆಕಾಯಿ, ಮುಂತಾದವು ಇಲ್ಲಿನ ಪ್ರಮುಖ ವಾಣಿಜ್ಯ ಬೆಳೆಯಾಗಿವೆ. ಇಲ್ಲಿನ ಮಣ್ಣು ರೇಷ್ಮೆ ಬೆಳೆಯಲು ತುಂಬ ಉಪಯುಕ್ತವಾಗಿದೆ. ಆದ್ದರಿಂದ ಇಲ್ಲಿನ ಜನರು ಕೊಳವೆ ಬಾವಿಗಳನ್ನು ರೇಷ್ಮೆಬೆಳೆಯಲೆಂದೇ ಕೊರೆಸುತ್ತಾರೆ. ಆದರೆ ಅಂತರ್‌ಜಲದ ಮಟ್ಟ ತುಂಬಾ ಆಳಕ್ಕೆ ಕುಸಿದಿದೆ. ಇಪ್ಪತ್ತು ವರ್ಷಗಳ ಹಿಂದೆ ಈ ಪ್ರದೇಶದಲ್ಲಿನ ಅಂತರ್ಜಲದ ಮಟ್ಟ ಇನ್ನೂರು ಅಡಿಗಳಷ್ಟಿತ್ತು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಇದರ ಮಟ್ಟ ಎಂಟನೂರು ಒಂಬೈನೂರು ಅಡಿಗಳಿಗೆ ಇಳಿದಿದೆ.

ಇತರೆ ವಾಣಿಜ್ಯಬೆಳೆಗಳಾದ ಬಾಳೆ, ಮಾವು, ನೆಲಗಡಲೆ, ಎಳ್ಳು, ತೊಗರಿ ಮತ್ತು ತರಕಾರಿಗಳಿಗೆ ಹೋಲಿಸಿದರೆ ರೇಷ್ಮೆಬೆಳೆಯೇ ಅತ್ಯಂತ ಹೆಚ್ಚು ಆದಾಯ ತರುವ ಬೆಳೆಯಾಗಿದೆ. ಇತರೆ ವಾಣಿಜ್ಯ ಬೆಳೆಗಳು ವರ್ಷಕ್ಕೆ ಒಂದು ಅಥವಾ ಎರಡು ಬೆಳೆಬಂದರೆ ರೇಷ್ಮೆ ಬೆಳೆಯು ವರ್ಷಕ್ಕೆ ಆರು, ಏಳು ಕೆಲವರು ಎಂಟು ಬೆಳೆಗಳನ್ನು ತೆಗೆಯುತ್ತಾರೆ. ಒಂದುವರೆ ತಿಂಗಳಿಗೆ ಒಂದು ಬೆಳೆತೆಗೆಯುತ್ತಾರೆ. ಪ್ರತಿ ಒಂದುವರೆ ತಿಂಗಳಿಗೊಮ್ಮೆ ಹಣಪಡೆಯುವ ಬೆಳೆ ಇದಾಗಿದೆ. ಇಂದು ರೇಷ್ಮೆಗೆ ಹೆಚ್ಚಿನ ಬೆಲೆ ಇದ್ದು ಪ್ರತಿ ಕೇಜಿಗೆ ೩೦೦-೩೫೦ ರೂಗಳವರೆಗೂ ಇದೆ. ರೇಷ್ಮೆ ಬೆಳೆಯನ್ನು ಇಲ್ಲಿ ಹುಳಮಡುಗುವುದು ಎಂದು ಕರೆಯುತ್ತಾರೆ. ರೇಷ್ಮೆ ಬೆಳೆಯು ಹಿಂದೆ ಇದ್ದ ಸಾಂಪ್ರದಾಯಿಕ ಪದ್ಧತಿಯನ್ನು ಸಂಪೂರ್ಣವಾಗಿ ಬದಿಗೊತ್ತಿ ಆಧುನಿಕ ಪದ್ಧತಿಯನ್ನು

ಅಳವಡಿಸಿಕೊಂಡಿದ್ದಾರೆ. ಈ ಪದ್ಧತಿ ಕೆಲಸ ಕಡಿಮೆ ಮತ್ತು ಸುಲಭವಾಗಿರುವುದರಿಂದ ಆಧುನಿಕ ಪದ್ಧತಿಯನ್ನೇ ಅಳವಡಿಸಿಕೊಂಡಿದ್ದಾರೆ. ಮೊದಲು ದಡೇವುನಲ್ಲಿ ಬಿದಿರಿನ ತಟ್ಟೆಗಳನ್ನು ಇಟ್ಟು ಅದರಲ್ಲಿ ರೇಷ್ಮೆ ಹುಳುಗಳನ್ನು ಇಟ್ಟು ಬೆಳೆಯುತ್ತಿದ್ದರು. ಆದರೆ ಇಂದು ದೊಡ್ಡದಾದ ಹಾಗೂ ವಿಶಾಲವಾದ ಅಗಲವೂ ಆದ ಸ್ಟ್ಯಾಂಡ್ ಕಟ್ಟಿ ಅದರಲ್ಲಿ ರೇಷ್ಮೆ ಹುಳು ಇಟ್ಟು ಬೆಳೆಯುತ್ತಾರೆ.

ರೇಷ್ಮೆ ಹುಳು ಬೆಳೆಯಲು ಗಾಳಿ, ಬೆಳಕು ಚೆನ್ನಾಗಿರಬೇಕು. ಹೆಚ್ಚು ಬಿಸಿಯಾದರೆ ಹುಳಿನ ಬೆಳೆಗೆ ಸಪ್ಪೆರೋಗು ಬಂದು ಇಡೀ ಬೆಳೆಯೆ ನಷ್ಟವಾಗುತ್ತದೆ. "ಹುಳ ಮಡುಗೂಕೆ ಮೊದ್ಲು ಜಾಗ ಒಳ್ಳೇದಾಗಿರಬೇಕು ಗಾಳಿ ಬೆಳ್ಕು ಚೆನ್ನಾಗಿದ್ರೆ ಹುಳಿಗೆ ಯಾವ್ದೆ ರೋಗ ಬರ್ದಂಗೆ ನೋಡ್ಕ ಬೋದು, ಅಂಟು,ಮುಟ್ಟು, ಸೂತ್ಕ ಪಾತ್ಕ ಸತ್ತೋರು ಕೆಟ್ಟೋರ ಮನೆವ್ರು ಸೂತ್ಕದ ಮನೇವ್ರು ಹುಳೀನ ಮನೆಗೆ ಬರುಕಿಲ್ಲ. ಅದ್ಕೆ ಹುಳೀನ ಮನೆಬ್ಯಾರೆ ಸಪ್ರೇಟಾಗಿ ಇರ್ಬೇಕು. ಸತ್‌ಸೂತ್ಕ ಒಳ್ಳೇದಲ್ಲ ಅದ್ಕೆ ಹುಳೀನಮನೆ ಬ್ಯಾರೆ ಇದ್ರೆ ಬೆಳೇನು ಚೆನ್ನಾಗಿ ಕೈಗೆ ಹತ್ತದೆ" ಎನ್ನುತ್ತಾರೆ. (ನಾರಾಯಣಪ್ಪ, ವಕ್ತೃ)

ಹುಳಬೆಳೆಯಲು ಅದಕ್ಕೆಂದೇ ಗಾಳಿ ಬೆಳಕು ಚೆನ್ನಾಗಿರುವ ವ್ಯವಸ್ಥಿತವಾದ ಮನೆಯನ್ನು ಕಟ್ಟಿರುತ್ತಾರೆ. ಅದನ್ನು ಹುಳಿನ ಮನೆ ಎಂದೇ ಕರೆಯುತ್ತಾರೆ. ನೊಣಬರದೆ ಇರಲಿ ಎಂದು ಪ್ರತಿ ಕಿಟಕಿ ಬಾಗಿಲುಗಳಿಗೆ ಪರದೆಯನ್ನು ಹಾಕಿರುತ್ತಾರೆ. ನೊಣಗಳು ಹುಳುಗಳಿಗೆ ಚುಚ್ಚಿದರೆ ಊಜಿ ಹೊಡೆದು ಬೆಳೆನಷ್ಟವಾಗುತ್ತದೆ. ರೇಷ್ಮೆ ಬೆಳೆಯು ಹೆಚ್ಚು ಆದಾಯ ತರುವ ಬೆಳೆಯಾಗಿದ್ದು ಅದನ್ನು ಬೆಳೆಯುವವರು ಇಂತಿಷ್ಟು ಎಂದು ಚಾಕಿ ಮರಿಗಳನ್ನು ತಂದು ಬೆಳೆಯುತ್ತಾರೆ. ಮೊದಲು ಮೊಟ್ಟೆಗಳನ್ನು ತಂದು ಮರಿಮಾಡಿ ಹುಳ ಬೆಳೆಯುತ್ತಿದ್ದರು. ಇಂದು ಮರಿಯನ್ನು ತಂದು ಬೆಳೆಯುತ್ತಾರೆ. ಚಾಕಿಮರಿ ಮಾಡಿ ಮಾರುವುದೇ ಒಂದು ದೊಡ್ಡ ಉದ್ಯಮದ ರೀತಿಯಲ್ಲಿ ಬೆಳೆಯುತ್ತಿದೆ. ಚಾಕಿಮರಿಯಿಂದ ನಾಲ್ಕನೇ ಜರದವರೆಗೆ ನಾಲ್ಕು ಹಂತಗಳನ್ನು ದಾಟಿದ ಮೇಲೆ ನಾಲ್ಕನೇಜರದ ನಂತರ ಹುಳು ಹಣ್ಣಾಗಿ ಗೂಡುಕಟ್ಟುತ್ತದೆ. ಗೂಡು ಚೆನ್ನಾಗಿ ಒಣಗಿದ್ದು ಗಲೀಜಿಲ್ಲದೆ, ಊಜಿ ರೋಗವಿಲ್ಲದೆ ಚೆನ್ನಾಗಿದ್ದರೆ ಒಳ್ಳೆಯ ಬೆಲೆಗೆ ಖರೀದಿಸುತ್ತಾರೆ. ಆದ್ದರಿಂದ ಬೆಳೆದಗೂಡನ್ನು ತುಂಬಾ ಜಾಗ್ರತೆಯಿಂದ ಮಾರುಕಟ್ಟೆಗೆ ಸಾಗಿಸುತ್ತಾರೆ.

ಸಾಮಾನ್ಯವಾಗಿ ಹುಳ ಬೆಳೆಯುವವರು ಕನಿಷ್ಟ ೫೦ ಮರಿಗಳನ್ನು ಸಾಕುತ್ತಾರೆ. ಗರಿಷ್ಟ ೨೦೦, ೩೦೦ ಮರಿಗಳನ್ನು ಸಾಕುವವರೂ ಇದ್ದಾರೆ. ಸಾಮಾನ್ಯವಾಗಿ ಎಲ್ಲರೂ ೧೦೦ ಮರಿಗಳನ್ನು ಸಾಕುತ್ತಾರೆ. ಇದು ಅವರ ರೇಷ್ಮೆ ತೋಟದ ಮೇಲೆ ನಿರ್ಧಾರವಾಗುತ್ತದೆ. ತೋಟ ದೊಡ್ಡದಾಗಿದ್ದರೆ ೧೦೦ ರಿಂದ ೧೫೦ ಮರಿಗಳನ್ನು ಸಾಕುತ್ತಾರೆ. ೧೦೦ ಮರಿಗಳು ಬೆಳೆ ಚೆನ್ನಾಗಿ ಆದರೆ ಸುಮಾರು ೭೦ ಕೆ.ಜಿ.ಗೂ ಹೆಚ್ಚು ಗೂಡು ಬೆಳೆಯುತ್ತಾರೆ. ಒಂದು ಕೆ.ಜಿಗೆ ೩೦೦ ರಿಂದ ೩೫೦ ರೂಗಳವರಗೂ ಇಂದು ಬೆಲೆ ಇದೆ. ಪ್ರತಿಬೆಳೆಯು ಚೆನ್ನಾಗಾದರೆ ೨೦ ರಿಂದ ೨೫ ಸಾವಿರ ಪ್ರತಿ ಬೆಳೆಗೆ ಸಿಗುತ್ತದೆ. ಎಲ್ಲಾ ಖರ್ಚುಗಳನ್ನು ಕಳೆದರು ೧೮ ರಿಂದ ೨೦ ಸಾವಿರ ಒಂದು ಬೆಳೆಗೆ ಆದಾಯವಿರುತ್ತದೆ. ಇಂತಹ ಬೆಳೆಗಳನ್ನು ವರ್ಷಕ್ಕೆ ೬ ರಿಂದ ೮ ಬೆಳೆಗಳನ್ನು ತೆಗೆಯುತ್ತಾರೆ. ವರ್ಷಕ್ಕೆ ಒಂದು ಲಕ್ಷದ ಐವತ್ತು ಸಾವಿರದಿಂದ ಅರವತ್ತು ಸಾವಿರ ಆದಾಯ ನಿರೀಕ್ಷೆ ಇರುತ್ತದೆ.

ಇಪ್ಪನೇರಳೆ ತೋಟವಿಲ್ಲದರು ತೋಟವಿರುವವರಹತ್ತಿರ ಪಾಲಿಗೂ ಗುತ್ತಿಗೆ ತೋಟಮಾಡಿಕೊಂಡು ವರ್ಷಕ್ಕೆ ಇಂತಿಷ್ಟು ಎಂದು ತೋಟದ ಮಾಲೀಕರಿಗೆ ಕೊಟ್ಟುಬಿಡುತ್ತಾರೆ. ವರ್ಷವಿಡೀ ತೋಟಮಾಡಿ ಬೆಳೆತೆಗೆಯುತ್ತಾರೆ. ಇಷ್ಟು ಕಷ್ಟಪಟ್ಟು ರೇಷ್ಮೆ ಬೆಳೆಯುವ ರೈತರು ತಾವೇ ಬೆಳೆದ ರೇಷ್ಮೆಯನ್ನು ತಮ್ಮ ಮೈ ಮೇಲೆ ಧರಿಸಲು ಸಾಧ್ಯವಾಗುವುದಿಲ್ಲ. ಜಾಗತೀಕರಣದ ಪ್ರಭಾವದಿಂದ ಮಾರುಕಟ್ಟೆಯಲ್ಲಿ ಸಿದ್ದ ರೇಷ್ಮೆ ಉಡುಪುಗಳ ಬೆಲೆ ಹೆಚ್ಚು ದುಬಾರಿ ಇದೆ. ರೇಷ್ಮೆ ಬೆಳೆದ ರೈತರ ಮೈ ಮುಚ್ಚುವ ಬದಲು ಹಣವಂತರ ಪಾಲಾಗುವುದು ದುರಂತವೇ ಸರಿ.

ಇನ್ನು ಮಾವು, ತೆಂಗು, ಬಾಳೆ, ನೆಲಗಡಲೆ ಇವೆಲ್ಲವೂ ವರ್ಷದಲ್ಲಿ ಒಂದುಸಾರಿ ಆದಾಯ ತರುವಂತಹ ಬೆಳೆಯಾಗಿವೆ. ಈ ಪ್ರದೇಶದಲ್ಲಿ ನೀರಾವರಿ ಜಮೀನಿನ ಹಿಪ್ಪನೇರಳೆ ಬೆಳೆಯ ನಡುವೆ ತೆಂಗು ಬೆಳೆಯಲಾಗುತ್ತದೆ ಪ್ರತಿ ರೇಷ್ಮೆ ಬೆಳೆಯ ತೋಟದಲ್ಲಿ, ಭತ್ತದ ಗದ್ದೆಗಳಲ್ಲಿ ತೆಂಗು ಮಿಶ್ರಬೆಳೆಯಾಗಿ ಬೆಳೆಯುವ ಒಂದು ವಾಣಿಜ್ಯ ಬೆಳೆಯಾಗಿದೆ.

ಈ ಪ್ರದೇಶದಲ್ಲಿ ನೀರಾವರಿ ಜಮೀನಿಗಿಂತಲೂ ಒಣಭೂಮಿಯೇ ಅಧಿಕವಾಗಿದೆ ಊರಿಂದ ಸ್ವಲ್ಪ ದೂರದ ಹೊಲಗಳಿಗೆ ಎಲ್ಲರೂ ಮಾವಿನ ಗಿಡಗಳನ್ನು ಕಟ್ಟಿಸಿದ್ದಾರೆ. ದೂರದ ಹೊಲಗಳಿಗೆ ಹೋಗಿ ವ್ಯವಸಾಯ ಮಾಡುವುದು ಕಷ್ಟವಾಗುತ್ತದೆ ಎಂದು ವ್ಯವಸಾಯ ಮಾಡುವವರ ಸಂಖ್ಯೆಯೋ ಕಡಿಮೆಯಾಗುತ್ತಿರುವುದರಿಂದ ದೂರದ ತರಿಗೆ ಹೊಲಗಳಿಗೆ ಮಾವಿನ ಗಿಡಗಳನ್ನು ನೆಟ್ಟು ಅವುಗಳನ್ನು ಮುಸ್ಲಿಮರಿಗೆ ವರ್ಷಕ್ಕೊ, ಮೂರುವರ್ಷಕ್ಕೊ ಇಂತಿಷ್ಟು ದುಡ್ಡು ಎಂದು ಆ ಗಿಡಗಳ ಸಂಖ್ಯೆಯ ಆಧಾರದ ಮೇಲೆ ಬೆಲೆ ನಿಗದಿಪಡಿಸಿ ಕೊಟ್ಟುಬಿಡುತ್ತಾರೆ. ಆ ಹೊಲಗಳ ಹತ್ತಿರ ಹೋಗುವುದೇ ಇಲ್ಲ. ಎಲ್ಲವನ್ನು ತೋಟ ಮಾಡಿಕೊಂಡ ವ್ಯಕ್ತಿಯೇ ನೋಡಿಕೊಳ್ಳುತ್ತಾರೆ. ಈ ಒಪ್ಪಂದಗಳು ಕೇವಲ ಬಾಯಿ ಮಾತಿನಲ್ಲೇ ನಡೆದಿರುತ್ತವೆ.

ನೆಲಗಡಲೆ ಈ ನೆಲದಲ್ಲಿ ಬೆಳೆಯುವ ಬಹುಮುಖ್ಯ ವಾಣಿಜ್ಯ ಬೆಳೆ. ಇಲ್ಲಿನ ಕೆಂಪುಮಣ್ಣು ನೆಲಗಡಲೆ ಬೆಳೆಯಲು ಯೋಗ್ಯವಾಗಿದೆ. ಕೆಂಪು ಮಣ್ಣಲ್ಲಿ ಬೆಳೆಯುವ ಈ ನೆಲಗಡಲೆ ಹೆಚ್ಚು ಜಳ್ಳಾಗಿರುವುದಿಲ್ಲ ಬದಲಿಗೆ ಒಳ್ಳೆಯ ಗಟ್ಟಿ ಕಾಳುಗಳು ಬೆಳೆಯುತ್ತವೆ. ಇದೂ ಕೂಡ ವರ್ಷದ ಬೆಳೆಯಾಗಿದ್ದು ರೈತರಿಗೆ ವರದಾನವಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಈ ಬೆಳೆಯ ಪ್ರಮಾಣ ಕಡಿಮೆಯಾಗುತ್ತಿದೆ.

ಹೀಗೆ ವಾಣಿಜ್ಯ ಬೆಳೆಗಳಾದ ರೇಷ್ಮೆ, ಮಾವು, ತೆಂಗು, ನೆಲಗಡಲೆ ಎಳ್ಳು, ಬಾಳೆ, ತರಕಾರಿಗಳು ಮುಂತಾದವು ಈ ಪ್ರದೇಶದ ರೈತರ ಆರ್ಥಿಕ ಸ್ಥಿತಿಗತಿಗಳನ್ನು ನಿರ್ಧರಿಸುವಲ್ಲಿ ಬಹುಮುಖ್ಯ ಪಾತ್ರವಹಿಸುತ್ತವೆ. ಆದರೆ ತಾವು ಬೆಳೆದ ಬೆಳೆಗಳು ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ಸಿಗದೆ ತಾವು ಹಾಕಿದ ಬಂಡವಾಳಕ್ಕೆ ಸರಿಯಾದ ಲಾಭದೊರಕದೆ ಕೆಲವು ಸಮಯ ಅಸಲು ಪಡೆಯಲಾಗದೆ ಸಂದಿಗ್ಧ ಪರಿಸ್ಥಿತಿಗೆ ಸಿಕ್ಕಿಕೊಳ್ಳುತ್ತಾನೆ ಇಲ್ಲಿನ ರೈತ.

ಹೈನುಗಾರಿಕೆ

ಪ್ರಸ್ತುತ ಪ್ರದೇಶದ ಜನರ ಮತ್ತೊಂದು ಆರ್ಥಿಕ ಮೂಲ ಈ ಹೈನುಗಾರಿಕೆ. ಕೋಳಿ ಸಾಕಾಣಿಕೆ

ಕೇಂದ್ರಗಳು ಇಲ್ಲಿ ವಿರಳ. ಹಸುಗಳು ಅದರಲ್ಲೂ ಸೀಮೆ ಹಸುಗಳು ಪ್ರತಿಮನೆಯಲ್ಲು ಕಂಡುಬರುತ್ತವೆ. ನಾಟಿ ಹಸುಗಳು ಇದ್ದರೂ ಹಾಲು ಕೊಡುವುದರ ಪ್ರಮಾಣ ತೀರಾ ಕಡಿಮೆ. ಎಮ್ಮೆ ಮತ್ತು ಸೀಮೆಹಸುಗಳು ಇಲ್ಲಿನ ಹಾಲಿನ ಬಹುಮುಖ್ಯ ಮೂಲವಾಗಿದೆ. ಕೃಷಿಯಲ್ಲಿ ವಾರ್ಷಿಕ ಮೂಲ ಆದಾಯವನ್ನು ನಿರೀಕ್ಷಿಸಿದರೆ ಸಂಸಾರ ಸಾಗಿಸಲು ಕಷ್ಟವಾಗುತ್ತದೆ. ಪ್ರತಿದಿನದ ಖರ್ಚಿಗೆ ಪ್ರತಿ ಹದಿನೈದು ದಿನಕ್ಕೊ ಅಥವಾ ತಿಂಗಳಿಗೊಮ್ಮೆಯಾದರೂ ಆದಾಯದ ಮೂಲಗಳಿರಬೇಕು ಆದ್ದರಿಂದ ಇಲ್ಲಿನ ರೈತರು ತಮ್ಮ ಸಂಸಾರದ ಜೀವನ ನಿರ್ವಹಣೆಗೆ ಹಾಲು ಕರೆಯುವ ಹಸುಗಳನ್ನು ಸಾಕುತ್ತಾರೆ. "ಸಂಸಾರ ಅಂದ್ಮೇಲೆ ದಿನಾಲು ಖರ್ಚು ಇರ್‍ತದೆ. ಖರ್ಚ್‌ಗೆ ವರ್ಷದ ಆದಾಯನ ಕಾಯ್ಕಂದ್ರೆ ಸಂಸಾರ ಸಾಗದಪ್ಪ ಉಪ್ಪು ಉಣ್ಸೇಹಣ್ಣು, ಈರುಳ್ಳಿ, ಬೆಳ್ಳುಳ್ಳಿ, ಕಡ್ಡಿ ಕರ್ಪೂರ ಅಂತ ಇದ್ದೇ ಇರ್ತದಲ್ಲ. ಅಂತ ತಾಪತ್ರೆನ ನೀಗ್ಸುಕೆ ಏನೋ ಒಂದು ಹಸ ಸಾಕಂದು ಅದ್ಕೆ ಒಂದಿಡಿ ಹುಲ್ಲಾಕಂದು ಎಂಗು ನಮ್ಮ ಹೊಲ್ದೇಲೆ ಹುಲ್ಲು ಸೊಪ್ಪಿರ್ತದೆ ತಂದಾಕ್ತೀವಿ ಮೇಯ್ತದೆ ದಿನಾಲು ನಾಕೈದು ಲೀಟ್ರು ಹಾಲ್ಕೊಡ್ತದೆ. ಅದ್ನ ಮನೆಗೆ ವಸಿ ಮಡೀಕಂದು ಉಳ್ದುದ್ನೆಲ್ಲ ಡೇರಿಗಾಕ್ಬುಡ್ತೀವಿ. ಹದ್ನೈದಿನ್ಕೊಂದ್ಸಾರಿ ದುಡ್ಡತ್ತದೆ ಸಂಸಾರುದ ಖರ್ಚ್‌ಗೆ ಆಯ್ತದೆ ಕನಪ್ಪ ಎಂಗೊ ಇಂಗೆ ಕಾಲ ಆಕ್ಬೇಕಲ್ಲ" ಎನ್ನುತ್ತಾರೆ. (ಕೆಂಪಮ್ಮ, ವಕ್ತೃ) ಇವರು ಹಸುಗಳನ್ನು ಹಾಲಿಗಾಗೇ ಸಾಕಿ ತಮ್ಮ ಸಂಸಾರದ ಆರ್ಥಿಕ ಸಂಕಷ್ಟಗಳನ್ನು ಪರಿಹರಿಸಿಕೊಳ್ಳುವ ಮಾರ್ಗ ಇದಾಗಿದೆ.

ಇಲ್ಲಿ ಬಹುಪಾಲು ಜನರು ಹಾಲಿಗಾಗಿಯೇ ಹಸುಗಳನ್ನು ಸಾಕಿದ್ದಾರೆ. ಕಬ್ಬಾಳು ಮತ್ತು ಹೊಸಕಬ್ಬಾಳು ಎರಡರಿಂದ ಸುಮಾರು ಅರವತ್ತರಿಂದ ಎಪ್ಪತ್ತು ಸೀಮೆ ಹಸುಗಳು ಮತ್ತು ಎಮ್ಮೆಗಳನ್ನು ಸಾಕಿದ್ದಾರೆ. ಇಲ್ಲಿನ ಹಾಲು ಉತ್ಪಾದಕ ಸಂಘದ ಬಹುಪಾಲು ಹಾಲು ಇಲ್ಲಿಯೇ ಉತ್ಪಾದನೆಯಾಗುತ್ತದೆ.

ಹಾಲಿನ ಡೈರಿ

ಹಾಲಿನ ಡೈರಿಯು ೧೯೮೭ರಲ್ಲಿ ಹೊಸಕಬ್ಬಾಳಿನಲ್ಲಿ ಸ್ಥಾಪನೆಯಾಗಿದೆ. ಒಬ್ಬ ಅಧ್ಯಕ್ಷರು ಮತ್ತು ಒಂಬತ್ತು ಜನ ಸದಸ್ಯರಿದ್ದು ಪ್ರಸ್ತುತ ತಿಪ್ಪೀರೇಗೌಡ ಅಧ್ಯಕ್ಷರಾಗಿದ್ದಾರೆ. ಇದು ಕರ್ನಾಟಕ ಸರ್ಕಾರದ ಹಾಲು ಉತ್ಪಾದಕ ಮಹಾಮಂಡಳಿಯ ಅದೀನಕ್ಕೊಳಪಟ್ಟಿದೆ. ಹೊಸಕಬ್ಬಾಳಿನ ಹಾಲು ಒಕ್ಕೂಟ ಸಂಘದಲ್ಲಿ ಒಟ್ಟು ೩೩೨ ಜನ ಮೆಂಬರ್ಸ್ ಆಗಿದ್ದಾರೆ. ಅದರಲ್ಲಿ ಕಬ್ಬಾಳು ಹೊಸಕಬ್ಬಾಳಿನವರೇ ಅರವತ್ತರಿಂದ ಎಪ್ಪತ್ತು ಜನರಿದ್ದಾರೆ ಕಬ್ಬಾಳಿನ ಡೈರಿಯ ವ್ಯಾಪ್ತಿಗೆ ಹದಿನಾಲ್ಕು ಹಳ್ಳಿಗಳು ಸೇರುತ್ತವೆ.

ಹೊಸಕಬ್ಬಾಳು, ಕಬ್ಬಾಳು, ಕೆಂಚೇಗೌಡನ ದೊಡ್ಡಿ, ಹನುಮಂತನಗರ, ಗೊಲ್ಲರದೊಡ್ಡಿ, ಇಂದ್ರನಗರ, ಕಂಸಾಗರ, ಕಿಟ್ಟಪ್ಪನದೊಡ್ಡಿ, ಕುರುಬಳ್ಳಿ, ಹಲಸಿನಮರದ ದೊಡ್ಡಿ, ಹೊಸಳ್ಳಿ, ಬಾಪೂಜಿ ಕಾಲೋನಿ, ಬಿ.ದೊಡ್ಡಿ, ವೆಂಕಟರಾಯನ ದೊಡ್ಡಿ.

ಪ್ರತಿದಿನ ಬೆಳಿಗ್ಗೆ ೩೫೦ ಲೀಟರಿಗೂ ಹೆಚ್ಚು ಹಾಲು ಸಂಗ್ರಹಣೆ ಮಾಡುತ್ತಾರೆ. ಸಂಜೆ ಸಮಯದಲ್ಲಿ ೨೫೦ ಲೀಟರ್‌ಗೂ ಹೆಚ್ಚು ಸಂಗ್ರಹಣೆಯಾಗುತ್ತದೆ. ಮಳೆಗಾಲದಲ್ಲಿ ಪ್ರತಿದಿನ ಬೆಳಿಗ್ಗೆ ೭೫೦ ಲೀ.ಗೂ ಹೆಚ್ಚು ಸಂಗ್ರಹಣೆಯಾಗುತ್ತದೆ. ಸಂಜೆ ಸುಮಾರು ೬೦೦ ಲೀ.ಗೂ ಹೆಚ್ಚು ಸಂಗ್ರಹಣೆಯಾಗುತ್ತದೆ. ಒಂದೊಂದು ಕ್ಯಾನ್‌ನಲ್ಲಿ ೪೦ ಲೀ. ತುಂಬಿರುತ್ತದೆ. ಅಂತಹ ಕ್ಯಾನ್‌ಗಳು ಪ್ರತಿದಿನ ಹದಿನೆಂಟರಿಂದ ಇಪ್ಪತ್ತು ಕ್ಯಾನ್

ಹಾಲು ಸಂಗ್ರಹಿಸುತ್ತಾರೆ. ಪ್ರತಿ ಹದಿನೈದು ದಿನಗಳಿಗೆ ಒಂದು ಸಾರಿ ರೈತರಿಗೆ ಹಣಪಾವತಿಸಲಾಗುತ್ತದೆ. ಕಬ್ಬಾಳಿನಲ್ಲಿ ಒಂದು ಖಾಸಗೀ ಹಾಲಿನ ಡೈರಿ ಇದೆ ಇದು ಅಷ್ಟೇನು ಕಾರ್ಯಗತವಾಗಿಲ್ಲ. ಇಲ್ಲಿ ಪ್ರತಿದಿನದಹಾಲಿನ ಸಂಗ್ರಹಣೆ ೭೦ ರಿಂದ ೮೦ ಲೀ.ಗಳಷ್ಟಾಗಬಹುದು. ಸರ್ಕಾರದ ಯಾವುದೇ ಸಹಾಯಧನ ಈ ರೈತರಿಗೆ ಅನ್ವಯಿಸುವುದಿಲ್ಲವಾದ್ದರಿಂದ ಇಲ್ಲಿಗೆ ಹಾಲು ಹಾಕುವವರ ಸಂಖ್ಯೆ ತೀರಾ ಕಡಿಮೆ ಇದೆ.

ಕುರಿ, ಆಡುಗಳು ಇಲ್ಲಿನ ಪ್ರಾಣಿಸಂಪತ್ತಿನಲ್ಲಿ ಹಸು, ಎಮ್ಮೆ, ಎತ್ತುಗಳಷ್ಟೇ ಆರ್ಥಿಕವಾಗಿ ಅಲ್ಲಿನ ರೈತರಿಗೆ ಬಹುಮುಖ್ಯವಾಗುತ್ತದೆ. ಕಬ್ಬಾಳು ಪ್ರದೇಶದಲ್ಲಿ ಅರಣ್ಯ ಪ್ರದೇಶ ಎಥೇಚ್ಛವಾಗಿರುವುದರಿಂದ ಆಡು ಕುರಿ ಸಾಕಾಣಿಕೆ ನಿರಾಯಾಸವಾಗಿ ಇಂದಿಗೂ ನಡೆಯುತ್ತಿದೆ. ಆಡು ಕುರಿಗಳನ್ನು ಸಾಕುವವರ ಸಂಖ್ಯೆ ಕೆಲವೆ ಮಂದಿಗಳಾದರೂ ಆಡು ಮರಿಗಳ ಸಂಖ್ಯೆ ನೂರಾರಿವೆ. ಮಾಂಸಾಹಾರಿಗಳು ಎಥೇಚ್ಛವಾಗಿ ಆಡು ಕುರಿ ಮಾಂಸವನ್ನು ಬಳಸುವುದರಿಂದ ಸಾಮಾನ್ಯವಾಗಿ ಇವುಗಳಿಗೆ ಬೇಡಿಕೆ ಹೆಚ್ಚಿದೆ. ಒಂದೊಂದು ಆಡು ಕುರಿ ಬೆಲೆ ಕನಿಷ್ಟ ನಾಲ್ಕುಸಾವಿರದಿಂದ ಪ್ರಾರಂಭವಾಗಿ ಅವುಗಳ ದಷ್ಟ ಪುಷ್ಟಿಕೆಯ ಆಧಾರದ ಮೇಲೆ ಅವುಗಳ ಬೆಲೆನಿರ್ಧರಿಸುತ್ತಾರೆ. ಎಂಟು, ಹತ್ತು ಸಾವಿರದವರೆಗೂ ಕುರಿ ಆಡುಗಳು ಮಾರಾಟಮಾಡುತ್ತಾರೆ. ಒಂದು ಕೆ.ಜಿ.ಮಾಂಸದ ಬೆಲೆ ೪೦೦ ರೂಪಾಯಿಗಳಿದ್ದು ರಾಸುಗಳ ತೂಕದ ಮೇಲೆ ಅವುಗಳ ಬೆಲೆ ನಿರ್ಧರಿಸುತ್ತಾರೆ. ಹಸು, ಎತ್ತುಗಳಲ್ಲಿರುವಂತೆ ಹೀನಸುಳಿಗಳನ್ನು ಇವುಗಳಲ್ಲಿ ಗುರುತಿಸುವುದಿಲ್ಲ. ಇವುಗಳನ್ನು ಆಹಾರಕ್ಕೆ ಮುಖ್ಯವಾಗಿ ಬಳಸುವುದರಿಂದ ಒಳಿತು ಕೆಡಕುಗಳ ಅಗತ್ಯ ಕಾಣಿಸುವುದಿಲ್ಲ.

ಸಾಮಾನ್ಯವಾಗಿ ಆಡು ಕುರಿಗಳು ಹದಿನೈದರಿಂದ ಇಪ್ಪತ್ತು ಕೆ.ಜಿ.ತೂಕ ತೂಗುತ್ತವೆ. ಅಂತಹ ಕುರಿ ಆಡುಗಳಿಗೆ ಆರರಿಂದ ಎಂಟು ಸಾವಿರವಿರುತ್ತದೆ. ಕುರಿಯ ದಲ್ಲಾಳಿಗಳು ವ್ಯಾಪಾರಸ್ತರು ಕುರಿಗಳನ್ನು ನೋಡಿ ಎತ್ತಿ ತೂಕಹಾಕಿ ಎಷ್ಟು ಕೆ.ಜಿ ಬರುವುದು ಎಂದು ಅಂದಾಜಿಸಿ ಅವುಗಳ ಬೆಲೆಯನ್ನು ನಿಗದಿಪಡಿಸುತ್ತಾರೆ. ಅಷ್ಟೂ ನಿಪುಣತೆ ಇಲ್ಲಿನ ಕುರಿವ್ಯಾಪಾರಿಗಳಿಗಿದೆ. ಇವುಗಳ ದಲ್ಲಾಳಿ ವ್ಯಾಪಾರ ಮಾಡಿಕೊಂಡು ಹಲವು ಮಂದಿ ತಮ್ಮ ಜೀವನ ನಿರ್ವಹಿಸುತ್ತಿದ್ದಾರೆ.

ಹೊಲಗಳು ಇರುವವರು ಇಲ್ಲದೇ ಇರುವವರು ಆಡು ಕುರಿಗಳನ್ನು ಸಾಕುತ್ತಾರೆ. ಅವುಗಳಿಂದಲೇ ಜೀವನ ನಿರ್ವಹಿಸುತ್ತಿದ್ದಾರೆ. ಮನೆಕಟ್ಟಲು, ಮದುವೆ ಮಾಡಲು, ಮಕ್ಕಳ ವಿದ್ಯಾಭ್ಯಾಸಕ್ಕೆ ಆಡು ಕುರಿಗಳನ್ನು ಮಾರಿ ಇಂತ ಒಳ್ಳೆಯ ಕೆಲಸಗಳನ್ನು ಮಾಡುವುದು ಇಲ್ಲಿದೆ. "ನಮ್ಗೆ ಹತ್ತಾರೆಕ್ರೆ ಹೊಲ ಇಲ್ಲ ಒಂದು ಅಂಗೈ ಅಗ್ಲ ಹೊಲ ಅದೆ, ಅದ್ರೆಲಿ ಏನೂಮಾಡುಕಾಗಲ್ಲು, ಅದ್ಕೆ ನಾಲ್ಕೈದು ಕುರಿ ಸಾಕಿದ್ದಿ ಇವಾಗ ಅವೇ ಮೂವತ್ತು ನಲ್ವತ್ತು ಕುರಿ ಆಗವೆ, ಅದ್ರೆಲಿ ಹದ್ನೈದಿಪ್ಪತ್ತು ಕುರಿ ಮಾರಿ ಮಗನ ಮದ್ವೆ ಮಾಡ್ದಿ, ಇನ್ನೊಂದು ಹತ್ತುಹದಿನೈದು ಕುರಿ ಅವೆ ಇನ್ನೊಬ್ಬ ಮಗ ಅವ್ನೆ ಅವುನ್ಗೆ ಏನಾರ ಮಾಡ್ಬೇಕು" ಅಂತಾರೆ (ಮುನಿರಾಜಣ್ಣ, ವಕ್ತೃ).

ಆಡು ಕುರಿಗಳನ್ನು ಮಾರಿ ಮಕ್ಕಳ ಶಾಲೆ ಕಾಲೇಜುಗಳ ಶುಲ್ಕ ಕಟ್ಟುವುದನ್ನು ಇಲ್ಲಿಕಾಣಬಹುದು. ಮನೇಲಿ ನಮ್ಮ ಬದ್ಕು ನಮ್ಮ ಒಡವೆ ಇದ್ರೆ ಕಷ್ಟಕ್ಕೆ ಆಯ್ತದೆ ಮನೇಲಿ ಒಡವೆ ಇದ್ದುದ್ಕೆ ಮಾರಿ ಮಕ್ಕಳ ಕಾಲೇಜ್ಗೆ ಸೇರಿಸ್ಬೋ, ಒಡ್ವೆ ಇದ್ರೆಸಮಯಕ್ಕೆ ಆಯ್ತದೆ ಕನಪ್ಪ" ಎನ್ನುತ್ತಾರೆ. (ಮಂಚಮ್ಮ, ವಕ್ತೃ) ಇಲ್ಲಿ

ಜನರು ಆಡು ಕುರಿಗಳನ್ನು ಸಣ್ಣ ಬದುಕು, ಒಡವೆ ಎಂದು ಕರೆಯುತ್ತಾರೆ. ಹಸುಗಳನ್ನು ಸಾಕಿರುವವರ ಮನೆಯಲ್ಲಿಜೊತೆಗೆ ಎರಡುಕುರಿಮರಿಗಳನ್ನು ಸಾಕಿರುತ್ತಾರೆ. ಅದು ಈ ಕಷ್ಟದ ಸಮಯಕ್ಕೆ ಉಪಯೋಗಕ್ಕೆ ಬರುತ್ತದೆ ಎಂಬುದೇ ಇದರ ಉದ್ದೇಶವಾಗಿದೆ.

ಕಬ್ಬಾಳು ಪರಿಸರದ ಆರ್ಥಿಕ ಸ್ಥಿತಿಗತಿಯಲ್ಲಿ ಹಸು, ಎಮ್ಮೆ, ಎತ್ತು, ಆಡು, ಕುರಿಗಳು ಬಹುಮುಖ್ಯದ ಪಾತ್ರವಹಿಸುತ್ತವೆ.

ವ್ಯಾಪಾರ

ಕಬ್ಬಾಳಿನ ಆರ್ಥಿಕ ಸ್ಥಿತಿಗತಿ ನಿರ್ಧರಿಸುವಲ್ಲಿ ಬಹುಮುಖ್ಯ ಪಾತ್ರವಹಿಸುವುದು ಇಲ್ಲಿನ ವ್ಯಾಪಾರ. ಜಮೀನು ಇರುವವರು ಕೃಷಿಮಾಡಿದರೆ ಇಲ್ಲದವರು ಅಂಗಡಿಮುಂಗಟ್ಟುಗಳು ಹಾಕಿಕೊಂಡು ವ್ಯಾಪಾರಮಾಡುತ್ತಾರೆ. ಇದಕ್ಕೆ ಬಹುಮುಖ್ಯ ಕಾರಣ ಕಬ್ಬಾಳಮ್ಮನ ದೇವಸ್ಥಾನ. ಹದಿನೆಂಟರಿಂದ ಇಪ್ಪತ್ತು ಅಂಗಡಿಗಳಲ್ಲಿ ಪೂಜಾ ಸಾಮಗ್ರಿಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಾರೆ. ಹೂವು, ಹಣ್ಣು, ಕಾಯಿ, ಗಂಧದ ಕಡ್ಡಿ, ಕರ್ಪೂರ, ಅರಿಸಿನ ಕುಂಕುಮ, ನಿಂಬೆಹಣ್ಣು, ಪತ್ರೆ, ಸೀರೆಗಳು ಮುಂತಾದವು ಬಹುಮುಖ್ಯವಾಗಿವೆ. ವಾರದ ದಿನಗಳಲ್ಲಿ ಹೂವಿನ ಹಾರಗಳಿಗೆ ಬೇಡಿಕೆ ಹೆಚ್ಚು ನಿಂಬೆಹಣ್ಣು ಮತ್ತು ಹೂಗಳು ಪೂಜೆಯಲ್ಲಿ ಕಡ್ಡಾಯವಾಗಿರುವುದರಿಂದ ಇವುಗಳ ವ್ಯಾಪಾರ ಹೆಚ್ಚಾಗಿರುತ್ತದೆ. ಹೂವುಗಳನ್ನು ಕಟ್ಟಿ ಅಂಗಡಿಗಳಿಗೆ ಹಾಕಿ ಜೀವನ ನಡೆಸುವವರು ಇದ್ದಾರೆ. ವಾರದ ದಿನಗಳಲ್ಲಿ ಹೂಗಳಿಗೆ ಬೇಡಿಕೆ ಹೆಚ್ಚಾಗಿರುವುದರಿಂದ ಊರಿನ ಅಕ್ಕ ಪಕ್ಕದ ಊರುಗಳಾದ ಹೊಸಕಬ್ಬಾಳು, ಕಂಸಾಗರ, ಕಿಟ್ಟಪ್ಪನ ದೊಡ್ಡಿ,ಇಂದ್ರನಗರ ಮುಂತಾದ ಊರುಗಳಿಂದಲೂ ಹೂಗಳನ್ನು ಕಟ್ಟಿ ಅಂಗಡಿಗಳಿಗೆ ಹಾಕುತ್ತಾರೆ. ಅವರಿಗೆ ಒಂದು ಮಾರಿಗೆ ಇಂತಿಷ್ಟು ಎಂದು ಹಣ ನೀಡುತ್ತಾರೆ.

ಬೆಂಗಳೂರು ರಾಮನಗರದಂತಹ ನಗರಪ್ರದೇಶಗಳಿಂದ ಬರುವವರು ಪೂಜೆಮಾಡಿಸಿ ಕಡ್ಡಾಯವಾಗಿ ಹೂವಿನಹಾರ ಮತ್ತು ನಿಂಬೆಹಣ್ಣುಗಳನ್ನು ಪೂಜಿಸಿ ತಮ್ಮ ವಾಹನಗಳಿಗೆ ಕಟ್ಟುತ್ತಾರೆ. ಆದಕಾರಣ ವಾರದಲ್ಲಿ ಬಾನುವಾರ ಮತ್ತು ಮಂಗಳವಾರ ಹೂವಿನಹಾರ ಮತ್ತು ನಿಂಬೆಹಣ್ಣಿಗೆ ಎಲ್ಲಿಲ್ಲದ ಬೇಡಿಕೆ ಉಂಟಾಗುತ್ತದೆ. ಇಲ್ಲಿಗೆ ಕನಕಪುರ, ಬೆಂಗಳೂರು, ರಾಮನಗರ ಚೆನ್ನಪಟ್ಟಣಗಳಿಂದ ಹೂಗಳನ್ನು ತರಿಸುತ್ತಾರೆ. ಈ ವ್ಯಾಪಾರದ ಅಂಗಡಿಗಳಿಂದ ಪ್ರತಿದಿನ ಸಾವಿರಾರು ರೂಪಾಯಿಗಳ ಆದಾಯವನ್ನು ಮಾಡುತ್ತಾರೆ.

ಆಹಾರಧಾನ್ಯದ ಅಂಗಡಿಗಳು ಬಹುಮುಖ್ಯವಾಗಿ ಸುಮಾರು ಹತ್ತು ಅಂಗಡಿಗಳಿದ್ದು ಬಹು ಆದಾಯತರುವ ಅಂಗಡಿಗಳಾಗಿವೆ. ಅಕ್ಕಿ, ಬೇಳೆ, ಎಣ್ಣೆ, ಊಟದ ಎಲೆ ಇನ್ನು ಮುಂತಾದ ಆಹಾರದ ಪ್ರತಿಯೊಂದು ವಸ್ತುಗಳು ಇಲ್ಲಿ ಮಾರಾಟವಾಗುತ್ತವೆ. ವಾರದಲ್ಲಿ ಎರಡು ದಿನ ಭಾನುವಾರ, ಮಂಗಳವಾರ ಹರಕೆ ತೀರಿಸಲು, ಮರಿ ಕಡಿದು ಸಾವೆ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಊಟಕ್ಕೆ ಬೇಕಾದ ಪ್ರತಿಯೊಂದು ವಸ್ತುವು ಇಲ್ಲಿ ದೊರಕುತ್ತದೆ. ವಾರದ ದಿನಗಳಲ್ಲಿ ಸಾವಿರಾರು ರೂಪಾಯಿಗಳ ಆದಾಯವನ್ನು ಈ ಅಂಗಡಿಗಳು ಗಳಿಸುತ್ತವೆ.

ಚೌಲ್ಟ್ರಿಗಳು (ಛತ್ರ)

ಹತ್ತು ಹದಿನೈದು ವರ್ಷಗಳ ಹಿಂದೆ ಜನರು ತಾವು ಹೊತ್ತ ಹರಕೆ ತೀರಿಸಲು ಮರದ ಅಡಿಯಲ್ಲೋ,

ತೋಟಗಳಲ್ಲೋ, ರಸ್ತೆಯ ಪಕ್ಕದಲ್ಲೋ ಒಲೆ ಹಾಕಿ ಅಡುಗೆ ಮಾಡುತ್ತಿದ್ದರು. ಊಟವೂ ಸಹ ಮರದ ಕೆಳಗೆ ರಸ್ತೆಯ ಪಕ್ಕದಲ್ಲೇ ನಡೆಯುತ್ತಿತ್ತು. ಮಳೆ, ಗಾಳಿ, ಬಿಸಿಲಿನಿಂದ ರಕ್ಷಣೆ ಇರಲಿಲ್ಲ. ಊಟದ ಸಮಯದಲ್ಲಿ ಅಸ್ತವ್ಯಸ್ತವಾಗುತ್ತಿತ್ತು. ಇದನ್ನು ನಿವಾರಿಸಲು ಚೌಲ್ಟ್ರಿಗಳು, ಧರ್ಮಛತ್ರಗಳು ತಲೆಎತ್ತಿವೆ. ಸುಮಾರು ಎಪ್ಪತ್ತರಿಂದ ಎಂಬತ್ತು ಚೌಲ್ಟ್ರಿಗಳು ಕಬ್ಬಾಳಿನಲ್ಲಿವೆ. ವಾರದ ದಿನ ಇವು ಯಾವುವು ಕಾಲಿ ಉಳಿಯುವುದಿಲ್ಲ. ಒಂದು ದಿನಕ್ಕೆ ಒಂದುವರೆ ಸಾವಿರ ರೂಗಳ ಬಾಡಿಗೆ ಇದೆ ಬಿಸಿಲು, ಮಳೆ, ಗಾಳಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಸುಸಜ್ಜಿತವಾಗಿವೆ. ಊಟಮಾಡಲು ಬಡಿಸಲು ವ್ಯವಸ್ಥಿತವಾಗಿವೆ. ನೀರಿನ ಸೌಲಭ್ಯಕಲ್ಪಿಸಲಾಗಿದೆ. ಆದ್ದರಿಂದ ಇಲ್ಲಿಗೆ ಹರಕೆ ತೀರಿಸಲು ಬರುವವರೆಲ್ಲ ಚೌಲ್ಟ್ರಿಗಳಲ್ಲೆ ಮಾಡುತ್ತಾರೆ.

ಆದರೆ ಹೊಲಗಳನ್ನು ಕೃಷಿ ಮಾಡುವ ಬದಲಾಗಿ ಹೀಗೆ ಚೌಲ್ಟ್ರಿಗಳನ್ನು ಕಟ್ಟುತಿದ್ದಾರೆ. ಇದಕ್ಕೆ ಕಾರಣವೆಂದರೆ ಕೃಷಿಯಲ್ಲಿ ಬರುವ ಆದಾಯ ಕಡಿಮೆಯಾಗಿದೆ. ಮಳೆಯ ಅನಿಶ್ಚಿತತೆ, ಕೆಲಸ ಹೆಚ್ಚು ಹೀಗೆ ಹಲವು ಅನಾನುಕೂಲಗಳು ಇರುವುದರಿಂದ ಕೃಷಿಯ ಬಗ್ಗೆ ಆಸಕ್ತಿ ಕಡಿಮೆಯಾಗಿದೆ. ಯಾವ ಕೆಲಸದ ಒತ್ತಡವಿಲ್ಲದೆ ಕೂತಲ್ಲಿಗೆ ಆದಾಯಬರುವ ಮೂಲಗಳು ಇದಾಗಿರುವುದರಿಂದ ಕೆಲವರು ಈ ದಾರಿ ಹಿಡಿದಿದ್ದಾರೆ. ಇವರ ಮುಖ್ಯ ಉದ್ದೇಶ ಆದಾಯದ ಕಡೆಗಿದೆ.

ಕೂಲಿ ಕೆಲಸ

ಪ್ರತಿದಿನ ಕೂಲಿಕೆಲಸ ಮಾಡಿಕೊಂಡು ಬದುಕುವ ಬಹುಸಂಖ್ಯಾತ ಜನರು ಕಬ್ಬಾಳು ಪರಿಸರದಲ್ಲಿದ್ದಾರೆ. ಇವರಿಗೆ ಜಮೀನುಗಳಿಲ್ಲ ಬೇರೆಯವರ ಜಮೀನುಗಳಲ್ಲಿಕೃಷಿ ಕೆಲಸ ಮಾಡುವುದು ನಗರ ಪಟ್ಟಣಗಳಲ್ಲಿ ಕೆಲಸಕ್ಕೆ ಹೋಗುವುದು, ದುಡಿಯುವುದು ಇವರ ಪ್ರತಿದಿನದ ಕೆಲಸ. ಊರಿನಲ್ಲಿ ಕೂಲಿ ಕೆಲಸ ಮಾಡಲು ಮಹಿಳೆಯರಿಗೆ ಹೆಣ್ಣಾಳಿಗೆ ನೂರು ರೂಪಾಯಿ, ಪುರುಷರಿಗೆ ಗಂಡಾಳಿಗೆ ಇನ್ನೂರು ರೂಪಾಯಿಗಳಿವೆ. ಈ ಕೂಲಿಕಾರ್ಮಿಕರು ಎಲ್ಲಾ ಸಮುದಾಯಗಳಲ್ಲೂ ಕಂಡುಬಂದರು ಬಹುಸಂಖ್ಯಾತರು ಪರಿಶಿಷ್ಟರಾಗಿದ್ದಾರೆ. ಕನಕಪುರ ಮತ್ತು ಚನ್ನಪಟ್ಟಣಗಳಲ್ಲಿರುವ ಗಾರ್ಮೆಂಟ್ಸ್‌ಗಳಲ್ಲಿಗೆ ಇಲ್ಲಿನ ಅನೇಕ ಮಹಿಳೆಯರು ಕೆಲಸಕ್ಕೆ ಹೋಗುತ್ತಾರೆ. ಆದ್ದರಿಂದ ಇತ್ತೀಚಿನ ದಿನಗಳಲ್ಲಿ ಕೃಷಿ ಕೂಲಿಕಾರ್ಮಿಕರ ಸಂಖ್ಯೆ ಕುಗ್ಗಿದೆ. ಕೃಷಿ ಕೂಲಿಕಾರ್ಮಿಕರಾಗಿ ದುಡಿಯಲು ಇಲ್ಲಿನ ಜನರು ಸಿದ್ದರಿಲ್ಲ. ಇತ್ತೀಚಿನ ಯುವವರ್ಗದವರು ಯಾವುದೇ ಕೊಂಕುಮಾತನ್ನು ಕೇಳಲು ಸಿದ್ದರಿಲ್ಲ. ಸಾಮಾಜಿಕ ಅಸಮಾನತೆಯ ಕಾರಣದಿಂದ ಜನರು ನಗರದತ್ತ ಮುಖಮಾಡಿದ್ದಾರೆ.

೩.೩. ರಾಜಕೀಯ ಸ್ಥಿತಿ

ರಾಜಕೀಯವೆಂಬುದು ಚರಿತ್ರೆಯಲ್ಲಿ ಸಾಮಾನ್ಯ ಜನರ ಚಟುವಟಿಕೆಯಾಗಿರಲಿಲ್ಲ. ರಾಜನಾದವನಿಗೆ ತೆರಿಗೆಯನ್ನು ಸಲ್ಲಿಸಿ ಅವನಿಗೆ ಗೌರವಿಸುವುದು ಮಾತ್ರ ಪ್ರಜೆಯ ಕರ್ತವ್ಯವಾಗಿತ್ತು. ಭಾರತಕ್ಕೆ ವಸಾಹತುಶಾಹಿ ಆಳ್ವಿಕೆ ಬಂದ ನಂತರ ರಾಜಕಾರಣದ ಬಗ್ಗೆ ಹೆಚ್ಚು ಆಲೋಚಿಸುವಂತಾದರೂ ಸಾಮಾನ್ಯಜನರಿಗೆ ರಾಜಕೀಯದ ಹಾದಿ ಮುಚ್ಚಿದ ಬಾಗಿಲಾಗಿತ್ತು. ಅಸ್ಪೃಶ್ಯರಿಗಂತೂ ಮತ ಚಲಾಯಿಸುವ ಹಕ್ಕೇ ಇರಲಿಲ್ಲವೆಂದ ಮೇಲೆ ಅವರ ರಾಜಕೀಯದ ಮಾತೆಲ್ಲಿ. ಇಂತಹ ಮಾತಾಡುವ ಶಕ್ತಿ ಇದ್ದರು ಆ ಮಾತನ್ನು ಕಳೆದುಕೊಂಡಿದ್ದಂತ ಭಾರತದ

ಬಹುಜನರಿಗೆ ತಮ್ಮ ಅಗಾದವಿದ್ವತ್ತು ಮತ್ತು ಪರಿಶ್ರಮದಿಂದ ಭಾರತದ ಮೂಲನಿವಾಸಿ ಬಹುಜನರಿಗೆ ಧ್ವನಿ ಇಲ್ಲದವರ ಧ್ವನಿಯಾಗಿ ಮತದಾನದ ಹಕ್ಕು ನೀಡುವುದರ ಮೂಲಕ ಮಾತನಾಡುವ ಶಕ್ತಿ ತುಂಬಿದವರು ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್‌ರವರು. ಒಬ್ಬ ವ್ಯಕ್ತಿಗೆ ಒಂದು ಮತ ಒಂದು ಮತಕ್ಕೆ ಒಂದೇ ಮೌಲ್ಯ. ಅವರು ರಾಜನಾಗಿರಲಿ ಸೈನಿಕನಾಗಿರಲಿ ಪ್ರಧಾನಿಯಾಗಿರಲಿ ಸಾಮಾನ್ಯ ಪ್ರಜೆಯಾಗಿರಲಿ ರಾಜಕೀಯವಾಗಿ ಎಲ್ಲರೂ ಸಮಾನರು. ಇಂತಹ ಅವಕಾಶದಿಂದಲೇ ಪ್ರಸ್ತುತ ಕಬ್ಬಾಳು ಗ್ರಾಮಪಂಚಾಯ್ತಿಯ ಅಧ್ಯಕ್ಷರು ಆಗಿರುವ ಪರಿಶಿಷ್ಟ ಜಾತಿಯ ಜ್ಯೋತಿಲಕ್ಷ್ಮಿಯವರು ಅಧಿಕಾರ ಚುಕ್ಕಾಣಿ ಹಿಡಿದಿದ್ದಾರೆ.

ಪ್ರಸ್ತುತ ಕಬ್ಬಾಳು ಪರಿಸರದಲ್ಲಿ ಪ್ರಭಾವಿಯಾದ ಯಾವುದೇ ರಾಜಕೀಯ ವ್ಯಕ್ತಿಗಳು ಇಲ್ಲವಾದರು ಕಬ್ಬಾಳಿಗೂ ರಾಜ್ಯ ರಾಜಕೀಯಕ್ಕೂ ಅವಿನಾಭಾವ ಸಂಬಂಧವಿದೆ. ವಿಧಾನಸಭಾ ಸದಸ್ಯರಾಗಲೀ, ಲೋಕಸಭಾ ಸದಸ್ಯರಾಗಲಿ, ವಿಧಾನಪರಿಷತ್ ಸದಸ್ಯರಾಗಲಿ ಈ ಊರಿನಿಂದ ಆಯ್ಕೆಯಾದವರಿಲ್ಲ. ಆದರೆ ನಾಡಿನ ರಾಜಕಾಣದಲ್ಲಿ ಘಟಾನುಗಟಿಗಳಾದ ಎಸ್.ಎಂ.ಕೃಷ್ಣ, ಡಿ.ಕೆ.ಶಿವಕುಮಾರ್, ಎಚ್.ಡಿ.ಕುಮಾರಸ್ವಾಮಿ ಆದಿಯಾಗಿ ಎಲ್ಲರೂ ಇಲ್ಲಿಗೆ ಬಂದು ಹೋಗುವವರೆ. ಹಿಂದೆ ಇದ್ದಂತಹ ಸಾತನೂರು ವಿಧಾನಸಭಾ ಕ್ಷೇತ್ರಕ್ಕೂ ಕಬ್ಬಾಳಿಗೂ ಬಿಡಿಸಲಾಗದ ಸಂಬಂಧವಿತ್ತು. ಸುಮಾರು ಇಪ್ಪತ್ತು ವರ್ಷಗಳಿಗೂ ಹೆಚ್ಚುಕಾಲ ಸಾತನೂರು ವಿಧಾನಸಭಾಕ್ಷೇತ್ರದ ಶಾಸಕರಾಗಿ ಸಚಿವರೂ ಆಗಿದ್ದ ಡಿ.ಕೆ.ಶಿವಕುಮಾರ್ ತಮ್ಮ ಪ್ರತಿ ಕೆಲಸ ಕಾರ್ಯಗಳಿಗೂ ಕಬ್ಬಾಳಮ್ಮನ ದೇವಸ್ಥಾನಕ್ಕೆ ಬಂದು ಪೂಜೆಸಲ್ಲಿಸಿ ಅನುಗ್ರಹ ಪಡೆದನಂತರ ತಮ್ಮ ಕಾರ್ಯಕಲಾಪಗಳಿಗೆ ಮುಂದಾಗುತ್ತಾರೆ. ಇಂದು ಕನಕಪುರ ಕ್ಷೇತ್ರದಿಂದ ಗೆದ್ದುಬಂದಿರುವ ಶಿವಕುಮಾರ್ ಇಂದಿಗೂ ಕಬ್ಬಾಳಮ್ಮನ ಪರಮ ಭಕ್ತ, ಈ ಕ್ಷೇತ್ರದ ಜನತೆಯ ಮತ್ತು ಕಬ್ಬಾಳಮ್ಮನ ಆಶೀರ್ವಾದದಿಂದ ರಾಜ್ಯ ರಾಜಕಾರಣದಲ್ಲಿಮೂರು ಬಾರಿ ಸಚಿವನಾಗಿ ಕೆಲಸಮಾಡಿದ್ದೇನೆ ಎಂಬುದು ಶಿವಕುಮಾರ್ ಅವರ ನಂಬಿಕೆ.

ಎಸ್.ಎಂ.ಕೃಷ್ಣ, ಎಚ್.ಡಿ.ಕುಮಾರಸ್ವಾಮಿಯವರು ತಾವು ಮುಖ್ಯಮಂತ್ರಿ ಆಗುವುದಕ್ಕೂ ಮೊದಲು ಕಬ್ಬಾಳು ದೇವಸ್ಥಾನಕ್ಕೆ ಬಂದು ಪೂಜೆಮಾಡಿ ನಂತರ ಮುಖ್ಯಮಂತ್ರಿಯಾದರು ಎನ್ನುತ್ತಾರೆ. ಡಿ.ಕೆ.ಶಿವಕುಮಾರ್ (ಕನ್ನಡ ಟಿ.ವಿ. ೯ ವಾರ್ತಾಪ್ರಸಾರ ಮಾಧ್ಯಮದಲ್ಲಿನ ಸಂದರ್ಶನದಲ್ಲಿ ಹೀಗುವುಂಟೆ ಕಾರ್ಯಕ್ರಮದಲ್ಲಿ ಮಾತನಾಡಿದರು). ಹೀಗೆ ರಾಜಕೀಯ ನಾಯಕರು ಬಂದು ತಾಯಿಯ ಆಶೀರ್ವಾದ ಪಡೆದು ಹೋಗುವವರಿಗೆ ಬರವಿಲ್ಲ. ಆದರೆ ಪ್ರತಿಬಾರಿಯು ಡಿ.ಕೆ.ಶಿವಕುಮಾರರ ಆಸೆಗಳನ್ನು ಈಡೇರಿಸುವ ಕಬ್ಬಾಳಮ್ಮ ಇಂದು ಮುಖ್ಯಮಂತ್ರಿ ಆಕಾಂಕ್ಷಿಯಾದ ಇವರ ಆಸೆಯನ್ನೇಕೋ ಈಡೇರಿಸಲಿಲ್ಲ. ಕೊನೆಗೆ ಒಂದು ಮಂತ್ರಿಪದವಿಯನ್ನಾದರು ಪಡೆಯಬೇಕೆಂಬ ಇವರ ಆಸೆ ಕೈಗೂಡಿತು. ಹೀಗೆ ರಾಜ್ಯದ ಪ್ರಭಾವಿ ರಾಜಕಾರಿಣಿಗಳು ತೇಜಸ್ವಿನಿ ರಮೇಶ್, ಸಂಸದ ಡಿ.ಕೆ.ಸುರೇಶ್ ಯಾದಿಯಾಗಿ ಇನ್ನು ಅನೇಕ ರಾಜಕಾರಿಣಿಗಳು ಖ್ಯಾತ ಕನ್ನಡ ಚಿತ್ರನಟರೂ ಇಲ್ಲಿಗೆ ಬಂದು ಕಬ್ಬಾಳಮ್ಮನ ಆಶೀರ್ವಾದ ಪಡೆದು ಪ್ರಭಾವಿತರಾಗಿದ್ದಾರೆ ಎಂಬುದು ಸತ್ಯಸಂಗತಿ.

ಈ ಪ್ರದೇಶದ ಶಾಸಕರು ಕಾರ್ಯಕರ್ತರ ಸಭೆ ಸಮಾರಂಭಗಳನ್ನು ಕಬ್ಬಾಳಮ್ಮನ ಸನ್ನಿಧಿಯಲ್ಲೆ ನಡೆಸುತ್ತಾರೆ. ಜನರು ಸ್ವಾಮಿಕಾರ್ಯ ಸ್ವಕಾರ್ಯ ಎನ್ನುವಂತೆ ಸಭೆಯಲ್ಲಿ ಭಾಗವಹಿಸಿ ದೇವರ ಆಶೀರ್ವಾದ ಪಡೆದು ಬರುವದೃಷ್ಟಿಯಿಂದಲೇ ಹೆಚ್ಚು ಜನ ಸೇರುತ್ತಾರೆ. ಧಾರ್ಮಿಕ ಕೇಂದ್ರವಾಗಿರುವ ಕಬ್ಬಾಳು ಕೆಲವೊಮ್ಮೆ ರಾಜಕೀಯ ಕೇಂದ್ರವಾಗಿ ಕಾಣಬರುತ್ತದೆ.

ಕಬ್ಬಾಳು ಗ್ರಾಮ ಪಂಚಾಯ್ತಿಯ ಕೇಂದ್ರ. ಕಬ್ಬಾಳು ಗ್ರಾಮಪಂಚಾಯ್ತಿಗೆ ಹದಿಮೂರು ಗ್ರಾಮಗಳು ಸೇರುತ್ತವೆ. ಒಟ್ಟು ಆರುವಾರ್ಡ್ ಹದಿನಾರು ಸದಸ್ಯರು ಆರು ಜನ ಮಹಿಳಾ ಸದಸ್ಯರು ಅದರಲ್ಲಿ ಗ್ರಾಮಪಂಚಾಯ್ತಿಯ ಅಧ್ಯಕ್ಷರು ಹೊಸಕಬ್ಬಾಳಿನ ಸದಸ್ಯರಾದ ಜ್ಯೋತಿ ಲಕ್ಷ್ಮಿಯವರು ಪರಿಶಿಷ್ಟಜಾತಿಯ ಮೀಸಲಿನಿಂದ ಅಧ್ಯಕ್ಷಗಾದಿಗೇರಿದ್ದಾರೆ. ಇಲ್ಲಿನ ಜನರು ಹಿಂದೆ ರಾಜಕೀಯದಲ್ಲಿ ಅನಾಶಕ್ತಿ ಹೊಂದಿದ್ದರೂ ಇಂದು ರಾಜಕೀಯ ಪ್ರಜ್ಞೆ ಮೂಡಿದೆ. ಗ್ರಾಮಪಂಚಾಯ್ತಿ, ವಿಧಾನಸಭೆ, ಲೋಕಸಭೆ ಚುನಾವಣೆಗಳಲ್ಲಿ ಜನರ ಭಾಗವಹಿಸುವಿಕೆ, ಅವರ ಪ್ರಚಾರ ಇವರ ರಾಜಕೀಯ ಆಶಕ್ತಿಯನ್ನು ತೋರಿಸುತ್ತದೆ. ಇದುವರೆಗೂ ನಮ್ಮನ್ನು ಆಳಿರುವ ಸರ್ಕಾರಗಳು ನಮ್ಮ ಕಷ್ಟಗಳ ಕಡೆ ಕಿಂಚಿತ್ತೂ ಗಮನಹರಿಸಿಲ್ಲ. ಊರಿಗೆ ಒಂದು ಗ್ರಂಥಾಲಯವಿಲ್ಲ. ಒಂದು ಆರೋಗ್ಯಕೇಂದ್ರವಿಲ್ಲ. ಚರಂಡಿ ವ್ಯವಸ್ಥೆ ಸರಿ ಇಲ್ಲ. ರಸ್ತೆಗಳು ವ್ಯವಸ್ಥಿತವಾಗಿಲ್ಲ. ನಿರುದ್ಯೋಗ ಸಮಸ್ಯೆ ವಿದ್ಯಾವಂತ ಯುವಕರನ್ನು ಕಾಡುತ್ತಿದೆ. ಎಂಬುದು ಇಲ್ಲಿನ ಯುವಕರ ಆಪಾದನೆ. ಇದು ಕೇವಲ ಕಬ್ಬಾಳಿನಲ್ಲಿರುವ ಸಮಸ್ಯೆ ಅಷ್ಟೆ ಅಲ್ಲ. ಇಡೀ ಕಬ್ಬಾಳು ಕುಳಿಯಲ್ಲಿ ಬರುವ ಹಳ್ಳಿಗಳ ಸಮಸ್ಯೆಯಾಗಿದೆ. ರಾಜ್ಯ ರಾಜಕೀಯದಲ್ಲಿ ಪ್ರಭಾವಿ ರಾಜಕಾರಿಣಿಯಾಗಿದ್ದು ಸುಮಾರು ಇಪ್ಪತ್ತು ಮೂವತ್ತು ವರ್ಷಗಳಿಂದ ಗೆದ್ದುಬಂದಿರುವ ಮಾಜಿ ಸಚಿವರಾದ ಡಿ.ಕೆ.ಶಿವಕುಮಾರ್‌ರವರ ಕ್ಷೇತ್ರದಲ್ಲಿ ಇಂತ ಪರಿಸ್ಥಿತಿ ಇರುವುದು ದುರಂತವೇ ಸರಿ. ಇಲ್ಲಿನ ಯುವ ಪೀಳಿಗೆ ಸುಶಿಕ್ಷಿತರು. ಅಸಮಾನತೆ ಸಹಿಸದ ಪ್ರಜ್ಞಾವಂತ ಸ್ವಾಭಿಮಾನಿಗಳ ಮನಸ್ಸುಗಳು ಹಲವಾರಿವೆ. ಇವರುಗಳ ಪ್ರಶ್ನೆಗಳು ಇಲ್ಲಿನ ಪರಿಸ್ಥಿತಿಯನ್ನು ತಿಳಿಸುತ್ತವೆ.

ರಾಜ್ಯದಲ್ಲಿರುವ ಬಹುತೇಕ ಮಠಮಾನ್ಯಗಳೆಲ್ಲ ರಾಜಕೀಯಕ್ಕಿಳಿಯುತ್ತಿರುವ ಇಂದಿನ ಸಂದರ್ಭದಲ್ಲಿ ದೇವಸ್ಥಾನದೊಳಕ್ಕೆ ರಾಜಕೀಯ ಪ್ರವೇಶಿಸಿದೆ ಎನ್ನುವ ಮಾಧವಶರ್ಮರವರ ಮಾತು ಕಬ್ಬಾಳು ಇದರಿಂದ ಹೊರತಾಗಿಲ್ಲ ಎಂಬುದನ್ನು ಪುಷ್ಠೀಕರಿಸುತ್ತದೆ. ಆದರೂ ದೇವರು ಎಲ್ಲರನ್ನು ಸಮಾನವಾಗಿ ಕಂಡರೂ ದೇವರ ಹೆಸರಿನಲ್ಲಿ ರಾಜಕಾರಣ ಮಾಡುವುದು ಇಂದಿರುವ ಸ್ಥಿತಿ. ದೇವರು ವರ ಕೊಟ್ಟರು ಪೂಜಾರಿ ವರ ಕೊಡುವುದಿಲ್ಲ ಎಂಬ ಗಾದೆ ಪ್ರಸ್ತುತವೆನಿಸುತ್ತದೆ.

ಇಲ್ಲಿನ ಬಹುತೇಕರಿಗೆ ರಾಜಕೀಯ ಪ್ರಜ್ಞೆಮೂಡಿದ್ದು ರಾಜಕೀಯ ಅಧಿಕಾರದಿಂದ ಮಾತ್ರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮಾನತೆ ಸಾಧಿಸಲು ಸಾಧ್ಯ ಎಂಬುದು ಮನದಟ್ಟಾಗಿದೆ. "Political power is the master key through which you can open all the doors of progress" ಎಂಬ ಡಾ.ಬಾಬಾಸಾಹೇಬ್ ಅಂಬೇಡ್ಕರ್‌ರವರ ಮಾತು ತಮ್ಮೆಲ್ಲ ಸಮಸ್ಯೆಗಳಿಗೆ ಪರಿಹಾರವಾಗುತ್ತದೆ ಎಂಬುದನ್ನು ಇವರು ಅರ್ಥಮಾಡಿಕೊಳ್ಳಬೇಕಷ್ಟೇ ಅಲ್ಲದೆ ಅದನ್ನು ಅನುಸರಿಸಬೇಕು ಶ್ರದ್ಧೆಯಿಂದ ಗುರುಮುಟ್ಟುವವರೆಗೂ.

೩.೪. ಶೈಕ್ಷಣಿಕ ಸ್ಥಿತಿಗತಿ

ಭಾರತದ ಬಹುಜನರ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಬದಲಾವಣೆ ದೃಷ್ಟಿಯಿಂದ ಶಿಕ್ಷಣದ ಪಾತ್ರ ತುಂಬಾ ಮಹತ್ವದ್ದಾಗಿದೆ. ಸಾಮಾಜಿಕ ಮತ್ತು ಆರ್ಥಿಕಾಭಿವೃದ್ಧಿಯು ಶಿಕ್ಷಣದಿಂದ ಮಾತ್ರ ಸಾಧ್ಯ. ಒಂದು ಕಾಲದಲ್ಲಿ ಉಳ್ಳವರ. ಮೇಲವರ್ಗದವರ ಸ್ವತ್ತಾಗಿದ್ದ ಶಿಕ್ಷಣ "ಬ್ರಿಟೀಷರು ಇಡೀ ಭಾರತವನ್ನು ತಮ್ಮ ಕೈವಶಮಾಡಿಕೊಂಡ ಮೇಲೆ ಕ್ರಿ.ಶ. ೧೮೩೭ರಲ್ಲಿ ಮೆಕಾಲೆ ವರದಿಯನ್ನು ಆಧರಿಸಿ ಸಾರ್ವತ್ರಿಕ ಶಿಕ್ಷಣ

ಪದ್ಧತಿಯನ್ನು ಭಾರತಾದಾದ್ಯಂತ ಜಾರಿಗೊಳಿಸಿದರು. ಯಾರು ಬೇಕಾದರೂ ಶಿಕ್ಷಣವನ್ನು ಅದೂ ಇಂಗ್ಲೀಷಿನಲ್ಲಿ ಕಲಿಯುವ ಹಕ್ಕುನೀಡಿದರು"(ಡಾ. ಶಿವಕುಮಾರ: ಹಿಂದುಳಿದ ಜಾತಿಗಳ ಮೀಸಲಾತಿ v/s ಮನುವಾದಿ ಮೆರಿಟ್, ಪುಟ.೮). ಹೀಗೆ ಬ್ರಿಟೀಷರ ಆಗಮನದಿಂದಾಗಿ ಜನಸಾಮಾನ್ಯರಿಗೆ ಶಿಕ್ಷಣ ನೀಡುವ ಸಾರ್ವತ್ರಿಕ ಶಿಕ್ಷಣ ಪದ್ಧತಿ ಜಾರಿಗೆ ಬಂದ ಮೇಲೆ ಅಸಂಖ್ಯಾತ ಕ್ರೈಸ್ತ ಮಿಷನರಿಗಳು ಈ ದೇಶದ ಬಹುಜನರಾದ ಶೂದ್ರ ಅಸ್ಪೃಶ್ಯರಿಗೂ ಶಿಕ್ಷಣ ಕೊಡಲು ಮುಂದಾದವು. ಇಂತಹ ಕ್ರೈಸ್ತ ಶಾಲೆಯಲ್ಲಿ ಅಕ್ಷರ ಕಲಿತ ಮಹಾತ್ಮ ಜ್ಯೋತಿ ಬಾ ಪುಲೆ ಯವರು ತಮ್ಮ ಪತ್ನಿ ಭಾರತದ ಮೊದಲ ಮಹಿಳಾ ಶಿಕ್ಷಕಿಯಾದ ಮಾತೆ ಸಾವಿತ್ರಿಬಾಯಿ ಪುಲೆ ಯವರ ಸಹಕಾರದಿಂದ ಬ್ರಾಹ್ಮಣರ ಕಡು ವಿರೋಧದ ನಡುವೆಯೂ ಕ್ರಿ.ಶ. ೧೮೪೮ ರಲ್ಲಿ ಶೂದ್ರ ಅಸ್ಪೃಶ್ಯರಿಗೆ ಶಾಲೆಗಳನ್ನು ತೆರೆದರು. ಕೊಲ್ಹಾಪುರದ ಸಾಹುಮಹಾರಾಜ, ಬರೋಡದ ರಾಜ, ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ ಸಾಮಾಜಿಕ ಸಮಾನತೆಯ ರಾಜ್ಯಾಬಾರದ ಫಲವಾಗಿ ಡಾ.ಬಾಬಾಸಾಹೇಬರು ಉನ್ನತಶಿಕ್ಷಣಪಡೆದು ಭಾರತದ ಸರ್ವಜನಾಂಗಕ್ಕೂ ಸಮಾನತೆ ನೀಡಿರುವ ಸಂವಿಧಾನದಲ್ಲಿ ಶಿಕ್ಷಣವನ್ನು ಮೂಲಭೂತ ಹಕ್ಕಾಗಿ ಸೇರಿಸಿದ ಪರಿಣಾಮದಿಂದ, ಇಂದು ಭಾರತ ಪ್ರತಿಯೊಂದು ಸಮುದಾಯದ ಎಲ್ಲರೂ ಶಿಕ್ಷಣ ಪಡೆಯುವಂತಾಗಿದೆ.

ಇದರ ಪರಿಣಾಮದಿಂದ ಪ್ರಸ್ತುತ ಕಬ್ಬಾಳು ಪ್ರದೇಶದಲ್ಲಿ ಸರ್ಕಾರಿ ಪಾಠಶಾಲೆಯನ್ನು ತೆರೆದಿದ್ದು ಸಂಪೂರ್ಣ ಸರ್ಕಾರದ ಶಾಲೆಯಾಗಿದೆ. ಸ್ವಾತಂತ್ರ್ಯ ನಂತರ ಶಿಕ್ಷಣವನ್ನು ಜನಸಮೂಹಕ್ಕೆ ಒದಗಿಸುವ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಂಡಿತು. ಕಬ್ಬಾಳಿನಲ್ಲಿ ಮತ್ತು ಹೊಸಕಬ್ಬಾಳಿನಲ್ಲಿ ಸರ್ಕಾರ ಹಿರಿಯ ಪ್ರಾಥಮಿಕ ಪಾಠಶಾಲೆಯನ್ನು ತೆರೆದು ಇಂದಿಗೂ ಸರ್ಕಾರವೇ ಶಾಲೆಯನ್ನು ನಡೆಸುತ್ತಿದೆ. ಆದರೂ ಪ್ರತಿವರ್ಷದಿಂದ ವರ್ಷಕ್ಕೆ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತದೆ.

ಕೋಷ್ಟಕ ೧

ಹಿರಿಯ ಪ್ರಾಥಮಿಕ ಪಾಠಶಾಲೆ ಕಬ್ಬಾಳಿನ ವಿವಿಧ ವರ್ಷಗಳ ವಿದ್ಯಾರ್ಥಿಗಳ ದಾಖಲಾತಿ ಮತ್ತು ಹಾಜರಾತಿ ಸಂಖ್ಯೆ.

ಶೈಕ್ಷಣಿಕ ವರ್ಷ	ದಾಖಲಾತಿ	ಹಾಜರಾತಿ
೨೦೦೦-೨೦೦೧	೧೯೩	೧೯೩
೨೦೦೧-೨೦೦೨	೧೩೫	೧೩೫
೨೦೦೨-೨೦೦೩	೧೩೧	೧೩೧
೨೦೦೪-೨೦೦೫	೧೦೧	೧೦೦
೨೦೦೫-೨೦೦೬	೯೩	೯೩
೨೦೦೬-೨೦೦೭	೮೮	೮೮
೨೦೦೭-೨೦೦೮	೯೪	೯೪
೨೦೦೮-೨೦೦೯	೭೬	೭೬

೨೦೦೯-೨೦೧೦	೭೪	೭೪
೨೦೧೦-೨೦೧೧	೬೭	೬೭
೨೦೧೧-೨೦೧೨	೫೧	೫೧
೨೦೧೨-೨೦೧೩	೪೯	೪೯

೨೦೦೦-೨೦೦೧ ನೇ ವರ್ಷದಿಂದ ಇಂದಿನವರೆಗಿನ ಅಂದರೆ ೨೦೧೨-೧೩ನೇ ಸಾಲಿನವರೆಗಿನ ವಿದ್ಯಾರ್ಥಿಗಳ ದಾಖಲಾತಿ ಮತ್ತು ಹಾಜರಾತಿ ನೋಡಿದರೆ ಇವೆರಡರ ಮಧ್ಯೆ ಯಾವುದೇ ವ್ಯತ್ಯಾಸವಿಲ್ಲ. ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಶಾಲೆಬಿಟ್ಟ ಯಾವುದೇ ಉದಾಹರಣೆಗಳು ಇಲ್ಲ. ಆದರೆ ಅಂದಿನಿಂದ ಇಂದಿನವರೆಗೆ ಪ್ರತಿವರ್ಷದಿಂದ ವರ್ಷಕ್ಕೆ ಮಕ್ಕಳ ದಾಖಲಾತಿ ಸಂಖ್ಯೆಯೇ ಕಡಿಮೆಯಾಗುತ್ತಿದೆ. ೨೦೦೦-೦೧ ರಲ್ಲಿ (ಕೋಷ್ಠಕ ಒಂದನ್ನು ನೋಡಿ) ದಾಖಲಾದ ಶಾಲೆಯ ಒಟ್ಟು ಮಕ್ಕಳ ಸಂಖ್ಯೆ ೧೯೩ ಮಕ್ಕಳು ೨೦೧೨-೧೩ರಲ್ಲಿ ದಾಖಲಾದದ ಶಾಲೆಯ ಒಟ್ಟುಮಕ್ಕಳ ಸಂಖ್ಯೆ ಕೇವಲ ೪೯ಕ್ಕೆ ಇಳಿದಿದೆ.

ಕೋಷ್ಟಕ ೨

೨೦೧೨-೧೩ನೇ ಸಾಲಿನ ೧ ರಿಂದ ೭ನೇ ತರಗತಿವರೆಗಿನ ವಿವಿಧ ಸಮುದಾಯದ ವಿದ್ಯಾರ್ಥಿಗಳು

	ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ			ಓಬಿಸಿ		
ತರಗತಿ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
Ist	೨	--	೨	೧		೧	೨	೩	೫
II	--	೧	೧	--	--	--	೩	೧	೪
I	--	೨	೨	೨	೧	೩	೨	೧	೩
IV	--	೧	೧	--	--	--	೨	೧	೩
V	--	೧	೧	--	೩	೩	೧	೧	೨
IV	೧	೧	೨	೧	--	೧	೪	೬	೧೦
VII	--	--	--	--	೧	೧	೨	೨	೪
ಒಟ್ಟು	೩	೬	೯	೪	೫	೯	೧೬	೧೫	೩೧

ಇಲ್ಲಿ ಒಂದರಿಂದ ಏಳನೆಯ ತರಗತಿಗಳಲ್ಲಿನ ಮಕ್ಕಳ ಸಂಖ್ಯೆಯನ್ನು ಗಮನಿಸಿದಾಗ ಆಶ್ಚರ್ಯ ಉಂಟಾಗುತ್ತದೆ. ಪ್ರತಿ ತರಗತಿಯಲ್ಲಿ ೪,೬,೫,೭ ಹೀಗೆ ಮೊಬೈಲ್ ನಂಬರಿನ ಸಂಖ್ಯೆಯಂತೆ ವಿದ್ಯಾರ್ಥಿಗಳ ಸಂಖ್ಯೆ ಇದೆ. ಬಹುಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಈ ಸರ್ಕಾರಿ ಶಾಲೆಯಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳಲ್ಲಿ ಬಹುಸಂಖ್ಯೆಯವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಆರ್ಥಿಕವಾಗಿ ಹಿಂದುಳಿದವರಾಗಿದ್ದಾರೆ. ಆರ್ಥಿಕವಾಗಿ ಸದೃಢರಾಗಿರುವವರೆಲ್ಲ ಖಾಸಗಿ ಶಾಲೆಗಳಿಗೆ ಹೋಗುವವರ ಸಂಖ್ಯೆ ಹೆಚ್ಚಾಗಿದೆ. ಕಬ್ಬಾಳಿನಲ್ಲಿ ಯಾವುದೇ ಖಾಸಗಿ ಶಾಲೆ ಇಲ್ಲದಿದ್ದರೂ, ಪಕ್ಕದ ಐದು ಕಿ.ಮೀ. ದೂರವಿರುವ ಸಾತನೂರು ಮತ್ತು ಹದಿನೈದು ಕಿಲೋ.ಮೀ. ದೂರದ ಕನಕಪುರಕ್ಕೆ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳುಹಿಸುತ್ತಾರೆ. ಇವರು ಆರ್ಥಿಕವಾಗಿ ಸದೃಢರಾದವರಾಗಿರುತ್ತಾರೆ.

ನಮ್ಮ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಹೋಲಿಸಿದರೆ ಶಿಕ್ಷಕರ ಕೊರತೆ ಇಲ್ಲ, ಆದರೆ ವಿಷಯಕ್ಕೆ ಸಂಬಂಧಿಸಿದಂತೆ ಶಿಕ್ಷಕರ ಕೊರತೆ ಇದೆ. ಆದರೂ ವೀಕ್‌ಸ್ಟೂಡೆಂಟ್‌ಗಳಿಗೆ ಪೂರಕ ಬೋಧನೆಯನ್ನು ಮಾಡುತ್ತೇವೆ. ಕೆಲವು ಮಕ್ಕಳು ಜ್ಞಾಪಕಶಕ್ತಿಯ ಕೊರತೆಯಿಂದ ವೀಕ್‌ಇರುತ್ತಾರೆ. ಅಂತವರಿಗೆ ಪೂರಕ ಬೋಧನೆ ಮಾಡುತ್ತೇವೆ. ಆದರೂ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಇದಕ್ಕೆ ಪೋಷಕರ ಪ್ರತಿಷ್ಠೆಯೂ ಕೂಡ ಒಂದು. ತಮ್ಮ ಮಕ್ಕಳನ್ನು ಖಾಸಗಿ ಶಾಲೆಯಲ್ಲಿ ಓದಿಸಬೇಕು ಎಂಬ ಪ್ರತಿಷ್ಠೆ ಕೆಲವು ಪೋಷಕರಲ್ಲಿದೆ ಎನ್ನುತ್ತಾರೆ ಶಾಲೆಯ ಮುಖ್ಯೋಪಾಧ್ಯಾಯರಾದ ತೇನಾವತಿ. ಇದು ಹಿರಿಯ ಪ್ರಾಥಮಿಕ ಪಾಠಶಾಲೆಯ ಸ್ಥಿತಿಯಾಗಿದೆ.

ಕಬ್ಬಾಳಿನಲ್ಲಿ ಸರ್ಕಾರಿ ಪ್ರೌಢಶಾಲೆ ಇಲ್ಲ. ಕಬ್ಬಾಳಿನಲ್ಲಷ್ಟೇ ಅಲ್ಲ ನೆನ್ನೆ ಮೊನ್ನೆವರೆಗೂ ಪ್ರತಿಷ್ಠಿತ ವಿಧಾನಸಭಾ ಕ್ಷೇತ್ರವಾಗಿದ್ದ ಹಾಗೂ ಹೋಬಳಿಯಾಗಿರುವ ಸಾತನೂರಿನಲ್ಲಿಯೂ ಒಂದು ಸರ್ಕಾರಿ ಪ್ರೌಢಶಾಲೆಯಿಲ್ಲದಿರುವುದು ಆಶ್ಚರ್ಯವಷ್ಟೆ ಅಲ್ಲ ನೋವಿನ ಸಂಗತಿ. ಹೊಸಕಬ್ಬಾಳಿನಲ್ಲಿ ಸರ್ಕಾರದ ಮಾನ್ಯತೆ ಪಡೆದಿರುವ ಪ್ರೌಢಶಾಲೆಯಿದೆ. 'ಡಾ.ಬಿ.ಆರ್.ಅಂಬೇಡ್ಕರ್ ಪ್ರೌಢಶಾಲೆ ಹೊಸಕಬ್ಬಾಳು' ಇದು ೧೯೮೮ರಲ್ಲಿ ಹೊಸಕಬ್ಬಾಳಿನ ರಾಚಯ್ಯ ಎಂಬುವರ ಅಧ್ಯಕ್ಷತೆಯಲ್ಲಿ ಪ್ರಾರಂಭಗೊಂಡು ಬೆಂಗಳೂರಿನ ಅಂಬೇಡ್ಕರ್ ಮೆಡಿಕಲ್ ಕಾಲೇಜಿನವರು ಈ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಈ ಶಾಲೆಯ ದಾಖಲಾತಿಯನ್ನು ನೋಡಿದರೆ ಪ್ರೌಢಶಾಲೆಯು ಎಷ್ಟು ಅವಶ್ಯಕ ಎಂಬುದು ತಿಳಿಯುತ್ತದೆ.

ಕೋಷ್ಟಕ ೩

೨೦೦೦-೦೧ನೇ ಸಾಲಿನ ಪ್ರೌಢಶಾಲಾ ವಿದ್ಯಾರ್ಥಿಗಳ ಸಂಖ್ಯೆ ವಿವಿಧ ಸಮುದಾಯಗಳಲ್ಲಿ

	ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ			ಸಿ ೧			ಓಬಿಸಿ		
ತರಗತಿ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೮ನೇ	೪೪	೧೪	೫೮	--	--	೧	--	--	--	೪೩	೩೮	೮೧
೯ನೇ	೩೧	೧೦	೪೧	೨	--	೨	--	--	--	೪೦	೩೦	೭೦
೧೦ನೇ	೧೬	೭	೨೩	--	೧	೧	--	--	--	೨೨	೭	೨೯
ಒಟ್ಟು	೯೧	೩೧	೧೨೨	೨	೨	೪	--	--	--	೧೦೫	೭೫	೧೮೦

೨೦೦೧-೦೨ನೇ ಸಾಲಿನ ಪ್ರೌಢಶಾಲಾ ವಿದ್ಯಾರ್ಥಿಗಳ ಸಂಖ್ಯೆ ವಿವಿಧ ಸಮುದಾಯಗಳಲ್ಲಿ

	ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ			ಸಿ ೧			ಓಬಿಸಿ		
ತರಗತಿ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೮ನೇ	೩೧	೦೭	೩೮	೧	೧	೨	--	--	--	೪೮	೩೯	೮೭
೯ನೇ	೩೫	೧೫	೫೦	--	--	--	--	--	--	೩೪	೩೪	೬೮
೧೦ನೇ	೨೫	೮	೩೩	--	೧	೧	--	--	--	೩೧	೩೧	೬೨
ಒಟ್ಟು	೯೧	೩೦	೧೦೧	೧	೨	೩	--	--	--	೧೧೩	೧೦೪	೨೧೭

೨೦೦೨-೦೩ನೇ ಸಾಲಿನ ಪ್ರೌಢಶಾಲಾ ವಿದ್ಯಾರ್ಥಿಗಳ ಸಂಖ್ಯೆ ವಿವಿಧ ಸಮುದಾಯಗಳಲ್ಲಿ

ಪರಿಶಿಷ್ಟ ಜಾತಿ				ಪರಿಶಿಷ್ಟ ಪಂಗಡ			ಸಿ ೧			ಓಬಿಸಿ		
ತರಗತಿ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೮ನೇ	೨೨	೧೫	೩೭	೨	೧	೩	--	--	--	೪೯	೩೦	೭೯
೯ನೇ	೨೬	೧೧	೩೭	--	--	--	--	--	--	೪೨	೫೩	೭೭
೧೦ನೇ	೨೨	೧೧	೩೩	--	--	--	--	--	--	೨೭	೨೮	೫೫
ಒಟ್ಟು	೭೦	೩೭	೧೦೭	೨	೧	೩	--	--	--	೧೧೮	೯೩	೨೧೧

೨೦೦೩-೦೪ನೇ ಸಾಲಿನ ಪ್ರೌಢಶಾಲಾ ವಿದ್ಯಾರ್ಥಿಗಳ ಸಂಖ್ಯೆ ವಿವಿಧ ಸಮುದಾಯಗಳಲ್ಲಿ

ಪರಿಶಿಷ್ಟ ಜಾತಿ				ಪರಿಶಿಷ್ಟ ಪಂಗಡ			ಸಿ ೧			ಓಬಿಸಿ		
ತರಗತಿ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೮ನೇ	೨೧	೧೯	೪೦	--	--	--	--	--	--	೩೮	೪೩	೮೧
೯ನೇ	೧೮	೧೧	೨೯	೨	೧	೩	--	--	--	೪೭	೨೩	೭೦
೧೦ನೇ	೨೨	೮	೩೦	೧	--	೧	--	--	--	೩೭	೩೧	೬೮
ಒಟ್ಟು	೬೧	೩೮	೯೯	೩	೧	೪	--	--	--	೧೨೨	೯೭	೨೧೯

೨೦೦೪-೦೫ನೇ ಸಾಲಿನ ಪ್ರೌಢಶಾಲಾ ವಿದ್ಯಾರ್ಥಿಗಳ ಸಂಖ್ಯೆ ವಿವಿಧ ಸಮುದಾಯಗಳಲ್ಲಿ

ಪರಿಶಿಷ್ಟ ಜಾತಿ				ಪರಿಶಿಷ್ಟ ಪಂಗಡ			ಸಿ ೧			ಓಬಿಸಿ		
ತರಗತಿ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೮ನೇ	೨೫	೧೩	೩೮	೧	೨	೩	೧	೩	೪	೪೧	೪೬	೮೭
೯ನೇ	೨೨	೧೯	೪೧	--	--	--	--	--	--	೩೨	೪೦	೭೨
೧೦ನೇ	೧೬	೧೦	೨೬	೨	೧	೩	--	೧	೧	೪೧	೨೦	೬೧
ಒಟ್ಟು	೬೩	೪೨	೧೦೫	೩	೩	೬	೧	೪	೫	೧೧೪	೧೦೬	೨೨೦

೨೦೦೫-೦೬ನೇ ಸಾಲಿನ ಪ್ರೌಢಶಾಲಾ ವಿದ್ಯಾರ್ಥಿಗಳ ಸಂಖ್ಯೆ ವಿವಿಧ ಸಮುದಾಯಗಳಲ್ಲಿ

ಪರಿಶಿಷ್ಟ ಜಾತಿ				ಪರಿಶಿಷ್ಟ ಪಂಗಡ			ಸಿ ೧			ಓಬಿಸಿ		
ತರಗತಿ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೮ನೇ	೧೯	೧೫	೩೪	೧	೧	೨	--	೧	೧	೩೩	೧೮	೫೧
೯ನೇ	೨೨	೧೨	೩೪	--	೧	೧	೧	೩	೪	೩೦	೪೪	೭೪
೧೦ನೇ	೧೫	೧೮	೩೩	--	--	--	--	೧	೧	೨೯	೩೧	೬೦
ಒಟ್ಟು	೫೬	೪೫	೧೦೧	೧	೨	೩	೧	೫	೬	೯೨	೯೩	೧೮೫

೨೦೦೬-೦೭ನೇ ಸಾಲಿನ ಪ್ರೌಢಶಾಲಾ ವಿದ್ಯಾರ್ಥಿಗಳ ಸಂಖ್ಯೆ ವಿವಿಧ ಸಮುದಾಯಗಳಲ್ಲಿ

ಪರಿಶಿಷ್ಟ ಜಾತಿ				ಪರಿಶಿಷ್ಟ ಪಂಗಡ			ಸಿ ೧			ಓಬಿಸಿ		
ತರಗತಿ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೮ನೇ	೧೦	೧೩	೨೩	೧	--	೧	೪	--	೪	೨೨	೧೯	೪೧
೯ನೇ	೧೮	೧೫	೩೩	೧	--	೧	೧	೧	--	೩೧	೨೧	೫೨
೧೦ನೇ	೧೯	೯	೨೮	೧	೧	೨	೧	೩	೪	೨೯	೪೦	೬೯
ಒಟ್ಟು	೪೭	೩೭	೮೪	೩	೧	೪	೫	೪	೯	೮೨	೮೦	೧೬೨

೨೦೦೭-೦೮ನೇ ಸಾಲಿನ ಪ್ರೌಢಶಾಲಾ ವಿದ್ಯಾರ್ಥಿಗಳ ಸಂಖ್ಯೆ ವಿವಿಧ ಸಮುದಾಯಗಳಲ್ಲಿ

ಪರಿಶಿಷ್ಟ ಜಾತಿ				ಪರಿಶಿಷ್ಟ ಪಂಗಡ			ಸಿ ೧			ಓಬಿಸಿ		
ತರಗತಿ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೮ನೇ	೧೦	೧೪	೨೪	--	೨	೨	--	--	--	೨೩	೫೨	೮೬೩
೯ನೇ	೫	೧೨	೧೭	--	--	--	--	೦೩	೦೩	೨೨	೧೬	೩೮
೧೦ನೇ	೧೬	೧೪	೩೦	೦೧	೦೧	೦೨	--	೦೧	೦೧	೨೭	೧೯	೪೬
ಒಟ್ಟು	೩೧	೪೦	೭೧	೦೧	೦೩	೦೪	೦೩	೦೧	೦೪	೮೪	೬೩	೧೪೭

೨೦೦೮-೦೯ನೇ ಸಾಲಿನ ಪ್ರೌಢಶಾಲಾ ವಿದ್ಯಾರ್ಥಿಗಳ ಸಂಖ್ಯೆ ವಿವಿಧ ಸಮುದಾಯಗಳಲ್ಲಿ

ಪರಿಶಿಷ್ಟ ಜಾತಿ				ಪರಿಶಿಷ್ಟ ಪಂಗಡ			ಸಿ ೧			ಓಬಿಸಿ		
ತರಗತಿ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೮ನೇ	೧೯	೧೭	೩೬	--	--	--	೦೧	೦೨	೦೩	೩೦	೨೫	೫೫
೯ನೇ	೦೬	೧೧	೧೭	--	೦೨	೦೨	--	--	--	೨೯	೨೪	೫೩
೧೦ನೇ	೦೩	೧೧	೧೪	೦೧	--	೦೧	೦೨	--	೦೨	೧೬	೧೧	೨೭
ಒಟ್ಟು	೨೮	೩೯	೬೭	೦೧	೦೨	೦೩	೦೩	೦೨	೦೫	೭೫	೬೦	೧೩೫

೨೦೦೯-೧೦ನೇ ಸಾಲಿನ ಪ್ರೌಢಶಾಲಾ ವಿದ್ಯಾರ್ಥಿಗಳ ಸಂಖ್ಯೆ ವಿವಿಧ ಸಮುದಾಯಗಳಲ್ಲಿ

ಪರಿಶಿಷ್ಟ ಜಾತಿ				ಪರಿಶಿಷ್ಟ ಪಂಗಡ			ಸಿ ೧			ಓಬಿಸಿ		
ತರಗತಿ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೮ನೇ	೧೧	೦೬	೧೭	--	೦೧	೦೧	೦೪	೦೧	೦೫	೧೯	೨೬	೪೫
೯ನೇ	೧೬	೧೫	೩೧	--	--	--	೦೧	೦೧	೦೨	೨೬	೨೦	೪೬
೧೦ನೇ	೦೩	೧೦	೧೩	--	೦೧	೦೧	--	--	--	೨೨	೨೩	೪೫
ಒಟ್ಟು	೩೦	೩೧	೬೧	--	೦೨	೦೨	೦೫	೦೨	೦೭	೬೭	೬೯	೧೩೬

೨೦೧೦-೧೧ನೇ ಸಾಲಿನ ಪ್ರೌಢಶಾಲಾ ವಿದ್ಯಾರ್ಥಿಗಳ ಸಂಖ್ಯೆ ವಿವಿಧ ಸಮುದಾಯಗಳಲ್ಲಿ

ಪರಿಶಿಷ್ಟ ಜಾತಿ				ಪರಿಶಿಷ್ಟ ಪಂಗಡ			ಸಿ ೧			ಓಬಿಸಿ		
ತರಗತಿ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೮ನೇ	೦೬	೧೪	೨೦	೦೧	೦೧	೦೨	೦೩	--	೦೩	೨೨	೨೬	೪೮
೯ನೇ	೧೧	೦೩	೧೪	--	೦೧	೦೧	೦೧	೦೧	೦೨	೧೯	೨೫	೪೪
೧೦ನೇ	೧೩	೧೧	೨೪	--	--	೦೧	೦೧	--	೦೨	೧೭	೧೬	೩೩
ಒಟ್ಟು	೩೦	೨೮	೫೮	೦೧	೦೨	೦೩	೦೫	೦೨	೦೭	೫೮	೬೭	೧೨೫

೨೦೧೧-೧೨ನೇ ಸಾಲಿನ ಪ್ರೌಢಶಾಲಾ ವಿದ್ಯಾರ್ಥಿಗಳ ಸಂಖ್ಯೆ ವಿವಿಧ ಸಮುದಾಯಗಳಲ್ಲಿ

ಪರಿಶಿಷ್ಟ ಜಾತಿ				ಪರಿಶಿಷ್ಟ ಪಂಗಡ			ಸಿ ೧			ಓಬಿಸಿ		
ತರಗತಿ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೮ನೇ	೦೮	೧೩	೨೧	೦೪	೦೨	೦೬	--	೦೧	೦೧	೨೩	೧೭	೪೦
೯ನೇ	೦೭	೧೩	೨೦	--	--	--	--	೦೩	೦೩	೧೮	೨೫	೪೩
೧೦ನೇ	೦೯	೦೩	೧೨	೦೧	೦೧	೦೧	--	೦೧	೦೨	೧೫	೧೭	೩೨
ಒಟ್ಟು	೨೪	೨೯	೫೩	೦೪	೦೩	೦೭	೦೪	೦೨	೦೬	೫೬	೫೯	೧೧೫

೨೦೧೧-೧೨ನೇ ಸಾಲಿನ ಪ್ರೌಢಶಾಲಾ ವಿದ್ಯಾರ್ಥಿಗಳ ಸಂಖ್ಯೆ ವಿವಿಧ ಸಮುದಾಯಗಳಲ್ಲಿ

ಪರಿಶಿಷ್ಟ ಜಾತಿ				ಪರಿಶಿಷ್ಟ ಪಂಗಡ			ಸಿ ೧			ಓಬಿಸಿ		
ತರಗತಿ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೮ನೇ	೦೮	೦೮	೧೬	೦೨	--	೦೨	೦೧	--	೦೧	೨೦	೧೬	೩೬
೯ನೇ	೦೬	೧೩	೧೯	೦೫	೦೨	೦೭	--	೦೧	೦೧	೧೯	೧೬	೩೫
೧೦ನೇ	೦೬	೧೨	೧೮	--	೦೧	೦೧	--	೦೩	೦೩	೧೬	೨೬	೪೨
ಒಟ್ಟು	೨೦	೩೩	೫೩	೦೭	೦೩	೧೦	೦೪	೦೧	೦೫	೫೫	೫೮	೧೧೩

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಹತ್ತು ವರ್ಷಗಳ ಹಿಂದಿನ ದಾಖಲಾತಿಗೆ ಹೋಲಿಸಿದಾಗ ಶಾಲೆಯ ಒಟ್ಟು ಮಕ್ಕಳ ಪ್ರಮಾಣ ಹಂತಹಂತವಾಗಿ ನಿಧಾನವಾಗಿ ಕಡಿಮೆಯಾಗುತ್ತಿದೆ. ಶಾಲೆಯ ಒಟ್ಟು ಮಕ್ಕಳ ದಾಖಲಾತಿಯಲ್ಲಿ ಗಂಡುಮಕ್ಕಳ ದಾಖಲಾತಿ ಮೊದಲು ಹೆಣ್ಣುಮಕ್ಕಳಿಗಿಂತ ಹೆಚ್ಚಾಗಿದ್ದರು ನಂತರ ಹಂತ ಹಂತವಾಗಿ ಕಡಿಮೆಯಾಗಿದೆ. ಆದರೆ ಹೆಣ್ಣು ಮಕ್ಕಳ ದಾಖಲಾತಿ ಹಂತ ಹಂತವಾಗಿ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತದೆ. ಅದರಲ್ಲೂ ಪರಿಶಿಷ್ಟಜಾತಿಯ ಹೆಣ್ಣುಮಕ್ಕಳ ಸಂಖ್ಯೆ ಇತರೆ ಹೆಣ್ಣುಮಕ್ಕಳ ದಾಖಲಾತಿ ಪ್ರಮಾಣಕ್ಕಿಂತಲೂ ಹೆಚ್ಚಾಗಿಯೇ ಇದೆ. ಇದು ಹೆಣ್ಣುಮಕ್ಕಳ ಶಿಕ್ಷಣವು ಪೂರಕವಾಗಿ ನಡೆಯುತ್ತಿದೆ ಎಂಬುದನ್ನು ಸೂಚಿಸುತ್ತದೆ.

ಕೋಷ್ಟಕ ೪

ಪ್ರೌಢಶಾಲೆಯ ೧೦ನೇ ತರಗತಿಯ ವಿವಿಧ ವರ್ಷಗಳ ಫಲಿತಾಂಶ ಶೇಕಡಾ ವಾರುಗಳಲ್ಲಿ

ಶೈಕ್ಷಣಿಕ ವರ್ಷ	ಪರೀಕ್ಷೆಗೆ ಕುಳಿತವರು	ಉತ್ತೀರ್ಣರಾದವರು	ಶೇಕಡಾವಾರು
೨೦೦೧-೨೦೦೨	೧೧೩	೧೦೫	೯೨%
೨೦೦೨-೦೩	೮೬	೩೬	೪೧.೮%
೨೦೦೩-೦೪	೯೪	೫೯	೬೨.೭%
೨೦೦೪-೦೫	೯೧	೬೩	೬೯.೨%
೨೦೦೫-೦೬	೯೦	೭೮	೮೦%
೨೦೦೬-೦೭	೧೦೦	೫೭	೫೭%
೨೦೦೭-೦೮	೭೫	೪೬	೬೩%
೨೦೦೮-೦೯	೪೪	೩೮	೮೬%
೨೦೦೯-೧೦	೫೯	೩೬	೬೧%
೨೦೧೦-೧೧	೫೭	೪೬	೭೭%
೨೦೧೧-೧೨	೪೬	೪೦	೮೭%

ಪ್ರತಿವರ್ಷವು ಹತ್ತನೇ ತರಗತಿಯ ಪರೀಕ್ಷೆಗೆ ಕುಳಿತ ಮಕ್ಕಳ ಸಂಖ್ಯೆ ಮತ್ತು ಉತ್ತೀರ್ಣರಾದ ಮಕ್ಕಳ ಸರಾಸರಿ ವರ್ಷದಿಂದ ವರ್ಷಕ್ಕೆ ಉತ್ತಮ ಗೊಳ್ಳುತ್ತಿದೆ ಹೆಣ್ಣುಮಕ್ಕಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದ್ದು ಫಲಿತಾಂಶದಲ್ಲಿ ಹೆಣ್ಣುಮಕ್ಕಳದ್ದೇ ಮೇಲು ಗೈ ಎನ್ನುತ್ತಾರೆ ಶಾಲೆಯ ಮುಖ್ಯೋಪಾಧ್ಯಾಯರಾದ ಸಿ.ಪುಟ್ಟಸ್ವಾಮಿಯವರು.

ಪದವಿಪೂರ್ವ ಮತ್ತು ಪದವಿ ಶಿಕ್ಷಣ ಪಡೆಯಲು ತಾಲೂಕುಕೆಂದ್ರವಾದ ಕನಕಪುರವನ್ನೇ ಆಶ್ರಯಿಸಿದೆ. ಕಬ್ಬಾಳಿನಿಂದ ೧೬ ಕಿ.ಮೀ.ದೂರವಿರುವ ಕನಕಪುರದಲ್ಲಿ ೫ ಪದವಿಪೂರ್ವ ಕಾಲೇಜುಗಳು ಇದ್ದು ಒಂದು ಮಾತ್ರ ಸರ್ಕಾರಿ ಕಾಲೇಜಾಗಿದೆ. ಎರಡು ಪದವಿ ಕಾಲೇಜುಗಳಿದ್ದು ಒಂದು ಸರ್ಕಾರಿ ಕಾಲೇಜಾದರೆ ಮತ್ತೊಂದು ಖಾಸಗಿ ಕಾಲೇಜಾಗಿದೆ. ಸರ್ಕಾರದ ಅನುದಾನಕ್ಕೊಳಪಟ್ಟಿರುವ ಈ ರೂರಲ್ ಪದವಿಕಾಲೇಜು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿಗಳಲ್ಲಿ ಯಾವುದೇ ತಾರತಮ್ಯ ತೋರುವುದಿಲ್ಲ. ನೂರರಿಂದ ಎರಡು ನೂರು ರೂಪಾಯಿಗಳಷ್ಟು ವ್ಯಾತ್ಯಾಸ ಬಿಟ್ಟರೆ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳ ಮತ್ತು ಇತರೆ ವಿದ್ಯಾರ್ಥಿಗಳ ನಡುವೆ ಯಾವುದೇ ವ್ಯತ್ಯಾಸ ಕಾಣುವುದಿಲ್ಲ. ಶುಲ್ಕ ವಸೂಲಿಗೆ ಮುಂದಿರುವ ರೂರಲ್ ಕಾಲೇಜು, ಕಾಲೇಜಿನ ಮೂಲಸೌಕರ್ಯ, ಗ್ರಂಥಾಲಯ, ಕ್ರೀಡೆಗಳಲ್ಲಿ ಬಹಳ ಒಂದಿದೆ ಎಂದೇ ಹೇಳಬಹುದು. ಕಬ್ಬಾಳಿಗೆ ಬಹಳ ಹತ್ತಿರವಿರುವ ಸಾತನೂರಿನಲ್ಲೂ ಪದವಿಪೂರ್ವ ಕಾಲೇಜು ಇದ್ದು, ಇದು ರೂರಲ್ ಕಾಲೇಜಿನ ಅಂಗಸಂಸ್ಥೆಯಾಗಿದೆ. ಈ ಕಾಲೇಜಿನಲ್ಲೂ ಶುಲ್ಕ ವಿನಾಯಿತಿಯಿಲ್ಲ.

ಪರಿಶಿಷ್ಟ ವಿದ್ಯಾರ್ಥಿಗಳಿಗೆ ಶುಲ್ಕಪಾವತಿಸಲು ಸಾಧ್ಯವಾಗದೆ ಹದಿನೈದು ಇಪ್ಪತ್ತು ಕಿ.ಮೀ.ಗಳಷ್ಟು ದೂರ ಸಾಗಬೇಕಾಗಿದೆ.

ಸಾತನೂರು ಕನಕಪುರ ತಾಲೂಕಿನ ಪ್ರತಿಷ್ಠಿತ ಹೋಬಳಿಯಾಗಿದೆ. ಸಾಲದಕ್ಕೆ ರಾಜ್ಯದ ಪ್ರತಿಷ್ಠಿತ ರಾಜಕಾರಣಿಯನ್ನು ರಾಜ್ಯಕ್ಕೆ ಪರಿಚಯಿಸಿದ ವಿಧಾನಸಭಾ ಕ್ಷೇತ್ರವೂ ಹೌದು. ಇಂತಹ ಪ್ರತಿಷ್ಠಿತ ರಾಜಕೀಯ ವ್ಯಕ್ತಿಯ ಕ್ಷೇತ್ರವಾಗಿದ್ದ ಸಾತನೂರಿನಲ್ಲಿ ಒಂದು ಸರ್ಕಾರಿ ಪ್ರೌಢಶಾಲೆ ಇಲ್ಲ ಎಂದರೆ ಎಲ್ಲರೂ ತಲೆತಗ್ಗಿಸುವ ವಿಚಾರವೇ ಸರಿ. ಸರ್ಕಾರಿ ಶಾಲೆಯಲ್ಲಿ ಎಪ್ಪತ್ತು ಎಂಬತ್ತು ರೂಪಾಯಿ ಶುಲ್ಕವಾದರೆ ಖಾಸಗಿ ಶಾಲೆಗಳಲ್ಲಿ ಸಾವಿರಾರು ರೂಪಾಯಿಗಳನ್ನು ಕಟ್ಟಬೇಕು. ಬಡಜನರು ಇಷ್ಟೊಂದು ಶುಲ್ಕವನ್ನು ತರುವುವಾದರು ಎಲ್ಲಿ? ಸರ್ಕಾರ ಶಾಲಾಶಿಕ್ಷಣವನ್ನು ಸಾರ್ವತ್ರಿಕವಾಗಿ ಉಚಿತ ಮತ್ತು ಕಡ್ಡಾಯವಾಗಿ ೦೬-೧೪ರ ನಡುವಣ ವಯೋಮಾನದ ಎಲ್ಲಾ ಮಕ್ಕಳಿಗೂ ನೀಡಬೇಕು ಎನ್ನುವ ಬೇಡಿಕೆ ನಮ್ಮ ಸಂವಿಧಾನ ರಚನೆಯ ಪೂರ್ವದ ಆಶಯವಾಗಿದ್ದು, ಇದನ್ನು ಸರ್ಕಾರ ಆರ್.ಟಿ.ಇ. ೨೦೦೯ಅಂದರೆ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯಿದೆ ೨೦೦೯ನ್ನು ಜಾರಿಮಾಡಿದೆ. ಅವಶ್ಯಕತೆ ಇರುವ ಸ್ಥಳಗಳಲ್ಲಿ ಶಾಲೆಯೇ ಇಲ್ಲವಾದರೆ ಕಡ್ಡಾಯ ಶಿಕ್ಷಣ ಕಾಯಿದೆಯನ್ನು ಜಾರಿ ಮಾಡಿ ಏನು ಪ್ರಯೋಜನವಾಗುತ್ತದೆ ಅಲ್ಲವೆ.

ಮತ್ತೊಂದು ಅಘಾತಕಾರಿ ವಿಷಯವೆಂದರೆ ಮಕ್ಕಳ ಸಂಖ್ಯೆಯ ಕುಸಿತದ ನೆಪ ಹೇಳಿ ಸರ್ಕಾರಿ ಶಾಲೆಗಳನ್ನು ಅದರಲ್ಲಿಯೂ ಗ್ರಾಮೀಣ ಪ್ರದೇಶಗಳ ಶಾಲೆಗಳನ್ನು ಮುಚ್ಚುವ ವಿಚಾರ. ದಿನ ದಿನವೂ ಹೆಚ್ಚುತ್ತಿರುವ ಜನಸಂಖ್ಯೆಗೆ ಶಾಲೆಗಳೇ ಸಾಲದಾಗಿವೆ. ಶಾಲೆಗಳಲ್ಲಿ ಮಕ್ಕಳಿಲ್ಲ ಎಂದರೆ ಆಶ್ಚರ್ಯವಾಗುತ್ತದೆ. "ಈ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ೧೦ ಕ್ಕಿಂತ ಕಡಿಮೆ ಇರುವ ಕಾರಣದಿಂದ ಇಂಥ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಎಂಬ ಸಮಜಾಯಿಸಿ ನೀಡಲಾಗಿದೆ. ಆದರೆ ಸರಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲು ಕಡಿಮೆಯಾಗಲು ಕಾರಣವೇನು ಎಂಬುದರ ಬಗ್ಗೆಯಾಗಲೀ ಅಥವಾ ೧೯೯೬ ನಂತರ ಹೆಚ್ಚುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳು ಶಿಕ್ಷಣದ ಖಾಸಗಿ ವೆಚ್ಚ ಮತ್ತು ಶಾಲಾ ಶಿಕ್ಷಣದ ವ್ಯಾಪಾರೀಕರಣವನ್ನು ನಿಯಂತ್ರಿಸುವ ಮತ್ತು ನಿಷೇಧಿಸುವ ಕುರಿತಾಗಲಿ ಸಭೆಯಲ್ಲಿ ಯಾವ ಚರ್ಚೆಯೂ ಇಲ್ಲ"(ಎಚ್.ಡಿ.ಪ್ರಶಾಂತ್, ಸಂವಾಗದ ಮಾಸಪತ್ರಿಕೆ, ಜೂನ್, ೨೦೧೩, ಹಳ್ಳಿಮಕ್ಕಳ ಆತಂಕಗಳು ಮತ್ತು ಸವಾಲುಗಳು, ಪುಟ.೧೧೩). ಸರ್ಕಾರ ಸರ್ಕಾರಿ ಶಾಲೆಗಳಲ್ಲೇ ಅದರಲ್ಲು ಹಳ್ಳಿ ಶಾಲೆಗಳಲ್ಲೇ ಏಕೆ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ. ಅಥವಾ ಆಗುತ್ತಿದೆ ಎಂಬ ಬಗ್ಗೆ ಕಿಂಚಿತ್ತೂ ಯೋಚಿಸಿದಂತೆ ಕಾಣುತ್ತಿಲ್ಲ. ಸರ್ಕಾರಕ್ಕೆ ಕಾಣುವುದು ಕೇವಲ ಆರ್ಥಿಕ ಹೊರೆಮಾತ್ರವಾಗಿದೆ. ಏಕೆಂದರೆ ಪ್ರಸ್ತುತ ಕಬ್ಬಾಳು ಹಿರಿಯ ಪ್ರಾಥಮಿಕ ಶಾಲೆಯ ಕೋಷ್ಟಕ ಒಂದನ್ನು ನೋಡಿರಿ ಅಥವಾ ಪ್ರೌಢಶಾಲೆಯ ಮಕ್ಕಳ ಸಂಖ್ಯೆಯನ್ನು ಗಮನಿಸಿದಾಗ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಲೇ ಇದೆ. ಇದು ಕೇವಲ ನಾಲ್ಕು ವರ್ಷಕಳೆದರೆ ಸರ್ಕಾರದ ನೀತಿಯ ಪ್ರಕಾರ ಕಬ್ಬಾಳು ಶಾಲೆಯನ್ನು ಮುಚ್ಚುವ ಅಥವಾ ವಿಲೀನಗೊಳಿಸುವ ಸ್ಥಿತಿ ಬರುವ ಸಾಧ್ಯತೆ ಹೆಚ್ಚಾಗಿದೆ. ಇದಕ್ಕೆ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ. ಸರ್ಕಾರಿ ಶಾಲೆಗಳ ಈ ಸಮಸ್ಯೆಗೆ ಮೂಲಕಾರಣಗಳನ್ನು ಕಂಡುಹಿಡಿದು ನಂತರ ಆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಉತ್ತಮ.

ಇನ್ನು ಇಲ್ಲಿ ಶಿಕ್ಷಣ ನೀಡುತ್ತಿರುವ ವಿಧಾನ ಅಥವಾ ಪದ್ಧತಿಗಳನ್ನು ನೋಡಿದರೆ ಕೇವಲ ಅಂಕಗಳಿಗೆ ಮಾತ್ರ ಸಂಬಂಧಿಸಿದೆ. ವಿದ್ಯಾರ್ಥಿಯೊಳಗಿರುವ ಎಲ್ಲಾ ಮಹತ್ತರವಾದ ಹೊಲ, ಮನೆ, ನೆಲ, ಜಲ, ಸಂಸ್ಕೃತಿ, ಕಲೆ, ಸಾಹಿತ್ಯ, ಆಕಾಶ, ಪ್ರಕೃತಿ, ಕುಶಲಕಲೆ ಮುಂತಾದ ಮಹತ್ವದ ಪ್ರತಿಭೆಗಳ ಲೆಕ್ಕಾಚಾರಕ್ಕೂ, ಈಗಿನ ನಮ್ಮಲ್ಲಿನ ಮೆರಿಟ್ ಎಂಬ ಅಂಕಗಳಿಕೆಯ ಶಿಕ್ಷಣಕ್ಕೂ ಯಾವ ಸಂಬಂಧವೂ ಇಲ್ಲ. ವಿದ್ಯಾರ್ಥಿಗಳು ತಮ್ಮ ಶಾಲಾ-ಕಾಲೇಜುಗಳಲ್ಲಿ ವ್ಯಸನಿಯಾಗಿರಲಿ, ಕ್ರೂರಿಯಾಗಿರಲಿ, ಸ್ವಾರ್ಥಿಯಾಗಿರಲಿ ಅಥವಾ ದ್ರೋಹಿಯಾಗಿರಲಿ ಅವನು ಪರೀಕ್ಷೆಯಲ್ಲಿ ಶೇ.೯೦ಕ್ಕೂ ಹೆಚ್ಚು ಅಂಕಪಡೆದರೆ ಅವನು ಪ್ರತಿಭಾವಂತವಾಗುತ್ತಾನೆ. ಆದರೆ ವಿದ್ಯಾರ್ಥಿಯೊಬ್ಬ ಎಷ್ಟೇ ಪ್ರಾಮಾಣಿಕನಾಗಿರಲಿ, ಪರೋಪಕಾರಿಯಾಗಿರಲಿ, ಸಮಾಜವ ಬಗ್ಗೆ ಕಳಕಳಿಯುಳ್ಳವನಾಗಿರಲಿ, ಅವನು ಪರೀಕ್ಷೆಯಲ್ಲಿ ಶೇ ೫೦ ಅಂಕಪಡೆದರೂ ಪ್ರತಿಭಾವಂತನಲ್ಲ ಎನಿಸುತ್ತಾನೆ. ಆದರೆ ಅಂಕಗಳನ್ನು ಪಡಯುವುದು ಯಾವುದರಿಂದ ನಿರ್ಧಾರವಾಗುತ್ತಿದೆ ಎಂದರೆ ವಿದ್ಯಾರ್ಥಿಯ ನೆನಪಿನ ಶಕ್ತಿಯಿಂದ ಹಾಗೂ ಆ ವಿದ್ಯಾರ್ಥಿ ತಾನು ನೆನಪಿಟ್ಟು ಕೊಂಡಿದ್ದನ್ನು ಸರಿಯಾದ ಸಮಯದಲ್ಲಿ ಅಚ್ಚುಕಟ್ಟಾಗಿ ಬರೆಯುವುದರಿಂದ. ನೆನಪಿನ ಶಕ್ತಿ ಮತ್ತು ಬರೆಯುವ ಕೌಶಲ್ಯ ಅವನಿಗೆ ಹೇರಳವಾದ ಅಂಕಗಳನ್ನು ತಂದುಕೊಡುತ್ತದೆ.ಇದು ನಮ್ಮ ದೇಶದ ಪರೀಕ್ಷಾ ವಿಧಾನವಾಗಿದೆ. ವರ್ಷವಿಡೀ ಓದಿ ವರ್ಷಕ್ಕೆ ಒಂದು ಬಾರಿ ಇಲ್ಲವೆ ಎರಡು ಬಾರಿ ಅದರಲ್ಲೂ ಕೇವಲ ಮೂರು ಗಂಟೆಗಳಲ್ಲಿ ಪರೀಕ್ಷೆ ಬರೆಸುವ ಪದ್ದತಿ ನಮ್ಮಲ್ಲಿದೆ. ಈ ಅಂಕಗಳಿಸುವುದು ವಿದ್ಯಾರ್ಥಿಯ ನೆನಪಿನ ಶಕ್ತಿ ಮತ್ತು ಬರೆಯುವ ಕೌಶಲ್ಯವನ್ನು ಅವಲಂಬಿಸಿದೆ. ವಿದ್ಯಾರ್ಥಿಯೊಳಗಿರುವ ಇನ್ನಾವುದೇ ಪ್ರತಿಬೆ, ನೀತಿ, ಶೀಲ, ಅನುಕಂಪ ಇನ್ನಾವುದನ್ನೂ ಮೆರಿಟ್ ಅವಲಂಬಿಸಿಲ್ಲ. "ಸದ್ಯಕ್ಕೆ ಭಾರತ ದೇಶದಲ್ಲಿ ಅತ್ಯಂತ ಹೆಚ್ಚು memory power (ನೆನಪಿನಶಕ್ತಿ) ಮತ್ತು writing skill (ಬರೆಯುವಕೌಶಲ್ಯ) ಹೊಂದಿರುವವರು ಯಾರು ಎಂದರೆ ಸಾಮಾನ್ಯವಾಗಿ ಬ್ರಾಹ್ಮಣರು ಎಂದು ಥಟ್ಟನೆ ಉತ್ತರಿಸಬಹುದು. ಏಕೆಂದರೆ ಅವರು ದೇಶದಲ್ಲಿ ಕನಿಷ್ಟವೆಂದರೂ ಮೂರು ಮೂರುವರೆ ಸಾವಿರ ವರ್ಷಗಳಿಂದ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಅದರಲ್ಲೂ ಸದಾ ಮಂತ್ರ ಪಠಣ ಮಾಡುವುದೇ ಅವರ ವೃತ್ತಿ. ಹೀಗಾಗಿ ಅವರಿಗೆ ನೆನಪಿನಲ್ಲಿಟ್ಟುಕೊಳ್ಳುವ ಕೆಲಸ ಅವರ ಜೀವನದ ಒಂದು ಭಾಗವಾಗಿಯೇ ಬಂದಿದೆ. ಎಂತಲೇ ಈ ದೇಶದ ಶಿಕ್ಷಣ ಪದ್ಧತಿ ಕೂಡ ಈ ನೆನಪಿಟ್ಟುಕೊಳ್ಳುವ ಶಕ್ತಿಯನ್ನು ಪರೀಕ್ಷೆ ಮಾಡುವ ವಿಧಾನದಿಂದಲೇ ರೂಪಿತವಾಗಿದೆ"(ಡಾ.ಶಿವಕುಮಾರ, ಹಿಂದುಳಿದ ಜಾತಿಗಳ ಮೀಸಲಾತಿ v/s ಮನುವಾದಿಗಳ ಮೆರಿಟ್, ಪುಟ.೨೬). ಹೀಗೆ ರೂಪಿತವಾದ ಶಿಕ್ಷಣ ವಿಧಾನ ವರ್ಷವಿಡೀ ಓದಿ ವರ್ಷದ ಕೊನೆಯಲ್ಲೊಂದು ದಿನ ಅದರಲ್ಲೂ ಕೇವಲ ಮೂರು ಗಂಟೆಗಳಲ್ಲಿ ಪರೀಕ್ಷೆ ಬರೆಯುವ ಪದ್ಧತಿ ಈಗ ನಮ್ಮಲ್ಲಿದೆ ಇದು ಬ್ರಾಹ್ಮಣರಿಗೆ ಹೇಳಿ ಮಾಡಿಸಿದಂತಿದೆ.

ಆದರೆ ಭಾರತದೇಶದಲ್ಲಿ ಶಿಕ್ಷಣವು ಒಕ್ಕಲಿಗ, ಲಿಂಗಾಯತ, ಕುರುಬರಾದಿಯಾಗಿ ವಿಶ್ವಕರ್ಮ, ಮಡಿವಾಳ, ಕ್ಷೌರಿಕ ಅಸ್ಪೃಶ್ಯ ಜಾತಿಯ ಜನರೆಲ್ಲರು ಅಕ್ಷರ ಕಲಿಯುತ್ತಿರವುದಾದರೂ ಯಾವಾಗಿನಿಂದ... ಬ್ರಿಟಿಷರು ೧೮೩೭ ರ ಸಾರ್ವತ್ರಿಕ ಶಿಕ್ಷಣ ಪದ್ಧತಿಯಿಂದ ಅದರಲ್ಲೂ ನಿಜವಾಗಿ ೧೯೫೦ರಲ್ಲಿ ಸಂವಿದಾನ ಜಾರಿಗೆ ಬಂದಂದಿನಿಂದ. ಪ್ರಸ್ತುತ ಕಬ್ಬಾಳು ಶಾಲೆಗಳಲ್ಲಿ ಕಲಿಯುತ್ತಿರುವ ಬಹುತೇಕ ವಿದ್ಯಾರ್ಥಿಗಳು ಈ ಮೇಲಿನ ಸಮುದಾಯಗಳಿಗೆ ಸೇರಿದವರಾಗಿದ್ದು, ಇವರು ಪ್ರತಿದಿನ ಶಾಲೆಗೆ ಬರುವುದಕ್ಕೂ ಮೊದಲು ಮತ್ತು

ಶಾಲೆಮುಗಿದ ನಂತರ ಹೊಲ, ಮನೆ, ತೋಟ, ತುಡುಕೆಗಳಲ್ಲಿ ಕೆಲಸಗಳನ್ನು ಮಾಡಿ ದನಕರುಗಳಿಗೆ ಹುಲ್ಲುತರುವುದು, ಹಾಲಿನ ಡೈರಿಗೆ ಹಾಲು ಹಾಕುವುದು, ಹೀಗೆ ತಮ್ಮ ಅಪ್ಪ ಅಮ್ಮಂದಿರ ಕೃಷಿ ಕೆಲಸಗಳಲ್ಲಿ ಭಾಗಿಯಾಗಿ ಕುಲ ಕಸುಬುಗಳಲ್ಲಿ ಪ್ರಾವೀಣ್ಯರಾಗಿದ್ದಾರೆ. ಹೆಚ್ಚು ಶ್ರಮದಾಯಕ ಹಾಗೂ ಕೌಶಲ್ಯ ಪ್ರದಾನ ಕೆಲಸಗಳಿಂದ ಇವರ ದೇಹಕ್ಕೆ ಸಂಸ್ಕಾರವಾಗಿದೆ. ಇದು ಕಬ್ಬಾಳು ಪ್ರದೇಶದಷ್ಟೇ ಅಲ್ಲ, ರಾಷ್ಟ್ರದ ರಾಜ್ಯದ ಗ್ರಾಮೀಣ ಮಕ್ಕಳ ಸ್ಥಿತಿಯಾಗಿದೆ. ಹೀಗೆ ಸಾವಿರಾರು ವರ್ಷಗಳಿಂದ ಬುದ್ಧಿ ಸ್ವಭಾವಗಳಿಗೆ ಸಂಸ್ಕಾರ ನೀಡುವ ವಿದ್ಯೆಯಿಂದ ನಿಷೇಧಿಸಲ್ಪಟ್ಟಿದ್ದ ಇವರನ್ನು ಏಕಾಏಕಿ ಬುದ್ಧಿ ಸ್ವಬಾವಗಳ ಪರೀಕ್ಷೆಗೊಳ ಪಡಿಸುವುದು ಸರಿಯೇ ಇದು ನಮ್ಮ ದೇಶದ ಸ್ಥಿತಿಗೆ ಅವಶ್ಯಕವೇ ಇಲ್ಲ. ತಮ್ಮ ತಮ್ಮ ಕುಲಕಸುಬುಗಳಲ್ಲಿ ಪ್ರಾವೀಣ್ಯರಾಗಿ ಕಾಠಿಣ್ಯ ಹಾಗೂ ಕೌಶಲ್ಯ ಪ್ರಧಾನಗಳಿಂದ ದೇಹಕ್ಕೆ ಮತ್ತು ಜೀವನಕ್ಕೆ ಸಂಸ್ಕಾರವನ್ನು ಒದಗಿಸುವ ಕೌಶಲ್ಯ ಪ್ರಧಾನ ಶಿಕ್ಷಣದ ಅವಶ್ಯಕತೆ ಇದೆ.

೩.೫. ಧಾರ್ಮಿಕ ಸ್ಥಿತಿಗತಿ

ಪ್ರಸ್ತುತ ಕಬ್ಬಾಳು ಪರಿಸರದ ಜನರು ತಮ್ಮ ಇಹಪರ ಬದುಕಿನ ನಡುವೆಯು ದರ್ಮವನ್ನು ಮರೆತವರಲ್ಲ. ಈ ಹಿನ್ನೆಲೆಯಲ್ಲಿ ಇವರ ದೇವರು, ಆ ದೇವರ ಧಾರ್ಮಿಕ ಆಚರಣೆ, ಆ ದೇವಾಲಯಗಳು, ಜಾತ್ರೆ, ಉತ್ಸವಗಳು, ಹರಕೆಗಳು, ಪೂಜಾಕ್ರಮ, ಸಾಮಾಜಿಕ, ಭಾವನಾತ್ಮಕ ಸಂಬಂಧಗಳು ಇದರ ಧಾರ್ಮಿಕ ಸ್ಥಿತಿಯನ್ನು ಪರಿಗಣಿಸಲ್ಪಡುತ್ತವೆ. ಇಲ್ಲಿ ಮುಖ್ಯವಾಗಿ ಎರಡು ಅಂಶಗಳನ್ನು ಗಮನಿಸಬೇಕು. ಒಂದು ದೈವ ಭಕ್ತಿ ಮತ್ತು ಈ ಭಕ್ತಿಯ ಆಶ್ರಯದಲ್ಲಿ ಬೆಳೆದುಬಂದ ಭಾವನಾತ್ಮಕ ಸಂಬಂಧ, ಸಾಂಪ್ರದಾಯಿಕ ಆಚರಣೆಗಳು, ಈ ಆಚರಣೆಗಳು ಪರಂಪರಾಗತ ನಂಬಿಕೆಗಳಾಗಿ ಅವರ ಮೂಲವನ್ನು ತಿಳಿಸುವ ಇತಿಹಾಸವಾಗಿಯೂ ಮುಂದುವರೆದುಕೊಂಡು ಬಂದಿವೆ. ವರ್ಷಕ್ಕೊಮ್ಮೆ ನಡೆಯುವ ಜಾತ್ರೆ ಉತ್ಸವಗಳಲ್ಲಿ ಸಡಗರ ಸಂಭ್ರಮ ಅವರ ಬತ್ತದ ಜೀವನೋತ್ಸಾಹದ ಸಂಕೇತಗಳಾಗುತ್ತವೆ.

ಇಲ್ಲಿನ ಜನರು ಪೂಜಿಸುವ ದೇವರನ್ನು ಮನೆದೇವರು ಅಥವಾ ಒಕ್ಕಲು ಕುಲದೇವರು, ಗ್ರಾಮದೇವತೆ ಎಂದು ವರ್ಗೀಕರಿಸಬಹುದು. ಪರಂಪರಾಗತವಾಗಿ ಹಿರಿಯರಿಂದ ಪೂಜಿಸಲ್ಪಡುವ ಕುಟುಂಬದ ದೇವರು ಮನೆದೇವರು ಎನ್ನುತ್ತಾರೆ. ಮನೆದೇವರು ಇವರು ವಾಸಮಾಡುವ ಊರಿನಲ್ಲೇ ಇರುವುದಿಲ್ಲ ಯಾವುದೋ ದೂರದ ಊರಲ್ಲಿ ಇರುತ್ತದೆ. ವರ್ಷಕ್ಕೊಮ್ಮೆಯಾದರೂ ಕಡ್ಡಾಯವಾಗಿ ಹೋಗಿ ಪೂಜೆಸಲ್ಲಿಸಿ ಬರುವುದುಂಟು, ಆದರೆ ಮನೆಯಲ್ಲೇ ಮನೆದೇವರನ್ನು ಜಾತ್ರೆ, ಉತ್ಸವ, ಹಬ್ಬಗಳು ಸಂದರ್ಭದಲ್ಲಿ ಪೂಜೆಮಾಡುತ್ತಾರೆ. ಪ್ರತಿದಿನವೂ ನೆನೆಯುತ್ತಾರೆ. ಗ್ರಾಮದೇವತೆ ಊರಲ್ಲೇ ಇದ್ದು ಎಲ್ಲ ವರ್ಣ ವರ್ಗದವರಿಗೆ ಸಮಾನವಾದ ದೇವರು ಈ ದೇವರ ಜಾತ್ರೆ ಉತ್ಸವ ಸಾಮಾನ್ಯವಾಗಿ ವರ್ಷಕ್ಕೊಮ್ಮೆ ವಿಜೃಂಭಣೆಯಿಂದ ಜರುಗುವುದುಂಟು ಸಮಸ್ತ ಊರಿಗೂರೇ ಈ ಸಡಗರದಲ್ಲಿ ಪಾಲ್ಗೊಳ್ಳುತ್ತದೆ. ಇಂತಹ ಸಾಂಸ್ಕೃತಿಕ ಸಂದರ್ಭದಲ್ಲಿ ಮತ್ತು ತಮ್ಮ ದಿನನಿತ್ಯದ ಆಚರಣೆ ಆಚಾರ ವಿಚಾರಗಳಲ್ಲಿ ಕೆಲವು ಧರ್ಮಗಳ ಪ್ರಭಾವ ಬೀರಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಇಲ್ಲಿ ಜನರಿಗೆ ಧರ್ಮದ ಬಗ್ಗೆ ನಾವು ಹಿಂದೂ, ನಾವು ಬೌದ್ಧ, ನಾವು ಜೈನರು ಎಂಬ ಯಾವುದೇ ಪರಿಕಲ್ಪನೆ ಇಲ್ಲ, ಅದರ ಅರಿವೂ ಇಲ್ಲಿನವರಿಗೆ ಇಲ್ಲ. ಧರ್ಮ ಎಂದರೆ ಒಳ್ಳೆಯದು ಒಳ್ಳೆಯ

ಕೆಲಸಮಾಡುವುದು ಒಳ್ಳೆಯ ರೀತಿಯಲ್ಲಿ ನಡೆಯುವುದು. ಕೆರೆ ಕಟ್ಟೆಗಳನ್ನು ಕಟ್ಟಿಸುವುದು ಊರಿಗೆ ಅನುಕೂಲವಾಗುವ ಕೆಲಸ ಮಾಡುವುದೇ ಆಗಿದೆ. ಇವರ ದೃಷ್ಟಿಯಲ್ಲಿ ಸಮಾಜದಲ್ಲಿ ಕೆಟ್ಟವನಾಗಿ ಬಾಳಿದರೆ ಅವನು ಧರ್ಮಕ್ಕೆ ವಿರುದ್ಧವಾಗಿ ನಡೆಯುತ್ತಿದ್ದಾನೆ ಎಂದು ತಿಳಿಯುತ್ತಾರೆ.

ಯಾರಾದರೂ ನ್ಯಾಯಕ್ಕೆ ಸತ್ಯಕ್ಕೆ ವಿರುದ್ಧವಾಗಿ ನಡೆದಾಗ, ನುಡಿದಂತೆ ನಡೆಯದಿದ್ದಾಗ, ಕೊಟ್ಟಮಾತನ್ನು ಉಳಿಸಿಕೊಳ್ಳದಂತಹ ಸಂದರ್ಭದಲ್ಲಿ 'ಇಂತಹವರಿದ್ರೆ ಊರೆಲ್ಲಿ ಉದ್ದಾರಆದದು? ಧರ್ಮಕರ್ಮ ಎಲ್ಲಿ ಉಳ್ದಾದು' ಎನ್ನುತ್ತಾರೆ. ಹಾಗೆ ಊರಿಗೆ ಒಳ್ಳೆಯದನ್ನು ಮಾಡಿ ಸತ್ಯದಲ್ಲೇ ನಡೆದವರನ್ನು ನೆನೆಸುತ್ತಾ "ಅಂತ ಮಹಾತ್ಮರು ಇದ್ದಾಗ ಮಳೆ ಬೆಳೆ ಚೆನ್ನಾಗಿ ಆಯ್ತಾ ಇತ್ತು' ಇಂತೋರಿರೂದ್ರಿಂದ ಮಳೆ ಹೋಗಿ ಪಟ್ಟಕ್ಕೆ ಸೇರ್ಕಂಡದೆ, ಧರ್ಮ ಎಲ್ಲಿ ಉಳ್ದದು" ಎನ್ನುತ್ತಾರೆ (ಬಸವಯ್ಯ).

ಭಾರತ ಮೂಲದಲ್ಲಿ ಬೌದ್ಧ ರಾಷ್ಟ್ರವಾಗಿತ್ತೆಂದು ಅದು ಎಲ್ಲಾ ಪ್ರಜ್ಞಾವಂತರಿಗೂ ತಿಳಿದಿರುವ ಸತ್ಯ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಹೇಳುವಂತೆ ಭಾರತದ ಇತಿಹಾಸ ಬೌದ್ಧ ಧರ್ಮ ಮತ್ತು ಹಿಂದೂ ಧರ್ಮಗಳ ನಡುವಿನ ಹೋರಾಟವೇ ಹೊರತು ಬೇರೆಯಲ್ಲ ಎನ್ನುತ್ತಾರೆ. "ಐತಿಹಾಸಕ ಪ್ರಜ್ಞೆಯ ಮಹತ್ವದ ಅರಿವಿರುವ ಯಾವುದೇ ವ್ಯಕ್ತಿ ಬೌದ್ಧ ಧರ್ಮದ ವಿರುದ್ಧ ನಡೆದಿರುವ ವ್ಯವಸ್ಥಿತ ಪಿತೂರಿಗೆ ಬಾವುಕನಾಗದಿರಲಾರ". (ಡಾ.ಕೆ.ಜಮ್ನಾದಸ್, ತಿರುಪತಿ ಬಾಲಾಜಿ ಒಂದು ಬುದ್ಧ ವಿಹಾರ, ಪುಟ.x) ಈ ಮೇಲಿನ ಮಾತುಗಳು ಭಾರತದಲ್ಲಿ ಬೌದ್ಧಧರ್ಮ ಇಡೀ ಭರತಖಂಡವನ್ನು ಎಷ್ಟರ ಮಟ್ಟಿಗೆ ಪ್ರಬಾವಿಸಿತ್ತು ಎಂಬುದು ಅರಿವಾಗುತ್ತದೆ. ಅಂದರೆ ಬೌದ್ಧಧರ್ಮ ಹಿಂದೂ ಧರ್ಮದ ದಾಳಿಗೆ ಒಳಗಾಗಿ ತನ್ನ ಅಸ್ತಿತ್ವವನ್ನು ಕಳೆದುಕೊಂಡಿದೆ. ಒಂದು ಕಾಲದಲ್ಲಿ ಭರತಖಂಡದ ತುಂಬ ಹರಡಿದ್ದ ಬೌದ್ಧಧರ್ಮದ ಕುರುಹುಗಳು ಇಂದಿಗೂ ಉಳಿದುಕೊಂಡುಬಂದಿವೆ. ಕಬ್ಬಾಳು ಜಾತ್ರೆಯ ಸಂದರ್ಭದಲ್ಲಿ ತಲೆಕೂದಲನ್ನು ಮುಡಿಕೊಡುವುದು ಅಂದರೆ ಕೇಶಮುಂಡನೆ ಮಾಡಿಕೊಳ್ಳುವುದು. ಇದು ಬೌದ್ಧರ ಪ್ರಾಚೀನ ಆಚರಣೆಗಳಲ್ಲೊಂದಾಗಿದೆ. ಕೇಶಮುಂಡನವು ಪ್ರಾಚೀನ ಕಾಲದಲ್ಲಿ ಬೌದ್ಧ ವಿಹಾರಗಳಲ್ಲಿ ಸಾಮಾನ್ಯವಾಗಿತ್ತು. "ನಮಗೆ ತಿಳಿದಿರುವಂತೆ ಶ್ರಮಣೇರ ಅಥವಾ ಶ್ರಮಣೇರಿ ಯಾಗಲು, ವಿಹಾರಗಳಲ್ಲಿ ನೆಲೆಗೊಳ್ಳಲು, ಯಾತ್ರಾರ್ಥಿಯಾಗಲು ಅಥವಾ ಗುರುವಿನೊಂದಿಗೆ ಕೆಲವು ದಿನ ಕಲಿಕಾ ಕೇಂದ್ರಗಳಲ್ಲಿ ಉಳಿದುಕೊಳ್ಳಬೇಕಾದಂತಹ ಸಂದರ್ಭಗಳಲ್ಲಿ ಅತ್ಯಗತ್ಯವಾಗಿ ಮಾಡಬೇಕಾಗಿದ್ದ ಆಚರಣೆಯೆಂದರೆ ಕೇಶಮುಂಡನ, ಬೌದ್ಧಧರ್ಮವು ಪ್ರವರ್ಧ ಮಾನದಲ್ಲಿರುವ ದೇಶಗಳಲ್ಲಿ ಕೆಲವು ದಿನಗಳು ಶ್ರಮಣೆರ ಅಥವಾ ಶ್ರಮಣೇರಿ ಆಗಬೇಕಾದಾಗ ಮತ್ತು ಕಲಿಯುವುದಕ್ಕಾಗಿ ಹೆಚ್ಚು ಕಾಲ ವಿಹಾರದಲ್ಲಿರಬೇಕಾದಾಗ ಕೇಶಮುಂಡನ ಮಾಡುವ ಪದ್ಧತಿ ಇಂದಿಗೂ ಅಸ್ತಿತ್ವದಲ್ಲಿದೆ. ದಕ್ಷಿಣದಲ್ಲಷ್ಟೇ ಅಲ್ಲದೆ ಉತ್ತರದ ಬೌದ್ಧ ದೇಶಗಳಲ್ಲೂ ಸಹ ಇದನ್ನು ಅನುಸರಿಸಲಾಗುತ್ತದೆ"(ತಿರುಪತಿ ಬಾಲಾಜಿ ಒಂದು ಬುದ್ಧವಿಹಾರ, ಪುಟ.೨೦೪) ಕಬ್ಬಾಳಿನಲ್ಲಿ ಸಿಡಿ ಆಡುವ ದಿನ ಮುಡಿಹರಕೆ ಹೊತ್ತವರು ಮೊದಲು ಮುಡಿ ಅಂದರೆ ಕೇಶಮುಂಡನ ಮಾಡಿಸಿ ನಂತರ ಸಿಡಿ ಆಡುತ್ತಾರೆ.

ಇದು ಹಿಂದೂ ಧರ್ಮದ ಭಾಗವಾದ ಶೈವ ಮತ್ತ ವೈಷ್ಣವರ ಸಂಪ್ರದಾಯವೂ ಅಲ್ಲ. ಶೈವ ಮತ್ತು ವೈಷ್ಣವರು ಬೌದ್ಧಧರ್ಮವನ್ನು ನಿರ್ನಾಮಮಾಡಲು ಎಷ್ಟೇ ಪ್ರಯತ್ನಮಾಡಿದರೂ ಬೌದ್ಧ ಧರ್ಮದ

ಸಂಪ್ರದಾಯಗಳು ನಿರ್ನಾಮವಾಗಲಿಲ್ಲ. ಆದಕಾರಣ ಬೌದ್ಧಧರ್ಮದ ಸಂಪ್ರದಾಯಗಳನ್ನು ಸಣ್ಣಪುಟ್ಟ ಬದಲಾವಣೆ ಮಾಡಿಕೊಂಡು ಅವುಗಳನ್ನು ತಮ್ಮವುಗಳಾಗಿ ಮಾಡಿಕೊಂಡವು "ಕೇಶಮುಂಡನೆಗೆ ಶೈವಧರ್ಮದಲ್ಲಿ ಯಾವುದೇ ಬೆಲೆ ಇಲ್ಲ ಮುಂಡನವು ವಿಷ್ಣು ಆರಾಧನೆಯ ಸಾಂಪ್ರದಾಯಿಕ ವಿಧಾನವೂ ಆಗಿಲ್ಲ" (ತಿರುಪತಿ ಬಾಲಾಜಿ ಒಂದು ಬುದ್ಧವಿವಾಹರ, ಪುಟ.೨೦೩) ಹಿಂದೂ ಧರ್ಮದ ಆಚರಣೆಗಳಲ್ಲಿ ಕೇಶಮುಂಡನವು ಶಿಕ್ಷಾರ್ಹವಾಗಿದೆ. ವ್ಯಕ್ತಿ ತಪ್ಪು ಮಾಡಿದಾಗ ಅಥವಾ ವಿಧವೆಯಾದಾಗ ಅಥವಾ ಮನೆಯಲ್ಲಿ ಶವಸಂಸ್ಕಾರದ ಸಂದರ್ಭದಲ್ಲಿ ಮಾತ್ರ ಕೇಶಮುಂಡನವಿದೆ. ಆದರೆ ಬೌದ್ಧಧರ್ಮದಲ್ಲಿ ಸಂತೋಷವಾಗಿ ತಾವು ಹೊತ್ತ ಹರಕೆ ತೀರಿಸಲು ಕೇಶಮುಂಡನ ಮಾಡಿಸಿಕೊಳ್ಳುತ್ತಾರೆ. ಇದು ಕಬ್ಬಾಳು ಪ್ರದೇಶದಲ್ಲಿದೆ. "ಹಿಂದೂ ಧರ್ಮದಲ್ಲಿ ಗಂಡಸರು ತಮ್ಮ ಮನೆಯಲ್ಲಿ ಯಾರಾದರೂ ಹಿರಿಯರು ಮೃತರಾದರೆ ಮಾತ್ರ ಕೇಶಮುಂಡನ ಮಾಡಿಸುತ್ತಾರೆ. ಮತ್ತು ಮಹಿಳೆಯರು ವಿಧವೆಯಾದರೆ ಮಾತ್ರ ಕೇಶಮುಂಡನ ಮಾಡಿಸುತ್ತಾರೆ. ತಲೆಬೋಳಾದ ವಿಧವೆಯ ದೃಶ್ಯವೂ ಸಹ ಹಿಂದೂಗಳಿಗೆ ಅಶುಭಕರವೆನ್ನುವುದು ಪ್ರಚಲಿತದಲ್ಲಿರುವ ಸತ್ಯ" (ತಿರುಪತಿ ಬಾಲಾಜಿ ಒಂದು ಬುದ್ಧ ವಿಹಾರ: ೨೦೫) ಹಿಂದೂಧರ್ಮದಲ್ಲಿ ವಿಧವೆಯರಿರಗೆ ತಲೆಬೋಳಿಸುವುದು (ವೈಧಿಕರಲ್ಲಿ) ಅವಳ ಕುರೂಪಿಯಾಗಿರಲಿ ಎಂದು. ಯಾರು ಅವಳನ್ನು ಕಣ್ಣೆತ್ತಿಯೂ ನೋಡಬಾರದು ಎಂಬುದು ಇವರ ಉದ್ದೇಶವಾಗಿರುವಾಗ ಇಲ್ಲಿ ಸಂತೋಷ ಎಲ್ಲಿದೆ.

"ಪ್ರವಜ್ಯಾ ಮತ್ತು ಉಪಸಂಪದಗಳು ಬೌದ್ಧರ ವಿಶಿಷ್ಟ ಸಂಸ್ಕಾರಗಳಾಗಿವೆ. ಪ್ರವಜ್ಯಾವನ್ನು ಜೀವನ ಪರ್ಯಂತ ಅಥವಾ ಕೆಲವು ಕಾಲದವರೆಗೆ ಸ್ವೀಕರಿಸುವುದು ಬೌದ್ಧರಿಗೆ ಶ್ರೇಯಸ್ಕರವೆಂದು ಪರಿಗಣಿಸಲ್ಪಟ್ಟಿದೆ. ಪಂಚಶೀಲವನ್ನು ಪಾಲಿಸುವ, ಅಷ್ಟಶೀಲ ಪಾಲಿಸುವ ಉಪಾಸಕರಾಗಿ ದೀಕ್ಷೆಪಡೆಯುವವರು ಮೊದಲು ಕೇಶಮುಂಡನ ಮಾಡಿಸಬೇಕು ಮತ್ತು ನಂತರ ಮಾಸಲು ಕಂದುಬಣ್ಣದ ನಿಲುವಂಗಿಯನ್ನು ಧರಿಸಬೇಕು. ನಂತರ ಬೌದ್ಧ ಧರ್ಮ ದೀಕ್ಷೆಪಡೆಯಬಯಸುವ ಸಾಮಾನ್ಯನಿಗೆ ತ್ರಿರತ್ನ ಮತ್ತು ಪಂಚಶೀಲವನ್ನು ಮತ್ತು ಶ್ರಮಣೇರನಿಗೆ ದಶಶೀಲವನ್ನು ಬೋಧಿಸಲಾಗುತ್ತದೆ". (ಅದೇ ಪುಟ.೨೦೪) ಈ ಪಂಚಶೀಲ ಮತ್ತು ಅಷ್ಟಶೀಲ ಧೀಕ್ಷೆಪಡೆಯುವುದು ಕಬ್ಬಾಳು ಪರಿಸರದಲ್ಲಿಯೂ ಇದೆ. ಕಬ್ಬಾಳು ಪರಿಸರದಲ್ಲಿ ಮಂಟೇಸ್ವಾಮಿ, ಮಹದೇಶ್ವರ ಚುಂಚನಗಿರಿ, ಒಕ್ಕಲಿನ ಅನೇಕರು ಪ್ರತಿಮನೆಯಲ್ಲೂ ಗುಡ್ಡರನ್ನು ಬಿಡುತ್ತಾರೆ. ಪ್ರತಿಮನೆಯ ಹಿರಿಯ ಮಕ್ಕಳನ್ನು ಕಡ್ಡಾಯವಾಗಿ ನೀಲಗಾರರನ್ನು, ಗುಡ್ಡರನ್ನು, ಜೋಗಿಗಳನ್ನು ಮಾಡಿ ಅವರಿಗೆ ದೀಕ್ಷೆ ನೀಡುತ್ತಾರೆ ಇದನ್ನು ಗುಡ್ಡನಬಿಡುವು, ಜೋಗಿಬಿಡುವುದು ಎಂದೇ ಕರೆಯುತ್ತಾರೆ. ಈ ದೀಕ್ಷೆ ನೀಡುವುದು ಬೌದ್ಧಧರ್ಮದ ವಿಧಾನವೇ ಆಗಿದೆ. ಗುಡ್ಡನನ್ನು ಅಥವಾ ಜೋಗಿಯನ್ನು ಬಿಡುವುದಕ್ಕು ಮೊದಲು ಕೇಶಮುಂಡನ ಮಾಡಿಸಿ ನಂತರ ಕಂದುಬಣ್ಣದ ಪಂಚೆವಸ್ತ್ರವನ್ನು ಧರಿಸುತ್ತಾರೆ. ನಂತರ ಗುರುವಿನ ಹತ್ತಿರ ಅಂದರೆ ದೊಡ್ಡಗುಡ್ಡರು ಇವರಿಗೆ ಪಂಚಶೀಲ ತತ್ವಗಳನ್ನು ಬೋಧಿಸುತ್ತಾರೆ. ದೀಕ್ಷೆ ಪಡೆಯುವವರು ಅದನ್ನು ಪುನರುಚ್ಚರಿಸುತ್ತಾರೆ. ಇವರು ದೀಕ್ಷೆ ಪಡೆದ ಮೇಲೆ ನಲವತ್ತೆರಡು ದಿನ ಮಾಂಸಾಹಾರ ಸೇವಿಸುವಂತಿಲ್ಲ. ಬೇರೊಬ್ಬರ ಎಂಜಿಲನ್ನು ತಿನ್ನುವಂತಿಲ್ಲ, ಸುಳ್ಳು ಹೇಳುವಂತಿಲ್ಲ, ಕಳ್ಳತನ ಮಾಡುವಂತಿಲ್ಲ, ಸತ್ಯವನ್ನೇ ನುಡಿಯಬೇಕು, ಮೈ ಮತ್ತು ಮನಸ್ಸನ್ನು ಶುದ್ಧವಾಗಿಟ್ಟುಕೊಳ್ಳಬೇಕು. ಪ್ರತಿದಿನ ಆಹಾರ ಸೇವನೆಗೆ ಮೊದಲು

ತಮ್ಮ ಮನೆದೇವರ ಪೂಜೆ ಧ್ಯಾನಮಾಡಿ ನಂತರ ಆಹಾರ ಸೇವಿಸಬೇಕು. ಗುಡ್ಡನನ್ನು ಬಿಡಿಸಿಕೊಂಡು ಊರಿಗೆ ಬಂದಮೇಲೆ ಊರಿನಲ್ಲಿ ಬಿಕ್ಷೆಬೇಡಿ ತಂದಂತಹ ದವಸದಿಂದ ಅಡುಗೆ ಮಾಡಿ ಪೂಜೆ ಮಾಡಿ ಮನೆದೇವರ ಧ್ಯಾನ ಮಾಡಿ ನಂತರ ಆಹಾರ ಸೇವಿಸುವ ಪದ್ದತಿ ಇಂದಿಗೂ ಇದೆ.

ಗುಡ್ಡರು ತಮ್ಮ ಮನೆಯಲ್ಲಿ ಅಥವಾ ಊರಿನ ಯಾವ ಮನೆಯವರೇ ಆಗಲಿ ಪಿತೃಪಕ್ಷ ಸಂದರ್ಭದಲ್ಲಿ ಅಥವಾ ತಿಥಿಗಳ ಸಂದರ್ಭದಲ್ಲಿ ದಾಸಯ್ಯ, ಜೋಗಯ್ಯ, ಗುಡ್ಡರು, ನೀಲಗಾರರು ಎಲ್ಲರೂ ಸೇರಿ ಉತ್ತರ ಕ್ರಿಯಾದಿ ಕಾರ್ಯವನ್ನು ಸುಸೂತ್ರವಾಗಿ ಗುಡ್ಡರು ಹೇಳಿಕೊಟ್ಟಿದ್ದ ದೀಕ್ಷೆಯಾನುಸಾರ ಕಾರ್ಯಗಳನ್ನು ನೆರವೇರಿಸುತ್ತಾರೆ.

ಮತ್ತೊಂದು ಪ್ರಸ್ತಾಪಿಸಲೇಬೇಕಾದ ಸಂಪ್ರದಾಯ ಶ್ರಾವಣ. ಹಬ್ಬದ ಆಚರಣೆ ಶ್ರಾವಣ ಹಬ್ಬಗಳು ಬೌದ್ದ ಅವಶೇಷಗಳೆಂದು ಅರ್ಹಮೂಲಗಳು ತಿಳಿಸಿಕೊಡುತ್ತವೆ. ಸಾರನಾಥದಲ್ಲಿ ಆಷಾಡ ಹುಣ್ಣಿಮೆ ದಿನ ತನ್ನ ಮೊಟ್ಟಮೊದಲ ಧರ್ಮೋಪದೇಶ ನೀಡಿದ ಭಗವಾನ್ ಬುದ್ದರು ಮರುದಿನವಾದ ಸೋಮವಾರದಂದು ವರ್ಷಾವಾಸಕ್ಕೆ ಹೊರಟ ಮೊದಲ ದಿನವೇ ಶ್ರಾವಣ. "ಉತ್ತರ ಭಾರತದಲ್ಲಿ ಮಾಸವು ಹುಣ್ಣಿಮೆಯಂದು ಕೊನೆಯಾಗುತ್ತದೆ. ಬೌದ್ದ ವಿಹಾರಗಳಲ್ಲಿ ಶ್ರಾವಣ ಹಬ್ಬವನ್ನು ಆಚರಿಸಲಾಗುತ್ತಿತ್ತು". (ತಿರುಪತಿ ಬಾಲಾಜಿ ಒಂದು ಬುದ್ಧವಿಹಾರ, ಪುಟ.೧೬೩) ಈ ಪರಿಸರದ ಜನರು ಶ್ರಾವಣಮಾಸವನ್ನು ಆಚರಿಸುತ್ತಾರೆ. ಶ್ರಾವಣ ಮಾಡುವ ಮೊದಲು ಗುಡ್ಡರು, ದಾಸಯ್ಯಗಳು, ಜೊಗಯ್ಯಗಳು ಆದಿನ ಸ್ನಾನ ಮಾಡಿ, ಗುಡ್ಡರನ್ನು, ಜೋಗಯ್ಯರನ್ನು ಬಿಡಿಸುವಾಗ ಧರಿಸಿರುವ ಬಟ್ಟೆಗಳನ್ನು ಧರಿಸಿ ಊರತುಂಬೆಲ್ಲ ಭಿಕ್ಷೆ ಮಾಡುತ್ತಾರೆ. ಭಿಕ್ಷೆ ಮಾಡಿತಂದ ಧಾನ್ಯದಲ್ಲಿ ಅಡುಗೆಮಾಡಿ ದೇವರನ್ನು ಒಡ್ಡಿಸಿ ಪೂಜೆಮಾಡುತ್ತಾನೆ. ನೆಂಟರಿಷ್ಟರನ್ನು ಕರೆಸಿ ಊಟಕ್ಕೆ ನೀಡುತ್ತಾರೆ. ಇದು ಬೌದ್ಧಧರ್ಮದ ಆ ದಿನಗಳಲ್ಲೂ ಬಿಕ್ಷುಗಳಿಂದ ಧರ್ಮ ಪ್ರವಚನವನ್ನು ಪಡೆಯುವುದು ಮತ್ತು ಭಿಕ್ಷುಗಳಿಗೆ ಆಹಾರ ನೀಡಿದ ನಂತರ ತಾವು ಊಟಮಾಡುವುದು ಮಾಡುತ್ತಿದ್ದುದರ ಮುಂದುವರೆದ ಭಾಗವೇ ಆಗಿದೆ. ಶ್ರಾವಣ ಮಾಸದಲ್ಲಿ ಶ್ರಾವಣಪೂಜೆ ಮಾಡುವಾಗ ದೇವರ ಎಡೆಗೆ ತಿರುಪತಿ ಬಾಲಾಜಿಯ ವಿಗ್ರಹವನ್ನು ಇಟ್ಟು ಮತ್ತು 'ಖಣಜ' ಇಟ್ಟು ಪೂಜೆ ಮಾಡುತ್ತಾರೆ. 'ಖಣಜ' ಇದು ಭಿಕ್ಷಾಪಾತ್ರೆ ಇದು ಬುದ್ಧನ ಬಿಕ್ಷಾಪಾತ್ರೆಯ ಕುರುಹಾಗಿದೆ.

ಈ ರಥಯಾತ್ರೆಯು ಸಹ ಬೌದ್ಧಧರ್ಮದ ಆಚರಣೆಯಾಗಿತ್ತು. ಮೊದಲು ರಥಯಾತ್ರೆಯನ್ನು ಆಚರಣೆಗೆ ತಂದವರು ಬೌದ್ಧರು. ಕಬ್ಬಾಳಿನಲ್ಲಿ ರಥ ಅಂದರೆ ತೇರು ಎಳೆಯುವ ಸಂಪ್ರದಾಯವಿದೆ. ಸೋಮವಾರ ಕೊಂಡವಾದ ನಂತರ ಮಂಗಳವಾರ ತೇರು ಎಳೆಯುತ್ತಾರೆ. ಮಂಗಳವಾರ ಕಬ್ಬಾಳು ಕುಳಿಯ ಬಹುಸಂಖ್ಯಾತರೆಲ್ಲ ಬಲಿಯನ್ನು ಕೊಟ್ಟು ಬಾಡೂಟದಲ್ಲಿ ತೊಡಗುತ್ತಾರೆ. ಪರಿಶಿಷ್ಟ ಜಾತಿ ಸಮುದಾಯಗಳು ತಮ್ಮ ತಮ್ಮ ಊರಲ್ಲೆ ಬಲಿಕೊಟ್ಟ ಬಾಡೂಟದಲ್ಲಿ ತಲ್ಲೀನರಾಗಿರುತ್ತಾರೆ. ಅಂತಹ ಸಂರ್ಭದಲ್ಲಿ ಕಬ್ಬಾಳಿನಲ್ಲಿ ತೇರು ಎಳೆಯಲಾಗುತ್ತದೆ. ಅಂದೇ ಓಲೆ ಬಂಡಿಗಳನ್ನು ಕಟ್ಟುತ್ತಾರೆ. ಓಲೆಬಂಡಿಗಳನ್ನು ಪರಿಶಿಷ್ಟ ಜಾತಿಯವರು ಕಟ್ಟುವಹಾಗಿಲ್ಲ. ಇವರೆಲ್ಲರು ತಮ್ಮ ಊರುಗಳಲ್ಲಿ ಅಂದು ನೆಂಟರಿಷ್ಟರಿಗೆ ಮಾಂಸದ ಊಟ ಹಾಕುವಲ್ಲಿ ನಿರತರಾಗಿರುತ್ತಾರೆ. ಅಂದರೆ ರಥ ಅಥವಾ ತೇರು ಎಳೆಯುವದಿನ ತಳ ಸಮುದಾಯದವರೆಂದು ಕರೆಯಲಾದ

ಹೊಲೆಯರು ಭಾಗವಹಿಸುವುದಿಲ್ಲ. ಒಂದು ವೇಳೆ ಭಾಗವಹಿಸಿದರು ಇತ್ತೀಚಿನ ದಿನಗಳಲ್ಲಿ ಕೆಲವರು ತೇರುನೋಡಲು ಹೋಗಬಹುದು ಎಂದೆನಿಸುತ್ತದೆ. ಅಂದರೆ ಪರಿಶಿಷ್ಟರನ್ನು ಸಾಮೂಹಿಕವಾಗಿ ಎಲ್ಲರೊಂದಿಗೆ ಭಾಗವಹಿಸದಿರುವಂತೆ ಮಾಡಿರುವ ವ್ಯವಸ್ಥೆ ಕಾಣುತ್ತದೆ. "ಅನೇಕ ಜಾತಿಗಳನ್ನು ಒಂದು ಮಾಡುವುದನ್ನು ಪ್ರೇರೇಪಿಸುವ ಚಟುವಟಿಕೆಗಳಲ್ಲಿ ಭಾಗವಹಿಸಲು ಹಿಂದೂವಿಗೆ ಸಾಧ್ಯವಿಲ್ಲ. ರಥಯಾತ್ರೆ ಎನ್ನುವುದು ಭಿನ್ನಜಾತಿಗಳನ್ನು ಒಂದೆಡೆ ಸೇರಿಸುವುದಾಗಿದ್ದು, ರಥಯಾತ್ರೆಯಲ್ಲಿ ದೇವತೆಗಳಷ್ಟೇ ಅಲ್ಲದೆ ಪುರೋಹಿತರೂ ಸಹ ವಿವಿಧ ಜಾತಿಯ ಜನರೊಂದಿಗೆ ಸೇರಬೇಕಾಗುತ್ತದೆ. ವಿಭಿನ್ನ ಜಾತಿಗಳ ಜನರು ಮುಕ್ತವಾಗಿ ಬೆರೆಯುವುದು ಬ್ರಾಹ್ಮಣತತ್ವವನ್ನು ಉಲ್ಲಂಘನೆ ಮಾಡಿದಂತೆ ಎಂದು ಡಾ.ಜಮ್ನಾದಸ್ ರವರು ಹೇಳುತ್ತಾರೆ. ಇದಕ್ಕೆ ಪೂರಕವಕಗಿ "ಜಾತಿ ವ್ಯವಸ್ಥೆಯ ಮತ್ತು ಅಸ್ಪೃಶ್ಯತೆಯ ಕಾರಣದಿಂದ ಹಾಗೂ ಮಡಿಮಾಡದೆ ತಮ್ಮ ರಕ್ತಸಂಬಂಧಿ ಮಹಿಳೆ ಮತ್ತು ಬಂಧುಗಳು ಸೇರಿದಂತೆ ಯಾರನ್ನೂ ಮುಟ್ಟದೇ ಇದ್ದ ಕಾರಣದಿಂದ ರಥಯಾತ್ರೆ ಬ್ರಾಹ್ಮಣರಿಂದ ಸೃಷ್ಟಿಯಾದದ್ದಲ್ಲ, ಅದು ಖಂಡಿತವಾಗಿ ಬೌದ್ಧಮೂಲದ್ದಾಗಿದೆ ಮತ್ತು ಎಲ್ಲೆಲ್ಲಿ ಈ ಸಂಪ್ರದಾಯ ಅಸ್ತಿತ್ವದಲ್ಲಿದ್ದು ಮುಂದುವರೆಯುತ್ತಿದೆಯೋ ಅದು ಬೌದ್ಧದೆಂದು ಯಾವುದೇ ಅನುಮಾನವಿಲ್ಲದೇ ಹೇಳಬಹುದು" ಪುಣೆ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಮುಖ್ಯಸ್ಥರಾದ ಪ್ರೊ. ಎಂ.ಡಿ.ನಾಲವಾಡೆಯವರು ತಿರುಪತಿ ಬಾಲಾಜಿ ಬುದ್ಧವಿಹಾರ ಪುಸ್ತಕದ ಮುನ್ನೂಡಿಯಲ್ಲಿ ಹೇಳುತ್ತಾರೆ.

ಕಬ್ಬಾಳು ಪರಿಸರದಲ್ಲಿ ಬೌದ್ಧರು ಬಹುಸಂಖ್ಯಾತರಾಗಿರುವುದನ್ನು ಅವರ ಮನೆದೇವರು ಮತ್ತು ಅವರ ಹೆಸರುಗಳ ಹಿನ್ನೆಲೆಯನ್ನು ಅಧ್ಯಯಮಾಡಿದಾಗ ತಿಳಿದುಬರುತ್ತದೆ. ಮೊದಲೇ ಹೇಳಿದ ಹಾಗೆ ದಾಸಸಂಸ್ಕೃತಿ, ಗುಡ್ಡರು, ಜೋಗಯ್ಯಗಳು ಬಹುಸಂಖ್ಯಾತರಾಗಿದ್ದಾರೆ. ನಾಗರಾಜ, ನಾಗರತ್ನ, ಕೆಂದಾಸಯ್ಯ, ಚಿಕ್ಕದಾಸಯ್ಯ, ದೊಡ್ಡದಾಸಯ್ಯ ದಾಸೇಗೌಡ, ವೆಂಕಟಾಚಲ, ಶ್ರೀನಿವಾಸ, ವೆಂಕಟಗಿರಿಗೌಡ, ವೆಂಕಟೇಶ, ಸಿದ್ದಯ್ಯ, ಬಸವಯ್ಯ, ಬಸವೇಗೌಡ, ಸಿದ್ದೇಗೌಡ, ರಂಗಸ್ವಾಮಿ, ಮಹದೇವ ಮುಂತಾದ ಹೆಸರುಗಳು ಸಾಮಾನ್ಯವಾಗಿವೆ. ಈ ಹೆಸರುಗಳ ಮನೆತನದವರೆಲ್ಲರೂ ತಿರುಪತಿ ವೆಂಕಟರಣಮಣ ಸ್ವಾಮಿ ಬಾಲಾಜಿಯ ಭಕ್ತರಾಗಿದ್ದಾರೆ. ಇವರ ಮನೆದೇವರು ತಿರುಪತಿಯ ವೆಂಕಟಾಚಲನಾಗಿದ್ದಾನೆ. ಮಂಟೇಸ್ವಾಮಿ, ಮಲೆಯಮಹಾದೇಶ್ವರರ ಒಕ್ಕಲುಗಳಾಗಿದ್ದಾರೆ. ಈ ಎಲ್ಲಾ ಒಕ್ಕಲುಗಳಲ್ಲೂ ಬೌದ್ಧಸಂಸ್ಕೃತಿಯ, ಗುಡ್ಡರು ಬಿಡುವುದು, ದಾಸಯ್ಯ ಸಂಸ್ಕೃತಿ ಇಂದಿಗೂ ಇದೆ. ಇದನ್ನು ಮೊದಲೇ ವಿವರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಪ್ರದೇಶ ಬೌದ್ಧರ ಪ್ರಭಾಕ್ಕೆ ಒಳಗಾಗಿರುವುದನ್ನು ಕಾಣುತ್ತೇವೆ.

ನಾಗರೀಕ, ನಗರ, ನಾಗರೀಕತೆ, ಈ ಪದಗಳಲ್ಲಿ ನಾಗ ಎಂಬ ಪದ ಕಡ್ಡಾಯವಾಗಿದೆ. ಇದಕ್ಕೆ ನಾಗ ಜನಾಂಗದವರೇ ಕಾರಣರಾಗಿದ್ದಾರೆ. ನಾಗ ಜನಾಂಗದ ವ್ಯಕ್ತಿಯನ್ನು ನಾಗರೀಕನೆಂದೂ ಅವರು ವಾಸಮಾಡುತ್ತಿದ್ದ ಪ್ರದೇಶವನ್ನು ನಗರವೆಂದೂ ಅವರ ಜೀವನ ಶೈಲಿಯನ್ನು ನಾಗರೀಕತೆಯೆಂದು ಕರೆದಿದ್ದಾರೆ. ಇಲ್ಲಿನ ನಾಗರಾಜ ನಾಗರತ್ನ ಹೆಸರುಗಳು ನಾಗರಾಜ ನಾಗರರಾಜ, ನಾಗ ಜನಾಂಗದ ದೊರೆ ಎಂಬುದನ್ನು ಖಚಿತವಾಗಿ ಹೇಳಬಹುದು. ಕಬ್ಬಾಳು ಪ್ರದೇಶದಿಂದ ಆರು ಕಿಲೋಮೀಟರ್‌ಗಳ ದೂರದಲ್ಲಿ ನಾಗರಸನ ಕೋಟೆ ಎಂಬ ಊರು ಇದಕ್ಕೆ ಪೂರಕವೆಂಬಂತೆ ಇದೆ. ಇನ್ನು ದಾಸ ಎಂಬ ಹೆಸರು ತಿರುಪತಿ ವೆಂಕಟೇಶ್ವರನ ಒಕ್ಕಲಿನವರಲ್ಲಿ

ಸಾಮಾನ್ಯವಾಗಿದೆ. ತಿರುಪತಿ ಬಾಲಾಜಿ ಬುದ್ಧನಾಗಿರುವುದರಿಂದ ಅದರ ಒಕ್ಕಲಿನವರಾದ ದಾಸಯ್ಯ, ಕೆಂದಾಸಯ್ಯ ಇವರೆಲ್ಲರೂ ಬೌದ್ಧಧರ್ಮದವರಾಗಿದ್ದರು. ದಾಸಯ್ಯಗಳ ಸಂಸ್ಕೃತಿ ಸಂಪ್ರದಾಯಗಳು ಬೌದ್ಧಸಂಪ್ರದಾಯಗಳಾಗಿವೆ.

ಕಬ್ಬಾಳು ಪ್ರದೇಶದಲ್ಲಿ ಶೈವ ಮತ್ತು ವೈಷ್ಣವರ ಪ್ರಭಾವವಿರುವುದು ಇದೆ. ಈ ಪರಿಸರದ ಜನರ ಆಡುಮಾತಿನಲ್ಲಿ ಅಲ್ಲಲ್ಲಿ ಶಿವನನ್ನು ನೆನೆಸುವುದು ಮಾತಿನ ಮಧ್ಯದಲ್ಲಿ ಶಿವನನ್ನು ಕರೆಯುವುದು ಸಾಮಾನ್ಯವಾಗಿದೆ. ಎಲ್ಲ ಶಿವನಿಚ್ಚೆ ಎಲ್ಲಾ ಶಿವನೇ ನೋಡ್ಕತನೆ. ಮತ್ತು ತಮ್ಮ ದಿನನಿತ್ಯದ ಕೆಲಸಕಾರ್ಯಗಳಲ್ಲಿ ದಿನದ ಆರಂಭದಿಂದ ಅಂತ್ಯದವರೆಗೂ ಅಂದರೆ ಮಲಗಿದ್ದು ಏಳುವಾಗ ತಮ್ಮ ಮನೆದೇವರನ್ನು ನೆನೆದು ಊರದೇವರನ್ನು ನೆನೆದು ಕೊನೆಯಲ್ಲಿ ಶಿವನನ್ನು ನೆನೆಯುವುದು ಅಬ್ಯಾಸ ಬಲದಿಂದ ಬಂದಂತಿದೆ. ತಮ್ಮ ಮನೆಗಳಲ್ಲಿ ತಮ್ಮ ಮನೆದೇವರುಗಳ ಪೋಟೋಗಳ ಜೊತೆಯಲ್ಲಿ ಶಿವಪಾರ್ವತಿಯರ ಪೋಟೋಗಳನ್ನು ಇಟ್ಟುಕೊಳ್ಳುವುದನ್ನು ಕಾಣುತ್ತೇವೆ. ಆದರೆ ಮನೆಗಳಲ್ಲಿ ಅವರ ಒಕ್ಕಲುಗಳ ದೇವರ ಗದ್ದುಗೆಗಳು ಮಾತ್ರ ಇವೆ.

ಜನರು ಅದೃಷ್ಟದಲ್ಲಿ ನಂಬಿಕೆ ಇಡುತ್ತಾರೆ. ಒಳ್ಳೆಯದಾದರೆ ಅದೃಷ್ಟ, ಒಂದು ವೇಳೆ ಕೆಟ್ಟದಾದಾಗ ಅವನ ಅದೃಷ್ಟ ಚೆನ್ನಾಗಿಲ್ಲ ಎಂದು ತಿಳಿಯುವರು. ಯಾರಾದರೂ ಅರ್ಧವಯಸ್ಸಿಗೆ ಸತ್ತರೆ ಅವನ ಹಣೇಲಿ ಇಷ್ಟೆ ಬರ್ದಿತ್ತೇನೋ. ಹಣೆಬರಹ ಬರೆಯುವವನು ಬ್ರಹ್ಮೆಂದು ಕೆಲವರ ನಂಬಿಕೆ. ಹಣೆಬರಹಕ್ಕೆ ಹೊಣೆಯಾರು ಎಂಬ ಹತಾಸನುಡಿಗಳನ್ನು ಆಡುತ್ತಾ ಬ್ರಹ್ಮನನ್ನು ಶಪಿಸುವುದೂ ಉಂಟು. ಹೀಗೆ ಹೊಯ್ಸಳರು, ವಿಜಯನಗರ ಅರಸರು ಶೈವರಾಗಿದ್ದು ಇವರ ಪ್ರಭಾವಕ್ಕೆ ಕಬ್ಬಾಳು ಪ್ರದೇಶವು ಒಳಗೊಂಡಿತ್ತು. ಶೈವ ವೈಷ್ಣವ ಎರಡು ಪಂಥಗಳ ನಡುವೆ ಒಳ ಜಗಳಗಳು ಇದ್ದರು ಬೌದ್ಧಧರ್ಮದ ವಿರುದ್ಧ ಇವರೆಡು ಒಂದಾಗಿ ಹೋರಾಡಿರುವುದರ ಬಗೆಗೆ ಇತಿಹಾಸದಲ್ಲಿ ಅನೇಕ ಸಾಕ್ಷಗಳು ಇವೆ. ಬೌದ್ಧಧರ್ಮದ ಪ್ರಭಾವ ಮತ್ತು ಹಿಂದೂಧರ್ಮದ ಸ್ಥಿತಿ ಹೇಗಿತ್ತೆಂದರೆ "ಬೌದ್ಧಧರ್ಮದ ಪರಿಣಾಮವಾಗಿ ಬ್ರಾಹ್ಮಣಧರ್ಮವು ಎಲ್ಲಾ ವಿಧವಾದ ಅಧಿಕಾರವನ್ನು ಮತ್ತು ರಾಜ್ಯಾಧಿಕಾರದಿಂದ ಹಾಗೂ ಜನಸಮೂಹದಿಂದ ದೊರೆಯುತ್ತಿದ್ದು ಗೌರವವನ್ನು ಕಳೆದುಕೊಂಡಿತ್ತು. ಬೌದ್ಧಧರ್ಮದಿಂದ ಅನುಭವಿಸಿದ ಸೋಲಿನಿಂದ ಬ್ರಾಹ್ಮಣರು ತೀವ್ರವಾದ ನೋವನ್ನು ಅನುಭವಿಸುತ್ತಿದ್ದರು. ಮತ್ತು ತಮ್ಮ ಅಧಿಕಾರ ಮತ್ತು ಅಂತಸ್ತನ್ನು ಮರಳಿ ಪಡೆಯಲು ಸಾಧ್ಯವಿರುವ ಎಲ್ಲಾಪ್ರಯತ್ನಗಳನ್ನು ಮಾಡುತ್ತಿದ್ದರು. ಜನಸಾಮಾನ್ಯರ ಮನಸ್ಸಿನಲ್ಲಿ ಬೌದ್ಧಧರ್ಮವು ಆಳವಾದ ಪ್ರಭಾವವನ್ನು ಬೀರಿತ್ತು ಮತ್ತು ಅವರ ಮೇಲೆ ಪ್ರಬಲವಾದ ಹಿಡಿತವನ್ನು ಸಾಧಿಸಿತ್ತು. ಬೌದ್ಧಧರ್ಮದ ಆಚರಣೆಗಳನ್ನು, ರೀತಿನೀತಿಗಳನ್ನು ಅದನ್ನು ಮೀರಿದ ರೂಪದಲ್ಲಿ ಒಪ್ಪಿಕೊಳ್ಳದೇ ಬ್ರಾಹ್ಮಣರು ಬೌದ್ಧಧರ್ಮದ ವಿರುದ್ಧ ಸಮರ್ಪಕವಾಗಿ ಹೋರಾಡುವುದು ಸಾಧ್ಯವೇ ಇರಲಿಲ್ಲ" (ಡಾ.ಬಾಬಾ ಸಾಹೇಬ ಅಂಬೇಡ್ಕರ್ ತಮ್ಮ ಅಸ್ಪೃಶ್ಯರು ಕೃತಿಯಲ್ಲಿ) ಹೀಗೆ ಬೌದ್ಧಧರ್ಮದ ವಿರುದ್ಧ ಸೋತಿದ್ದ ಹಿಂದೂ ಧರ್ಮ ಬೌದ್ಧಧರ್ಮದ ತತ್ವಗಳನ್ನು ಅಳವಡಿಸಿಕೊಂಡು ಭಾರತದಲ್ಲಿ ನೆಲೆಕಂಡುಕೊಂಡಿತು. ಇದನ್ನು ಎಂ.ಎನ್.ಜೋಶಿರವರು ಹೀಗೆ ಅಭಿಪ್ರಾಯ ಪಡುತ್ತಾರೆ. "ಬೌದ್ಧ ಸಂಸ್ಕೃತಿಯ ಅನೇಕ ಶ್ರೇಷ್ಠ ಲಕ್ಷಣಗಳನ್ನು ಹಿಂದೂ ಧರ್ಮ ಹೊಂದಿದ್ದರೂ ಸಹ ಎರಡೂ

ಧರ್ಮಗಳು ಭಿನ್ನವಾಗಿವೆ. ಬುದ್ಧನನ್ನು ಹಿಂದೂ ದೇವರೆಂದು, ವಿಷ್ಣುವಿನ ಅವತಾರವೆಂದೂ ಹಿಂದೂಗಳು ಭಾವಿಸಿದ್ದಾರೆ. ಬೌದ್ಧಧರ್ಮದ ಎಲ್ಲಾ ಶ್ರೇಷ್ಠ ಮತ್ತು ಉದಾತ್ತವಾದ ಲಕ್ಷಣಗಳನ್ನು ಹಿಂದೂಧರ್ಮ ಒಪ್ಪಿಕೊಂಡಿದೆ. ಈ ವಾಸ್ತವಾಂಶಗಳು ಹಿಂದು ಮತ್ತು ಬೌದ್ಧಧರ್ಮಗಳು ಪರಸ್ಪರ ಭಿನ್ನವೆಂಬ ಐತಿಹಾಸಿಕ ಸತ್ಯವನ್ನೇನೂ ಬದಲಿಸುವುದಿಲ್ಲ. ಹಿಂದೂಧರ್ಮವು ಬುದ್ದನ ಬೋಧನೆಗಳ ಮೇಲೆ ನಿಂತಿರುವುದರಿಂದ ಹಿಂದೂಗಳು ಬುದ್ಧನನ್ನು ಪೂಜಿಸುತ್ತಾರೆ. ಬೌದ್ಧಧರ್ಮವು ವೇದಗಳ ಆಧಾರದ ಮೇಲೆ ನಿಂತಿಲ್ಲವಾದ್ದುದರಿಂದ ಬೌದ್ಧರು ವಿಷ್ಣುವನ್ನಾಗಲೀ, ಶಿವನನ್ನಾಗಲೀ ಪೂಜಿಸುವುದಿಲ್ಲ". ಹೀಗೆ ಬೌದ್ಧರ ಅಹಿಂಸೆ, ಕರುಣೆ, ಮೈತ್ರಿ, ಗುರುಭಕ್ತಿ, ಮನಸ್ಸಿನ ನಿಗ್ರಹ ಮತ್ತು ಯೋಗದ ಅರಿವಿನಂತಹ ನೈತಿಕ ತತ್ವಗಳನ್ನು, ಬೌದ್ಧಧರ್ಮದ ಆಚರಣೆ ಸಂಪ್ರದಾಯಗಳನ್ನು ಅನುಸರಿಸುತ್ತಿರುವ ಬಹುಸಂಖ್ಯಾತರು ಈ ಪ್ರದೇಶದಲ್ಲಿದ್ದಾರೆ.

ಅಧ್ಯಾಯ ೪

ಕಬ್ಬಾಳು ಪರಿಸರದ ದೈವಗಳು

ಅ. ಕಬ್ಬಾಳಮ್ಮ

ಆ. ಮಾರಮ್ಮ

ಇ. ಭೀಮೇಶ್ವರ ಮತ್ತು ಬಸವೇಶ್ವರ

ಅಧ್ಯಾಯ ೪

ಕಬ್ಬಾಳು ಪರಿಸರದ ದೈವಗಳು

ಪೀಠಿಕೆ

ಗ್ರಾಮ ದೇವತೆಗಳ ಸೃಷ್ಟಿ, ಉಗಮ ಮನುಷ್ಯನ ಅಲೆಮಾರಿ ಜೀವನದಿಂದ ಒಂದು ಕಡೆ ನೆಲೆನಿಂತು ಜೀವನ ಮಾಡುವ ಸಂದರ್ಭವನ್ನು ತಿಳಿಸುತ್ತದೆ. ಗ್ರಾಮದೇವತೆ ಎಂದರೆ ಜನಪದರ ಜೀವನದ ಪ್ರತಿಬಿಂಬವಾಗಿದೆ. ಗ್ರಾಮದೇವತೆಗಳ ಜಾತ್ರೆ, ಆಚರಣೆಗಳನ್ನು ಅಧ್ಯಯನ ಮಾಡದೆ ಜನಪದರ ಜೀವನದ ರೀತಿ ನೀತಿಗಳನ್ನು ತಿಳಿಯಲು ಸಾಧ್ಯವೇ ಇಲ್ಲ.

ಅಲೆಮಾರಿಯಾಗಿದ್ದ ಮಾನವ ಆಹಾರದ ಹುಟುಕಾಟದಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆಹೋಗುತ್ತಿದ್ದ. ಆ ಕಾಲಘಟ್ಟದಲ್ಲಿ ಅವನಿಗೆ ನಿರ್ಧಿಷ್ಟವಾದ ನೆಲೆ ಇರಲಿಲ್ಲ. ಜಗತ್ತೆಲ್ಲ ವಿಸ್ಮಯವಾಗಿ ಕಾಣುತ್ತಿತ್ತು. ಪ್ರಕೃತಿಯಲ್ಲಿ ನಡೆಯುವ ಘಟನೆಗಳು ಕುತೂಹಲ ವಿಷಯಗಳಾಗಿದ್ದವು. ಬಿಸಿಲು, ಚಳಿ, ಮಳೆ, ಮಿಂಚು, ಗುಡುಗು, ಬಿರುಗಾಳಿ, ಪ್ರವಾಹ, ಭೂಕಂಪ, ಕಾಡ್ಗಿಚ್ಚು ಮುಂತಾದ ಅನಿರೀಕ್ಷಿತ ಘಟನೆಗಳಿಂದ ಮನುಷ್ಯನ ಬದುಕಿಗೆ ಅಪಾಯ ಇರುವುದರ ಅನುಭವವಾಯಿತು. ಆರ್ಭಟಿಸುವ ಮಿಂಚು, ಗುಡುಗಳನ್ನು ನೋಡಿ ತನಗಿಂತ ಬಲಿಷ್ಟವಾದ ಯಾವುದೋ ಅಂಶ ಇದೆ ಎಂದು ತಿಳಿದ. ಭಯಭೀತಗೊಂಡ. ಬಲಿಷ್ಟ ವ್ಯಕ್ತಿಗೆ ದುರ್ಬಲವ್ಯಕ್ತಿ, ದುಷ್ಟ ಪ್ರಾಣಿಗಳೊಡನೆ ಚಿಕ್ಕಪ್ರಾಣಿಗಳು ಹೆದರಿ ವಿನಯದಿಂದ ಒಲಿಸಿಕೊಳ್ಳುವ ವಾಸ್ತವ ಸತ್ಯದ ಅರಿವಾಯಿತು. ಮನುಷ್ಯನಿಗೆ ಆಪತ್ತು ತರುವ ಪ್ರಕೃತಿಯ ವಿಶೇಷಗಳಿಗೆ ಹೆದರುವ ಅಥವಾ ಅವುಗಳನ್ನು ವಿನಯದಿಂದ ಒಲಿಸಿಕೊಳ್ಳುವ ಪ್ರಯತ್ನ ನಡೆಯಿತು.

"ಪ್ರಕೃತಿಯಲ್ಲಿ ಕಾಣಿಸಿಕೊಳ್ಳುವ ಮಳೆ, ಗುಡುಗು, ಸಿಡಿಲು, ಮಿಂಚು ಇವುಗಳ ಬಗೆಗೆ ತನ್ನದೇ ಆದ ನಿಲುವು ತಾಳಿದ. ಇವುಗಳ ಆರ್ಭಟಗಳ ಬೆಳಕಿನಲ್ಲಿ ಕಾಣದ ಶಕ್ತಿಯ ಕೈವಾಡವಿದೆ ಎಂದು ಭಾವಿಸಿದ. ಅಂಥ ಅಗೋಚರ ಶಕ್ತಿಯನ್ನು ಆರಾಧಿಸುತ್ತಾ ಬಂದ. ಕಲ್ಲು, ಮರ, ಮಣ್ಣುಗಳಲ್ಲಿ ದೈವತ್ವದ ಅಂಶವನ್ನು ಕಂಡುಕೊಳ್ಳುತ್ತಾ ಬಂದ"(ಹಂಪ ನಾಗರಾಜಯ್ಯ, ಕರ್ನಾಟಕದ ಜಾತ್ರೆಗಳು, ಪುಟ.೯). ಪ್ರಕೃತಿಯ ವ್ಯಾಪಾರದ ಹಿಂದೆ ಒಂದು ಶಕ್ತಿ ಇದೆ ಎಂದು ಈಚಿನ ತಜ್ಞರು ಹೇಳುವ ಮಾತು ಬಹುಶಃ ಆದಿ ಮಾನವನಿಗೆ ಹೊಳೆಯುತ್ತಿರಲಿಲ್ಲ. ದೇವರು ಎಂಬ ಕಲ್ಪನೆಯ ಹಿಂದೆ ಭಯ, ಭಕ್ತಿ, ಆಶ್ಚರ್ಯ, ರಕ್ಷಣೆಯನ್ನು

ಬೇಡುವ ಮನೋವೃತ್ತಿ ಇವೆಲ್ಲವನ್ನೂ ಗುರುತಿಸಬಹುದು. ಅಂತು "ದೇವರನ್ನು ಎದುರು ಹಾಕಿಕೊಂಡರೆ ಅವನು ವಿಪತ್ತು ತಂದೊಡ್ಡುತ್ತಾನೆ ಎಂಬ ಭಯದಿಂದಲೇ ಸುತ್ತಲಿನ ಅಪಾಯಕರ ಪ್ರಪಂಚದ ಕೋಟಲೆಯಿಂದ ನಮ್ಮನ್ನು ಪಾರು ಮಾಡಿಯಾನು ಎಂಬ ನಿರೀಕ್ಷೆಯಿಂದಲೋ, ಅವನು ನಮ್ಮ ಉನ್ನತೋನ್ನತ ಮೌಲ್ಯಗಳ ಸಂಕೇತ ಎಂಬ ಭಾವನೆಯಿಂದಲೋ, ಒಂದಲ್ಲ ಒಂದು ಕಾರಣದಿಂದಾಗಿ ಈ ದೇವರು ಎಂಬ ಕಲ್ಪನೆ ನಮ್ಮ ಮನಸ್ಸಿನಲ್ಲಿ ಸುಳಿದಾಡುತ್ತಲೇ ಇರುತ್ತದೆ. ಸಾವಿರಾರು ವರ್ಷಗಳಿಂದ ನಮ್ಮೊಡನೆ ಇದ್ದದ್ದು ಈಗಲೂ ಇರುವುದು ಈ ಕಲ್ಪನೆ"(ಎ.ಎನ್.ಮೂರ್ತಿರಾವ್, ದೇವರು, ಪುಟ.೧೨).

ಆದಿಮಾನವನಿಗೆ ಇಂದಿನ ಹಾಗೆ ಅಗಾದವಾದ ಬುದ್ದಿಶಕ್ತಿ ಏನೂ ಇರಲಿಲ್ಲ. ಕಾಡು ಪ್ರಾಣಿಯೋಪಾದಿಯಲ್ಲೇ ಬದುಕುತ್ತಿದ್ದನು. ಸ್ವಲ್ಪ ಬುದ್ಧಿಬಂದ ನಂತರ ಬಹುಮುಖ್ಯವಾಗಿ ಜರುಗಿದ ಪ್ರಕೃತಿಯ ಭೀಕರ ದೃಶ್ಯಗಳಾದ ಅಂದರೆ ಇದ್ದಕ್ಕಿದ್ದ ಹಾಗೆ ಮೋಡ ಆವೃತವಾಗಿ ಮಳೆಸುರಿದದ್ದು, ಬಿರುಗಾಳಿ, ಪ್ರವಾಹಗಳ ಆರ್ಭಟ, ಸಿಡಿಲಿನ ಬಡಿತದಿಂದ ಮನುಷ್ಯನ ಸಾವು, ಭೂಕಂಪ, ಲಾವಾರಸ ಚಿಮ್ಮಿದಾಗ ಉಂಟಾದ ಅನೇಕ ಕಾಡ್ಗಿಚ್ಚು, ಬಾಯಿಬಿಡಿಸುವಂತ ರೋಗ, ರುಜಿನಗಳು ಮನುಷ್ಯನನ್ನು ಭಯಗ್ರಸ್ತನನ್ನಾಗಿ ಮಾಡಿರುವುದು ಸಹಜ ಎಂದೇ ಭಾವಿಸಬೇಕು. ಪ್ರಕೃತಿಯ ಈ ಘೋರ ಪರಿಣಾಮಗಳು ಮುಖಾಮುಖಿಯಾಗಿ ನಿಂತು ಮನುಷ್ಯನ ಚಿತ್ತ ಸ್ವಾಸ್ಥ್ಯವನ್ನು ಕೆಣಕಿ ಮಾನಸಿಕವಾಗಿ ತಲ್ಲಣಗೊಳ್ಳುವಂತೆ ಮಾಡಿವೆ. ಭಾವನಾತ್ಮಕ ಸಂಬಂಧದೊಂದಿಗೆ ಬಾಳುವ ಬುಡಕಟ್ಟು ಜೀವನದಲ್ಲಿ ಅವರಿಗೆ ಆಪತ್ತು ಅನಾಹುತಗಳು ಎದುರಾದವು, ಭೋರ್ಗರೆಯುವ ಕಡಲಮೊರೆತ, ಇಣುಕಿ ಮಾಯವಾಗುವ ಮಿಂಚು, ಗುಡುಗು, ಸಿಡಿಲಿನ ಆರ್ಭಟ ಇದ್ದಕ್ಕಿದ್ದಂತೆ ಹಬ್ಬಿದ ಕಾಡ್ಗಿಚ್ಚು, ಸೂರ್ಯ ಚಂದ್ರರ ದೈನಂದಿನ ಕಾರ್ಯ ಚಟುವಟಿಕೆ ಇನ್ನೂ ಮುಂತಾದ ನೈಸರ್ಗಿಕ ಕ್ರಿಯೆಗಳು ಅವರಲ್ಲಿ ಭಯವನ್ನುಂಟು ಮಾಡಿದವು. ಅವರ ನೆಮ್ಮದಿಯ ಜೀವನದಲ್ಲಿ ಏರುಪೇರು ಉಂಟಾದವು. ಹೀಗೆ ಪ್ರಕೃತಿಯಲ್ಲಿ ಉಂಟಾಗುವ ಆಕಸ್ಮಿಕ ವೈಚಿತ್ರ್ಯಗಳು ಮಾನವನಲ್ಲಿ ಭಯ, ಆತಂಕಗಳ ಜೊತೆಗೆ ಆಶ್ಚರ್ಯವನ್ನುಂಟು ಮಾಡಿದವು.

"ಪ್ರಕೃತಿಯ ಈ ಎಲ್ಲಾ ವೈಪರೀತ್ಯಗಳ ಆಳಗರ್ಭದಲ್ಲಿ ಯಾವುದೋ ಅಗೋಚರವಾದ ಶಕ್ತಿ ಇದೆ, ಅದು ತನ್ನ ಎದುರು ಅದ್ಭುತ ಶಕ್ತಿಯನ್ನು ಪ್ರದರ್ಶಿಸುತ್ತಿದೆ. ಅದರ ಶಕ್ತಿ ಅಗಾಧವಾಗಿದೆ ಎಂಬುದನ್ನು ಭಯಾನಕ ಕಲ್ಪನೆಯಲ್ಲಿ ಕಲ್ಪಿಸಿಕೊಂಡ ಮಾನವ ತನಗೆ ಎಟುಕಲಾರದ ಅದ್ಭುತ ಪವಾಡಗಳ ಹಿನ್ನೆಲೆಯಲ್ಲಿ ಶಕ್ತಿ ದೇವತೆಗಳನ್ನು ವಿವಿಧ ಸ್ವರೂಪಗಳಲ್ಲಿ ಕಲ್ಪಿಸಿಕೊಂಡು ಅವುಗಳ ಎದುರು ಮೊರೆಯಿಟ್ಟು ತಾನು ತಿನ್ನುವ ಆಹಾರ ಪದಾರ್ಥಗಳಷ್ಟೇ ಆ ಶಕ್ತಿದೇವತೆಗಳಿಗೆ ನೈವೇದ್ಯವಾಗಿ ಅರ್ಪಿಸಿದ ಕರಾಳ ಆಚರಣೆಗಳನ್ನು ಬೆಳಕಿಗೆ ತಂದ. ಹೀಗೆ ಶಕ್ತಿದೇವತೆಗಳು ರೂಪುಗೊಂಡವು"(ಡಾ.ಬಿ.ಪಿ.ಪಾಟೀಲ, ಗ್ರಾಮದೇವತೆಗಳು, ಪುಟ.೩). ಅವು ಗ್ರಾಮದೇವತೆಗಳಾಗಿ ಮಾತೃದೇವತೆಗಳಾಗಿ ರೂಪುಗೊಂಡವು.

ಅ. ಕಬ್ಬಾಳಮ್ಮ

ಕಥೆಗಳ ಹಿನ್ನಲೆ

ಕಬ್ಬಾಳಮ್ಮ ವಲಸೆ ದೇವತೆಯಾಗಿದ್ದು ಪಕ್ಕದ ತಮಿಳುನಾಡಿಂದ ಬಂದ ದೇವತೆಯಾಗಿದ್ದಾಳೆ. ಇದಕ್ಕೆ

ಜನಪದರ ಹಲವು ಕಥೆ, ಐತಿಹ್ಯಗಳು ಸಿಗುತ್ತವೆ. ತಮಿಳುನಾಡಿನ ಒಂದು ಹಳ್ಳಿಯಲ್ಲಿ ಬರಿಯಪ್ಪ ಮತ್ತು ಬರಿಯಮ್ಮ ಎಂಬ ದಂಪತಿಗಳಿದ್ದರಂತೆ. ಅವರಿಗೆ ಸುಮಾರು ವರ್ಷದಿಂದ ಮಕ್ಕಳಿಲ್ಲದ ಕಾರಣ ಅವರು ತಪಸ್ಸು ಮಾಡಿದರಂತೆ. ಆಗ ಪಾರ್ವತಿ ಪರಮೇಶ್ವರರು ಪ್ರತ್ಯಕ್ಷವಾಗಿ ವರವಿತ್ತರಂತೆ. ಆ ವರಗಳೆಂದರೆ ಮೂರು ಸೀತಾಫಲವನ್ನು ಕೊಟ್ಟು ಈ ಫಲದಲ್ಲಿ ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿಯೂ ಜನಿಸುತ್ತಾಳೆ. ಹಾಗೂ ಪಾರ್ವತಿಯು ಒಂದು ಬೇಲದ ಫಲದ ವರದಲ್ಲಿ ಓರ್ವ ಪುತ್ರಿಯು ಜನಿಸುತ್ತಾಳೆ. ಈಕೆಗೆ ಹದಿನಾರು ವರ್ಷ ತುಂಬಿದಾಕ್ಷಣ ನಿನ್ನ ಮಾಂಗಲ್ಯಭಾಗ್ಯ ಕಳಚುತ್ತದೆಂದು ಹೇಳಿ ಅವರುಗಳು ಮಾಯವಾದರಂತೆ. ಆ ದಂಪತಿಗಳು ದುಃಖದಲ್ಲಿ ಹಿಂತಿರುಗಿ ಮಹಾಶಿವರಾತ್ರಿಯಂದು ಆ ಫಲಗಳನ್ನು ಬರಿಯಮ್ಮನು ಸೇವಿಸುತ್ತಾಳೆ. ನವಮಾಸಗಳು ಕಳೆದು ಶುಭ ಕಾರ್ತಿಕ ಹುಣ್ಣಿಮೆಯಂದು ನಾಲ್ಕು ಮಕ್ಕಳ ಜನನವಾಗುತ್ತದೆ. ಹಿರಿಯವನೇ ಬಸವ, ಎರಡನೆಯವನು ಭೈರವ, ಮೂರನೆಯವಳು ಬಿಸಿಲಮ್ಮ ಹಾಗೂ ಕಿರಿಯ ಪುತ್ರಿಯೇ ನಮ್ಮ ದೇವಿ ಕಬ್ಬಾಳಮ್ಮ. ಇವರ ವಿದ್ಯಾಭ್ಯಾಸದ ಕಡೆ ಗಮನ ಹರಿಸಲಾಗಿ ಈ ನಾಲ್ವರನ್ನು ಕರ್ನಾಟಕದಲ್ಲಿರುವ ಮುತ್ತತ್ತಿಯ ಸಮೀಪದಲ್ಲಿರುವ ಮಾಂಬಳ್ಳಿ ಎಂಬ ಸ್ಥಳದಲ್ಲಿದ್ದ ಗುರು ನಲ್ಲೂರಯ್ಯನವರ ಆಶ್ರಮದಲ್ಲಿ ವಿದ್ಯಾಭ್ಯಾಸಕ್ಕೋಸ್ಕರ ಸೇರಿಸಲಾಯಿತು. ಗುರುಕುಲದಲ್ಲಿ ಸುಮಾರು ಹದಿನಾರು ವರ್ಷಗಳ ಕಾಲ ವಿದ್ಯಾಭ್ಯಾಸ ನಡೆಸಿದ ನಂತರ ಮತ್ತೆ ಊರಿಗೆ ಹಿಂದಿರುಗಿದರು. ಊರಿಗೆ ಬಂದ ಮೇಲೆ ಕಬ್ಬಾಳಮ್ಮನು ಅವಳ ಪ್ರೀತಿಯ ತೋಟಕ್ಕೆ ಹೋದಾಗ ಅಲ್ಲಿ ನೂರಾರು ಗೋವುಗಳು ತೋಟವನ್ನು ನಾಶಮಾಡುತ್ತಿದ್ದ ದೃಶ್ಯವನ್ನು ಕಂಡಾಗ ಅವಳಿಗೆ ಕೋಪ ಬಂದ ಸಂದರ್ಭ ಹೇಗಿತ್ತೆಂದರೆ "ಕುಂಭದ್ರೋಣ ಮಳೆಬಂದು, ಸಿಡಿಲು ಬಳ್ಳಿ ಹರಿದು ಬಂದು ಆಕೆಗೆ ಲೀನಶಕ್ತಿ ಆಹ್ವಾನವಾಯಿತಂತೆ. ಪಾರ್ವತಿಯ ಪ್ರೇರಣೆಯಿಂದ ಒಂದು ತಲೆಕೂದಲನ್ನು ತೆಗೆದು ಆ ನೂರಾರು ಗೋವುಗಳನ್ನು ಬಂಧಿಸಿದಳಂತೆ". ಅವುಗಳನ್ನು ರಾಜಬೀದಿಯಲ್ಲಿ ಎಳೆದು ತರುವಾಗ ಈಕೆಯ ಧೈರ್ಯ ಸಾಹಸ ಮತ್ತು ಸೌಂದರ್ಯಕ್ಕೆ ಅಲ್ಲಿನ ರಾಜನು ಮೋಹಿತನಾದನಂತೆ.

ರಾಜನು ಮನದಾಳದ ವಿಷಯವನ್ನು ತನ್ನ ಮಂತ್ರಿಗೆ ತಿಳಿಸಿ ಅವಳ ತಂದೆಯಾದ ಬರಿಯಪ್ಪನನ್ನು ಪಲ್ಲಕ್ಕಿಯಲ್ಲಿ ತರಲು ಆಜ್ಞಾಪಿಸಿದನಂತೆ. ಅದೇರೀತಿ ಆತನನ್ನು ಪಲ್ಲಕ್ಕಿಯಲ್ಲಿ ಕರೆತಂದು ರಾಜನು ಕಬ್ಬಾಳಮ್ಮನನ್ನು ವಿವಾಹ ಮಾಡಿಕೊಡಲು ಒತ್ತಾಯಿಸುತ್ತಾನೆ. ಆದರೆ ಇದಕ್ಕೆ ಮಣಿಯದ ಬರಿಯಪ್ಪನನ್ನು ಅರಣ್ಯದಲ್ಲಿ ಶಿರಚ್ಛೇದ ಮಾಡಲಾಯಿತಂತೆ. ಈ ವಿಷಯ ತಿಳಿದ ಕಬ್ಬಾಳಮ್ಮ ಇಡೀ ಸಾಮ್ರಾಜ್ಯವನ್ನೇ ನಾಶಮಾಡಿ ತನ್ನ ತಾಯಿ ತಂಗಿಯರ ಜೊತೆ ಉತ್ತರ ದಿಕ್ಕಿಗೆ ಪ್ರಯಾಣ ಮಾಡಿ ಕರ್ನಾಟಕಕ್ಕೆ ದಾವಿಸಿದಳಂತೆ. ಕಬ್ಬಾಳಮ್ಮ ಕಾವೇರಿ ನದಿಯನ್ನು ದಾಟಿ ಮುತ್ತತ್ತಿರಾಯನ ದರ್ಶನ ಪಡೆದು, ಸಾತನೂರು ಸಮೀಪವಿರುವ ಅತ್ತಿಹಳ್ಳಿಯ ಅಡಿಕೆ ತೋಪಿನಲ್ಲಿ ವಿಶ್ರಾಂತಿ ಪಡೆದರಂತೆ. ನಂತರ ಸೂರನಹಳ್ಳಿಯನ್ನು ದಾಟಿ ಹೊಸಹಳ್ಳಿಯ ಬನ್ನಿ ಮರದ ತೋಪಿನಲ್ಲಿ ತಂಗಿದ್ದರಂತೆ. ತಂಗಿ ಬಿಸಿಲಮ್ಮನಿಗೆ ಎಚ್ಚರವಾಗಿ ಮುಂದಿನ ಪ್ರಯಾಣ ಬೆಳೆಸಲು ತಾಯಿ ಬರಿಯಮ್ಮನನ್ನು ಎಚ್ಚರಿಸಿದಾಗ ಆಕೆಯು ಶಿವೈಕ್ಯಳಾಗಿದ್ದಳಂತೆ. ಅಂದಿನಿಂದ ಅದನ್ನು 'ಬರಿಯಮ್ಮನ ತೋಪು' ಎಂದು ಕರೆಯುವುದು ವಾಡಿಕೆಯಲ್ಲಿದೆ. ಶವಸಂಸ್ಕಾರಕ್ಕಾಗಿ ಅಣ್ಣಂದಿರ ಸಹಾಯದಿಂದ ಶ್ರೀಗಂಧದ ಚಿತೆಯನ್ನು ಸಿದ್ಧಮಾಡಿ ತಾಯಿಯ ಶವಸಂಸ್ಕಾರ ಮಾಡಲಾಯಿತಂತೆ.

ಕಬ್ಬಾಳಮ್ಮನು ಮುಂದೆ ಸಾಗಿ 'ಬಂಪಣಾಪುರ' (ಈಗಿನ ಕಬ್ಬಾಳಿಗೆ) ಬಂದಳಂತೆ. ಈ ಗ್ರಾಮದ ದೇವತೆಗಳಾದ ಮಂತ್ರದ ಮಾರಮ್ಮ ಮತ್ತು ಕೋಣದ ಮಾರಮ್ಮರಿಗೆ ಈ ರೀತಿ ಕೇಳಿದಳಂತೆ. "ನಾನು ಶಿವನನ್ನು ಆರಾಧಿಸಬೇಕು. ಆದ್ದರಿಂದ ನನಗೂ ಜಾಗ ಕೊಡಿ" ಎಂದಾಗ ಅವರು ಒಮ್ಮೆ ಜಾಗ ನೀಡಿದರಂತೆ. ಆಕೆ ಅಲ್ಲೇ ನೆಲೆಸಿ ತನ್ನ ತಂಗಿಯೂ ಬಿಸಿಲಮ್ಮನನ್ನು ಕರೆದು ಪಶ್ಚಿಮ ದಿಕ್ಕಾಗಿರುವ ಕಣಿವೆಯನ್ನು ದಾಟಿ ಗಂಡಸಗೂರು (ಈಗಿನ ಹುಣಸನಹಳ್ಳಿಯಲ್ಲಿ)ನಲ್ಲಿ ನೆಲೆಸು ಎಂದಳಂತೆ. ತನ್ನ ಅಣ್ಣಂದಿರನ್ನು ತನ್ನ ಜೊತೆಯಲ್ಲಿಯೇ ಇರಿಸಿಕೊಂಡಳಂತೆ.

ದೇವಾಲಯದ ಹಿಂಭಾಗದಲ್ಲಿರುವ ಬೆಟ್ಟವನ್ನು ನೋಡಿ ಕೇವಲ ಮೂರೇ ಮೂರು ಹೆಜ್ಜೆಯಲ್ಲಿ ಬೆಟ್ಟವನ್ನು ಹತ್ತಿದಳಂತೆ. ಶಿವ ಪಾರ್ವತಿಯರ ವರಪ್ರಸಾದದಿಂದ ಜನಿಸಿದಳಾದ್ದರಿಂದ ಕಬ್ಬಾಳಮ್ಮನ ಮಹಾತ್ಮೆಯನ್ನು ಪರಿಚಯಿಸುವ ಸಲುವಾಗಿ 'ಭೀಮೇಶ್ವರ'ನಾಗಿ ಅವಳ ಮುಂದೆ ಪ್ರತ್ಯಕ್ಷನಾದನಂತೆ. ಈ ದುರ್ಗವನ್ನು ಯಾರ ಅಪ್ಪಣೆ ಇಲ್ಲದೇ ಪ್ರವೇಶಿಸಿದ್ದರಿಂದ ನನ್ನನ್ನು ಪಗಡೆಯಾಟದಲ್ಲಿ ಗೆಲ್ಲದೇ ಹಿಂತಿರುಗುವಂತಿಲ್ಲ ಎಂದಾಗ ಶುಭದಿನವನ್ನು ಗೊತ್ತುಮಾಡಿ ಭೀಮೇಶ್ವರನು ತನ್ನ ಜೊತೆಯಲ್ಲಿ ಹೆಬ್ಬೆಟ್ಟರಾಯ ಮತ್ತು ಕಂಬದ ರಾಯನನ್ನು ಕರೆದುಕೊಂಡು ಬಾಳೆಯ ಕಟ್ಟೆಯ ಹತ್ತಿರ ಬಂದನಂತೆ. ಈ ಕಡೆ ಕಬ್ಬಾಳಮ್ಮ ತನ್ನ ಅಣ್ಣಂದಿರಾದ ಬಸವ ಭೈರವರ ಜೊತೆ ಬಂದಳಂತೆ. ಆಗ ಇವರಿಬ್ಬರ ನಡುವೆ ಒಪ್ಪಂದವಾಗಿ ಜೂಜಿನಲ್ಲಿ ನೀನು ಗೆದ್ದರೆ ದುರ್ಗವನ್ನು ಬಿಟ್ಟುಕೊಡುತ್ತೇನೆ ಮತ್ತು ಕೋಟೆ ಬಾಗಿಲು ಕಾವಲು ಮಾಡುತ್ತೇನೆ. ಆಕಸ್ಮಾತ್ ನೀನು ಸೋತರೆ ನಮ್ಮ ಗಡಿಯನ್ನೇ ಬಿಟ್ಟು ತಲೆಮರೆಸಿಕೊಂಡು ಹೋಗಬೇಕೆಂದು ಹೇಳಿದಾಗ ಕಬ್ಬಾಳಮ್ಮ ಒಪ್ಪಿ ಆಟಕ್ಕೆ ಇಳಿದಳಂತೆ.

ಕಬ್ಬಾಳಮ್ಮನು ಮೂರನೇ ಸುತ್ತಿಗೆ ಇಳಿದಾಗ ಪರಶಿವನು ಭಕ್ತೆಯ ಗೆಲುವಿಗೆ ಸಂತೈಸುತ್ತಾನೆ. ಕಡೆಗೂ ಕಬ್ಬಾಳಮ್ಮನು ಪಗಡೆಯಾಟದಲ್ಲಿ ಗೆಲುವನ್ನು ಸಾಧಿಸೇ ತೀರುತ್ತಾಳೆ. ಒಪ್ಪಂದ ಪ್ರಕಾರ ಭೀಮೇಶ್ವರನು ದುರ್ಗವನ್ನು ಬಿಟ್ಟುಕೊಟ್ಟು ಕೋಟೆಬಾಗಿಲಿನ ಕಾವಲುಗಾರನಾಗಿ ಕೆಲಸ ನಿರ್ವಹಿಸುತ್ತಾನೆ. ಇದರಿಂದ ಈತನನ್ನು 'ಕೋಟೇಶ್ವರ' ಎಂದು ಕರೆಯುತ್ತಾರೆ. ಅಣ್ಣಂದಿರಾದ ಬಸವ ಭೈರವರನ್ನು ಬಸವೇಶ್ವರ, ಭೈರವೇಶ್ವರ ಎಂಬ ಹೆಸರುಗಳಿಂದ ಪ್ರಸಿದ್ಧಿಯಾಗುತ್ತೀರಿ ಎಂದು ಆಶೀರ್ವಾದ ಮಾಡಿದಳಂತೆ. ತನ್ನ ದಿವ್ಯ ತೇಜಸ್ಸಿನಿಂದ ಇಪ್ಪತ್ತನಾಲ್ಕು ಹಳ್ಳಿಗಳನ್ನು ತನ್ನ ವಶಕ್ಕೆ ತೆಗೆದುಕೊಂಡಳಂತೆ. ಯಾವುದಾದರೂ ನ್ಯಾಯ ತೀರ್ಮಾನ ಮಾಡಲು ಹೋದಾಗ ಪರಶಿವನ ದಿವ್ಯಮಣಿಯನ್ನು ತನ್ನ ಮಡಿಲಲ್ಲಿಟ್ಟುಕೊಂಡು ಗೆಲವನ್ನು ಮತ್ತು ನ್ಯಾಯವನ್ನು ಮಾಡುತ್ತಿದ್ದಳಂತೆ.

ಹೀಗೆ ಕಬ್ಬಾಳಮ್ಮ ಯೌವ್ವನಾವಸ್ಥೆಗೆ ಬಂದಾಗ ಅಣ್ಣಂದಿರು ವರನ ಅನ್ವೇಷಣೆಯಲ್ಲಿ ತೊಡಗುತ್ತಾರೆ. ಆಗ ಒಂದು ಅಶರೀರವಾಣಿ ಕೇಳಿಸಿದಂತಾಗಿ ಸೂರ್ಯೋದಯಕ್ಕೆ ಮುನ್ನ ಉತ್ತರಕ್ಕೆ ಪ್ರಯಾಣ ಬೆಳೆಸಿ ಸಿಂಗರಾಜಿಪುರದ ಸಾಲುಬೆಟ್ಟದ ಗವಿಯಲ್ಲಿ ನಿನ್ನ ತಂಗಿಗೆ ಅನುರೂಪವಾದ ವರನು ಸಿಗುತ್ತಾನೆಂದು ಹೇಳಿದಾಗ ಅದರ ಪ್ರಕಾರ ಅವರು ಹೋದಾಗ ಅಲ್ಲಿ ರಂಗಪ್ಪನೆಂಬ ವರನು ಸಿಗುತ್ತಾನೆ. ಆತನನ್ನು ಒಪ್ಪಿಸಿ ವಿವಾಹಕ್ಕೆ ಸಿದ್ಧತೆ ಮಾಡುತ್ತಾರೆ. ಶುದ್ಧ ಪೌರ್ಣಿಮೆಯ ದಿನ ಬಹಳ ವೈಭವದಿಂದ ಇವರ ವಿವಾಹ ಮಹೋತ್ಸವವು

ಜರುಗಿತಂತೆ. ಒಂದು ದಿನ ರಂಗಪ್ಪನ ಕೈಯಲ್ಲಿ ಒಂದು ಕಾಸನ್ನು ಕೊಟ್ಟು ಸಂತೇಲಿ ಸಾಮಾನು ತರುವಂತೆ ಹೇಳಿದಳಂತೆ. ಆದರೆ ಒಂದು ಕಾಸಿಗೆ ಏನೂ ತರದ ರಂಗಪ್ಪನು ಬರಿಗೈಯಲ್ಲಿ ಹಿಂದಿರುಗುತ್ತಾನೆ. ಅದನ್ನು ಕಂಡ ಕಬ್ಬಾಳಮ್ಮ ಲೋಕಕಲ್ಯಾಣಕ್ಕಾಗಿ ಸಂಸಾರ ಬಂಧನದಿಂದ ಬಿಡಿಸಿಕೊಳ್ಳಲು ಗಂಡನಿಗೆ ಸವಾಲು ಹಾಕಿ ನೀವು ತರಲಾಗದ ಸಾಮಾನುಗಳನ್ನು ನಾನು ತಂದರೆ ನೀವು ನನ್ನ ಕೊಂಡಕ್ಕೆ ಕೆಂಡವನ್ನು ಹೊರಬೇಕೆಂದು ಹೇಳಿ ಒಂದು ವೇಳೆ ನಾನು ತರದಿದ್ದರೆ ಅಗ್ನಿ ಪ್ರವೇಶ ಮಾಡುತ್ತೇನೆಂದು ತಿಳಿಸಿ ಸಂತೆಗೆ ಹೊರಟಳಂತೆ. ಸಂತೆಗೆ ಕಬ್ಬಾಳಮ್ಮನು ಬಂದ ತಕ್ಷಣ ವ್ಯಾಪಾರಿಗಳು ಗರ ಬಡಿದವರಂತೆ ನಿಂತಿದ್ದರಂತೆ. ಈಕೆಗೆ ಬೇಕಾದ ವಸ್ತುಗಳು ಅವಾಗಿಯೇ ಬಂದು ಗಾಡಿಯಲ್ಲಿ ಅಣಿಯಾದವಂತೆ. ಕಣ್ಣುಬಿಟ್ಟ ತಕ್ಷಣ ವ್ಯಾಪಾರಸ್ಥರಿಗೆ ಒಂದಕ್ಕೆ ನೂರರಷ್ಟು ವಹಿವಾಟು, ಲಾಭಕ್ಕೆ ಲಾಭವು ದೊರಕಿತಂತೆ.

ಈ ವಿಷಯ ತಿಳಿದ ರಂಗಸ್ವಾಮಿ ಶ್ರೀಗಂಧ ಸೌದೆಯಿಂದ ಅಗ್ನಿಗೆ ಆಹುತಿಯಾದನಂತೆ. ಅಂದಿನಿಂದ ಈತನು ದೇವಾಲಯದ ಬಲಭಾಗದಲ್ಲಿರುವ ರಸ್ತೆಯಲ್ಲಿ ಶಿಲೆಯಾಗಿ ನಿಂತಿದ್ದಾನೆ. ಅಂದಿನಿಂದ ಪವಾಡ ಭಕ್ತಾದಿಗಳು ಬಂಪಣಾಪುರವನ್ನು ಕಬ್ಬಾಳು ಎಂದು ಕರೆದರಂತೆ. ಇಲ್ಲಿ ನಡೆದ ವಿಷಯಗಳಲ್ಲಿ ತನ್ನ ಅಕ್ಕನಾದ ಬಿಸಿಲಮ್ಮನಿಗೆ (ಕೆಲವು ಪಾಠಾಂತರಗೊಂಡ ಕತೆಗಳಲ್ಲಿ ತಂಗಿ ಎಂದು ಪರಿಷ್ಕೃತವಾಗಿದೆ) ತಿಳಿದು ತಂಗಿಯು ಬರುವ ಸುದ್ದಿಕೇಳಿ ತನ್ನ ಮಕ್ಕಳನ್ನು ಸಿಡಿರಣ್ಣನ್ನು ಬೆಟ್ಟಕ್ಕೆ ಕಳುಹಿಸಿ ಮಿಕ್ಕವನ್ನು ಪಂಜರದಲ್ಲಿ ಬಚ್ಚಿಡುತ್ತಾಳೆ. ಇದನ್ನರಿತ ದೇವಿಯು ಶಾಪವಿತ್ತಳಂತೆ. "ಸಿಡಿರಣ್ಣನು ಹಿಂದಿರುಗಲಿ ಮತ್ತು ಪಂಜರದಲ್ಲಿರುವ ಮಕ್ಕಳು ಕಲ್ಲಾಗಲಿ" ಎಂದು. ಆದರೆ ಸಿಡಿರಣ್ಣನು ತಮ್ಮಂದಿರ ಈ ಸ್ಥಿತಿ ನೋಡಿ ತುಂಬಾ ದುಃಖಿತನಾಗಿ ತನ್ನ ಚಿಕ್ಕಮ್ಮನನ್ನು ಕಾಡಿ ಬೇಡಿ ಮಹಾಶಿವರಾತ್ರಿ ಜಾತ್ರೆಗೆ ಮುಡಿಯನ್ನು ನೀಡುತ್ತೇನೆ. ಮತ್ತು ಸಿಡಿ ಆಡಿಸುತ್ತೇನೆಂಬ ಹರಕೆ ಹೊತ್ತನಂತೆ. ನಂತರ ಶಾಪ ವಿಮೋಚನೆಯಾಯಿತಂತೆ.

ನಂತರ ಕಾರೆಯತಾಳು ಕಣಿವೆ ಮಾರ್ಗವಾಗಿ ಸ್ವಸ್ಥಾನಕ್ಕೆ ಹಿಂದುರುಗಿದಳಂತೆ. ಶರೀರಕ್ಕೆ ದಣಿವಾಗಿದ್ದರಿಂದ ನಿದ್ರಾವಸ್ಥೆಯಲ್ಲಿದ್ದಾಗ ಶಿವ ಪಾರ್ವತಿಯರು ಪ್ರತ್ಯಕ್ಷವಾಗಿ 'ಮಗಳೇ ಮುಂಬರುವ ಗುರುಪೌರ್ಣಿಮೆಯ ದಿನ ಮಾನವ ಶರೀರವನ್ನು ತ್ಯಜಿಸಿ ದೇವಲೋಕವನ್ನು ಸೇರುವೆ' ಎಂಬ ವಾಣಿಯು ಕೇಳಿದಾಗ ಎಚ್ಚರವಾಗಿ ನೆರೆಹೊರೆಯ ಹಿರಿಯರು ಹಾಗೂ ಅಂದಿನ ಪಾಳೇಗಾರ ಕಟ್ಟೆಮನೆಯ ಯಜಮಾನ ಐದುಸಾವಿರ ಕಂಡುಗ ರಾಗಿ ಬೆಳೆಯುವ ಜಮೀನುದಾರ ರಾಮಭದ್ರಪ್ಪನವರನ್ನು ಕರೆಯಿಸಿ ನಡೆದ ವಿಚಾರವನ್ನು ತಿಳಿಸಿ ಈ ರೀತಿ ಹೇಳಿದಳಂತೆ. ಕಾವೇರಿ ನದಿ ದಾಟಿದರೆ ಮುಂದೆ ಮಾಂಬಳ್ಳಿ ಎಂಬ ಊರಿದೆ ಅಲ್ಲಿ ತನ್ನ ಗುರುಗಳಾದ ನಲ್ಲೂರಯ್ಯನವರ ಆಶ್ರಮವಿದೆ. ಅವರನ್ನು ಕರೆಯಿಸಿ ಅವರ ಜೊತೆ ಮಾತನಾಡಬೇಕಿದೆ ಎಂದಾಗ ರಾಮಭದ್ರಪ್ಪನವರು ಗುರುಗಳನ್ನು ಕರೆಸಿದರಂತೆ. ದೇವಿಯು ಅವರಿಗೆ ನಡೆದ ವೃತ್ತಾಂತವನ್ನೆಲ್ಲ ವಿವರಿಸಿ ಹೇಳಿ ನಮ್ಮ ಆಲಯ ಪಕ್ಕದಲ್ಲಿರುವ ಶ್ರೀಗಂಧದ ಮರ (ಹಿಂದೆ ಇತ್ತಂತೆ ಆದರೆ ಕಾಲ ಕಳೆದಂತೆಲ್ಲಾ ಅದರ ಗಂಧವೂ ಸಹ ಕಾಣದಂತಾಗಿದೆ)ದಿಂದ ಪೀಠಮಾಡಿ, ಸುರಹೊನ್ನೆ ಮರದಿಂದ ವಿಗ್ರಹಕಟ್ಟಿಸಿ ಕಾಲಾನಂತರ ಆ ಮರವೇ ಶಿಲೆಯಾಗುತ್ತದೆಂದು ಹೇಳಿ ಗುರುಪೂರ್ಣಿಮೆಯ ದಿನ ಶಿವೈಕ್ಯಳಾದಳಂತೆ.

ನಂತರ ಅದೇ ದಿನ ಕೋಟಿಗೊಬ್ಬ ಸಂತ, ಸಾವಿರಾರು ಶರಣರು ಸೇರಿ ಮತ್ತು ಗುರುನಲ್ಲೂರಯ್ಯನವರು ರಾಮಭದ್ರಪ್ಪನವರಿಂದ ಪ್ರತಿಷ್ಠಾಪನಾಕಾರ್ಯ ನೆರವೇರಿಸಿದರಂತೆ. ಮಂತ್ರದ ಮಾರಮ್ಮ ಮತ್ತು ಕೋಣದ ಮಾರಮ್ಮ ಹಾಗೂ ಕಬ್ಬಾಳಮ್ಮ ನಿತ್ಯ ಪೂಜೆ ಆಗುವುದಿಲ್ಲ. ಮಂಗಳವಾರ, ಶುಕ್ರವಾರ, ಭಾನುವಾರ

ಪೂಜೆ ಇತ್ತು(ಇಂದು ಪ್ರತಿದಿನ ಪೂಜೆ ನಡೆಯುತ್ತದೆ). ದೇವಿಯು ರಾಮಭದ್ರಪ್ಪ ಅವರ ಕನಸಿನಲ್ಲಿ ಬಂದು ಗುರುನಲ್ಲೂರಯ್ಯನವರ ಊರಾದ ಮಾಂಬಳ್ಳಿಯಲ್ಲಿ ಮಾರೇಗೌಡರ ವಂಶಸ್ಥರನ್ನು ಕರೆಸಲು ತಿಳಿಸಿದಳು. ಇದನ್ನು ಮಾರೇಗೌಡನು ನಿರಾಕರಿಸಿದಾಗ ದೇವಿಯು ಕೋಪಗೊಂಡು ಆತನ ವಂಶಸ್ಥರಿಗೆ ಅಂಟುರೋಗ ತಗಲಿತ್ತಂತೆ. ನಂತರ ದೇವಿಯ ಹತ್ತಿರ ಕ್ಷಮೆ ಯಾಚಿಸಲು ಅವನ ಹಿರಿಯ ಮಗನಾದ ಮಾರೀಗೌಡನನ್ನು ಪೂಜೆಮಾಡಲು ಕಳುಹಿಸಿದನಂತೆ.

ತಾಯಿಗೆ ಬಹು ನಿಷ್ಠೆಯಿಂದ ಪೂಜೆಯನ್ನು ನೆರವೇರಿಸುತ್ತಾ ಕಾಲ ಕಳೆವಾಗ ಊರಿನ ಹಿರಿಯರೆಲ್ಲರೂ ಈತನ ವಿವಾಹಕ್ಕೆ ಅಣಿ ಮಾಡಿದರಂತೆ. ನಂತರ ಕೆಂಪಮ್ಮ ಎಂಬ ಕನ್ಯೆಯ ಜೊತೆ ವಿವಾಹ ನಡೆಯಿತಂತೆ. ಕೆಂಪಮ್ಮನು ಗರ್ಭವತಿಯಾಗಿ ಎರಡು ಮಗುವಿಗೆ ಜನ್ಮ ನೀಡಿದಳಂತೆ. ಮೊದಲನೆಯದು ಈರಮಾಸ್ತಿ ಕೆಂಪಮ್ಮ. ಈಕೆಯು ಕಬ್ಬಾಳಮ್ಮನ ಅನನ್ಯ ಭಕ್ತೆಯಂತೆ. ಇವಳಿಗೆ ಏಳು ಮಾರುದ್ದ ಜೆಡೆ ಬೆಳೆದಿತ್ತಂತೆ. ಅವಳು ಬ್ರಹ್ಮಚಾರಿಣಿಯಾಗಲು ತುಂಬಾ ಆಸೆ ಪಡುತ್ತಿದ್ದಳಂತೆ. ಅವಳು ವಿವಾಹವಾಗಲು ನಿರಾಕರಿಸುತ್ತಿದ್ದರಿಂದ ಹಾಗೂ ಮಹಾಸಾಧ್ವಿ ಎಂದು ಪರಿಚಯಿಸುವ ಸಲುವಾಗಿ ಪರೀಕ್ಷೆಗೆ ಒಡ್ಡಲು ಗುರುನಲ್ಲೂರಯ್ಯನವರ ಕನಸಿನಲ್ಲಿ ಬಂದು ತಾಯಿ ಹೇಳಿದಳಂತೆ. ಅವರ ಪ್ರಕಾರ ಗುರುಗಳು ಈರಮಾಸ್ತಿ ಕೆಂಪಮ್ಮನಿಗೆ ವಿಚಾರ ತಿಳಿಸಿ, ನೀನು ನಿಜವಾದ ಕಬ್ಬಾಳಮ್ಮನ ಭಕ್ತೆಯಾಗಿದ್ದರೆ ಬೊಗಸೆಯಲ್ಲಿ ಕೆಂಡವನ್ನು ಬಾಯಿಗೆ ತುಂಬುತ್ತೇವೆ. ಅದನ್ನು ಸ್ವೀಕರಿಸು ಎಂದಾಗ ಅದಕ್ಕೊಪ್ಪಿ ಈರಮಾಸ್ತಿ ಕೆಂಪಮ್ಮ ಹಿರಿಯರ ಸಮ್ಮುಖದಲ್ಲಿ ಹಾಗೂ ಆಲಯದ ಮುಂದೆ ಎರಡೂ ಕೈ ಜೋಡಿಸಿ ಅಂಜಲೀಬದ್ಧಳಾಗಿ ನಿಂತಿದ್ದಾಗ ರಾಮಭದ್ರಪ್ಪನವರು ಬೊಗಸೆ ಕೆಂಡವನ್ನು ಆಕೆಯ ಬಾಯಿಗೆ ಹಾಕಿದರಂತೆ.

ಅದನ್ನು ಈರಮಾಸ್ತಿ ಕೆಂಪಮ್ಮನು ನಸುನಗುತ್ತಾ ಸ್ವೀಕರಿಸಿದಳಂತೆ. ನಂತರ ಕಬ್ಬಾಳಮ್ಮನ ಗುಡಿಯನ್ನು ಮೂರು ಸುತ್ತು ಪ್ರದಕ್ಷಿಣೆ ಮಾಡಿ ಪೂರ್ವಾಭಿಮುಖವಾಗಿ ದೇವಾಲಯದ ಎದುರು ನಿಂತಿದ್ದಾಗ ದೇವಾಲಯದ ಮುಂದೆ ಭೂಮಿಯು ಎರಡು ಭಾಗವಾಯಿತಂತೆ. ಆಗ ಈರಮಾಸ್ತಿ ಕೆಂಪಮ್ಮ ಕೈಮುಗಿದು ಅದರೊಳಗೆ ಹಾರಿದ ತಕ್ಷಣ ನಲ್ಲೂರಯ್ಯನವರು ಆಕೆಯ ಜಡೆಯನ್ನು ಹಿಡಿದರಂತೆ. ಖಡ್ಗದಿಂದ ಅವಳ ರುಂಡವನ್ನು ಕತ್ತರಿಸಿದ ಮೇಲೆ ಮುಂಡ ಮಾತ್ರ ಭೂಮಿಯಲ್ಲಿ ಲೀನವಾಯಿತಂತೆ. ರುಂಡವನ್ನು ಗುರುನಲ್ಲೂರಯ್ಯನವರು ಮತ್ತು ರಾಮಭದ್ರಪ್ಪನವರು ಸೇರಿ ಪಂಚವಾರವರ ಮನೆಗೆ ತಂದು ಕನಕಾಕಾರ ಮಾಡಿಸಿದರಂತೆ. ಅದನ್ನು ಕಬ್ಬಾಳಮ್ಮನ ಗುಡಿಯ ಬಲಬಾಗದಲ್ಲಿರುವ 'ಕನಕದ ಗುಡಿ'(ಕರಗದ ಮನೆ)ಯಲ್ಲಿ ಪ್ರತಿಷ್ಠಾಪಿಸಿದ್ದಾರೆ. ಇಂದಿಗೂ ಅವಳನ್ನು 'ಹಿರಿಸತಿಗಮ್ಮ' ಎಂದು ಪೂಜಿಸುತ್ತಾರೆ.

ಮಾದಿಗರ ಹುಡುಗ (ಕೆಲವೊಮ್ಮೆ ಹೊಲೆಯರ ಹುಡುಗನಾಗಿರುತ್ತಾನೆ) ಒಬ್ಬ ವಿಧವೆಯ ಮಗ. ಈತ ಕಬ್ಬಾಳಿನ ಪಕ್ಕದ ಊರು ಅತ್ತಿಹಳ್ಳಿಯಲ್ಲಿ ಬ್ರಾಹ್ಮಣರ ಮನೆಯಲ್ಲಿ ಜೀತಕ್ಕೆ ಇದ್ದ. ಆತ ಎಮ್ಮೆ ಕಾಯುವುದಕ್ಕೆ ಹೋಗುತ್ತಿದ್ದು ಸಾಯಂಕಾಲ ಎಮ್ಮೆಗಳನ್ನು ಮೇಯಿಸಿಕೊಂಡು ಬಂದು ಹುಲ್ಲುಹಾಕಿ ಕಟ್ಟಿ ಬಾಗಿಲಲ್ಲಿ ಕುಳಿತುಕೊಂಡು ಬ್ರಾಹ್ಮಣನ ಮಕ್ಕಳ ಓದು ಬರಹವನ್ನೆಲ್ಲ ಕಲಿತ. ಹುಡುಗರು ಓದುವಶಾಸ್ತ್ರ ಪುರಾಣಗಳೆಲ್ಲವನ್ನು ಕಲಿತು ಪೂಜಾ ಸಂದರ್ಭದಲ್ಲಿ ಹೇಳುವ ಶ್ಲೋಕವನ್ನು ಕಲಿತ. ವಿನಾಕಾರಣ ಆ ಮಾದಿಗರ ಹುಡುಗ ಆ ಮನೆಯನ್ನು ಬಿಟ್ಟು ತಮಿಳುನಾಡಿನ ಕಡೆಗೆ ಹೊರಟು ಹೋದ. ಅಲ್ಲಿ

ಬ್ರಾಹ್ಮಣರಂತೆಯೇ ಪಿಳ್ಳುಜುಟ್ಟು ಬಿಟ್ಟುಕೊಂಡು ಅವರಂತೆಯೇ ವೇಷಭೂಷಣಗಳನ್ನು ಧರಿಸಿ ಒಬ್ಬ ಬ್ರಾಹ್ಮಣನ ಮನೆಗೆ ಹೋದ. ಆ ಬ್ರಾಹ್ಮಣ ನೀನು ಯಾರು? ಎಲ್ಲಿಯವನು? ಎಂದು ಕೇಳಿದಾಗ, ನನಗೆ ತಂದೆ-ತಾಯಿಗಳಾರೂ ಇಲ್ಲ. ಆದಕಾರಣ ತಳಬುಡ ಒಂದೂ ಗೊತ್ತಿಲ್ಲ. ದಿಕ್ಕು ತಪ್ಪಿ ಸುತ್ತಾಡಿಕೊಂಡು ಈ ಕಡೆ ಬಂದು ಬಿಟ್ಟೆ ಎಂದನು. ಆ ಬ್ರಾಹ್ಮಣ ನೀನು ಯಾವ ಜಾತಿ? ಎಂದು ಕೇಳಲು ನಾನು ಬ್ರಾಹ್ಮಣನೆಂದು ಸುಳ್ಳು ಹೇಳಿದ. ಹಾಗಾದರೆ ನಮ್ಮ ಶಾಸ್ತ್ರಪುರಾಣಗಳನ್ನೆಲ್ಲ ಓದುವೆಯಾ? ಎನ್ನಲು ಓದುತ್ತೇನೆಂದು ತಿಳಿಸಿದ. ಬ್ರಾಹ್ಮಣ ಪುಸ್ತಕ ಕೈಗೆ ಕೊಟ್ಟು ಪರೀಕ್ಷಿಸಿದ. ಆತ ಶಾಸ್ತ್ರ ಪುರಾಣಗಳೆಲ್ಲವನ್ನು ಓದಿದ ನಂತರ ತನ್ನ ಮನೆಯಲ್ಲಿಯೇ ಇರಿಸಿಕೊಂಡು ಸಾಕಿ ಸಲುಹಿದ. ಸುಮಾರು ಆರುತಿಂಗಳಾದ ಮೇಲೆ ತನ್ನ ಮಗಳನ್ನೇ ಕೊಟ್ಟು ಲಗ್ನಮಾಡಿದ. ಸುಮಾರು ಕಾಲ ಅಲ್ಲೇ ಉಳಿದು ಸುಖ ಜೀವನ ನಡೆಸುತ್ತಿದ್ದರು.

ಇತ್ತ ಆ ಹುಡುಗನ ತಾಯಿ ನನ್ನಮಗ ದೇಶಾಂತರ ಹೊರಟು ಹೋದವನು ಬರಲೇ ಇಲ್ಲ. ನನಗೆ ವಯಸ್ಸಾಯಿತು. ಸಾಕಿ ಸಲುಹುವರ್‍ಯಾರು? ಎಂದು ದುಃಖಪಡುತ್ತಿದ್ದಳು. ಎತ್ತನ್ನು ತರುವುದಕ್ಕೆ ಆ ದೇಶದ ಪರುಷೆಗೆ ಹೋಗಿದ್ದವರ್‍ಯಾರೋ ಆ ಹುಡುಗನನ್ನು ಕಂಡು ನೀನು ಇಂಥವಳ ಮಗನಲ್ಲವೇ? ಎಂದು ವಿಚಾರಿಸಿ ವಾಪಸ್ಸಾದ ನಂತರ ಹುಡುಗ ಇರುವ ವೃತ್ತಾಂತವನ್ನೆಲ್ಲ ಮುದುಕಿಗೆ ತಿಳಿಸಿದರು. ಆಗ ಮುದುಕಿ ಮಗನನ್ನು ಹುಡುಕಿಕೊಂಡು ಬಂದಳು. ಒಂದು ದಿನ ಬೆಳಗ್ಗೆ ಊರ ಮುಂದಲ ಕೆರೆಯಲ್ಲಿ ಸ್ನಾನ ಮಾಡುತ್ತಿದ್ದ ಮಗನನ್ನು ಕಂಡು ನನ್ನನ್ನು ಬಿಟ್ಟು ಯಾಕಪ್ಪ ಇಲ್ಲಿಗೆ ಬಂದೆ? ನನಗೆ ವಯಸ್ಸಾಯಿತು. ನನ್ನ ನೋಡಿಕೊಳ್ಳುವರ್‍ಯಾರಪ್ಪ? ಎಂದು ಬಿಗಿಯಾಗಿ ಹಿಡಿದುಕೊಂಡು ಅತ್ತು ಕರೆದಳು. ಆಗ ಮಗನು ಇಲ್ಲೇ ಇರು. ಮತ್ತೆ ಬಂದು ಕರೆದುಕೊಂಡು ಹೋಗುತ್ತೇನೆ ಎಂದು ಊರಿಗೆ ಹೋಗಿ ಅಂಗಡಿಯಲ್ಲಿ ಹೊಸ ಬಟ್ಟೆ ತೆಗೆದುಕೊಂಡು ಒಬ್ಬ ಕ್ಷೌರಿಕನನ್ನು ಕರೆದುಕೊಂಡು ಬಂದು ಅವಳ ತಲೆಬೋಳಿಸಿ ಸ್ನಾನಮಾಡಿಸಿ ಮುಂಡೆ ಮಾಡಿ, ಸೀರೆ ಉಡಿಸಿ ನೀನು ಯಾವ ಮಾತನ್ನು ಆಡಬೇಡ ಅವರು ಸ್ನಾನಮಾಡು ಎಂದಾಗ ಸ್ನಾನ ಮಾಡಿಕೋ ಕೊಟ್ಟ ಬಟ್ಟೆ ಧರಿಸಿಕೊ, ಕೊಟ್ಟಾಗ ಊಟ ಮಾಡಿಕೊಂಡು ಮನೆಯಲ್ಲಿ ಮಲಗಿರು ಎಂದು ಹೇಳಿದ ಮುದುಕಿ ಹಾಗೆಯೇ ಕೆಲವು ದಿನ ಇದ್ದಳು.

ಒಂದು ದಿನ ಮನೆಯಲ್ಲಿ ಹೋಳಿಗೆ ಮಾಡಿದ್ದರು. ಊಟ ಮಾಡುವಾಗ ಮುದುಕಿ 'ಏನ್ ತಿಂದ್ರೇನ್ ಕುನ್ನ. ಎಮ್ಮೆ ನಾಲಿಗೆ ತಿಂದಂಗಾದದೆ' ಎಂದಳು. ಇದನ್ನು ಕೇಳಿಸಿಕೊಂಡ ಬ್ರಾಹ್ಮಣರ ಮಗಳಿಗೆ ಮನಸ್ಸು ಕೆಟ್ಟುಹೋಗಿ ನಿಮ್ಮ ತಾಯಿ ಈ ರೀತಿ ಕೇಳುತ್ತಾಳಲ್ಲ, ನೀವು ಯಾವ ಜಾತಿ? ಎಂದು ಪ್ರಶ್ನಿಸಿದರು. ಗಂಡ ಯಾವ ಉತ್ತರವನ್ನು ಕೊಡಲಿಲ್ಲ. ಕೀಳುಜಾತೀಲಿ ಇಂಥ ಮಾಂಸ ಮಡ್ಡಿ ವಿಚಾರ ಮೇಲು ಜಾತೀಲಿ ಇದು ಸಾಧ್ಯವಿಲ್ಲ. ನಾನು ಜಾತ್ಕೆಟ್ಟೋದೆ. ನನ್ನ ತಂದೆ ತಾಯಿಗಳನ್ನು ಜಾತಿಕೆಡಿಸಿದೆ. ಇನ್ನು ಬದುಕಿರಬಾರದು ಎಂದು ತನ್ನಷ್ಟಕ್ಕೆ ತಾನೇ ಮೈಗೆಲ್ಲ ಬೆಂಕಿಹಚ್ಚಿಕೊಂಡಳು. ಎಲ್ಲಾ ಬೆಂದು ನರಿಗೆ ತೆಂಡೆ ಉಳಿದುಕೊಂಡು ಕರಿಯ ಕಾಳಿಯಂತೆ ಆದಳು. ನರಿಗೆ ತೆಂಡೆ ಉಳಿದುಕೊಂಡು ಜೀವ ಹೋಗದೆ ಬದುಕಿಕೊಂಡದ್ದರಿಂದ ಇತ್ತ ಗಂಡನ ದೇಶದ ಕಡೆಗೆ ಬಂದುಬಿಟ್ಟಳು. ಅವಳ ಜೊತೆಯಲ್ಲೇ ಗಂಡ, ಅತ್ತೆ ಎಲ್ಲರೂ ಬಂದರೂ, ಕಬ್ಬಾಳಿಗೆ ಸಮೀಪವಿರುವ ಹತ್ತಿಹಳ್ಳಿಯಲ್ಲಿ ತಂಗಿದ್ದು ಮುಂಜಾನೆ ಎದ್ದು ಕಬ್ಬಾಳಿನ ಹತ್ತಿರವಿದ್ದ ಡೊಂಕನಕಟ್ಟೆ ಕೆರೆಯ ಮಗ್ಗುಲಲ್ಲಿರುವ ಕಾಶಿ, ಕಣಗಿಲೆ ಗಿಡದ ಹತ್ತಿರ ಕುಳಿತುಕೊಂಡ ಮುದುಕಿ, ಅಯ್ಯೋ... ನಾ

ಬರಿಕಣಪ್ಪ ಎಂದು ಅಲ್ಲೆ ಉಳಿದು. ಮಗ ನೀ ಬರಿ ಅಂದ್ಯ ನೀ ಬರಿಯಮ್ಮನಾಗಿ ಇಲ್ಲೇ ಇರು ಎಂದು ಬಿಟ್ಟು ಹೊರಟ. ಆ ಕಟ್ಟೆ ಈಗ ಬರಿಯಮ್ಮನ ಕೊಳವಾಗಿದೆ. ಈಗಲೂ ಹಬ್ಬದಲ್ಲಿ ಅವಳಿಗೆ ಮೊದಲ ಪೂಜೆ. ಗಂಡ ಹೆಂಡತಿಯನ್ನು ಹಿಂಬಾಲಿಸಿ ಬರಲು ಒಂದು ದೇವಸ್ಥಾನ ಸಿಕ್ಕಿತು. ಆ ದೇವಸ್ಥಾನದಲ್ಲಿ ಕೋಣನ ಮಾರಮ್ಮ ಮತ್ತು ಮಂತಿನ ಮಾರಮ್ಮರು ವಾಸವಾಗಿದ್ದರು. ಕಾಳವ್ವ ಬಂದವಳೇ ಮಾರಮ್ಮಂದಿರಾ ನನ್ನ ಶಂಖ ಜಾಗಟೆ ಇಟ್ಕಂಡು ಕಾಲೂರಿ ಕುಳಿತುಕೊಳ್ಳುವುದಕ್ಕೆ ಸ್ವಲ್ಪ ಜಾಗ ಕೊಡಿ ಎಂದು ಕೇಳಿದಳು. ಆ ಮಾರಮ್ಮಂದಿರು ಇಬ್ಬರು ನಮಗೇ ಜಾಗ ಇಲ್ಲ ಹೋಗಮ್ಮ ಎಂದರು. ಒಂದು ರಾತ್ರಿ ಇದ್ದು ಹೊರಟು ಹೋಗುವೆ ಎಂದು ಕೋರಿಕೊಳ್ಳಲು ಅವರಿಬ್ಬರೂ ಆ ಕಡೆಗೊಬ್ಬ, ಈ ಕಡೆಗೊಬ್ಬ ತವೆದುಕೊಂಡರು. ಈ ಕಾಳವ್ವ ಬಿಗಿಯಾಗಿ ಜಾಗಿ ಆವರಿಸಿಕೊಂಡು ಕುಳಿತುಬಿಟ್ಟಳು. ಕಬ್ಬಾಳಿನ ದೇವಸ್ಥಾನದಲ್ಲಿಯೇ ನೆಲೆಯಾದಳು. ಇವಳ ಗಂಡನ ಹೆಸರು ರಂಗಸ್ವಾಮಿ. ಅವನು ನಡುಬೀದಿಯಲ್ಲಿ ಅಲ್ಲೆ ನೆಲೆಯಾದನು.

ಸ್ವರೂಪ

"ಸೈಂಧವ ಸಂಸ್ಕೃತಿಯ ಅವಶೇಷಗಳನ್ನು ಅವಲೋಕಿಸಿದಾಗ ಅಲ್ಲಿ ದೇವಿಯ ಚಿತ್ರಗಳು ಮರದಿಂದಲೇ ಹೊರಹೊಮ್ಮಿಕೊಂಡು ಬಂದಂತೆ ಕಾಣುತ್ತದೆ. ಈ ಸಂಸ್ಕೃತಿಯ ಜನರು ಪ್ರಕೃತಿಯನ್ನು ಕೆಂಪು ಬಣ್ಣದಿಂದ ಕಂಡಿದ್ದರು. ಆದರೆ ಪ್ರಕೃತಿಯನ್ನು ಕೆಂಪು ಬಣ್ಣದಿಂದ ಕಾಯುವುದು ಪುರಾತನ ಪದ್ಧತಿಯೂ ಆಗಿತ್ತು. ಆದುದರಿಂದ ದೇವಿಯ ಮೈಬಣ್ಣ, ಉಡಿಗೆ, ತೊಡುಗೆ, ಅಲಂಕಾರ ಇವೆಲ್ಲವುಗಳು ದೇವಿಗೆ ಪ್ರಿಯವಾದ ವಸ್ತುಗಳೆಂದು ಅವೆಲ್ಲವುಗಳು ಕೆಂಪು ಬಣ್ಣದಿಂದ ಒಡಗೂಡಿವೆ"(ಡಾ.ಬಿ.ಪಿ.ಪಾಟೀಲ್, ಗ್ರಾಮ ದೇವತೆಗಳು, ಪುಟ.೮). ಕಬ್ಬಾಳಮ್ಮನು ಉಗ್ರ ಸ್ವರೂಪಿಣಿಯಾಗಿದ್ದು ಅರಿಶಿಣ-ಕುಂಕುಮ ಪ್ರಿಯೆಯಾಗಿದ್ದಾಳೆ. "ಈಗಲೂ ದೇವಿಗೆ ಅರ್ಪಿಸುತ್ತಾ ಬಂದಿರುವ ಕುಂಕುಮ, ಕೆಂಪು ದಾಸವಾಳ ಹೂವು, ರಕ್ತವಸ್ತ್ರ, ರಕ್ತಫಲ ಮೊದಲಾದವುಗಳು ದೇವಿಗೆ ಪ್ರಿಯಕರವಾದವುಗಳು ಎಂಬ ಕಲ್ಪನೆ ಇದೆ"(ಮೂಲ: ಎಸ್.ಕೆ.ರಾಮಚಂದ್ರರಾವ್, ಭಾರತೀಯ ದೇವಾಲಯಗಳ ಜಾನಪದ, ಪುಟ.೭೯). ಇದೇ ಕಲ್ಪನೆ ಕಬ್ಬಾಳಮ್ಮನಲ್ಲಿದೆ. ಕುಂಕುಮ, ರಕ್ತವಸ್ತ್ರ ಕಾಣಿಕೆಯಾಗಿ ಹರಕೆಯ ರೂಪದಲ್ಲಿ ಬರುತ್ತವೆ. ಹಸಿರುಬಣ್ಣದ ಸೀರೆ ಕಾಳಿಗೆ ಪ್ರಿಯವಾಗಿದೆ. ಇವೆಲ್ಲ ಫಲವಂತಿಕೆಯ ಸಂಕೇತವಾಗಿವೆ.

ಕಬ್ಬಾಳಮ್ಮನ ವಿಗ್ರಹವು ಸುರಹೊನ್ನೆ ಮರದಿಂದ ಮಾಡಿರುವುದು ವಿಶೇಷವಾಗಿದೆ. ಇದನ್ನು ಒಂದೇ ಮರದಿಂದ ಮಾಡಿದ್ದು, ಕಬ್ಬಾಳಮ್ಮನ ಸಿಡಿಯ ಕಂಬವು ಹೊನ್ನೆಮರದಿಂದಲೇ ಮಾಡಿದೆ. ಕಬ್ಬಾಳಮ್ಮನ ಮೈಬಣ್ಣ ಕಪ್ಪಾಗಿದ್ದು ನಾಲ್ಕು ಕೈಗಳನ್ನು ಮಾಡಿ ಕತ್ತಿ, ಡಮರು, ಕೊರವಂಜಿ ಗೂಡನ್ನು ಹಿಡಿದಿದ್ದಾಳೆ. ಆಕೆಯ ಕಣ್ಣು ಉಗ್ರವಾಗಿದೆ. ಕ್ಯಾರೆ ಮೀಸೆ ಇದೆ. ಈ ಮೀಸೆಗಳು, ಕಣ್ಣು, ಉಬ್ಬುಗಳನ್ನು ಬೆಳ್ಳಿಯ ಲೋಹದಿಂದ ಮಾಡಿ ಅಂಟಿಸಲಾಗಿದೆ. ಇವು ಇತ್ತೀಚಿಗೆ ಮಾಡಿರುವ ರೂಪಾಂತರಗಳಿರಬಹುದು. ಕಪ್ಪುಬಣ್ಣಕ್ಕೆ ಒಂದು ಕಥೆಯನ್ನು ಹೇಳುತ್ತಾರೆ. ಕಬ್ಬಾಳಮ್ಮ ಕೊಂಡಹಾಯಲು ಹೋಗಿ ಕೊಂಡಹಾಯಲಾಗದೆ ಬೆಂದು ಕಪ್ಪಗಾದಳು. ಅಂದಿನಿಂದ 'ಕರಿದುರ್ಗಿ ಕಾಳವ್ವ' ಎಂದು ಕರೆಯುವರು. ಕಪ್ಪು ಆದಿಮ ದ್ರಾವಿಡರ ಮೂಲ ಬಣ್ಣವಾಗಿದೆ.

ಮೂಲ

ಕಬ್ಬಾಳಮ್ಮ ಮೂಲತಃ ಮಾತೃಮೂಲೀಯ ದೇವತೆಯಾಗಿದ್ದಾಳೆ. ಕಾಳಿ, ಕಾಳಿಕಾದೇವಿಯಾಗಿ, ಕರಿದುರ್ಗಿಯಾಗಿ ಕಬ್ಬಾಳಮ್ಮನಾಗಿದ್ದಾಳೆ. ಕಬ್ಬಾಳಮ್ಮ ಶಕ್ತಿದೇವತೆಯಾಗಿದ್ದಾಳೆ. ಗ್ರಾಮದೇವತೆಗಳನ್ನು ಊರಮ್ಮ ಮತ್ತು ಮಾರಮ್ಮ ಎಂದು ವಿಂಗಡಿಸಿದರೂ, ಈ ಎರಡೂ ದೇವತೆಗಳ ಮೂಲ ಕೃಷಿಯೇ ಆಗಿದೆ. ಅಂದರೆ ಗ್ರಾಮದೇವತೆಗಳ ಉಗಮಕ್ಕೆ ಕೃಷಿಯೆ ಮೂಲ ಕಾರಣ. ಕೃಷಿಯ ಉಗಮ ಮಾತೃವಿನಿಂದ, ಸ್ತ್ರೀಯಿಂದ. ಈ ಮಾತೆಯೇ ಮಾತೃದೇವತೆಯಾಗಿ, ಗ್ರಾಮದೇವತೆಯಾಗಿ, ಪ್ರಾಂತೀಯ ದೇವತೆಯಾಗಿ ಇಂದಿಗೂ ಉಳಿದುಕೊಂಡು ಬಂದಿದೆ. ಊರಮ್ಮ ಮೂಲ ಕೃಷಿಕರ ದೇವತೆಯಾದರೆ, ಮಾರಮ್ಮ ವಲಸೆಗಾರ ಪಶುಪಾಲಕ ದ್ರಾವಿಡರ ದೇವತೆಯಾಗಿದ್ದಾಳೆ. ಇದನ್ನು ಎಸ್.ಎಸ್.ಹಿರೇಮಠ ಅವರು ತಮ್ಮ ಜಾತ್ರೆಗಳು ಎಂಬ ಸಂಶೋಧನಾ ಕೃತಿಯಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಗ್ರಾಮ ದೇವತೆಗಳನ್ನು ಊರಮ್ಮ ಮತ್ತು ಮಾರಮ್ಮ ಎಂದು ವಿಂಗಡಿಸಿದರು ಅವುಗಳ ಮೂಲ, ಉಗಮ, ಉದ್ದೇಶ ಒಂದೇ ಆಗಿದೆ. ಕಬ್ಬಾಳಮ್ಮ ಊರಮ್ಮನ ಗುಂಪಿಗೆ ಸೇರಿದ್ದಾಳೆ. ಕಬ್ಬಾಳಮ್ಮನನ್ನು ಕೇವಲ ಕಬ್ಬಾಳಿನ ಗ್ರಾಮಸ್ಥರಷ್ಟೇ ಪೂಜಿಸುವುದಿಲ್ಲ. ಬದಲಾಗಿ ಇಡೀ ಕಬ್ಬಾಳು ಕುಳಿಯ ಗ್ರಾಮಗಳು ಹಾಗೂ ಅದರ ಆಚೆಗಿನ ಪ್ರಾಂತ್ಯಗಳೂ ಕಬ್ಬಾಳಮ್ಮನನ್ನು ಪೂಜಿಸುವ, ಆರಾಧಿಸುವುದು ಇಂದಿಗೂ ಇದೆ. ಹಾಗಾಗಿ ಕಬ್ಬಾಳಮ್ಮ ಪ್ರಾಂತಿಯ ದೇವತೆಯಾಗಿದ್ದಾಳೆ. ಡಾ.ಸಿದ್ಧಲಿಂಗಯ್ಯ ಅವರು ತಮ್ಮ ಗ್ರಾಮದೇವತೆಗಳು ಎಂಬ ಕೃತಿಯಲ್ಲಿ ಗ್ರಾಮದೇವತೆಗಳನ್ನು ಹಲವು ಭಾಗಗಳಾಗಿ ವಿಂಗಡಿಸಿದ್ದಾರೆ. ಕಬ್ಬಾಳಮ್ಮನನ್ನು ಪ್ರಾಂತೀಯ ದೇವತೆಯಾಗಿ ಕರೆದಿದ್ದಾರೆ.

ಕಾಳವ್ವ, ದುರ್ಗಿ, ಮಲೆಯಕಾಳಿ, ಮಾಯಾಕಾತಿ, ಕರಿದುರ್ಗಿ, ಕಿಡಿಗಣ್ಣೆ ಎಂದೆಲ್ಲಾ ಕರೆಯುವ ಕಬ್ಬಾಳಮ್ಮನ ಮೂಲ ಹೆಸರು 'ಕಾಳಿ' ಎಂಬುದು ಸ್ಪಷ್ಟವಾಗುತ್ತದೆ. "ದುರ್ಗದ ತಪ್ಪಲಿನ ಹಳ್ಳಿಯಲ್ಲಿ ಕಬ್ಬಾಳಮ್ಮ ಎಂಬ ಗ್ರಾಮ ದೇವತೆಯ ದೇವಾಲಯವಿದೆ. ಹಿಂದಿನ ಕಾಲದಲ್ಲಿ ಇದು ಒಂದು ವ್ಯಾಪಾರಕೇಂದ್ರವಾಗಿದ್ದಂತೆ ತೋರುವುದು. ಕಬ್ಬಾಳಮ್ಮ ಎನ್ನುವುದು ವಿಜಯನಗರ ಕಾಲೀನವಾದ ಶಾಸನದಲ್ಲಿ 'ಕಾಳಿಕಾದೇವಿ' ಎಂದು ಉಲ್ಲೇಖಗೊಂಡಿದೆ"(ಕನಕಪುರ ಎಂಬ ಕಾನಕಾನಹಳ್ಳಿ ಚರಿತ್ರೆ, ಪುಟ.೧೧೫).

ಹಲವಾರು ಕಡೆ ಊರುಗಳ ಹೆಸರುಗಳಿಂದ ಅಲ್ಲಿಯ ಅಮ್ಮಗಳನ್ನು ಸಂಬೋಧಿಸಲಾಗುವುದು. ಇಲ್ಲಿ ಅಮ್ಮನಿಗೆ ನಿರ್ದಿಷ್ಟ ಹೆಸರಿರುವುದಿಲ್ಲ. ಹೊಸೂರಿನಲ್ಲಿರುವ ಅಮ್ಮ ಹೊಸೂರಮ್ಮ, ಮದ್ದೂರಿನಲ್ಲಿರುವ ಅಮ್ಮ ಮದ್ದೂರಮ್ಮ ಆಗಿರುವ ಸಾಧ್ಯತೆಗಳು ಇವೆ. ಹಾಗೆ ಕಬ್ಬಾಳಿನಲ್ಲಿ ನೆಲೆಸಿರುವ ಅಮ್ಮ ಕಬ್ಬಾಳಮ್ಮನಾಗಿದ್ದಾಳೆ. ಡಾ.ಸಿದ್ಧಲಿಂಗಯ್ಯನವರು ತಮ್ಮ 'ಗ್ರಾಮ ದೇವತೆಗಳು' ಕೃತಿಯಲ್ಲಿ ಗ್ರಾಮದೇವತೆಗಳನ್ನು ಮೂರು ಭಾಗಮಾಡಿ ಕಬ್ಬಾಳಮ್ಮನನ್ನು ಪ್ರಾಂತೀಯದೇವತೆ ಎಂದು ಹೇಳಿದ್ದಾರೆ. ಕಬ್ಬಾಳಮ್ಮ ಗ್ರಾಮದೇವತೆಯೂ ಹೌದು, ಪ್ರಾಂತೀಯ ದೇವತೆಯೂ ಹೌದು. ಕಬ್ಬಾಳು ಕುಳಿ ಎಂದು ಕರೆಯುವ ಇಡೀ ಪ್ರದೇಶಕ್ಕೆ ಕಬ್ಬಾಳಮ್ಮನೇ ಗ್ರಾಮದೇವತೆಯಾಗಿದ್ದಾಳೆ. ಕಬ್ಬಾಳು ಜಾತ್ರೆ ಮತ್ತು ಕಬ್ಬಾಳಿನಲ್ಲಿ ಮಳೆಯಿಲ್ಲದೆ ಬರಬಂದಾಗ ಈರಬ್ಬ ಮಾಡುವಾಗ ಕಬ್ಬಾಳು ಕುಳಿಯ ಎಲ್ಲ ಊರುಗಳು ಒಂದೇ ದಿನ ಒಂದೆಡೆ ಕಬ್ಬಾಳಿನಲ್ಲಿ ಸೇರಿ ಈರಬ್ಬ ಮಾಡುತ್ತಾರೆ. ಮಾತೆ, ತಾಯಿ, ಮಾತೃ, ಅಮ್ಮ, ಅವ್ವ ಎಲ್ಲವೂ ಸಮಾನಾರ್ಥಕಪದವಾಗಿದ್ದು, ಇಲ್ಲಿ ತಾಯಿಗೆ ಕಬ್ಬಾಳಮ್ಮನಿಗೆ 'ಅವ್ವ' ಎಂಬ ಹೆಸರಿನಿಂದಲೇ ಕರೆಯುತ್ತಾರೆ. ಕಾಳವ್ವ, ಕಬ್ಬಾಳವ್ವ ಎಂದೇ ಕರೆಯುವ ಕಬ್ಬಾಳಮ್ಮ ಮಾತೃಮೂಲ ಸಂಸ್ಕೃತಿಯ ಪ್ರತೀಕವಾಗಿದ್ದಾಳೆ.

ಭಾರತದಲ್ಲಿ ಕೃಷಿಯ ಸೃಷ್ಟಿಕರ್ತರು ಮಾತೃದೇವತೆಗಳು. ಹಾಗಾಗಿ ಈ ಸಂಸ್ಕೃತಿ ಇಂದಿಗೂ ಉಳಿದುಬಂದಿದೆ. ಅದು ಕಬ್ಬಾಳಮ್ಮನಂತ ಅಮ್ಮಂದಿರ ಮೂಲಕ ಇಂದಿಗೂ ಅಚ್ಚಳಿಯದೆ ಉಳಿದಿದೆ. ಸಿಂಧೂ ನಾಗರೀಕತೆಯೊಂದಿಗೆ ಮಾತೃದೇವತೆಯ ಸ್ಥಾನವು ಭಾರತದಲ್ಲಿ ಕಂದಿಹೋಗಲಿಲ್ಲ. ಅವಳು ತಾಯಿ, ಮಹಾತಾಯಿ, ಪ್ರಕೃತಿ ಮೊದಲಾದ ಹೆಸರುಗಳೊಂದಿಗೆ 'ಶಕ್ತಿ' ಎಂಬ ವೈಭವಕ್ಕೆ ಪಾತ್ರವಾದಳು. ಅವಳ ಪ್ರತಿನಿಧಿಗಳೇ ಗ್ರಾಮದೇವತೆಗಳು. ಕಬ್ಬಾಳಮ್ಮ ಆ ಶಕ್ತಿ ದೇವತೆಯ ಕವಲಾಗಿದ್ದು ಅನೇಕ ಹೆಸರುಗಳಿಂದ ಪ್ರಸಿದ್ಧಿ ಹೊಂದಿದ್ದಾಳೆ. "ಗ್ರಾಮದೇವತೆಗಳ ಹೆಸರುಗಳು ನೂರಾರು. ಒಂದೇಶಕ್ತಿಯ ಮೂರ್ತೀಕೃತ ಸ್ವರೂಪಗಳಾದರೂ ಸ್ಥಳೀಯ ಲಕ್ಷಣಗಳು ಬೇರೆ. ಮುಖ್ಯವಾಗಿ ಅವೆಲ್ಲ ಫಲವತ್ತತೆಯ ಧಾರಕ ಶಕ್ತಿಗಳು. ಆರ್ಯೇತರರಲ್ಲಿ ಅದಕ್ಕೆ ವಿಶಿಷ್ಟಸ್ಥಾನ. ಆದಿಮ ಬುಡಕಟ್ಟುಗಳಲ್ಲಿ ಆ ದೇವತೆಗಳ ಬಗೆಗಿನ ಆಚರಣೆಗಳು ಬಹಳ ಪ್ರಸಿದ್ಧಿ. ಅವುಗಳಲ್ಲಿ ಬ್ರಾಹ್ಮಣರ ಪಾತ್ರವೇನೂ ಇಲ್ಲ. ಪಾತ್ರವಿರುವುದು ಕೆಳಜಾತಿಗಳವರದ್ದು. ಪರಯ್ಯಾಗಳದ್ದು. ಅವರು ಬೇರೆ ಬೇರೆ ಹಳೆಯ ಬುಡಕಟ್ಟುಗಳ ಸಂತತಿಯವರು; ಮಾತೃದೇವತೆಯನ್ನು ತೋರಿಸುವ ಪರಿ ಅವರಿಗೆ ತಿಳಿದಿದೆ"(ಲೋಕಾಯತ, ಪುಟ.೧೮೬). ಇಲ್ಲಿ ಗ್ರಾಮದೇವತೆಗಳ ಮನಸ್ಸು, ಆಸೆ, ಅವರನ್ನು ಸಂತೃಪ್ತಿಪಡಿಸುವುದು ಆ ದೇವತೆಗಳ ಕುಲದವರಿಗೆ, ಒಕ್ಕಲಿನವರಿಗೆ, ಆಚರಣೆಗಳಲ್ಲಿ ಭಾಗಿಯಾಗುವವರಿಗೆ ಮಾತ್ರ ಎಂಬುದು ಸ್ಪಷ್ಟ. ಕಬ್ಬಾಳಮ್ಮನ ಜಾತ್ರೆಯ ಆಚರಣೆಗಳಲ್ಲಿ ಅಲ್ಲಿನ ಬ್ರಾಹ್ಮಣರ ಪಾತ್ರವೇನು ಇಲ್ಲ. ಅಂದಮೇಲೆ ಕಬ್ಬಾಳಮ್ಮ ಬ್ರಾಹ್ಮಣಳಾಗಲು ಸಾಧ್ಯವಿಲ್ಲ. ಇಡೀ ಭಾರತದ ಗ್ರಾಮದೇವತೆಗಳು ಎಲ್ಲಿಯೂ ಬ್ರಾಹ್ಮಣಳಾಗುವುದಿಲ್ಲ. ಕಬ್ಬಾಳಮ್ಮ ಮೂಲತಹ ಮಾತೃಪ್ರಧಾನ ಸಂಸ್ಕೃತಿಯ ಕೃಷಿಸೃಷ್ಟಿಮಾಡಿದ ಆದಿಮ ಕೃಷಿಕ ದ್ರಾವಿಡರವಳು ಎಂದೇ ಹೇಳಬಹುದು.

"ರೈತಾಪಿ ಜನರ ಜೀವನದ ಮೇಲೆ ಹಿಡಿತವಿರುವ ದೇವತೆಗಳು. ಅವರಲ್ಲಿ ಪ್ರಮುಖರೆಂದರೆ ದುರ್ಗೆ, ಕಾಳಿ, ಚಂಡಿ ಮುಂತಾದವರು. ಅವರ ಹೆಸರುಗಳಲ್ಲಿರುವ ವ್ಯತ್ಯಾಸ ತದನಂತರ ಕಾಲದಲ್ಲಿ ಹುಟ್ಟಿಕೊಂಡದ್ದು. ಅಂತೆಯೇ ಆ ದೇವತೆಗಳ ಲಕ್ಷಣಗಳು ಮತ್ತು ಇತಿಹಾಸ ಕೂಡ. ಆದರೆ ಅದು ಅಮುಖ್ಯ. ಅವುಗಳೆಲ್ಲದರ ಹಿಂದಿರುವುದು ಆದಿ ಸ್ತ್ರೀದೇವತೆ. ಆ ದೇವತೆಯ ಮಣ್ಣಿನ ಪ್ರತಿಮೆಗಳು ಎಲ್ಲ ಪ್ರಾಚೀನ ನಾಗರೀಕತೆಗಳ ಕೇಂದ್ರಗಳಲ್ಲೂ ಉತ್ಖನನದಿಂದ ದೊರಕಿವೆ"(ಲೋಕಾಯುತ, ೧೮೭). ಚಂಡಿ ಚಾಮುಂಡಿಯಾಗಿ ಕಾಳಿ ಕಾಳಿಕಾದೇವಿಯಾಗಿ, ಕಬ್ಬಾಳಮ್ಮನಾಗಿ ಬದಲಾಗಿರುವುದು ಕಾಣಬಹುದು.

"More usually one particular mather is worshipped at the pariya shrine. She is then the Gramadevate or village goddess of the particular hemelt"(E.Thurston, Castes and Tribes of souther India: I to VII Volumes-2-VI-105) ಎಂಬ ಥರ್‌ಸ್ಟನ್ ಅವರ ಮಾತು ಊರಮ್ಮ ಮೊಟ್ಟಮೊದಲು ಹೊಲಗೇರಿಯಲ್ಲೇ ಹುಟ್ಟಿದಳೆಂಬುದನ್ನು ಖಚಿತಪಡಿಸುತ್ತದೆ. ಕಬ್ಬಾಳಮ್ಮ ಊರಮ್ಮನಾಗಿ, ಗ್ರಾಮದೇವತೆಯಾಗಿ, ಪ್ರಾಂತ್ಯದೇವತೆಯಾಗಿದ್ದು ತಮಿಳುನಾಡಿನಿಂದ ವಲಸೆ ಬಂದ ದೇವತೆಯಾಗಿದ್ದು, ತಮಿಳಿನ ಪರೈಯಾನ್‌ರೇ ಕರ್ನಾಟಕದ ಹೊಲೆಯರಾಗಿದ್ದಾರೆ. ಪರೈಯಾನ್‌ಗಳಲ್ಲಿ ಇರುವ ಆಚರಣೆಗಳು ಸಾರುವುದು, ಜನಿವಾರ ದರಿಸುವುದು, ಕೋಣನ ಬಲಿ ಇತ್ಯಾದಿಗಳ ಆಚರಣೆ ಮತ್ತು ಉದ್ದೇಶ ಇಬ್ಬರಲ್ಲು ಸಾಮ್ಯತೆಯಿಂದ ಕೂಡಿವೆ.

ಕೋಣಬಲಿಯ ಆಚರಣೆ “ದಕ್ಷಿಣ ಆರ್ಕಾಟಿನ ಮಂಗಲಂನಲ್ಲಿ ಕೋಣವನ್ನು ಕಾಳಿಗೆ ಬಲಿಕೊಡುವ ಸಂದರ್ಭಕ್ಕೆ ಎಂಟು ಹಳ್ಳಿಗಳ ಎಂಟು ಪರ್ಯೆಯಾನ್‌ರನ್ನು ಆರಿಸಿ ಒಬ್ಬನನ್ನು ನೇತಾರನನ್ನಾಗಿ ಮಾಡುವರು. ಅವನ ಹೆಂಡತಿ ಆಗ ಗರ್ಭಿಣಿ ಇರಬಾರದು ಮತ್ತು ಮಕ್ಕಳಿದ್ದವಳೂ ಆಗಿರಬಾರದು. ಎಂಟು ಹಳ್ಳಿಗಳ ಗಡಿಗಳಿಗೆ ಈ ಪರ್ಯೆಯಾನ್‌ರು ಹೋಗುವರು. ಅವರಿಗೆ ಆಯಾ ಹಳ್ಳಿಯ ಜನ ಭಿಕ್ಷೆ ಹಾಕಬೇಕು. ಬಲಿಯಾದ ಕೋಣವನ್ನು ಇವರು ಹಂಚಿಕೊಳ್ಳುವರು. ಗ್ರಾಮದೇವತೆ ಹಬ್ಬಗಳಲ್ಲಿ ಪೂಜಾರಿ ಪರ್ಯೆಯಾನ್‌ನಿಗೆ ಜನಿವಾರ ಹಾಕಿ ಕೈಗೆ ಅರಿಶಿಣಕೊಂಬು ಕಟ್ಟುವರು. ಮೆರವಣಿಗೆಯಲ್ಲಿ ಈತನಿಗೆ ಪ್ರಮುಖ ಸ್ಥಾನವಿರುತ್ತದೆ”(ಎಸ್.ಎಸ್.ಹಿರೇಮಠ, ಪುಟ.೨೦೬). ಇವು ಪರ್ಯೆಯಾನ್‌ಗಳೇ ಅಥವಾ ಹೊಲೆಮಾದಿಗರೇ ಕೃಷಿಯ ಮೂಲ ಪುರುಷರೆಂಬುದು ತಿಳಿಯಲು ಸಾಧ್ಯ. ಒಂದು ಕಾಲದಲ್ಲಿ ಪ್ರಬಲವಾಗಿದ್ದಂತ ಇವರು ದಕ್ಷಿಣದಲ್ಲಿ ವೈದಿಕರ ವಿರುದ್ಧ ಪ್ರಬಲ ಹೋರಾಟ ಮಾಡಿರುವುದರಿಂದ ದಕ್ಷಿಣದಲ್ಲಿ ದ್ರಾವಿಡ ಸಂಸ್ಕೃತಿ ಇನ್ನೂ ಪ್ರಬಲವಾಗಿದೆ. ಇದರ ಫಲವಾಗಿ ಜನಿವಾರ ಧರಿಸಿರುವ ಹಕ್ಕು ಹೊಲೆಮಾದಿಗರಿಗೆ ಬಂದಿರಬೇಕು. ಈಗ ಅಸ್ಪೃಶ್ಯರಾಗಿರುವ ಇವರು ಹಿಂದೊಮ್ಮೆ ಶ್ರೇಷ್ಠಪರಂಪರೆಯ ಹಕ್ಕುದಾರರಾಗಿದ್ದರೆಂದು ಸಾದಿಸಲು ಈ ವಿವರಗಳು ತುಂಬ ಸಹಾಯಕವಾಗುತ್ತವೆ.

ಎಸ್.ಎಸ್.ಹಿರೇಮಠರು ತಮ್ಮ ‘ಜಾತ್ರೆಗಳು’ ಕೃತಿಯಲ್ಲಿ ಕಾಳವ್ವನಾಗಿದ್ದವಳು, ಕಾಮಾಕ್ಷಿಯಾಗಿ ಹೇಗೆ ಬೇರೆ ಪ್ರದೇಶಗಳಿಗೆ ಹರಡಿದಳು ಎಂಬುದನ್ನು ಒಂದು ಕಥೆಯ ಮೂಲಕ ತಿಳಿಸಿದ್ದಾರೆ. “ಶಾಕ್ತರ ಕೇಂದ್ರಸ್ಥಾನವಾಗಿದ್ದ ಕಂಚಿಯಲ್ಲಿ ಇವರು ಹೇಳುವ ಕಥೆಗಳು ನಡೆಯುತ್ತವೆ. ಒಂದು ಕಥೆಯ ಪ್ರಕಾರ ಕಂಚಿ ಪಟ್ಟಣವನ್ನು ಆಳುತ್ತಿದ್ದ ಯದು ವಂಶದ ಯಯಾತಿ ಅರಸನ ಕಾಲದಲ್ಲಿ ಮಾದಿಗ ವಾಡಾದಲ್ಲಿ ಕೃಷ್ಣರಾವು, ಜಗನ್ನಾಥರಾವು, ಹನುಮಂತರಾವು ಗರಡಿ ಸಾಧನೆ ಮಾಡಿ ದನಗಳ ಮೇಲೆ ಕುಸ್ತಿಮಾಡುತ್ತಿದ್ದರು. ಇಲ್ಲಿ ಯದುವಂಶ ಮತ್ತು ದನಗಳ ವಿರುದ್ಧ ಕುಸ್ತಿ ಆಡುವ ಪ್ರಸ್ತಾಪಗಳಿವೆ. ಇದು ವಲಸೆಗಾರ ದ್ರಾವಿಡರ ಜೊತೆ ಮಾದಿಗರ ಸಂಘರ್ಷವನ್ನು ಸೂಚಿಸುತ್ತದೆ. ಆದರೆ ಆಗಲೆ ವಲಸೆಗಾರ ಪಶುಪಾಲಕ ಗೊಲ್ಲರು ರಾಜರಾಗಿ ಮಾದಿಗರ ಮೇಲೆ ವಿಜಯವನ್ನು ಸಾಧಿಸಿದ್ದಕ್ಕೂ ಕಥೆ ಸೂಚನೆ ನೀಡುತ್ತದೆ.

ಆದರೆ ಇನ್ನೊಂದು ಕಥೆ ಈ ಗೊಲ್ಲರಿಗೂ ಸೋಲಿಸಲಾಗದ ಒಂದು ಗುಂಪನ್ನು ಮಾದಿಗರು ಸೋಲಿಸಿದ್ದಕ್ಕೆ ಆಧಾರವನ್ನು ಒದಗಿಸುತ್ತದೆ. ಈ ಕಥೆ ಹನುಮಂತರಾವು ಸಿಂಹಗಳನ್ನು ಕಂಚಿ ಕಾಳಿಕೆಯ ಬಲದಿಂದ ಸೋಲಿಸಿದ್ದು, ಕಂಚಿ ಸುತ್ತಲ ಅಡವಿಯಲ್ಲಿ ಸಿಂಬಾಲ ಕೋಟೆಯಲ್ಲಿದ್ದ ಸಿಂಹಗಳು ಕಾಡಿನೊಳಗೆ ಯಾರನ್ನು ಬಿಟ್ಟುಕೊಳ್ಳುತ್ತಿರಲಿಲ್ಲವಷ್ಟೇ ಅಲ್ಲ. ಕಂಚಿಯಲ್ಲಿ ನುಗ್ಗಿ ಜನರನ್ನು ತಿನ್ನುತ್ತಿದ್ದವು. ಯಾದವ ಅರಸ ಯಯಾತಿಗೆ ಇವನ್ನು ಕೊಲ್ಲಲಾಗಲಿಲ್ಲ. ಡಂಗುರ ಹೊಡೆಸಿದ. ಹನುಮಂತರಾವು ಚಂದ್ರಾಯುಧವನ್ನು ಹೊತ್ತು ಕಾಳಿಕಾ ಮಂದಿರಕ್ಕೆ ಬಂದು ತನ್ನ ಹೆಬ್ಬೆರಳನ್ನು ಕಡಿದು ರಕ್ತಬಲಿನೀಡಿ ಕೇಳಿಕೊಂಡ ಪ್ರಕಾರ ಆಕೆ ಚಂದ್ರಾಯುಧದಲ್ಲಿ ಕೂತಳು. ಸಿಂಹಗಳ ಸಿಂಬಾಲ ಕೋಟೆಗೆ ಬಂದಾಗ ಚಂದ್ರಾಯುಧದ ಪ್ರಖರ ಮಿಂಚಿಗೆ ಅವು ಬಾಲ ಅಲ್ಲಾಡಿಸುತ್ತ ಬಂದವು. ಹನುಮಂತರಾವು ಅವುಗಳನ್ನು ಕೊಂದು ಮರಿಗಳನ್ನು ಹಿಡಿದುಕೊಂಡು ಬರುತ್ತಾನೆ. ಖುಷಿಗೊಂಡ ಅರಸ ಅವನನ್ನು ಜಗಜಟ್ಟಿಯನ್ನಾಗಿ ನೇಮಿಸಿಕೊಳ್ಳುತ್ತಾನೆ.

ಈ ಕಥೆ ಸಿಂಹವನ್ನು ಕುಲಲಾಂಛನವಾಗಿದ್ದ ಮತ್ತು ಕೋಟೆಯನ್ನು ಕಟ್ಟಿಕೊಂಡು ಬಲಯುತರಾಗಿದ್ದ ಯಾವುದೋ ಜನಾಂಗವನ್ನು ಮಾದಿಗರು ತಮ್ಮ ಸ್ತ್ರೀದೇವತೆಯ ಆಧಾರದಿಂದ ಸೋಲಿಸಿದ್ದನ್ನು ಅಥವಾ ವಂಚಿಸಿದ್ದನ್ನು ಸೂಚಿಸುತ್ತದೆ. ಕಾಳಿಕೆಯು ಕೂತಿದ್ದ ಚಂದ್ರಾಯುಧದ ಮಿಂಚಿನಿಂದಲೇ ಸಿಂಹಗಳು ಬಾಲ ಆಡಿಸುವುದರ ಅರ್ಥವೇನು? ಈ ಕಾಳಿಕೆಗೆ ಕಾಮಾಕ್ಷಿ ಎಂಬ ಹೆಸರಿರುವುದರ ಹಿನ್ನೆಲೆಯಲ್ಲಿ ಹೇಳುವುದಾದರೆ ಯೋನಿಪೂಜಕ ಶಾಕ್ತರಾಗಿದ್ದ ಮಾದಿಗರ ಈ ಆಸೆಗೆ ಸಿಂಹಾಲಾಂಛನದ ಜನ ಬಲಿಯಾಗಿರಬೇಕು. ಆದರೆ ಈ ಪ್ರಸಂಗದ ಲಾಭವನ್ನು ಗೊಲ್ಲರು ಪಡೆದುಕೊಳ್ಳುತ್ತಾರೆ. ಕಾಳವ್ವಳು ಕಾಮಾಕ್ಷಿಯಾಗಿ, ಕಾಳಿ, ಕಾಲಿಯಾಗಿ ದೇಶದ ಹಲವೆಡೆ ಪ್ರಸಾರಗೊಂಡಳು. ಇವಕ್ಕೆ ವ್ಯಾಪಾರಸ್ಥರಾಗಿ ಬಂದು ನೆಲೆಯೂರಿದ್ದ ಪಶುಪಾಲಕ ದ್ರಾವಿಡರೂ ಕಾರಣವಾಗಿರಬಹುದು. ದುರ್ಗಗಳಲ್ಲಿದ್ದ ಸಿಂಹ ಲಾಂಛನಧಾರಿಗಳನ್ನು ಸೋಲಿಸಿದ್ದರಿಂದ ಕಾಳವ್ವ ದುರುಗವ್ವನಾಗಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಕಬ್ಬಾಳಮ್ಮನು ಕೂಡ ಮೊದಲು ಬಂದು ನೆಲೆಯಾಗಿದ್ದು ಕಬ್ಬಾಳು ದುರ್ಗದ ಮೇಲೆಯೇ. ಪಶುಪಾಲಕ ದ್ರಾವಿಡರ ಭೀಮೇಶ್ವರನನ್ನು ಪಗಡೆಯಾಟದಲ್ಲಿ ಸೋಲಿಸುತ್ತಾಳೆ. ದುರ್ಗವನ್ನು ಗೆಲ್ಲುತ್ತಾಳೆ.

ಕಬ್ಬಾಳು ಕಣಿವೇಲಿ ಕಾರೇಯ ತಾಳೇಲಿ

ಬಾಳೆಯ ಕಟ್ಟೆ ಬಯಲೇಲಿ/ಮಲೆಯಕಾಳಿ

ಜೂಜಾಡಿ ಗೆದ್ದ ದುರುಗಾವ

ದುರ್ಗಾದ ಸುತ್ತ ದುರ್ಗಿ ಎನ್ನಿಸಿಕೊಂಡು

ನಡುರಾಜ್ಯದಲ್ಲಿ ನೆಲೆಗೊಂಡ

ದುರ್ಗವನ್ನು ತಮಿಳಿನಲ್ಲಿ ಮಲೈ ಎಂದೂ ಕರೆಯುತ್ತಾರೆ. ಮಲೆ ಎಂದರೆ ಬೆಟ್ಟ ಬೆಟ್ಟವನ್ನು ಗೆದ್ದಂತ ಕಾಳಿ 'ಮಲೆಯಕಾಳಿ'ಯಾದಳು. ಮತ್ತೊಂದು ಅರ್ಥದಲ್ಲಿ ಮಲೆ ಎಂದರೆ ಕೊನರು, ಚಿಗುರು ಎಂದಾಗುತ್ತದೆ. "ಮಲಿಯಮ್ಮನೆಂದರೆ ಬರಡು ಪ್ರದೇಶದಲ್ಲಿ ಚಿಗುರು ತರುವ ಸಮೃದ್ಧಿತರುವ ದೇವತೆಯಾಗಿ ಪೂಜಿಸುತ್ತಾಳೆ"(ಡಾ.ಮಂಜುನಾಥ ಬೇವಿನಕಟ್ಟಿ, ಮಲಿಯಮ್ಮ, ಪುಟ.೬). ಅಂದರೆ ಮಲೆಯಕಾಳಿ ಎಂದರೆ ಸಮೃದ್ಧಿ ತರುವ ದೇವತೆಯಾಗಿದ್ದಾಳೆ. ಅಂದರೆ ಕಬ್ಬಾಳಮ್ಮ ಸಮೃದ್ಧಿ ನೀಡುವ ಕೃಷಿಮಾಡುವ ಮಾತೃದೇವತೆ.

"'ಮಾ' ಎಂದರೆ ಸುಮೇರಿಯನ್ ಭಾಷೆಯಲ್ಲಿ 'ಶ್ರೇಷ್ಠ' ಎಂದರ್ಥ. ಮಾತಂಗ ಎಂದರೆ ಶ್ರೇಷ್ಠ ಶೃಂಗದವ ಅಥವ ಶ್ರೇಷ್ಠ ಬೆಟ್ಟದವ ಎಂದರ್ಥ. ಅಂದರೆ ಬೆಟ್ಟದ ಒಡೆಯರು, ಬೆಟ್ಟದ ವಾಸಿಗಳು ಅವರು ಅನಾಗರೀಕರಾಗಬೇಕಾಗಿಲ್ಲ. ಏಕೆಂದರೆ ಹಿಂದೆ ಊರುಗಳನ್ನು ಬೆಟ್ಟಗಳ ಮೇಲೆ, ಕೋಟೆಯ ಕೆಳಗೆ ಕಟ್ಟುತ್ತಿದ್ದರು"(ನಂಜುಂಡಸ್ವಾಮಿ, ಐಪಿಎಸ್, ಭಾರತದ ಮೊದಲ ದೊರೆಗಳು, ಪುಟ.೩೦). 'ಮಾ'ಕಾಳಿ, ಮಾಕಾಳಿ, ಮಾಯಕಾಳಿ, ಮಾಯಕಾತಿಯಾಗಿರುವ ಕಬ್ಬಾಳಮ್ಮ ಬೆಟ್ಟದ ಒಡತಿಯಾಗಿ ಸಮೃದ್ಧದ ಸಂಕೇತವಾಗಿದ್ದಾಳೆ.

"ಆರ್ಯರು ಮೊದಲು ಎದುರಿಸಿದ ವೈರಿಗಳು ಸಾಮಾನ್ಯವಾಗಿ ಬೆಟ್ಟಗುಡ್ಡಗಳಲ್ಲಿ ವಾಸಿಸುತ್ತಿದ್ದ ವೀರರು. ಅವರು ತಮ್ಮ ಬಲಿಷ್ಠ ಕೋಟೆಗಳಲ್ಲಿದ್ದುಕೊಂಡು ಕಠೋರ ತಡೆಯನ್ನು ಒಡ್ಡುತ್ತಿದ್ದರು. ವಾಸ್ತವವಾಗಿ

ಬಹಳಷ್ಟು ಭಾರತೀಯ ಮೂಲನಿವಾಸಿ ಬುಡಕಟ್ಟು ಜನಾಂಗಗಳ ಹೆಸರುಗಳು ಬೆಟ್ಟ-ಗುಡ್ಡಗಳ ಹೆಸರುಗಳೊಂದಿಗೆ ಸೇರಿಕೊಂಡಿವೆ"(ನಂಜುಂಡಸ್ವಾಮಿ ಐಪಿಎಸ್, ಪುಟ.೨೩). ಕಬ್ಬಾಳಮ್ಮ ಮಲೆಯಕಾಳಿಯಾಗಿರುವುದು. ಮಲೆಮಹಾದೇಶ್ವರ, ತಿರುಪತಿಬಾಲಾಜಿ ಏಳು ಕುಂಡಲವಾಡನಾಗಿರುವುದು, ಹಂಪಿಯ ಮಾತಂಗಿ, ಮೈಸೂರಿನ ಚಾಮುಂಡಿಯನ್ನು ಕಾಣಬಹುದು.

ಕಬ್ಬಾಳಮ್ಮನ ಪೂಜಾರಿಗಳು ಒಕ್ಕಲಿಗ ಸಮುದಾಯದವರಾಗಿದ್ದಾರೆ. ಪಶುಪಾಲಕ ದ್ರಾವಿಡರಾಗಿರುವ ಇವರು ಪುರುಷ ಪ್ರಧಾನ ಸಂಸ್ಕೃತಿಯ ಶಿಶ್ನಪೂಜಕರಾಗಿದ್ದು ಗ್ರಾಮದೇವತೆಯ ಪೂಜಾರಿಗಳಾಗಲು ಕಾರಣಗಳೇನು? ಮಾತೃಪ್ರಧಾನ ಸಂಸ್ಕೃತಿಯ ಮೂಲ ಆದಿಮ ಕೃಷಿಕರಾಗಿ ಯೋನಿಪೂಜಕರಾಗಿರುವ ಹೊಲೆಮಾದಿಗರು ಗ್ರಾಮದೇವತೆಗಳ ಪೂಜಾರಿಕೆಯಿಂದ ಹೊರಗುಳಿಯಲು ಕಾರಣಗಳೇನು? ಎಂಬ ಪ್ರಶ್ನೆಗಳಿಗೆ ನಡೆದಿರುವ ನಡೆಯುತ್ತಿರುವ ಅಸ್ತಿತ್ವದ ಪ್ರಶ್ನೆ. "ದ್ರಾವಿಡರಲ್ಲೇ ಎರಡು ಬಣಗಳಾಗಿ ಎಡಗೈ ಮತ್ತು ಬಲಗೈ ಜಾತಿಗಳಾಗಿ ವಿಂಗಡಣೆಗೊಂಡು 'ಬಲಗೈ ಜಾತಿಗಳು' ಬಣಜಿಗ, ಒಕ್ಕಲಿಗ, ಗಾಣಿಗ, ರಂಗಾರಿ, ಲಾಡ, ಗುಜರಾಥಿ, ವ್ಯಾಪಾರಿ, ಕೊಮಟೆ, ಜೈನ, ಬೌದ್ಧ, ಕುರುಬ, ಕುಂಬಾರ, ಅಗಸ, ಬೆಸ್ತ, ಪದ್ಮಸಾಲಿ, ನಾಯಿಂದ, ಉಪ್ಪಾರ, ಚಿತ್ರಗಾರ, ಗೊಲ್ಲ, ಹೊಲೆಯ. 'ಎಡಗೈ ಜಾತಿಗಳು' ಪಾಂಚಾಳ, ಬೇರಿ, ದೇವಾಂಗ, ಹೆಗ್ಗಾಣಿಗ, ಗೊಲ್ಲ, ಬೇಡ, ಒಕ್ಕಲು, ಪಲ್ಲಿ, ಮಾದಿಗ ಈ ಎರಡೂ ಗುಂಪಿನ ಜಾತಿಗಳ ಮಧ್ಯೆ ಆಗಾಗ ಜಗಳವಾಗುತ್ತಿತ್ತು. ಆಗಿನ ರಾಜಶಾಹಿ ಶೋಷಕವರ್ಗಕ್ಕೆ ಇದರಿಂದ ಅನುಕೂಲವೂ ಇತ್ತು. ಕಳಸ, ಆರತಿ, ಛತ್ರಿ, ಚಾಮರ ಮೊದಲಾದ ಬಿರುದಾವಳಿಗಳನ್ನು ಬಳಸುವುದೆ ಮೊದಲಾದ ಸಣ್ಣ ಕಾರಣಗಳಿಗೂ ವೈಷಮ್ಯ ವಿಪರೀತಕ್ಕೆ ಹೋಗುತ್ತಿದ್ದವು"(ಎಸ್.ಎಸ್.ಹಿರೇಮಠ, ಪುಟ.೭೯೧). "ಎಡಗೈ ಗುಂಪಿಗೆ ಪಾಂಚಾಳರು ಮುಖಂಡರಾಗಿದ್ದರು. ಇವರು ಪಂಚಾಯಿತಿ ಮಾಡುವ ಹಕ್ಕುಳ್ಳವರಾಗಿದ್ದರು. ಇವರು ಹೊಲೆ ಮಾದಿಗರೇ ಆಗಿದ್ದರು. ಜಾತಿಪದ್ಧತಿಯ ವಿರುದ್ಧ ಹಟಬಿಡದ ತ್ರಿವಿಕ್ರಮನಂತೆ ಮರ್ಯಾದಸ್ತ ಸ್ಥಾನಮಾನಗಳಿಗೆ ಹೋರಾಡಿದರು. ಅದು ಪಣಕಟ್ಟು, ಪಣವ್ಯಾಜದ ಮೂಲಕ"(ಕೋಟಗಾನಹಳ್ಳಿ ರಾಮಯ್ಯ, ಸಿಂದ್ ಮಾದಿಗರ ಸಂಸ್ಕೃತಿ, ಪುಟ.೭೦). ಇದಕ್ಕೆ ಅವರು ಉಪಯೋಗಿಸಿದ ತಂತ್ರ ಬ್ರಾಹ್ಮಣರು ಉಪಯೋಗಿಸುತ್ತಿದ್ದ ಸಾಧನಗಳನ್ನೇ ಬಳಸುವುದು. ಜನಿವಾರಧಾರಣೆ, ಪುರೋಹಿತಿಕೆ ಮೊದಲಾದವು. ತಮ್ಮ ಮದುವೆ ಮತ್ತು ಸಾವಿನ ವಿಧಿಗಳಲ್ಲಿ ಪುರೋಹಿತರನ್ನು ಹತ್ತಿರಕ್ಕೂ ಬಿಟ್ಟುಕೊಳ್ಳುವುದಿಲ್ಲ. ಬದಲಿಗೆ ತಾವೇ ಪುರೋಹಿತರಾಗಿ ಕಾರ್ಯನಿರ್ವಹಿಸಿಕೊಳ್ಳುತ್ತಾರೆ.

"ಈ ಪಾಂಚಾಳರು ಚೋಳರ ರಾಜಗುರುಗಳು ಮತ್ತು ಪುರೋಹಿತರೂ ಆಗಿದ್ದರು. ಪರಿಮಲನ್‌ಚೋಳನ ಕಾಲದಲ್ಲಿ ವೇದವ್ಯಾಸ ಇದನ್ನು ವಿರೋಧಿಸಿದ. ಜನರನ್ನು ವೇದವ್ಯಾಸ ಒತ್ತಡದಿಂದ ರಾಜ 'ಬಲಗೈ'ಯವರು ಎಂದು ಘೋಷಿಸಿದ. ಐದುವೇದಗಳಿದ್ದವೆಂದು ಪಾಂಚಾಳ ಹೇಳಿಕೊಂಡಿದ್ದರಿಂದಲೇ ಅವನಿಗೆ ಪುರೋಹಿತಪಟ್ಟ ಚೋಳರಿಂದ ದೊರಕಿತು"(ಅದೇ). ಒಟ್ಟಾರೆ ಪಣವ್ಯಾಜ್ಯ ಬ್ರಾಹ್ಮಣರನ್ನು ಮತ್ತು ವೈದಿಕ ಸಂಸ್ಕೃತಿಯ ದಬ್ಬಾಳಿಕೆಯನ್ನು ಶರಣರ ಚಳುವಳಿಯ ಹಿಂದೆ ದಕ್ಷಿಣ ಭಾರತದಲ್ಲಿ ಹುಟ್ಟು ಹಾಕಿದವರು ಹೊಲೆ-ಮಾದಿಗರೇ, ಈ ಜನವರ್ಗದಲ್ಲಿದ್ದ ಪೂಜಾರಿ ಮತ್ತು ಪಂಚಾಳವರ್ಗ. ಇವರ ನೇತೃತ್ವವಹಿಸಲು ಮುಖ್ಯಕಾರಣ ಆರ್ಥಿಕವಾಗಿ, ಬೌದ್ಧಿಕವಾಗಿ ಮುಂದುವರೆದಿದ್ದರು. ಇದಕ್ಕೆ ಪೂರಕವಾಗಿ ಕಬ್ಬಾಳಿನಲ್ಲಿ ಒಂದು ಕಾಲದಲ್ಲಿ

ಪಾಂಚಾಳರು ಪ್ರಬಲರಾಗಿದ್ದರು. ಕಬ್ಬಾಳಿನ ಬೆಟ್ಟದ ಹಿಂದಿನ ಹಳ್ಳದ ಪಕ್ಕದಲ್ಲಿ ಪಲ್ಲವರ ಕಾಲದಲ್ಲಿ ನೂರೊಂದು ಕುಲುಮೆಗಳಿದ್ದವು. ಪಾಂಚಾಳರೇ ಇಲ್ಲಿ ಪ್ರಭುಗಳಾಗಿದ್ದರು ಎಂಬುದು ಆ ಕಾಲದಲ್ಲಿ ಕಾಳಿ ಕಬ್ಬಾಳಮ್ಮನ ಪೂಜಾರಿಗಳು ಇವರೇ ಇದ್ದಿರಬೇಕು. "ಸುಮಾರು ಏಳುನೂರು ವರ್ಷಗಳ ಹಿಂದೆ ಕಬ್ಬಾಳಿನಲ್ಲಿ ಸಾವಿರಾರು ಹೊಲೆಯರ ಮನೆಗಳಿದ್ದವಂತೆ. ಅವರ ಕೊಳಕುತನ ನೋಡಿ ಬಲಿಕೊಡುವುದು ಅಂಟು ಮುಂಟು ಮಾಡುವುದು ಕಬ್ಬಾಳಮ್ಮನಿಗೆ ಹಿಡಿಸದೆ, ಅವರಿಗೆ ವಾಂತಿ ಬೇಧಿತಂದು ಕಾಲರ, ಪ್ಲೇಗು, ತಂದು ಅವರ ಒಕ್ಕಲೆಬ್ಬಿಸಿದಳಂತೆ"(ಶಿವರಾಮ, ಕಬ್ಬಾಳಮ್ಮನ ಪೂಜಾರಿ, ಕಬ್ಬಾಳು). ಇದು ಹಿಂದೆ ಕಬ್ಬಾಳಿನಲ್ಲಿ ಬಹುಸಂಖ್ಯಾತರಾಗಿದ್ದ ಹೊಲೆಯರೇ ಪಾಂಚಾಳರಾಗಿದ್ದರು ಎಂದು ಊಹಿಸಬಹುದು. ಕಾಲರ ಪ್ಲೇಗು ಅಂದು ಸಾಮಾನ್ಯವಾದ ಕಾಯಿಲೆಗಳಾಗಿದ್ದವು. ಆದರೆ ಅಂಟು ಮುಟ್ಟಿನಿಂದ ಕಬ್ಬಾಳಮ್ಮ ಅವರನ್ನು ದೂರ ಇಟ್ಟಿದ್ದಳು ಎಂಬುದು ನಂಬಲರ್ಹವಲ್ಲದ್ದು. ಪಣಕಟ್ಟಿನ ಹೋರಾಟದ ಹಿನ್ನೆಲೆಯಲ್ಲಿ ಇವರನ್ನು ಅಂಕೆಯಲ್ಲಿಡುವ ಉದ್ದೇಶದಿಂದ ವೈದಿಕರ ಸೃಷ್ಟಿ ಎನ್ನಬಹುದು.

"ಚೋಳ ಸಾಮ್ರಾಜ್ಯ ಪ್ರವರ್ಧಮಾನಕ್ಕೆ ಬರುವ ವೇಳೆಗಾಗಲೇ ಬ್ರಾಹ್ಮಣರ ಕೈ ಮೇಲಾಗಿ ಬಿರುಸಿನ ಬ್ರಾಹ್ಮಣೀಕರಣದ ಬಿಸಿಗೆ ಬ್ರಾಹ್ಮಣೇತರ ಶೂದ್ರ ಸಮಾಜದಲ್ಲಿ ಕುದಿಯೊಂದು ಏರ್ಪಡತೊಡಗಿತು. ಪಂಚಾಳರು ಬ್ರಾಹ್ಮಣರಿಗೆ ಮುಖಾಮುಖಿಯಾಗಿ ನಿಂತು ಸಮರ್ಥ ಸವಾಲೊಡ್ಡಲು ಆರಂಭಿಸಿದ ಕೂಡಲೇ ಈ ಕುದಿತ ಪಣ ಜ್ವಾಲಾಮುಖಿಯ ರೂಪದಲ್ಲಿ ಹೊರ ಹೊಮ್ಮತೊಡಗಿತು. ರಾಜನನ್ನು ತಮ್ಮ ಕೈವಶಮಾಡಿಕೊಂಡಿದ್ದ ಪಂಚಾಳರಿಗೆ ಬ್ರಾಹ್ಮಣರನ್ನು ಎದುರು ಹಾಕಿಕೊಳ್ಳುವಷ್ಟು ಚೈತನ್ಯ, ಧೈರ್ಯ ಬರಲು ಕಾರಣ ಆ ಕಾಲದಲ್ಲಿ ನಡೆಯುತ್ತಿದ್ದ ಅಪಾರ ಗುಡಿಗೋಪುರಗಳ ನಿರ್ಮಾಣ ಕಾರ್ಯ. ಆಳರಸರಿಗೆ ಪಂಚಾಳರನ್ನು ನಿರ್ಲಕ್ಷಿಸುವುದು ಈ ಕಾರಣದಿಂದ ಅಸಾಧ್ಯವಾಗಿರಬೇಕು. ಈ ಎಲ್ಲ ಕಾರಣಗಳು ಏಕೀಭವಿಸಿ ದಕ್ಷಿಣ ಭಾರತದ ಇಡೀ ನೆಲ ಪಣಯುದ್ಧದ ರಣಾಂಗಣವಾಗಿ ರೂಪುಗೊಂಡಿತು"(ಸಿಂದ್ ಮಾದಿಗರ ಸಂಸ್ಕೃತಿ, ಕೋಟಗಾನಹಳ್ಳಿ ರಾಮಯ್ಯ, ಪುಟ.೬೬).

ಜಾತಿವರ್ಣ ವ್ಯವಸ್ಥೆಯ ಹರಿಕಾರರಾದ ವೈದಿಕರು ತಮ್ಮ ಎಂದಿನ ಒಡೆದು ಆಳುವ ನೀತಿಯನ್ನು ಇಲ್ಲಿಯೂ ಅನುಸರಿಸಿದರು. ಇವರಿಗೆ ಬೆಂಬಲವಾಗಿ ನಿಂತವರು ಬಲಗೈಯರಾದರು. ಪಂಥ ಪದ್ಧತಿಗಳ ಪ್ರಭಾವಗಳಿಂದ ದ್ರಾವಿಡರಲ್ಲಿದ್ದ ವೈಷಮ್ಯರಹಿತ ವೈರುದ್ಯವನ್ನು ಬ್ರಾಹ್ಮಣರು ಬಳಸಿಕೊಂಡರು. ಅದನ್ನು ಪಣವ್ಯಾಜ್ಯದಲ್ಲಿ ವೈಷಮ್ಯಪೂರಿತ ವೈರುಧ್ಯವನ್ನಾಗಿ ಪರಿವರ್ತಿಸುವಲ್ಲಿ ಸಫಲರಾದರು. ಬಹುಶಃ ಈ ಎಲ್ಲಕ್ಕೂ ರಾಜ್ಯ ವ್ಯವಸ್ಥೆ ಬೆಂಬಲವಾಗಿ ನಿಂತಿತು. ಅದು ಸಹಜವಾಗಿ ವೈದಿಕರನ್ನು ಬೆಂಬಲಿಸಿತು. ಏಕೆಂದರೆ ತನ್ನ ಅಸ್ತಿತ್ವಕ್ಕೆ ಅದು ಜಾತಿ ಪದ್ಧತಿಯನ್ನೇ ಆಶ್ರಯಿಸಬೇಕಾಗಿತ್ತು. ಬಹುಶಃ ಈ ಸಂದರ್ಭದಲ್ಲೇ ಕಬ್ಬಾಳಮ್ಮನನ್ನು ಪೂಜಿಸುವ ಪೂಜಾರಿತನದ ಹಕ್ಕುಗಳು ಪಂಚಾಳ ಹೊಲೆಯರಿಂದ ವೈದಿಕ ಬ್ರಾಹ್ಮಣರಿಗೆ ಇವರ ತರುವಾಯ ಪಶುಪಾಲಕ ದ್ರಾವಿಡರಾದ ಒಕ್ಕಲಿಗರಿಗೆ ದಕ್ಕಿರಬೇಕು. ವೈದಿಕರ ಈ ಕುತಂತ್ರವನ್ನು ಬೆಂಬಲಿಸಿದ ರಾಜವ್ಯವಸ್ಥೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಅದು ಜಾತಿಪದ್ಧತಿಯನ್ನೇ ಆಶ್ರಯಿಸಬೇಕಾಗಿತ್ತು. ಅದರ ಪಕ್ಕಾಪ್ರತಿಪಾದಕರೂ ಬ್ರಾಹ್ಮಣರೇ ಆಗಿದ್ದರು. ಕರ್ನಾಟಕದ ಮೊದಲ ಕದಂಬ ಅರಸ ಬ್ರಾಹ್ಮಣರನ್ನು ದೊಡ್ಡ ಸಂಖ್ಯೆಯಲ್ಲಿ ಆಮದು ಮಾಡಿದಕ್ಕೆ ಕಾರಣ ಇದೇ ಆಗಿತ್ತು.

ಪಾಂಚಾಲರು ಹನ್ನೆರಡನೇ ಶತಮಾನದ ನಂತರ ವೀರಶೈವ ಮಠಾಧೀಶರಂತೆ ವೈದಿಕ ಆಚರಣೆಗಳನ್ನೇ ಅನುಸರಿಸಿದರು. ಅಂದರೆ ಬ್ರಾಹ್ಮಣೇಕರಕ್ಕೆ ಒಳಗಾದರು ನಂತರ ಕಾಳವ್ವನಾಗಿದ್ದ ಗ್ರಾಮದೇವತೆ ಕಬ್ಬಾಳಮ್ಮನಾಗಿರಬೇಕು. ಕಬ್ಬಾಳಮ್ಮ ಪ್ರಬಲ ಶಕ್ತಿದೇವತೆಯಾಗಿದ್ದರಿಂದ ಅದರ ಪ್ರಖರತೆ ಮಂಕಾಗದೆ ಇದ್ದುದರಿಂದ ಪಶುಪಾಲಕ ಒಕ್ಕಲಿಗರ ಮಾರಮ್ಮ ಊರಮ್ಮನ ಮುಂದೆ ಗೌಣವಾಗಿರಬೇಕು. ಅದು ಕಬ್ಬಾಳಮ್ಮನ ಅಕ್ಕ ಅಥವಾ ತಂಗಿ ಎಂದು ಬಿಂಬಿಸಲಾಗಿದೆ. ಆದರೆ ಕಬ್ಬಾಳಮ್ಮ ಮಾರಮ್ಮ, ಸತ್ಯಮ್ಮ ಒಂದೇ ಗುಡಿಯಲ್ಲಿ ಕುಳಿತಿದ್ದಾರೆ. ಆದರೆ ಜಾತ್ರೆಯಲ್ಲಿ ಮುಖ್ಯ ಪಾತ್ರವನ್ನು ವಹಿಸುವ ಛಲವಾದಿ(ಹೊಲೆಯ)ರ ಪಾತ್ರವನ್ನು ತಪ್ಪಿಸಲು ಚರಿತ್ರೆಗೆ ಸಾಧ್ಯವಾಗಲಿಲ್ಲ.

ಕಬ್ಬಾಳಮ್ಮನ ಜಾತ್ರೆ

ಸಾರುವುದು

ದೇಶದ ಇತರ ಗ್ರಾಮದೇವತೆ ಹಬ್ಬ ಜಾತ್ರೆಗಳಲ್ಲಿ ಇರುವಂತೆ ಕಬ್ಬಾಳಮ್ಮನ ಜಾತ್ರೆಯು ಸಾರುವುದರಿಂದ ಪ್ರಾರಂಭವಾಗುತ್ತದೆ. ಊರಿನ ಯಜಮಾನರೆಲ್ಲ ಒಂದೆಡೆ ಸೇರಿ ಹಬ್ಬದ ದಿನವನ್ನು ತೀರ್ಮಾನ ಮಾಡುತ್ತಾರೆ. ಸಾರುವ ವ್ಯಕ್ತಿ ಹೊಲೆಯನಾಗಿರುತ್ತಾನೆ. ಸಾರುವುದು ವಂಶಪಾರಂಪರ್ಯವಾದದ್ದು. ಆ ದಿನ ಈತನನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಈತನ ಮನೆಯ ಬಟ್ಟೆ ತೆಗೆದುಹಾಕಿ ಮಡಿವಾಳರ ಮನೆಯ ಮಡಿಬಟ್ಟೆ ತೊಡಿಸುತ್ತಾರೆ. ಗಂಧಚಂದನ ಹೊಟ್ಟೆಗೆ ನುಂಗಿಸುತ್ತಾರೆ. ಪೂಜಾರಿಯು ತೀರ್ಥಹಾಕಿ ಜನಿವಾರವನ್ನು ಕೊರಳಿಗೆ ಹಾಕುತ್ತಾರೆ. ಲೆಕ್ಕಕ್ಕೆ ಏಳು ಹಳ್ಳಿ ಸಾರಣೆಗೆ ಹದಿನಾರು ಹಳ್ಳಿಗಳಿಗೆ ಸಾರುತ್ತಾನೆ. "ಇವತ್ತಿಗೆ ಹದಿನೈದು ದಿನಕ್ಕೆ ಮಂಗಳವಾರ ತಾಯಿ ಹಬ್ಬ ನಡೀತದೆ ಹಳ್ಳು ಅಡಬೇಡಿ ಹುಳ್ಳಿ ಉರಿಬೇಡಿ ಒಳ್ಳೆಯವರೆಲ್ಲ ಒಳಗಿರಿ, ಕೆಟ್ಟವರೆಲ್ಲಾ ಈಚೆಗಿರಿ ಎಂದು ಕೈಯಲ್ಲಿ ಜಾಗಟೆ ಹಿಡಿದು ಸಾರುತ್ತಾನೆ". ಸಾರುವಾಗ ತಮ್ಮ ಮನೆಗೆ ಬರುವಂತಿಲ್ಲ. ಒಂದು ಹೊತ್ತು ಊಟ ಮಾಡಬೇಕು, ತಮ್ಮ ಜಾತಿಯ ಜನರ ನೆರಳು ಬೀಳುವಂತಿಲ್ಲ. ಹೊಲಗೇರಿಗೆ ಹೋಗುವುದಿಲ್ಲ. ಊರಿನ ಕೇರಿಯ ಮೊಗ್ಗಲಲ್ಲಿ ನಿಂತು ಸಾರುತ್ತಾನೆ. ಒಂದು ವೇಳೆ ಯಾರಾದರೂ ಊರಿನಲ್ಲಿ ಸತ್ತಿದ್ದರೆ ಊರ ಹೊರಗಡೆ ನಿಂತು ಸಾರುತ್ತಾನೆ. ಜಾತ್ರೆಯು ಮುಗಿಯುವವರೆಗೂ ದೇವಸ್ಥಾನದ ಮುಂದೆ ಒಂದು ಗುಡಿಸಲು ಹಾಕಿಕೊಂಡು ಇರುತ್ತಾನೆ. ಇವನೇ ಸ್ವತಃ ಅಡಿಗೆ ಮಾಡಿ ಊಟ ಮಾಡಬೇಕು. ಹೊಸ ಕುಡುಕೆಯಲ್ಲಿ ನೀರು ಕುಡಿಯಬೇಕು. ಹೊಸ ಮಡಿಕೆಯಲ್ಲಿ ಅಡುಗೆ ಮಾಡಿ ಎಲೆಯಲ್ಲಿ ಊಟ ಮಾಡಬೇಕು. ಒಕ್ಕಲಿಗರ ಮನೆಯಲ್ಲಿ ಊಟಮಾಡಬಹುದು. ಹೊಲೆಯರ ಹತ್ತಿರ ಭಿಕ್ಷೆಯನ್ನೂ ಸಹ ತೆಗೆದುಕೊಳ್ಳುವುದಿಲ್ಲ. ಕಬ್ಬಾಳಮ್ಮನ ಹಬ್ಬ ಮುಗಿಯುವವರೆಗೂ ಮಡಿ ಮೈಲಿಗೆಯಿಂದ ಶುದ್ಧವಾಗಿರಬೇಕು.

ಹೊನ್ನೇರು ಚಪ್ಪರ

ಹಬ್ಬದ ಮೊದಲ ದಿನ ಅಂದರೆ ಶುಕ್ರವಾರ ಈ ಆಚರಣೆ ಮಾಡುತ್ತಾರೆ. ದೇವಸ್ಥಾನದಲ್ಲಿ ಇಟ್ಟಿರುವ ಮರದ ತಾಳಿಯನ್ನು ತೆಗೆದುಕೊಂಡು ಪೂಜಾರಿಯ ನೇತೃತ್ವದಲ್ಲಿ ಶಾಸ್ತ್ರೋಕ್ತ ಕಾರ್ಯಗಳನ್ನು ಜರುಗಿಸುತ್ತಾರೆ. ಮೊದಲು ೧೦-೧೨ವರ್ಷದ ಇಬ್ಬರು ಒಕ್ಕಲಿಗ ಹುಡುಗರಿಗೆ ಗಂಡು-ಹೆಣ್ಣಿನ ಸೊಂಟಕ್ಕೆ ಒಡ್ಯಾಣ ಕಟ್ಟುತ್ತಾರೆ. ಗಂಡು ಹೆಣ್ಣಿನ ವೇಷಧಾರಿಗಳನ್ನು ಕಬ್ಬಾಳಮ್ಮನ ಗಂಡ ರಂಗಸ್ವಾಮಿ ಕಲ್ಲಾಗಿ ನಿಂತಿರುವ ಸ್ಥಳಕ್ಕೆ ಕರೆತರುತ್ತಾರೆ.

ಪೂಜಾರಿಯು ರಂಗಸ್ವಾಮಿಗೆ ಅರಿಸಿಣ-ಕುಂಕುಮ ಹಚ್ಚಿ ಹೂ ಮುಡಿಸಿ ಶೃಂಗರಿಸುತ್ತಿರಲು ಬೇರೆಯವರು ಈ ಇಬ್ಬರು ಹುಡುಗರ ಹೆಗಲಿಗೆ ನೊಗ ಕಟ್ಟಿ ಅವರನ್ನು ಎತ್ತುಗಳೆಂದು ಭಾವಿಸಿಕೊಂಡು ರಂಗಸ್ವಾಮಿಯ ವಿಗ್ರಹದ ಸುತ್ತ ಹೊಲ ಉಳುವಂತೆ ಸುಮಾರು ಹತ್ತು ಸುತ್ತು ಸುತ್ತಿಸುತ್ತಾರೆ. ಆಮೇಲೆ ಹೊಸ ಬಿತ್ತನೆ ಹಾಕಲು ಸಿದ್ಧವಾಗಿದೆ ನನಗೆ ಹೆಣ್ಣುಕೊಡಿ ಎಂದು ಮದುವೆ ಗಂಡಿನ ವೇಷದವನು ಕೇಳುತ್ತಾನೆ. ಆಗ ಏನಲೇ ಹೆಣ್ಣು ಕೊಡಬೇಕಾ ನಿನಗೆ? ಚೆನ್ನಾಗಿ ನಾಲ್ಕು ಮೂಲೆಯಲ್ಲಾ ಉತ್ತಿದ್ದೀಯಾ ನೋಡುತ್ತೇನೆ ಎಂದು ಪರೀಕ್ಷಿಸಿದ ಮೇಲೆ ರಂಗಸ್ವಾಮಿಯ ಪಕ್ಕದಲ್ಲೇ ಹಾಕಿರುವ ಚಪ್ಪರದಡಿಯಲ್ಲಿ ಹಸಿಮಣ್ಣಿನಲ್ಲಿ ಸಿದ್ಧಪಡಿಸಿರುವ ಹಸೆಯಲ್ಲಿ ಮದುವೆ ಮಾಡುವ ಕ್ರಿಯೆಯನ್ನು ಅನುಕರಣೆ ಮಾಡುತ್ತಾರೆ. ನಂತರ ರಂಗಸ್ವಾಮಿಯ ವಿಗ್ರಹದ ತಲೆಯ ಮೇಲೆ ಕೆಂಡ ಸುರಿಯುವ ಪದ್ಧತಿ ಅನುಸರಿಸುತ್ತಾರೆ. ಇಮ ಸಿಡಿ ಆಡುವವರೆಗೆ ಐದು ದಿನಗಳ ನಿರಂತರ ಕೆಂಡ ಹುಯ್ಯಲಾಗುತ್ತದೆ.

ಯಳವಾರ

ಕಬ್ಬಾಳಮ್ಮನ ಕೊಂಡಕ್ಕೆ ಕಬ್ಬಾಳು ಕುಳಿಯ ಎಲ್ಲಾ ಊರುಗಳಿಂದ ಸೌದೆ ಬರುವುದಕ್ಕೆ ಎಳವಾರ ಎನ್ನುವರು. ಇಂದು ಊರುಗಳ ಸಂಖ್ಯೆ ಮೂವತ್ತಮೂರು ಹಳ್ಳಿಗೂ ಹೆಚ್ಚಾಗಿದೆ. ಕಬ್ಬಾಳಮ್ಮನ ಕೊಂಡಕ್ಕೆ ಬಾನುವಾರ ಸಂಜೆ ಸೌದೆಗಳನ್ನು ಕಟ್ಟಿಕೊಂಡು ಎಳವಾರಗಳು ಕಬ್ಬಾಳಿಗೆ ಬಂದು ಸೇರುತ್ತವೆ. ಎಲ್ಲಾ ಜಾತಿ ಜನವರ್ಗದವರೂ ಎಳವಾರ ಕಟ್ಟುತ್ತಾರೆ. ಬಾನುವಾರ ಮುಂಜಾನೆ ಎದ್ದು ಎಳವಾರ ಕಟ್ಟುವ ಎಲ್ಲರು ಎಳವಾರದ ಕೊನೆತರುತ್ತಾರೆ. ಇಲ್ಲಿ ಸೌದೆಗಳಿಗೆ ಕೊನೆ, ಎಳವಾರದ ಕೊನೆ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಎರಡು ಕೊನೆಗಳನ್ನು ಜೋಡಿಸಿಕಟ್ಟುತ್ತಾರೆ. ಈ ಕೊನೆಗಳಿಗೆ ಚುಜ್ಜಲಿ, ಬಸರಿ, ಬೇವು, ನೇರಳೆ, ಹಲಸು ಮುಂತಾದ ಜಾತಿಯ ಮರಗಳನ್ನೇ ಕಡಿದು ಕಟ್ಟುತ್ತಾರೆ.

ಭಾನುವಾರ ಹೊತ್ತು ಮೂಡವಷ್ಟೊತ್ತಿಗೆ ಹಸು, ಎತ್ತು, ಹೋರಿಗಳ, ಕೊಂಬುಗಳನ್ನು ಎರೆದು, ಅವುಗಳಿಗೆ ಕೆರೆ ಕಟ್ಟೆಗಳಲ್ಲಿ ಮೈತೊಳೆದು ಸ್ವಚ್ಚಮಾಡಿ ಚೆನ್ನಾಗಿ ಮೇಯಿಸುತ್ತಾರೆ. ಬಣ್ಣ ಬಣ್ಣದ ಗುಲ್ಲಂಪಟ್ಟೆ, ಕಾಗದಗಳು, ಕಡುನೀಲಿ ಬಣ್ಣಗಳಿಂದ ಅವುಗಳ ಕೊಂಬನ್ನು ಅಲಂಕರಿಸುತ್ತಾರೆ. ಗುಲ್ಲಂಪಟ್ಟೆಯಲ್ಲಿ ಹೆಚ್ಚಾಗಿ ಕೆಂಪು, ಅರಿಸಿಣ, ಹಸಿರು, ಬಣ್ಣಗಳೇ ಇರುತ್ತವೆ. ಕೊಂಬಿಗೆ ಕಳಸ, ಕೊರಳಿಗೆ ಕರಿಹುರಿ, ಹೂವಿನ ಮಾಲೆ, ಮುಖಕ್ಕೆ ಮೊಕರೊಂಬೆ ಹಾಕಿ ಹಣೆಯಲ್ಲಿ ಅರಿಸಿಣ ಕುಂಕುಮವಿಟ್ಟು ಗಂಧದಕಡ್ಡಿ ಹಚ್ಚುತ್ತಾರೆ. ಕೆಲವು ಎತ್ತು ಹೋರಿಗಳಿಗೆ ಮೈತುಂಬ ಗೌಸನ್ನು ಹೊದಿಸಿ ಅಲಂಕರಿಸುತ್ತಾರೆ. ಮೊಕರೊಂಬೆಗೆ ಹೊಂಬಾಳೆಯನ್ನು ಎರಡು ಎತ್ತುಗಳಿಗೂ ಮುಡಿಸುತ್ತಾರೆ. ಎತ್ತುಗಳಿಗೆ ನೊಗಹೂಡಿ ನೇಗಿಲು ಕಟ್ಟುವ ರೀತಿಯಲ್ಲಿ ಎರಡೆರಡು ಕೊನೆಗಳನ್ನು ಜೋಡಿಸಿ ದಾರದಿಂದ ಬಿಗಿಯಾಗಿ ಬೇರ್ಪಡದಂತೆ ಕಟ್ಟುತ್ತಾರೆ. ಉಳುವ ಹಗ್ಗವನ್ನು ನೊಗ ಮತ್ತು ಸೌದೆಗಳಿಗೆ ಸೇರಿ ಕಳಚದಂತೆ ಕಟ್ಟುತ್ತಾರೆ. ಇದನ್ನು 'ಏರು' ಎಂದು ಕರೆಯುತ್ತಾರೆ. ಹೊಲ ಉಳುವಾಗ ನೇಗಿಲಿರುತ್ತದೆ, ಆದರೆ ಇಲ್ಲಿ ಸೌದೆ ಇರುತ್ತದೆ, ಅಷ್ಟೇ ವ್ಯತ್ಯಾಸ. ಈ ಎಳವಾರಕ್ಕೆ ಮುಂದೆ ತಮಟೆ, ನಗಾರಿಗಳ ವಾದ್ಯ ಇರಲೇಬೇಕು. ತಮಟೆ ನಗಾರಿಗಳ ಬಡಿತದೊಂದಿಗೆ ಮೆರವಣಿಗೆಯಲ್ಲಿ ಪ್ರತಿಮನೆಯಿಂದ ಬೆಲ್ಲದ ಆರತಿ ನೀಡಿ ಈಡುಗಾಯಿಗಳನ್ನು ಹೊಡೆಯುತ್ತಾರೆ. ನಂತರ ಆಯಾ ಊರಿನ ದೇವಸ್ಥಾನವನ್ನು ಮೂರು ಸುತ್ತು ಸುತ್ತಿ ಕಬ್ಬಾಳಿಗೆ ಬಂದು

ಕಬ್ಬಾಳಿನ ಕೊಂಡವನ್ನು ಮೂರು ಸುತ್ತು ಸುತ್ತಿ (ಹೊಲ ಉಳುವ ರೀತಿಯಲ್ಲಿ) ನಂತರ ದೇವಸ್ಥಾನದ ಹೆಬ್ಬಾಗಿಲಲ್ಲಿ ಕಾಯೊಡೆದು ಪೂಜೆಮಾಡಿ ತೀರ್ಥ ಹಾಕುತ್ತಾರೆ. ಆಮೇಲೆ ಸೌದೆಗಳನ್ನು ಬಿಚ್ಚಿ ಕೊಂಡಕ್ಕೆ ಹಾಕಿ ನೊಗ ಹೂಡಿದ ಎತ್ತುಗಳನ್ನು ಮನೆಗೆ ಹೊಡೆದುಕೊಂಡು ಬರುತ್ತಾರೆ.

ಹೊಳೆ ಮೆಟ್ಟಿಸುವುದು

ಸೋಮವಾರ ಮುಂಜಾನೆ ಮೊದಲ ಕೋಳಿ ಕೂಗುವ ಹೊತ್ತಿಗೆ ಕಬ್ಬಾಳಮ್ಮ, ಬಸವೇಶ್ವರ, ಸತ್ತಿಗಮ್ಮ ಇನ್ನು ಕೆಲವು ದೇವತೆಗಳು ಕಬ್ಬಾಳಮ್ಮನ ಗಿಂಡಿ(ಕಳಸ)ಹೊತ್ತ ಪೂಜಾರಿ ಮಡಿಬಟ್ಟೆ ಮೇಲೆ ಹೋಗಿ ಮಜ್ಜಣದ ಕೊಳದಲ್ಲಿ ದೇವರುಗಳಿಗೆ ಸ್ನಾನಮಾಡಿಸಿ ಪೂಜಿಸಿ ನಂತರ ಅರ್ಚಕನು ಗಿಂಡಿಯನ್ನು ತಲೆಯಮೇಲೆ ಹೊತ್ತುಕೊಂಡು ನಿಲ್ಲಲು ಅವನ ಹಿಂದೆ ಸತ್ತಿಗಮ್ಮ, ಬಿಸಿಲಮ್ಮ, ಕಬ್ಬಾಳಮ್ಮ ದೇವರುಗಳನ್ನು ಮಡಿವಾಳನ ಮಡಿಯಮೇಲೆ ಕರೆತರುತ್ತಾರೆ. ಸಾರುವವನು ಕೂಡ ಮಡಿಯಮೇಲೆ ದೇವರ ಹಿಂದೆ ಜಾಗಟೆ ಹಿಡಿದುಕೊಂಡು ಸಾಗುತ್ತಾನೆ. ಜಾಗಟೆ ಶಬ್ದದೊಡನೆ ತಮಟೆ ನಗಾರಿಯನ್ನು ಬಾರಿಸುತ್ತಾ ಹೊಳೆ ಮೆಟ್ಟಿಸಿಕೊಂಡು ದೇವಸ್ಥಾನಕ್ಕೆ ಬರುತ್ತಾರೆ. ಮೊದಲು ಬಸವೇಶ್ವರನ ದೇವಸ್ಥಾನಕ್ಕೆ ಹೋಗಿ ತೀರ್ಥಹಾಕಿಸಿಕೊಂಡು ಬಂದು ಕೊಂಡವನ್ನು ಒಂದು ಸುತ್ತು ಪ್ರದಕ್ಷಿಣೆ ಹಾಕುತ್ತಾರೆ.

ಕೊಂಡಹಾಯುವುದು

ಕೊಂಡಹಾಯುವುದು ಎಂದರೆ ಕೆಂಡ ಹಾಯುವುದು ಎಂದೇ ಅರ್ಥ. ಕಬ್ಬಾಳಮ್ಮನ ಕೊಂಡವು ನಾಲ್ಕು ಅಡಿ ಅಗಲ, ಐದು ಅಡಿ ಆಳ ಇಪ್ಪತ್ತೈದರಿಂದ ಮೂವತ್ತು ಅಡಿ ಉದ್ದದಕೊಂಡ ತೋಡಿ ಅದನ್ನು ಕೆಳಗಿನಿಂದಲು ಇಟ್ಟಿಗೆಗಳಿಂದ ಕಟ್ಟಿದ್ದಾರೆ. ಕಬ್ಬಾಳಮ್ಮನ ಕೊಂಡಕ್ಕೆ ಬಂದ ಸೌದೆಗಳನ್ನು ಮೂರು ಗುಂಪಾಗಿ ಪಕ್ಕ ಪಕ್ಕದಲ್ಲೇ ಗುಡ್ಡೆಮಾಡುತ್ತಾರೆ. ಕಬ್ಬಾಳಮ್ಮನಿಗೆ ಪೂಜೆ ಮಾಡಿ ತೀರ್ಥಹಾಕಿದ ನಂತರ ಮೊದಲು ಹೊಲೆಯರಿಂದ ಒಬ್ಬ ಬೆಂಕಿ ಹಚ್ಚುತ್ತಾನೆ. ನಂತರ ಕಬ್ಬಾಳು ಮತ್ತು ಹೊಸಕಬ್ಬಾಳಿನ ಒಕ್ಕಲಿಗರು ಇನ್ನುಳಿದ ಎರಡು ಗುಡ್ಡೆಗೆ ಬೆಂಕಿ ಹಚ್ಚುತ್ತಾರೆ. ಸೌದೆಗಳೆಲ್ಲ ಮುಂಜಾವಿನ ಹೊತ್ತಿಗೆ ಬೆಂದು ಕೆಂಡವಾಗಿರುತ್ತವೆ. ಅಷ್ಟರಲ್ಲಿ ಮಜ್ಜನಕೊಳದಿಂದ ಹೊಳೆಮೆಟ್ಟಿಸಿಕೊಂಡು ಬಂದ ಕಬ್ಬಾಳಮ್ಮನ ಗಿಂಡಿಗೆ ಎಳೆಯ ಹೊಂಬಾಳೆ ಮುಡಿಸಿ ಪೂಜಾರಿಯ ತಲೆಮೇಲೆ ವಾಲಾಡುತ್ತಿರುತ್ತದೆ. ಕಬ್ಬಾಳಮ್ಮನ ದೇವಸ್ಥಾನದ ಮಗ್ಗುಲಲ್ಲಿರುವ ಬಸವೇಶ್ವರ ಕೊಂಡ ಹಾಯಲು ತಂಗಿಗೆ ಆಶೀರ್ವಾದವನ್ನು ಮಾಡಬೇಕು. ಅನಂತರ ಗಿಂಡಿ ಹೊತ್ತ ಅರ್ಚಕನು ಕಬ್ಬಾಳಮ್ಮನು ಮೈದುಂಬಿ ಬಂದಹಾಗೆ ಮಾಡುತ್ತ ತೂಗಿ ತೊನೆದಾಡುತ್ತ ಸಾಗುತ್ತಾನೆ. ಅಷ್ಟರಲ್ಲಿ ಕೊಂಡ ಹರಗಿ ಸಿದ್ಧಪಡಿಸಿ ಇಡೀ ರಾತ್ರಿಯೆಲ್ಲ ನೆನೆಸಿದ ಮಡಿ ಬಟ್ಟೆಯನ್ನು ಆ ಕಡೆ ಈಕಡೆ ದಾರಕಟ್ಟಿ ಹಿಡಿದುನಿಂತವರು ಹಾಸಲು ಸಿದ್ಧರಾಗುತ್ತಾರೆ. ಪೂಜಾರಿಯು ದೇವಸ್ಥಾನದ ಎದುರು ನಿಂತು ಕ್ಷಣದಲ್ಲಿಯೇ ಓಡಿಹೋಗುತ್ತಾನೆ. "ಪೂಜಾರಿಯ ಕಣ್ಣಿಗೆ ದಿವ್ಯ ಜ್ಯೋತಿಯೊಂದು ಕೊಂಡದ ಎದುರು ಇರುವ ದೇವಸ್ಥಾನದಲ್ಲಿ ಪ್ರತ್ಯಕ್ಷವಾಗಿ ಬಾ ಎಂದು ಕರೆದಂತೆ ಬಾಸವಾಗಲು ಅವನು ಓಡಿಹೋಗುತ್ತಾನೆ"(ಅರ್ಚಕ ಶಿವರಾಮು) ಕೊಂಡ ಹಾಯುವವನು ಮೂರು ದಿನಗಳಿಂದ ಹಾಲು ಮತ್ತು ಬಾಳೆಹಣ್ಣುನ್ನು ಮಾತ್ರ ಸೇವಿಸಿರುತ್ತಾರೆ.

ಕೊಂಡ ಮೀಯುವುದು

ಇದು ಹೆಂಗಸರು ಮಾಡಿಕೊಂಡಿರುವ ಹರಕೆಯನ್ನು ತೀರಿಸುವುದಾಗಿದೆ. ಪೂಜಾರಿಯು ಕೊಂಡವನ್ನು ಹಾದು ಹೋದ ನಂತರ ಹರಕೆ ಹೊತ್ತ ಭಕ್ತರು ತಣ್ಣೀರು ಸ್ನಾನಮಾಡಿ ಒದ್ದೆ ಬಟ್ಟೆಯಲ್ಲಿಯೇ ಕೊಂಡದ ಬಳಿ ಬಂದು ದೇವರನ್ನು ಪ್ರಾರ್ಥಿಸಲು ಗಂಧದಕಡ್ಡಿ ಹಿಡಿದು ನಿಲ್ಲುವರು. ಆ ಸಮಯದಲ್ಲಿ ಒಂದು ಬಿಗಿಯಾದ ಚೌಕಾಕಾರದ ಒದ್ದೆ ಬಟ್ಟೆಯನ್ನು ಆಕಡೆ ಒಬ್ಬ ಈಕಡೆ ಒಬ್ಬ ಹಿಡಿದು ನಿಲ್ಲುತ್ತಾರೆ. ಹರಕೆ ಹೊತ್ತುಕೊಂಡವರು ಅಲ್ಲಿಗೆ ಬಂದು ಕೂರಲು ಒದ್ದೆ ಬಟ್ಟೆ ಹಿಡಿದಿರುವವರು ಅದಕ್ಕೆ ಬೇರೊಬ್ಬನಿಂದ ಕೊಂಡದ ಕೆಂಡವನ್ನು ಸನಿಕೆಯಿಂದ ಹಾಕಿಸಿಕೊಂಡು ಹರಕೆ ಹೊತ್ತವರ ಮೇಲೆ ಇಟ್ಟು ತೆಗೆಯುವುದು, ಕೆಂಡವನ್ನು ಕ್ಷಣಕ್ಷಣಕ್ಕೂ ಬಟ್ಟೆಯಿಂದ ಎಸೆಯುವುದನ್ನು ಮಾಡುತ್ತಾರೆ. ಇದೇ ರೀತಿ ಮೂರು ಸಾರಿ ಒದ್ದೆ ಬಟ್ಟೆಗೆ ಕೊಂಡದ ಕೆಂಡವನ್ನು ಹಾಕಿಸಿಕೊಂಡು ಹರಕೆ ಹೊತ್ತವರ ತಲೆಯ ಮೇಲೆ ಇಟ್ಟು ಎಸೆಯುತ್ತಾರೆ. ಇದನ್ನು ಕೊಂಡ ಮೀಯುವುದು ಎಂದು ಕರೆಯಲಾಗುತ್ತದೆ. ಇದು ಕೊಂಡದ ಸಮಯದಲ್ಲಿ ಮಾತ್ರ ತೀರಿಸುವ ಹರಕೆಯಾಗಿದೆ.

ಅರಳು-ಏಲಕ್ಕಿ ಹಾಕುವುದು

ಚಿಕ್ಕಮಕ್ಕಳಿಗೆ ಅಥವಾ ಹಿರಿಯರಿಗೆ ಆಗಲಿ ತಲೆಯಲ್ಲಿ, ಮುಖದಲ್ಲಿ ಏನಾದರು ಗಾಯ, ಮಚ್ಚೆಯೋ ಅಥವ ಗದ್ದಮಾರೆಯೋ ಆಗಿದ್ದು, ಅದು ಬೇಗ ಗುಣವಾಗದೆ ನರಳಿಸುವ ಕಾಯಿಲೆಯೇನಾದರೂ ಕಂಡುಬಂದಲ್ಲಿ ಕೊಂಡಕ್ಕೆ ಅರಳು(ಔಡಲ) ಮತ್ತು ಏಲಕ್ಕಿಕಾಯಿ ಹಾಕುತ್ತೇನೆ ಕಾಪಾಡು ಎಂದು ಹರಿಸಿಕೊಳ್ಳುವರು. ಅದರಂತೆ ಕೊಂಡಕ್ಕೆ ಈ ವಸ್ತುಗಳನ್ನು ಹಾಕುವರು. ಕೆಲವರು ತಾವು ಓದುವ ತರಗತಿಯಲ್ಲಿ ಪಾಸಾದರೂ ಈ ಹರಕೆಯನ್ನು ತೀರಿಸುತ್ತಾರೆ.

ಸೋಮವಾರ ತೇರು

ಸೋಮವಾರ ಮುಂಜಾನೆ ಕೊಂಡವಾದರೆ ಮಧ್ಯಾಹ್ನ ತೇರು ಎಳೆಯುತ್ತಾರೆ. ತೇರಿನಲ್ಲಿ ಕಬ್ಬಾಳಮ್ಮನ ವಿಗ್ರಹವನ್ನು ಇಟ್ಟು ಹೂವುಗಳಿಂದ ಅಲಂಕರಿಸಿದ ತೇರನ್ನು ಕಬ್ಬಾಳಿನ ಪ್ರಮುಖ ಬೀದಿ ಮತ್ತು ದೇವಸ್ಥಾನದ ಸುತ್ತ ಸುತ್ತಿಸುತ್ತಾರೆ. ತೇರು ಎಳೆಯುವಾಗ ಬಾಳೆಹಣ್ಣು ಮತ್ತು (ದವನ) ಜವನವನ್ನು ತೇರಿಗೆ ಎಸೆಯುತ್ತಾರೆ.

ಸಿಡಿಕಂಬ ನೆಡುವುದು

ಮಂಗಳವಾರ ಬೆಳಿಗ್ಗೆ ಸಿಡಿಕಂಬವನ್ನು ನೆಡುತ್ತಾರೆ. ದೇವಸ್ಥಾನದ ಪೂರ್ವದಿಕ್ಕಿಗೆ ಸಿಡಿಕಂಬ ನೆಡುತ್ತಾರೆ. ಹೊನ್ನೆಮರದಿಂದ ಮಾಡಿದ ಆ ಸಿಡಿಕಂಬವನ್ನು ಒಂದಾಳುದ್ದ ಗುಂಡಿತೋಡಿ ಪೂಜಿಸಿ ನೆಡುತ್ತಾರೆ. ಕಂಬವು ಸುಮಾರು ತಳದಲ್ಲಿ ಎರಡು ಅಡಿಗೂ ಹೆಚ್ಚು ಅಗಲ ಹೊಂದಿದ್ದು ಅಷ್ಟೇ ದಪ್ಪವನ್ನು ಹೊಂದಿದೆ. ಸುಮಾರು ಹದಿನೈದು ಅಡಿ ಉದ್ದವಿದ್ದು ಒಂದಾಳುದ್ದ ಗುಂಡಿತೋಡಿ ಪೂಜೆಮಾಡಿ ಜಾತ್ರೆಯ ಸಿಡಿ-ಮುಡಿ ಕಂಟ್ರಾಕ್ಟರ್ ತೆಗೆದುಕೊಂಡಿರುವ ವ್ಯಕ್ತಿಯೇ ನೆಡುತ್ತಾನೆ. ಈ ಕಂಬವು ಹೊನ್ನೆಮರದಿಂದ ಮಾಡಿದ ಕಂಬವಾಗಿದೆ. ಕಬ್ಬಾಳು ದುರ್ಗದ ನೆರಳು ಈ ಕಂಬದ ಮೇಲೆ ಬಿದ್ದರೆ ಸಿಡಿ ಆಡಲು ಶುರುಮಾಡುತ್ತಾರೆ.

ಸಿಡಿ-ಮುಡಿ

ಕಬ್ಬಾಳು ದುರ್ಗದ ನೆರಳು ಸಿಡಿಕಂಬದ ಮೇಲೆ ಬಿದ್ದನಂತರ ಸಿಡಿ ಆಡುವ ಆಚರಣೆ ಪ್ರಾರಂಭಿಸುತ್ತಾರೆ. ಸಿಡಿಕಂಬದ ತುದಿಯಲ್ಲಿ ಕಬ್ಬಾಳಮ್ಮನ ವಿಗ್ರಹ ಇಟ್ಟಿರುತ್ತಾರೆ. ಕಬ್ಬಾಳಮ್ಮ ದೇವಸ್ಥಾನ ಸರ್ಕಾರದ ಅಧೀನದಲ್ಲಿರುವುದರಿಂದ ಸಿಡಿ ಆಡಿಸುವುದಕ್ಕೆ ಹರಾಜು ಕರೆಯುತ್ತಾರೆ. ಹರಾಜು ಪಡೆದವನು ಒಬ್ಬರಿಗೆ ಇಂತಿಷ್ಟು ಹಣವನ್ನು ನಿಗದಿಪಡಿಸಿ ರಸೀದಿ ಹಾಕಿಸುತ್ತಾನೆ. ಆ ರಸೀದಿಯನ್ನು ಪಡೆದು ಸಿಡಿಯನ್ನು ಆಡಬೇಕು. ಸಿಡಿಯು ಸರಿಸುಮಾರು ಸಂಜೆ ಇಳಿಹೊತ್ತಿನಲ್ಲಿ ನಾಲ್ಕುಗಂಟೆಯ ನಂತರ ಪ್ರಾರಂಭವಾಗುತ್ತದೆ. ಇಂದು ಸರ್ಕಾರದಲ್ಲಿ ಹರಾಜಿನ ಮೂಲಕ ಸಿಡಿಯನ್ನು ವಹಿಸಿಕೊಳ್ಳುವ ವ್ಯಕ್ತಿಗಳು ಹಣದ ಆಮಿಷದಿಂದ ಸಂಪ್ರದಾಯವನ್ನು ಸಡಿಲಗೊಳಿಸುತ್ತಿದ್ದಾರೆ. ಮೊದಲಿಗೆ ಕಬ್ಬಾಳಮ್ಮನ ವಿಗ್ರಹವನ್ನು ಸಿಡಿಯಾಡಿಸುವರು. ನಂತರ ಸಾರುವವನು ಸಿಡಿಯಾಡುತ್ತಾನೆ. ಆ ಮೇಲೆ ಹರಕೆಹೊತ್ತ ಭಕ್ತರು ಸಿಡಿಯಾಡುತ್ತಾರೆ. ಇಲ್ಲಿ ತೊಟ್ಟಿಲು ಸಿಡಿ ಪ್ರಸಿದ್ಧಿಯಾಗಿದೆ. ಏಕೆಂದರೆ ಕಬ್ಬಾಳಮ್ಮ ಮಕ್ಕಳಿಲ್ಲದವರಿಗೆ ಮಕ್ಕಳನ್ನು ಕರುಣಿಸುತ್ತಾಳೆ. ಮಕ್ಕಳಿಲ್ಲದವರು ಮಕ್ಕಳಭಾಗ್ಯ ಬೇಡಿಕೊಂಡು ಮಕ್ಕಳಾದರೆ ನನ್ನ ಮಕ್ಕಳಿಗೆ ನಿನ್ನ ಸಿಡಿಯಾಡಿಸುತ್ತೇನೆ ಎಂದು ಹರಕೆಹೊತ್ತು ಹರಕೆ ತೀರಿಸುತ್ತಾರೆ. ಆ ಉದ್ದೇಶದಿಂದಲೇ ಸಿಡಿಗೆ ತೊಟ್ಟಿಲನ್ನು ಕಟ್ಟಿರುವುದು. ಮಕ್ಕಳಿಲ್ಲದವರು ಮಕ್ಕಳಾದ ಮೇಲೆ ಹರಕೆ ತೀರಿಸಲು ಎಳೆಯ ಮಕ್ಕಳನ್ನೇ ಸಿಡಿ ಆಡಲು ಕರೆತರುವುದು ಹೆಚ್ಚಾಗಿದೆ. ಇದು ಫಲವಂತಿಕೆಯ ಸಂಕೇತವಾಗಿದೆ.

ಇದರ ಹಿಂದೆ ಒಂದು ಕಥೆಯೇ ಇದೆ. ಕಬ್ಬಾಳಮ್ಮ ತನ್ನ ತಂಗಿಯಾದ ಬಿಸಿಲಮ್ಮನನ್ನು ನೋಡಿಕೊಂಡು ಬರಲು ಹುಣಸನಹಳ್ಳಿಯಲ್ಲಿರುವ ತನ್ನ ತಂಗಿ ಮನೆಗೆ ಹೋಗಿದ್ದಳು. ಕಬ್ಬಾಳಮ್ಮ ಮಕ್ಕಳಿಲ್ಲದ ಬಂಜೆ ಆಗಿದ್ದಳು. ಆಗ ತಂಗಿ ಬಿಸಿಲಮ್ಮ ಮಕ್ಕಳಿಲ್ಲದ ಬಂಜೆಯಾದ ನನ್ನ ಅಕ್ಕ ಕಿಡಿಗಣ್ಣೆ ಕಬ್ಬಾಳಿ ಬರುತ್ತಿದ್ದಾಳೆ, ನನ್ನ ಮಕ್ಕಳನ್ನು ನೋಡಿ ಕರುಬುತ್ತಾಳೆ ಎಂದು ತನ್ನ ಎಲ್ಲ ಮಕ್ಕಳನ್ನು ಪಂಜರದಲ್ಲಿ ಕವುಚಿ ಅಕ್ಕ ಕೇಳಿದಾಗ ಆಡಲು ಹೊರಗೆ ಹೋಗಿದ್ದಾರೆ ಎಂಬ ಸುಳ್ಳು ಹೇಳಿದಳು. ಕಬ್ಬಾಳಮ್ಮ ಮಾಯಕಾತಿ ಎಲ್ಲಾ ಅರಿವಾಗಿ ಪಂಜರದಲ್ಲಿದ್ದಂತ ಎಲ್ಲಮಕ್ಕಳು ಕಲ್ಲಾಗಲಿ, ಆಡೋಕೋಗಿದ್ದ ಮಗ ಸಿಡೀರಣ್ಣ ಬಂದು ನನ್ನ ಹಬ್ಬದಲ್ಲಿ ಸಿಡಿಯಾಡಲಿ ಎಂದು ಶಾಪಕೊಟ್ಟಳು. ಅಂದಿನಿಂದ ಸಿಡಿ ಆಚರಣೆ ಪ್ರತಿವರ್ಷ ನಡೆಯುತ್ತಾ ಬಂದಿದೆ. ಸಾರುವವನು ಸಿಡಿ ಆಡಿದ ನಂತರ ತಾನು ಸಾರುವದಿನ ಧರಿಸಿದ ಜನಿವಾರವನ್ನು ಸಿಡಿಕಂಬಕ್ಕೆ ಕಟ್ಟಿ ಬರುತ್ತಾನೆ.

ಮುಡಿಕೊಡುವುದು ಕೂಡ ಹರಕೆಯ ರೂಪವೇ ಆಗಿದೆ. ಸಾಮಾನ್ಯವಾಗಿ ಈ ಹಬ್ಬದಲ್ಲಿ ಸಿಡಿ ಮತ್ತು ಮುಡಿ ಜೊತೆಯಾಗಿ ಇರುತ್ತದೆ. ಮುಡಿಕೊಡುವವರೆಲ್ಲರು ಸಿಡಿ ಆಡುತ್ತಾರೆ. ಮೊದಲು ಮುಡಿಕೊಟ್ಟು ಅಂದರೆ ತಲೆಕೂದಲನ್ನು ತೆಗೆಸಿದ ನಂತರ ಕಬ್ಬಾಳಮ್ಮನ ಪೂಜೆಮಾಡಿ ತೀರ್ಥಹಾಕಿಸಿಕೊಂಡ ನಂತರ ಪೂಜಾರಿಯು ಮಕ್ಕಳ ಕತ್ತಿಗೆ ಹೂವನ್ನು ಕಟ್ಟುತ್ತಾರೆ. ನಂತರ ಸಿಡಿ ಆಡುತ್ತಾರೆ. ಮುಡಿ ಕೊಡುವುದು ಆ ದೇವತೆಯನ್ನು ಒಪ್ಪಿಕೊಳ್ಳುವ ಸಂಕೇತವೇ ಆಗಿದೆ. ಆಕೆಯ ತತ್ವ, ಸಿದ್ಧಾಂತ, ನೀತಿ ನಿಯಮಗಳನ್ನು ಒಪ್ಪಿ ಪಾಲಿಸುತ್ತೇನೆ, ಆ ಸಿದ್ಧಾಂತಗಳನ್ನು ಪ್ರಚಾರಮಾಡಲು ಮುಡುಪಾಗಿರುತ್ತೇನೆ ಎನ್ನುವುದನ್ನು ಸೂಚಿಸುತ್ತದೆ.

ಮತ್ತು ಆ ತಾಯಿಯ ಒಕ್ಕಲಿನವರು ತಮ್ಮ ಮನೆಗಳಲ್ಲಿ ಹುಟ್ಟುವ ಪ್ರತಿ ಮಕ್ಕಳ ತಲೆಗೂದಲನ್ನು ಕಬ್ಬಾಳಮ್ಮನಿಗೆ ಮುಡಿಕೊಡುವುದರ ಮೂಲಕ ಅವರನ್ನು ತಾಯಿಯ ಒಕ್ಕಲನ್ನಾಗಿಸುತ್ತಾ ಹೋಗುತ್ತಾರೆ. ಇದು ಮೊದಲು ಬಂದದ್ದು ಬೌದ್ಧ ಸಂಸ್ಕೃತಿಯಲ್ಲಿ. ಮನಸ್ಸು ಪೂರ್ಣವಾಗಿ ಒಪ್ಪಿ ಸಂತೋಷದಿಂದ ದೀಕ್ಷೆಪಡೆಯುವುದು ಇದರ ಉದ್ದೇಶವಾಗಿದೆ.

ಮರಿಸಿಡಿ

ಮಂಗಳವಾರ ಸಂಜೆ ಆರಂಭವಾಗುವ ಸಿಡಿಯು ಜನಸಂಖ್ಯೆ ಹೆಚ್ಚಾಗಿ ಎಲ್ಲಾ ಭಕ್ತಾದಿಗಳ ಹರಕೆ ಪೂರೈಸಲು ಸಾಧ್ಯವಾಗುವುದಿಲ್ಲ. ಮತ್ತು ಮಂಗಳವಾರ ಬಲಿಯ ಆಚರಣೆ ಮಾಡುವುದರಿಂದ ಪ್ರತಿ ಊರಿನಲ್ಲೂ ಜನರು ತಮ್ಮ ತಮ್ಮ ಊರುಗಳಲ್ಲಿ ಬಲಿಕೊಟ್ಟು ಕಬ್ಬಾಳಮ್ಮನನ್ನು ಸಂತೃಪ್ತಿಪಡಿಸುತ್ತಾರೆ. ಅವರೆಲ್ಲರು ಬುಧವಾರ ಜಾತ್ರೆಗೆ ಬರುತ್ತಾರೆ. ಆದ್ದರಿಂದ ಬುಧವಾರ ಮುಂಜಾನೆ ಆರು ಗಂಟೆಯಿಂದ ಸಂಜೆ ಆರು ಗಂಟೆಯ ತನಕ ಸಿಡಿ ಆಚರಣೆ ಸಾಗುತ್ತದೆ. ಇದನ್ನು ಮರಿಸಿಡಿ ಎನ್ನುತ್ತಾರೆ.

ತಂಬಿಟ್ಟಿನಾರತಿ

ಕಬ್ಬಾಳಮ್ಮನ ಹಬ್ಬದಲ್ಲಿ ತಂಬಿಟ್ಟಿನ ಆರತಿ ಬಹುಮುಖ್ಯವಾದ ಭಾಗವಾಗಿದೆ. ತಾಯಿಗೆ ತಂಪುಮಾಡುವುದೇ ಇದರ ಮುಖ್ಯ ಉದ್ದೇಶ. ಹಸಿಅಕ್ಕಿಯನ್ನು ನೆನೆಸಿ ನೆನೆದ ಅಕ್ಕಿಯನ್ನು ಒರಳಿಗೆ ಹಾಕಿ ಒನಕೆಯಿಂದ ಕುಟ್ಟಿ ಹಸಿ ಹಿಟ್ಟುಮಾಡಿ ಹದವಾಗಿ ಬೆಲ್ಲದ ಪಾಕ ತೆಗೆದು ಸರಿಯಾದ ಸಮಯಕ್ಕೆ ಅಕ್ಕಿ ಹಿಟ್ಟನ್ನು ಹಾಕಿ ಬೆರೆಸಿ ತಂಬಿಟ್ಟನ್ನು ಮಾಡುತ್ತಾರೆ. ತಂಬಿಟ್ಟು ಮಾಡಲು ಅನುಭವಬೇಕು ಎನ್ನುತ್ತಾರೆ ಗೌರಮ್ಮ. ತಂಬಿಟ್ಟಿಗೆ ಎಂದೇ ಕೆಲವರು ಒಂದು ಬಟ್ಟಲನ್ನು ಇಟ್ಟುಕೊಂಡಿರುತ್ತಾರೆ. ಅದರಲ್ಲಿ ತಂಬಿಟ್ಟು ಇಟ್ಟು ಅದಕ್ಕೂ ಅರಿಸಿಣ ಕುಂಕುಮವನ್ನು ಹಚ್ಚಿ ಕಣಗಿಲೆ ಹೂವುಗಳಿಂದ ಪೋಣಿಸಿರುವ ಹೂ ಗುಚ್ಚಗಳನ್ನು ಮುಡಿಸುತ್ತಾರೆ. ಮಧ್ಯದಲ್ಲಿ ಒಂದು ಸಣ್ಣದಾದ ದೀಪಹಚ್ಚಿಡುತ್ತಾರೆ. ಈ ತಂಬಿಟ್ಟಿನ ಆರತಿ ಹೊತ್ತುಕೊಂಡು ಸಾಲಾಗಿ ಹೊರಡುತ್ತಾರೆ. ಸಾಮಾನ್ಯವಾಗಿ ಈ ತಂಬಿಟ್ಟಿನ ಆರತಿ ನಡೆಯುವುದು ಮಧ್ಯರಾತ್ರಿ ಸಮಯದಲ್ಲಿ. ಆದ್ದರಿಂದ ರಾತ್ರಿಹೊತ್ತು ದೂರದಿಂದ ನೋಡಿದರೆ ನಕ್ಷತ್ರಗಳಂತೆ ಕಾಣುತ್ತದೆ. ಜೊತೆಗೆ ಒಂದು ಚೊಂಬಿನಲ್ಲಿ ಬೆಲ್ಲದ ಪಾನಕಮಾಡಿ ಅದರೊಳಗೆ ಮಾವಿನ ಎಲೆಗಳನ್ನು ಹಾಕಿಕೊಂಡು ಬಲಗೈಯಲ್ಲಿ ಬೇವಿನಸೊಪ್ಪನ್ನು ಹಿಡಿದುಕೊಳ್ಳುತ್ತಾರೆ. ತಮಟೆ ನಗಾರಿ ವಾದ್ಯಗಳೊಂದಿಗೆ ಊರೆಲ್ಲ ಮೆರವಣಿಗೆ ನಡೆಯುತ್ತದೆ.

ತಂಬಿಟ್ಟಿನ ಆರತಿಯು ಒಂದೊಂದು ಜಾತಿಯವರು ಒಂದೊಂದು ದಿನ ಮಾಡುತ್ತಾರೆ. ಒಕ್ಕಲಿಗರು ಭಾನುವಾರ ಮಧ್ಯರಾತ್ರಿ ಕೊಂಡದ ಸಮಯಕ್ಕೆ ಸರಿಯಾಗಿ ದೇವಸ್ಥಾನದ ಹತ್ತಿರ ಸೇರುತ್ತಾರೆ. ಸುತ್ತಮುತ್ತಲಿನ ಎಲ್ಲ ಊರಿನ ಒಕ್ಕಲಿಗರು ಭಾನುವಾರವೇ ತಂಬಿಟ್ಟಿನಾರತಿಯನ್ನು ಕಬ್ಬಾಳಿಗೆ ಹೊತ್ತು ತರುತ್ತಾರೆ.

ಆದರೆ ಹೊಲೆಯರೆಲ್ಲರು ಮಂಗಳವಾರ ಮುಂಜಾನೆ ಅಂದರೆ ಸೋಮವಾರ ಮಧ್ಯರಾತ್ರಿಯಿಂದಲೇ ಮೆರವಣಿಗೆ ಪ್ರಾರಂಭಿಸಿ ಸೂರ್ಯೋದಯವಾಗುವ ಹೊತ್ತಿಗೆ ಮೆರವಣಿಗೆ ಮುಗಿಸಿ ತಮ್ಮ ತಮ್ಮ ಊರುಗಳಲ್ಲೇ ಒಂದು ಹೊಲದಲ್ಲಿ ಎಲ್ಲಾ ತಂಬಿಟ್ಟು ಪುಟ್ಟಿಗಳನ್ನು ಇಟ್ಟು ಪೂಜಿಸುತ್ತಾರೆ. ಮತ್ತು ಜೊತೆಯಲ್ಲೇ ಹಿಡಿದುಕೊಂಡು ಬಂದಿದ್ದ ಕೋಳಿ, ಕೋಣ, ಕುರಿ, ಮರಿಗಳನ್ನು ತೀರ್ಥಹಾಕಿಸಿ ಮರಿಗಳನ್ನು ಕಡಿಯುತ್ತಾರೆ.

ಮರಿಗಳನ್ನು ಕಡಿಯುವ ಮೊದಲು ಅವಕ್ಕೆ ತೀರ್ಥ ಹಾಕಿ ಅವು ತಲೆ ಒದರಿದ ಮೇಲೆ ಅವುಗಳನ್ನು ಕಡಿಯುತ್ತಾರೆ. ತಲೆ ಒದರಿದರೆ ಒಪ್ಪಿದೆ ಎಂದು, ಒಂದು ವೇಳೆ ಮರಿಗಳು ತಲೆ ಒದರಲಿಲ್ಲ ಎಂದರೆ ಮತ್ತೆ ಅವುಗಳ ತಲೆಯಮೇಲೆ ತೀರ್ಥ ಬೇವಿನಸೊಪ್ಪು, ಕಣಗಿಲೆ ಹೂವನ್ನು ಹಾಕಿ 'ಒಪ್ಪಿಸಿಕೊಳ್ಳವ್ವ ತಾಯಿ' ಎಂದು ಹೇಳುತ್ತಾರೆ. ಒಪ್ಪಿಗೆ ಕೊಡುವವರೆಗೂ ಕಾಯುತ್ತಾರೆ. ಅದು ಒಪ್ಪಿ ತಲೆ ಒದರಿದ ಮೆಲೆಯೇ ಆ ಮರಿಯನ್ನು ಕಡಿಯುತ್ತಾರೆ.

ಹೊಸ ಕಬ್ಬಾಳಿನ ಹೊಲೆಯರು ಮಾತ್ರ ಕಬ್ಬಾಳು ದೇವಸ್ಥಾನಕ್ಕೆ ಆರತಿಗಳನ್ನು ಹೊತ್ತುಕೊಂಡು ಹೋಗಿ ಮಂಗಳವಾರ ಮಧ್ಯಾಹ್ನ ಪೂಜೆ ಮಾಡಿಸಿ ತೀರ್ಥ ಹಾಕಿಸಿಕೊಂಡುಬರುತ್ತಾರೆ. ಹೊಸಕಬ್ಬಾಳಿನ ಒಕ್ಕಲಿಗರು ಶುಕ್ರವಾರ ತಂಪು ಮಾಡುತ್ತಾರೆ. ಈ ಎಲ್ಲಾ ಆಚರಣೆಗಳಿಗೆ ತಮಟೆ ನಗಾರಿ ಶಬ್ದ ಮಾಡವೆ ಯಾವ ಪೂಜೆಗಳು ಜರುಗುವುದಿಲ್ಲ.

ಮಂಗಳವಾರ ಬಾಡಿಟ್ಟು

ಮಾಂಸದ ಊಟವನ್ನು ಇಲ್ಲಿ 'ಬಾಡಿಟ್ಟು' ಎಂದು ಕರೆಯುತ್ತಾರೆ. 'ಬಾಡು' ಅಂದರೆ ಮಾಂಸ, 'ಹಿಟ್ಟು' ಅಂದರೆ ರಾಗಿಮುದ್ದೆ. ಇವು ಈ ಪ್ರದೇಶದ ಪ್ರಮುಖವಾದ ಆಹಾರಗಳು. ಮಂಗಳವಾರ ತಂಬಿಟ್ಟಿನ ಆರತಿ ಮುಗಿದು ಬಲಿ ಹೊಡೆದು ಅಡುಗೆ ಮಾಡಿ ಬಂದಂತ ಎಲ್ಲ ನೆಂಟರಿಷ್ಟರಿಗೂ ಊಟವನ್ನು ಹಾಕುತ್ತಾರೆ.

ಓಲೆಬಂಡಿ

ಮಂಗಳವಾರ ಸಿಡಿಯ ದಿನ ಓಲೆಬಂಡಿ ಕಟ್ಟುತ್ತಾರೆ. ಎತ್ತಿನಗಾಡಿಯ ಮೇಲು ಭಾಗಕ್ಕೆ ಕಮಾನಿನಾಕರದಲ್ಲಿ ಬಿದಿರಿನ ದಬ್ಬೆಯನ್ನು ಬಗ್ಗಿಸಿಕಟ್ಟಿ ಅದರ ಮೇಲೆ ಒಂದು ಅಗಲವಾದ ಕಂಬಳಿಯನ್ನೋ, ರಗ್ಗನ್ನೋ ಮುಚ್ಚುತ್ತಾರೆ. ಅದರ ಸುತ್ತ ಬಾಳೆದಿಂಡುಗಳನ್ನು, ಕಬ್ಬಿನ ಬಿಲ್ಲೆಗಳನ್ನು ಕಟ್ಟಿ ಹೂಗಳಿಂದ ಅಲಂಕರಿಸುವ ಬಂಡಿಯನ್ನು ಓಲೆ ಬಂಡಿ ಎನ್ನುತ್ತಾರೆ. ಮತ್ತು ಎತ್ತುಗಳಿಗು ಬಣ್ಣಗಳಿಂದ ಅಲಂಕಾರ ಮಾಡಿರುತ್ತಾರೆ. ಕಬ್ಬಾಳು ಕುಳಿಗೆ ಒಳಪಟ್ಟಿರುವ ಎಲ್ಲ ಹಳ್ಳಿಗಳಿಂದಲೂ ಈ ಓಲೆಬಂಡಿಗಳನ್ನು ಕಟ್ಟುತ್ತಾರೆ. ಹರಕೆ ಹೊತ್ತ ಗ್ರಾಮಸ್ತರು ಓಲೆ ಬಂಡಿಗೆ ಬೆಲ್ಲ ಕೊಡುವ ಪದ್ಧತಿ ಇದೆ. ಹಬ್ಬದ ದಿನ ಮಂಗಳವಾರ ಹನ್ನೊಂದು ಗಂಟೆಗೆ ಓಲೆಬಂಡಿಯನ್ನು ಬೀದಿಗಳಲ್ಲಿ ಹೊಡೆದು ಬರುತ್ತಿರುವಾಗ ಪ್ರತಿ ಮನೆಯವರು ದೀಪಾರತಿಮಾಡಿ ಎತ್ತುಗಳ ಪಾದತೊಳೆದು ಅರಿಶಿಣ, ಕುಂಕುಮ ಹಚ್ಚಿ ಪೂಜಿಸುವ ಪದ್ಧತಿ ಇಂದಿಗೂ ಇದೆ. ಗಾಡಿಯಲ್ಲಿ ದಪ್ಪವಾದ ಎರಡು ನೀರಿನ ಹಂಡೆಗಳನ್ನು ಇಟ್ಟಿರುತ್ತಾರೆ. ಕೊಟ್ಟ ಬೆಲ್ಲದ ಅಚ್ಚುಗಳನ್ನು ಅದರೊಳಗೆ ಹಾಕುತ್ತಾರೆ. ಊರಿನಲ್ಲಿ ಓಲೆಬಂಡಿ ಆಚರಣೆ ಮುಗಿಸಿ ದೇವಸ್ಥಾನದ ಬಳಿ ಬಂಡಿ ಹೊಡೆದು ತರುವಷ್ಟರಲ್ಲಿ ಬೆಲ್ಲದ ಅಚ್ಚುಗಳೆಲ್ಲ ಕರಗಿರುತ್ತವೆ. ದೇವಸ್ಥಾನದ ಪೂಜಾರಿ ಪೂಜೆ ಸಲ್ಲಿಸಿದ ಮೇಲೆ ಜಾತ್ರೆಯಲ್ಲಿದ್ದ ಜನರಿಗೆಲ್ಲ ಬೆಲ್ಲದ ನೀರನ್ನು ಪಾನಕ ಎಂದು ಕುಡಿಯಲು ಕೊಡುತ್ತಾರೆ. ಇದನ್ನು 'ಪಾನಕದಗಾಡಿ' ಎಂದೂ ಸಹ ಕರೆಯುತ್ತಾರೆ. ಈ ಪಾನಕದಗಾಡಿಗಳನ್ನು ಮೇಲು ವರ್ಗದವರೇ ಕಟ್ಟುತ್ತಾರೆ. ಇದು ಜಾತ್ರೆಯ ಸಮಯದಲ್ಲಿ ಮಾತ್ರ ನಡೆಯುತ್ತದೆ.

ಪಲ್ಲಕ್ಕಿ ಉತ್ಸವ

ಎಲ್ಲಾ ದೇವತೆಗಳ ಹಬ್ಬದಲ್ಲಿ ಇರುವಂತೆ ಇಲ್ಲಿಯೂ ಪಲ್ಲಕ್ಕಿ ಉತ್ಸವವನ್ನು ಮಾಡುತ್ತಾರೆ. ಇದು ಜಾತ್ರೆಯ ಸಂದರ್ಭದಲ್ಲಿ ಮಾಡುವಂತ ಒಂದು ಆಚರಣೆಯಾಗಿದೆ. ಪಲ್ಲಕ್ಕಿ ಉತ್ಸವವನ್ನು ಒಂದು ವಾಹನ ಅಥವಾ ಬಂಡಿಯ ಮೇಲೆ ಮರದ ಪಲ್ಲಕ್ಕಿಯನ್ನು ಹೂವು ಮತ್ತು ಮುತ್ತುಗಳಿಂದ ಅಲಂಕರಿಸಿ ವಿದ್ಯುತ್ ದೀಪಗಳಿಂದ ಕಂಗೊಳಿಸುವಂತೆ ಮಾಡಿರುತ್ತಾರೆ. ಆ ಪಲ್ಲಕ್ಕಿಯಲ್ಲಿ ದೇವತೆಯನ್ನಿಟ್ಟು ಮೆರವಣಿಗೆ ಮಾಡಿ ದೇವತೆಯನ್ನು ಸಂತೋಷಪಡಿಸುತ್ತಾರೆ. ದೇವಸ್ಥಾನದ ಬೀದಿ ಮತ್ತು ಊರಿನ ಪ್ರಮುಖ ಬೀದಿಯಲ್ಲಿ ಮೆರೆಸುತ್ತಾರೆ. ಇದು ರಾತ್ರಿ ಸಂದರ್ಭದಲ್ಲಿ ಮಾಡುವ ಒಂದು ಆಚರಣೆ.

ಉರುಳು ಸೇವೆ

ದೇವತೆಗೆ ಹರಕೆ ಮಾಡಿಕೊಂಡಿರುವವರು ಹರಕೆ ತೀರಿಸಲು ತಣ್ಣೀರಿನಲ್ಲಿ ಸ್ನಾನಮಾಡಿ ಒದ್ದೆ ಬಟ್ಟೆಯಲ್ಲಿ ಬಂದು ದೇವಸ್ಥಾನದ ಸುತ್ತಲು ಕೈ ಮುಗಿಯುತ್ತಲೇ ಉರುಳುತ್ತಿರುತ್ತಾರೆ. ಇದನ್ನು ಉರುಳು ಸೇವೆ ಎನ್ನುವರು. ಕೊಂಡ ಹಾಯುವಾಗ ಹರಕೆಕಟ್ಟಿಕೊಂಡವರು ಉರುಳು ಸೇವೆ ಮಾಡುತ್ತಾರೆ. ದೇವರು ಬರುವಾಗ ಮಡಿಬಟ್ಟೆಯಲ್ಲೇ ದೇವರಿಗೆ ಅಡ್ಡಲಾಗಿ ಮಲಗುತ್ತಾರೆ. ಪೂಜಾರಿ ದೇವರುಗಳು ಅವರನ್ನು ದಾಟುತ್ತಾರೆ. ಆಗ ಹರಕೆ ತೀರುತ್ತದೆ.

ಬಾಯಿ ಬೀಗ

ಬಾಯಿಬೀಗ ಹಾಕುವುದು ಒಂದು ಹರಕೆಯಾಗಿದೆ. ಇದು ಹೆಂಗಸರು ಮಾತ್ರ ಹಾಕುವ ಒಂದು ಆಚರಣೆಯಾಗಿದೆ. ಕೆಲವು ಹೆಂಗಸರಿಗೆ ದೆವ್ವ ಪೀಡನೆಯೋ, ಬಂಜೆತನದ ಸಮಸ್ಯೆಯೋ ಅಥವಾ ಇನ್ನಾವುದೇ ಕಾರಣಗಳಿಗೆ ಒಳಗಾಗಿ ದೇವತೆಗಳ ಉತ್ಸವದಲ್ಲಿ ಬಾಯಿಬೀಗ ಹಾಕಿಕೊಳ್ಳುವೆನೆಂದು ಹರಿಸಿಕೊಳ್ಳುವುದು ಕಂಡುಬರುತ್ತದೆ. ಅಂತೆಯೇ ಹಬ್ಬದ ದಿನ ದೃಢ ಭಕ್ತಿಯಿಂದ ಬಾಯಿಬೀಗ ಹಾಕಿಸಿಕೊಂಡು ಮೌನವನ್ನು ಅನುಸರಿಸುತ್ತಾರೆ. ದೇವತೆ ತಮ್ಮನ್ನು ಕಾಪಾಡುತ್ತಾಳೆಂದು ನಂಬಿ ಜನರು ತಾವೇ ದೇವರ ಹೆಸರಿನಲ್ಲಿ ಅನುಭವಿಸುವ ಶಿಕ್ಷೆ ಇದಾಗಿದೆ. ಬಾಯಿ ಬೀಗವನ್ನು ತಮ್ಮ ಬಾಯಿಯಲ್ಲಿ ಮಾತನಾಡಲಿಕ್ಕೆ ಸಾಧ್ಯವಾಗದ ಹಾಗೆ ಎರಡು ಕೆನ್ನೆಗಳ ಮೇಲೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹಾದುಹೋಗುವ ಹಾಗೆ ಬೆಳ್ಳಿಯ ತಂತಿಗಳಿಂದ ಚುಚ್ಚಿಸಿಕೊಂಡು ಉತ್ಸವದಲ್ಲಿ ಪಾಲುಗೊಳ್ಳುವುದಾಗಿದೆ. ದೇವರ ಪೂಜೆ ಮುಗಿಯುವವರೆಗೆ ಮಾತಾಡದೆ ಹಾಗೆ ಮೌನವಾಗಿ ಇರಬೇಕು.

ತಡೆ ಹೊಡೆಯುವುದು

ಕಬ್ಬಾಳಮ್ಮ ಶಕ್ತಿದೇವತೆಯಾಗಿರುವುದರಿಂದ ತಮಗೆ ಜೀವನದಲ್ಲಿ ಎಂತಹ ತೊಂದರೆ ಇದ್ದರು ಕಬ್ಬಾಳಿಗೆ ಬಂದು ತಡೆಹೊಡೆಸಿದರೆ ಎಲ್ಲವು ಪರಿಹಾರವಾಗುತ್ತದೆ ಎಂಬ ನಂಬಿಕೆ ಜನರಲ್ಲಿದೆ. ಹೊಟ್ಟೆನೋವು, ಕೈಕಾಲುನಡುಗಲು, ಬೀತಿಸಂಖ್ಯೆ, ಬೇರೊಂದು ಹೆಣ್ಣು, ಗಂಡಿನ ಕಾಟ ಇದ್ದರೆ, ಭಯ ತುಂಬಿದ್ದರೆ ಅವೆಲ್ಲವನ್ನು ಪರಿಹರಿಸುತ್ತಾಳೆ ಎಂದು ನಂಬಿದ್ದಾರೆ. ತಡೆಹೊಡೆಸಲು ಸುತ್ತಮುತ್ತಲ ಜಿಲ್ಲೆಗಳಿಂದಲೂ ಬರುತ್ತಾರೆ. ಬೆಂಗಳೂರು, ಮೈಸೂರಿನಂತ ಜನರೇ ಹೆಚ್ಚಾಗಿ ಬರುತ್ತಾರೆ. ತಡೆ ಹೊಡೆಯಲು ರಶೀದಿ

ತೆಗೆದುಕೊಂಡು ನಂತರ ತಡೆ ಹೊಡೆಯುವ ವಸ್ತುಗಳನ್ನು ತೆಗೆದುಕೊಂಡು ತಡೆಹೊಡೆಯುವಲ್ಲಿಗೆ ಒಬ್ಬರೆ ಹೋಗಿ ಕೊಡಬೇಕು. ತಡೆ ಹೊಡೆಯುವುದನ್ನು ಯಾರೂ ನೋಡುವುದಿಲ್ಲ. ಅದು ಯಾರಿಗೂ ಕಾಣಿಸಿದ ಹಾಗೆ ತಡೆಮನೆಯಲ್ಲೇ ಹೊಡೆಯಲಾಗುತ್ತದೆ. ತಡೆ ಹೊಡೆಯಲು ಒಂದು ಸಣ್ಣ ಮಣ್ಣಿನ ಕುಡಿಕೆ, ಒಂದು ನಿಂಬೆಹಣ್ಣು, ಒಂದು ತೆಂಗಿನಕಾಯಿ, ಕರ್ಪೂರವನ್ನು ಬಳಸುತ್ತಾರೆ. ಈ ವಸ್ತುಗಳನ್ನು ಒಂದರ ಮೇಲೊಂದು ಇಟ್ಟು ತೊಂದರೆ ಇರುವ ಭಕ್ತರನ್ನು ಬಲಗಾಲ ಮುನ್ನವಾಗಿ ಮೂರುಸಾರಿ ದಾಟಿಸುತ್ತಾರೆ. ದಾಟಿದ ಮೇಲೆ ಮತ್ತೆ ಹಿಂದಿರುಗಿ ನೋಡಬಾರದು. ನಂತರ ಅದನ್ನು ತಡೆಹೊಡೆಯುವವನು ಒಡೆದು ಚೂರುಮಾಡುತ್ತಾನೆ. ವರ್ಷಪೂರ್ತಿ ಈ ಆಚರಣೆ ಮಂಗಳವಾರ, ಶುಕ್ರವಾರ ಮತ್ತು ಭಾನುವಾರ ನಡೆಯುತ್ತದೆ. ಅಮಾವಾಸ್ಯೆದಿನ ಇದು ಹೆಚ್ಚಾಗಿ ನಡೆಯುತ್ತದೆ.

ನಿಂಬೆಹಣ್ಣು ಮಂತ್ರಿಸುವುದು

ಈ ಆಚರಣೆ ರಕ್ಷಣೆಗಾಗಿ ರೂಢಿಸಿಕೊಂಡಿರುವಂತಾಗಿದೆ. ಕಬ್ಬಾಳು ದೇವಸ್ಥಾನದಲ್ಲಿ ಯಾವುದೇ ಪೂಜೆ ನಡೆದರು ಅಲ್ಲಿ ನಿಂಬೆಹಣ್ಣು ಇದ್ದೇ ಇರಬೇಕು. ನಿಂಬೆ ಹಣ್ಣನ್ನು ಕಬ್ಬಾಳಮ್ಮನ ಪಾದದ ಹತ್ತಿರ ಇಟ್ಟು ಮಂತ್ರಿಸಿ ಕೊಡುತ್ತಾರೆ. ಅವುಗಳನ್ನು ಮನೆಯಲ್ಲಿ ದೇವರ ಪೋಟೋ ಹತ್ತಿರ ಇಟ್ಟುಕೊಳ್ಳುತ್ತಾರೆ. ಯಾವುದೇ ಕಷ್ಟಗಳು ಬರುವುದಿಲ್ಲ ಎನ್ನುವುದು ಜನರ ನಂಬಿಕೆ. ಕಾರು, ಸ್ಕೂಟರ್‌ಗಳು, ಟ್ರ್ಯಾಕ್ಟರ್‌ಗಳು ಮುಂತಾದ ವಾಹನಗಳಿಗೆ ಅಮಾವಾಸ್ಯೆದಿನ ಪೂಜೆಮಾಡಿಸಿ ಅವುಗಳ ಚಕ್ರಗಳಿಗೆ ಮಂತ್ರಿಸಿದ ನಿಂಬೆಹಣ್ಣುಗಳನ್ನು ಇಟ್ಟು ನಜ್ಜಿಸುತ್ತಾರೆ. ಸ್ಕೂಟರ್ ಮತ್ತು ಟ್ರ್ಯಾಕ್ಟರ್‌ಗಳಿಗೆ ಕಾರುಗಳಿಗೆಲ್ಲ ನಿಂಬೆಹಣ್ಣನ್ನು ದಾರದಲ್ಲಿ ಪೋಣಿಸಿ ಕಟ್ಟುತ್ತಾರೆ. ಹೀಗೆ ಮಾಡಿದರೆ ಯಾವುದೇ ತೊಂದರೆಯಾಗುವುದಿಲ್ಲ. ಅಪಘಾತವಾಗುವುದಿಲ್ಲ ಎಂಬ ನಂಬಿಕೆ ಇದೆ. ಹಾಗಾಗಿ ದೇವಸ್ಥಾನಕ್ಕೆ ಹೋಗುವವರೆಲ್ಲ ನಿಂಬೆಹಣ್ಣನ್ನು ಮಂತ್ರಿಸಿಕೊಂಡು ಮನೆಗೆ ತರುತ್ತಾರೆ.

ಬೇಲದಕಾಯಿ ಹರಕೆ

ಕಬ್ಬಾಳಮ್ಮನಿಗೆ ಬೇಲದಕಾಯಿ ಹರಕೆ ಹೊರುವ ಆಚರಣೆಯು ಇದೆ. ಕಷ್ಟದಲ್ಲಿರುವಾಗ ಕಾಪಾಡುತ್ತಾಳೆ. ಪ್ರಾಣರಕ್ಷಣೆ ಮಾಡುತ್ತಾಳೆ ಎಂಬ ನಂಬಿಕೆ ಜನರಲ್ಲಿದೆ. ಒಂದು ದಿನ ಕಬ್ಬಾಳು ಬೆಟ್ಟದ ದಟ್ಟವಾದ ಕಾಡಿನಲ್ಲಿ ಸಾತನೂರಿನ ಹುಡುಗನೊಬ್ಬ ದನಮೇಯಿಸಲು ಹೋಗಿದ್ದನಂತೆ ಸಂಜೆಯಾಗುವ ಹೊತ್ತಿಗೆ ಕಬ್ಬಾಳು ಬೆಟ್ಟದ ತಪ್ಪಲಿಗೆ ಬಂದನಂತೆ ಆಗ ಹುಲಿಯೊಂದು ಅಟ್ಟಿಸಿಕೊಂಡು ಬಂತಂತೆ. ಆ ಹುಡುಗ ಭಯದಿಂದ ಎಲ್ಲೂ ದಾರಿಕಾಣದೇ ಹುಲಿಯಿಂದ ತಪ್ಪಿಸಿಕೊಳ್ಳಲು ಬೇಲದ ಮರವನ್ನು ಹತ್ತಿದನಂತೆ. ಹಸಿದ ಹುಲಿ ಬೇಟೆಗಾಗಿ ಮರದ ಕೆಳಗೆ ಕಾಯುತ್ತ ಕುಳಿತಿತ್ತಂತೆ. ಆಗ ಆ ಹುಡುಗನಿಗೆ ಕಬ್ಬಾಳಮ್ಮನ ದೇವಾಲಯವು ಕಾಣಿಸುತ್ತಿತ್ತಂತೆ. ದೇವಿಯನ್ನು ಪ್ರಾರ್ಥಿಸುತ್ತಾ ಇರುವಾಗ ಬೇಲದ ಕಾಯಿ ರೂಪದಲ್ಲಿ ದರ್ಶನ ನೀಡಿದಳಂತೆ. ಪಾರ್ವತಿ ಪರಮೇಶ್ವರರ ವರ ಪ್ರಸಾದವಾದ ಬೇಲದ ಫಲದಿಂದ ಜನ್ಮಪಡೆದ ಕಬ್ಬಾಳಮ್ಮನು ಬಾಲಕನಿಗೆ ನೀಡಿದ ದರ್ಶನದಿಂದ ಹುಡುಗನು ಒಂದು ಬೇಲದ ಕಾಯಿಯನ್ನು ಕಿತ್ತು ಹುಲಿಗೆ ಹೊಡೆದನಂತೆ. ಕೆಳಗೆ ಬಿದ್ದ ಕಾಯಿಯು ಜಿಂಕೆಯಾಗಿ ಮಾರ್ಪಟ್ಟಿತಂತೆ. ಹುಲಿಯು ಜಿಂಕೆಯನ್ನು

ಕಂಡು ಅದರ ಹಿಂದೆ ಹೋಯಿತಂತೆ. ನಂತರ ಹುಡುಗ ದೇವಿಯನ್ನು ಧ್ಯಾನಿಸಿ ಮರದಿಂದ ಇಳಿದನಂತೆ. ಇದರಿಂದ ಇಂದಿಗೂ ಕೂಡಾ ಭಕ್ತಾದಿಗಳು ಬೇಲದ ಕಾಯಿಯ ಹರಕೆಯನ್ನು ನೀಡುವ ಪ್ರತೀತಿ ಇದೆ.

ಕಬ್ಬಾಳಮ್ಮನನ್ನು ಕರೆಸುವುದು

ಭಕ್ತರ ಹಲವು ಹರಕೆಗಳಲ್ಲಿ ಇದೂ ಒಂದು. ಹರಕೆ ಹೊತ್ತ ಭಕ್ತರು ತಮ್ಮ ಕಷ್ಟಪರಿಹಾರವಾದ ಮೇಲೆ ಅಥವಾ ಪರಿಹಾರ ಆಗಲೆಂದೇ ಕಬ್ಬಾಳಮ್ಮನನ್ನು ತಮ್ಮ ಮನೆಗೆ ಕರೆಸುವುದರ ಜೊತೆಗೆ ಊರೆಲ್ಲಾ ಮೆರವಣಿಗೆ ಮಾಡುತ್ತಾರೆ. ಇದನ್ನು ಕಬ್ಬಾಳಪ್ಪನನ್ನು ಕರೆಸುವುದು ಎಂದು ಕರೆಯುವರು. ಕಬ್ಬಾಳಮ್ಮ ಮನೆಗೆ ಕಾಲಿಟ್ಟರೆ ಯಾವುದೇ ದುಷ್ಟಶಕ್ತಿ ಮನೆಗೆ ಬರುವುದಿಲ್ಲ. ಎಲ್ಲಾ ಕಷ್ಟಗಳು ಸಲೀಸಾಗಿ ಈಡೇರುತ್ತವೆ ಎಂಬ ನಂಬಿಕೆ ಇಲ್ಲಿನ ಜನರದ್ದು.

ಕಬ್ಬಾಳಮ್ಮನ ದೇವಸ್ಥಾನವು ಸರ್ಕಾರದ ಅಧೀನಕ್ಕೊಳಪಟ್ಟಿರುವುದರಿಂದ ಕಬ್ಬಾಳಮ್ಮನನ್ನು ಕರೆಸಲು ಮುಜರಾಯಿ ಇಲಾಖೆಯ ಅನುಮತಿ ಪಡೆಯಬೇಕು. ಕಬ್ಬಾಳಮ್ಮನಿಗೆ ಬೆಂಗಳೂರು, ಮೈಸೂರು, ಮಂಡ್ಯ, ತಮಿಳುನಾಡು ಜಿಲ್ಲೆಗಳು ಮುಂತಾದ ಕಡೆಯಲೆಲ್ಲಾ ಬಾರಿ ಬೇಡಿಕೆಯಿರುವುದರಿಂದ ಸುಮಾರು ಎರಡು ತಿಂಗಳ ಹಿಂದೆಯೇ ಕಾಯ್ದಿರುಸವ (ಬುಕ್‌ಮಾಡುವ) ಪದ್ದತಿ ಹೆಚ್ಚು. ಸರ್ಕಾರಕ್ಕೆ ಇಂತಿಷ್ಟು ಶುಲ್ಕವನ್ನು ಕಟ್ಟಿ ರಸೀದಿ ಪಡೆಯಬೇಕು. ತಾವು ಬುಕ್‌ಮಾಡಿದ ದಿನವೇ ಕಬ್ಬಾಳಮ್ಮನನ್ನು ಕರೆದುಕೊಂಡು ಹೋಗಿ ಮೆರೆಸುತ್ತಾರೆ. ಹೀಗೆ ಕರೆದುಕೊಂಡು ಹೋಗುವುದು, ಕಬ್ಬಾಳಮ್ಮ ಎಂದೇ ಕರೆಯುವ ಪೂಜೆಯನ್ನು ಪೂಜೆ ಎಂದರೆ ಕಬ್ಬಾಳಮ್ಮನ ಪ್ರತಿಮೆ ಇದನ್ನು ಬಿದಿರಿನ ಅಚ್ಚೆಗಳಿಂದ ಮಾಡಿದ್ದು ಅದಕ್ಕೆ ದೊಡ್ಡಂಚಿನ ಸೀರೆ ಉಡಿಸಿ ಗಿಂಡಿಮೇಲೆ ಕೂರಿಸಿ ಮೇಲೆ ಬೆಳ್ಳಿಯಿಂದ ಮಾಡಿದ ಕಳಸಗಳನ್ನು, ಡಾಬುಗಳನ್ನು, ಗೆಜ್ಜೆಗಳೆಲ್ಲವನ್ನು ಅಲಂಕರಿಸಿ ಹೂವುಗಳಿಂದ ಅಲಂಕಾರ ಮಾಡಿರುತ್ತಾರೆ. ಇದನ್ನು ಪೂಜೆ ಎಂದು ಕರೆಯುವರು. ಪೂಜೆಯನ್ನು ಕುಣಿಸುವುದು ಒಂದು ಕಲೆ. ಕುಣಿಸುವವರು ಅಮ್ಮನಿಗೆ ಭಯ, ಭಕ್ತಿ, ನಿಷ್ಠೆಯಿಂದ ಶುದ್ಧವಾಗಿರಬೇಕು. ಕಬ್ಬಾಳಮ್ಮನನ್ನು ಕುಣಿಸುವರೆಲ್ಲ ಮೇಲುವರ್ಗದವರೇ ಆಗಿದ್ದಾರೆ.

ಕಬ್ಬಾಳಮ್ಮ ಕುಣಿಯಬೇಕಾದರೆ ತಮಟೆ ನಗಾರಿ ಮುಖ್ಯವಾಗಿ ಬೇಕು. ತಮಟೆ ಇಲ್ಲದಿದ್ದರೆ ಒಂದೆಜ್ಜೆಯನ್ನು ಮುಂದಿಡುವುದಿಲ್ಲ. ತಮಟೆಯ ತಾಳಕ್ಕೆ ತಕ್ಕಂತೆ ಹೆಜ್ಜೆಹಾಕುತ್ತಾಳೆ. ಪೂಜೆಯು ತಲೆಮೇಲೆ ಹೊತ್ತರೆ ಕಬ್ಬಾಳಮ್ಮನೆ ಮೈಯನ್ನು ಆವರಿಸಿಕೊಂಡಂತೆ ಕುಣಿಯುತ್ತಾರೆ. ಅದನ್ನು ಕಬ್ಬಾಳಮ್ಮನೆ ಕುಣಿಯುತ್ತಿದ್ದಾಳೆ ಎಂದೇ ಹೇಳುತ್ತಾರೆ. ಅಷ್ಟು ಭಾವನಾತ್ಮಕ ಸಂಬಂಧ ಭಕ್ತಾದಿಗಳಲ್ಲಿದೆ. ಇದನ್ನು ಜಾನಪದದಲ್ಲಿ 'ಪೂಜಾಕುಣಿತ' ಎಂದೇ ಕರೆಯಲಾಗುತ್ತದೆ. ಕಬ್ಬಾಳಮ್ಮ ಮೂಲತಃ ದ್ರಾವಿಡ ದೇವತೆಯಾಗಿದ್ದು ದಲಿತರ ಕೇರಿಗಳಲ್ಲಿ ಅವಳನ್ನು ಕರೆಸಿ ಮೆರೆಸುವುದಿಲ್ಲ. ದಲಿತ ಕೇರಿಗಳಲ್ಲಿ ಮೆರೆಸಿದರೆ ಅವರಿಗೆ ದೋಷ ಹೊಡೆಯುತ್ತದೆ. ಕಷ್ಟ ನಷ್ಟಗಳು ಹೆಚ್ಚಾಗುತ್ತವೆ. ಸರಿಯಾಗಿ ಮಳೆಬೆಳೆಯಾಗುವುದಿಲ್ಲ ಎಂಬುದನ್ನು ನಂಬಿಸಿದ್ದಾರೆ ಹಾಗೂ ನಂಬಿದ್ದಾರೆ. ಇದು ಕಬ್ಬಾಳು ಕುಳಿಯಲ್ಲಿ ಇಂದಿಗೂ ಉಳಿದುಕೊಂಡು ಬಂದಿದೆ. ಆದರೆ ಬೆಂಗಳೂರು ಮೈಸೂರಿನಂತಹ ಮಹಾನಗರಗಳಲ್ಲಿ ಇದ್ಯಾವುದರ ಅಡೆತಡೆಗಳಿಲ್ಲ. ಎಲ್ಲಾ ಜಾತಿಯ ಜನರು ಕರೆಸುತ್ತಾರೆ, ಮೆರೆಸುತ್ತಾರೆ. ಯಾವ ತೊಂದರೆಯೂ ಆಗುವುದಿಲ್ಲ. ಒಂದುವೇಳೆ ಕಬ್ಬಾಳು ಕುಳಿಯಲ್ಲಿನ

ಊರುಗಳಲ್ಲಿ ದಲಿತರು ಕಬ್ಬಾಳಮ್ಮನನ್ನು ಕರೆಸಿದರು ಮೇಲುವರ್ಗದ ಬೀದಿಗಳಲ್ಲೇ ಇಡಬೇಕು. ಆ ಬೀದಿಗಳಲ್ಲೇ ಮೆರೆಸಬೇಕು. ಆ ಖರ್ಚು ವೆಚ್ಚವೆಲ್ಲ ಯಾರು ಕರೆಸುತ್ತಾರೊ ಅವರೇ ನೋಡಿಕೊಳ್ಳುತ್ತಾರೆ.

ಕಬ್ಬಾಳಮ್ಮನನ್ನು ಕರೆಸಿ ಮೆರೆಸುವಾಗ ಮುಂದೆ ಕಬ್ಬಾಳಮ್ಮ ಕುಣಿಯುತ್ತಿದ್ದರೆ ಹಿಂದೆ ಹುಲಿವಾಹನ ಇರುತ್ತದೆ. ಇದು ಕಬ್ಬಾಳಮ್ಮನ ವಾಹನ ಎಂದೇ ಹೇಳುತ್ತಾರೆ. ಹುಲಿ ವಾಹನವನ್ನು ಮರದಿಂದ ಮಾಡಿ ಅದಕ್ಕೆ ಹುಲಿಯ ಬಣ್ಣ ಬಳಿದು ಹುಲಿಯ ಆಕಾರ ರೂಪ ನೀಡಿರುತ್ತಾರೆ. ಹುಲಿಯ ಬಾಯಿಗೆ ಒಂದು ಚಿಪ್ಪು ಬಾಳೆಹಣ್ಣನ್ನು ಇಟ್ಟಿರುತ್ತಾರೆ. ಹುಲಿಯನ್ನು ಮಾಂಸಾಹಾರದಿಂದ ಸಸ್ಯಹಾರಿಯನ್ನಾಗಿ ಮಾಡಿದ್ದಾರೆ. ಪೂಜೆ ಮೆರೆಸುವಾಗ ಪ್ರತಿಮನೆಯವರು ಆರತಿ ನೀಡುತ್ತಾರೆ. ಆ ಆರತಿ ಹುಲಿವಾಹನಕ್ಕೆ ನೀಡಲಾಗುತ್ತದೆ.

ಪೂಜೆ ಮೆರೆಸುವವರು ಕೂಡ ದಲಿತ ಕೇರಿಗಳಲ್ಲಿ ಮೆರೆಸಲು ಒಪ್ಪುವುದಿಲ್ಲ. ಹಾಗೇನಾದರೂ ಮೆರೆಸಿದ ಮೆರೆಸುವವರಿಗೂ ದೋಷ ಹೊಡೆಯುತ್ತದೆ ಎಂಬ ನಂಬಿಕೆ, ಭಯ ಆವರಿಸಿದೆ. ಆದರೆ ನಗರಪ್ರದೇಶಗಳಲ್ಲಿ ಎಲ್ಲಾ ಜಾತಿಯ ಜನರ ಮನೆಗಳಲ್ಲಿ ಬೀದಿಗಳಲ್ಲಿ ಹೋಗಿ ಮೆರೆದು ಬರುವಾಗ ಯಾವ ತೊಂದರೆಯೂ ಆಗದಿರುವುದನ್ನು ಕಾಣುತ್ತೇವೆ. ಅಂದರೆ ಕಬ್ಬಾಳಮ್ಮನಿಗೆ ಯಾವುದೇ ಜಾತಿಗಳ ಬೇಧವಿಲ್ಲ. ಅದಿರುವುದು ಅಲ್ಲಿನ ಜನರ ಮನಸ್ಸಿನಲ್ಲಿ ಕಬ್ಬಾಳಮ್ಮನಿಗೆ ಬೇಡವಾದ ಜಾತಿ ಜನರಿಗೇಕೆ? ಎಂಬುದು ಚಿಂತಿಸಲೇಬೇಕು. ಆರ್ಥಿಕ ಮೌಲ್ಯಗಳು ಜಾತಿಯ ಅಂತರವನ್ನು ಕಡಿಮೆ ಮಾಡಬಲ್ಲವು. ಒಟ್ಟಿನಲ್ಲಿ ಪೂಜಾಕುಣಿತ ತಮಟೆಯ ಸದ್ದು ಎಲ್ಲ ಜನರ ಮೈ ನವಿರೇಳಿಸುವುದು ಸತ್ಯ.

ಹೆಡಗೆ ತರುವುದು

ದೂರ ದೂರಿನಲ್ಲಿರುವ ಕಬ್ಬಾಳಮ್ಮನ ಒಕ್ಕಲಿನವರು ಕಬ್ಬಾಳು ಜಾತ್ರೆಯಲ್ಲಿ ಎಡಗೊಂಡ ಚಿಕ್ಕಕೊಂಡ ಮತ್ತು ದೊಡ್ಡಕೊಂಡದಲ್ಲಿ ಹೆಡಗೆ ಹೊತ್ತುತಂದು ಪೂಜೆ ಮಾಡಿಹೋಗುತ್ತಾರೆ. ತುಂಗಣಿ, ತೇರುಬೀದಿ, ತಮಿಳುನಾಡು ಮುಂತಾದ ಊರುಗಳಿಂದ ಹೆಡಗೆ ಹೊತ್ತು ತರುವ ಆಚರಣೆಗಳಿವೆ. ಬಿದಿರಿನ ಹೆಡಗೆಗೆ ಹಸುವಿನ ತೊಪ್ಪೆ, ಗಂಜಲದಿಂದ ಸಾರಿಸಿ ಅದಕ್ಕೆ ಅರಿಸಿನ ಕುಂಕುಮ ಹಚ್ಚಿ, ಹೆಡಗೆಯೊಳಗೆ ತೆಂಗಿನಕಾಯಿ, ಅಕ್ಕಿ, ಬೆಲ್ಲ, ಕರ್ಪೂರ, ಗಂಧದಕಡ್ಡಿ, ಹೊಡೆದ ಹೊಂಬಾಳೆ ಮುಂತಾದ ಪೂಜಾಸಾಮಾಗ್ರಿಗಳನ್ನು ಹೆಡಗೆಯೊಳಗೆ ಹಾಕಿ ಒಂದು ಬಿಳಿಯ ಪಂಚೆಯನ್ನು ಕಟ್ಟಿ ಕಬ್ಬಾಳಿಗೆ ಹೊತ್ತು ತರುತ್ತಾರೆ. ಕರಗದ ಮನೆಯ ಪಡಸಾಲೆಯಲ್ಲಿ ಅವನ್ನಿಟ್ಟು ಒಲೆಒಡ್ಡಿ ಅಕ್ಕಿ ಬೆಲ್ಲ ಹಾಕಿ ಅಡುಗೆ ಮಾಡಿ ದೇವತೆಗೆ ಎಡೆ ಇಟ್ಟು ಪೂಜೆಮಾಡುತ್ತಾರೆ. ನಂತರ ಪೂಜೆಯನ್ನು ಮಾಡಿ ಕೊಂಡಹಾಯುವುದನ್ನು ಮುಗಿಸಿಕೊಂಡು ತಮ್ಮ ತಮ್ಮ ಊರುಗಳಿಗೆ ಹಿಂತಿರುಗುತ್ತಾರೆ.

ದನಗಳ ಜಾತ್ರೆ

ಜನಗಳ ಜಾತ್ರೆಗಳಂತೆ ದನಗಳ ಜಾತ್ರೆಗಳು ನಡೆಯುವುದು ಸಾಮಾನ್ಯವಾಗಿದೆ. ಹಾಗೆಯೇ ಕಬ್ಬಾಳಿನಲ್ಲೂ ದನಗಳಜಾತ್ರೆ ದೊಡ್ಡ ಪ್ರಮಾಣದಲ್ಲೇ ನಡೆಯುತ್ತದೆ. ಕಬ್ಬಾಳಿನ ಸುತ್ತಮುತ್ತಲ ಪ್ರದೇಶಗಳಲ್ಲೂ ದನಗಳಜಾತ್ರೆ ನಡೆಯುತ್ತದೆ. ಕನಕಪುರದ ಹೊಳೆಪರಿಷೆ, ಶಿವನಹಳ್ಳಿಜಾತ್ರೆ, ಕಲ್ಲಹಳ್ಳಿ ಜಾತ್ರೆಗಳಲ್ಲೂ ದನಗಳಜಾತ್ರೆ ನಡೆಯುತ್ತದೆ. ಇವೆಲ್ಲ ಪುರುಷ ಪ್ರಧಾನ ದೇವತೆಗಳ ಜಾತ್ರೆಗಳಾಗಿವೆ. ಹಾಗಾಗಿ ದನಗಳ

ಜಾತ್ರೆ ಪಿತೃಪ್ರಧಾನ ವ್ಯವಸ್ಥೆಯ ಪ್ರತೀಕಗಳೇ ಆಗಿವೆ. ಮಾಗಡಿಯ ರಂಗನಾಥಸ್ವಾಮಿ ಜಾತ್ರೆ, ಆದಿ ಚುಂಚನಗಿರಿಯ ಕಾಲಭೈರವೇಶ್ವರ ಜಾತ್ರೆ ಚನ್ನಪಟ್ಟಣದ ಅಯ್ಯನಗುಡಿ ಜಾತ್ರೆಗಲಲ್ಲೂ ದನಗಳ ಜಾತ್ರೆಗಳು ನಡೆಯುತ್ತವೆ. ಇವೆಲ್ಲ ಪಿತೃಪ್ರಧಾನ ಸಂಸ್ಕೃತಿಯ ಪ್ರಭಾವ ಮತ್ತು ಪ್ರತಿಬಿಂಬಗಳಾಗಿವೆ. ಆದರೆ ಕಬ್ಬಾಳಮ್ಮ ಮಾತೃಪ್ರಧಾನ ಸಂಸ್ಕೃತಿಯ ದೇವತೆಯಾಗಿದ್ದು, ಇಲ್ಲಿಯೂ ಕೂಡ ದನಗಳ ಜಾತ್ರೆಯ ನಡೆಯುತ್ತದೆ. ಇದು ಮೂಲ ಕೃಷಿಕರ ಕೃಷಿಮಾಡುವ ಸಂಸ್ಕೃತಿಯನ್ನು ವಲಸೆಗಾರ ಪಶುಪಾಲಕರು ಒಪ್ಪಿಕೊಂಡು ತಾವು ಅಲೆಮಾರಿ ಪಶುಪಾಲನೆಯನ್ನು ಬಿಟ್ಟು ಒಂದು ಕಡೆ ನೆಲೆನಿಂತು ಕೃಷಿಕರಾಗಿರುವುದನ್ನು ಸೂಚಿಸುತ್ತದೆ.

"ಜಾತ್ರೆ ವಲಸೆಗಾರ ದ್ರಾವಿಡರಿಗೆ ಅನ್ವಯಿಸುತ್ತದೆ"(ಜಾತ್ರೆಗಳು, ಎಸ್.ಎಸ್.ಹಿರೇಮಠ, ಪುಟ.೬೯). ಇದು ಗ್ರಾಮದೇವತೆಯ ಹಬ್ಬಗಳು ವಲಸೆಗಾರ ಪಶುಪಾಲಕ ದ್ರಾವಿಡರಿಂದ ಜಾತ್ರೆಗಳಾಗಿ ಮಾರ್ಪಟ್ಟಿರುವುದನ್ನು ಸ್ಪಷ್ಟಪಡಿಸುತ್ತದೆ. ಗ್ರಾಮದೇವತೆ ಹೆಸರಿನಲ್ಲಿ ನಡೆಯುವ ಜಾತ್ರೆ ಸಂದರ್ಭಗಳಲ್ಲಿ ಇತರೆ ವಸ್ತುಗಳು ಜೊತೆಯಲ್ಲಿ ದನಗಳೂ ಸೇರಿ ವ್ಯಾಪಾರವಾಗುವುದು ನಡೆಯುತ್ತಿತ್ತು. ಕಾಲಾನಂತರ ದನಗಳ ವ್ಯಾಪಾರ ಹೆಚ್ಚಾಗಿರುವುದರಿಂದ ದನಗಳಿಗೆಂದೇ ಜಾತ್ರೆಯನ್ನು ಆರಂಬಿಸಿರಬೇಕು. ಕಬ್ಬಾಳಮ್ಮನ ಜಾತ್ರೆಯಲ್ಲಿ ಜನಗಳ ಜಾತ್ರೆಗಿಂತಲೂ ದನಗಳ ಜಾತ್ರೆಗೇ ಹೆಚ್ಚು ಮಹತ್ವ ಇರುವುದು ಇದಕ್ಕೆ ಕಾರಣವಾಗಿರಬಹುದು. ಆದ್ದರಿಂದ ದನಗಳ ಜಾತ್ರೆ ಮೊದಲು ನಡೆಸಿ ಆ ಮೇಲೆ ಜನಗಳ ಜಾತ್ರೆ ಸುರುವಾಗುತ್ತದೆ. ಇಲ್ಲಿಯೂ ಕೂಡ ಮಾತೃಸಂಸ್ಕೃತಿ ಮತ್ತು ಪಿತೃಸಂಸ್ಕೃತಿಯ ಸಂಘರ್ಷವನ್ನು ಕಾಣಬಹುದು. ಮೂಲ ಕೃಷಿಕರ ಎಮ್ಮೆ, ಕೋಣಗಳು ಎಲ್ಲೂ ಕಾಣುವುದಿಲ್ಲ. ಬದಲಾಗಿ ದನ, ಎತ್ತು, ಹೋರಿಗಳೇ ಜಾತ್ರೆಗಳಲ್ಲಿ ಕಾಣುತ್ತೇವೆ. ಆದರೂ ಕಬ್ಬಾಳಿನಲ್ಲಿ ಎಮ್ಮೆ ಕೋಣಗಳಿಗೆ ಬರವಿಲ್ಲ. ಇಂದಿಗೂ ಅವುಗಳ ಸಂಖ್ಯೆ ಕಡಿಮೆಯಾಗಿಲ್ಲ.

ಜಾತ್ರೆಗಳು ಧಾರ್ಮಿಕ ಆಚರಣೆಯ ಕಾರಣವಾಗಿ ಸೇರಿದರೂ ಜನಸ್ತೋಮ ನೆರೆದಿರುವ ಕಡೆ ಗ್ರಾಮೀಣ ಭಾಗದಲ್ಲಿ ಅವರ ಬೇಕು ಬೇಡಗಳನ್ನು ಪೂರೈಸುವುದಕ್ಕೆ ವ್ಯಾಪಾರ ವಹಿವಾಟು ಪ್ರವೇಶ ಪಡೆದವು. ಕೃಷಿಗೆ ಸಂಬಂಧಿಸಿದಂತೆ. ದನ, ಕರ, ಎತ್ತುಗಳು ಪ್ರವೇಶ ಪಡೆದವು. ರೈತನಿಗೆ ವ್ಯವಸಾಯದ ಅಗತ್ಯಕ್ಕೆ ಬಹಳ ಮುಖ್ಯವಾಗಿ ಬೇಕಾದ ದನ ಕರುಗಳನ್ನು ಊರಿಂದೂರಿಗೆ ಹುಡುಕಿಕೊಂಡು ಹೋಗಿ ವ್ಯಾಪಾರ ಮಾಡುವುದು ಮತ್ತು ಮಾರಾಟಮಾಡುವವನಿಗೂ ಒಂದು ಸಮರ್ಥವಾದ ವೇದಿಕೆಯಿಲ್ಲದಿರುವುದನ್ನು ಮನಗಂಡು, ಜಾತ್ರೆಯ ಸಂದರ್ಭದಲ್ಲಿ ಈ ಕೊರತೆಯನ್ನು ನೀಗಿಕೊಳ್ಳುವ ಉಪಾಯವಾಗಿ ದನಗಳ ಜಾತ್ರೆಗಳು ರೂಪಗೊಂಡಿರಬೇಕು. ಎಲ್ಲಾ ಜಾತ್ರೆಗಳಲ್ಲು ದನಗಳ ಜಾತ್ರೆ ಸೇರುವುದಿಲ್ಲ. ಜಾತ್ರೆ ನಡೆಯುವ ಸ್ಥಳದಲ್ಲಿ ದನಗಳು ತಂಗುವುದಕ್ಕೆ ಬೇಕಾದ ವಿಸಾಲವಾದ ಭೂಮಿ, ನೀರಿನ ವ್ಯವಸ್ಥೆ ಮತ್ತು ಜಾತ್ರೆ ಸೇರುವ ವಿರಾಮ ಕಾಲ ಮುಖ್ಯವಾಗುತ್ತದೆ.

ಜಾತ್ರೆಗಳಲ್ಲಿ ಬೇರೆ, ಬೇರೆ ಪ್ರದೇಶಗಳ ರೈತರು ವ್ಯಾಪಾರಸ್ಥರು ಎತ್ತು, ಹೋರಿ, ಹಸುಗಳನ್ನು ಸೇರಿಸುವುದರಿಂದ ಜಾತ್ರೆಯ ಜನರಿಂದ ಪ್ರಸಂಶೆಯನ್ನು ಪಡೆಯುವ ಕಾರಣವಾಗಿಯೋ, ಉತ್ತಮವಾದ ಹೋರಿಗಳು ಮತ್ತು ಎತ್ತುಗಳನ್ನು ಸಾಕಿ ಅವುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಪ್ರತಿಷ್ಠೆಗಳನ್ನು ಹೆಚ್ಚಿಸಿಕೊಳ್ಳುವ ರೈತರೂ ಉಂಟು. ಹೀಗಾಗಿ ಇಲ್ಲಿನ ಗ್ರಾಮೀಣ ಪರಿಸರದಲ್ಲಿ ಉತ್ತಮವಾದ ಹೋರಿಗಳು, ಎತ್ತುಗಳು ಸಾಕುವುದು ಒಂದು ಹವ್ಯಾಸವಾಗಿದೆ.

ದನಗಳ ಜಾತ್ರೆ ಕಬ್ಬಾಳಮ್ಮನ ಹಬ್ಬ ಒಂದುವಾರ ಅಥವಾ ಹದಿನೈದು ದಿನಗಳು ಬಾಕಿ ಇರುವಾಗ ನಡೆಯುತ್ತದೆ. ಈ ಅವಧಿಯಲ್ಲಿ ರೈತರಿಗೆ ಕೆಲಸ ಕಾರ್ಯ ಕಡಿಮೆ ಇದ್ದು, ಎತ್ತುಗಳ ಕೆಲಸವು ಇಲ್ಲದಿರುವುದರಿಂದ ಕೊಳ್ಳುವುದಕ್ಕೆ ಮತ್ತು ಮಾರಾಟಮಾಡುವುದಕ್ಕೆ ಸೂಕ್ತ ಕಾಲವಾಗಿರುತ್ತದೆ. ನೆರೆಯ ತಮಿಳುನಾಡು, ಆಂಧ್ರಪ್ರದೇಶ, ಮೈಸೂರು, ಚಾಮರಾಜನಗರದಿಂದಲೂ ದನಕರುಗಳನ್ನು ಕೊಳ್ಳಲು ಈ ಜಾತ್ರೆಗೆ ಬರುತ್ತಾರೆ. ಮಾರಾಟಕ್ಕಾಗಿ ಸುತ್ತಲ ಪ್ರದೇಸಗಳಾದ ಕನಕಪುರ, ರಾಮನಗರ, ಮಾಗಡಿ, ಚನ್ನಪಟ್ಟಣ, ಮಳವಳ್ಳಿ, ಆನೇಕಲ್ ತಾಲೂಕುಗಳಿಂದ ದನ, ಕರ, ಎತ್ತುಗಳನ್ನು ಹೊಡೆದುತರುತ್ತಾರೆ. ದನಗಳ ಜಾತ್ರೆ ಕನಿಷ್ಠ ಒಂದು ವಾರದವರೆಗೆ ನಡೆಯುತ್ತದೆ.

ಜಾತ್ರೆಗಳನ್ನು ಪ್ರಾರಂಭಿಸುವುದಕ್ಕೆ ಮೊದಲು ಸರ್ಕಾರದ ವತಿಯಿಂದ ನಿರ್ದಿಷ್ಟ ದಿನಗಳನ್ನು ನಿಗಧಿಪಡಿಸಿ, ಜಾತ್ರೆಯಲ್ಲಿ ಸುಂಕ ವಸೂಲಿ ಮತ್ತು ಗೊಬ್ಬರವನ್ನು ಸಂಗ್ರಹಿಸುವುದಕ್ಕೆ ಹರಾಜು ಪ್ರಕಟಣೆ ಮಾಡಿ ಒಪ್ಪಂದದಂತೆ ಗುತ್ತಿಗೆ ನೀಡುತ್ತಾರೆ. ಹರಾಜಿನ ಹಣ ಸರ್ಕಾರಕ್ಕೆ ಹೋಗುತ್ತದೆ.

ರಾಸುಗಳನ್ನು ಕೊಳ್ಳುವುದಕ್ಕೆ ಮತ್ತು ಮಾರುವುದಕ್ಕೆ ರೈತನಿಂದ ಸಾಧ್ಯವಾಗದೇ ಹೋದರೆ, ಅನುಭವಸ್ತ ದಲ್ಲಾಳಿಗಳ ಮೊರೆ ಹೋಗುತ್ತಾರೆ. ಹಸುಗಳನ್ನು 'ರಾಸು' ಎಂದು ಕರೆಯುತ್ತಾರೆ. ಈ ರಾಸುಗಳ ಶುಭ, ಅಶುಭಗಳನ್ನು ಅವುಗಳ ಲಕ್ಷಣಗಳನ್ನು ತಮ್ಮದೇ ಆದ ಮಾನದಂಡಗಳಿಂದ ಅಳೆಯುತ್ತಾರೆ. ರಾಸುಗಳ ವಯಸ್ಸು ಅಳೆಯುವುದಕ್ಕೆ ರಾಸುಗಳ ಹಲ್ಲುಗಳನ್ನು ಎಣಿಸುತ್ತಾರೆ. ಎರಡು ಹಲ್ಲಾಗಿದ್ದರೆ ರಾಸುಗಳ ವಯಸ್ಸು ಚಿಕ್ಕದು, ನಾಲ್ಕು ಐದು ಹಲ್ಲಾಗಿದ್ದರೆ ವಯಸ್ಸಾಗಿದೆ ಎಂದರ್ಥ. ಹಸುಗಳು ಕುರುಗಳನ್ನು ಹಾಕುವುದನ್ನು 'ಸೂಲು' ಎಂದು ಕರೆಯುವರು. ಒಂದು ಕರು ಹಾಕಿದರೆ ಒಂದು ಸೂಲಿ, ಎರಡು ಕರುಹಾಕಿದರೆ ಎರಡುಸೂಲು ಹೀಗೆ ಲೆಕ್ಕಹಾಕಿ, ಕೊಂಡುಕೊಳ್ಳುವಾಗ 'ಎಷ್ಟು ಸೂಲಾಗಿದ್ದದು' ಎಂದು ಕೇಳಿ, ಹಲ್ಲಿಡಿದು ನೋಡಿಕೊಂಡು ಕೊಳ್ಳುತ್ತಾರೆ. ಹಸುವಿನ ಕರುಗಳಿಗೆ ಕರ, ಪಡ್ಡೆ ಎಂದೂ ಹೆಣ್ಣು ಮತ್ತು ಗಂಡು ಕರಗಳಿಗೆ 'ಹೆಂಗರ' ಮತ್ತು 'ಹೋರ್ಕರ' ಎಂದೂ ಕರೆಯುತ್ತಾರೆ. ಹೆಂಗರ ದೊಡ್ಡದಾದರೆ ಕಡಸು ಎಂದೂ, ಇನ್ನು 'ಒಂದು ಸೂಲು' ಹಾಕಿರದಿದ್ದರೆ 'ಕನ್ನಗಡಸು' ಎಂದೂ ಕರೆಯುತ್ತಾರೆ. 'ಹೋರ್ಕ'ರ ದೊಡ್ಡದಾದರೆ 'ಗಿಡ್ಡ', 'ಹೋರಿ' ಎಂದು ಬಿತ್ತನೆ ತಳಿಗಳಿಗಾಗಿ ಬೆಳೆಸುವುದನ್ನು 'ಬಿತ್ತನೆ ಹೋರಿ' ಎಂದೂ ಕರೆಯುತ್ತಾರೆ.

ಶುಭ-ಅಶುಭಗಳನ್ನು ಹೇಳುವುದಕ್ಕೆ ಸುಳಿ ನೋಡಿ ಹೇಳುತ್ತಾರೆ. ರಾಸುಗಳ ಬೆಲೆ ಅವುಗಳ ವಯೋಮಾನ ಮತ್ತು ಸುಳಿಗಳಿಂದ ನಿರ್ಧಾರವಾಗುತ್ತದೆ. ಎರಡು ಕೊಂಬಿನ ಮದ್ಯದಲ್ಲಿ ಮತ್ತು ಬೆನ್ನಿನ ಮೇಲೆ ಮಧ್ಯಭಾಗದಲ್ಲಿ ಮಾತ್ರ ಸುಳಿ ಇದ್ದರೆ ಯಾವುದೇ ತೊಡಕಿಲ್ಲದೆ ಅವುಗಳಿಗೆ ಹೆಚ್ಚಿನ ಬೆಲೆ ಸಿಗುತ್ತದೆ. ಉಳಿದಂತೆ ಸುಳಿಗಳು ಬೇರೆ ಬೇರೆ ಕಡೆ ಇದ್ದು ರಾಸುಗಳ ಇರುಳು (ಗೋಪುರ) ಭುಜದ ಮೇಲೆ ಬಾಲ, ಬೆನ್ನಿನ ಮೇಲೆ ಇದ್ದರೆ ಅವುಗಳನ್ನು 'ಛತ್ರಿಸುಳಿ', 'ಹೀನಸುಳಿ', 'ವಕ್ರಸುಳಿ', 'ಬೆನ್ನುಸುಳಿ' ಮುಂತಾದ ಹೆಸರುಗಳಿಂದ ಕರೆದು ಅವು ಅಶುಭವಾದುವು. ಇಂತಹ ರಾಸುಗಳು ಮಾರಾಟವಾಗುವುದು ಕಷ್ಟ, ಆದರೂ ಕಡಿಮೆ ಬೆಲೆಗೆ. ಮನುಷ್ಯರ ನಡುವೆ ತಾರತಮ್ಯ ನೀತಿಯನ್ನು ಅನುಸರಿಸುವಂತೆ ದನಕರುಗಳಲ್ಲಿಯೂ ಒಳಿತು ಕೆಡಕುಗಳನ್ನು ಗುರುತಿಸುವುದು ನಂಬಿಕೆಯಾಗಿ ಬೆಳೆದಿದೆ. ಕೊಂಬುಗಳ

ರೂಪ ದೈಹಿಕವಾದ ಕೊರತೆ, ಮೈಕಟ್ಟು, ನಡೆಯುವ ರೀತಿ ಮುಂತಾದವು ರಾಸುಗಳ ಬೆಲೆಯನ್ನು ನಿರ್ಧರಿಸುತ್ತವೆ.

ದನಕರುಗಳ ವ್ಯಾಪಾರ ಸರಳವಾದುದಲ್ಲ. ಅದಕ್ಕೆ ಅನುಭವದ ಅಗತ್ಯತೆ ಬಹಳ ಮುಖ್ಯ. ಹಾಗಾಗಿ ಅನೇಕರು ದಲ್ಲಾಳಿಗಳ ಮೊರೆ ಹೋಗುತ್ತಾರೆ. ವ್ಯಾಪಾರದಲ್ಲಿ ಗುಪ್ತವಾದ ಆಂಗಿಕ ಸಂಜ್ಞೆಗಳು ಸಂಕೇತಗಳು ಭಾಷೆಯಾಗಿ ಪರಿಣಿಸುತ್ತದೆ. ಮುಕ್ತವಾಗಿ ಬಾಯಿ ಮಾತಿನ ವ್ಯಾಪಾರಕ್ಕಿಂತ ಗುಪ್ತವ್ಯಾಪಾರವೇ ಪ್ರಧಾನವಾಗಿರುತ್ತದೆ. ವ್ಯಾಪಾರಸ್ಥರಿಬ್ಬರು ಒಬ್ಬರಿಗೊಬ್ಬರು ಕೈ ಕೈ ಹಿಡಿದುಕೊಂಡು ಹಸ್ತದ ಮೇಲೆ ಟವಲ್ಲು ಅಥವಾ ಪಂಚೆಯನ್ನು ಮುಚ್ಚಿ, ನೂರು ರೂಪಾಯಿಗಳು ಸಾವಿರ ರೂಪಾಯಿಗಳ ಲೆಕ್ಕದಲ್ಲಿ ಬೆರಳುಗಳನ್ನು ಮಡಚುವುದು. ಉಳಿದ ಚಿಲ್ಲರೆಗಾಗಿ ಐವತ್ತು ರೂಗಳಿಗೊಂದರಂತೆ ಒಂದೊಂದು ಇಂಚನ್ನು ಚಿವಿಟಿ ಮನಸ್ಸಿನಲ್ಲಿ ನೆನಪಿಟ್ಟುಕೊಳ್ಳುವಂತೆ ಒಟ್ಟು ಬೆಲೆಯನ್ನು ನಿಗದಿಪಡಿಸಿ ಮುಂಗಡ ಹಣವಾಗಿ ಒಂದು ನೂರು ರೂಪಾಯಿಗಳನ್ನು ಕೊಟ್ಟು ತೀರ್ಮಾನಿಸುತಾರೆ(ಕಾಳದುರ್ಗಯ್ಯ). ಇಂಥ ವ್ಯಾಪಾರ ಕ್ರಮ ಎರಡೂ ಕಡೆಯವರಿಗೆ ಪರಿಚಿತವಾಗಿದ್ದಲ್ಲಿ ಮಾತ್ರ ನಿಷ್ಪಕ್ಷಪಾತವಾದ ವ್ಯಾಪಾರವಾಗುತ್ತದೆ. ಇಲ್ಲದಿದ್ದರೆ ದಲ್ಲಾಳಿಗಳಿಂದ ಮೋಸವಾಗುವುದು ಉಂಟು. ಏಕೆಂದರೆ ಒಮ್ಮೆ ತೀರ್ಮಾನವಾದ ವ್ಯಾಪಾರಕ್ಕೆ ಬದ್ಧವಾಗಿರಬೇಕು. ಅದಕ್ಕೆ ತಪ್ಪಿದಲ್ಲಿ ಮಾತಿಗೆ ತಪ್ಪಿದವನೆಂದು ತೀರ್ಮಾನಿಸಿ ದಂಡವಿಧಿಸುವುದು ಇದೆ. ವ್ಯಾಪಾರದ ಮಾತಿಗೆ ತಪ್ಪಿದವರು ಭಾಷೆಗೆ ತಪ್ಪಿದಂತೆಯೇ ಸರಿ. ಆದ್ದರಿಂದ ಯಾರೂ ತಪ್ಪಿ ನಡೆಯುವುದಿಲ್ಲ.

ರಾಸುಗಳನ್ನು ಕೊಂಡುಕೊಂಡ ಮೇಲೆ ಅವು ನಿಂತಿರುವ ಕಡೆ ಅಥವಾ ಗೂಟಕ್ಕೆ ಕಟ್ಟಿರುವ ಕಡೆಯೇ ಹಸ್ತಾಂತರ ಮಾಡುವುದಿಲ್ಲ. ಗೂಟದಿಂದ ಹಗ್ಗಬಿಚ್ಚಿ ಸ್ವಲ್ಪ ದೂರ ನಡೆಸಿ ಅವುಗಳ ಬೆನ್ನ ಮೇಲೆ ಬಲಗಡೆಗೆ ಹಗ್ಗಹಾಕಿ ಕೊಂಡವನ ಕೈಗೆ ಹಗ್ಗವನ್ನು ಹಸ್ತಾಂತರಿಸಬೇಕು. ಇದು ಹಸುಕೊಂಡವನು ನಿರಂತರವಾಗಿ ಬೆಳವಣಿಗೆಯ ಪಥವನ್ನು ಕಾಣಲಿ ಎಂಬ ಆಶಯವಿದೆ. ಹೀಗೆ ದನಕರುಗಳ ಮಾರಾಟ ಪ್ರಕ್ರಿಯೆಯಲ್ಲಿಯೂ ಜನಪದರು ಹಲವಾರು ನಂಬಿಕೆ ಸಂಪ್ರದಾಯಗಳನ್ನು ಅನುಸರಿಸುತ್ತಾರೆ. ಜಾತ್ರೆಯ ಕೊನೆಯ ಹಂತದಲ್ಲಿ ಸರ್ಕಾರದವರು ಉತ್ತಮವಾದ ರಾಸುಗಳಿಗೆ ಪ್ರಶಸ್ತಿ ಕೊಟ್ಟು ರೈತರನ್ನು ಪ್ರೋತ್ಸಾಹಿಸುವುದು ಇದೆ. ಕೃಷಿ ಕೆಲಸಗಳು ಲಾಭದಾಯಕವಲ್ಲವೆಂಬ ಕಾರಣಕ್ಕಾಗಿ ದನಕರುಗಳನ್ನು ಸಾಕುವುದು ಕಡಿಮೆಯಾಗಿದೆ. ಉಳುಮೆಗಾಗಿ ಟ್ರಾಕ್ಟರ್‌ಗಳ ಬಳಕೆಯಾಗುತ್ತಿರುವಾಗ ರಾಸುಗಳ ಅವಶ್ಯಕತೆ ಬಡಜನರಿಗೆ ಮಾತ್ರವಾಗಿ ಪರಿಣಿಸಿದೆ. ಹೀಗಾಗಿ ರಾಸುಗಳ ಸಂಖ್ಯೆ ಕಡಿಮೆಯಾಗುತ್ತಲಿವೆ. ಜಾತ್ರೆಗಳು ಸಹ ತಮ್ಮ ಸಾಂಸ್ಕೃತಿಕ ಸ್ವರೂಪವನ್ನು ಕಳೆದುಕೊಳ್ಳುತ್ತಿವೆ.

ಕಬ್ಬಾಳಮ್ಮ ಕೃಷಿ ಸಂಬಂಧಿ ಆಚರಣೆ

ಅಲೆಮಾರಿಯಾಗಿದ್ದ ಮನುಷ್ಯನಿಗೆ ಕೃಷಿಯ ಮೂಲಕ ಒಂದೆಡೆ ನೆಲೆನಿಲ್ಲುವಂತೆ ಮಾಡಿದವಳು ಸ್ತ್ರೀ. ಕೃಷಿಯ ಮೂಲಕ ಮನುಷ್ಯನ ಬದುಕಿಗೆ ಹೊಸ ರೂಪ ನೀಡಿದವಳು ಸ್ತ್ರೀಯೇ ಆಗಿರುವುದರಿಂದ ಅವಳಿಗೆ ದೇವತೆಯ ಸ್ಥಾನ ನೀಡಿ ಪೂಜಿಸಲು ಪ್ರಾರಂಭಿಸಲಾಯಿತು. "ಜಗತ್ತಿನಲ್ಲಿಯೇ ಭಾರತದ ಸ್ತ್ರೀಯರು ಪ್ರಥಮ ಕೃಷಿಕರು. ಹಾಗಾಗಿ ಮಾತೃ ಅಧಿಕಾರ ಭಾರತದಲ್ಲಿಯೇ ಮೊಟ್ಟ ಮೊದಲು ಹುಟ್ಟಿದೆ"(ಲೋಕಾಯುತ, ಪುಟ.೨೫೩). "ಆಹಾರ ಸಂಗ್ರಹಣೆ ಮಹಿಳೆಯ ಕೆಲಸವಾಗಿತ್ತಾದ್ದರಿಂದ ಕೃಷಿ ಬಹುಮಟ್ಟಿಗೆ ಅವಳ

ಆವಿಷ್ಕಾರವೇ. ಎತ್ತನ್ನು ಹೂಡಿ ಉಳುವ ನೇಗಿಲು ಬರುವವರೆಗೆ ಅದು ಅವಳದೇ ಕೆಲಸ. ಆಗ ಬಳಕೆಯಲ್ಲಿದ್ದದು ಕೈಗುದ್ದಲಿ"(ಲೋಕಾಯುತ, ೧೭೮). ಭಾರತದಲ್ಲಿ ಕೃಷಿ ಆರ್ಥಿಕ ಚಟುವಟಿಕೆಯಾಗಿ ರೂಪಗೊಳ್ಳುವುದರ ಜೊತೆಗೆ ಶಾಕ್ತ ಪಂಥವು ತಲೆ ಎತ್ತಿತ್ತು.

"ಶಾಕ್ತ ಧರ್ಮದಲ್ಲಿ ದೇವತೆಯನ್ನು ಪ್ರಪಂಚದ ಮೂಲಶಕ್ತಿಯ ಸಾಕಾರ ರೂಪವನ್ನಾಗಿ ಲೋಕದ ದೈವಿಕ ಮತ್ತು ಜೈವಿಕ ಬೆಳವಣಿಗೆಯ ಮೂಲಶಕ್ತಿಯನ್ನಾಗಿ ಪರಿಗಣಿಸುತ್ತದೆ. ಕೃಷಿ ಜನಾಂಗವೊಂದರ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯ ಪರಿಣಾಮವೇ ಇದಾಗಿರಬೇಕು"(ಸಿದ್ಧಲಿಂಗಯ್ಯ, ಗ್ರಾಮದೇವತೆಗಳು, ಪುಟ.೧೭). ಹೆಣ್ಣು ಒಂದು ಜನಾಂಗದ ಸಂಕೇತವಷ್ಟೇ ಅಲ್ಲ ಜೀವೋತ್ಪತ್ತಿಯ ಮೂಲ ಶಕ್ತಿಯಾಗಿದ್ದಳು. ಆಹಾರ ಸಂಗ್ರಹಣೆ ಮತ್ತು ಆಹಾರ ಉತ್ಪಾದನೆಯು ಸ್ತ್ರೀಯ ಕರ್ತವ್ಯವಾಗಿತ್ತು. ಆದ್ದರಿಂದ ಭಾರತದಲ್ಲಿ ಈ ಸ್ತ್ರೀ ಮಾನ್ಯತೆಯು ಕೃಷಿಯ ಆರಂಭದ ಹಂತದೊಡನೆ ಸಂಬಂಧವನ್ನು ಹೊಂದಿದೆ. ಕೃಷಿಯನ್ನು ಕಂಡುಹಿಡಿದದ್ದು ಹೆಣ್ಣು ಎಂದು ಬಹುಪಾಲು ಮಾನವಶಾಸ್ತ್ರಜ್ಞರು ಒಪ್ಪುತ್ತಾರೆ. "ಭಾರತದಲ್ಲಿ ಮಹಿಳೆಯರು ಭೂಮಿಯ ವ್ಯವಸ್ಥಿತ ಉಳುಮೆಯನ್ನು ಕಂಡುಹಿಡಿದದ್ದೇ ಅಲ್ಲದೆ ಅದನ್ನು ಅನುಷ್ಠಾನಕ್ಕೆ ತಂದರು ಕೂಡ. ಉಳುಮೆಯನ್ನು ಕಂಡುಹಿಡಿದ ನಂತರ ಮಾತೃಪ್ರಧಾನ ಸಂಸ್ಕೃತಿಯ ಗುಂಪು ಕಾಡಿನಲ್ಲಿ ಅಲೆಯುವುದನ್ನು ಕೊನೆಮಾಡಿ ಒಂದೆಡೆ ಬೀಡುಬಿಟ್ಟಿತು"(ಏರೆನ್ ಫೆಲ್ಸ್, Mother Right in India, ಪುಟ.೮). ಗಂಡು ಬೇಟೆಗೆ ಹೋಗಿದ್ದಾಗ ಆಹಾರ ಸಂಗ್ರಹಣೆಯನ್ನು ಗೃಹಕೃತ್ಯವನ್ನು ನೋಡಿಕೊಳ್ಳುತ್ತಿದ್ದ ಹೆಣ್ಣು ಬೀಜವು ಗಿಡವಾಗುವ ಪವಾಡವನ್ನು ಮಾಡಿದಳು. ಕೈಗುದ್ದಲಿಯಿಂದ ತೋಟ ಕೃಷಿಯನ್ನು ಆರಂಭಮಾಡಿದ ಹಿರಿಮೆ ಹೆಣ್ಣಿನದು. ಪ್ರಾರಂಭದ ಕೃಷಿಕಳಾಗಿದ್ದ ಹೆಣ್ಣು ಸಮೃದ್ಧಿಗೋಸ್ಕರ ನಡೆಯುವ ಕೃಷಿಯ ಆಚರಣೆಗಳನ್ನು ನಡೆಸಿಕೊಡುವ ಹೊಣೆಗಾರಿಕೆಯನ್ನು ಹೊತ್ತಳು.

ಮಾತೃಪ್ರಧಾನ ಕುಟುಂಬ ವ್ಯವಸ್ಥೆ ರೂಪಗೊಂಡು ಮಾತೃದೇವತೆಗಳ ಪ್ರತಿನಿಧಿಗಳಾದ ಗ್ರಾಮದೇವತೆಗಳು ಗ್ರಾಮದಲ್ಲಿ ಆರಾಧನೆಗೆ ಒಳಗಾದವು. ಕೃಷಿ ಸಮೃದ್ಧಿ ಆಚರಣೆಗಳೆಲ್ಲಾ ಸ್ತ್ರೀಸಂಬಂಧಿ ಆಚರಣೆಗಳಾದ್ದರಿಂದ ಇವೆಲ್ಲ ಅವಳ ಒಡೆತನದಲ್ಲೇ ಆಗುತ್ತಿದ್ದವು. ಅನೇಕ ಗ್ರಾಮದೇವತೆಗಳು ಅತಿ ಪ್ರಾಚೀನವಾದ ಭೂಮಿಪೂಜೆ ಅಥವಾ ಮಾತೃಪೂಜೆಯ ಕುರುಹುಗಳಲ್ಲದೆ ಬೇರೆಯಲ್ಲ. ಕೆಲವೊಮ್ಮೆ ಅವು ಫಲಶಕ್ತಿಯ ಸ್ಪಷ್ಟ ಪ್ರತೀಕಗಳಂತಿರುತ್ತವೆ.

ಕಬ್ಬಾಳು ಜಾತ್ರೆಯಲ್ಲಿ ಹಬ್ಬವು ಚಾಲನೆಗೊಳ್ಳುವುದೇ 'ಹೊನ್ನೇರು ಪೂಜೆ' ಅಥವ 'ಹೊನ್ನೇರು ಚಪ್ಪರ'ದಿಂದ. ಈ ಆಚರಣೆ ಇಬ್ಬರು ಮಕ್ಕಳನ್ನು ಎತ್ತುಗಳೆಂದು ಭಾವಿಸಿ ಹೆಣ್ಣುಗಂಡು ವೇಷಧರಿಸಿ ಅವರಿಗೆ ನೇಗಿಲು, ನೊಗವನ್ನು ಹೂಡಿ ಸಾಂಕೇತಿಕವಾಗಿ ಹೊಲ ಊಳುವುದನ್ನು ಮಾಡುತ್ತಾರೆ. ಕಬ್ಬಾಳಮ್ಮನ ಗಂಡ ಎಂದೇ ಭಾವಿಸಿರುವ 'ರಂಗಸ್ವಾಮಿ'ಯ ಕಲ್ಲು ಕಂಬದ ಸುತ್ತಲು ಹತ್ತು ಸುತ್ತು ಸುತ್ತಿಸುತ್ತಾರೆ. ಇದು ಹೊಲವನ್ನು ಉಳುವುದರ ಅನುಕರಣೆಯೇ ಇಲ್ಲಿಯ ಕೇಂದ್ರಕ್ರಿಯೆ. ಹೊಲ ಉತ್ತು ಬಿತ್ತುವುದು ಸಮೃದ್ಧಿಯ ಸಂಕೇತ. ಪ್ರತಿ ಗ್ರಾಮದೇವತೆಯ ಗುಡಿಯ ಹಿಂದೆ ಅಥವಾ ಮುಂದೆ ಒಂದು ಕಲ್ಲು ಕಂಬ ಇದ್ದೇ ಇರುತ್ತದೆ. ಅದು ಆ ದೇವತೆಯ ಗಂಡನಾಗಿರುತ್ತಾನೆ. ಕಂಬವು ಗಂಡಿನ ಶಿಶ್ನದ ಸಂಕೇತವಾಗಿರುತ್ತದೆ.

ಆದ್ದರಿಂದ ಅದರ ಸುತ್ತಸುತ್ತುವುದು ಫಲವಂತಿಕೆಯ ಸಂಕೇತವನ್ನು ಸೂಚಿಸುತ್ತದೆ. ಆದ್ದರಿಂದಲೇ ಭೂಮಿ ಮತ್ತು ಹೆಣ್ಣನ್ನು ಸಮೀಕರಿಸುವುದು ಜಾನಪದರಲ್ಲಿ ಬಹುಮುಖ್ಯವಾಗಿದೆ.

'ಹಸಿಕರಗ' ತರುವುದು ಕಬ್ಬಾಳು ಜಾತ್ರೆಯಲ್ಲಿನ ಮತ್ತೊಂದು ಆಚರಣೆಯಾಗಿದೆ. ಕಬ್ಬಾಳಮ್ಮನ ಗಿಂಡಿಯನ್ನೂ, ಬಸವೇಶ್ವರ, ಬಿಸಿಲಮ್ಮ, ಸತ್ಯಮ್ಮರನ್ನು ಹೊತ್ತು ಮಜ್ಜಣದ ಕೊಳದಲ್ಲಿ ಸ್ನಾನಮಡಿಮಾಡಿಸಿ ಮಣ್ಣಿನಿಂದ ಮಾಡಿದ ಗಡಿಗೆಗೆ ಹೊಸ ನೀರು ತುಂಬಿ. ಅದಕ್ಕೆ ಹೊಡೆದ ಹೊಂಬಾಳೆಯನ್ನು, ತುಂಬಿದ ಅರಬಿ (ಗಡಿಗೆ)ಗೆ ಅರಿಶಿನ ಕುಂಕುಮದಿಂದ ಪೂಜೆಮಾಡಿ ಕರಗ ತರುತ್ತಾರೆ.

ಹೊಂಬಾಳುದುರೀವೋ ತಾಣಜಗ್ರಿಸೀವೋ
ತುಂಬಿದ್ದ ಗಿಂಡಿ ತುಳುಕೇವೋ
ತುಂಬಿದ್ದ ಗಿಂಡ ತುಳುಕೇವೋ ಮಲೆಯಕಾಳಿ
ರಂಬೆ ಹೊಳೆ ಮೆಟ್ಟಿ ಬರುವಾಗ
ಹೊಂಬಾಳೆ ಬಂದೊ ವಾಮದ ಗಡಿಗೆ ಬಂದೊ
ತಟ್ಟೈಸಿ ಬಂದೊ ಕೈಪಂಜು
ತಟ್ಟೈಸಿ ಬಂದೋ ಕೈಪಂಜು ಮಲೆಯಕಾಳಿ
ನಿನಗೆ ಇಟ್ಬಾಡಿ ಬಂದೊ ಈಡುಗಾಯಿ

ನೀರು ತುಂಬಿದ ಗಡಿಗೆ, ಹೊಡೆದ ಹೊಂಬಾಳೆ ಫಲವಂತಿಕೆಯ ಸಂಕೇತವಾಗಿದೆ. ನೀರು ತುಂಬಿದ ಗಡಿಗೆ ಆಚರಣೆ ಪ್ರಾಚೀನ ಕಾಲದಿಂದಲೂ ಇದೆ. ದುರ್ಗಾಪೂಜೆಯಲ್ಲಿ ಗಡಿಗೆ ಪೂಜೆಯನ್ನು 'ಪೂರ್ಣಘಟ' ಪೂಜೆ ಎಂದು ಮಾಡುವುದನ್ನು ದೇವಿಪ್ರಸಾದ್ ಅವರು ತಿಳಿಸುತ್ತಾರೆ. "ನೀರು ತುಂಬಿದ ಒಂದು ಮಣ್ಣಿನ ಪಾತ್ರೆಯೇ ಪೂರ್ಣ ಘಟ. ಅದರ ರಚನೆ ಹೀಗಿರುತ್ತದೆ. ಮೊದಲು ಚತುಷ್ಕೋಣಾಕೃತಿಯುಳ್ಳ ಜೇಡಿಮಣ್ಣಿನ ಮೇಲೆ ಐದು ವಿವಿಧ ಬೀಜಗಳನ್ನು(ಪಂಚಸಸ್ಯ) ಹರಡಲಾಗುತ್ತದೆ. ಅದರ ಮೇಲೆ ನೀರು ತುಂಬಿದ ಮಣ್ಣಿನ ಪಾತ್ರೆಯನ್ನು ಇರಿಸಲಾಗುತ್ತದೆ. ಮೊಸರು ಮಿಶ್ರಿತ ಅನ್ನ ಪಾತ್ರೆಯೊಳಗೆ ಈ ಪಾತ್ರೆಯ ಕಂಠದ ಸುತ್ತ ಒಂದು ಕೆಂಪುದಾರ. ಪಾತ್ರೆಯ ಬಾಯನ್ನ ಐದು ವಿಧದ ಎಲೆಗಳಿಂದ ಮುಚ್ಚುವುದು. ಆ ಮೇಲೆ ಒಂದು ಮಣ್ಣಿನ ಕಟ್ಟೆಯ ಮೇಲೆ ಸ್ವಲ್ಪ ಅಕ್ಕಿ ಮತ್ತು ಅಡಿಕೆ ಇಟ್ಟು ಅದನ್ನು ಎಲೆಗಳ ಮೇಲಿಡುವುದು. ಅಕ್ಕಿಯ ತಟ್ಟೆಯ ಮೇಲೆ ಇನ್ನೊಂದು ಹಣ್ಣು ಉದಾಹರಣೆಗೆ ತೊಟ್ಟುಕೀಳದ ಹಸಿರು ತೆಂಗಿನಕಾಯಿ. ಆ ಕಾಯಿಗೆ ಕುಂಕುಮ ಸವರಿರುತ್ತದೆ. ಮಣ್ಣಿನ ಪಾತ್ರೆಯ ಮೇಲೆ ಕಲಿಸಿದ ಕುಂಕುಮದಿಂದ ಒಂದು ಮಾನವ ಮಗುವಿನ ಚಿತ್ರ ಬರೆದಿರುತ್ತಾರೆ. ಅದನ್ನು ಸಿಂಧೂರ ಪುತ್ತಲಿ ಎನ್ನುತ್ತಾರೆ"(ಲೋಕಾಯುತ, ೨೦೬). ಇಲ್ಲಿ ನೀರು ತುಂಬಿದ ಮಣ್ಣಿನ ಗಡಿಗೆ ಮತ್ತು ಕಬ್ಬಾಳಮ್ಮನ ಹಸಿ ಕರಗಗಳಲ್ಲಿ ಒಂದೇ ಉದ್ದೇಶ ಇದೆ. ಇದು ಸ್ತ್ರೀಯ ಗರ್ಭದ ಸಂಕೇತ. ಐದು ವಿಧದ ಎಲೆಗಳು, ಹೊಡೆದ ಹೊಂಬಾಳೆ ಗಡಿಗೆಯ ಮೇಲೆ ಇಟ್ಟಿರುವುದು ಸ್ತ್ರೀಯ ಸಂತಾನೋತ್ಪತ್ತಿಯ ಅಂಗದ ಜೊತೆ ಸಂಪರ್ಕದಲ್ಲಿವೆ. ಇದು ಸ್ತ್ರೀಯ ಗರ್ಭದ ಸಂಕೇತ. ಇಡೀ ಪ್ರಕ್ರಿಯೆ ಮನುಷ್ಯನ ಸಂತಾನೋತ್ಪತ್ತಿಯ ಕ್ರಿಯೆ. ಭೂಮಿಯ ಜೊತೆ ಸ್ತ್ರೀಯ ಗರ್ಭವನ್ನು ಹೋಲಿಸುವುದು,

ಭೂಮಿತಾಯಿ ಎಂದು ಕರೆದಿರುವುದು ಇದೇ ಉದ್ದೇಶದಿಂದಿರಬೇಕು. ಭೂಮಿ ಮತ್ತು ಮಹಿಳೆಯ ಫಲವತ್ತತೆ ಒಂದೇ ಗುಣವುಳ್ಳವು ಎಂಬುದು ಆ ನಂಬಿಕೆ.

'ಬಲಿ' ಕೊಡುವುದು ಕಬ್ಬಾಳಮ್ಮನ ಹರಕೆಗಳಲ್ಲಿ ಬಹುಮುಖ್ಯವಾದುದು. ಜಾತ್ರೆಯ ಸಂದರ್ಭದಲ್ಲಿ ತಂಬಿಟ್ಟಿನ ಆರತಿ ದಿನ ಮಂಗಳವಾರ ಬಲಿಯನ್ನು ಕೊಡುತ್ತಾರೆ. ಹಿಂದೆ ಕಬ್ಬಾಳಮ್ಮನಿಗೆ ಕೋಣಬಲಿಗಳೇ ಹೆಚ್ಚಿದ್ದವು. ಇತ್ತೀಚೆಗೆ ಕೋಣಗಳ ಬದಲಿಗೆ ಆಡು, ಕುರಿ, ಕೋಳಿಗಳ ಬಲಿ ಹೆಚ್ಚಾಗಿವೆ. ಆದರೂ ಇಂದಿಗೂ ಕಬ್ಬಾಳು ಕುಳಿಯ ಕೆಲವು ಊರುಗಳಲ್ಲಿ ಕೋಣಬಲಿಯ ಆಚರಣೆ ಇದೆ.

'ಬಲಿ' ಕೇವಲ ಬಲಿಯಾಗಿರದೆ ಅದು ಆದಿಮ ಜನಪದರಲ್ಲಿ ಸಮೃದ್ಧಿಯ ಸಂಕೇತವೇ ಆಗಿದೆ. "ರಕ್ತ ಹುಲುಸು ಸಮೃದ್ಧಿಯ ಸಂಕೇತ. ಇದಕ್ಕೆ ಆಧಾರ ಕೃಷಿಯ ಬುಡಕಟ್ಟುಗಳಲ್ಲಿದ್ದ ಮಾಂತ್ರಿಕಾಚಾರದ ತಳಹದಿ ಇರಬೇಕು ಮಲಿಯಮ್ಮ ದೇವತೆಯ ಸಮೃದ್ಧ ಸ್ಥಿತಿಯನ್ನು ಏರ್ಪಡಿಸುವುದಕ್ಕಾಗಿ ಮತ್ತು ಕರುಣಿಸುವುದಕ್ಕಾಗಿ ಆರಾಧಿಸಲ್ಪಡುತ್ತಿರುವ ಆಚರಣೆ"(ಮಲಿಯಮ್ಮ, ಪುಟ.೯)ಆಗಿದೆ. ಕೆಂಪು ಬಣ್ಣದ ಪ್ರತಿಯೊಂದು ಸಮೃದ್ಧಿಯನ್ನು ಹೆಚ್ಚಿಸುತ್ತಿವೆ ಎಂಬ ನಂಬಿಕೆಯನ್ನು ಒಳಗೊಂಡಿತ್ತು. ಅದರಲ್ಲೂ ರಕ್ತ. ವಿಶೇಷವಾಗಿ ಸ್ತ್ರೀಯರ ಋತುಸ್ರಾವದ ರಕ್ತ ಭೂಮಿಗೆ ಚೆಲ್ಲಿದಾಗ ಸಮೃದ್ಧಿ ಹೆಚ್ಚುತ್ತದೆ ಎಂಬ ನಂಬಿಕೆ ಇತಿಹಾಸಪೂರ್ವ ಯುಗದಿಂದಲೂ ಇದೆ. ಆಗಿನ ವಿಧಿಗಳಲ್ಲಿ ಇದು ಮೂಲಭೂತವಾದುದು, ಮುಖ್ಯವಾದುದು ಆಗಿತ್ತು. ಉಳಿದು ಬಂದಿರುವ ಕುಂಕುಮ ಮತ್ತು ಓಕುಳಿಯ ಸಂಪ್ರದಾಯಗಳು ಈ ರಕ್ತದರ್ಪಣದ ಮೂಲವನ್ನು ಮಾರ್ಪಡಿಸಿಕೊಂಡು ಸಾಂಕೇತಿಕ ವಿಧಿಗಳಾಗಿವೆ(ಮಲಿಯಮ್ಮ.೮). ಈ ಎಲ್ಲ ಆಧಾರಗಳು ಗ್ರಾಮದೇವತೆಯಾದ ಕಬ್ಬಾಳಮ್ಮ ಮಳೆಬೆಳೆ ಹೆಚ್ಚಿಸುವ ದೇವತೆಯಾಗಿ ಒಂದು ಕೃಷಿಕಾಚರಣೆಯ ಮಾಂತ್ರಿಕ ನಂಬಿಕೆಗಳ ಪರಿಷ್ಕೃತ ರೂಪವಾಗಿ ಪೂಜಿಸುತ್ತಿದ್ದಾರೆ ಎಂಬುದನ್ನು ಮನಗಾಣಬಹುದಾಗಿದೆ.

"ಭೂಮಿ ಗಟ್ಟಿಯಾಗಲು ಸಮೃದ್ಧವಾಗಲೂ ನರಬಲಿಯ ಅಗತ್ಯವಿತ್ತು ಎಂಬ ಆಶಯವಿರುವುದಕ್ಕೂ ಹೊಲೆಯನಾದ ಕೋಣನನ್ನು ಬಲಿಕೊಡುವುದಕ್ಕೂ ಹೊಲೆಮಾದಿಗರೇ ಭೂಮಿ ಹೆಪ್ಪುಗಟ್ಟಲು ಕಾರಣರಾದರೆಂದು ಕಲ್ಪಿಸಿರುವುದಕ್ಕೆ ಸಂಬಂಧವಿದೆ"(ಹಿರೇಮಠ, ಜಾತ್ರೆಗಳು, ಪುಟ.೧೨೦). "ದೇವಿಗೆ ಅರ್ಪಿಸಲಾಗುವ ಮಾಂಸ, ಹೆಂಡ, ಅನ್ನಗಳು ಆಕೆಯ ದುಷ್ಟಶಕ್ತಿ ಸಂಹಾರಕ್ಕೆ ಶಕ್ತಿವಂತಳನ್ನಾಗಿ ಮಾಡಲು ಈ ಶಕ್ತಿಯೆ 'ಪೊಲಿ' ಅಂದರೆ ಅನ್ನದಲ್ಲಿ ಬೆರೆತ ಕೋಣನ ರಕ್ತವೇ 'ಹುಲುಸು' ಅದೇ 'ಪೊಲಿ'ಗೆ ಕಾರಣವಾಗುತ್ತಿದೆ"(ಅದೇ, ಪುಟ.೨೯). ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಕೋಣನ ರಕ್ತಕ್ಕೆ ಅನ್ನವನ್ನು ಬೆರೆಸಿ ಅದನ್ನು 'ಹುಲುಸು' ಎಂದು ಊರಿನ ಎಲ್ಲೆಗಳಿಗೆ, ಹೊಲಗಳಿಗೆ ಎರಚುವ ಪದ್ಧತಿಯನ್ನು ಗ್ರಾಮದೇವತೆಗಳ ಹಬ್ಬದಲ್ಲಿ ಕಾಣಬಹುದು. ಕಬ್ಬಾಳಿನಲ್ಲಿ ಹೊಲಗಳಲ್ಲಿ ಬಲಿ ನೀಡಿ ಹುಲುಸು ಮಾಡುವುದು ಇದೆ.

ಕಬ್ಬಾಳಿನಲ್ಲಿ 'ಈರಬ್ಬ' ಎಂಬ ಆಚರಣೆ ಇದೆ. ಇದು ಇಪ್ಪತ್ತು ವರ್ಷಗಳಿಗೊಮ್ಮೆ ನಡೆಯುತ್ತದೆ. ಕಬ್ಬಾಳು ಕುಳಿಗೆ ಸೇರಿದ ಪ್ರತಿಯೊಂದು ಹಳ್ಳಿಗಳು ಕಬ್ಬಾಳು ಕುಳಿಗೆ ಮಳೆ ಬೆಳೆ ಸರಿಯಾಗಿ ಆಗದೇ ಇದ್ದ ಸಂದರ್ಭದಲ್ಲಿ ಈ ಈರಬ್ಬವನ್ನು ಮಾಡುತ್ತಾರೆ. ಇಡೀ ಕಬ್ಬಾಳು ಕುಳಿಗೆ ಈರಬ್ಬದ ದಿನವನ್ನು ಸಾರುವವನ

ಕೈಲಿ ಸಾರಿಸಿ 'ಮಂಗಳವಾರದ ದಿನ ಕಬ್ಬಾಳಿನಲ್ಲಿ ಈರಬ್ಬ ಮಾಡ್ಬೇಕು, ತಾಯಿಗೆ ತಂಪು ಮಾಡಬೇಕು' ಎಂದು ದಿನಗೊತ್ತುಪಡಿಸಿ ಅಂದು ಸುತ್ತಮುತ್ತಲಿನ ಎಲ್ಲಾ ಹಳ್ಳಿಗಳು ಸೇರಿ ಕಬ್ಬಾಳಿನಲ್ಲಿ ಈರಬ್ಬ ಮಾಡುತ್ತಾರೆ. ಇದು ಭೂಮಿಯನ್ನು ತಣಿಸುವ ಸಂಕೇತವಾಗಿದೆ. ಪ್ರತಿಊರುಗಳಲ್ಲಿ 'ಧೂಳುಮರಿ' ಎಂದು ಸಹ ಬಲಿಯನ್ನು ಕೊಡುತ್ತಾರೆ. ಇದು ಕೂಡ ಭೂಮಿಯನ್ನು ತಣಿಸುವ ಸಮೃದ್ಧಿಯ ಸಂಕೇತವಾಗಿದೆ.

ಬಲಿಯಾದ ಪ್ರಾಣಿಯ ಮಾಂಸವನ್ನು ಪೂಜಾಸ್ಥಳದಲ್ಲೇ ಬೇಯಿಸಿ ಊಟ ಮಾಡುವುದರ ಅರ್ಥವೂ ಸಹ ಭೌತಿಕವಾದುದೆ ಹೊರತು ಆಧ್ಯಾತ್ಮಿಕವಾದುದಲ್ಲ. ಇಲ್ಲಿ ಬಲಿಯನ್ನು ಕೊಡುವ ಪ್ರಾಣಿಗಳು ಹೆಚ್ಚಾಗಿ ಗಂಡುಪ್ರಾಣಿಯ ಬಲವು ತಮ್ಮನ್ನು ಪ್ರವೇಶಿಸಬೇಕು ಎಂಬ ಆಶಯ ಇಲ್ಲಿ ಹುದುಗಿದೆ. ಗ್ರಾಮ ದೇವತೆಯು ಇವರ ಮೈಯಲ್ಲಿ ಬಂದ ರಕ್ತವನ್ನು ಸ್ವೀಕರಿಸುವಳು ಎಂಬಲ್ಲಿ ಗಂಡಿನ ಶಕ್ತಿಯನ್ನು ಆಹ್ವಾನಿಸಿಕೊಳ್ಳುವ ಕ್ರಮವೆಂದೇ ಕಾಣುತ್ತದೆ. "ಎಮ್ಮೆ ಆಕಳು ಬೆದೆಗೆ ಬಂದಾಗ ಕೋಣ, ಹೋರಿಗಳನ್ನು ಕೂಡಿಸುವಾಗ ಊರಮ್ಮನ ಗುಡಿ ಎದುರಿನ ಗಿಡಕ್ಕೆ ಎಮ್ಮೆ, ಆಕಳನ್ನು ಕಟ್ಟಿ ರೈತರು 'ಹೊಲಿ ಹೊಲಿ ಹೊಲಿ' ಎಂದು ಪ್ರಚೋದಿಸುತ್ತಾರೆ"(ಜಾತ್ರೆಗಳು, ಪುಟ.೨೧೫). ಹೊಲಿ ಸಂಭೋಗವನ್ನು ಸೂಚಿಸುತ್ತದೆ. ಸಮೃದ್ಧಿ, ಫಲವಂತಿಕೆಯ ಸಂಕೇತವಾಗಿದೆ. ಕಬ್ಬಾಳಿನಲ್ಲಿ ಬಲಿಕೊಡಲು ಕೋಣ, ವಾತ, ಟಗರು, ಹುಂಜಗಳ ಬಲಿಯನ್ನೇ ಕೊಡುತ್ತಿದ್ದುದು ಇದರ ಸಂಕೇತವೆಂದೆ ಹೇಳಬಹುದು. ಇಂದು ಇದು ಬದಲಾಗಿ ಆಡು, ಕುರಿ, ಕೋಳಿ, ಎಮ್ಮೆಗಳನ್ನು ಬಲಿ ಕೊಡುತ್ತಿದ್ದಾರೆ.

ಹೀಗೆ ಪ್ರಾಣಿ ಬಲಿಯಿಂದ ದೊರಕುವ ಸಮೃದ್ಧ ಮಾಂಸಾಹಾರ ಸಮೃದ್ಧಿಯನ್ನು ಹೆಚ್ಚಿಸುವ ಜೊತೆಗೆ ಅಲ್ಲಿನ ಜನಪದರನ್ನು ಆ ಕ್ಷಣದಲ್ಲಿ ಬಲಯುತರನ್ನಾಗಿ ಮಾಡುತ್ತದೆ. ಪ್ರಕೃತಿಯ ವಿರುದ್ಧ ಹೋರಾಡಲು ಹೊಸ ಹುರುಪು ವಿಶ್ವಾಸಗಳನ್ನು ತುಂಬುತ್ತದೆ. ಹೀಗೆ ದೇವತೆಗಳಿಗೆ ನೀಡುವ ಬಲಿ ಅವಳ ಪ್ರೀತ್ಯರ್ಥಕ್ಕೋಸ್ಕರವಾಗಿ ನೀಡುವುದು ಆದಿಮಾನವನ ಸಂಸ್ಕೃತಿ ಪದ್ಧತಿಯಾಗಿ ನಡೆದು ಬಂದಿದೆ. ಹೀಗೆ ಚಾರಿತ್ರಿಕ ಮೂಲದಿಂದ ನಿರಂತರವಾಗಿ ಹರಿದು ಬರುವ ಶಕ್ತಿ ಈ ಜಾತ್ರೆ ಹಬ್ಬಗಳಲ್ಲಿ ಜನರಿಗೆ ಸಮೃದ್ಧಿಯ ಸಂಕೇತವಾಗಿ ಫಲವಂತಿಕೆ ಲಭಿಸುತ್ತಲೇ ಹೋಗುತ್ತದೆ ಎನ್ನಬಹುದು.

ಆ. ಮಾರಮ್ಮ

ಕಬ್ಬಾಳಿನಲ್ಲಿರುವ ಮತ್ತೊಂದು ಗ್ರಾಮದೇವತೆ ಈ ಮಾರಮ್ಮ. ಕಬ್ಬಾಳಮ್ಮ ತಮಿಳುನಾಡಿನಿಂದ ವಲಸೆಬಂದ ದೇವತೆಯಾದರೆ ಮಾರಮ್ಮ ಊರಿನಲ್ಲೇ ಮೊದಲಿಂದಲು ಇದ್ದಂತಹ ದೇವತೆಯಾಗಿದೆ ಎಂಬುದು ಇಲ್ಲಿನ ಐತಿಹ್ಯಗಳಿಂದ ತಿಳಿದುಬಂದಿದೆ. ಕಬ್ಬಾಳಮ್ಮ ತಮಿಳುನಾಡಿನ ಮಾಂಬಳ್ಳಿಯಿಂದ ಬಂದು, ತನ್ನ ತಂಗಿಯಾದ ಬಿಸಿಲಮ್ಮನನ್ನು ಹುಣಸನಹಳ್ಳಿಯ ತೋಪಿನಲ್ಲಿ ನೆಲೆಗೊಳ್ಳಲು ಹೇಳಿ, ತಾನು ನೆಲೆಯೂರಲು ಕಬ್ಬಾಳು ದುರ್ಗಕ್ಕೆ ಹೋದಳು. ಕಬ್ಬಾಳು ದುರ್ಗದಲ್ಲಿ ಇದ್ದಂತಹ ಭೀಮೇಶ್ವರ ಅದಕ್ಕೆ ಅವಕಾಶ ಕೊಡದಿರಲು, ಅವರಿಬ್ಬರ ಮಧ್ಯೆ ಪಗಡೆಯ ಪಂದ್ಯ ಒಡ್ಡಿ ಪಂದ್ಯದಲ್ಲಿ ಗೆದ್ದ ಕಬ್ಬಾಳಮ್ಮ ಬೆಟ್ಟದ ಮೇಲೆ ನೆಲೆಸಿದಳು. ಆದರೆ ಭೀಮೇಶ್ವರ ಕಬ್ಬಾಳಮ್ಮನಿಗೆ ನೀನು ಬೆಟ್ಟದ ಮೇಲೆ ನೆಲೆಗೊಂಡರೆ ಭಕ್ತರು ನಿನ್ನ ಪೂಜೆ ಮಾಡಲು ಬೆಟ್ಟ ಹತ್ತಿಬರಲು ಸಾಧ್ಯವಾಗುವುದಿಲ್ಲ. ನೀನು ಕೆಳಗಿರುವ ಊರಲ್ಲಿ ಹೋಗಿ ನೆಲೆಸು

ಎನ್ನುತ್ತಾನೆ. ಅದರಂತೆ ಕಬ್ಬಾಳಮ್ಮ ಕಬ್ಬಾಳಿಗೆ ಬರಲು ಅಲ್ಲಿ ಕೋಣದ ಮಾರಮ್ಮ ಮತ್ತು ಮಂತ್ರದ ಮಾರಮ್ಮ ಎಂಬ ಇಬ್ಬರು ಮಾರಮ್ಮಂದಿರು ಇರಲು ಕಬ್ಬಾಳಮ್ಮ ಬಂದು ವಸಿಜಾಗಕೊಡಿ ಶಿವನನ್ನು ಆರಾಧಿಸಬೇಕು ಎಂದಳಂತೆ. ಇಬ್ಬರು ಆಕಡೆ ಈಕಡೆ ಸರಿದು ಮಧ್ಯ ಸ್ವಲ್ಪ ಜಾಗಕೊಟ್ಟರಂತೆ. ಕಬ್ಬಾಳಮ್ಮ ಅಲ್ಲಿಯೇ ಪಾತಾಳಕ್ಕೆ ಬೇರುಬಿಟ್ಟಳಂತೆ. ಕಬ್ಬಾಳಮ್ಮ ಮಾರಮ್ಮಂದಿರಿಗೆ ನೋಡಿ ಮಾರಮ್ಮಂದಿರ ನನಗೆ ಪೂಜೆ ಒಂದೇ ಸಾಕು ಬಲಿಯಲ್ಲ ನೀವೇ ತಕಳಿ, ಸಿಹಿ ತಳಿಗೆ ಮಾತ್ರ ನನಗಿರಲಿ ಎಂದು ಹೇಳಿದಳಂತೆ. ಅಂದಿನಿಂದ ಮಾರಮ್ಮರಿಗೆ ಬಲಿ ಸೇರುವುದಂತೆ. ಹೀಗೆ ಕಥೆಯಲ್ಲಿ ಕಬ್ಬಾಳಮ್ಮ ಮತ್ತು ಮಾರಮ್ಮರ ಸಂಬಂಧವನ್ನು ಕಲ್ಪಿಸಿದ್ದಾರೆ.

ವಾಸ್ತವವಾಗಿ ಇಲ್ಲಿ ಮಾತೃಪ್ರಧಾನ ಮತ್ತು ಪಿತೃಪ್ರಧಾನ ಎಂಬ ಎರಡು ಸಂಸ್ಕೃತಿಗಳ ಸಮ್ಮಿಲನದ ಸಂಕೇತವಾಗಿ ಕಬ್ಬಾಳಮ್ಮ ಮತ್ತು ಮಾರಮ್ಮಂದಿರು ಕಾಣುತ್ತಾರೆ. ಕಬ್ಬಾಳಮ್ಮ ಊರಮ್ಮನಾಗಿ ಮೂಲ ಕೃಷಿಕರ ದೇವತೆಯಾಗಿ ಮಾರಮ್ಮ ವಲಸೆಗಾರ ಪಶುಪಾಲಕರ ದೇವತೆಯಾಗಿರುವುದು ತಿಳಿಯಬಹುದು. ಇಲ್ಲಿ ಅಮ್ಮನ ಹುಟ್ಟಿಗೆ ಕಾರಣವಾದ ಮೂಲಕೃಷಿಕರ ಮಾತೃಪ್ರಧಾನ ಸಂಸ್ಕೃತಿ ಪಶುಪಾಲಕ ದ್ರಾವಿಡರ ಒಕ್ಕಲಿಗರ ಮೇಲಾಗಿ ಅವರೂ ಕೂಡ ಮಾತೃಪ್ರಧಾನ ಸಂಸ್ಕೃತಿಯನ್ನು ಒಪ್ಪಿ ಕೃಷಿಕರಾಗಿರುವುದನ್ನು ಕಾಣಬಹುದು. "ಹಟ್ಟಿಯ ಸ್ಥಿತಿ ನಾಶವಾಗಿ ಊರಲ್ಲಿ ನೆಲೆನಿಂತ ಜನಕ್ಕೆ ಮಾರಮ್ಮನಿಗಿಂತ ಊರಮ್ಮ ದೊಡ್ಡವಳಾಗಿ ಕಂಡಿರುವುದು ಸಹಜವೇ. ಬೇರೆ ಜಾತಿಗಳ, ಊರುಗಳ ಮಧ್ಯೆ ಈ ಹಟ್ಟಿಗಳಿರುವುದರಿಂದ ಪಶುಪಾಲಕರು ಒಂದೆಡೆ ನೆಲೆನಿಂತು ಕೃಷಿಕರಾಗಿರುವುದರಿಂದ ಊರುಗಳ ಪ್ರಭಾವ ಹಟ್ಟಿಗಳ ಮೇಲಾಗಿ ಊರಮ್ಮ ಹಟ್ಟಿಗಳಿಗೆ ಪ್ರವೇಶಿಸುತ್ತಿದ್ದಾಳೆ. ಪಶುಪಾಲಕರಲ್ಲಿ ಕೃಷಿಯ ಪ್ರವೇಶವಾದಂತೆ ಮೂಲಕೃಷಿಕರ ದೇವತೆಗಳೂ, ವಿಧಿಯಾಚರಣೆಗಳು ಪ್ರವೇಶಿಸಿದವು"(ಜಾತ್ರೆಗಳು, ಪುಟ.೧೧೦). ಮೂಲ ಕೃಷಿಕರ ಗ್ರಾಮದೇವತೆ ಮತ್ತು ಕೃಷಿಯ ಪ್ರಭಾವ ಪಶುಪಾಲಕರ ಮೇಲಾಗಿ ಅದನ್ನು ಅನುಸರಿಸಿರುವುದನ್ನು ಇಲ್ಲಿ ಕಾಣಬಹುದಾಗಿದೆ.

ಮೂಲಕೃಷಿಕರ ಪ್ರಭಾವ ಹಂತಹಂತವಾಗಿ ಕುಗ್ಗಿ ಪಶುಪಾಲಕರ ಮೇಲೆ ವೈದಿಕರ ಪ್ರಭಾವ ಹೆಚ್ಚಾಗಿ, ವೈದಿಕರ ಆಗಮನದಿಂದ ಮೂಲಕೃಷಿಕರು ಪಣಕಟ್ಟಿನ ಮೂಲಕ ಪಣವ್ಯಾಜ್ಯದಲ್ಲಿ ವೈದಿಕರನ್ನು ವಿರೋಧಿಸುತ್ತಲೇ ಬಂದಿದ್ದರು. ವೈದಿಕರ ಒಡೆದು ಆಳುವ ನೀತಿಯಿಂದ ಮತ್ತು ಆ ಕಾಲದ ಕದಂಬರಾಜರು ಬ್ರಾಹ್ಮಣರಿಗೆ ಆಶ್ರಯ ನೀಡಿ ಅವರನ್ನು ಬೆನ್ನುಕಾಯ್ದಿದ್ದರಿಂದ ಪಣಕಟ್ಟಿನ ವ್ಯಾಜ್ಯದಲ್ಲಿ ಮೂಲಕೃಷಿಕರು ತಮ್ಮ ಶಕ್ತಿ ಕುಂದಿದರು. ವೈದಿಕರ ಪರವಾಗಿದ್ದ ಪಶುಪಾಲಕರು ಮೂಲಕೃಷಿಕರ ಕೃಷಿ ವೃತ್ತಿ ಮತ್ತು ಅವರ ಊರಮ್ಮ(ಕಬ್ಬಾಳಮ್ಮ)ನನ್ನು ತಮ್ಮದೇ ದೇವರೆಂದು ಮಾಡಿಕೊಂಡು ಅದನ್ನು ಆಚರಣೆ ಮಾಡುತ್ತಾ ಬಂದಿರಬೇಕು. ಆದರೂ ಪಣವ್ಯಾಜ್ಯದಲ್ಲಿ ಮೂಲಕೃಷಿಕರಿಗೆ ಸೋಲಾದರೂ ಚರಿತ್ರೆಯಲ್ಲಿ ಅವರ ಮೂಲ ಅಮ್ಮ ಗ್ರಾಮದೇವತೆ ಕಬ್ಬಾಳಮ್ಮನ ಪಾತ್ರವನ್ನು ಅವಳ ಶಕ್ತಿಯನ್ನು ಕಳೆಗುಂದಿಸಲು ಚರಿತ್ರೆಗೆ ಕೊನೆಗೂ ಸಾಧ್ಯವಾಗಲಿಲ್ಲ.

೩. ಭೀಮೇಶ್ವರ ಮತ್ತು ಬಸವೇಶ್ವರ

ಕಬ್ಬಾಳುದುರ್ಗದ ಒಡೆಯ ಭೀಮೇಶ್ವರ. ಬೆಟ್ಟದ ಮೇಲೆ ಇಂದಿಗೂ ಒಂದು ಚಿಕ್ಕ ಗುಡಿಯಿದೆ.

ಅದು ಭೀಮೇಶ್ವರನ ದೇವಸ್ಥಾನ ಎಂದೇ ಕರೆಯುತ್ತಾರೆ. ಈ ದೇವಸ್ಥಾನ ಚಿಕ್ಕದಾಗಿದ್ದು ಇದರ ಗೋಡೆಯು ಸಣ್ಣ ಸಣ್ಣ ಇಟ್ಟಿಗೆಗಳಿಂದ ಕೂಡಿದ್ದರು, ಅದು ದೇವಸ್ಥಾನದ ಹಿಂದೆ ಮಾತ್ರ. ಬಹುಭಾಗಗೋಡೆ ಕಲ್ಲಿನ ಚಪ್ಪಡಿಗಳಿಂದಲೇ ನಿರ್ಮಿತವಾಗಿದೆ. ದೇವಸ್ಥಾನದ ಮೇಲುಭಾಗದ ಹೊದಿಕೆ ಕಲ್ಲಿನ ಚಪ್ಪಡಿಗಳಿಂದಲೇ ಅಂದರೆ ಹಾಸುಕಲ್ಲಿನಲ್ಲಿ ಕಟ್ಟಿದ್ದಾರೆ. ಹಿಂದಿನಿಂದ ಅರ್ಧಭಾಗ ಗರ್ಭಗುಡಿ ಮುಂದಿನ ಅರ್ಧಭಾಗ ಪ್ರಾಂಗಣ ಅಷ್ಟೇ ಇದೆ. ಗರ್ಭಗುಡಿಯಲ್ಲಿ ಶಿವಲಿಂಗ ಇದೆ. ಕಬ್ಬಾಳಮ್ಮನ ಪಾದ ಇದೆ.

ಜನಪದರ ಐತಿಹ್ಯದ ಹಿನ್ನೆಲೆಯ ಕಥೆಯಲ್ಲಿ ಕಬ್ಬಾಳಮ್ಮ ತಮಿಳು ನಾಡಿನಿಂದ ಬಂದು ನೆಲೆನಿಲ್ಲಲು ಸ್ಥಳವನ್ನು ನೋಡುತ್ತಿದ್ದಾಗ ಕಬ್ಬಾಳು ದುರ್ಗ ಕಣ್ಣಿಗೆ ಬಿತ್ತಂತೆ. ಕೇವಲ ಮೂರೇ ಹೆಜ್ಜೆಗೆ ಬೆಟ್ಟವನ್ನು ಹತ್ತಿದಳಂತೆ. ಶಿವಪಾರ್ವತಿಯರ ವರಪ್ರಸಾದದಿಂದ ಜನಿಸಿದವಳಾದ್ದರಿಂದ ಕಬ್ಬಾಳಮ್ಮನ ಮಹಾತ್ಮೆಯನ್ನು ಪರಿಚಯಿಸುವ ಸಲುವಾಗಿ 'ಭೀಮೇಶ್ವರ'ನಾಗಿ ಅವಳ ಮುಂದೆ ಪ್ರತ್ಯಕ್ಷನಾದನಂತೆ(ಕೆಲವು ಐತಿಹ್ಯಗಳಲ್ಲಿ ಭೀಮೇಶ್ವರ, ಹೆಬ್ಬೆಟ್ಟುರಾಯ, ಬಸವೇಶ್ವರ ಎಲ್ಲರೂ ಕಬ್ಬಾಳಮ್ಮನ ಅಣ್ಣಂದಿರಾಗಿ ಬರುತ್ತಾರೆ). ಈ ದುರ್ಗವನ್ನು ಯಾರ ಅಪ್ಪಣೆ ಇಲ್ಲದೇ ಪ್ರವೇಶಿಸಿದ್ದರಿಂದ ನನ್ನನ್ನು ಪಗಡೆಯಾಟದಲ್ಲಿ ಗೆಲ್ಲದೇ ಹಿಂತಿರುಗುವಂತಿಲ್ಲ ಎಂದಾಗ ಶುಭದಿನವನ್ನು ಗೊತ್ತುಮಾಡಿ ಭೀಮೇಶ್ವರ ತನ್ನ ಜೊತೆಯಲ್ಲಿ ಹೆಬ್ಬೆಟ್ಟರಾಯಪ್ಪ ಮತ್ತು ಕಂಬದರಾಯನನ್ನು ಕರೆದುಕೊಂಡು ಬಾಳೆಕಟ್ಟೆಯ ಹತ್ತಿರ ಬಂದರಂತೆ. ಈ ಕಡೆ ಕಬ್ಬಾಳಮ್ಮನು ತನ್ನ ಅಣ್ಣಂದಿರಾದ ಬಸವ ಮತ್ತು ಭೈರವನನ್ನು ಜೊತೆಗೆ ಕರೆದುಕೊಂಡು ಬಂದಳಂತೆ. ಆಗ ಇವರಿಬ್ಬರ ನಡುವೆ ಒಪ್ಪಂದವಾಗಿ ಜೂಜಿನಲ್ಲಿ ನೀನು ಗೆದ್ದರೆ ದುರ್ಗವನ್ನು ಬಿಟ್ಟು ಕೊಡುತ್ತೇನೆ. ಮತ್ತು ಕೋಟೆ ಬಾಗಿಲಿನ ಕಾವಲು ಮಾಡುತ್ತೇನೆ. ಆಕಸ್ಮಾತ್ ನೀನು ಸೋತರೆ ನಮ್ಮ ಗಡಿಯನ್ನೇ ಬಿಟ್ಟು ತಲೆಮರೆಸಿಕೊಂಡು ಹೋಗಬೇಕು ಎಂದು ಹೇಳಿದಾಗ ಕಬ್ಬಾಳಮ್ಮ ಒಪ್ಪಿ ಆಟಕ್ಕೆ ಇಳಿದಳಂತೆ.

ಕಬ್ಬಾಳಮ್ಮ ಮೂರನೇ ಸುತ್ತಿಗಿಳಿದಾಗ ಪರಶಿವನು ಭಕ್ತೆಯ ಗೆಲುವಿಗೆ ಸಂತೈಸುತ್ತಾನೆ. ಕಡೆಗೂ ಕಬ್ಬಾಳಮ್ಮನು ಪಗಡೆಯಾಟದಲ್ಲಿ ಗೆಲವನ್ನು ಸಾಧಿಸೇ ತೀರುತ್ತಾಳೆ. ಒಪ್ಪಂದದ ಪ್ರಕಾರ ಭೀಮೇಶ್ವರ ದುರ್ಗವನ್ನು ಬಿಟ್ಟುಕೊಟ್ಟು ಕೋಟೆಬಾಗಿಲಿನ ಕಾವಲುಗಾರನಾಗಿ ಕೆಲಸ ನಿರ್ವಹಿಸುತ್ತಾನೆ. ಇದರಿಂದ ಈತನನ್ನು "ಕೋಟೇಶ್ವರ" ಎಂದು ಕರೆಯುತ್ತಾರೆ. ಅಣ್ಣಂದಿರಾದ ಬಸವ ಮತ್ತು ಭೈರವನನ್ನು ಬಸವೇಶ್ವರ ಎಂಬ ಹೆಸರುಗಳಿಂದ ಪ್ರಸಿದ್ಧಿಯಾಗುತ್ತೀರೆಂದು ಆಶೀರ್ವಾದ ಮಾಡಿದಳಂತೆ. ತನ್ನ ದಿವ್ಯ ತೇಜಸ್ಸಿನಿಂದ ಇಪ್ಪತ್ತ ನಾಲ್ಕು ಹಳ್ಳಿಗಳನ್ನು ತನ್ನ ವಶಕ್ಕೆ ತೆಗೆದುಕೊಂಡಳಂತೆ. ಯಾವುದಾದರೂ ನ್ಯಾಯ ತೀರ್ಮಾನ ಮಾಡಲು ಹೋದಾಗ ಪರಶಿವನ 'ದಿವ್ಯಮಣಿ'ಯನ್ನು ತನ್ನಮಡಿಲಲ್ಲಿಟ್ಟುಕೊಂಡು ಗೆಲುವನ್ನು ಮತ್ತು ನ್ಯಾಯವನ್ನು ಮಾಡುತ್ತಿದ್ದಳಂತೆ.

ಬಸವೇಶ್ವರ ಕಬ್ಬಾಳಿನಲ್ಲಿ ಇರುವ ಮತ್ತೊಂದು ದೇವಾಲಯವಾಗಿದೆ. ಇದು ಕಬ್ಬಾಳಮ್ಮನ ಗುಡಿಯ ಎಡಭಾಗದಲ್ಲಿ ಕೆಲವೇ ಹೆಜ್ಜೆಗಳ ದೂರದಲ್ಲಿ ಇದೆ. ಇದು ಇತ್ತೀಚಿನ ವರ್ಷಗಳಲ್ಲಿ ಕಟ್ಟಿರುವ ದೇವಾಲಯವಾಗಿದೆ. ಕಲ್ಲಿನಿಂದ ಕೆತ್ತಿರುವ ಬಸವನ ಮೂರ್ತಿ ಇದೆ. ಇದು ಒಂದಿಬ್ಬರಷ್ಟೇ ಒಳಹೋಗಲು ಮಾತ್ರವಷ್ಟೇ ಜಾಗವಿದ್ದು, ಒಳಗೆ ಹೋಗಲು ತಲೆಬಗ್ಗಿಸಿಯೇ ಹೋಗಬೇಕು. ಇದರ ಪಕ್ಕದಲ್ಲಿಯೇ

ಇತ್ತೀಚಿನ ದಿನಗಳಲ್ಲಿ ಸ್ಥಾಪಿಸಿರುವ ಸಿಮೆಂಟಿನಿಂದ ಮಾಡಿದ ದೊಡ್ಡದಾದ ಬಸವನ ಮೂರ್ತಿ ಇದೆ ಮತ್ತು ಕಬ್ಬಾಳಮ್ಮನಿಗೆ ಬಿಟ್ಟಿರುವ ಜೀವಂತ ಬಸವನು ಇಲ್ಲಿದೆ. ಭಕ್ತರು ತಮ್ಮ ಮನದ ಆಸೆಗಳನ್ನು ಈಡೇರಿಸಲಿ ಎಂದು ಬಸವನಿಗೆ ಅಡ್ಡಲಾಗಿ ಮಲಗುತ್ತಾರೆ. ಬಸವ ಅವರನ್ನು ದಾಟಿಕೊಂಡು ಹೋಗುತ್ತದೆ. ದಾಟಿಕೊಂಡು ಹೋದರೆ ಅವರ ಮನದಾಸೆ ಈಡೇರುತ್ತದೆ. ಮತ್ತು ಅವರಿಗಿದ್ದ ಕಷ್ಟಗಳೆಲ್ಲ ಪರಿಹಾರವಾಗುತ್ತದೆ ಎಂಬ ನಂಬಿಕೆ ಜನರಲ್ಲಿದೆ. ಒಂದು ವೇಳೆ ದಾಟದೇ ಹೋದರೆ ಅವರ ಕಷ್ಟ ಪರಿಹಾರವಾಗುವುದಿಲ್ಲ ಅವರು ನಿಷ್ಠೆಯಿಂದ ನಡೆದುಕೊಂಡಿಲ್ಲ ಎಂದು ನಂಬುತ್ತಾರೆ.

ಕಬ್ಬಾಳಮ್ಮ ಜಾತ್ರೆಯಲ್ಲಿ ಕೊಂಡಹಾಯುವಾಗ ಹೊಳೆ ಮೆಟ್ಟಿಸಿಕೊಂಡು ಬಂದು ಬಸವೇಶ್ವರನ ದೇವಾಲಯದ ಹತ್ತಿರ ಹೋಗಿ ತೀರ್ಥಹಾಕಿಸಿಕೊಂಡು ಬಂದನಂತರವೇ ಕೊಂಡಹಾಯುವುದು. ಇಲ್ಲಿ ಬಸವೇಶ್ವರ ಮತ್ತು ಕಬ್ಬಾಳಮ್ಮನ ಸಂಬಂಧಗಳನ್ನು ಬೆಸೆಯುವ ಸಂದರ್ಭವಾಗಿದೆ.

ಇಲ್ಲಿಯು ನಮಗೆ ಬಹುಮುಖ್ಯವಾಗಿ ತಿಳಿದು ಬರುವುದು ಮೂಲಕೃಷಿಕರು ಮತ್ತು ವಲಸೆಗಾರ ಪಶುಪಾಲಕರ ನಡುವಿನ ಸಂಘರ್ಷ ಮತ್ತು ಸಮ್ಮಿಲನವಾಗಿದೆ. ಮೂಲಕೃಷಿಕರು ಕೋಣಗಳನ್ನು ತಮ್ಮ ಕೃಷಿಗಳಲ್ಲಿ ಬಳಸುತ್ತಿದ್ದುದು ಮತ್ತು ಪಶುಪಾಲಕರು ಹೋರಿ, ಎತ್ತುಗಳನ್ನು ಉಳುಮೆಯಲ್ಲಿ ಕೋಣಗಳ ಬದಲಿಗೆ ಬಳಸುವುದನ್ನು ಕಾಣಬಹುದು. ಅದರ ಪ್ರತೀಕವೇ ಇಂದು ಹಲವು ಕಡೆ ಬಸವನ ವಿಗ್ರಹ ದೇವಸ್ಥಾನಗಳು ಇವೆ. ಜಾತ್ರೆಯಲ್ಲಿ ಕೋಣನ ಬಲಿಕೊಡುವುದು ಕೂಡ ಮೂಲ ಕೃಷಿಕರನ್ನು ತುಳಿಯುವ ಪ್ರತೀಕವಾಗಿದೆ. ಭೀಮೇಶ್ವರ, ಬಸವೇಶ್ವರ, ಹೆಬ್ಬೆಟ್ಟುರಾಯ, ಕಂಬದರಾಯ ಇವು ಪಶುಪಾಲಕ ವಲಸಿಗ ದ್ರಾವಿಡರ ಪಿತೃಪ್ರಧಾನ ಸಂಸ್ಕೃತಿಯ ಪ್ರತೀಕವಾಗಿವೆ. ಕಬ್ಬಾಳಮ್ಮನ ಜಾತ್ರೆಗೆ ಹದಿನೈದು ದಿನಗಳ ಮುಂಚೆ ನಡೆಯುವ ದನಗಳ ಜಾತ್ರೆಯು ಇದೇ ಹಿನ್ನೆಲೆಯಿಂದ ಕೂಡಿದೆ.

ಅಧ್ಯಾಯ ೫

ಕಬ್ಬಾಳು ಗ್ರಾಮದ ಜನಪದ ಸಾಹಿತ್ಯ

೫.೧. ಜನಪದ ಕಥೆಗಳು

೫.೨. ಜನಪದ ಗೀತೆಗಳು

೫.೩. ಜನಪದ ಗಾದೆಗಳು

೫.೪. ಜನಪದ ಒಗಟುಗಳು

ಅಧ್ಯಾಯ ೫

ಕಬ್ಬಾಳು ಗ್ರಾಮದ ಜನಪದ ಸಾಹಿತ್ಯ

ಜಾನಪದದಲ್ಲಿ ಬಹುಮುಖ್ಯವಾದ ಪ್ರಕಾರ ಜನಪದ ಸಾಹಿತ್ಯ. ಜಾನಪದ ಪ್ರಕಾರಗಳ ಅಧ್ಯಯನ ಪ್ರಾರಂಭವಾಗುವ ಮೊದಲೇ ಜನಪದ ಸಾಹಿತ್ಯ ಬಳಕೆಗೆ ಬಂದಿತ್ತು. ಜನಪದ ಸಾಹಿತ್ಯವೇ ಜಾನಪದ ಅಧ್ಯಯನಕ್ಕೆ ನಾಂದಿ ಎನ್ನಬಹುದು. ಪ್ರಪಂಚದಲ್ಲೆಡೆ ಜನಪದ ಸಾಹಿತ್ಯ ಜನರ ಆಸಕ್ತಿಯನ್ನು ಸೆಳೆದಿದೆ. ಒಂದು ಸಂಸ್ಕೃತಿಯ ಸಮೃದ್ಧ ಅಂಗ ಅಂದರೆ ಸಾಹಿತ್ಯ. ಈ ಸಾಹಿತ್ಯ ಜನಪದರ ಬದುಕಿನ ಅವಿಭಾಜ್ಯ ಅಂಗ. ಮನುಷ್ಯನ ಅಂತರಂಗದ ಅಭಿವ್ಯಕ್ತಿಯ ಸಾಕಾರರೂಪ ಸಾಹಿತ್ಯ. ಜನಪದ ಸಾಹಿತ್ಯ ಕಾಯಕದೊಡನೆ ಸೃಷ್ಟಿಯಾಗಿದ್ದು ಜನಪದರ ಬದುಕಿನಲ್ಲಿ ಬೆಸೆದುಕೊಂಡಿದೆ. ಇದು ಕೃತಕವಾಗಿ ಬಲವಂತವಾಗಿ ಕಟ್ಟಿದ್ದಲ್ಲ, ಪರಿಸರ ಪ್ರಭಾವದಿಂದ ಸಹಜವಾಗಿಯೇ ಹುಟ್ಟಿದ್ದು.

ನಮ್ಮ ಹಳ್ಳಿಗಳ ಸಂಸ್ಕೃತಿಯು ಒಡಮೂಡಿದ್ದು ಪಂಡಿತ ಕಾವ್ಯಗಳಿಂದಲ್ಲ, ಶಿಲಾಶಾಸನ ಶಿಲ್ಪಕಲೆಯಿಂದಲ್ಲ, ನಿಜವಾದ ಸಂಸ್ಕೃತಿ ಹಳ್ಳಿಗರ ಹಾಡಲ್ಲಿ, ಜನಪದ ಸಾಹಿತ್ಯದಲ್ಲಿ ಒಡಮೂಡಿದ್ದು, "ಜನಪದ ಸಾಹಿತ್ಯವು ನಿರಾಡಂಬರ ಸುಂದರಿ" ಎಂಬ ಗದ್ದಗಿಮಠ ಅವರ ಮಾತು ಸಮರ್ಪಕವಾಗಿದೆ.

ಜನಪದ ಸಾಹಿತ್ಯ ಅಗಾಧವಾದ ಒಂದು ಸಾಗರವಿದ್ದಂತೆ. ಸಾವಿರಾರು ವರ್ಷಗಳ ಜೀವಂತ ಅನುಭವಗಳು ಈ ಸಾಹಿತ್ಯದಲ್ಲಿ ವ್ಯಕ್ತವಾಗಿವೆ. ಈ ಸಾಹಿತ್ಯ ಪ್ರಕಾರಗಳಲ್ಲಿ ಕಲಾತ್ಮಕತೆ, ಸಾಮಾಜಿಕತೆ, ಭಾಷಿಕ, ಇತಿಹಾಸ, ಚಾರಿತ್ರಿಕ ದಾಖಲೆ, ಮನೋವೈಜ್ಞಾನಿಕತೆ ಇತ್ಯಾದಿ ಅಂಶಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಜನಪದ ಸಾಹಿತ್ಯದ ಉಗಮ ಸಮಷ್ಟಿ ಪ್ರಜ್ಞೆಯಲ್ಲಿದೆ. ಸಮಷ್ಟಿ ಮನೋಧರ್ಮದಲ್ಲಿ ಎಲ್ಲಿಯತನಕ ಸಮಷ್ಟಿ ಪ್ರಜ್ಞೆ ಜನಪದರಲ್ಲಿ ಪ್ರಧಾನವಾಗಿರುತ್ತೋ ಅಲ್ಲಿಯತನಕ ಜನಪದ ಸಾಹಿತ್ಯ ಜೀವನದಿಯಾಗಿ ಹರಿದು ಬರುತ್ತದೆ.

ಜನಪದ ಸಾಹಿತ್ಯ ಹೆಸರಿಲ್ಲದ ಹೆಸರೊಲ್ಲದ ತಮ್ಮ ರಚನೆಯ ಮಹತ್ವವನ್ನು ತಾವೇ ಅರಿಯದ ಮುಗ್ಧ ಜನತೆಯ ಸೊತ್ತು. ಸರಳತೆ, ಮುಗ್ಧತೆ ಮತ್ತು ಪ್ರಕೃತಿ ಸಾಮ್ಯತೆ ಅದರ ಪ್ರಧಾನ ಗುಣಗಳು. ಈ ಸಾಹಿತ್ಯಿಕ ರಚನಾ ಪ್ರವೃತ್ತಿ ಹಕ್ಕಿಯ ಹಾಡಿನಂತೆ ಸಹಜ ಮತ್ತು ಸರಳ. ನೆಲದಲ್ಲಿ ಹಸಿರು ಮೂಡುವಷ್ಟು, ಮೋಡದಲ್ಲಿ ಹನಿಯೊಡೆಯುವಷ್ಟು, ಗಿಡದಲ್ಲಿ ಹೂ ಅರಳುವಷ್ಟು ಸಹಜವಾಗಿ ಒಡಮೂಡುತ್ತದೆ. ವ್ಯಷ್ಟಿ,

ಪ್ರಜ್ಞೆಗಿಂತ ಸಮಷ್ಟಿ ಪ್ರಜ್ಞೆಗೆ, ವ್ಯಕ್ತಿ ಮೌಲ್ಯಗಳಿಗಿಂತ ಸಾಮಾಜಿಕ ಮೌಲ್ಯಗಳಿಗೆ ಜನಪದ ಸಾಹಿತ್ಯದಲ್ಲಿ ಪ್ರಾಧಾನ್ಯತೆಯಿದೆ. ಜನಪದ ಸಾಹಿತ್ಯದ ಸೃಷ್ಟಿಕರ್ತರು ಅನಕ್ಷರಸ್ಥ ಸಮುದಾಯವೆಂಬುದು ಅಕ್ಷರಶಃ ಸತ್ಯ. ಅವರ ದೃಷ್ಟಿಯ ವೈವಿಧ್ಯತೆ ಬೆರಗುಗೊಳಿಸುವಂತಿದೆ. ಕೆಲವು ವಿದ್ವಾಂಸರು ಭಾರತದಂತಹ ದೇಶದಲ್ಲಿ ರಾಮಾಯಣ, ಮಹಾಭಾರತಗಳಿಗೆ ಜನಪದ ಸಾಹಿತ್ಯವೇ ಪ್ರೇರಣೆ ನೀಡಿದೆ ಎಂದು ಹೇಳುತ್ತಾರೆ. ಸಂಸ್ಕೃತಿಯ ಸಾರ ರೂಪವಾದ ಜನಪದ ಸಾಹಿತ್ಯವು ಒಂದು ದೇಶದ ಬಹುಸಂಖ್ಯಾತರ ಆಶೋತ್ತರಗಳ ಪ್ರತೀಕವಾಗಿರುತ್ತದೆ. ಜನಸಂಸ್ಕೃತಿಯ ಅಂತರಾಳದಲ್ಲಿ ಅವುಗಳ ಬೇರುಗಳಿರುತ್ತವೆ. ಕಂಠಸ್ಥ ಸಂಪ್ರದಾಯದಲ್ಲಿ ಬೆಳೆದು ಬಂದು ಸದಾ ಜೀವಂತಿಕೆಯನ್ನು ಉಳಿಸಿಕೊಂಡಿರುತ್ತದೆ.

ಮನುಷ್ಯನ ಹುಟ್ಟಿದಂದಿನಿಂದ ಅವನ ಹುಟ್ಟಿನ ಜೊತೆಗೆ ತಾನೂ ಹುಟ್ಟಿ ಅವಿಭಾಜ್ಯ ಅಂಗವಾಗಿ ಬೆಳೆದು ಬಂದಿರುವಂಥದ್ದು ಜನಪದ ಸಾಹಿತ್ಯ. ಮನುಷ್ಯನು ಬೆಳೆದಂತೆಲ್ಲ ಅನಕ್ಷರಸ್ಥನ ಪರಿಧಿಯಲ್ಲೇ ಉಳಿದು ರಕ್ಷಣೆಗಾಗಿ ಪರಂಪರೆಯಿಂದ ಬಾಯಿಂದ ಬಾಯಿಗೆ ಕಿವಿಯಿಂದ ಕಿವಿಗೆ ಹರಿದು ಪರಾಕಾಷ್ಠತೆಯನ್ನು ಏರುವಂಥದ್ದು. ಜಾನಪದದ ಒಂದು ಪ್ರಕಾರವಾದ ಜನಪದ ಸಾಹಿತ್ಯದ ಪ್ರಾಚೀನತೆ ಮಾನವನಷ್ಟೇ ಪ್ರಾಚೀನವಾಗಿದೆ. ಶಿಷ್ಟ ಸಾಹಿತ್ಯ ಕವಿ ಮತ್ತು ಕಾವ್ಯದ ಸೂತ್ರಗಳ ನೆರವಿನಿಂದ ಶುದ್ಧ ಸಾಹಿತ್ಯವಾಗಿ ಜನಪದ ಸಾಹಿತ್ಯಕ್ಕಿಂತ ಭಿನ್ನವಾಗಿ ಬೆಳೆದು ಬಂದ ನಂತರದ ಸಾಹಿತ್ಯ. ಆದರೆ ಶಿಷ್ಟ ಸಾಹಿತ್ಯ ಏಕಮಾತ್ರ ಸಾಹಿತ್ಯವಾಗಿ ಸಾಹಿತ್ಯ ಚರಿತ್ರೆಯನ್ನು ರೂಪಿಸಿಕೊಂಡು ಅಕ್ಷರ ಲೋಕವನ್ನು ವ್ಯಾಪಿಸಿದ ಅನೇಕ ವರ್ಷಗಳ ಬಳಿಕ ಜನಪದ ಸಾಹಿತ್ಯದ ಕಡೆಗೆ ನೋಟವನ್ನು ಹರಿಸಲಾಯಿತು. ಪಾಶ್ಚಾತ್ಯರ ಪ್ರೇರಣೆಯನ್ನು ಪಡೆದ ಭಾರತೀಯರು ಜನಪದ ಸಾಹಿತ್ಯದ ಕಡೆಗೆ ಗಮನಹರಿಸಿ ಕಳೆದ ೫೦ ವರ್ಷಗಳಿಂದೀಚೆಗೆ ಸಂಗ್ರಹಣೆ ವಿವರಣೆ, ವಿಶ್ಲೇಷಣೆಗಳು ಮತ್ತು ವ್ಯಾಖ್ಯಾನಗಳು ಹಾಗೂ ಹಲವು ಸಿದ್ಧಾಂತಗಳು ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹೊರಬಂದಿವೆ. ಮಾನವ ಸಮಾಜ ಸಂಸ್ಕೃತಿಗಳನ್ನು ನಿರ್ವಹಿಸುವ ಕ್ರಿಯಾಭಿವ್ಯಕ್ತಿಯಾಗಿ ಮೂಡಿ ಬಂದಿದೆಯಾದುದರಿಂದ ಹಲವು ರೀತಿಯ ಜೀವನ ದರ್ಶನಗಳು ಜನಪದ ಸಾಹಿತ್ಯದಿಂದ ಒದಗಿ ಬರುತ್ತವೆ. ಈ ಕಾರಣದಿಂದಲೇ 'ಜನವಾಣಿ ಬೇರು ಕವಿವಾಣಿ ಹೂವು' ಎಂಬ ಮಾತುಗಳು ವ್ಯಕ್ತವಾಗಿರುವುದು. ಜನಪದ ಸಾಹಿತ್ಯ ಕೇವಲ ಪ್ರಾದೇಶಿಕ ವೈವಿಧ್ಯವಾಗಿ ಬೆಳೆದು ಬಂದಿಲ್ಲ. ಅಲ್ಲಿನ ಪರಿಸರ, ಬದುಕು, ವೃತ್ತಿ, ಭಾಷೆ, ಸಂಸ್ಕೃತಿ ಮುಂತಾದವುಗಳ ಕಾರಣವಾಗಿ ವಿಶಿಷ್ಟತೆಯಿಂದ ಮೂಡಿಬಂದಿದೆ.

ಪ್ರಸ್ತುತ ಕಬ್ಬಾಳು ಗ್ರಾಮ ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ವ್ಯಾಪ್ತಿಯ ದಕ್ಷಿಣ ಕರ್ನಾಟಕ ವ್ಯಾಪ್ತಿಗೆ ಸೇರಿರುವಂತದ್ದು. ಇಲ್ಲಿನ ಜನಪದ ಸಾಹಿತ್ಯ ಪ್ರಕಾರಗಳು ದಕ್ಷಿಣ ಕರ್ನಾಟಕ ವಲಯದ ಜನಪದ ಸಾಹಿತ್ಯದ ಲಕ್ಷಣಗಳನ್ನು ಹೋಲುತ್ತವೆಯಾದರೂ ಇಲ್ಲಿನ ಜಾನಪದ ಪರಿಸರ ಕೆಲವು ವೈಶಿಷ್ಟ್ಯತೆಗಳನ್ನು ಒಳಗೊಂಡಿದೆ.

ಉತ್ತರ ಕರ್ನಾಟಕದ ಕೆಲವು ಗಡಿ ಪ್ರದೇಶಗಳು ಮಹಾರಾಷ್ಟ್ರ, ಆಂಧ್ರಪ್ರದೇಶಗಳ ಗಡಿಭಾಗಹೊಂದಿದ್ದು ಅಲ್ಲಿನ ಭಾಷೆ ಜನಪದ ಕಲೆ ಸಾಹಿತ್ಯದ ಮೇಲೆ ಪ್ರಭಾವಬೀರಿ ದ್ವಿಭಾಷಾ ಪರಿಸರಕ್ಕೆ ಕಾರಣವಾಗಿದೆ. ಆದರೆ ಪ್ರಸ್ತುತ ಕಬ್ಬಾಳು ಗ್ರಾಮವನ್ನೊಳಗೊಂಡ ಕನಕಪುರ ತಾಲ್ಲೂಕು ತಮಿಳುನಾಡು ಗಡಿಪ್ರದೇಶವನ್ನು ಹೊಂದಿದ್ದರೂ ಅಲ್ಲಿನ ಭಾಷೆಯ ಪ್ರಭಾವ ಈ ಪ್ರದೇಶದ ಮೇಲೆ ಆಗಿಲ್ಲ. ಇದಕ್ಕೆ ಬಹುಮುಖ್ಯ ಕಾರಣ

ಕಾವೇರಿ ನದಿ ಈ ಪ್ರದೇಶಗಳ ಗಡಿಯಲ್ಲಿ ಹರಿದು ಬೇರ್ಪಡಿಸುತ್ತದೆ. ಹಾಗೆಯೇ ದಟ್ಟವಾದ ಪಶ್ಚಿಮಘಟ್ಟಗಳ ಅರಣ್ಯ ಪ್ರದೇಶ. ಈ ಎರಡೂ ಗಡಿಗಳ ಮಧ್ಯೆ ನೂರಾರು ಕಿ.ಮೀ.ಗಳ ವ್ಯಾಪ್ತಿಯಲ್ಲಿ ವಿಸ್ತಾರವಾಗಿ ಹಬ್ಬಿರುವುದರಿಂದ ಈ ಎರಡೂ ಪ್ರದೇಶಗಳ ಜನರ ಸಂಪರ್ಕವಿಲ್ಲದೆ ಪ್ರಸ್ತುತ ಕಬ್ಬಾಳು ಗ್ರಾಮ ಕನ್ನಡ ಭಾಷೆಯನ್ನು ಹೊಂದಿರುವ ಏಕೈಕ ಗಡಿ ಪ್ರದೇಶವಾಗಿದೆ ಎಂದೇ ಹೇಳಬಹುದು. ಆದರೂ ಕೂಡ ಕಬ್ಬಾಳು ಗ್ರಾಮದ ಗ್ರಾಮದೇವತೆ ತಮಿಳುನಾಡಿನಿಂದ ಬಂದು ನೆಲೆಸಿರುವ ಐತಿಹ್ಯ, ಪುರಾಣ, ಮಾಹಿತಿಗಳು ಜನಪದರ ಹಾಡು, ಕಥೆಯಿಂದಲೇ ತಿಳಿದುಬರುತ್ತದೆ.

ಜನಪದ ಸಾಹಿತ್ಯದ ಪ್ರತಿಯೊಂದು ಪ್ರಕಾರವನ್ನು ಕುರಿತು ಅಧ್ಯಯನ ಮಾಡುವುದು ಪ್ರಬಂಧದ ಉದ್ದೇಶವಲ್ಲ, ಸಂಸ್ಕೃತಿಯ ಸಂದರ್ಭದಲ್ಲಿ ಇಲ್ಲಿನ ಜನ ಜೀವನದಲ್ಲಿ ಅದು ಸಮ್ಮಿಳಿತಗೊಂಡಿರುವ ಬಗೆಯನ್ನು, ಪ್ರಾದೇಶಿಕವಾಗಿ ವೈಶಿಷ್ಟ್ಯತೆಯನ್ನು ಗುರುತಿಸುವ ಉದ್ದೇಶದಿಂದ ಕೆಲವು ಮಾದರಿಗಳನ್ನು ನೋಡುವುದು ಅವಶ್ಯಕ. ಆದ್ದರಿಂದ ಕಬ್ಬಾಳು ಗ್ರಾಮದ ಪರಿಸರದಲ್ಲಿ ಕಥೆ, ಗಾದೆ, ಒಗಟುಗಳನ್ನು ಸಂಗ್ರಹಿಸಿ ಅವುಗಳಲ್ಲಿ ಕಂಡುಬರುವ ವೈಶಿಷ್ಟ್ಯಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗುತ್ತಿದೆ.

ಯಾವುದೇ ಜನಾಂಗದ ಸಂಸ್ಕೃತಿಯನ್ನು ಅರಿಯಬೇಕಾದರೆ ಅಲ್ಲಿನ ಸಾಹಿತ್ಯವನ್ನು ಗಮನಿಸುವುದು ಬಹುಮುಖ್ಯ. ಏಕೆಂದರೆ ಅಂದಿನ ಜನತೆಯ ಅಂತರಾಳದಲ್ಲಿ ಜೀವನ ಸಾಹಿತ್ಯ ಬಿಂಬಿತವಾಗಿರುತ್ತದೆ. ಆದುದರಿಂದ ರಾಮಾಯಣ ಮಹಾಭಾರತಗಳಂಥ ಕಾವ್ಯಗಳು ಭಾರತೀಯ ಸಂಸ್ಕೃತಿಯನ್ನು ಪ್ರಾಚೀನ ಕಾಲದಿಂದಲೂ ಪ್ರತಿನಿಧಿಸುತ್ತಾ ಬಂದಿವೆ. ಹೀಗೆಯೇ ಸಂಸ್ಕೃತ ಭಾಷೆಯಲ್ಲೂ ಇತರ ಭಾರತೀಯ ಭಾಷೆಗಳಲ್ಲೂ ರಚಿತವಾಗಿರುವ ಅನೇಕ ಕಾವ್ಯಗಳಲ್ಲಿ ನಮ್ಮ ದೇಶದ ಸಂಸ್ಕೃತಿಯ ಚಿತ್ರಣವನ್ನು ನೋಡಬಹುದು. ಆದರೆ, ಇಂತಹ ಕಾವ್ಯಗಳು ಬಹುಪಾಲು ರಾಜಾಶ್ರಯದಲ್ಲಿದ್ದ ಪಂಡಿತ ಕವಿಗಳಿಂದ ರಚಿತವಾಗಿರುವುದರಿಂದ ಅವು ಜನ ಜೀವನದಿಂದ ದೂರವಾಗಿದ್ದವು. ಈ ಕಾರಣದಿಂದ "ಪ್ರೌಢ ಕಾವ್ಯಗಳಲ್ಲಿ ಜನತೆಯ ಸಂಸ್ಕೃತಿ ಸ್ಪಷ್ಟವಾಗಿ ಗೋಚರಿಸುತ್ತಿರಲಿಲ್ಲ. ಆದುದರಿಂದ ಸಾಮಾನ್ಯರು ಸೃಷ್ಟಿಸಿರುವ ಜನಪದ ಸಾಹಿತ್ಯದ ಕಡೆಗೆ ಕಣ್ಣು ಹೊರಳಿಸಬೇಕಾಗುತ್ತದೆ. ಅಲ್ಲಿ ನಮಗೆ ಜನ ಜೀವನದ ಉಸಿರಿನ ಸ್ಪಂದನ ಕಂಡುಬರುತ್ತದೆ. ಜನಪದರ ಸಂಸ್ಕೃತಿಯ ಪರಿಚಯವಾಗುತ್ತದೆ"(ಜೀ.ಶಂ.ಪರಮಶಿವಯ್ಯ, ಜನಪದ ಕಾವ್ಯಕತೆಗಳು, ಪುಟ.೩೯).

ಜನಪದ ಸಾಹಿತ್ಯ ಮುಖ್ಯವಾಗಿ ನಾಲ್ಕು ಚಿಂತನ ಬೇರುಗಳ ಮೇಲೆ ನಿಂತಿದೆ. ಕಥೆ, ಗೀತೆ, ಗಾದೆ ಮತ್ತು ಒಗಟು ಇವೇ ಆ ಬೇರುಗಳು. ಒಂದು ಭಾವ ಪ್ರಧಾನ ಇನ್ನೊಂದು ಕಲ್ಪನಾ ಪ್ರಧಾನ ಮತ್ತೊಂದು ತತ್ವಪ್ರಧಾನ, ಮಗದೊಂದು ಚಿಂತನ ಮತ್ತು ಚಾತುರ್ಯಪ್ರಧಾನ. ಅಂದರೆ ಒಂದರ ಅಂಶ ಮತ್ತೊಂದರಲ್ಲಿ ಶುದ್ಧಾಂಗವಾಗಿ ಇಲ್ಲವೆಂದಲ್ಲ. ಒಂದೊಂದಕ್ಕೂ ಹತ್ತಿರದ ಗಂಟು ನಂಟುಗಳಿವೆ. ಆದರೂ ಗೀತೆ, ಕಥೆ, ಗಾದೆ ಮತ್ತು ಒಗಟುಗಳಿಗೆ ಇರುವ ಸಂಬಂಧ ತುಂಬ ನಿಕಟವಾದದ್ದು. ಗೀತೆ ಕಥೆಯಾಗಿ ಹಬ್ಬಬಹುದು, ಕಥೆ ಗೀತೆಯಾಗಿ ಅರಳಬಹುದು. ಹಾಗೆಯೆ ಗಾದೆ ತನ್ನ ವಾಚ್ಯತೆಯನ್ನು ಕಳೆದುಕೊಂಡು ಒಗಟಾಗಬಹುದು. ಒಗಟು ತನ್ನ ನಿಗೂಢತೆಯನ್ನು ಕೂಡಿ ಹಿಡಿದುಕೊಂಡು ಗಾದೆಯಾಗಬಹುದು. ಅಂತೂ ಇವೆಲ್ಲ ಒಂದೇ ತಾಯಿಯ ಮಕ್ಕಳು. ಇವು ಜಾನಪದ ಪ್ರತಿಭೆ ಮತ್ತು ಜನಪದ ಭಾಷೆಯ ಮಧುರ ದಾಂಪತ್ಯದ ವಿವಿಧ ಹಂತದ ನಾಲ್ಕು ಫಲಗಳು.

೫.೧. ಜನಪದ ಕಥೆಗಳು

ಜನಪದ ಸಾಹಿತ್ಯದ ಬಹುಮುಖ್ಯ ಪ್ರಕಾರ ಜನಪದ ಕಥೆಗಳು. ನಮ್ಮ ಸಮಾಜದಷ್ಟೇ ಪ್ರಾಚೀನತೆಯನ್ನು ಪಡೆದುಕೊಂಡಿರುವ ಈ ಕಥೆಗಳನ್ನು ಹೇಳುವ ಮತ್ತು ಕೇಳುವ ಕ್ರಿಯೆ ಯಾವುದೊಂದು ಪ್ರದೇಶ ಮತ್ತು ಕಾಲಕ್ಕೆ ಸೀಮಿತವಾಗಿಲ್ಲ. ಎಲ್ಲಾ ಕಾಲಕ್ಕೂ ಪ್ರಪಂಚದ ಎಲ್ಲಾ ಭಾಗಗಳಿಗೂ ಅದು ಹರಡಿರುವಂಥದ್ದು. ಜಗತ್ತಿನಾದ್ಯಂತ ಜನಪದ ಕಥೆಗಳಲ್ಲಿ ಕಂಡುಬರುತ್ತದೆ. ಪ್ರದೇಶದಿಂದ ಪ್ರದೇಶಕ್ಕೆ ಕಥೆಯಲ್ಲಿ ಕಂಡುಬರುವ ವ್ಯತ್ಯಾಸಗಳು ಜನಪದ ಕಥೆಯ ವಿಶಿಷ್ಟ ಲಕ್ಷಣವಾಗಿದೆ.

ಈ ಹಿನ್ನಲೆಯಲ್ಲಿ ಪ್ರಸ್ತುತ ಪ್ರದೇಶದಲ್ಲಿ ಹರಿದಾಡುತ್ತಿರುವಂತ ಜನಪದ ಕಥೆಗಳನ್ನು ನೋಡಿದಾಗ ವಿವಿಧ ಮುಖಗಳು ಅನಾವರಣಗೊಳ್ಳುತ್ತವೆ. “ಮಾನವ ಹೇಗೆ ಬದುಕಬೇಕು, ಲೋಕದಲ್ಲಿ ಅವನು ಹೇಗೆ ವರ್ತಿಸಬೇಕು ಎಂಬ ರೀತಿಯ ಶಿಕ್ಷಣಾತ್ಮಕ ದೃಷ್ಟಿ ಅಲ್ಲಿನ ಬಹುಪಾಲು ಕಥೆಗಳಲ್ಲಿ ಕಂಡುಬರುತ್ತದೆ. ಇವು ಆಯಾ ಜನಾಂಗದ ಸಂಸ್ಕೃತಿಯನ್ನು ರೂಪಿಸುವ ನೀತಿಪ್ರಧಾನ ಕಥೆಗಳೆಂದರೂ ಆಗುತ್ತದೆ”(ಜೀ.ಶಂ.ಪ. ಪ್ರಸ್ತಾವನೆ, ಕನ್ನಡ ಜನಪದ ಕಥೆಗಳು, ಪುಟ.೪೫). ಇಲ್ಲಿನ ಕಥೆಗಳು ವಸ್ತು, ಜೀವನದೃಷ್ಟಿ, ಪರಿಸರ, ಸಾಹಸ, ಬುದ್ಧಿಶೀಲತೆ, ತಂತ್ರಗಾರಿಕೆ, ಲೋಕನೀತಿ, ರೂಪಾಂತರನೀತಿ ಮುಂತಾದ ವೈವಿದ್ಯಮಯ ಕ್ಷೇತ್ರಗಳನ್ನು ಒಳಗೊಂಡಿವೆ. ಈ ಕಥೆಗಳ ವೈವಿಧ್ಯತೆ, ಅನನ್ಯತೆ, ವ್ಯಾಪಕತೆ ಹಾಗೂ ವಿಶಿಷ್ಟತೆಗಳು ಅಧ್ಯಯನಕ್ಕೆ ಪ್ರೇರಣೆಯನ್ನು ಒದಗಿಸುತ್ತವೆ. ಜನಪದ ಕಥೆಗಳನ್ನು ಹೇಳುವ ಮತ್ತು ಕೇಳುವ ಪರಿಪಾಠವಿದೆ. ಇದೊಂದು ಪ್ರಜ್ಞಾಪೂರ್ವಕ ಮನರಂಜನಾಕಲೆ. ಧಾರ್ಮಿಕವಾಗಿ ಕಥೆಗಳು ಕೆಲವೊಮ್ಮೆ ಪಾತ್ರವಹಿಸಿದರೂ ಅಪ್ಪಟ ಮನರಂಜನೆಯೇ ಇದರ ಮುಖ್ಯ ಉದ್ದೇಶ. ಇಲ್ಲಿನ ಕಥೆಗಳು ವಯಸ್ಸಿನ ಸ್ಥಾನದ ಪರಿವೇ ಇಲ್ಲದೆ ಎಲ್ಲರಿಗೂ ಕುತೂಹಲ ಕೆರಳಿಸುವ ಸಾಧನಗಳಾಗಿವೆ.

ಜನಪದ ಕಥೆ ಜನಪದರ ಬದುಕಿನ ಸಾಂಪ್ರದಾಯಿಕ ಕಥೆ. ಇದು ಜನಪದ ಪರಂಪರೆಯ ಪೂರ್ವಕಾಲೀನ ಸಮಕಾಲೀನ ಮತ್ತು ಸಾರ್ವತ್ರಿಕ ಅಂಶಗಳಿಂದ ರಚನೆಗೊಂಡದ್ದು, ಜನಪದ ಕಥೆ ಒಟ್ಟು ಜನತೆಯಲ್ಲಿ ಇದ್ದದ್ದು. ಸದಾ ಪುನರಾಭಿವ್ಯಕ್ತಿಗೆ ಸಹ್ಯವಾಗಿರುವಂತದ್ದು. ಜನಪದ ಕಥೆ ಏಕಮುಖ ಸೃಷ್ಟಿಗೆ ಬದ್ಧವಾದುದಲ್ಲ. ವಕ್ತೃ ಪ್ರೇಕ್ಷಕರ ಮಧ್ಯೆ ನಡೆಯುವ ಒಂದು ಸಾಮಾಜಿಕ ಸಾಂಪ್ರದಾಯಿಕ ಕಲೆಗಾರಿಕೆ.

ಕಬ್ಬಾಳು ಪ್ರದೇಶದಲ್ಲಿ ದೊರೆತಿರುವ ಕಥೆಗಳು ಡಾ.ಜಿ.ಶಂ.ಪ.ಅವರ ವರ್ಗೀಕರಣದಲ್ಲಿ ಬರುವಂತಹ ಅತಿಮಾನುಷ ಪತ್ನಿಯರು, ಅತಿಮಾನುಷ ಪತಿಗಳು, ರಮ್ಯ, ಅದ್ಭುತ, ಬುದ್ಧಿವಂತಿಕೆಯ, ಹಾಸ್ಯ ಪ್ರಧಾನವಾದ, ಪ್ರಾಣಿಕಥೆಗಳು ಹೀಗೆ ಎಲ್ಲಾ ಪ್ರಕಾರದ ಕಥೆಗಳು ಇಲ್ಲಿ ದೊರೆತಿವೆ. ಈ ಪ್ರದೇಶದಲ್ಲಿ ಕಥೆಗಳು ಹೆಚ್ಚಾಗಿ ಮಹಿಳೆಯರಿಂದಲೇ ಹೇಳಲ್ಪಡುತ್ತವೆ. ಈ ಕಥೆಗಳಲ್ಲಿ ಮಹಿಳೆಯರ ಸಾಮಾಜಿಕ ಸ್ಥಾನಮಾನಗಳನ್ನು ಗುರುತಿಸಬಹುದು. ಬದುಕಿನ ವಿನೋದ, ಹಾಸ್ಯ, ಆಧ್ಯಾತ್ಮ, ಕುಟುಂಬ, ಮದುವೆ, ದುರಂತ, ಸಾಹಸ, ಕಷ್ಟಪರಂಪರೆಗಳು ಇತ್ಯಾದಿ ಸಂಗತಿಗಳನ್ನು ಈ ಕಥೆಗಳು ಒಳಗೊಂಡಿವೆ. ಲಾಲನೆ, ಪಾಲನೆ, ಮಾತೃತ್ವ, ಸಾಹಸ, ರಕ್ಷಣೆ ಇತ್ಯಾದಿ ಗುಣಗಳನ್ನು ಹೊಂದಿರುವ ಇಲ್ಲಿನ ಕಥೆಗಳನ್ನು ಸ್ತ್ರೀಕೇಂದ್ರಿತ ಹಾಗೂ ಪುರುಷ ಕೇಂದ್ರಿತ ಕಥೆಗಳು ಎಂದು ವಿಭಾಗಿಸಬಹುದು.

ಸ್ತ್ರೀ ಕೇಂದ್ರಿತ ಕಥೆಗಳಲ್ಲಿ ಕಥೆಯು ಯಾವ ಸಂದರ್ಭದಿಂದ ಪ್ರಾರಂಭವಾಗುತ್ತದೆ, ಎಲ್ಲಿ ಮುಕ್ತಾಯವಾಗುತ್ತದೆ ಮತ್ತು ಅಲ್ಲಿನ ಕಥಾವಸ್ತು ಹೇಗಿರುತ್ತದೆ. ಪುರುಷಕೇಂದ್ರಿತ ಕಥೆಗಳಲ್ಲಿ ಹೇಗಿರುತ್ತದೆ. ಜನಪದರಲ್ಲಿ ಸ್ತ್ರೀಗೆ ಸಿಕ್ಕಿರುವ ಸ್ಥಾನಮಾನ ಯಾವುದು. ಅಂದಿನ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ ಹೇಗಿತ್ತು. ಮಹಿಳೆ ಇಲ್ಲಿನ ಕಥೆಗಳಲ್ಲಿ ನಾಯಕಿಯಾಗಿ, ಒಬ್ಬ ತಾಯಿಯಾಗಿ, ಸೊಸೆಯಾಗಿ ಹಾಗೂ ಮಗಳಾಗಿ ಯಾವ ರೀತಿ ಚಿತ್ರಣಗೊಂಡಿದ್ದಾಳೆ ಎಂಬುದನ್ನು ತಿಳಿಯಲು ಆಧಾರವಾಗಿವೆ. ಒಟ್ಟಾರೆ ಮಹಿಳೆಯ ಜೀವನದ ಎಲ್ಲಾ ಮಜಲುಗಳನ್ನು ತಿಳಿಸುವ ಕನ್ನಡಿಗಳಂತಿವೆ.

ಪ್ರಸ್ತುತ ಕಥೆಗಳಲ್ಲಿ ಪ್ರಾದೇಶಿಕ ರೂಪ, ಭಾಷೆ, ಆಚರಣೆಗಳು, ನಡೆ, ನುಡಿಗೆ ಸಂಬಂಧಿಸಿದಂತೆ ವಿಶೇಷವಾಗಿ ಅಭಿವ್ಯಕ್ತವಾಗಿವೆ. ದೊರೆಕತೆಯಲ್ಲಿ ರಾಜನು ತನ್ನ ಏಳು ಜನ ಹೆಣ್ಣುಮಕ್ಕಳಿಗೆ ಮದುವೆಮಾಡಿ ಅವರು ಗರ್ಭಿಣಿಯರಾದಾಗ ಎಲ್ಲರಿಗೂ ಸೀಮಂತಮಾಡಿ ಅವರ ಇಷ್ಟವಾದ ತಿಂಡಿ ತಿನಿಸುಗಳನ್ನು ಮಾಡಿ ತಿನ್ನಿಸುವುದು, ಮತ್ತು ಕೊನೆಯ ಮಗಳ ಮಗ ಕಾಡಿನಿಂದ ಬಂದು ಮನೆ ಮನೆ ಭಿಕ್ಷೆ ಎತ್ತುವುದು, ಈ ಪ್ರದೇಶದಲ್ಲಿ ಹಬ್ಬ-ಹರಿದಿನಗಳಲ್ಲಿ ಶ್ರಾವಣದ ಸಂದರ್ಭದಲ್ಲಿ ದಾಸಯ್ಯನ ಒಕ್ಕಲಿನವರು ಇಂದೂ ಕೂಡ ಶ್ರಾವಣಶನಿವಾರ ಸ್ನಾನ, ಮಡಿ ಮಾಡಿ ನಾಲ್ಕುಮನೆಯಾದರೂ ಭಿಕ್ಷೆ ಮಾಡಬೇಕು. ನಂತರ ಪೂಜೆ ಪುನಸ್ಕಾರಗಳನ್ನು ಮಾಡುತ್ತಾರೆ.

ಹೀಗೆ ಕಥೆಗಳು ಆಯಾ ಪ್ರದೇಶದ ಅಂದಂದಿನ ಸಂಸ್ಕೃತಿ ಪ್ರತೀಕಗಳಾಗಿವೆ. ಸಮಾಜದ ಎಲ್ಲವರ್ಗದ ಜನರನ್ನು ಇಲ್ಲಿ ಪಾತ್ರಗಳಾಗಿಸಿರುವುದು ಜನಪದ ಕಥೆಗಳ ವೈಶಿಷ್ಟ್ಯವಾಗಿದೆ. ಅತ್ತೆ-ಸೊಸೆ, ವಾರ್‌ಗಿತ್ತಿಯರು, ಅತ್ತಿಗೆ-ನಾದಿನಿ, ಅಣ್ಣ-ತಂಗಿ, ಅಣ್ಣ-ತಮ್ಮ, ಗೆಳೆಯ-ಗೆಳತಿ, ಒಡೆಯ-ಆಳು, ಸೈನಿಕರು ಮುಂತಾದ ಸಾಮಾಜಿಕ ಪಾತ್ರಗಳು ಈ ಕಥೆಗಳಲ್ಲಿ ಚಿತ್ರಣಗೊಂಡಿವೆ. ಅದೇ ರೀತಿ ರಾಕ್ಷಸ, ದೆವ್ವ, ಸಾಧು, ಸಂನ್ಯಾಸಿ, ರಾಜ, ಮಂತ್ರಿ ಹೀಗೆ ಮೊದಲಾದ ಪಾತ್ರಗಳನ್ನು ಗಮನಿಸಬಹುದು.

ದೈನಂದಿನ ಜೀವನದಲ್ಲಿ ಮಾನವನು ಅನುಭವಿಸುತ್ತಾ ಬಂದಿರುವ ಸುಖ-ದುಃಖ, ಅಳು-ನಗು, ಕಷ್ಟ, ತಾಪತ್ರೆ, ಅಸಹನೆ, ಪ್ರೀತಿ, ವಾತ್ಸಲ್ಯ, ಕೋಪ, ದ್ವೇಷ, ಅಪಾಯ ಇವುಗಳಿಂದ ಪಾರಾಗುವ ಬಗೆಯು ಈ ಕಥೆಗಳಲ್ಲಿ ಅಭಿವ್ಯಕ್ತಗೊಂಡಿವೆ. ಇದರಿಂದ ಹಾಸ್ಯ, ಶೋಕ, ಭಯ, ಅದ್ಭುತ, ವೀರ, ಶೃಂಗಾರ ರಸಗಳು ಈ ಕಥೆಗಳಲ್ಲಿ ಹಾಸುಹೊಕ್ಕಾಗಿವೆ.

ಈ ಕಥೆಗಳು ಪ್ರಾರಂಭವಾಗುವುದೇ ಒಂದು ಕುತೂಹಲಕಾರಿಯಾದ ಸಂಗತಿ. ಒಂದೂರಲಿ ಒಬ್ಬ ದೊರೆ ಇದ್ದ, ಒಂದು ಪಟ್ಟಣದಲ್ಲಿ ಒಬ್ಬ ದೊರೆ ಇರ್‍ತಾನೆ. ಆ ದೊರೆಗೆ, ಒಂದೂರಲಿ ಒಬ್ಬ ರಾಜ, ಒಂದೂರಲಿ ಒಬ್ಬ ಬ್ರಾಹ್ಮಣ ಇದ್ದ, ಹೀಗೆ ಪ್ರಾರಂಭವಾಗುವ ಕಥೆಗಳಲ್ಲಿ ಇಂತಹ ಹಲವಾರು ವಾಕ್ಯಗಳನ್ನು ಕಥೆ ಹೇಳುವವರು ಸಾಮಾನ್ಯವಾಗಿ ಬಳಸುವುದು ವಾಡಿಕೆ. ರಾಜ ಮಹಾರಾಜರ ಕಥೆಗಳು ಹಿಂದಿನ ಕಾಲದ ರಾಜರ ಪ್ರಭಾವವನ್ನು ಬಿಂಬಿಸುತ್ತದೆ. ಜನಪದ ಕಥೆಗಳು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದ್ದವು ಎಂಬುದಕ್ಕೆ ಇವು ನಿದರ್ಶನವಾಗಿವೆ.

ಸಾಮಾನ್ಯವಾಗಿ ಜನಪದ ಕಥೆಗಳಲ್ಲಿ ಊರು ವ್ಯಕ್ತಿಗಳಿಗೆ ಹೆಸರಿರುವುದಿಲ್ಲ. ಇದ್ದರು ಅವು ಕಾಲ್ಪನಿಕವಾಗಿರುತ್ತವೆ. ಒಂದೂರಲಿ ಒಬ್ಬ ಅಜ್ಜಿ ಇದ್ದಳು. ಒಂದೂರೆಲಿ ಒಬ್ಬ ರಾಜ ಇದ್ದ ಹೀಗೆ

ಸಾಮೂಹಿಕವಾಗಿ ಸಾಮಾನ್ಯವಾಗಿರುತ್ತದೆ. ಪ್ರಸ್ತುತ ಪರಿಸರದ ಕಥೆಗಳಲ್ಲಿ ಶ್ರೀಸಾಮಾನ್ಯರು ಕಥಾ ನಾಯಕರಾಗಿರುವುದು ಮತ್ತೊಂದು ವೈಶಿಷ್ಟ್ಯ. ಒಂದೂರಲಿ ಇಬ್ರು ವಾರ್‌ಗಿತ್ತಿರಿದ್ರು. ಒಂದೂರಲಿ ಒಬ್ಬ ದಾಸಯ್ಯ ಇದ್ದ. ಒಂದೂರಲಿ ಒಬ್ಬ ಬಡವ ಇದ್ದ. ಒಬ್ಬ ಬ್ರಾಹ್ಮಣ ಇದ್ದ ಹೀಗೆ ರಾಜಮಹಾರಾಜರಷ್ಟೇ ಸ್ಥಾನಮಾನ ಶ್ರೀಸಾಮಾನ್ಯರಿಗೂ ದೊರಕುವುದು ಇಲ್ಲಿನ ಮತ್ತೊಂದು ವೈಶಿಷ್ಟ್ಯ.

ಸಾಮಾಜಿಕ ಕಳಕಳಿ ಹಾಗೂ ತುಡಿತವನ್ನು ಅನಾವರಣಗೊಳಿಸುವುದು ಜನಪದ ಕಥೆಗಳ ವಿಶೇಷ. ಈ ಕಥೆಗಳನ್ನು ನಾಡಿನ ಇತರ ಕಥೆಗಳ ಜೊತೆ ತಾಳೆಹಿಡಿದು ನೋಡಿದಾಗ ಅವುಗಳಲ್ಲಿ ಕಾಣುವ ಸಾದೃಶ್ಯಗಳು ಓದುಗರನ್ನು ಚಕಿತಗೊಳಿಸುತ್ತವೆ. ಬೇರೆ ಬೇರೆ ಭೌಗೋಳಿಕ ಪರಿಸರದಲ್ಲಿ ಭಿನ್ನ ಭಿನ್ನ ನಾಗರೀಕತೆಗಳ ಹಿನ್ನಲೆಯಲ್ಲಿ ಹುಟ್ಟಿಕೊಂಡಿರುವ ಕಥೆಗಳಲ್ಲಿ ಪ್ರತಿಬಿಂಬಿತವಾಗುವ ಮನೋಧರ್ಮ ಒಂದೇ ಎಂಬುದು ಸ್ಪಷ್ಟವಾಗುತ್ತದೆ. ಒಂದೇ ಬಗೆಯ ಕಥಾವರ್ಗಗಳು ಒಂದೇ ತೆರನಾದ ಆಶಯಗಳು ಸಮಾವೇಶಗೊಂಡಿರುವುದು ಸೋಜಿಗದ ಸಂಗತಿಯಾಗಿದೆ. ಅವುಗಳ ವ್ಯವಸ್ಥಿತವಾದ ಅಧ್ಯಯನದಿಂದ ಮಾನವನ ಮೂಲ ಸ್ವರೂಪವನ್ನು ತಿಳಿಯಬಹುದು.

ಇಲ್ಲಿ ದೇವಮಾನವರು ಮತ್ತು ರಾಕ್ಷಸರು ಹಾಗೂ ಮಾನವರ ನಡುವೆ ಯಾವುದೇ ಅಂತರವಿರದೆ ನೇರ ಸಂಬಂಧಗಳನ್ನು ಕಟ್ಟಿಕೊಟ್ಟಿದೆ. ಆದರೆ ಶಿಷ್ಟ ಕತೆಗಳಲ್ಲಿ ಇವರ ನಡುವೆ ಅಂತರವಿರುವುದನ್ನು ಕಾಣುತ್ತೇವೆ. ಇಲ್ಲಿ ದುಷ್ಟ ಶಕ್ತಿಗಳು ಎಂದು ಕರೆಯಲಾಗುವ ರಾಕ್ಷಸರು ಮಂತ್ರಿ ಕುಮಾರನಿಗೆ ಸಹಾಯಮಾಡಿ ದುಷ್ಟ ಶಕ್ತಿಗಳಲ್ಲಿಯು ಒಳ್ಳೆಯ ಮಾನವೀಯತೆ ಇರುತ್ತದೆ, ಹುಟ್ಟಿನಿಂದ ಯಾರೂ ದುಷ್ಟರಲ್ಲ ಎಂಬ ಅಂಶವನ್ನು ಈ ಕತೆಗಳಲ್ಲಿ ತಿಳಿಯಬಹುದು.

ಇಲ್ಲಿ ಮಾನವಪಾತ್ರ ಮತ್ತು ಪ್ರಾಣಿಪಾತ್ರಗಳು ಬೆರೆತು ಬರುವುದು ಬಹುಪಾಲು ಕಥೆಗಳಲ್ಲಿ ಇದೆ. 'ಚಿಕ್ಕೊನ್ನಿ ದೊಡ್ಡನ್ನಿ' ಎಂಬ ಕತೆಯಲ್ಲಿ ನಾಯಿ ಹಾಗು ಮನುಷ್ಯರ ಸಂಬಂಧವನ್ನು ಕಾಣಬಹುದು. ನಾಯಿಯ ಹೊಟ್ಟೆಯಲ್ಲಿ ಮಕ್ಕಳು ಹುಟ್ಟುವುದು, ರಾಜನ ಹೆಂಡತಿಯ ಹೊಟ್ಟೆಯಲ್ಲಿ ನಾಯಿ ಮರಿಗಳು ಹುಟ್ಟುವುದನ್ನು ಕಾಣಬಹುದು. ಪ್ರಾಣಿಪಾತ್ರಗಳ ಪ್ರಾಮುಖ್ಯತೆಯನ್ನು ಗಮನಿಸಿ ಪ್ರಾಣಿಗಳಲ್ಲಿ ನರಿ, ಹುಲಿ, ಕಾಗೆ, ಗೂಬೆ, ಕಾಡಕ್ಕಿ, ಸ್ವಾರಕ್ಕಿ ಮುಂತಾದವುಗಳ ಪಾತ್ರ ಕಾಣಬಹುದು.

ಬಾಳೆಯತೋಟ ಕಾಯುವ ಹುಡುಗನನ್ನು ಹೆದರಿಸಿ ಅವನಿಂದ ಬಾಳೆಹಣ್ಣು ತಿನ್ನುವುದು, ಆ ಹುಡುಗನ ತಂದೆಯಿಂದ ಹಾರೆಯಿಂದ ತಿವಿಸಿಕೊಂಡು 'ಕುಂಯ್ಯಾಂ' ಎಂದು ಓಡಿಹೋಗುವುದು ನರಿಯ ಸಂಕಷ್ಟವನ್ನು ತಿಳಿಸುತ್ತದೆ. ಗುಳ್ಳೇನರಿ ಕೇವಲ ಪ್ರಾಣಿಗಳಿಗೆ ಮೋಸಮಾಡುವುದಿಲ್ಲ. ಮನುಷ್ಯರಿಗೂ ಮೋಸಮಾಡುತ್ತದೆ. ಇಲ್ಲಿ ಪ್ರಾಣಿ ಮತ್ತು ಮನುಷ್ಯರ ಸಂಬಂಧವನ್ನು ತಿಳಿಸುವುದು ಪ್ರಾಣಿಕತೆಗಳಲ್ಲಿ ಮೂಡಿಬಂದಿದೆ.

ಪಕ್ಷಿ ವಿಷಯಕ್ಕೆ ಸಂಬಂಧಿಸಿದ ಕಥೆಗಳಲ್ಲಿ 'ಕಾಗಕ್ಕ ಗುಬ್ಬಕ್ಕ'ನ ಕಥೆ ಹೆಚ್ಚು ಜನಪ್ರಿಯವಾದುದು. ಮಾನವ ಪಾತ್ರಗಳಾವುವು ಈ ಕಥೆಯಲ್ಲಿ ಸುಳಿಯದಿರುವುದು ಗಮನಾರ್ಹವಾಗಿದ್ದರೂ ಮಾನವರ ಪಾತ್ರಗಳನ್ನೇ ಈ ಪಕ್ಷಿಗಳು ಮಾಡುತ್ತವೆ. ಸಂತೆಗೆ ಹೋಗುವುದು, ಅಡುಗೆ ಮಾಡುವುದನ್ನು ಮಾಡುತ್ತವೆ. ಕಾಗಕ್ಕ

ಮತ್ತು ಗುಬ್ಬಕ್ಕ ಇಬ್ಬರು ಸ್ನೇಹಿತರಾಗಿದ್ದು ಇವು ಜೊತೆ ಜೊತೆಯಲ್ಲೇ ಎಲ್ಲಾ ಕೆಲಸಗಳಿಗೆ ಹೋಗುವುದು, ಬರುವುದು, ಸಂತೆಗೆ ಹೋಗುವುದು ಮತ್ತು ಮನುಷ್ಯರಂತೆ ಇವುಗಳಿಗೆ ಸಂಸಾರದ ಹೊಣೆಗಾಕೆ ಇದೆ. ಮನುಷ್ಯರಂತೆ ಸಂಭಾಷಣೆ, ಮಾತಿನ ವೈಖರಿ ಈ ಕಥೆಯಲ್ಲಿನ ವೈಶಿಷ್ಟ್ಯವಾಗಿದೆ. ಕಾಗಕ್ಕನ ತೊಪ್ಪೆಯ ಮನೆ ಮಳೆಯಲ್ಲಿ ಕೊಚ್ಚಿ ಹೋಗಿ ಗುಬ್ಬಕ್ಕನ ಮನೆಯಲ್ಲಿ ಆಶ್ರಯ ಪಡೆದು ಅಲ್ಲಿದ್ದ ಬೆಲ್ಲವನ್ನೆಲ್ಲಾ ತಿಂದು ಅಲ್ಲೇ ಉಚ್ಚೆ ಹೋಗುವುದು ಕಥೆಯನ್ನು ಕೇಳುವವರಲ್ಲಿ ನಗೆಯನ್ನು ತರುತ್ತದೆ. ಆದರೂ ಪಕ್ಷಿಗಳಲ್ಲಿನ ಸಂಬಂಧ ಸಹಾಯ ಸಹಕಾರಗಳು ಮನುಷ್ಯರನ್ನು ನಾಚಿಸುವಂತೆ ಮಾಡುತ್ತವೆ. ಈ ಮೂಲಕ ಮಾನವರಿಗೆ ನೀತಿಗಳನ್ನು ಹೇಳುವ ಪರಿಪಾಠ ಇಲ್ಲಿನ ಕಥೆಗಳ ವೈಶಿಷ್ಟ್ಯವಾಗಿದೆ.

ಪ್ರಸ್ತುತ ಕಥೆಗಳು ಈ ಪ್ರದೇಶದ ಇಲ್ಲಿನ ಜನರ ಸಾಂಸ್ಕೃತಿಕ ಇತಿಹಾಸದ ಮುಖಗಳನ್ನು ಪರಿಚಯಿಸುವ ಬಹುಮುಖ್ಯವಾದ ಭಾಗವಾಗಿ ಕಾಣಿಸಿಕೊಳ್ಳುತ್ತವೆ. ಇವುಗಳು ಒಂದು ಕಲಾತ್ಮಕ ಸೃಷ್ಟಿಯಲ್ಲಿ ಆಗಿವೆ. ಮನುಷ್ಯನ ಸಮಸ್ತ ಬೌದ್ಧಿಕ ಮತ್ತು ರಸಾನುಭವದ ತಿಳುವಳಿಕೆಯನ್ನು ನೀಡುತ್ತವೆ. ಇಲ್ಲಿ ಅದ್ಭುತವಾದ ರಂಜಕತೆಯೇ ಇವುಗಳ ವಿಶಿಷ್ಟತೆಯಾಗಿದೆ. ಅಲ್ಲಿನ ಪರಿಸರ, ಗ್ರಾಮಗಳು ಅದರ ಸೊಗಸು, ನಾಟಕೀಯತೆ ಅದರ ಉಸಿರು, ಕೆಲವು ಕಥೆಗಳಲ್ಲಿ ಪ್ರಮುಖ ಘಟನಾವಳಿಗಳ, ವಿವೇಕ ಬುದ್ಧಿವಂತಿಕೆಗಳ ಪ್ರತಿನಿಧಿಗಳು ಈ ಕಥೆಯಲ್ಲಿ ಕಾಣುತ್ತವೆ. ಕಥೆಗಳಲ್ಲಿ ವಸ್ತುವಿನ ದೃಷ್ಟಿಯಿಂದ ಕೆಲವು ಕಾಲ್ಪನಿಕ ಮತ್ತೆ ಕೆಲವು ಸಾಮಾಜಿಕತೆಯಿಂದ ಕೂಡಿದ್ದವಾಗಿವೆ. ಇಂದಿಗೂ ಸಮಾಜದ ಎಲ್ಲ ವಯಸ್ಸಿನವರಿಗೂ ಮನರಂಜನೆಯನ್ನು ನೀಡುವ ಪ್ರಮುಖವಾದ ಪ್ರಕಾರಗಳಾಗಿವೆ. ಈ ಕಥೆಗಳಿಂದ ಕೇಳುವವನಿಗಾಗುವ ಕಲಾನುಭವದ ಪರಿಣಾಮವೂ, ಜ್ಞಾನಸಾಧನೆಯ ಸಂಕೇತವೂ ಆಗಿರುವುದನ್ನು ಕಾಣುತ್ತೇವೆ.

ಇಲ್ಲಿನ ಕಥೆಗಳು ಹಲವಾರು ಆಶಯಗಳಿಂದ ರಚಿತವಾಗಿರುವುದರಿಂದ ಇವುಗಳ ನಿರೂಪಣೆ ಕೆಲವು ಕಥೆಗಳಲ್ಲಿ ಸಾಕಷ್ಟು ದೀರ್ಘವಾಗಿಯೂ ಮತ್ತೆ ಕೆಲವೆಡೆ ಮಿತವಾಗಿಯೂ ನಿರೂಪಿತವಾಗಿವೆ. ಈ ಕಥೆಗಳ ಆರಂಭದಲ್ಲಿ ಮತ್ತು ಅಂತ್ಯದಲ್ಲಿ ವಾಸ್ತವಿಕ ನೆಲೆಯನ್ನು ಗುರುತಿಸಬಹುದಾದರೂ ಇಡೀ ಕಥೆ ಅದ್ಭುತ ಕಲ್ಪನೆಗಳಿಂದ ಕೂಡಿರುತ್ತದೆ. ಕುಂಟನ ಕಥೆಯಲ್ಲಿ ಕಥೆ ಆರಂಭವು ಒಂದೂರಿನಲ್ಲಿ ಒಬ್ಬ ರೈತ ಇದ್ದ. ಅವನಿಗೆ ಐದುಜನ ಗಂಡ್ಮಕ್ಕಳು, ಒಬ್ಬಳೆ ಹೆಣ್ಣುಮಗಳು, ಐದು ಜನ ಗಂಡುಮಕ್ಕಳಲ್ಲಿ ಕೊನೆಯವನು ಕುಂಟ. ಅವನನ್ನು ಕಂಡರೆ ಮನೆಯಲ್ಲಿ ಅಣ್ಣಂದಿರು, ತಂದೆ-ತಾಯಿ ಯಾರಿಗೂ ಆಗುತ್ತಿರಲಿಲ್ಲ. ತಂಗಿಗೆ ಮಾತ್ರ ಕುಂಟಣ್ಣನ ಮೇಲೆ ಬಹಳ ಪ್ರೀತಿ. ಅವನೂ ತಂಗಿಯನ್ನು ತುಂಬ ಪ್ರೀತಿಸುತ್ತಿದ್ದ ಇದು ಇಂದಿಗೂ ಕೂಡ ನಮ್ಮ ಸಮಾಜದ ಹಲವಾರು ಕುಟುಂಬಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಒಬ್ಬ ವ್ಯಕ್ತಿಯು ದೈಹಿಕವಾಗಿ ಊನವಾಗಿದ್ದಾಗ ಸಮಾಜದಲ್ಲಿ ಯಾವ ರೀತಿ ಅವಹೇಳನಕ್ಕೆ ಒಳಗಾಗುತ್ತಾನೆ ಎಂಬುದನ್ನು ಈ ಕಥೆ ಹೇಳುತ್ತದೆ. ಮತ್ತು ಕಥೆಯ ಅಂತ್ಯದಲ್ಲಿ ಬಲಹೀನ ಚಿಕ್ಕವಯಸ್ಸಿನವರೇ ಗೆಲ್ಲುವುದನ್ನು ಕಾಣಬಹುದು. ಇದು ಜನಪದ ಕಥೆಯ ಪ್ರಮುಖ ಲಕ್ಷಣಗಳಲ್ಲಿ ಒಂದು.

ಈ ಕಥೆಯನ್ನು ಅದ್ಭುತವಾದ ಕಲ್ಪನೆಯೊಂದಿಗೆ ಹೆಣೆದಿರುವುದನ್ನು ಕಾಣುತ್ತೇವೆ. ಅಣ್ಣ-ತಂಗಿಯರ ಮಧ್ಯೆ ರಾಕ್ಷಸ ಎದುರಾಗುವುದು. ತಂಗಿಯನ್ನು ಮತ್ತು ರಾಕ್ಷಸನನ್ನು ಎದುರಿಸಲು ಹೋಗುವ ದಾರಿಯಲ್ಲೇ

ಅನೇಕ ವಸ್ತುಗಳನ್ನು ಜೊತೆಗೆ ತೆಗೆದುಕೊಂಡು ಹೋಗುವುದು. (ಕತ್ತಿ, ಕಡಜ, ಹಲುಬೆ, ಪಾನಿ ಮುಂತಾದ) ಕಥೆಯು ಮುಂದಾಲೋಚನೆಯ ಸಂಕೇತವಾಗಿದೆ. ರಾಕ್ಷಸನನ್ನು ದೊಡ್ಡದೇಹದವನೆಂದು ಕಲ್ಪಿಸಿಕೊಂಡಿರುವುದು, ಅದರ ಸರಿಸಮಾನವಾಗಿ ರಾಕ್ಷಸನನ್ನು ಎದುರಿಸಲು ವಸ್ತುಗಳನ್ನು ತಂದಿರುವುದು ಅದ್ಭುತವಾದ ಕಲ್ಪನೆಯಾಗಿದೆ.

ಮತ್ತೊಂದು ದೊರೆಕತೆಯಲ್ಲಿ ರಾಜ ತನ್ನ ಆರು ಜನ ಹೆಂಡತಿಯರಿಗೆ ಮಕ್ಕಳಾಗದೆ ಏಳನೆ ಹೆಂಡತಿಯಾಗಿ ಬಾವಿಯಲ್ಲಿ ನೀರು ಸೇದುತ್ತ ಮಾತಾಡಿಕೊಳ್ಳುತ್ತಿದ್ದ ಸಾಮಾನ್ಯ ಹಳ್ಳಿಯ ಹೆಣ್ಣುಮಗಳನ್ನು ಮದುವೆಯಾಗಿ, ಅವಳಿಗೆ ಅಂಗೈಲಿ ನಕ್ಷತ್ರ ನಕ್ಕರೆ ಮುತ್ತುರತ್ನ ಉದುರುವಂತ ಮಕ್ಕಳಾಗುತ್ತವೆ ಎಂದೇ ನಂಬಿದ್ದ ರಾಜನಿಗೆ ತನ್ನ ಹಿರಿಯರ ಹೆಂಡತಿಯರ ಕುತಂತ್ರದಿಂದ ಹುಟ್ಟಿದ ಮಕ್ಕಳನ್ನು ಪೆಟ್ಟಿಗೆಗೆ ಹಾಕಿ ನೀರು ಪಾಲು ಮಾಡುವುದು. ಆ ಪೆಟ್ಟಿಗೆ ಬೆಸ್ತನಿಗೆ ಸಿಕ್ಕಿ ಚೆನ್ನಾಗಿ ಸಾಕುವುದು ದೊಡ್ಡವರಾದ ಮೇಲೆ ರಾಜನು ಬೇಟೆಮಾಡಿ ಅತೀ ಸುಂದರವಾಗಿದ್ದ ಮಕ್ಕಳನ್ನು ಒತ್ತಾಯಮಾಡಿ ಮನೆಗೆ ಕರೆತರುವುದು. ಮತ್ತೆ ತನ್ನ ಹಿರಿಯ ಹೆಂಡತಿಯರಿಗೆ ಗೊತ್ತಾಗಿ ಅವರನ್ನು ಸಾಯಿಸಲು ಏಳು ಬೆಟ್ಟ ಏಳು ಲೋಕದಿಂದ ಆಚೆ ಇರುವ ಚಲುವೆಯನ್ನು ತಂದು ನಿಮ್ಮಣ್ಣನಿಗೆ ಮದುವೆ ಮಾಡಿಸು ಎಂದು ತಂಗಿಗೆ ಹೇಳಿ ಅಣ್ಣನನ್ನು ಕಳುಹಿಸಿ ಅಲ್ಲಿ ನಾಗರಹಾವಿನಿಂದ ಕೊಲ್ಲಲು ಯತ್ನಿಸುವುದು. ಮತ್ತೆ ಏಳು ಸಮುದ್ರದಿಂದ ಆಚೆ ಇರುವ ಹೂವನ್ನು ತರಲು ಹೇಳಿ ರಾಕ್ಷಸರಿಂದ ಕೊಲ್ಲಿಸಲು ಯತ್ನಿಸುವುದು. ಹೀಗೆ ಹಲವಾರು ಕಷ್ಟಗಳನ್ನು ನೀಡಿದರೂ ಬುದ್ಧಿವಂತನಾದ ಅಣ್ಣ ಗೆದ್ದುಬರುವುದು ಇಂತಹ ಅದ್ಭುತಕಲ್ಪನೆ ನೀಡುತ್ತದೆ.

ನೀತಿಕತೆಗಳು ಪ್ರಸ್ತುತ ಭಾಗದಲ್ಲಿ ಬಹುಮುಖ್ಯವೆನಿಸುತ್ತವೆ. ಇವು ಜನಪದ ಕಥೆಗಳ ಉದ್ದೇಶ ಮತ್ತು ಗುರಿಯಾಗಿದೆ. ಸಾಮಾನ್ಯವಾಗಿ ನೀತಿಕಥೆಗಳಲ್ಲಿ ಪ್ರಾಣಿಪಾತ್ರ ಪ್ರಾಚುರ್ಯವೂ ಇದೆ. ಮಾನವರಂತೆ ವರ್ತಿಸುವ ಪ್ರಾಣಿಪಾತ್ರಗಳು ಯೋಜಿಸಲ್ಪಟ್ಟಿರುತ್ತವೆ. ಕಥನಕ್ರಿಯೆ ನೀತಿಯತ್ತ ಸಾಗುವುದು ಕೊನೆಯಲ್ಲಿ ಸೂತ್ರಪ್ರಾಯ ಹಾಸ್ಯವೊಂದರಲ್ಲಿ ನೀತಿ ನಿಲ್ಲುವುದು, ಈ ಕಥೆಗಳ ಎರಡು ಪ್ರಧಾನ ಅಂಶಗಳಾಗಿವೆ. ನೀತಿ ಬೋಧನೆಗಾಗಿಯೇ ಕೆಲವು ನೀತಿಕಥೆಗಳು ಜನಪದರಲ್ಲಿ ಸೃಷ್ಟಿಯಾಗಿವೆ. ಆದರೆ ಅವು ಜನಪದ ಜೀವನದ ಮೌಲ್ಯಗಳನ್ನು ನಿರೂಪಿಸುವುದಕ್ಕಾಗಿ ಇರುವ ಇವು ತುಂಬ ಸಂಕ್ಷಿಪ್ತ ಹಾಗೂ ಸರಳವಾಗಿದ್ದು ದೈನಂದಿನ ಮಾನವ ಸ್ವಭಾವಗಳ ವರ್ತನೆಗಳ ಹಿನ್ನಲೆಯಲ್ಲೇ ನೀತಿಯನ್ನು ನಿರೂಪಿಸುತ್ತವೆ. 'ದಾನ-ಧರ್ಮದ ಕತೆ', 'ದೊರೆಕತೆ', 'ಚಿಕ್ಕೋಣ್ನಿ, ದೊಡ್ಡೋಣ್ನಿ ಕಥೆ', 'ಅವರೆ ಹುಳುವಿನ ಕತೆ'ಗಳಲ್ಲಿ ನೀತಿ ಬೋಧನೆ ಇದೆ.

ಹೀಗೆ ಪ್ರಸ್ತುತ ಅಧ್ಯಯನದ ಕಥೆಗಳು ಸ್ವರೂಪ ವೈಶಿಷ್ಟ್ಯ ಮತ್ತು ಲಕ್ಷಣದಲ್ಲಿ ಹಲವು ವೈವಿಧ್ಯತೆಗಳನ್ನು ಹೊಂದಿದ್ದು ಜನಪದ ಕಥೆಗಳ ಸಾಲಿನಲ್ಲಿ ನಿಲ್ಲುತ್ತವೆ. ಈ ಎಲ್ಲ ಕಥೆಗಳಲ್ಲಿ ಕಂಡುಬರುವ ಸಮಾನ ಗುಣದಿಂದಾಗಿ ಮಾನವ ಸ್ವಭಾವ ವೈವಿಧ್ಯತೆಯಲ್ಲಿರುವ ಏಕತೆಯನ್ನು ನಾವು ಗಮನಿಸಬಹುದು. ಜೊತೆಗೆ ದೇಶದ ಎಲ್ಲಾ ಜನಪದ ಕಥೆಗಳನ್ನು ಒಂದೆಡೆ ಸಂಗ್ರಹಿಸಿ ಒಂದನ್ನೊಂದು ಹೋಲಿಸಿ ನೋಡಿದಾಗ ಎಲ್ಲವೂ ಮಾನವ ಸಂಬಂಧಗಳನ್ನು, ಸಹೃದಯ ಮನಸ್ಸು ಪ್ರೀತಿ, ವಿಶ್ವಾಸಗಳನ್ನು ಅನಾವರಣಗೊಳಿಸುವ ಎಲ್ಲಾ ಲಕ್ಷಣಗಳನ್ನು ಹೊಂದಿವೆ ಎಂಬುದನ್ನು ತಿಳಿಯಬಹುದು.

೫.೨. ಜನಪದ ಗೀತೆಗಳು

ಜನಪದ ಸಾಹಿತ್ಯವೆಂದರೆ ಇಲ್ಲಿ ಹೆಣ್ಣುಮಕ್ಕಳೆ ಪ್ರಧಾನ. ಜನಪದ ಸಾಹಿತ್ಯದ ಬಹುಭಾಗವನ್ನು ಹೆಣ್ಣುಮಕ್ಕಳ ಹಾಡುಗಳೇ ತುಂಬಿವೆ. ಹೆಣ್ಣು ಜನಪದ ಸಾಹಿತ್ಯದ ಜೀವನಾಡಿಯಾಗಿದ್ದಾಳೆ. ಮಡದಿಯಾಗಿ, ಸೊಸೆಯಾಗಿ, ಮಗಳಾಗಿ, ಅಕ್ಕ-ತಂಗಿಯರಾಗಿ ಅನೇಕ ರೂಪಗಳಲ್ಲಿ ಬಾಳು ಬೆಳಗುವ ಇವಳು ಜನಪದ ಸಾಹಿತ್ಯದ ಮುಖ್ಯ ವಸ್ತುವಾಗಿದ್ದಾಳೆ. ಕುಟ್ಟುವಾಗ, ತೊಟ್ಟಿಲು ತೂಗುವಾಗ, ಹೊಲದಲ್ಲಿ ಕೆಲಸಮಾಡುವಾಗ, ಕನ್ಯೆ ಮೈ ನೆರೆದಾಗ, ಮದುವೆಯ ಸಂದರ್ಭಗಳಲ್ಲಿ, ವಸಗೆಯ ಸಂದರ್ಭದಲ್ಲಿ ಹಾಡುಗಳನ್ನು ಹಾಡುತ್ತಾಳೆ.

ಸ್ತ್ರೀಯರು ಹಾಡುವ ಈ ಹಾಡುಗಳಲ್ಲಿ ಪ್ರಕೃತಿಯ ವರ್ಣನೆಯಿಲ್ಲ. ಬೆಟ್ಟ, ಗುಡ್ಡ, ನದಿ, ಕಣಿವೆ ಮುಂತಾದ ಸುಂದರವಾದ ತಾಣಗಳನ್ನು ನೋಡಿ ಬೆರಗುಗೊಂಡು ರಚಿಸಿದ ಹಾಡುಗಳಲ್ಲ. ಇವರ ಸಂಪ್ರದಾಯ, ಸಂಸ್ಕೃತಿಯ ಹಿರಿಮೆ, ಗರಿಮೆ ಜೀವನದ ಮೌಲ್ಯಗಳು ಇವರ ಹಾಡುಗಳಲ್ಲಿ ಪ್ರತಿಬಿಂಬಿತವಾಗಿವೆ. ಇವರೇ ಕಟ್ಟಿ ಹಾಡುವ ಈ ಹಾಡುಗಳನ್ನು ವ್ಯಕ್ತಿ ಜೀವನದ ಮೌಲ್ಯ, ಯೌವ್ವನ, ಮದುವೆ, ಮುಪ್ಪು ಹೀಗೆ ಮೊದಲಾದ ಪ್ರಮುಖ ಕಾಲಗಳಲ್ಲಿ ಮತ್ತು ಗುಂಪಿನ ಅನೇಕ ಸಂದರ್ಭದಲ್ಲಿ ಹಾಡಲಾಗುತ್ತದೆ. ಒಟ್ಟಾರೆಯಾಗಿ ಹುಟ್ಟು-ಸಾವಿನ ನಡುವಿನ ಬದುಕು ಜನಪದ ಸಾಹಿತ್ಯಕ್ಕೆ ವಸ್ತುವಾಗುತ್ತದೆ. “ಜನಪದ ಗೀತೆಗಳು ಅನಕ್ಷರಸ್ಥ ಸಮಾಜದ ಕಾವ್ಯ ಮತ್ತು ಸಂಗೀತಗಳ ಸಮಾಗಮವಾಗಿದೆ. ವಾಕ್‌ಸಂಪ್ರದಾಯದಲ್ಲಿ ಉಳಿದುಬಂದ ಈ ಪ್ರಕಾರದಲ್ಲಿ ಗೀತೆಗಳು ಹಾಗೂ ಲಾವಣಿಗಳು ಬಹುಮುಖ್ಯವಾದ ಭಾಗಗಳು” (ಹಾ.ಮಾ.ನಾಯಕ, ಜಾನಪದ ಸ್ವರೂಪ, ಪುಟ.೩೭). ಹೀಗೆ ಓದು ಬರಹ ಇಲ್ಲದ ಸ್ತ್ರೀಯರು ಇಷ್ಟು ಸೊಗಸಾಗಿ ರಸವತ್ತಾಗಿ ಹಾಡುಗಳನ್ನು ಕಟ್ಟಿ ಹಾಡಿದ್ದು ನೋಡಿದರೆ ನಿಜವಾಗಿಯೂ ಆಶ್ಚರ್ಯವೆನಿಸುತ್ತದೆ. ತಮ್ಮ ಕಷ್ಟ-ಸುಖ, ನೋವು-ನಲಿವು, ಆಸೆ-ಆಕಾಂಕ್ಷೆ ಆದರ್ಶಗಳನ್ನು ಹಾಡಿನಲ್ಲಿ ವ್ಯಕ್ತಪಡಿಸಿದ್ದಾರೆ.

ಸಾಂಪ್ರದಾಯಿಕ ಹಾಡುಗಳಲ್ಲಿ ಹೆಣ್ಣಿನ ಶೀಲ , ಚಾರಿತ್ರ್ಯ, ತ್ಯಾಗ, ಕಷ್ಟ, ಸಹಿಷ್ಣುತೆ, ಪಾತಿವ್ರತೆ, ವಿಧೇಯತೆ ಇಂತಹವೇ ಗುಣಗಳನ್ನು ಹೆಣ್ಣಿನ ಪರಮೋಚ್ಛ ಆದರ್ಶಗಳೆಂದು ಭಾವಿಸಲಾಗಿದೆ. ಅನೇಕ ಸೋಬಾನೆ ಪದಗಳಲ್ಲಿ, ಚೆನ್ನಮ್ಮನ ದಂಡಿಯಲ್ಲಿ, ಪಾತಿವ್ರತೆಯನ್ನು ಮೆರೆದ ಸ್ತ್ರೀಯರ ಜೀವನ ಚಿತ್ರಣಗಳಿರುವುದನ್ನು ಕಾಣಬಹುದು.

ಕಬ್ಬಾಳು ಪರಿಸರದಲ್ಲಿ ಜನಪದ ಕಥೆಗಳ ಸಂಖ್ಯೆಯನ್ನು ಮೀರಿಸುವಷ್ಟು ಗೀತೆಗಳ ಸಂಖ್ಯೆ ಹೆಚ್ಚಾಗಿದೆ. ರಾಜ್ಯದ ಇತರ ಭಾಗಗಳಲ್ಲಿ ದೊರೆಯುವಂತಹ ಕೆಲವು ಅಪರೂಪದ ಹಾಡುಗಳು ಇಲ್ಲಿ ಸಿಗುತ್ತವೆ. ಇಲ್ಲಿನ ಹಾಡುಗಳಲ್ಲಿ ಭಕ್ತಿಯ ಭಾವವನ್ನು ಉದ್ದೀಪಿಸುವ ಮಹಿಮಾನ್ವಿತರ ಸ್ತುತಿಮಾಲೆಗಳು ಒಂದು ಗುಂಪಾದರೆ, ಗಂಡ-ಹೆಂಡಿರ ಹಾಲು ಜೇನಿನಂತಹ ಮಧುರ ಬಾಂಧವ್ಯದ ಮತ್ತೊಂದು ಗುಂಪು. ತವರಿನ ಕಳ್ಳುಬಳ್ಳಿ ಸಂಬಂಧವನ್ನು ಮನೋಜ್ಞವಾಗಿ ತಿಳಿಸುವ ಮತ್ತೊಂದು ಗುಂಪು ಮತ್ತು ತಮ್ಮ ನೆಚ್ಚಿನ ಗುರುಗಳಿಗೆ ಧನ್ಯತಾ ಭಾವನೆ ತೋರುವ ಗೀತೆಗಳು. ಹೀಗೆ ಇಲ್ಲಿನ ಜನಪದರ ಸಂಸ್ಕೃತಿಯನ್ನು ಪರಿಚಯ ಮಾಡಿಕೊಟ್ಟು, ಇಲ್ಲಿನ ಸುಸಂಸ್ಕೃತ ಮನಸ್ಸಿನ ಅಜ್ಞಾತ ಜನಪದರ ಶ್ರೀಮಂತ ಸಾಹಿತ್ಯವನ್ನು ಪ್ರತಿಬಿಂಬಿಸುತ್ತವೆ.

ದೇವರ ಸ್ತುತಿ ಪದಗಳು

ಈ ಹಾಡುಗಳು ತಾವು ನಂಬಿದ ದೇವರನ್ನು ಕುರಿತು ಜನಪದರು ಹಾಡುವ ಹಾಡುಗಳು. ದೇವರು ಮತ್ತು ಜನಪದರಿಗಿರುವ ಸಂಬಂಧ, ದೇವರ ಕುರಿತಾದ ಜನರ ಕಲ್ಪನೆ, ಭಾವನೆ, ನಂಬಿಕೆ, ವಿಶ್ವಾಸ, ಭಕ್ತಿ, ಭಾವಗಳನ್ನು ಈ ಹಾಡುಗಳಲ್ಲಿ ಕಾಣಬಹುದು. ತಮ್ಮ ಊರಿನ ದೇವ ದೇವಿಯರ ವಿವರ, ಸ್ವರೂಪ, ಸೌಂದರ್ಯ, ಸ್ಥಳ, ಮೂಲ, ಆಚರಣೆ, ಮಹಿಮೆಗಳ ವರ್ಣನೆ ಇವುಗಳಲ್ಲಿರುತ್ತವೆ. ದಿನನಿತ್ಯದ ಕೆಲಸ ಕಾರ್ಯಗಳ ಜೊತೆಗೆ ದೇವರ ಪೂಜೆಗಳಲ್ಲಿ ಉತ್ಸವ, ಆಚರಣೆ, ಜಾತ್ರೆಗಳಲ್ಲಿ ಈ ಹಾಡುಗಳ ನಿರೂಪಣೆಯಾಗಿರುತ್ತದೆ. ಬಿಡಿಗೀತೆಗಳ ರೂಪದಲ್ಲಿ ಕಥನಕಾವ್ಯಗಳ ಆರಂಭದ ಸ್ತುತಿಗೀತೆಗಳ ರೂಪದಲ್ಲಿ ಆಚರಣೆ ಪೂಜೆಗಳ ಜೊತೆ ಹಾಡುವ ಹಾಡುಗಳ ರೂಪದಲ್ಲಿ ಇವು ಲಭ್ಯವಾಗಿವೆ.

ದೇವರು ಮತ್ತು ದೇವತೆ ಎಂಬ ವಸ್ತು ನಂಬಿಕೆಯ ತಳಹದಿಯ ಮೇಲೆ ಮೊದಲಿನಿಂದಲೂ ಸ್ಥಿರವಾಗಿ ನಿಂತಿದೆ. ಮಾನವ ದೇವರು, ದೇವತೆ ಕಲ್ಪನೆಯಲ್ಲಿ ಧರ್ಮತತ್ವ, ಆಧ್ಯಾತ್ಮ, ಸರ್ವಸ್ವವನ್ನು ಕಾಣುತ್ತಲೇ ಈ ನಂಬಿಕೆ ಶ್ರದ್ಧೆಗಳು ಬಾಳಿಗೆ ಅನುಕೂಲವಾಗುತ್ತವೆ. ಜನಸಾಮಾನ್ಯರಿಗೂ ಕಲಿತ ದೈವಭಕ್ತರಿಗೂ ದೇವರು ಬರಿಯ ಕಲ್ಲಲ್ಲ ಅಥವಾ ಮೂರ್ತಿಯಲ್ಲ. ಅವರು ಅಲ್ಲಿಯ ಮಾನವೀಯ ಸಂಬಂಧವನ್ನು ಕಾಣಲು ಬಯಸುತ್ತಾರೆ. ಊರದೇವತೆಯಾದ ಮಾರಮ್ಮ ಮತ್ತು ಕಬ್ಬಾಳಮ್ಮ ಮಹಾತಾಯಿಯರಾಗಿ ಜಗತ್ತಿನ ಜನರಿಗೆ ಮಾತೃದೇವತೆಯಾಗಿದ್ದಾರೆ. ತಪ್ಪುಮಾಡಿದ ಮಕ್ಕಳು ತನ್ನ ತಾಯಿಯನ್ನು ಬೇಡುವ ಹಾಗೆ ಮುಗ್ಧ ಜನಪದರು ಕಷ್ಟವನ್ನು ಹೇಳಿಕೊಂಡು ಕಣ್ಣೀರು ಸುರಿಸುತ್ತಾರೆ. ಒಟ್ಟಿನಲ್ಲಿ ಜನಪದರು ದೈವಶಕ್ತಿಗೆ ನಾಮರೂಪವನ್ನಿತ್ತು, ದೇವತೆಯನ್ನು ತಮ್ಮ ಒಡನಾಡಿಯಾಗಿ ಮಾಡಿಕೊಂಡು ಕಷ್ಟಗಳನ್ನು ನಿವಾರಣೆ ಮಾಡುತ್ತಾಳೆ ಎಂದು ನಂಬುತ್ತಾರೆ.

ಕಬ್ಬಾಳಮ್ಮನನ್ನು ಕುರಿತ ಹಾಡು

ಮೊದಲಿಗೆ ಕಬ್ಬಾಳಮ್ಮನ ಇತಿಹಾಸ ಇವಳ ಮೂಲ ಸ್ಥಳ ಯಾವುದು, ಎಲ್ಲಿಂದ ಬಂದಳು, ಹೇಗೆ ನೆಲೆಗೊಂಡಳು ಅವಳ ವೇಷ-ಭೂಷಣ, ರೂಪ-ಸ್ವರೂಪ ಎಲ್ಲವನ್ನು ಜನಪದರು ತಮ್ಮ ದೃಷ್ಟಿಯಲ್ಲಿ ಹೇಗಿದೆ ಎಂಬುದನ್ನು ಹಾಡು ಕಟ್ಟುವುದರ ಮೂಲಕ ವರ್ಣನೆ ಮಾಡಿದ್ದಾರೆ.

ಕೊಂಗನಾಡಿನಿಂದ ಎಂದು ಬಂದೆ ಮಲೆಯಕಾಳಿ
ಕೊಂಗಾರ ಕೊಟ್ಟ ಕುದುರೆಯ | ಏರಿಕೊಂಡು
ಕೊಂಡಾಳ್ ಭೀಮಯ್ಯನ ದುರ್ಗಾವ
ಕಬ್ಬಾಳು ಕಣಿವೇಲಿ ಕಾರೆಯ ತಾಳೇಲಿ
ಬಾಳೇಯ ಕಟ್ಟೆ ಬಯಲಲ್ಲಿ | ಮಲೆಯ ಕಾಳಿ
ಜೂಜಾಡಿಗೆದ್ದ ದುರ್ಗವ.

ಜನಪದರು ಕಬ್ಬಾಳಮ್ಮನಲ್ಲಿ ನೇರವಾಗಿ ಪ್ರಶ್ನೆಮಾಡುವುದನ್ನು ಈ ಹಾಡಿನಲ್ಲಿ ಬಿಂಬಿತವಾಗಿದೆ. ಕೊಂಗನಾಡು ಎಂದೇ ಕರೆಯುವ ತಮಿಳುನಾಡಿನಿಂದ ಕೊಂಗರ ರಾಜ ಕೊಟ್ಟ ಕುದುರೆಯನ್ನು ಏರಿಕೊಂಡು

ಬಂದು ತನ್ನ ಅಣ್ಣನಾದ ಭೀಮೇಶ್ವರನಿಂದ ಕಬ್ಬಾಳು ದುರ್ಗವನ್ನು ಪಡೆದುಕೊಳ್ಳುತ್ತಾಳೆ. ತನ್ನ ಅಣ್ಣ ಭೀಮೇಶ್ವರನ ಜೊತೆಯಲ್ಲಿ ಜೂಜುಕಟ್ಟಿ ದುರ್ಗವನ್ನು ಗೆದ್ದುಕೊಳ್ಳುತ್ತಾಳೆ. ಹಿಂದೆ ಬೆಟ್ಟ ಕಣಿವೆಯ ಹಾಗೆ ಬಾರಿ ಹೆಗ್ಗಾಡಿನಿಂದ ಕೂಡಿದ್ದು ಬೆಟ್ಟದ ತಾಳು ಎಗ್ಗಾರೆ ಗಿಡಗಳಿಂದ ತುಂಬಿದ ದುರ್ಗಮವಾದ ಕಾಡಿನಿಂದ ಕೂಡಿತ್ತು ಎಂಬುದನ್ನು ತಿಳಿಯಬಹುದು.

ಕರಿಯಂಚಿನ ಸೀರೆ ಕಣಕಾಲಿಗರಿಸಿಣ
ಕೆಣಕಿ ನೋಡವಳೆ ಕಿಡಿಗಣ್ಣಿ | ಮಲೆಯಕಾಳಿಯ
ಮರೆತೋರ ಮನೆಯ ಮುರಿದೋಳ
ಕಾಳಿ ಎನಬೋದೆ ಓಳೀನ ಮೈಯ್ಯೋಳ
ಮುಗ್ಗು ಮೂಗುಳ್ಳ ಮುಡಿಯೋಳ | ಮಲೆಯಕಾಳಿ
ಕಾಳಿ ಎನಬಹುದೆ ಧರೆಯಲ್ಲಿ
ಬೀದಿ ಮನೆಯೋಳೆ ಬೀಸಣಿಗೆ ನೆರಿಯೋಳೆ
ಜಾಲಾದ ಹೂವಿನ ಜೆಡೆಯೋಳೆ | ಮಲೆಯಕಾಳಿ
ನಿನ್ನ ಜೆಡೆಯಲ್ಲಿ ಮುತ್ತು ಝುಲಿರೆಂದೋ
ಮೂಗುತಿ ಮುಂಬಾರ ಎಣೆಗಂಟು ಹಿಂಬಾರ
ಎಂಟೆಳೆಗುಂಡು ಎದೆಬಾರ | ಮಲೆಯಕಾಳಿ
ನಿನ್ನ ಸಣ್ಣಂಚಿನ ಸೀರೆ ನರಿ ಬಾರ

ಕಪ್ಪಂಚಿನ ಸೀರೆಯನ್ನು ಉಟ್ಟು, ಕಣಕಾಲಿಗೆ ಅರಿಸಿಣ ಬಳಿದುಕೊಂಡಿರುವ ಕಬ್ಬಾಳಮ್ಮನಿಗೆ ಮೂಗುತಿ ಮುಂಭಾರ ಎನ್ನುವಷ್ಟು ದೊಡ್ಡದಿದ್ದು ತನ್ನ ಕೂದಲನ್ನು ಹೆಣೆದು ಭಾರ ಅನ್ನುವಂತೆ ಮಹಾಕಾಳಿಯಾಗಿ ಕಾಣುತ್ತಾಳೆ. ಕಬ್ಬಾಳಮ್ಮ ನೋಡುವುದಕ್ಕೆ ಅಷ್ಟೊಂದು ಸುಂದರವಾಗಿ ಕಾಣುವ ಇವಳ ಮೈಮಾಟವನ್ನು ನೋಡಿ, ತಲೆಯ ತುಂಬ ಮಲ್ಲಿಗೆ ಮೊಗ್ಗನ್ನು ಮುಡಿದು ಜಾಲಾದ ಹೂವಿನ ಜಡೆಯನ್ನು ಹಾಕಿ ಮುತ್ತು ರತ್ನಗಳಿಂದ ಜೆಡೆಯನ್ನು ಅಲಂಕಾರ ಮಾಡಿರುವ ಜಡೆಯಲ್ಲಿ ಮುತ್ತು ರತ್ನಗಳ ಗೆಜ್ಜೆಯ ಶಬ್ದವಿರುತ್ತದೆ. ಇಂಥವಳನ್ನು ಕಾಳಿ ಎನಬಹುದೆ ಎಂದು ಜನಪದರು ಪ್ರಶ್ನಿಸುತ್ತಾರೆ. ಇಲ್ಲಿ ಕಬ್ಬಾಳಮ್ಮನ ವೇಷ ಭೂಷಣ ಮೈಮಾಟ, ಸಿರಿ-ಸಂತೋಷ, ಉಡುಗೆ-ತೊಡುಗೆ ಎಲ್ಲವನ್ನು ವರ್ಣಿಸಲಾಗಿದೆ.

ಎಲ್ಲಾರಾಡೀರೋ ನೆಲ್ಲಕ್ಕೆ ಪಗಡೆಯ
ನಲ್ಲಾರೈನ ಮಗಳು ಮಲೆಯ ಕಾಳಿ | ಆಡೀಲೊ
ತನಿಗೆಂಡದಲ್ಲಿ ಪಗಡೆಯ
ನೆತ್ತಿಯ ಮ್ಯಾಲೆ ಸಿಂಬ್ಲೂಡಿ ಹೊತ್ತಳು ಹೊನ್ನೆಕಳಸ
ಎತ್ತಾಗೋಗಿದ್ದೆ ಹೊಸಕಾಂತಿ | ಕಬ್ಬಾಳಮ್ಮ
ನೀಹುಟ್ಟಿದ ತಳ ಹೆಸರೇಳವ್ವ

ನಾಹುಟ್ಟಿರುದು ಕೊಂಗರಾಜ್ಯ ಬೆಳೆವೋದು ಕಬ್ಬಾಳು
ನಾಳೆಹೊಯ್ದಂತ ಹುಯಲೆಲಿ | ನಾನೀಗ
ಆಗ ಬಂದಿದ್ದೆ ಈ ಮೈನ ದುರ್ಗಾಕ್ಕೆ

ನೆತ್ತಿಯ ಮೇಲೆ ಸಿಂಬಿಯನ್ನು ಹೂಡಿ ಹೊನ್ನೆಕಳಸವನ್ನು ಹೊತ್ತಿರುವಂತ ಕಬ್ಬಾಳಮ್ಮನನ್ನು ಪ್ರಶ್ನಿಸುವುದರ ಮೂಲಕ ಅವಳು ಹುಟ್ಟಿ, ಬೆಳೆದುದು ಯಾವ ಯಾವ ಊರುಗಳು ಎಂಬುದನ್ನು ತಿಳಿಸುತ್ತಾರೆ. ಇದರಿಂದ ಕಬ್ಬಾಳಮ್ಮನ ಮೂಲ, ಹುಟ್ಟು ಊರು ಕೊಂಗರಾಜ್ಯ. ಆದರೆ ಬೆಳೆದಿದ್ದು ಕಬ್ಬಾಳು ಎಂಬುದು ತಿಳಿಯುತ್ತದೆ.

ಹತ್ತಳ್ಳಿ ಸೂರ್ನಳ್ಳಿ ಹೊತ್ತಲ್ಲೆ ಹೊಸಳ್ಳಿ
ಅಚ್ಚಲು ತೋಟಳ್ಳಿ ಹೊಸಬಂಡಿ | ಬರಲಿಲ್ಲ ಅಂತ
ಅತ್ತಿ ನೋಡಾಳೋ ದುರ್ಗಾನ
ದುರ್ಗ ಹತ್ತೀಳೋ ದುರದುರನೆ ನೋಡಾಳೊ
ನೊರ ನೊರನೆ ಹಲ್ಲ ಕಡಿದಾಳೋ | ಮಲೆಯ ಕಾಳಿ
ನನ್ನೆಚ್ಚಳದ ಬಂಡಿ ಬರ್‍ಲಿಲ್ಲ
ರುದ್ರ ಗ್ಯಾಪದಿಂದ ಒದ್ದಲ್ಲೊದಾರಂದ
ನುಗ್ಗು ನುರಿಯಾದೋ ಮರದಲಗೆ | ಮಲೆಯಕಾಳಿ
ನಿನ್ನ ರುದ್ರ ಗ್ಯಾಪ ನನಗೆ ಇದಿರಮ್ಮ

ಕಬ್ಬಾಳಮ್ಮನ ಅಪ್ಪನ ಮನೆ ಬೊಮ್ಮನಹಳ್ಳಿ ಹತ್ತಿರವಿರುವ ಅಚ್ಚಲು. ಇಲ್ಲಿಂದ ಏಳವಾರ ಮತ್ತು ಓಲೆಬಂಡಿ ಬರಲಿಲ್ಲ ಎಂದರೆ ಕೊಂಡಕ್ಕೆ ಕಬ್ಬಾಳಮ್ಮ ನುಗ್ಗುವುದೇ ಇಲ್ಲ. ಅಪ್ಪನ ಮನೆಯ ಏಳವಾರ ಬಂದಾದ ಮೇಲೆ ಕೊಂಡ ಹಾಯುವುದು. ಅಪ್ಪನ ಮನೆಯ ಓಲೆಬಂಡಿ ಇನ್ನೂ ಬರಲಿಲ್ಲ ಎಂದು ದುರ್ಗ ಹತ್ತಿ ನೋಡುತ್ತಾಳೆ. ನೊರನೊರನೆ ಹಲ್ಲ ಕಡಿದು ರುದ್ರಗ್ಯಾಪದಿಂದ ಬಾಗಿಲು ಮುರಿದು ಹೋಗುವ ಹಾಗೆ ಒದೆಯುತ್ತಾಳೆ.

ಕರಗದ ಮನೆಯಿಂದ ಕಡ್ಡುಬಾರೆ ಮಲೆಕಾಳಿ
ಕಾದು ನಿಂತವರೆ ನಿನಮಕ್ಳು | ಏಳಳ್ಳಿವು
ದೂಳುಕೊಂಡಾಕೆ ಇದಿರಾಗಿ
ಹಿರಿಮಕ್ಕಾಳು ಕೀರುಗಂಧದರಿಸಿ
ಉಂಡುಂಡು ಇಳ್ಳೇವ ಹಿಡಿದಾರೋ | ಮಲೆಯಕಾಳಿ
ನಿನ ಕೊಂಡಾಕೆ ಎಳವಾರ ಹೊಡೆದಾರೊ.
ಕೈಲಿ ಬೆತ್ತದ ಕೋಲು ಕಂಕೈಲಿ ಕೊರವಂಜಿಗೂಡು
ಕಣಿವೆ ಸಾಲಲ್ಲಿ ಬರುವೋಳೆ | ಮಲೆಯಕಾಳಿ
ನಿನ್ನ ಕಣಿಯ ಕೇಳೋರು ಗಡುವಿಲ್ಲ.

ಕಬ್ಬಾಳಮ್ಮನ ಕೊಂಡಕ್ಕೆ ಎಳವಾರ ಕಟ್ಟಿ ಸುತ್ತೇಳು ಹಳ್ಳಿಗಳಿಂದ ಎಳವಾರ ಬರುತ್ತವೆ. ಎಳವಾರಕ್ಕೂ ಮತ್ತು ಎಳವಾರ ಹೊಡೆಯುವ ಕಬ್ಬಾಳಮ್ಮನ ಭಕ್ತರು ಕೂಡ ಗಂಧ ಚಂದ ಧರಿಸಿಕೊಂಡು ಎಳವಾರ ಹೊಡಕಂಡು ಕೊಂಡದ ಬಾಗಿಲಿಗೆ ಬಂದು ಕರಗದ ಮನೆಯಲ್ಲಿರುವ ಕಾಳವ್ವ ಕೊಂಡಾಕೆ ಅವಳ ಬರುವುದನ್ನೇ ಕಾದು ಕುಳಿತಿರುತ್ತಾರೆ.

ವಡ್ರ ಕರಿಸ್ಯಾಳೊ ಒಳಮಾತ ಏಳಾಲೊ
ಮಜ್ಜಣದ ಕೊಳವ ತೆಗಿಸಾಲೋ | ಮಲೆಯಕಾಳಿ
ಬಗ್ಗೀ ನೋಡ್ಯಾಳೊ ಪರಿಸೆಯ
ವಾಜ್ಗುರ್ರಿ ಕೇರಿಗೆ ಹೋದಾಳು ಮಲೆಯಕಾಳಿ
ವಾಚಾರ ಮಗನ ಕರೆದಾಳೊ | ಮಲೆಯಕಾಳಿ
ಆಯವಾಗಿ ಮಾಡೊ ತುಂಬೆ ತಾಲಿಯ.
ಕುಂಬಾರ ಗೇರಿಗಾಣೆ ರಂಬೆ ಹೋದ ಮಲೆಯಕಾಳಿ
ಕುಂಬಾರ ಮಗನ ಕರೆದಾಳೊ | ಏನೆಂದಾಳೋ
ಬಾಮವಾಗಿ ಮಾಡಪ್ಪ ಹಸಿಕರಗಾನ.
ಹಾರೋರ ಗೇರಿಗಾಣೆ ಹೋದಾಳೊ ಮಲೆಯಕಾಳಿ
ಹಾರೋರ ಮಗನ ಕರೆದಾಳೋ | ಏನೆಂದಾಳೋ
ನನ್ನ ಮುಂಗೊಂಡಕೆ ಹಸಿ ಮಡಿ ಬರಬೇಕು.
ಮಡಿವಾಳಿಮಗನ ಕರೆದಾಳೋ | ಏನೆಂದಾಳೋ
ನನ್ನ ಮುಂಗೋಡಕೆ ಹಸಿ ಮಡಿ ಬರಬೇಕು.

ಕಬ್ಬಾಳಿನಲ್ಲಿ ಆಚರಣೆ ಮಾಡುವ ಜಾತ್ರೆ, ಕೊಂಡ, ಬಂಡಿ ಇತ್ಯಾದಿಗಳಲ್ಲಿ ಅದರಲ್ಲೂ ಮಹಾಶಿವರಾತ್ರಿ ಸಮಯದಲ್ಲಿ ಕಬ್ಬಾಳಮ್ಮನ ಜಾತ್ರೆ ನಡೆಯುತ್ತದೆ. ಕೊಂಡ, ಬಂಡಿ, ಪಲ್ಲಕ್ಕಿ, ಉತ್ಸವ, ತೇರು ಎಲ್ಲಾ ರೀತಿಯ ಆಚರಣೆಗಳು ನಡೆಯುತ್ತವೆ. ಈ ಆಚರಣೆಗಳಲ್ಲಿ ಅಲ್ಲಿನ ವಿವಿಧ ಜಾತಿಯ ಜನರು ಜಾತ್ರೆ ಉತ್ಸವದಲ್ಲಿ ಹೇಗೆ ಭಾಗಿಗಳಾಗುತ್ತಾರೆ, ಆಯಾ ಜಾತಿಗಳಿಗೂ ಯಾವ ರೀತಿಯ ಸಂಬಂಧಗಳಿವೆ. ಜಾತ್ರೆ, ಕೊಂಡ, ಉತ್ಸವದಲ್ಲಿ ಇವರೆಲ್ಲರ ಪಾತ್ರಗಳೇನು? ಎಂಬುದನ್ನು ಮೇಲಿನ ಹಾಡಿನ ಮೂಲಕ ತಿಳಿಯಬಹುದು.

ಕೊಂಡಾಕೋಗುಳ ಕೈಲಿ ಚೆಂದುಳಿ ಇಂಬಿ ಹಣ್ಣು
ಬಂಗಾರದ ಪೆಟ್ಟಿ ಬಲಗೈಲಿ | ಇಡಕಂದು
ನನ ರಂಬೆ ಮಲೆಯಕಾಳಿ ಕರೆದಾಳೊ
ಹೊಂಬಾಳೆ ಬಂದು ವಾಮದ ಗಡಿಗೆ ಬಂದು |
ತಟ್ಟೈಸಿ ಬಂದು ಕೈಪಂಜು | ಮಲೆಯಕಾಳಿ

ನಿನಗೆ ಇಟ್ಟಾಡಿ ಬಂದೊ ಈಡುಗಾಯಿ

ಹೊಡೆದು ಹೊಂಬಾಳೆ ಹೊಳೆಯಲಿ ಪೂಜೆಮಾಡಿ

ಕಡ್ಲೆಬಣ್ಣಾದ ತೆರವೂದು | ಮಲೆಯಕಾಳಿ

ನೀ ಕಡೆದು ಬರುವ ಹಾದಿ ಅಗಲಾದೊ

ಪೂಜೆಗೊತ್ತೋಯ್ತು ಪೂಜಾರಿ ಎಲ್ಲಿಗೋದ

ಚೂಜಿ ಮಲ್ಲೀಗೆ ಹೊಲಕೋದ | ಪೂಜಾರಿ

ಚೂಜೀಲಿ ಮುತ್ತ ತರುವೋನು

ಹೊಂಬಾಳೆ ಉದುರೀವೋ ತಾಣ ಜಗ್ರಿಸಿವೋ

ತುಂಬಿದ್ದ ಗಿಂಡಿ ತುಳುಕೀವೋ | ಮಲೆಯಕಾಳಿ

ರಂಬೆ ಹೊಳಮೆಟ್ಟಿ ಬರುವಾಗ

ಉಲ್ಲೇಕಾಳವ್ವ ನಿನ್ನ ಪಿಲ್ಲೀ ನೋಡಾರಂತ

ಮೇಗು ಲೋಕಾದ ಶರಣರು | ನೋಡರಂತೆ

ನಿಲ್ಲಮ್ಮ ನೀರ ಜಲ್ದೇಲಿ

ನೆಡೆಯೆ ಮೆಲೆಯಕಾಳಿ ನಿನ್ನ ನಡಿಗೆ ನೋಡಾರಂತೆ

ಬಲಗಾಲೆಲಿರುವ ಬಸವಾನ | ನೋಡಾರಂತೆ

ಜಂಬು ಲೋಕದ ಶರಣಾರು

ಕೊಂಡ ಹಾಯುವ ಮೊದಲು ಹೊಳೆ ಮೆಟ್ಟಿಸಿಕೊಂಡು ಬರಬೇಕು. ಹೊಳೆ ಮೆಟ್ಟಿಸಿಕೊಂಡು ಬರುವಾಗ ತುಂಬಿದ ಗಿಂಡಿಗೆ ಒಡೆದ ಹೊಂಬಾಳೆ ಮುಡಿಸಿ ವಾಮದ ಗಡಿಗೆತಂದು ಹೊಳೆಯಲ್ಲಿ ಪೂಜೆಮಾಡಿ ಕಡ್ಲೆಬಣ್ಣದ ವಸ್ತ್ರದಿಂದ ತೆರವೂದು ಕೊಂಡದ ಬಾಗಿಲಿಗೆ ಬರುವ ತನಕವೂ ಮಡಿಹಾಸಿಕೊಂಡೆ ಗಿಂಡಿಯನ್ನು ತರಬೇಕು. ಹೀಗೆ ಹೊಳೆಮೆಟ್ಟಿ ಬರುವಾಗ ಕಾಳವ್ವನ ತುಂಬಿದ ಗಿಂಡಿ ತುಳುಕಾಡುತ್ತದೆ.

ಉಯ್ಯೋ ಮಳೆಯ್ಯೇ ಹೂವಿನ ಮಳೆಯೇ

ಅನ್ನಾ ಕೊಡುವಂತ ಚಿನ್ನದ ಮಳೆಯೇ ಉಯ್ಯೋಮಳೆಯೇ

ಕಬ್ಬಾಳಮ್ಮನ್ಗೇ ಕಬ್ಬುಣದ ಉಯ್ಯಾಲೆ

ವಜ್ರದ ಗಿಂಡಿ ತಲೆ ಮ್ಯಾಲೆ ಉಯ್ಯೋ ಮಳೆಯೆ

ಕಬ್ಬಾಳು ಕಾಡೇಲೀ ಕಾರೇಯ ತಾಳೇಲೀ

ಬಾಳೇಯ ಕಟ್ಟೆ ಬಯಲೇಲಿ ಹುಯ್ಯೋ ಮಳೆಯೇ

ಬಾಳೆಯಾ ಕಟ್ಟೆ ಬಯಲೇಲಿ ಕೂತಿಕೊಂಡು

ನೂರೊಂದು ಜಡೆಯ ಒದುರಾವಳೆ ಹುಯ್ಯೋ ಮಳೆಯ

ನೂರೊಂದು ಜಡೆ ಒದುರವಳೆ ಕಾಳವ್ವ

ವಾಲಾಡಿ ಮಂಡೆ ಒದುರವಳೆ ಹುಯ್ಯೆ ಮಳೆಯೇ

ವಾಲಾಡಿ ಮಡೇ ಒದುರವಳೆ ಕಾಳವ್ವ

ಜೂಜಾಡಿ ಗೆದ್ಲು ದುರುಗಾವ ಹುಯ್ಯೇ ಮಳೆಯೇ

ಮಳೆ ಜೀವದ ಸಂಕೇತ ಮಳೆ ಇಲ್ಲದಿದ್ದರೆ ಯಾವ ಕೆಲಸಕಾರ್ಯವೂ ನಡೆಯುವುದಿಲ್ಲ. ನೀರು ಜನರ ಮೂಲ ಅವಶ್ಯಕತೆಗಳಲ್ಲಿ ಅತ್ಯಮೂಲ್ಯ, ಅತಿಮುಖ್ಯ. ಆದ್ದರಿಂದ ಜನಪದರು ಮಳೆಯನ್ನು ಕಬ್ಬಾಳಮ್ಮನಿಗೆ ಪೂಜೆ, ವ್ರತ ಮಾಡಿ ಮಳೆಬರಿಸುವ ನೇಮವನ್ನು ಇಂದಿಗೂ ಮಾಡುತ್ತಾರೆ. ಮಳೆಗಾಲದಲ್ಲಿ ಮಳೆಯು ಸರಿಯಾದ ಸಮಯಕ್ಕೆ ಬಾರದಿದ್ದ ಸಂದರ್ಭದಲ್ಲಿ ಕಬ್ಬಾಳಮ್ಮನಿಗೆ ನಮ್ಮಲ್ಲಿನ ಯಾವುದೋ ತಪ್ಪು, ದೋಷ ಗೊತ್ತಾಗಿ ಅದರಿಂದಲೆ ನಮ್ಮ ನಾಡಿಗೆ ಬರಗಾಲ ತಂದಿದ್ದಾಳೆ ಎಂದು ಅದನ್ನು ಹರಕೆ ಹೊತ್ತು ತೀರಿಸುವುದರ ಮೂಲಕ ಮಳೆಯನ್ನು ಬೇಡುತ್ತಾರೆ. ಅಂದರೆ ಕಬ್ಬಾಳಮ್ಮ ಮಳೆ ಬರಿಸುವ ಬೆಳೆ ಬೆಳೆಸುವ ಸಮೃದ್ಧಿ ದೇವತೆಯಾಗಿದ್ದಾಳೆ. ಅಂದರೆ ಮೂಲಕೃಷಿಕಳೇ ಆಗಿದ್ದಾಳೆ.

ಮಂಟೇಸ್ವಾಮಿ, ಸಿದ್ದಪ್ಪಾಜಿ

ಉತ್ತರ ದೇಶದಿಂದ ಬಂದು ದಕ್ಷಿಣದಲ್ಲಿ ನೆಲೆಸಿ ಕಲಿಸಾರಿದ ಜೀವಂತ ವ್ಯಕ್ತಿ ಧರೆಗೆ ದೊಡ್ಡವರು ಎಂದೇ ಹೇಳುವ ಶ್ರೀ ಮಂಟೇಸ್ವಾಮಿಯವರು, ಇಲ್ಲಿದ್ದಂತಹ ಜಮೀನುದಾರಿ ಪದ್ಧತಿಯ, ಪಂಚವಾಳರ ಪಾಳೇಗಾರಿಕೆಯ ವಿರುದ್ಧ, ಬಡವರ, ಸಾಮಾನ್ಯ ಜನರ ಪರ ಧನಿ ಎತ್ತಿದ ಮಹಾನ್ ಜ್ಞಾನಿಯವರೇ ಮಂಟೇಸ್ವಾಮಿಯವರು. ಎಂಟುನೂರು ವರ್ಷಗಳ ಹಿಂದೆಯೇ ಕಲಿಗಾಲದ ಕಾಲಜ್ಞಾನವನ್ನು ಪಡೆದಿದ್ದ ಮಹಾನ್ ಕಾಲ ಜ್ಞಾನಿಯೂ ಹೌದು. ಇಂತಹ ಆದಿಗುರು ಪರಂಜ್ಯೋತಿ ಧರೆಗೆ ದೊಡ್ಡವರು ಎಂಬುದು ಅವರ ಜ್ಞಾನದ ಕುರುಹಾಗಿದೆ. ಧರೆಗೆ ಈ ಭೂಮಿಗೆ ದೊಡ್ಡವರು ಎಂಬ ವಿಶಾಲಾರ್ಥ ಅವರ ಜ್ಞಾನಕ್ಕೆ ಒಪ್ಪುವಂತದ್ದಾಗಿದೆ.

ಇಂಥ ಮಹಾಗುರು ದುರಾಡಳಿತದಿಂದ ಮೆರೆಯುತ್ತಿದ್ದ ಹಲಗೂರು ಪಂಚವಾಳಗೇರಿಯ ಪಾಂಚಾಳರ ಅಹಂಕಾರವನ್ನು ಅಡಗಿಸಲು ಅವರ ಮಗ ಎಳೆ ಕೆಂಪಾಚಾರಿಯನ್ನು ಶಿಷ್ಯನನ್ನಾಗಿ ಮಾಡಿಕೊಂಡು ಆ ಮಗನಿಂದಲೇ ಪಾಂಚಾಳರನ್ನು ಮಟ್ಟ ಹಾಕುತ್ತಾರೆ. ಗುರುಗಳ ನಂತರ ಶಿಷ್ಯಪರಂಪರೆ ಬಹುಸಂಖ್ಯಾತ ಒಕ್ಕಲುಗಳನ್ನು ಮಾಡಿಕೊಂಡು ಗುರುವಿನ ದಾರಿಯಲ್ಲೇ ನಡೆಯುತ್ತಾರೆ. ಹಾಗಾಗಿ ಮಂಟೇದ ಸ್ವಾಮಿಯವರ ನಂತರ ಜನ ಸಾಮಾನ್ಯರ ಮನದಲ್ಲಿ ನೆಲೆನಿಂತ ಶಿಷ್ಯರಲ್ಲಿ ಸಿದ್ದಪ್ಪಾಜಿ ಮುಖ್ಯರಾಗುತ್ತಾರೆ.

ಹೀಗೆ ನೆಲೆನಿಂತ ಸಿದ್ದಪ್ಪಾಜಿ ತನ್ನ ಅಪಾರ ಭಕ್ತರು ಒಕ್ಕಲುಗಳನ್ನು ಇಂದಿಗೂ ಸಮೃದ್ಧವಾಗಿಯೇ ಹೊಂದಿದ್ದಾರೆ. ಆ ಒಕ್ಕಲಿನಲ್ಲಿನ ಗುಡ್ಡರು, ನೀಲಗಾರರು ತಮ್ಮ ಗುರುವಿನ ಜೀವನ, ತ್ಯಾಗ, ಬಲಿದಾನ, ವೇಷ, ಆಚಾರ-ವಿಚಾರ ಎಲ್ಲವನ್ನು ಕಾಯ, ಹಾಡು, ಗೀತೆಗಳ ರೂಪದಲ್ಲಿ ಹಾಡಿ ಹೊಗಳುತ್ತಾರೆ.

|| ಬನ್ನಿಗುರುವೇ ಸಿದ್ದಪ್ಪಾಜಿ

ಬಾರಿ ಕಂಡಾಯಾ ತಮ್ಮೆಗಲ ಮ್ಯಾಲೆ ||

ಅಯ್ಯ ಆನೆಯ ಮ್ಯಾಲೇ ಅಮ್ಮಯ್ಯನವರು

ಕುದುರೆಯ ಮ್ಯಾಲೇ ಸಿದ್ದಯ್ಯನವರು

ಪಲ್ಲಕ್ಕಿ ಮ್ಯಾಲೆ ಪರಂಜ್ಯೋತಿ

|| ಬನ್ನಿಗುರುವೇ||

| ನನ್ನ ನೀಲಿ ಸಿದ್ದಯ್ಯಾ ನೀರೇಲಿ ತಾನ ಮಾಡಿ |

ಕಾವಿ ಜೋತುರುವ ಮಡಿಮಾಡಿ

||ಬನ್ನಿಗುರುವೇ||

ಕಾವಿಜೋತುರುವ ಮಡಿಮಾಡಿ ಸಿದ್ದಯ್ಯ

ಕಾದಗಟ್ಟಿಮ್ಯಾಲೆ ಒರಗವರೇ

ಕಾದಗಟ್ಟಿಯ ಮ್ಯಾಲೆ ಒರಗಿರುವ ಸಿದ್ದಯ್ಯ

ಹಾಳು ಮಾಡವರೆ ಹಲಗೂರ

||ಬನ್ನಿಗುರುವೇ||

ಹಾಳುಮಾಡುವರೆ ಹಲಗೂರು ಚಿಲ್ಲಾಪುರವಾ

ಏಳ್ಗೀ ಮಾಡವರೆ ಮಳವಳ್ಳಿಯಾ

||ಬನ್ನಿಗುರುವೇ||

ಸ್ವಾಮಿ ಗಾಳಿಗೆ ಗಂಡಾ ಮಾರೀಗೆಯ ಮಿಂಡಾ

ಸ್ವಾಮಿ ಎಲ್ಲಾರ‍್ಗು ಗಂಡ ಗಂಡನಾದ

ಉಂಡೆ ಮೆರೆದಾವೋ ಊಬತ್ತಿ ಮೆರೆದಾವೋ

ದಂಡೇ ಮೆರೆದಾವೋ ಕೊರಳೇಲಿ

||ಬನ್ನಿಗುರುವೇ||

ಹೀಗೆ ಮಂಟೇಸ್ವಾಮಿಯ ಶಿಷ್ಯ ಪರಂಪರೆ ತಲೆತಲಾಂತರದಿಂದಲೂ ಅವರು ನಡೆದು ಬಂದ ದಾರಿಯನ್ನು ಸ್ಮರಿಸುತ್ತಾ ಅವರ ಆಚಾರ-ವಿಚಾರಗಳನ್ನು ಮೈಗೂಡಿಸಿಕೊಂಡು ಬಂದಿದ್ದಾರೆ. ಸಿದ್ದಾಪ್ಪಾಜಿ ಯಾವಾಗಲೂ ಕಾವಿಧೋತುರವನ್ನು ಮಡಿಮಾಡಿ ತಣ್ಣೀರಿನಲ್ಲಿ ಸ್ನಾನ ಮಾಡಿ ವಿಭೂತಿಧಾರಣೆಮಾಡಿ ಭಾರಿ ಖಂಡಾಯವನ್ನು ಹೆಗಲ ಮೇಲಿರಿಸಿ ತಮ್ಮ ಗುರು ಪರಂಪರೆಯನ್ನು ಸಾರುತ್ತಾ ಸಾಗುತ್ತಾರೆ. ಹಲಗೂರು ಚಿಲ್ಲಾಪುರದಲ್ಲಿನ ಪಾಂಚಾಳರನ್ನು ಹಾಳು ಮಾಡಿ ಮಳವಳ್ಳಿಯನ್ನು ಉದ್ದಾರ ಮಾಡುತ್ತಾರೆ.

ಸಿದ್ದಾಪ್ಪಾಜಿ ಬರುವ ಹೊತ್ತಿಗೆ ಹೊಂಬಾಳೆ ಒಡೆಯತ್ತದೆ. ಧೂಪ ಸಾಮ್ರಾಣಿಯ ಗಮಲಿನಲ್ಲಿ ಮೊಳಗುತ್ತದೆ. ಗಾಳಿ-ಗುಂಟರು, ಮಾರಿ-ಮಸಣಿಯರನ್ನು ಮುಂದಲೆ ಹಿಡಿದು ಗಂಟಾಕಿ ಅವರೆಲ್ಲರಿಗೂ ಭಯ ಎನ್ನ ಗಂಡನಾಗಿ ಮೆರೆಯುತ್ತಾರೆ.

ಲಕ್ಷಿಕನ ಮಗನ ತಂದೂ ಭಿಕ್ಷುಕನ ಮಾಡಿ

ಪಾಳೆಗಾರನ ಮಗನ ತಂದೂ ಪರದೇಶಿ ಮಾಡಿ

ತನ್ನ ಜಾತಿಯವರ ಮನೆಗೆ ಭಿಕ್ಷಕ್ಕೆ ಕಳುಹುವೆಯಾ...

ಧರ್ಮಗುರುವೇ... ಮಂಟೇದ ಲಿಂಗಯ್ಯಾ...

ಇದು ಮಂಟೇಸ್ವಾಮಿಯವರು ಸಿದ್ದಾಪ್ಪಾಜಿಯನ್ನು ತಮ್ಮ ಶಿಶುಮಗನನ್ನಾಗಿ ಮಾಡಿಕೊಂಡು ಅವರ ಮನೆಗೆ ಕಬ್ಬಿಣದ ಭಿಕ್ಷೆ ಕೇಳಲು ಕಳುಹಿಸುತ್ತಾರೆ. ಇದು ಕೇವಲ ಒಂದು ಭಿಕ್ಷೆಯಾಗಿ ಕಾಣುವುದಿಲ್ಲ. ಒಂದು ಕಾಲದಲ್ಲಿ ಪಾಳೆಗಾರಿಕೆಯೆ ಪರಂಪರೆಯ ವಿರುದ್ಧ ಒಡ್ಡಿದ ಪ್ರತಿರೋಧವೇ ಆಗಿದೆ.

ಹಣೆ ಬಸ್ಮವ ನೋಡಿ ಕುಲುಮೆ ಬೂದಿ ಅನ್ನುವರಲ್ಲ
ಕಪ್ಪು ತಿಲಕವ ನೋಡಿ ನಾಚಿಸಿ ನಗುವರಲ್ಲ
ಅಲ್ಲಿಗೆ ಹೇಗೋಗಲೀ ಗುರುವೇ...

ಇಲ್ಲಿ ಒಂದು ವರ್ಗದಿಂದ ಮತ್ತೊಂದು ವರ್ಗದ ಶೋಷಣೆ ಸಾಂಸ್ಕೃತಿಕ ಪ್ರತಿರೋಧವನ್ನು ಕಾಣುತ್ತೇವೆ. ಒಂದು ವರ್ಗಕ್ಕೆ ಸೀಮಿತವಾದ ಕೆಲವು ಆಚರಣೆಗಳನ್ನು ಆ ವರ್ಗವನ್ನು ಬಿಟ್ಟು ಬೇರೆ ಯಾರು ಧರಿಸಬಾರದು, ಆಚರಿಸಬಾರದು ಎಂಬ ಕಡು ವಿರೋಧಿತನವನ್ನು ಈ ಮೇಲಿನ ಸಾಲುಗಳು ತಿಳಿಸುತ್ತವೆ.

ಮಾದೇಶ್ವರ

ಮಂಟೇಸ್ವಾಮಿ ಮತ್ತು ಮಾದೇಶ್ವರ ಇಬ್ಬರು ಸಮಕಾಲೀನ ವ್ಯಕ್ತಿಗಳು. ಭೂಮಿ ಮೇಲೆ ಎಲ್ಲರಂತೆ ಬಾಳಿ ಬದುಕಿದವರು. ಎಲ್ಲ ಸಮುದಾಯಗಳ ಸಮಾನತೆಗಾಗಿ ಹೋರಾಡಿದ ಮಹಾನ್ ಮಾನವತಾವಾದಿಗಳು.

ಮಾದೇಶ್ವರನು ಕೂಡ ಉತ್ತರ ದೇಶದಿಂದ ದಕ್ಷಿಣಕ್ಕೆ ಬಂದು ಇಲ್ಲಿದ್ದಂತ ಅವ್ಯವಸ್ಥೆ ಅಸಮಾನತೆಯ ವಿರುದ್ಧ ಹೋರಾಡಿ ಸಾಮಾನ್ಯ ಜನರಲ್ಲಿ ಅರಿವು ಮೂಡಿಸಿ ಅಜ್ಞಾನವನ್ನು ಹೋಗಲಾಡಿಸಿ ಧೈರ್ಯ ತುಂಬಿ ಸಾಂಸ್ಕೃತಿಕ ಪರಂಪರೆಯ ನಾಯಕರಾಗಿದ್ದಾರೆ. ಇವರು ಕೂಡ ಅಪಾರವಾದ ಒಕ್ಕಲು, ಭಕ್ತ ಪರಂಪರೆಯನ್ನು ಹೊಂದಿದ್ದಾರೆ. ಈ ಭಕ್ತ ಪರಂಪರೆಯವರು ಕಬ್ಬಾಳು ಪರಿಸರದಲ್ಲೂ ಇದ್ದಾರೆ.

ಆರುಗಿರಿ ಆಸವರೇ ಏಳುಗಿರಿಯ ಒದ್ದವರೇ

ಬರಗದ ಮ್ಯಾಲೆ ಬರುವೋರೆ ದುಂಡು ಮಾದಯ್ಯ

ಬಾರೋ ಮಾದಯ್ಯಾ ಬರಗಾಬಂದೊ ಹಾವೇ

ಕುಂತೂರು ಮ್ಯಾಲೆ ಬರುತಾರೆ ದುಂಡು ಮಾದಯ್ಯ

ಕುಂತೂರು ಬೆಟ್ಟ ನುಡುಗೀತೋ ದುಂಡು ಮಾದಯ್ಯ

ಅಂತರ ಗಂಗೇಲಿ ಹಂತೀ ನೋಡುವರ್‍ಯಾರೋ

ಸಾಲೂರು ಮಠದ ಶರಣರು ಮಲೆಯ ಮಾದಯ್ಯ

ಆಲಂಬಾಡೀಲಿ ಹಾಡಾರೆ ದಂಬಾರು

ನೋಡುವ ಬನ್ನಿ ಗಿರಿ ಹತ್ತಿ ದುಂಡು ಮಾದಯ್ಯ

ನೋಡುವಾ ಬನ್ನೀ ಗಿರಿಹತ್ತಿ ಮಾದಯ್ಯ

ಬೇಡುವ ಬನ್ನೀ ಸರಗೊಡ್ಡಿ ಮಲೆಯ ಮಾದಯ್ಯ

ಅಲ್ಲವರೆ ಇಲ್ಲವರೆ ಮೂಡಲ ಮುಂದಾಗವರೆ

ಮೂಡಲಗಾವರೆ ಗಿರಿಯಲ್ಲಿ ಮಾದಯ್ಯ

ಹುಟ್ಟು ಬಂಜೆರುಗೆ ವರವಾಗಿ ಮಲೆಯಾ ಮಾದಯ್ಯ

ಸರಪ್ಪನ ದಾರೀಲ್ಲೀ ಸರಸಾ ನೋಡೋರ‍್ಯಾರೊ

ಏಳುಗಿರಿಯ ಮಲೆ ಮಾದೇವು ಮಲೆಯಾ ಮಾದಯ್ಯ

ಉಘೇ ಮಾದಪ್ಪೋ ಉಘೇ... ಉಘೇ...

ಮಾದಪ್ಪ ಏಳು ಬೆಟ್ಟಗಳ ನಡುವೆ ನೆಲೆಗೊಂಡಿದ್ದು ಏಳು ಬೆಟ್ಟದ ಒಡೆಯನಾಗಿರುತ್ತಾನೆ. ಅಂತರಗಂಗೇ ಮಠದಲ್ಲಿ ಅಂತುನೋಡಿದರೂ ಸಾಲೂರು ಮಠದ ಶರಣರು ಮಾದಪ್ಪನಿಗೆ ಇದ್ದಾರೆ. ಮಾದಪ್ಪನ ಒಕ್ಕಲನ್ನು ತಿಳಿಸುತ್ತದೆ. ಮಾದಪ್ಪ ತಮ್ಮ ಎಲ್ಲ ಕಷ್ಟಗಳನ್ನು ಪರಿಹರಿಸುತ್ತಾನೆ ಎಂಬ ನಂಬಿಕೆಯಿಂದ ಬೇಡುವ ಬನ್ನಿ ಮಾದಪ್ಪನ ಎಂದು ಭಕ್ತರೆಲ್ಲರು ಬೇಡುತ್ತಾರೆ.

ಮುತ್ತಾತ್ರಯರು

ಮೂಡಲ ಮುತ್ತಪ ನೋಡಪ್ಪ ಬಡಸ್ತನವ

ಮೂಡಲ ಗದ್ದೆ ಮುಗುಲುದ್ದ | ಬೆಳೆದಾರೆ

ನಾ ಮಾಡೋನೆ ಸ್ವಾಮಿ ಘನಸಾವೆಯ

ಅನ್ನದ ಮುತ್ತತ್ತಿ ಚಿನ್ನಾದ ತಿರುಪೂತಿ

ನಾಮಾದ ಕೋಟೆ ಮೇಲುಕೋಟೆ | ಚೆಲುವರಾಯ

ಸಾರಿ ಮಾರೀವೋ ಸಣ್ಣಾವ.

ಚೆಲುವಯ್ಯನ ಮನೆಗೆ ಏನ್‌ತಂದೆ ವರನಂದಿ

ಗಂಡುಲಚಿಮರ ಗರಡಗಂಬ | ಸೈಯವಾಗಿ

ನಾಬಂದೆ ಚೆಲುವಯ್ಯನ ಅರಮನೆಗೆ

ಜನಪದರ ದೃಷ್ಟಿಯಲ್ಲಿ ಮುತ್ತತ್ತಿರಾಯನ ಕಲ್ಪನೆ ಸುಂದರವಾಗಿದೆ. ಮುತ್ತತ್ರಾಯ ಕಬ್ಬಾಳಮ್ಮನ ಅಣ್ಣ ಎಂದೂ ಕರೆಯುತ್ತಾರೆ. ಕಬ್ಬಾಳಿನಿಂದ ಸುಮಾರು ಇಪ್ಪತ್ತಮೂರು ಕಿ.ಲೋ.ಮೀಟರ್‌ಗಳಷ್ಟು ದೂರವಿರುವ ಮುತ್ತತಿ ಕಾವೇರಿ ನದಿ ಹರಿಯುವ ತಾಣ. ನೆಲ, ಜಲ, ಸಮೃದ್ಧವಾಗಿದೆ. ಅಲ್ಲಿನ ಜನ ತಮ್ಮ ಬಡತನ ನೀಗಲು ಮೂಡಲದಿಕ್ಕಿನಲ್ಲಿರುವ ಗದ್ದೆ ಎದೆಮಟ್ಟ ಬೆಳೆದು ಫಲವನ್ನು ಹೆಚ್ಚಾಗಿ ನೀಡಿದರೆ, ಮುತ್ತತ್ತಿಲಿ ಹೋಗಿ ಘನವಾದ ಸಾವೆ ಮಾಡಿಬರುತ್ತೇವೆಂದು ಹರಕೆ ಹೊರುತ್ತಾರೆ. ಹಾಗೆಯೇ ಹರಕೆ ತೀರಿಸುತ್ತಾರೆ ಕೂಡ.

ಮುತ್ತತ್ತಿ ಅನ್ನ ನೀಡುವ ಸಮೃದ್ಧದ ಸಂಕೇತವೆನಿಸಿದರೆ ತಿರುಪತಿ ಶ್ರೀಮಂತಿಕೆಯ ಪ್ರತೀಕವಾಗಿದೆ. ಮೇಲುಕೋಟೆ ಚಲುವರಾಯಸ್ವಾಮಿ ನಾಮದ ಸಂಕೇತ ಈ ಮೂರು ಜನರು ಅಣ್ಣತಮ್ಮಂದಿರು ಎಂದು ಜನಪದರ ನಂಬಿಕೆ.

ಬಸವಣ್ಣ

ಜನಪದರ ಬದುಕಿನ ಆಧಾರ ಕೃಷಿಮಾಡುವುದು. ಕೃಷಿಯ ಅವಿಭಾಜ್ಯ ಅಂಗವಾಗಿರುವ ಬಸವಣ್ಣನಿಗೆ ಜನಪದರಲ್ಲಿ ಮೊದಲಸ್ಥಾನ, ಬಸವಣ್ಣ ಇಲ್ಲದೆ ಕೃಷಿಯ ಯಾವ ಕೆಲಸವು ಸಾಗುವುದಿಲ್ಲ. ಭೂಮಿಯನ್ನು ಉಳುವ, ಬಿತ್ತನೆ ಮಾಡುವ ಮತ್ತು ಬಂದಂತಹ ಬೆಳೆಯನ್ನು ಕಟಾವು ಮಾಡಿ ಒಕ್ಕಣೆಮಾಡುವಲ್ಲಿ ಬಸವಣ್ಣ ನಿರುತ್ತಾನೆ. ಹೀಗೆ ತಮ್ಮ ಪ್ರತಿನಿತ್ಯದ ಕೆಲಸದಲ್ಲಿ ಭಾಗಿಯಾಗುವ ಬಸವಣ್ಣನನ್ನು ಕುರಿತು ಜನಪದರು ಹಾಡುಗಳ ಮೂಲಕ ತಮ್ಮ ಸಂಬಂಧಗಳನ್ನು ಪ್ರೀತಿಯನ್ನು ತೋರಿರುವುದನ್ನು ಕಾಣುತ್ತೇವೆ.

ಬಸವಯ್ಯ ಹುಟ್ಟಾಲಿ

ಹೊಸ ಪ್ಯಾಟೆ ಕಟ್ಟಾಲಿ

ರಸತಾಳೆ ಕಬ್ಬು ಬೆಳೆಯಾಲಿ | ಬಸವಯ್ಯ

ಬಸವರಾಯರ ಬೀದೀಲಿ ಮೆರೆಯಾಲಿ

ಈರಯ್ಯ ಹುಟ್ಟಾಲಿ

ಈರಪ್ಯಾಟೆ ಕಟ್ಟಾಲಿ

ಈರಾಜಿ ಕಬ್ಬು ಬೆಳೆಯಾಲಿ | ಈರಯ್ಯ

ಈರಯ್ಯ ಬೀದಿಲಿ ಮೆರೆಯಾಲಿ

ಕಟ್ಟೇಯ ಕೆಳಗಾಲ ಪುಟ್ಟಗಣಗಲೆ ಹೂವ

ಹತ್ತೆಂಟು ಕೂದೆ ಕೈತುಂಬ | ಬಸವಯ್ಯ

ಕೊಂಬು ಚೆಂದುಳ್ಳ ಬಸವಯ್ಯನಿಗೆ

ಏರೀಯ ಕೆಳಗೆ ದಾರು ಗಣಗಲೆ ಹೂವ

ಐದಾರು ಕೂದೆ ಕೈತುಂಬ | ಬಸವಯ್ಯ

ಕೊಂಬು ಚೆಂದುಳ್ಳ ಬಸವಯ್ಯನಿಗೆ

ಮುಂಜಾನೆ ಎದ್ದು ಮೊದಲು ಬಸವಣ್ಣನ ಮುಖನೋಡಿ ನಂತರ ತಮ್ಮ ಕೆಲಸಗಳಲ್ಲಿ ತೊಡಗುತ್ತಾರೆ. ರಸತಾಳೆ ಕಬ್ಬು ಸಮೃದ್ಧ ಬೆಳೆಯ ಸಂಕೇತ. ಆ ಬೆಳೆಗೆ ಬಸವಣ್ಣನೇ ಕಾರಣ. ಹಾಗಾಗಿ ಬಸವರಾಯರ ಬೀದಿ ಎಂದೇ ಕರೆದು ಆ ರಾಜ್ಯಕ್ಕೆ ಬಸವಣ್ಣನೇ ರಾಜನಾಗುತ್ತಾನೆ. ತಮ್ಮ ಸುತ್ತಮುತ್ತಲಿನ ಕಟ್ಟೆ,

ಏರಿಯ ಕೆಳಗಿರುವ ಹೂಗಳನ್ನೆಲ್ಲ ತಂದು ತಮಗೆ ಸಮೃದ್ಧಿಯನ್ನು ನೀಡಿರುವ ಬಸವಣ್ಣನಿಗೆ ಪೂಜೆ ಮಾಡುವ ಸಂದರ್ಭವನ್ನು ಕಾಣುತ್ತೇವೆ.

ಭೂಮಿ ತಾಯಿ ನೆನೆಯುವುದು

ಎದ್ದು ನೆನೆದೇನು ಯಾರ‍್ಯಾರ ನೆನೆದೇನು
ಎಲ್ಲಾ ಧಾನ್ಯವ ಬೆಳೆವೋಳ | ಭೂಮಿ ತಾಯ
ಎದ್ದೊಂದರಗಳಿಗೆ ನೆನೆದೇನು.
ಏಳುತ್ಲೆ ಎದ್ದು ಯಾರ‍್ಯಾರ ನೆನೆದೇನು
ಮದ್ದೂರು ಕೆರೆಯ ಬಸವಾನ | ನೆನೆದಾರೆ
ನಾ ಹೊದ್ದಿದ್ದ ಪಾಪ ಪರಿಹಾರ
ಏಳುತಲೆ ಎದ್ದು ಯಾರ‍್ಯಾರ ನೆನೆದೇನು
ಚಂದ್ರ, ಸೂರ‍್ಯದೇವ ಶನಿದೇವರ | ನೆನೆದಾರೆ
ನನ್ನೆಳಷ್ಟು ಕರ್ಮ ಪರಿಹಾರ.

ಜನಪದರ ಜೀವನದಲ್ಲಿ ಶಿಸ್ತು, ಸಂಯಮ, ನಿಯಮಾವಳಿಗಳು ತಮ್ಮ ದಿನನಿತ್ಯದ ಜೀವನದಲ್ಲಿ ಇದ್ದೇ ಇರುತ್ತವೆ. ತಾವು ಮುಂಜಾನೆ ಏಳುವುದರಿಂದ ಹಿಡಿದು ರಾತ್ರಿ ಮಲಗುವವರೆಗೆ ಈ ಕ್ರಮಗಳನ್ನು ಪಾಲಿಸಿಯೇ ಪ್ರತಿ ದಿನಗಳನ್ನು ಮುಗಿಸುತ್ತಾರೆ. ದಿನ ಬೆಳಿಗ್ಗೆ ಎದ್ದ ಕ್ಷಣದಲ್ಲೇ ಕೂತು ಭೂಮಿ ತಾಯಿಯನ್ನು ನೆನೆದು, ಬಸವಣ್ಣನನ್ನು ನೆನೆದು, ಗುರುಹಿರಿಯರನ್ನು ನೆನೆಯುತ್ತಾರೆ. ಭೂಮಿತಾಯಿಯೇ ಅಲ್ಲವೇ ಕೋಟಿ ಕೋಟಿ ಜೀವಿಗಳ ರಕ್ಷಣೆ ಮಾಡುವುದು. ತಮಗೆ ಅನ್ನ ನೀಡುವ ಭೂಮಿ ತಾಯಿಯನ್ನು ಎದ್ದು ಅರೆಕ್ಷಣವಾದರೂ ನೆನೆಯದೆ ಹೋದರೆ ನಮಗೆ ಮತ್ತೆ ಅನ್ನ ಸಿಗುವುದಿಲ್ಲ ಎಂಬ ನಿಷ್ಠೆ ನಮ್ಮ ಜನಪದರಲ್ಲಿದೆ. ಭೂಮಿ ತಾಯಿ, ಬಸವಣ್ಣ, ಸೂರ‍್ಯ ಚಂದ್ರರನ್ನು ನೆನೆಯುವುದು ಪ್ರಕೃತಿಯ ಜೊತೆಗಿನ ಹೊಂದಾಣಿಕೆಯನ್ನು ಕಾಣಬಹುದು. ಈ ಹೊಂದಾಣಿಕೆ ಜನರಿಗೆ ಯಾವ ತೊಂದರೆ ಇಲ್ಲದೆ ಬಹುದೂರ ಕೊಂಡೊಯ್ಯುತ್ತದೆ.

ಹೊಲ ಬಿತ್ತುವ ಸಂದರ್ಭದಲ್ಲಿ ಅಣ್ಣ ತಂಗಿಯರ ನಡುವೆ

ಕಪ್ಪು ಕಣ್ಣೋನೆ ಉಬ್ಬು ನೇರುಳ್ಳೊನೆ
ಗೊಬ್ಬುರದ ನಾಡಿ ಒಡುವೋನೆ | ಅಣ್ಣಯ್ಯ
ನಿನ್ನವಸ್ತ್ರದಲವಳೆ ಸಿರಿದೇವಿ
ಹತ್ತೇರುಕಟ್ಟಿ ಎತ್ತಿನ ಪಾದ ತೊಳೆದು
ಅಕ್ಕ ಭೂಮಿತಾಯಿ ಗತಿ ಎಂದು | ಅಣ್ಣಯ್ಯ
ಸಾಲ್ಕೆ ವಾಸಿ ಶರಣೆಂದ
ಕೆಮ್ಮುಗಿಲೆದ್ದು ಕೆರೆಗೆ ನೀರು ಬಂದೊ

ನಾಳೆಗೆ ನಿನ್ನೊಲ್ಕೆ ಹದವಾದೊ | ಅಣ್ಣಯ್ಯ
ಶೆಟ್ಟಿ ಕೂರ್ಗೆ ಹಿಡಿಬಾರೊ
ಬೇಲೂರ ಹೆಣ್ಣೆ ಬ್ಯಾಗ್ನೆ ರಾಗಿ ಮಾಡೆ
ಕೂರ್ಗೆ ನಿಂದವೆ ಹೊಲ್ದೇಲಿ | ಹೊತ್ತುಗ್‌ಬಾಲೆ
ನಮ್ಮಣ್ಣೈ ನಿಂದವನೆ ಬಿಸ್ಲೇಲಿ
ಉತ್ತೆತ್ತು ಬರುವರಾಗ ಓಣೆ ಎಲ್ಲ ದುಂಬೆದ್ದೊ
ಅದುನನ್ನೆತ್ತೀನ ದನಿ ಎಂದು | ಅಣ್ಣಯ್ಯ
ಹಟ್ಟಿದಿಂದಿರಿದಾನೋ ಅರುಗೋಲ
ಆಲದ ಮರದ ಅಡಿಗೆ ಆರು ಕೂರ್ಗೆ ನಿಂದೊ
ಕೀರುಗಂಧಾದ ಒಡೆಯಾನೋ | ಅಣ್ಣಯ್ಯ
ನಿನ್ನೆತ್ತೆಲ್ಲಿ ಕುಡ್ಡೊ ತಿಳ್ನೀರ
ಕೂರ್ಗೆ ಒಡೆವೋನ್ಗೆ ಕುಮ್ಮಿ ಚೆಲ್ಲಣವೊ
ನಾಗಭೂಷಣದ ನಡುಕಟ್ಟು | ಅಣ್ಣಯ್ಯ
ನೀ ಕೂರ್ಗೆ ಒಡೆವೋದು ಸಮಕಟ್ಟು
ಹಲುಬೆ ಒಡೆವೋನ ಹಲ್ಲಿನ ಚೆಂದಾನೋಡು
ಹೊಟ್ಟೆತ್ಯಾರಣದ ಎಲೆಯಲ್ಲೊ
ಹೊಟ್ಟೆತ್ಯಾರದ ಫಲೆಯಲ್ಲೊ | ಅಣ್ಣಯ್ಯ
ನಿನ್ನೆತ್ತೆಲ್ಲಿ ಕುಡುದೊ ತಿಳಿನೀರ.
ಹೊನ್ನೇರು ಕಟ್ಟುವಾಗ ನುಡಿದ ಹೊನ್ನಾಗವಳಿ
ಹನ್ನೆರಡರಬಿ ಇದಿರಾದೊ | ಅಣ್ಣಯ್ಯ
ನಿನ್ನೊಲಕೆ ಹೊನ್ನೇರ ಒಡೆವಾಗ.

ಉತ್ತಿ ಬಿತ್ತುವ ಸಂದರ್ಭದಲ್ಲಿ ತನ್ನಣ್ಣನ ಅಂದ ಚೆಂದ, ಭಾಮ, ಎಲ್ಲವನ್ನು ವರ್ಣಿಸುತ್ತಾಳೆ. ಕೂರಿಗೆಯು ಕೃಷಿಯಲ್ಲಿ ವಿಶೇಷವಾದ ಸ್ಥಾನಪಡೆದಿದೆ. ತುಂಬ ಭಕ್ತಿ ಭಾವದಿಂದ ಮುಟ್ಟಬೇಕು. ಕೂರಿಗೆ ಹೊಡೆಯಬೇಕಾದರೆ ತನ್ನ ವಸ್ತ್ರದಿಂದ ನಡುವನ್ನು ಬಿಗಿದುಕಟ್ಟಿ ಶಿಸ್ತಿನಿಂದ ಕೂಡಿರಬೇಕು. ಮತ್ತು ಅಷ್ಟೇ ನೈಪುಣ್ಯತೆಯನ್ನು ಹೊಂದಿರಬೇಕು. ಹಾಗಾಗಿ ಕೂರಿಗೆ ಹೊಡೆಯುವವನಿಗೆ ಗಮ್ಮತ್ತಿರುತ್ತದೆ.

ಮಳೆರಾಯ

ಕೃಷಿಕರಿಗೆ ಮಳೆಯಿಲ್ಲದೆ ಯಾವ ಕೆಲಸವು ಸಾಗುವುದಿಲ್ಲ. ತಮ್ಮ ಎಲ್ಲ ಕೆಲಸಗಳಿಗೆ ಮಳೆಯೆ ಆಧಾರ. ಮಳೆಯು ಕಾಲಕಾಲಕ್ಕೆ ಸರಿಯಾಗಿ ಬಿದ್ದರೆ ತಮ್ಮ ಕೃಷಿ ಚಟುವಟಿಕೆಗಳು ಸಾಂಗವಾಗಿ ಸಾಗುತ್ತವೆ. ಮಳೆಯಿಂದಲೆ ಅನ್ನ, ಹೊನ್ನು ಎಲ್ಲ. ಒಂದು ವೇಳೆ ಮಳೆಯಿಲ್ಲದೆ ಹೋದರೆ ನಮ್ಮ ಕೃಷಿಕರ ಪರಿಸ್ಥಿತಿ ದುಸ್ತರವಾಗಿರುತ್ತದೆ. ಮತ್ತು ಆ ತಮ್ಮ ಕಷ್ಟವನ್ನು ಪರಿಹರಿಸಿಕೊಳ್ಳಲು ಮಳೆರಾಯನನ್ನು ಕರುಣೆಯಿಂದ ಬೇಡುವುದನ್ನು ಕಾಣಬಹುದು.

ಉಯ್ಯೋ ಮಳೆಯೇ ನನ್ನ ಹೂವಿನ ಮಳೆಯೇ
ಅನ್ನಾ ಕೊಡುವಂತ ಚಿನ್ನದ ಮಳೆಯೆ ಹುಯೋ ಮಳೆಯೇ
ಉತ್ತುಬಂದಣ್ಣಯ್ಯಾ ಮುತ್ತುನ ಗೋಡೆ ಒರಗಿ
ಉತ್ತುಬಂದೆ ಶಿವನೆ ಮಳೆಯಿಲ್ಲ ಹುಯ್ಯೋ ಮಳೆಯೇ
ಉತ್ತುಬಂದೆ ಶಿವನೆ ಮಳೆಯಿಲ್ಲ ಅಂದಾರೇ
ಮುತ್ತು ಸುರಿದಂಗೆ ಸುರಿದಾವೋ ಹುಯ್ಯೋಮಳೆಯೇ
ಹರಗಿಬಂದಣ್ಣಯ್ಯಾ ಹವಳದ ಗ್ವಾಡೆ ಒರಗೀ
ಹರಗಿಬಂದೆ ಶಿವನೆ ಮಳೆ ಇಲ್ಲ ಹುಯ್ಯೋ ಮಳೆಯೇ
ಹರಗಿ ಬಂದೆ ಶಿವನೇ ಮಳೆಯಿಲ್ಲ ಅಂದಾರೆ
ಹವಳ ಸುರುದಂಗೆ ಸುರಿದಾವೋ ಹುಯ್ಯೋ ಮಳೆಯೇ
ಹಾದಿ ವಲಕ್ಕೆ ರಾಜಣವ ಬಿತ್ತೀ
ಕಾಚಕ್ಕಿಯಾದೋ ಕಳೇವು ಇಲ್ಲ ಹುಯ್ಯೋ ಮಳೆಯೇ
ಕಾಚಕ್ಕಿಯಾದೋ ಕಳೆವಿಲ್ಲ ದೇವಿಂದ್ರ
ಕಾಚಕ್ಕಿ ಬಾಯ ಬುಡುತಾವೆ ಹುಯ್ಯೋ ಮಳೆಯೇ
ಅಂಬರದೋನೇ ಗೊಂಬೆಯ ಚಡದೋನೆ
ರಂಬೆರಂಕಣದ ಗವಡೀರೆ ಹುಯ್ಯೋ ಮಳೆಯೇ
ರಂಬೇರಂಕಣದಾ ಗೌಡೀರ ತೋಟದೇಲಿ
ಹೊಂಬಾಳೆ ಬಾಯ ಬುಡುತಾವೆ ಹುಯ್ಯೋ ಮಳೆಯೇ

ನಮ್ಮ ಜನಪದರು ಮಳೆಯನ್ನು ಅವಲಂಬಿಸಿರುವ ರೀತಿ ಚಿತ್ರಣವಾಗಿದೆ. ಉತ್ತುವಾಗ, ಬಿತ್ತುವಾಗ, ಬೆಳೆ ಬೆಳೆಯುವಾಗ ಹೊಡೆಬಂದು, ಕಾಚಕ್ಕಿಯಾಗಿ, ಹಣ್ಣುಮೆಟ್ಟಿ ತೆನೆ ಆಗುವವರೆಗೂ ಮಳೆ ಬೇಕೇ ಬೇಕು. ಹಾದಿಯ ಹೊಲಕ್ಕೆ ರಾಗಿ ಚೆಲ್ಲಿದ್ದು ಕಾಚಕ್ಕಿಯಾಗಿ ಬಾಯಬುಡುತ್ತಾವೆ ಒಂದೇ ಒಂದು ಹದ ಮಳೆಬಿದ್ದರೆ ಕಾಚಕ್ಕಿ ಬಲಿತು ತೆನೆಯಾಗುತ್ತದೆ. ಕಾಚಕ್ಕಿ ಸಮಯದಲ್ಲಿ ಮಳೆ ಬೇಕು. ಇದು ಬೆಳೆಯಲ್ಲಿ ಮಳೆಯ ಮಹತ್ವವನ್ನು ತಿಳಿಸುತ್ತದೆ.

ರಾಗಿ ಬೀಸುವ ಸಂದರ್ಭದಲ್ಲಿ ಹೇಳುವ ಹಾಡು

ಹೆಣ್ಣು ಪ್ರತಿದಿನ ಜೀವನದ ಜಂಜಡದ ಭಾರವನ್ನು ಇಳಿಸಲು ತನ್ನ ಕೆಲಸ ಕಾರ್ಯಗಳಲ್ಲಿ ಹಾಡುಗಳನ್ನು ಹಾಡುತ್ತಾ ಕೆಲಸವನ್ನು ಮಾಡುವುದು ಸಹಜವಾದುದಾಗಿದೆ. ಬೀಸುವ ಮತ್ತು ಕುಟ್ಟುವ ಕೆಲಸಗಳನ್ನು ಮಾಡುವಾಗ ಹಾಡಿದಂತ ಹಾಡುಗಳೇ ಬೀಸುವ ಮತ್ತು ಕುಟ್ಟುವ ಹಾಡುಗಳೆಂದು ಕರೆಯುತ್ತಾರೆ. ಬೆಳಗಿನ ಜಾವ ಕೋಳಿಕೂಗುವ ಮುನ್ನ ಹಳ್ಳಿಯ ಹೆಂಗಸು ಎದ್ದು ತನಗಾದ ಪ್ರಪಂಚದ ಭಾರವನ್ನು ಕಳೆಯಲು ರಾಗಿಬೀಸುತ್ತಾ ತನ್ನೆಲ್ಲ ಕಷ್ಟಗಳನ್ನು ಮರೆತು ಹೊಸ ಮನಸ್ಸಿನಿಂದ ಮತ್ತೆ ದಿನದ ಜೀವನಕ್ಕೆ, ಸಂಸಾರದ ನೊಗವನ್ನು ಹೊರುತ್ತಾರೆ. ಬೆಳಗಾಗುತ್ತಲೇ ಎದ್ದು ರಾಗಿಕಲ್ಲು ಹಿಡಿದು,

ಎದ್ದು ನೆನೆದೇನೋ ಯಾರ‍್ಯಾರ ನೆನೆದೇನು
ಅತ್ತೆ ಮಾನವ ಪಾದ, ಮತ್ತೆ ಗುರುವಿನ ಪಾದ
ಐವತ್ತೊಂದು ಕೋಟಿ ಶರಣಾರು | ಪಾದವ
ಎದ್ದು ಅರಗಳಿಗೆ ನೆನೆದೇನು

ಜನಪದರು ತಮ್ಮ ದೈನಂದಿನ ಕೆಲಸಗಳಿಗೆ ತೊಡಗುವಾಗ ಮುಂಜಾನೆ ಎದ್ದು ರಾಗಿಕಲ್ಲು ಹಿಡಿಯುತ್ತಿದ್ದ ಹಾಗೇ ಅತ್ತೆಮಾವ ಮತ್ತು ಮನೆಯ ಗುರುಹಿರಿಯರನ್ನು ನೆನೆಯುವುದು, ಸೊಸೆಯಾಗಿ ಬಂದ ಹೆಣ್ಣುಮಗಳೊಬ್ಬಳಿಗೆ ಆ ಮನೆಯಲ್ಲಿ ಅತ್ತೆ ಮಾವಂದಿರು ದೇವರಿಗೆ ಸಮಾನವಾಗಿರುತ್ತಾರೆ. ಗುರುಗಳಿಗೂ ಶ್ರೇಷ್ಠ ಭಕ್ತಿಯನ್ನು ತೋರುತ್ತಾರೆ.

ತಾಯಿ ತಂದೆ ಪಾದ ಮ್ಯಾಲೆ ಗುರುವಿನ ಪಾದ
ಅರವತ್ತೊಂದು ಕೋಟಿ ಶರಣಾರು | ಪಾದವ
ಎದ್ದೊಂದರಗಳಿಗೆ ನೆನೆದೇನು

ಹೆಣ್ಣು ಮಗಳೊಬ್ಬಳು ಪ್ರತಿದಿನ ಮುಂಜಾನೆ ಎದ್ದು ತಮಗೆ ಪ್ರೀತಿ ಪಾತ್ರರಾದ ದಾರಿ ದೀಪವಾಗಿರುವಂತ, ನಮ್ಮ ಬದುಕನ್ನು ಹಸನುಗೊಳಿಸಿ ಮಾರ್ಗ ತೋರುವಂತ ತಂದೆ-ತಾಯಿ, ಗುರು ಹಿರಿಯರನ್ನು ನೆನೆದು ನಂತರ ತಮ್ಮ ದಿನಿತ್ಯದ ಕೆಲಸ ಕಾರ್ಯಗಳಲ್ಲಿ ತೊಡಗುತ್ತಾರೆ. ತಂದೆ-ತಾಯಂದಿರಷ್ಟೇ ಸ್ಥಾನವನ್ನು ಗುರುಗಳಿಗೂ ನೀಡುವ, ಗೌರವಿಸುವ ಮನೋಭಾವವನ್ನು ಉಳ್ಳವರಾಗಿದ್ದಾರೆ.

ಜನಪದರಿಗೆ ತಂದೆ-ತಾಯಿ, ಅತ್ತೆ-ಮಾವ, ಗುರು-ಹಿರಿಯರು ಕೋಟ್ಯಾನುಕೋಟಿ ಶರಣರ ಆದರ್ಶಮಾರ್ಗಗಳೇ ಇವರ ನಿಷ್ಕಲ್ಮಶ ಮನಸ್ಸಿನ ಪ್ರೀತಿತುಂಬಿದ ಬಾಳಿಗೆ ದಾರಿದೀಪವಾಗಿವೆ. ಆದ ಕಾರಣ ಪ್ರತಿದಿನ ಎಲ್ಲರನ್ನು ನೆನೆದು ತಮ್ಮ ಕೆಲಸಗಳಲ್ಲಿ ತೊಡಗುತ್ತಾರೆ.

ರಾಗಿ ಬೀಸೋ ಕಲ್ಲೆ ರನ್ನ ಮುತ್ತಿನ ಕಲ್ಲೆ
ನನ್ನಪ್ಪಾನ ಮನೆಯ ಪದಗಲ್ಲು | ಪಚ್ಚೆಕಲ್ಲೆ
ನಾ ಹಿಡಿದ ಕಲ್ಲೆ ತೆರೆಹುಯ್ಯೋ

ರಾಗಿ ಬೀಸುವ ಕಲ್ಲನ್ನು ರತ್ನ ಮುತ್ತುಗಳಿಗೆ ಹೋಲಿಸಿರುವುದನ್ನು ಇಲ್ಲಿ ಕಾಣಬಹುದು. ಇದು ತವರು ಮನೆಯ ಸಂಕೇತವಾಗಿದ್ದು ತನ್ನ ಆತ್ಮೀಯ ಬಂಧುವಿನ ರೀತಿಯಲ್ಲಿ ಅದರ ಮತ್ತು ಜನಪದರ ನಡುವಿನ ಸಂಬಂಧವಿದೆ.

ಅಕ್ಕಿ ಬೀಸೋಕಲ್ಲೆ ಚಕ್ಕಾರೆ ಪುಡಿಗಲ್ಲೆ
ನಮ್ಮಾವನ ಮನೆಯ ಪದಗಲ್ಲೆ | ಪಚ್ಚೇಕಲ್ಲೆ
ನಾ ಹಿಡಿದ ಕಲ್ಲೆ ತೆರೆಹುಯ್ಯೋ

ರಾಗಿ ಬೀಸುವುದು ತವರು ಮನೆಯ ಸಂಕೇತವಾದರೆ ಅಕ್ಕಿ ಬೀಸುವ ಕಲ್ಲು ಮಾವನ ಮನೆಯ ಸಿರಿವಂತಿಕೆಯ ಸಂಕೇತ ಎಂದು ಹೇಳುತ್ತದೆ. ಇಲ್ಲಿ ತವರು ಮನೆಗಿಂತಲೂ ಮಾವನ ಮನೆಯವರು ಸ್ಥಿತಿವಂತರೆಂಬ ಭಾವನೆ ವ್ಯಕ್ತವಾಗುತ್ತದೆ.

ರಾಗಿಕಲ್ಲಿನ ಮೇಲೆ ಚೆಲ್ಲೀವು ನಮ್ ಹಾಡು
ಬಲ್ಲಂಥ ಜಾಣರು ಬರಕೊಳ್ಳಿ | ನಮ್‌ಹಾಡ
ಬಳ್ಳ ತಗೊಂಡು ಅಳಕೊಳ್ಳಿ.

ಬೀಸುವಂತಹ ಸಂದರ್ಭದಲ್ಲಿ ಮಹಿಳೆಯರು ಹಾಡುವಂತ ಬೀಸೋ ಪದಗಳು ಹಾಡಿ ಹರಿದು ಹೋಗುತ್ತವೆ. ವಿದ್ಯಾವಂತ ಜಾಣರು ಅವನ್ನು ಬರೆದು ಎಷ್ಟು ಬೇಕೋ ಅಷ್ಟನ್ನು ಸಂಗ್ರಹಿಸಿಕೊಳ್ಳಿ ಎಂದು ಹೇಳುತ್ತಾರೆ.

ಕಲ್ಲಮ್ಮ ತಾಯಿ ನೆಲ್ಲವ್ವ ರಾಜಣವ
ಜಲ್ಲಾಜಲ್ಲಾನೆ ಉದುರವ್ವ | ಸರಸತಿ
ಬೆಲ್ಲಾದಾರತಿಯ ಬೆಳಗೇನು

ಜನಪದರು ರಾಗಿಕಲ್ಲನ್ನು ಕೂಡ ತಾಯಿ, ದೇವರು ಎಂದೇ ಭಾವಿಸಿರುವುದು ಅವರ ಭಕ್ತಿ ಭಾವದಿಂದ ತಿಳಿಯುತ್ತದೆ. ತಾವು ಬಳಸುವ ದಿನನಿತ್ಯದ ವಸ್ತುಗಳನ್ನು ಭಕ್ತಿಭಾವದಿಂದ ಪೂಜಿಸಿ ಅವುಗಳ ಜೊತೆ ನೇರ ಸಂಬಂಧವನ್ನು ಹೊಂದಿರುತ್ತಾರೆ. ಅವುಗಳಿಗೆ ದೈವತ್ವದ ಸ್ಥಾನವನ್ನು ನೀಡುತ್ತಾರೆ.

ಸರಸತಿ ಸಣ್ಣೋಳೆ ನಗುಮೊಕದ ಕಡೆಚೆಲುವೆ
ಕಣ್ ಕಂಟದ ಅರಸೆಗಿರಿಜಮ್ಮ ಪಾರ್ವತಿ
ಕಲಿಸವ್ವ ಕಲ್ಯಾಣದ ಮತಿಗೋಳ
ರಾಗಿ ಕಲ್ಲಿಡಿದು ಧರ್ಮರ ಪಾದ ನೆನೆದು
ಸೀತೆ ಸಿರಿ ರಾಮಾರ ನೆನೆದೇನು
ಇದ್ದಟ್ಟು ಮತಿಯ ಕೊಡವ್ವ
ಕಲ್ಲು ಬಿಡುವೋನೆ ಎಲ್ಲಾ ದೇವರು ಬನ್ನಿ
ಕಪ್ಪಡಿ ರಾಚಪ್ಪ ಕಾವೇರಿ ನಂಜುಂಡಲಿಂಗು
ಮಾದೇಶ್ವರ ಮಂಟೇಸ್ವಾಮಿ
ಕಣಿವೆಯ ಕಬ್ಬಾಳಿ
ಕಲ್ಬುಟ್ಟು ಕೈಯ ಮುಗಿತೇನೆ

ರಾಗಿ ಬೀಸಿದ ಮೇಲೆ ಕಲ್ಲು ಬಿಡುವಾಗ ಅತ್ತೆ ಮಾವರ ಪಾದನೆನೆದು ತಂದೆ ತಾಯಿಯವರ ಪಾದನೆನೆದು, ಸೂರ್ಯ, ಚಂದ್ರ, ಭೂಮಿ ದೇವರ ಪಾದನೆನೆದು ಹಕ್ಕಿ, ಪಕ್ಷಿ, ನೆನೆದು ಕಬ್ಬಾಳಮ್ಮ, ತಿರುಪತಿಯಪ್ಪ, ಸಿದ್ದಪ್ಪಾಜಿ, ಮಂಟೇಸ್ವಾಮಿ ನೆನೆದು ಮಾದೇಶ್ವರನ ನೆನೆದು ಕೈ ಮುಗಿದು ಬಿಡುತ್ತಾರೆ.

ಸೋಬಾನೆ ಪದಗಳು

ಮದುವೆಯ ಸಡಗರ ಸಂಭ್ರಮದಲ್ಲಿ ಬಹುತೇಕ ಶಾಸ್ತ್ರ ಸಂಪ್ರದಾಯಗಳು ನಡೆಯುವುದು ಸೋಬಾನೆ ಪದಗಳ ಜೊತೆಯಲ್ಲಿ. ಸೋಬಾನವೇ ಶುಭ ಸೂಚಿಸುವಂತಹದ್ದು. ಶುಭಕೋರುವ ಸಂದರ್ಭದಲ್ಲೆಲ್ಲ ಈ

ಹಾಡುಗಳನ್ನು ಹಾಡಲಾಗುತ್ತದೆಯಾದರೂ ಮದುವೆಯ ಆರಂಭದಿಂದ ಅಂತ್ಯದವರೆಗೆ ಆವರಿಸಿಕೊಂಡಿರುವ ಸೋಬಾನೆ ಪದಗಳು. ಪ್ರತಿಯೊಂದು ಸಂದರ್ಭಗಳಲ್ಲೂ, ಆ ಸಂದರ್ಭಕ್ಕೆ ತಕ್ಕಂತೆ ಹಾಡುಗಳನ್ನು ಹಾಡುತ್ತಾರೆ. ವೀಳ್ಯೇ ಶಾಸ್ತ್ರದ ಹಾಡು, ಧಾರೆ ಎರೆಯುವ ಹಾಡು, ನೀರುಯ್ಯುವ ಶಾಸ್ತ್ರದ ಹಾಡು, ಜರಿಯುವ ಪದಗಳು ಇತ್ಯಾದಿಯಾಗಿವೆ.

ಧಾರೆ ಎರೆಯೋ ಪದ

ಆಲಾದೆಲೆಯಲ್ಲಿ ಆದಿ ಚಿನ್ನಾಕಟ್ಟಿ
ಮಾಡಿದ್ದೋನ್ಯಾರೋ ಮೊನುಗಾರ
||ಕಲ್ಯಾಣವೇ ಗೌರೀ ಕಲ್ಯಾಣವೆ||
ಮಾಡಿದ್ದೋನ್ಯಾರೋ ಮೊನುಗಾರ್ರೈನೂತಲಿ
ಮೆಲ್ಲುಗುದುರುಸಯ್ಯ ಕೊರಳೀಗೇ...||ಕಲ್ಯಾಣವೇ ಗೌರೀ||
ಮುತ್ತುಗದೆಲೆಯಲ್ಲಿ ಮುದುರಿ ಚಿನ್ನಾಕಟ್ಟಿ
ಕುಟ್ಟಿದೋನಾರೋ ಮೊನುಗಾರ...
ಕುಟ್ಟಿದ್ದೋನ್ಯಾರೋ ಮೊನುಗಾರ್ರೈದೂಡಲಿ
ಎಲ್ಲಾದೇವುರುಗೇ ಶರಣೆಂದೋ
ಎಲ್ಲಾದೇವುರುಗೆ ಶರಣೆಂದಯ್ಯಾರೂತಲಿ
ಮೆಲ್ಲುಗುದರುಸಯ್ಯ ಕೊರಳೀಗೇ.... ||ಕಲ್ಯಾಣವೇ||
ಕಂಕಣದೊತ್ತೀಗೆ ಯಾರ್ಯಾರು ಬರಬೇಕು
ಕಂಕಣದ ಕೈಯ ಹಿರಿಯಣ್ಣ
ಕಂಕಣ ಕೈಯ್ಯ ಹಿರಿಯಣ್ಣ ಸೋದುರಮಾವ
ಕಂಕಣದ ಹೊತ್ತೀಗೆ ಬರಬೇಕೂ...||ಕಲ್ಯಾಣವೇ||

ಮದುವೆಯಲ್ಲಿ ಧಾರೆ ಎರೆಯುವುದು ಒಂದು ಮಹತ್ವ ಘಟ್ಟ. ಧಾರೆ ಸಮಯದಲ್ಲಿ ಎಲ್ಲರೂ ಬಂದಿರಬೇಕು. ಮದುವೆ ಎಂದರೆ ಪಾರ್ವತಿ ಪರಮೇಶ್ವರ ಕಲ್ಯಾಣ ಎಂದೇ ಜನರ ನಂಬಿಕೆ. ಎಲ್ಲರೂ ಕೂಡಿ ಮಾಡಬೇಕಾದ ಸಾಮಾಜಿಕ ಕಾರ್ಯವದು. ಜನರ ನೆರವಿನಿಂದ ಮದುವೆ ನಡೆಯುತ್ತದೆ ಎಂದೇ ಅಕ್ಷತೆಗೆ ತಪ್ಪಿಸಿಕೊಳ್ಳಬಾರದು ಮತ್ತು ಪ್ರತಿಯೊಬ್ಬರು ಹಾಲೆರೆಯಬೇಕು ಎಂಬ ಸಂಪ್ರದಾಯ ಇಂದಿಗೂ ಇದೆ. ಆದ್ದರಿಂದ ಅಣ್ಣ ತಮ್ಮಂದಿರು, ಕುಟುಂಬದ ಎಲ್ಲರೂ ತಮ್ಮ ಗ್ರಾಮದ ಎಲ್ಲ ಜನರು ಬರುತ್ತಾರೆ.

ಕೆಂದಸಿನಾಲ ಹಿಂಡಿ ಬಟ್ಟಲ ತುಂಬಿ
ಲಿಂಗ ವಜ್ಜುರದ ಕೈಯ್ಯಧಾರೆ
ಲಿಂಗ ವಜ್ಜುರುದ ಕೈಯ್ಯಾರೈತಾವಂತ
ಮದ್ದಾನೆ ಇಂಡು ಮರಿಮರೆತೋ ||ಕಲ್ಯಾಣವೇ||

ಮಣೆಮ್ಯಾಲೆ ಕೂತುಕಂಡು ಮಣೆಯನೇನೆ ನೋಡಿಯೇ
ಮಾನ್ನೇವ್ರ ನೋಡೇ ಬಲದೇಲಿ
ಮಾನ್ನೇವ್ರ ನೋಡೇ ಬಲದೇಲಿ ಹೆಣ್ಣಮ್ಮ
ಮಾತಾಡೋ ಚಿನ್ನ ಹೊಳೆದಂಗೆ....
||ಕಲ್ಯಾಣವೇ ಗೌರೀ||

ಧಾರೆ ಎರೆಯಲು ಹೆಣ್ಣು ಗಂಡುಗಳನ್ನು ಎದುರು ಬದುರು ಕೂರಿಸಿ ಇಬ್ಬರ ಕೈಗಳನ್ನು ಸೇರಿಸಿ ಆ ಕೈಗಳ ಮೇಲೆ ಒಂದು ತೆಂಗಿನ ಕಾಯಿಯನ್ನು ಇಟ್ಟು ಅದರ ಮೇಲೆ ಹಾಲೆರೆಯುತ್ತಾರೆ. ಈ ಹಾಲೆರೆಯುವುದನ್ನು ತಮ್ಮ ಹಾಡುಗಳಲ್ಲಿ ಹಿಡಿದಿಡುವ ಜನಪದರ ಕಾವ್ಯ ಪ್ರಜ್ಞೆ ಪದಗಳ ಜೋಡಣೆ ನಿಜಕ್ಕೂ ಮೆಚ್ಚುವಂತದ್ದು.

ಜರಿಯುವ ಪದ

ಮದುವೆ ಮುಗಿದ ನಂತರ ಗಂಡು ಹೆಣ್ಣಿನ ಕಡೆಯವರು ಪರಸ್ಪರ ಜರಿಯುವ ಪದಗಳನ್ನು ಹಾಡುತ್ತಾರೆ. ಇವು ಜನಪದ ಹಾಸ್ಯಪ್ರಜ್ಞೆಗೆ ಒಳ್ಳೆಯ ಉದಾಹರಣೆ. ಭಾವನಾತ್ಮಕವಾಗಿ ಇರುವಂತ ಈ ಸಂದರ್ಭಗಳಲ್ಲಿ ಜರಿಯುವ ಪದ ಅವರ ದುಗುಡವನ್ನು ದೂರಮಾಡುತ್ತವೆ.

ಹೆಣ್ಣಿನ ತಂದೆ-ತಾಯಿ ಇಬ್ಬರು ಗಂಡನ್ನು ಸರಿಯಾಗಿ ನೋಡದೆ ಮಾಡದೆ ತನ್ನ ಚಿನ್ನದಂತ ಮಗಳನ್ನು ಕೊಟ್ಟು ಮೋಸಹೋದೆವು ಎಂದು ಮಾತಾಡುವ ಸಂದರ್ಭದ ಹಾಡು,

ಪಂಚೆಹುಟ್ಟುಕಂಡ್ರೆ ಪಂಚುಪತ್ರೆ ಮುಡಿಯೋನ್ಗೆ
ಇಂತೋರ್ಗೆ ಮಗಳ ಕೊಡಬಹುದೇ ಶೋಬಾನವೇ ||
ಕಾಪಿ ಕುಡಿಯಂದ್ರೆ ಕಲಗಚ್ಚ ಕುಡಿಯೋನ್ಗೆ
ಇಂತೋರ್ಗೆ ಮಗಳ ಕೊಡಬಹುದೇ ಶೋಬಾನವೇ||
ಊರು ನೋಡಂದ್ರೆ ಇವನು ಸೂರಾದ್ರು ನೋಡುನ್ಗೆ
ಇಂತರೂಗೆ ಮಗಳ ಕೊಡಬಹುದೇ ಶೋಬಾನವೇ||
ಕೊಡಬಾರದಾಗಿತ್ತು ನಾವು ಕೊಟ್ಟೀ ಮೋಸವಾದೋ
ಇನ್ನೇನು ಆಯ್ತು ಅನ್ನುಆಯ (ಅನ್ಯಾಯ) ಶೋಬಾನವೆ
ಗಂಡಿನ ತಾಯಿಯನ್ನು ಹೆಣ್ಣಿನ ಕಡೆಯವರು ಜರಿಯುವುದು ಈ ಕೆಳಗಿನ ಸಾಲುಗಳಲ್ಲಿ ಕಾಣಬಹುದು.

ಕಜ್ಜಾಯ ಉಯ್ತಿದ್ರು ನಾವು ಕಿಜ್ಜೂರಲಿನಿಂತ್ರಿದ್ರು
ಕಜ್ಜಾಯ ಉಯ್ಕಂಡು ಮನೆಗೋದ್ರು ಶೋಬಾನವೇ||
ಕಜ್ಜಾಯ ಉಯ್ಕಂಡು ಮನೆಗೋದ ಗಂಡೋರವ್ವ
ಕಾವಲಿಯ ನೆಕ್ತಿದ್ಲು ಮನೆ ಒಳಗೆ ಶೋಬಾನವೇ||

ಹೀಗೆ ಹೆಣ್ಣಿನ ಕಡೆಯವರು ಗಂಡಿನ ಕಡೆಯವರನ್ನು ಗಂಡಿನ ಕಡೆಯವರು ಹೆಣ್ಣಿನ ಕಡೆಯವರನ್ನು ಜರಿಯುವುದು ಆರೋಗ್ಯಕರವಾಗಿದ್ದರೆ ಒಳ್ಳೆಯದು, ಕೆಲವು ಸಂದರ್ಭಗಳಲ್ಲಿ ಜಗಳಗಳೂ ಉಂಟಾಗುವ ಸಂದರ್ಭಗಳು ಬರುತ್ತವೆ.

ಅಣ್ಣ-ತಂಗಿಯರ ಹಾಡು

ಜಾನಪದದಲ್ಲಿ ಅಣ್ಣ ತಂಗಿಯರ ಜೀವನ ಹೃದಯ ಸ್ಪರ್ಶಿಯಾಗಿದೆ. ಅವರಾಡುವ ಮಾತುಗಳು ಭಾವನಾತ್ಮಕ ಲೋಕಕ್ಕೆ ಕರೆದೊಯ್ಯುತ್ತದೆ.

ನನ್ನೊಬ್ಬಣ್ಣಾ ಚೆಂದಾ ಕಬ್ಬುನಗದ್ದೆ ಚಂದಾ
ನನ್ನೊಬ್ಬಣ್ಣಾ ತರುವ ಮುಯ್ಯು ಚೆಂದ
ಒಬ್ಬಣ್ಣಾತರುವೋ ಮುಯ್ ಚೆನ್ನೊ ಮುಗ್ಗಿನರವಕೇ
ಬಗ್ಗುದುರೆ ಮುಗ್ಗು ಸುರುದಾವೋ

ಇಲ್ಲಿ ತಂಗಿ ಅಣ್ಣನನ್ನು ತುಂಬಿದ ಕಬ್ಬಿನ ಗದ್ದೆಯಂಗೆ ತುಂಬ ಸುಂದರವಾದ ಮೈಕಟ್ಟನ್ನು ಹೊಂದಿದ್ದಾನೆ. ಅವನು ತರುವ ಉಡುಗೊರೆಯೂ ಅಷ್ಟೇ ಚೆನ್ನಾಗಿದೆ ಎಂದು ಹೇಳುತ್ತಾರೆ.

ಒಬ್ಬಣ್ಣಾ ಹುಟ್ಟಿ ಗೆಜ್ಜುಗದ ಕುಡಿಯಾದಾ
ನಾವಕ್ಕತಂಗೇರಿಗೆ ತವುರಾದ
ಅಕ್ಕ ತಂಗೇರಿಗೆ ತವುರಾದ ಅಕ್ಕಯಾ
ನಾವು ತವುರೀಗೆ ಹೋಗುದು ಬಲು ಚೆಂದ

ಅಕ್ಕ-ತಂಗಿಯರಿಗೆ ತವರೂರು ಅಂದರೆ ಪ್ರಾಣ. ತಾಯಿ-ತಂದೆ ಇರುವ ತವರು ನೆಮ್ಮದಿಯ ತವರು. ತಾಯಿ ಸತ್ತಮೇಲೆ ತವರಿಗೆ ಹೋಗಬಾರದು ಎಂದು ಕೆಲವರು ಹೇಳಿದರೆ, ಇಲ್ಲಿ ಅಣ್ಣ, ತಾಯಿ-ತಂದೆಯ ಸ್ಥಾನ ತುಂಬುತ್ತಾನೆ ಎಂಬ ನಂಬಿಕೆ ಇವರಲ್ಲಿದೆ.

ಗುರುಗಳ ಮ್ಯಾಲಿನ ಪದ

ಗುರುಗಳು ಬಂದವರೇ ಸ್ವಾಮಿ ನಮಗೇನು ತಂದವರೇ
ಕಮಲದ ಹೂವ ಕೈಯಲ್ಲಿಡಿದು ಗುರುಗಳು ಬಂದವರೇ
ಹಾದೀಲಿ ಗುರು ಕಂಡೇ ನಾನು ಪಾದ ಹಿಡಿಯುದ ಮರೆತೇ
ನಾಗಾರ ಹಾವ್ನಂಗೆ ಹೊರಾಳಿದ್ದೆ ಗುರುಗಳು ಬಂದವರೇ
ನಾಗಾರ ಹಾವ್ನಂಗೆ ನಾನು ಹೊರಳಿದ್ದೆ ಗುರುಗೋಳೇ
ಪಾದುದ್ದೂಳುತ್ತ ಕೊಡಿ ನಮಗೆ ಗುರುಗಳು ಬಂದವರೇ
ಅಟ್ಟೇಲಿ ಗುರುಕಂಡೆ ನಾನು ತಟ್ಟಾನೆ ಮನೆಗೋದೆ
ಸತ್ತಾ ಹಾವ್ನಂಗೆ ಹೊರಳಿದ್ದೆ ಗುರುಗಳು ಬಂದವರೆ

ಸತ್ತಾ ಹಾವ್ನಂಗೆ ನಾನು ಹೊರಳಿದ್ದೆ ಗುರುಗೋಳೇ

ಕಪ್ಪು ದೂಳುತ್ವ ಕೊಡಿ ನಮಗೆ ಗುರುಗಳು ಬಂದವರೇ

ಜನಪದರಲ್ಲಿ ತಂದೆ-ತಾಯಿ ಮತ್ತು ಗುರುಗಳಲ್ಲಿ ಎಲ್ಲಿಲ್ಲದ ಪ್ರೀತಿ ಗೌರವ. ದಾರೀಲಿ ಬರುವ ಗುರುಗಳನ್ನು ನೋಡಿದಂತ ಇವರು ಅವರ ಪಾದ ಹಿಡಿದು ಆಶೀರ್ವಾದ ಪಡೆಯುವುದನ್ನು ಮರೆತು ಪಡುವ ಪಶ್ಚಾತ್ತಾಪವನ್ನು ನೋಡಿದರೆ ಗುರುಗಳಲ್ಲಿ ಇವರು ಇಟ್ಟಿರುವ ಭಕ್ತಿಯನ್ನು ತೋರುತ್ತದೆ. ಮತ್ತೆ ನೆನಪು ಮಾಡಿಕೊಂಡು ಮನೆಯಲ್ಲಿ ಗುರುಗಳನ್ನು ನೋಡಿ ಪಾದಕ್ಕೆರಗಿ ಆಶೀರ್ವಾದ ಪಡೆಯುವುದು ಸತ್ತ ಹಾವು ಬಿದ್ದು ಹೊರಳಾಡಿದ ಹಾಗೆ ಗುರುಗಳ ಪಾದದ ಮೇಲೆ ಹೊರಳಾಡುತ್ತಾರೆ. ಇಲ್ಲಿ ಜನಪದರು ಕಾವ್ಯಕಟ್ಟುವಾಗ ಬಳಸುವ ಉಪಮೆ, ರೂಪಕಗಳು ಶಿಷ್ಟ ಸಾಹಿತ್ಯ ರಚನೆಯನ್ನು ನಾಚಿಸುತ್ತದೆ.

ಇಲ್ಲಿನ ಹಾಡುಗಳಲ್ಲಿ ಭಕ್ತಿಯ ಭಾವವನ್ನು ಉದ್ದೀಪನಗೊಳಿಸುವ ಮಹಾಮಹಿಮಾನ್ವಿತರ ಸ್ತುತಿ ಮಾಲೆಗಳು, ಕೃಷಿಯಲ್ಲಿ ತೊಡಗಿದಾಗ, ಹೊಲವನ್ನು ಉತ್ತು ಬಿತ್ತಿ ಒಕ್ಕಣೆಯವರೆಗಿನ ಪದಗಳು, ಮದುವೆಯ ಸಂದರ್ಭದಲ್ಲಿನ ಸೋಬಾನೆ ಪದಗಳು, ಬೀಸುವ ಕುಟ್ಟುವ ಪದಗಳು, ಅಣ್ಣ-ತಂಗಿಯರ ಕರುಳ ಬಳ್ಳಿಯ ಸಂಬಂಧವನ್ನು ಮನೋಜ್ಞವಾಗಿ ತಿಳಿಸುತ್ತವೆ. ಗುರುಹಿರಿಯರ ಭಕ್ತಿ ಭಾವನೆಗಳು ವರ್ಣಿತಗೊಳ್ಳುವ ಈ ಹಾಡುಗಳು ಪ್ರಸ್ತುತ ಪ್ರದೇಶದ ಜನರ ಸಂಸ್ಕೃತಿಯನ್ನು ಪರಿಚಯಮಾಡಿಕೊಡುವ ಮೂಲಕ ಇಲ್ಲಿನ ಜನರ ಜನಪದದ ಶ್ರೀಮಂತ ಸಾಹಿತ್ಯವನ್ನು ಪ್ರತಿಬಿಂಬಿಸುತ್ತವೆ.

೫.೩. ಗಾದೆಗಳು

"ವೇದ ಸುಳ್ಳಾದರೂ ಗಾದೆ ಸುಳ್ಳಾಗದು" ಎಂಬ ಗಾದೆ ಮಾತು ನಮ್ಮಲ್ಲಿದೆ. ಇದು ನೂರಕ್ಕೆ ನೂರರಷ್ಟು ಸತ್ಯ. ಅದರ ಅರ್ಥ ಅನುಭವದ ಮಾತುಗಳು ಈ ಗಾದೆಗಳು. ಅವು ವೇದಕ್ಕಿಂತಲೂ ಬಲಿಷ್ಠ ಮತ್ತು ಸತ್ಯಯುತ. ಗಾದೆ ಸಾಹಿತ್ಯದ ಒಂದು ಪ್ರಕಾರ. ಅದರಲ್ಲಿ ಮುಖ್ಯವಾಗಿ ಒಡೆದು ಕಾಣುವ ಗುಣ ಸರಸ, ಅದು ಆಕಾರದಲ್ಲಿ ಚಿಕ್ಕದು ಕೇಳಿಕೆಯಲ್ಲಿ ಪ್ರಾಸಬದ್ಧವಾದುದು, ಸಮಾಸೋಕ್ತಿ ಅದರ ಜೀವಾಳ. ಸನ್ನಿವೇಶದ ಅನುಭಾವಕ್ಕೆ ಅದೊಂದು ಅಳತೆಗೋಲಾಗಿರುವ ಗಾದೆಯಲ್ಲಿ ಹೋಲಿಕೆಗೆ ಹೆಚ್ಚು ಪ್ರಾಶಸ್ತ್ಯ.

ಗಾದೆ ಎನ್ನುವ ಪದವು ಸಂಸ್ಕೃತದ 'ಗಾಥಾ' ಶಬ್ದದಿಂದ ಹುಟ್ಟಿರಬಹುದು ಎನ್ನುತ್ತಾರೆ. ಗಾಥಾ ಎಂದರೆ ಹಾಡು, ಸೂಕ್ತಿ ಅಥವಾ ಸೂತ್ರ. ತಲೆಮಾರಿನಿಂದ ತಲೆಮಾರಿಗೆ ಪರಂಪರಾಗತವಾಗಿ ಹರಿದುಬಂದ ಸೂಕ್ತಿಯೇ ಗಾದೆ. ಇದಕ್ಕೆ ಸಂವಾದಿಯಾಗಿ, ನಾಣ್ಣುಡಿ, ಲೋಕೋಕ್ತಿ, ಸಾಮ್ಯತೆ, ಒಳ್ನುಡಿ ಮುಂತಾದ ಪದಗಳು ಇವೆ.

ಗಾದೆಗಳ ಅನುಭವ ಜಗತ್ತು ವಿಸ್ತಾರವಾದುದು. ವ್ಯಕ್ತಿಗತವಾದುದಲ್ಲ. ಇವುಗಳ ಮೂಲಕ ವ್ಯಕ್ತವಾಗುವ ವಿಚಾರ, ನೀತಿ, ವಿವೇಕ, ಸಹಜತೆ, ವಿನೋದಗಳಿಗೆ ಎಣೆಯಿಲ್ಲ. ಪ್ರಾಚೀನ ಕಾಲದಿಂದ ಇಂದಿನವರೆಗೂ ನೂತನವಾದ ಗಾದೆಗಳು ಸೃಷ್ಟಿಯಾಗುತ್ತಲೇ ಇವೆ. ಅನಂತ ಜನ ಅನೇಕ ಕಾಲದಲ್ಲಿ ಅನೇಕ ಕಡೆಯಲ್ಲಿ ಅನುಭವಿಸಿದ ಅನುಭಾವವದು. ಪ್ರತಿಭಾವಂತ ವ್ಯಕ್ತಿ ಅದನ್ನು ಗುರುತಿಸಿ ಶಬ್ದದಲ್ಲಿ ಹಿಡಿದಿಡುತ್ತಾನೆ.

ಉಳಿದವರು ಅದನ್ನು ಹೇಳಿ ಕೇಳಿ ತಮ್ಮ ಜೀವನದ ಅನುಭವವನ್ನು ಪ್ರತಿನಿಧಿಸಿದರೆ, ಬಹುಕಾಲ ಜೀವಂತವಾಗಿ ಉಳಿಯುವುದು. ಇಲ್ಲದಿದ್ದರೆ ಮುಗ್ಗುರಿಸಿ ಸಾಯುವುದು.

"ಬಾಯಿಂದ ಬಾಯಿಗೆ ಬರುತ್ತಿರುವ ಗಾದೆಗಳು ಮಾನವನ ಅನುಭವದ ಅತ್ಯುತ್ತಮ ದಾಖಲೆಯಾಗಿವೆ. ಸಾಮಾನ್ಯವಾಗಿ ಶಿಷ್ಟಜನ ಪರಿಗಣಿಸದೆ ಬಿಟ್ಟ ಅನೇಕ ಸೂಕ್ಷ್ಮಗಳು ಇಲ್ಲಿ ಪರಿಣಾಮಕಾರಿಯಾಗಿ ಕಂಡುಬರುತ್ತವೆ. ಒಬ್ಬನೇ ವ್ಯಕ್ತಿ ಆರಂಭದಲ್ಲಿ ಅನುಭವ ವಿಶೇಷವೊಂದಕ್ಕೆ ಬೇರೊಬ್ಬನ ಮನಸ್ಸನ್ನು ತಟ್ಟುವಂತೆ ಕೊಟ್ಟ ಮಾತಿನ ರೂಪವೇ ಗಾದೆ" (ಪ್ರೊ.ಕಾಳೇಗೌಡ ನಾಗವಾರ, ಬೀದಿ ಮಕ್ಕಳು ಬೆಳೆದೊ, ಗಾದೆಗಳ ಸಂಕಲನ, ಪುಟ.೪)ಗಳಾಗಿದ್ದು, ಇವು ಸಕಲ ಜೀವನಾನುಭವ ಜನ್ಯವಾದ ಮತ್ತು ಜೀವನ ಸಾರವನ್ನು ಒಳಗೊಂಡ ರಸಗುಟ್ಟುಗಳಿವು. ಇದರಷ್ಟು ವ್ಯಾಪಕವಾದ, ಪ್ರಭಾವಶಾಲಿಯಾದ, ಆಕರ್ಷಣೀಯವಾದ, ಪ್ರಯೋಜನಕಾರಿಯಾದ ಸಾಹಿತ್ಯ ಪ್ರಕಾರ ಮತ್ತೊಂದಿಲ್ಲ. 'ಆಡು ಮುಟ್ಟದ ಸೊಪ್ಪಿಲ್ಲ' ಎನ್ನುವಂತೆ ಗಾದೆ ಬಾರದ ಮನುಷ್ಯರಾಗಲಿ, ಭಾಷೆಯಾಗಲಿ ಸಿಗುವುದು ವಿರಳ. ಸೂಕ್ತ ಸಂದರ್ಭ ಹಾಗೂ ಸನ್ನಿವೇಶಗಳು ಸಿಕ್ಕಾಗ ತನಗೆ ತಾನೇ ಗಾದೆಗಳು ನೆನಪಾಗಿ ಮಾತಿನೊಂದಿಗೆ ಹೊರಹೊಮ್ಮುತ್ತವೆ. ಎಲ್ಲರೂ ಒಪ್ಪುವಂತಹ ಅಷ್ಟೇ ಸೂಕ್ತವಾದ ನಿರ್ಣಯ ನೀಡುವಂತಹ ಶಕ್ತಿ ಈ ಗಾದೆಗಳಿಗಿವೆ.

ಗಾದೆಗಳ ಹಿಂದೆ ಅನುಭವ ಇದ್ದೇ ಇರುತ್ತದೆ. "ಬದುಕಿನ ಎಲ್ಲ ವಿಷಯಗಳಲ್ಲೂ ಗಾದೆ ಇಣುಕು ಹಾಕುತ್ತವೆ. ಚಿಕ್ಕದರಲ್ಲಿ ದೊಡ್ಡದನ್ನು ಕಾಣುವ ಮಹಾ ಸಾಹಸ ಮಾಡುತ್ತವೆ" (ಹಾ.ಮಾ.ನಾಯಕ, ಜಾನಪದ ಸ್ವರೂಪ, ಟಿ.ವಿ.ಮೆಮೋರಿಯಲ್ ಸಿರಿಸ್, ಮೈಸೂರು, ೧೯೭೧, ಪುಟ.೪೨) ಇವು ಜನಸಾಮಾನ್ಯರ ಬದುಕಿನದಾಗಿರಬಹುದು ಅಥವಾ ಇತಿಹಾಸ, ಪುರಾಣ, ಐತಿಹ್ಯ ಮುಂತಾದವುಗಳಲ್ಲಿ ಕಾಣುವ ಒಂದು ನಿದರ್ಶನವೂ ಆಗಿವೆ.

ಒಂದು ದೇಶದ ಸ್ಥಿತಿ, ಜೀವನ ಅಲ್ಲಿನ ಗಾದೆಗಳ ಮೂಲಕ ಬಯಲಾಗುತ್ತದೆ. "ಗಾದೆಗಳು ಮಾನವನ ವೈಚಾರಿಕ ಭಾವನಾತ್ಮಕ ನೆಲೆಯಲ್ಲಿ ರೂಪುಗೊಂಡ ಜೀವನಾನುಭವದ ಗಟ್ಟಿಗಳು. ಒಂದೊಂದು ಗಾದೆಯೂ ಒಂದೊಂದು ವಿಶಿಷ್ಟ ಅನುಭವದ ಹಿನ್ನಲೆಯನ್ನು ಪಡೆದಿರುತ್ತದೆ. ಅಂದರೆ ಪ್ರತಿಯೊಂದು ಗಾದೆಯೂ ತನ್ನೊಡಲಿನಲ್ಲಿ ಒಂದು ಕಥಾಬೀಜವನ್ನು, ಮಡುಗಿಟ್ಟುಕೊಂಡಿರುತ್ತದೆ"(ಡಾ.ವೀರಣ್ಣದಂಡೆ, ಡಾ.ಶ್ರೀಪಾದಶೆಟ್ಟಿ, ಸುವರ್ಣ ಜಾನಪದ ಲೇಖನಗಳು, ಪುಟ.೫೫). ಜನಪದರು ಗಾದೆಗಳನ್ನು ಬೇಕೆಂದೇ ಬಾಯಿಪಾಠ ಮಾಡಿಕೊಂಡವರಲ್ಲ. ಉದ್ದೇಶಪೂರ್ವಕವಾಗಿ ಕಂಠಪಾಠ ಮಾಡಿಕೊಂಡು ಸನ್ನಿವೇಶಕ್ಕಾಗಿ ಕಾದು ಕೂತುಕೊಂಡವರಲ್ಲ. ಸಂದರ್ಭ ಸನ್ನಿವೇಶಗಳು ಅವರಲ್ಲಿ ಅಡಗಿರುವ ಅಪಾರ ಜ್ಞಾನವನ್ನು ಹೊರಹಾಕುವಂತೆ ಮಾಡುತ್ತವೆ. "ಅವನೇನು ತಾನಾಗಿಯೇ ಗಾದೆಗಳನ್ನು ಅರಸಿಕೊಂಡು ಹೋಗುವುದಿಲ್ಲ. ಉದ್ದೇಶವಿಟ್ಟು ಅವುಗಳನ್ನೇನೂ ಬಾಯಿಪಾಠ ಮಾಡಿಕೊಂಡಿರುವುದಿಲ್ಲ. ಅಲ್ಲಿ ಇಲ್ಲಿ ಅವನ ಕಿವಿಯ ಮೇಲೆ ಬಿದ್ದಿರುತ್ತವೆ. ಅವನ ಸ್ಮೃತಿ ಗುಹಾಂತರದಲ್ಲೆಲ್ಲೋ ಅಡಗಿದ್ದು, ಅವುಗಳ ಅವಶ್ಯಕತೆ ಕಂಡು ಬಂದಾಗ ತಾವಾಗಿಯೇ ಹೊರಬಂದು ಬಾರಿನ ಬಿಗಿತದಂತೆ ಚಟಾರನೆ ಸಿಡಿದು ಎದುರಾಳಿಯ ಬಾಯಿ ಮುಚ್ಚಿಸಿ ಬಿಡುತ್ತವೆ, ತಬ್ಬಿಬ್ಬಾಗಿಸುತ್ತವೆ. ತಮ್ಮ ಪ್ರಭಾವವನ್ನು ಬೀರಿ ಅವನ ಬುದ್ಧಿಯನ್ನು ತಿದ್ದುತ್ತವೆ.

ಅವನನ್ನು ಜಾಗೃತಗೊಳಿಸುತ್ತವೆ"(ಪ್ರೊ.ಕಾಳೇಗೌಡ ನಾಗವಾರ, ಡಾ.ಅಂಬಳಿಕೆ ಹಿರಿಯಣ್ಣ, ಜೀ.ಶಂ.ಪ. ಅವರ ಜಾನಪದ ಬರಹಗಳು, ಪುಟ.೧೫). ಜನರ ಮನಸ್ಸಿನಾಳದ ಅಭಿಪ್ರಾಯಗಳು ಒಬ್ಬನ ಮೂಲಕ ವ್ಯಕ್ತವಾಗಿ ಅನೇಕ ಕಣ್ಣಾಗಿ ಬಹುಜನರ ಸೂಕ್ತಿಗಳಾಗಿ ಮಾರ್ಪಡುತ್ತವೆ. ಆದರೆ ಆ ಗಾದೆಗಳನ್ನು ಕಟ್ಟುವ ಮೂಲ ವ್ಯಕ್ತಿಗಳು ಅಗೋಚರವಾಗಿಯೇ ಉಳಿದುಬಿಡುತ್ತಾರೆ.

ಗಾದೆಯ ಸ್ವರೂಪವನ್ನು ಗಮನಿಸಿಯೇ ಅವುಗಳಲ್ಲಿ ಸಾಂಸ್ಕೃತಿಕ ಅಂಶಗಳನ್ನು ಕಾಣಬಹುದು. 'ರಾಗಿಕಲ್ಲು ತಿರುಗುತ್ತಿದ್ದರೆ ರಾಜ್ಯವೆಲ್ಲ ನೆಂಟರು' ಎಂಬ ಗಾದೆ ರಾಗಿ ಬೆಳೆಯುವ ಪ್ರದೇಶದಲ್ಲಿನ ಗಾದೆಯೆಂಬುದು ತಿಳಿದುಬರುತ್ತದೆ. ಇದೇ ಗಾದೆ ಜೋಳದ ಪ್ರದೇಶಕ್ಕೆ ಸಂಚರಿಸಿ ರಾಗಿಯ ಸ್ಥಾನದಲ್ಲಿ ಜೋಳವನ್ನು ಹೇಳುವ ಬದಲಾವಣೆಗೂ ಸಿದ್ಧವಾಗಿರುತ್ತದೆ. 'ಕಾಳೇಗೌಡ ಮತ್ತು ಮುದ್ದೇಗೌಡ ಗುದ್ದಾಡ್ಕಂಡು ಗವಿಸೇರ್ದ್ರಾರೆ'. ಇದು ಅವರೆ ಕಾಳು ಮತ್ತು ರಾಗಿ ಬೆಳೆಯುವ ಪ್ರದೇಶದಿಂದ ಹುಟ್ಟಿದೆ ಎಂದು ಊಹಿಸಬಹುದು. ಗಾದೆಗಳ ಮೂಲಕವೇ ಒಂದು ಪ್ರದೇಶದ ಸಮಸ್ತ ವಿಚಾರಗಳನ್ನು ತಿಳಿಯಬಹುದು. ಒಂದೇ ಗಾದೆ ಪ್ರಾದೇಶಿಕ ಮಿತಿಗಳನ್ನು ದಾಟಿ ದೇಶ-ವಿದೇಶಗಳಲ್ಲಿ ಹಲವಾರು ಭಾಷೆಗಳಲ್ಲಿ ಪ್ರಚಾರ ಪಡೆಯುತ್ತವೆ.

ಪ್ರಸ್ತುತ ಜೀವನಕ್ಕೆ ಸಂಬಂಧಿಸಿದಂತೆ ಅನುಭವಗಳನ್ನು ತನ್ನ ವಸ್ತುವಾಗಿಸಿಕೊಂಡ ಗಾದೆಗಳು, ನಿತ್ಯ ಜೀವನದಲ್ಲಿ ಬಳಕೆಯಾಗುತ್ತ ಚಲಾವಣೆಯಲ್ಲಿರುತ್ತವೆ. ನಾವು ಬದುಕಿನಲ್ಲಿ ಅಳವಡಿಸಿಕೊಂಡ ರೂಢಿ ಸಂಪ್ರದಾಯ, ಆಚರಣೆ, ನಂಬಿಕೆ, ಆಚಾರ, ವಿಚಾರ, ವಿಧಿ ನಿಷೇಧ ಮುಂತಾದವುಗಳು ಗಾದೆಗಳಾಗಿ ರೂಪುಪಡೆಯುತ್ತವೆ. ದಿನಕಳೆದಂತೆ ಬದುಕಿನ ರೀತಿ ನೀತಿಗಳು ಬದಲಾದಂತೆ, ತಲೆಮಾರುಗಳು ಉರುಳಿದಂತೆ, ನಾಗರೀಕತೆ ಬೆಳೆದಂತೆ ನಮ್ಮ ಜೀವನದ ಸಂಪರ್ಕ ಕಳೆದುಕೊಳ್ಳುತ್ತ ಸವಕಲು ನಾಣ್ಯದಂತೆ ಚಲಾವಣೆಯಿಂದ ತಪ್ಪಿಹೋಗುವ ಸಾಮಾಜಿಕ ಮೌಲ್ಯಗಳುಳ್ಳ ಗಾದೆಗಳು ಬಳಕೆಯಿಂದ ದೂರವಾಗುತ್ತ ಹೋಗುತ್ತವೆ. ಬದಲಾಗಿ ಹೊಸ ಬದುಕನ್ನು ಪ್ರತಿನಿಧಿಸುವ ಗಾದೆಗಳು ಹುಟ್ಟಿಕೊಳ್ಳುತ್ತವೆ. ಇವುಗಳಿಗೆ ಜೀವಂತ ಅನುಭವಗಳು ವಸ್ತುವಾಗಿರುತ್ತವೆ. ಹೀಗೆ ಸಮಕಾಲೀನ ಪ್ರಜ್ಞೆಯು ಗಾದೆಗಳಲ್ಲಿ ಮಿಡಿಯುತ್ತಿರುತ್ತದೆ. ಇಂತಹ ಗಾದೆಗಳನ್ನು ಸಾಮಾಜಿಕ ಗಾದೆಗಳು, ಕೃಷಿಗಾದೆಗಳು, ಕೌಟುಂಬಿಕ ಗಾದೆಗಳು ಹಾಗು ಸಂಪ್ರದಾಯದ ಗಾದೆಗಳು ಎಂದು ವಿಂಗಡಿಸಿ ಅಧ್ಯಯನ ಮಾಡಬಹುದು.

ಸಮಾಜದ ಅಂಕುಡೊಂಕು ತಿದ್ದುವ ಉಳುಕು ಕೆಡುಕುಗಳನ್ನು ಎತ್ತಿ ತೋರಿಸುವ ಒಳ್ಳೆಯದನ್ನು ಬೆನ್ನುತಟ್ಟಿ ಮುನ್ನಡೆಸುವಂತ ಹಲವಾರು ಗಾದೆಗಳು ಈ ಪರಿಸರದಲ್ಲಿವೆ.

"ಅನ್ನ ಆಗೋಗಂಟ ಇದ್ದೋನು ಆರೋಗಂಟ ಇರ್ಲಿಲ್ವಂತೆ".

ಇದು ವ್ಯಕ್ತಿಯ ತಾಳ್ಮೆಯನ್ನು ಪರೀಕ್ಷಿಸುವ, ತಿಳಿಹೇಳುವ ಒಂದು ಗಾದೆಯಾಗಿದೆ. ತಾಳ್ಮೆಯನ್ನು ಸಂಯಮವನ್ನು ಕಾಪಾಡಿಕೊಳ್ಳುವುದು ಜೀವನದಲ್ಲಿ ಒಂದು ಬಹುಮುಖ್ಯವಾದುದು. ಅನ್ನ ಆಗೋದಿಕ್ಕೆ ಗಂಟೆಗಟ್ಟಲೆ ಕಾದೋನು, ಆದ ಮೇಲೆ ಎರಡು ನಿಮಿಷ ಕಾಯುವಷ್ಟು ತಾಳ್ಮೆ ಕಳೆದುಕೊಂಡರೆ ಕೈ ಬಾಯಿ ಸುಟ್ಟುಕೊಳ್ಳಬೇಕಾಗುತ್ತದೆ. ಹೀಗೆ ಜೀವನ ಅನೇಕ ಸಂದರ್ಭಗಳಲ್ಲಿ ಸಂಗತಿಗಳಲ್ಲಿ ಸಂಯಮ, ತಾಳ್ಮೆ ಕಳೆದುಕೊಳ್ಳಬಾರದೆನ್ನುವುದು ಇದರ ಉದ್ದೇಶ.

"ಸಗಣಿ ಹೋರೋನ್ ಕೈಲಿ ಸರಸ ಆಡೋಕಿಂತ ಗಂಧದ್ಪುಡಿ ಮಾರೋನ್ಕೈಲಿ ಗುದ್ದಾಡೋದೆ ಲೇಸು" ಎಂದು ಗಂಭೀರವಾಗಿ ಹೇಳುವ ಈ ಗಾದೆಮಾತಿನಲ್ಲಿ ಪೂರ್ವಜ್ಞಾನದ ಅರಿವಿದೆ. ಗಂಧದ ಪುಡಿಯನ್ನು ಮಾರುವವನ ಜೊತೆ ಗುದ್ದಾಡಿದರೆ ಮೈಯೆಲ್ಲಾ ಸುಗಂಧವಾದರೂ ದೊರೆಯುತ್ತದೆ. ಸಗಣಿ ಹೊರುವವನ ಜೊತೆ ಸರಸ ಆಡುವುದಾಗಲಿ ಸ್ನೇಹಮಾಡಿದರೂ ನಾವು ಕೊಳಕನ್ನ ಮೈಗೆ ಮೆತ್ತಿಕೊಳ್ಳಬೇಕಾಗುತ್ತದೆ. ಆದ್ದರಿಂದ ಒಳ್ಳೆಯ ವ್ಯಕ್ತಿಗಳು ನಿಷ್ಠುರ, ನಿರ್ದಾಕ್ಷಿಣ್ಯ ಮನೋಭಾವದವರಾದರೇನು ಅವರ ಸಂಪರ್ಕದಿಂದ ಎಂದೂ ಅಪಾಯವಿಲ್ಲ. ಅವರ ವ್ಯಕ್ತಿತ್ವದಲ್ಲಿ ನಮ್ಮ ಸ್ವಭಾವವೂ ಸೇರಿ ಗಂಧದಂತೆ ಸಂಸ್ಕಾರವನ್ನು ಹೊಂದಿ ಸನ್ಮಾರ್ಗಗಾಮಿಯಾಗುತ್ತದೆ.

ಪ್ರಸ್ತುತ ಪ್ರದೇಶವು ಕೃಷಿಪ್ರಧಾನವಾದ ಗ್ರಾಮವಾಗಿರುವುದರಿಂದ ಕೃಷಿ ಚಟುವಟಿಕೆಯ ಜೊತೆ ಜೊತೆಗೆ ತಮ್ಮ ಜೀವನ ಸಾಗುತ್ತದೆ. ದನ, ಕರ, ಎಮ್ಮೆ, ಕುರಿ, ಕೋಳಿ, ಹಂದಿ, ಆಡು ಮುಂತಾದ ಪ್ರಾಣಿಗಳನ್ನು ಸಾಕಿ, ಪೋಷಿಸಿ, ಜೀವನ ಒಗ್ಗಿಕೊಂಡು ಅದೇ ನೆಲ, ಜಲಗಳನ್ನು ನಂಬಿಕೊಂಡು ಬದುಕುತ್ತಿದ್ದಾರೆ. ಕೃಷಿ ಕೆಲಸಗಳಲ್ಲಿ ಬಿಡುವಿನ ದಿನಗಳಲ್ಲಿ, ಹಬ್ಬ ಹರಿದಿನ ಹುಣ್ಣಿಮೆಗಳಲ್ಲಿ, ಸುಗ್ಗಿ ಕಾಲದಲ್ಲಿ ಬಿತ್ತನೆ ಕಾಲದಲ್ಲಿ, ಮದುವೆ ಮುಂಜಿಗಳಲ್ಲಿ, ದಿನನಿತ್ಯದ ಕೆಲಸಕಾರ್ಯಗಳಲ್ಲಿ ಹಲವು ಗಾದೆಗಳನ್ನು ಬಳಸುತ್ತಿರುತ್ತಾರೆ. ಸರಸ-ವಿರಸ ಸಂಭಾಷಣೆಗಳಲ್ಲಿ, ಜಗಳದಲ್ಲಿ, ವಿನೋದ ಹಾಸ್ಯಗಳಲ್ಲಿ ಗಾದೆಗಳನ್ನು ಬಳಸುತ್ತಿರುತ್ತಾರೆ.

"ಹುಳ್ಳಿ ಹೊಲ್ದಲ್ಲಿ ಕಳೆಯೆ ಅವನ ಮಾತೊಂದು ನೆಲೆಯ"

"ಕೊನ್ನಾರೆ ಕಳೆಯಲ್ಲ ಸೊನ್ನಾರೆ ಸೊಸೆಯಲ್ಲ"

"ಓಣಿ ಪಕ್ಕದ ಹೊಲ ಮಾಡಬೇಡ, ಓಡುಗಾಲು ಸೊಸೆ ತರಬೇಡ"

ಹೀಗೆ ನೂರಾರು ಗಾದೆಗಳು ಜನಪದರ ಬದುಕಿನಲ್ಲಿ ಹಾಸುಹೊಕ್ಕಾಗಿ ಬರುತ್ತವೆ.

"ಹೀರೇಕಾಯಿ ಹಾಕಿದ್ರೆ ಸೋರೇಕಾಯಿ ಬಂದದೆ"

ಈ ಗಾದೆಯು ನಾವು ಮಾಡಿದುದರ ಪ್ರತಿಫಲ ನಮಗೆ ಸಿಗುತ್ತದೆ ಎನ್ನುವುದನ್ನು ತಿಳಿಸುತ್ತದೆ. ಹೀರೇಕಾಯಿ ಬೀಜ ಹಾಕಿದರೆ ಹೀರೇಕಾಯಿಗಳು ಬಿಡುತ್ತವೆ. ಸೋರೇಕಾಯಿ ಬೀಜ ಹಾಕಿದರೆ ಸೋರೇಕಾಯಿಗಳು ಬಿಡುತ್ತವೆ. ನಾವು ಒಳ್ಳೆಯ ಕೆಲಸಗಳನ್ನು ಮಾಡಿದರೆ ಒಳ್ಳೆಯದೇ ಸಿಗುತ್ತದೆ. ವ್ಯತಿರಿಕ್ತವಾಗಿ, ಕೆಟ್ಟದಾಗಿ ನಡೆದುಕೊಂಡರೆ ನಮಗೆ ಕೊನೆಗೆ ಸಿಗುವುದು ಕೆಟ್ಟದ್ದಾಗಿರುತ್ತದೆ ಎಂಬುದು ಈ ಗಾದೆಯ ತಾತ್ಪರ್ಯ.

"ನುಗ್ಗೆ ಮುರ್ದು ಸಾಕ್ಬೇಕು, ಮಕ್ಳನ ಹೊಡೆದು ಸಾಕ್ಬೇಕು"

ನುಗ್ಗೆ ಮರನ ಮುರಿದಷ್ಟು ಚೆನ್ನಾಗಿ ಬೆಳೆಯುತ್ತದೆ. ಆಗ ಕವಲುಗಳು ಒಡೆದು ಸೊಪ್ಪು ಹುಲುಸಾಗಿ ಬೆಳೆಯುತ್ತದೆ. ತಿನ್ನಲು ಯೋಗ್ಯವಾಗಿರುತ್ತದೆ. ಮಕ್ಕಳನ್ನು ಹೊಡೆದು ಬಡಿದು ತಪ್ಪು ಮಾಡಿದಾಗ ತಿದ್ದಿ ತೀಡಿ ಬೆಳೆಸಿದರೆ ಮುಂದೆ ಒಳ್ಳೆಯ ಮಕ್ಕಳಾಗುತ್ತಾರೆ. "ಬೈದು ಹೇಳೋರು ಬದ್ಕಕೆ ಹೇಳ್ತಾರೆ" ಅನ್ನುವ ಗಾದೆ ಇದಕ್ಕೆ ಸರಿ ಹೊಂದುತ್ತದೆ.

'ಕಗ್ಗಲಿ ಮರ ಕಡೀಕೆ ನನ್ನಗಂಡ ತಬ್ಬಲಿಯಂಗೆ, ಬಾಳೆ ಮರ ಕಡೀಕೆ ನನಗಂಡ ಗೂಳಿಯಂಗೆ'

ಗಂಡ ಹೆಂಡತಿಯ ಮಧ್ಯೆ ನಡೆಯುವಂತ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುವಲ್ಲಿ ತನ್ನ ಗಂಡನ ಬಗ್ಗೆ ತಾತ್ಸಾರ ಮನೋಧರ್ಮವನ್ನು ವ್ಯಕ್ತಪಡಿಸುವುದನ್ನು ಈ ಗಾದೆ ವ್ಯಕ್ತಪಡಿಸುತ್ತದೆ.

ಕಗ್ಗಲಿಮರ ಗಡುಸುತನಕ್ಕೆ ಬಾಳಿಕೆಗೆ ಹೆಸರುವಾಸಿ. ಅದನ್ನು ಕಡಿಯುವುದು ಕಷ್ಟಸಾಧ್ಯ. ಅದಕ್ಕೆ ಪೌರುಷ ಬಲ ಹಾಗೂ ಕಠಿಣವಾದ ಮನೋಸ್ಥೈರ್ಯಗಳಿರಬೇಕು. ಅದಿಲ್ಲದವನಿಂದ ಇಂತಹ ಕಠಿಣವಾದ ಕೆಲಸ ಸಾಧ್ಯವಿಲ್ಲ. ಆದರೆ ಅದೇ ಬಾಳೆಮರ ಹಾಗಲ್ಲ. ಅದನ್ನು ಎಂತಹ ಕೈಲಾಗದವನೂ ಸಹ ಸುಲಭವಾಗಿ ಉರುಳಿಸಬಲ್ಲ. ಅದನ್ನು ಕತ್ತರಿಸಲು ಗೂಳಿಯಂತೆ ನುಗ್ಗಬೇಕಾಗಿಲ್ಲ. ಈ ಮಾತಿನಲ್ಲಿ ತಾತ್ಸಾರ ಮನೋಭಾವನೆ ವ್ಯಕ್ತವಾಗುತ್ತದೆ.

ಹಾಗೆಯೇ 'ಹೊನಗೊನೆ ಸೊಪ್ಪು ಹೊಸಕಣ್ಣು ತಂತು'

ವೈಜ್ಞಾನಿಕ ದೃಷ್ಟಿಯಿಂದಲೂ ಇದು ಸತ್ಯವೇ. ಇದು ಆರೋಗ್ಯಕ್ಕೆ ಪೂರಕವಾದ ಗಾದೆ ಮಾತಾಗಿದೆ. ಹೊನಗೊನೆ ಸೊಪ್ಪು ನೀರು ಖಾಲಿ ಆಗಿರುವ ಕೆರೆಗಳಲ್ಲಿ. ಅಂಗಳ, ಮೈದಾನದಂತ ಗದ್ದೆ ಬಯಲಿನ ಪ್ರದೇಶಗಳಲ್ಲಿ ಯಥೇಚ್ಛವಾಗಿ ಸಿಗುತ್ತದೆ. ಇದರಲ್ಲಿ 'ಎ' ಜೀವಸತ್ವ ಇರುವುದರಿಂದ ಇದರ ಸೇವನೆಯಿಂದ ಕಣ್ಣುಗಳ ದೃಷ್ಟಿ ಮಾಸಿದ್ದರು ಮರಳಿ ಬರುತ್ತದೆ. ಆದ್ದರಿಂದ ಜನಪದರು ಹೊನಗೊನೆ ಸೊಪ್ಪು ಹೊಸಕಣ್ಣು ತಂತು ಎಂದು ಹೇಳುತ್ತಾರೆ.

'ಹೊಲದಲ್ಲಿ ಅಣ್ಣೇಸೊಪ್ಪು ಕೊಡದೋನು, ಮನೇಲಿ ರಾಗಿ ಕೊಟ್ಟಾನೆ'

ಅಣ್ಣೆ ಸೊಪ್ಪು ಹೊಲ ಗದ್ದೆಗಳಲ್ಲಿ ತಂತಾನೇ ಬೆಳೆಯುವ ಸೊಪ್ಪು ಇದಕ್ಕೆ ಬಿತ್ತನೆ ಮಾಡುವುದಾಗಲೀ, ನೀರು ಕಟ್ಟುವುದಾಗಲಿ ಯಾವುದೇ ಕೃಷಿಯನ್ನು ಮಾಡುವುದಿಲ್ಲ. ಬಿಟ್ಟಿಯಾಗಿ ಬ್ಯಾಡಾ ಅಂದ್ರು ಬತ್ತದೆ ಹೊಲದಲ್ಲಿ. ಇಂತ ಬ್ಯಾಡಾಅಂದ್ರು ಬರುವ ಅಣ್ಣೇಸೊಪ್ಪನ್ನೇ ಕೊಡದಿರುವವನು ಇನ್ನು ಉತ್ತು, ಬಿತ್ತು, ಗೊಬ್ಬರ ಹಾಕಿ ಬೆಳೆದಂತ ರಾಗಿನ ಕೊಡುದು ನಿಜನ, ಸಾಧ್ಯವೇ ಇಲ್ಲ ಎನ್ನುವುದನ್ನು ತಿಳಿಸುತ್ತದೆ. ವ್ಯಕ್ತಿಯ ಜಿಪುಣತನವನ್ನು ಪ್ರತಿಬಿಂಬಿಸುತ್ತದೆ.

'ಒಕ್ಕಲಗಿತ್ತಿಗೆ ಮಡಿ ಇಲ್ಲ, ಹುಳ್ಳಿ ಹೊಲಕೆ ಗೊಬ್ಬರವಿಲ್ಲ'

ಮುಂಜಾನೆ ಎದ್ದು ಹೊಲಮನೆ ಅಂತ ಓಡಾಡುವ ಒಕ್ಕಲುಗಿತ್ತಿಗೆ ಯಾವ ಮಡಿ ಮೈಲಿಗೆಯು ಬೇಕಾಗಿಲ್ಲ. ರೈತ ಮಹಿಳೆಯು ಪ್ರತಿದಿನ ಮಡಿ, ಸ್ನಾನ, ಪೂಜೆ ಮುಂತಾದವುಗಳು ಮಾಡುತ್ತಾ ಕೂತರೆ ಹೊಲಮನೆಯಲ್ಲಿನ ಕೆಲಸ ಯಾರು ಮಾಡುತ್ತಾರೆ ಎನ್ನುತ್ತಾರೆ. ಹಾಗಾದರೆ 'ಹೊಟ್ಟೆ ಬಟ್ಟೆಗೆ ತಣ್ಣೀರ್ ಬಟ್ಟೇನೇ ಗತಿಯಾಯ್ತದೆ' ಅಂತಾರೆ, (ಜಯ್ಯಮ್ಮ). ಹುಳ್ಳಿ ಹೊಲಕೆ ಯಾವ ಗೊಬ್ಬರ ಗೋಡನ್ನು ಹೊಡೆಯುವುದಿಲ್ಲ. ಒಂದೇ ಉಳಿಮೆಗೆ ಕಾಳು ಎರ್ಚೆ ಉತ್ತುಬುಟ್ರು ಬರ್‍ತದೆ. ಅದು ಹುಟ್ಟಿದರೂ ಯಾವುದೆ ಗೊಬ್ಬರ ಹಾಕದೆ ಬೆಳೆಯುತ್ತದೆ.

"ಗೌರಿ ಒತ್ಗೆ ಗಡ್ಗೆ ಮುಳುಗಬೇಕು ಮಾರ್ನಮಿ ಒತ್ಗೆ ಮಾರುದ್ದ ಒಡೆ ಬರಬೇಕು"

ಜನಪದರು ಕೃಷಿಯಲ್ಲಿನ ತಮ್ಮ ಬೆಳೆಗಳು ಯಾವ ಯಾವ ಹಬ್ಬಕ್ಕೆ ಯಾವ ಹಂತಕ್ಕೆ ಬಂದಿರುತ್ತವೆ ಎನ್ನುವುದನ್ನು ಈ ಗಾದೆ ಧ್ವನಿಸುತ್ತದೆ. ಈ ಪ್ರದೇಶದಲ್ಲಿ ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಬಿತ್ತನೆ

ಮುಗಿಸಿದರೆ ಗೌರಿ ಹಬ್ಬದಷ್ಟರಲ್ಲಿ ಗಡಿಗೆ ಮುಳುಗುವಷ್ಟು ಉದ್ದ ಬೆಳೆ ಬೆಳೆದಿರಬೇಕು ಎನ್ನುವುದು ಕೃಷಿಕರ ಲೆಕ್ಕಾಚಾರ. ಗೌರಿ ಹಬ್ಬದ ಹೊತ್ತಿಗೆ ತಮ್ಮ ಹೊಲಗಳು ಎಲ್ಲೆಲ್ಲೂ ಹಸಿರು ತುಂಬಿರುತ್ತದೆ ಆ ಸಮಯದಲ್ಲಿ ಗಡಿಗೆಯನ್ನು ಹೊಲಗಳಲ್ಲಿ ಇಟ್ಟರು ಹಸಿರು ಪೈರುಗಳಲ್ಲಿ ಮುಳುಗಿಹೋಗುತ್ತದೆ. ಮಾರ್ಲಮಿ ಅಂದರೆ ಮಾಳ್‌ಪಕ್ಷದ ಹೊತ್ತಿಗೆ ಎಲ್ಲ ಬೆಳೆಗಳು ಹೊಡೆ ಕಡೆದು ಮೈದುಂಬಿ ಹಾಲುತುಂಬಿ ತೆನೆ ಆಗುವ ಸಮಯವಾಗಿರುತ್ತದೆ. ಇದು ಜನಪದರು ಕಾಲವನ್ನು ಹೇಗೆ ನಿರ್ಧರಿಸುತ್ತಾರೆ ಎಂಬುದನ್ನು ಧ್ವನಿಸುತ್ತದೆ.

"ಅನ್ನ ಹಾಕಿದ ಮನೆ ಗೊಬ್ರ ಹಾಕಿದ ಹೊಲ ಯಾವುದು ಕೆಡಲ್ಲು"

ಈ ಗಾದೆ ನಿಷ್ಠೆಗೆ, ಸತ್ಯಕ್ಕೆ ಯಾವಾಗಲೂ ಜಯ ಸಿಗುತ್ತದೆ ಎಂಬ ಅರ್ಥವನ್ನು ಪ್ರತಿಬಿಂಬಿಸುತ್ತದೆ. ಹೊಲಕ್ಕೆ ಗೊಬ್ಬರ ಹಾಕಿದರೆ ಒಳ್ಳೆಯ ಫಸಲು ಬಂದೇಬರುತ್ತದೆ. ಕಷ್ಟದಲ್ಲಿರುವ ವ್ಯಕ್ತಿಯನ್ನು ಕೈ ಹಿಡಿದೆತ್ತುವುದು ಧರ್ಮ. ಹಾಗೆ ಕಷ್ಟಕಾಲದಲ್ಲಿ ಆಗಿರುವುದನ್ನು ಯಾರು ಮರೆಯುವುದಿಲ್ಲ. ಹಾಗು ಮರೆಯಬಾರದು.

"ಹಣ್ಣಿರೋ ಮರಕ್ಕೆ ಕಲ್ಲು ಹೆಣ್ಣಿರೋ ಮನೆಗೆ ದೂರು"

ಇಲ್ಲಿ ಯಾವ ತಪ್ಪು ಇಲ್ಲದೆ ಅಪವಾದ ಹೊತ್ತುಕೊಳ್ಳುವಂತಹ ಸಂದರ್ಭ ಇಂದಿನ ಸಮಾಜದಲ್ಲಿ ಸಾಮಾನ್ಯವಾಗಿಬಿಟ್ಟಿದೆ.

"ಅಣ್ಣೇಸೊಪ್ಪು ಕುಯ್ಯೋಕೋದ್ರು ಪುಣ್ಣೇವಿರಬೇಕು"

ಒಳ್ಳೆಯ ಎಳೆಸಾದ ಅಣ್ಣೆ ಸೊಪ್ಪು ಕುಯ್ಯಲು ಹುಡುಕಿ ಹುಡುಕಿ ಕುಯ್ಯಬೇಕು. ಎಲ್ಲೆಂದರಲ್ಲೆ ಎಲ್ಲರಿಗೂ ಸಿಗುವುದಿಲ್ಲ. ಜನಪದರ ದೃಷ್ಟಿಯಲ್ಲಿ ಅದು ಸಿಗುವುದು ಪುಣ್ಯ ಎಂದೇ ನಂಬುತ್ತಾರೆ.

"ಕೋಳಿ ಕೇಳಿ ಕಾರ ಅರ್ದ್ರೆ"

"ಆಲೆಮನೆಗೋದ್ರೆ ಅಣ್ಣ ಇರಬೇಕು, ಅಡುಗೆ ಮನೆಗೋದ್ರೆ ಅಕ್ಕ ಇರಬೇಕು"

ಈ ಗಾದೆ ಒಂದು ಕುಟುಂಬದಲ್ಲಿ ಸಂಬಂಧಗಳು ಎಷ್ಟುಗಟ್ಟಿ ಇರುತ್ತವೆ. ಅಣ್ಣ-ಅಕ್ಕರ ಭಾವಣೆಕೆಗಳು ಹೇಗಿರುತ್ತವೆ ಎಂಬುದನ್ನು ತಿಳಿಸುತ್ತದೆ. ಜನಪದರ ಮಾತಿನಲ್ಲಿ 'ಒಡುಟ್ಟು ಇರಬೇಕು' ಎಂಬುದು ಅರ್ಥಗರ್ಭಿತವಾಗಿದೆ. ಆಲೆಮನೆಲಿ ಅಣ್ಣಿದ್ರೆ ಕಬ್ಬಿನಹಾಲು, ಬಿಸಿಬಿಸಿ ಬೆಲ್ಲ ಕೊಡ್ತಾನೆ ಅಕ್ಕನಿಗೆ ತಮ್ಮ ತಂಗಿ ಅಂದ್ರೆ ತುಂಬ ಪ್ರೀತಿ ಇರುತ್ತೆ.

"ನಾಟಿ ಹಾಕಿದ ಹೊಲ ಚೆಂದ ಮೇಟಿ ನೆಟ್ಟ ಕಣ ಚೆಂದ"

"ಸಾಯೋ ಕುರಿಗೆ ಮೇಯೋದೇ ಕೆಲಸ"

"ಈಚಲು ಮರಕ್ಕೆ ಆಚಾರ ಗೊತ್ತ"

"ಈಚಲು ಮರದ ಕೆಳಗೆ ಮಜ್ಜಿಗೆ ಕುಡಿದಂಗೆ"

ಗಾದೆಗಳು ಸಮಾಜದ ಸ್ವರೂಪ, ಕಟ್ಟುಪಾಡು, ನಂಬಿಕೆ, ಆಚರಣೆ, ಕುಲಸಂಬಂಧ ಮುಂತಾದ ವಿಷಯುಗಳ ತಿಳುವಳಿಕೆಗಳನ್ನು ಸಂಗ್ರಹಿಸಿ ಕೊಡುತ್ತವೆ. ಕೌಟುಂಬಿಕ ಪರಿಸರದ ಗಾದೆಗಳು ಮಹತ್ವ ಸಂಗತಿಗಳನ್ನು ಹೇಳುತ್ತವೆ.

"ಹೆತ್ತವರಿಗೆ ಹೆಗ್ಗಣ ಮುದ್ದು" ಎಂಬ ಗಾದೆಯು ತಂದೆ-ತಾಯಿಗಳಿಗೂ ಮಕ್ಕಳಿಗೂ ಇರುವ ಅನ್ಯೋನ್ಯ ಸಂಬಂಧವನ್ನು ಹೇಳುತ್ತವೆ.

"ಒಕ್ಕಲಿಗನದು ಓದಲ್ಲ, ಬೆಕ್ಕು ಹುಲಿಯಲ್ಲ, ಎಕ್ಕದಗಿಡ ಮರವಲ್ಲ"

ಒಕ್ಕಲಿಗನಿಗೆ ಶಾಲೆಗೆ ಹೋಗಿ ಅಕ್ಷರ ಕಲಿಯಲು ಆಗದು. ಕಲಿತರೂ ಅದು ಅಲ್ಪಮಟ್ಟಿಗೆ ಮಾತ್ರ ಎಂಬುದನ್ನು ತನ್ನ ಸಾಕ್ಷರತೆಯ ಬಗ್ಗೆ ತಾನೇ ಆಡಿಕೊಂಡ ಮಾತು.

"ದಾಯಾದಿ ಇರು ಕಡೆ ಬೆಂಕಿ ಹುಡುಕಬೇಕಾಗಿಲ್ಲ"

"ದಾಸ ನೆಂಟನಲ್ಲ ದೋಸೆ ಕಜ್ಜಾಯವಲ್ಲ"

"ಮಚ್ರಿಸ್ಟೋನ್ ಮನ್ವಾಳು ಒತ್ರಿಸ್ಟೋನ್ ಹೊಲ್ವಾಳು"

ಇನ್ನು ಹಲವಾರು ಗಾದೆಗಳು ಜನಪದರ ಜೀವನದಲ್ಲಿ ಸುಗಮವಾಗಿರಲು ಉಲ್ಲಾಸವಾಗಿರಲು ಅರ್ಥಪೂರ್ಣವಾದ ರಸಭರಿತ ಸಾಹಿತ್ಯ ಈ ಪ್ರದೇಶದಲ್ಲಿ ಕಂಡುಬರುತ್ತದೆ. ತಮ್ಮ ಮನಸ್ಸಿನಲ್ಲಿರುವುದನ್ನು ಕೆಲಸದ ಮೂಲಕ ಅದರ ದಕ್ಷತೆ ಹೆಚ್ಚಿಸಲು ಬಳಸುತ್ತಾರೆ. ಇತರರ ಮನಸ್ಸಿಗೆ ನೋವಾಗದಂತೆ ಇವುಗಳನ್ನು ಓದಲು ಸುಲಭ ಅವುಗಳಲ್ಲಿರುವ ಅರ್ಥ ಅಪಾರ. ಅವು ಕೇಳುಗರಿಗೆ ಉತ್ಸಾಹ ಮತ್ತು ಕುತೂಹಲಗಳನ್ನು ಉಂಟುಮಾಡುತ್ತವೆ.

೫.೪. ಒಗಟುಗಳು

ಜನಪದ ಗೀತೆ, ಕಥೆ, ಗಾದೆಗಳ ನಂತರ ಜಾನಪದ ವಿದ್ವಾಂಸರ ಗಮನ ಸೆಳೆದ ಮತ್ತೊಂದು ಜನಪದ ಪ್ರಕಾರವೆಂದರೆ ಒಗಟು. ಯಾವುದೇ ಒಂದು ಜನಾಂಗವೊಂದರ ಪ್ರಾಚೀನತೆ ಮತ್ತು ಸಾಂಸ್ಕೃತಿಕ ಬದುಕಿನ ವಿವಿಧ ಹಂತಗಳ ಅಧ್ಯಯನಕ್ಕೆ ಪೂರಕವಾಗಿ ನಿಲ್ಲಬಹುದಾದ ಒಗಟುಗಳ ಅಧ್ಯಯನವೇ ಕುತೂಹಲಕಾರಿಯಾಗಿದೆ.

ಒಗಟುಗಳು ಜನಪದರ ಬದುಕಿನ ನೋವು-ನಲಿವು, ಆಸರ-ಬೇಸರಗಳಲ್ಲಿ ಅಷ್ಟೇ ಅಲ್ಲದೆ ಜೀವನದ ತಾತ್ವಿಕ ಜಿಜ್ಞಾಸೆಯ ಓರೆಗಲ್ಲಿಗೆ ಪರಮ ಸಾಧನಗಳಾಗಿಯೂ ಇವೆ. "ಒಗಟುಗಳೆಂದರೆ ಸಾಮಾನ್ಯವಾಗಿ ಮನರಂಜನೆಗಾಗಿ ಪದಗಳ ಮೇಲೆ ನಿರ್ಮಿತವಾದ ಸಮಸ್ಯೆ ಎಂಬ ಅಭಿಪ್ರಾಯವಿದೆ. ಆದರೆ ಇದು ಪ್ರಾಚೀನವಾದ ಸುವ್ಯವಸ್ಥಿತಗೊಂಡ ಆಲೋಚನೆಯ ಫಲವಾಗಿದೆ" (ಹಾ.ಮಾ.ನಾಯಕ, ಜಾನಪದ ಸ್ವರೂಪ, ಪುಟ.೪೨). ಒಗಟುಗಳು ಉಳಿದ ಸಾಹಿತ್ಯ ಪ್ರಕಾರಗಳಂತೆ ಬದುಕಿನ ಎಲ್ಲಾ ಮಗ್ಗುಲುಗಳನ್ನು ಸ್ಪರ್ಶಿಸುವ ಮತ್ತು ಸ್ಪಂದಿಸುವ ಶಕ್ತಿ ಇವುಗಳಿಗಿಲ್ಲವಾದರೂ ರಸಾತ್ಮಕವೆನಿಸುವ ಶ್ರೀಮಂತ ವಿಷಯಸಾಮಗ್ರಿಗಳ ಕೂಟಕ್ಕೆ ಎಲ್ಲರನ್ನು ಆಹ್ವಾನಿಸುತ್ತವೆ. ಗಂಭೀರತೆ ಮತ್ತು ಅಚ್ಚರಿಯನ್ನು ಏಕಕಾಲಕ್ಕೆ ಹುಟ್ಟಿಸುವಂತ ಇವು ಬುದ್ಧಿಶಕ್ತಿಗೆ ಬಿಡಿಸಲಾಗದ ಒಗಟಾಗಿವೆ.

ಗೂಢಾರ್ಥವನ್ನೊಳಗೊಂಡಿರುವುದೇ ಒಗಟಿನ ವಿಶಿಷ್ಟ ಲಕ್ಷಣ. ಒಗಟು ಕೂಡ ಇತರ ಪ್ರಕಾರಗಳಂತೆ ವ್ಯಷ್ಟಿಯಿಂದ ಸಮಷ್ಟಿಗೇರಿ ಮೌಖಿಕ ಪರಂಪರೆಯಲ್ಲಿ ಪ್ರಚಾರವಾಗಿ ಬೆಳೆದು ಅಳಿದುಳಿದು ಬಂದಿದೆ. ವ್ಯಷ್ಟಿರೂಪದ ಶಿಷ್ಟ, ಸಾಹಿತ್ಯ ಸೃಷ್ಟಿಗೆ ಪ್ರೇರಣೆಯಾಗಿದೆ. ಗೂಢವಾದ ಬದುಕಿನ ಅರ್ಥವನ್ನು ಒಗೂಢವಾಗಿಟ್ಟುಕೊಂಡ ಇವು ಮನರಂಜನೆ, ವಿನೋದ, ಹಾಸ್ಯ, ವಿಡಂಬನೆಗಳ ಸಾಧನಗಳೂ ಹೌದು.

ಪ್ರಪಂಚದ ಎಲ್ಲಾ ದೇಶದ ಎಲ್ಲಾ ಜನಾಂಗಗಳಲ್ಲೂ ತಲತಲಾಂತರದಿಂದ ಪರಂಪರಾಗತವಾಗಿ ಎಲ್ಲರನ್ನು ಮನರಂಜಿಸುತ್ತಾ ಬಂದ ಒಗಟುಗಳು, ಆಧುನಿಕತೆ ಮತ್ತು ನವನಾಗರೀಕತೆಯ ವಾತಾವರಣದಲ್ಲಿ ತಮ್ಮ ಜನಪ್ರಿಯತೆಯನ್ನು ಬಹುಮಟ್ಟಿಗೆ ಕಳೆದುಕೊಂಡಿವೆ. ಇದಕ್ಕೆ ಕಾರಣ ಮನರಂಜನೆಯನ್ನು ಅತೀ ಸುಲಭವಾಗಿ ಕೊಡಬಲ್ಲ ಆಧುನಿಕ ಉಪಕರಣ, ವಸ್ತು, ವಿಶೇಷ ಪ್ರದರ್ಶನಗಳು ಎಂದೇ ಹೇಳಬಹುದು.

ಕಬ್ಬಾಳು ಪರಿಸರದಲ್ಲಿ ಒಗಟು ಎಂಬುದನ್ನು 'ಒಂಟು' ಎಂಬ ಗ್ರಾಮ್ಯ ಭಾಷೆಯಲ್ಲೇ ಕರೆಯುತ್ತಾರೆ. ಮತ್ತೆ ಕೆಲವರು 'ಅರ್ಥ' ಎಂದೂ ಕರೆಯುತ್ತಾರೆ. "ಒಗಟು ಎಂಬುದು 'ಒಂಟು' ಎಂಬ ಗ್ರಾಮ್ಯ ರೂಪದಿಂದ ಬಂದಿರಬೇಕೆಂದು ಅದೇ ಕ್ರಮೇಣ ಒಂಟು-ಒಗಂಟು-ಒಗಟು-ಒಗಟ ಆಗಿರಬೇಕೆಂದು ಅದರ ನಿಷ್ಪತ್ತಿಯನ್ನು ಸೂಚಿಸಲಾಗುತ್ತಿದೆ. ಅದಲ್ಲದೇ 'ಒಂಟು' ಎಂಬ ಗ್ರಾಮ್ಯ ರೂಪವೇ 'ಒಡ್ಡು' ಎಂದರೆ ಒಗೆ, ಎಸೆ, ಬಿಸಾಡು (to throw) ಎಂಬ ಅರ್ಥವೆಂದೂ ಸೃಷ್ಟಿಸಲಾಗಿದೆ. ಒಗಟಿಗೆ ಒಡಗತೆ, ಒಡೆಸುವಿಕೆ, ಒಡ್ಡಿದ ಕತೆ ಮುಂತಾದ ಹೆಸರುಗಳು ಬಂದಿರುವುದನ್ನಿಲ್ಲಿ ಗಮನಿಸಬಹುದು"(ಡಾ.ಸೋಮಶೇಖರ ಇಮ್ರಾಪುರ, ಆಯ್ದ ಜನಪದ ಒಗಟುಗಳು: ಪ್ರಸ್ತಾವನೆ). ಪ್ರಸ್ತುತ ಪ್ರದೇಶದಲ್ಲಿಯೂ ಒಗಟು, ಒಂಟು ಎಂಬ ಗ್ರಾಮಪದ ರೂಪದಿಂದಾಗಿರಬಹುದು ಎಂಬುದಕ್ಕೆ ಪೂರಕವಾಗಿಯೇ ಇದೆ.

"ಬುದ್ಧಿಯ ಬೆಂಬಲ ವಿವೇಚನೆಯ ವಿಲಾಸ ಶಬ್ದಾಡಂಬರದ ಮಿಂಚು ಗುಡುಗುಗಳ ಮಸೆತ, ಜೀವನಾನುಭವ, ಅಭಿರುಚಿಗಳ ಹೂರಣ ಇವೆಲ್ಲವನ್ನು ಮೈಗೂಡಿಸಿಕೊಂಡಿರುವ ಒಗಟು ಪ್ರಕಾರ, ಜಾನಪದದ ಭಾವುಕ ಜನತೆಯ ಹೃದಯದಲ್ಲಿ ಮೊದಲೇ ಮೂಡಿರಲಾರದು; ಅದು ಗೀತೆ, ಕತೆ, ಗಾದೆಗಳು ಹುಟ್ಟಿದ ಮೇಲೆ ರೂಪುಗೊಂಡಿರಬೇಕು"(ಡಾ.ಕೆ.ವಿ.ಪುಟ್ಟಪ್ಪ, ಕನ್ನಡ ಒಗಟುಗಳ ಸಮೀಕ್ಷೆ, ಪುಟ.೨೩) ಎಂದು ಒಗಟಿನ ಉಗಮವನ್ನು ವಿವಿಧ ವಿದ್ವಾಂಸರು ಊಹಿಸುತ್ತಾರೆ.

ಜನಪದ ಸಾಹಿತ್ಯದ ನಾಲ್ಕು ಪ್ರಮುಖ ಪ್ರವಾಹಗಳಲ್ಲಿ ಒಗಟುಗಳದ್ದೂ ಒಂದು. ಚಿಂತನೆ ಚಾತುರ್ಯ ಪ್ರಧಾನವಾದ ಈ ಪ್ರವಾಹ ಮೂರ್ತ ಅಮೂರ್ತ ಬದುಕಿನ ಅದ್ಭುತ ರಮ್ಯ ಸೀಮೆಗಳಲ್ಲಿ ಲೀಲಾಜಾಲವಾಗಿ ಹರಿಯಬಲ್ಲದು. ಸೃಷ್ಟಿಕ್ರಮದ ರಹಸ್ಯವನ್ನು ಭೇದಿಸಿಕೊಂಡು ಅನಂತಾನಂತ ವೈಚಿತ್ರ್ಯ ವೈವಿಧ್ಯಗಳೊಂದಿಗೆ ಬದುಕಿನಂಗಳದಲ್ಲಿ ಬುಗ್ಗೆಯಾಗಿ ಚಿಮ್ಮಬಲ್ಲದು. ತನ್ನ ಮೂಲ ಗುಣದೊಂದಿಗೆ ಗೀತದ ಭಾವ ಪ್ರಾಧಾನ್ಯತೆ, ಕತೆಯ ಕಲ್ಪನಾ ಪ್ರಾಧಾನ್ಯತೆ ಮತ್ತು ಗಾದೆಯ ನೀತಿತತ್ವ ಪ್ರಾಧಾನ್ಯತೆಗಳೆಲ್ಲವನ್ನು ಹೊಂದಿದ ಸಂಕೀರ್ಣ ಪ್ರಕಾರವಾಗಿರುವ ಒಗಟು ಹೆಚ್ಚು ಶ್ರೀಮಂತವಾಗಿದೆ, ಸಮೃದ್ಧವಾಗಿಯೂ ಇದೆ.

"ಒಗಟುಗಳ ಪ್ರಧಾನ ಗುರಿ ಬುದ್ಧಿಯ ಕಸರತ್ತು; ಬೋಧನೆ"(ಹಾ.ಮಾ.ನಾಯಕ, ಜಾನಪದ ಸ್ವರೂಪ, ಪುಟ.೪೩). ಶಾಬ್ದಿಕ ಸಂಕೇತದಲ್ಲಿ ಹುದುಗಿದ ಅರ್ಥವನ್ನು ಹುಡುಕಲು ಪ್ರೇರೇಪಿಸುವುದೇ ಒಗಟಿನ ಪರಮ ಗುರಿ. ತಮ್ಮ ಅರ್ಥದ ಪೊರೆಗಳನ್ನು ಬಿಚ್ಚಿಕೊಳ್ಳುವ ಇವುಗಳ ಅಂತರಂಗ ದರ್ಶನ ತಾರ್ಕಿಕ ಬುದ್ಧಿಯುಳ್ಳವರಿಗೆ ಮಾತ್ರ ಸಾಧ್ಯ. ಕೇಳುಗನ ಊಹೆಯನ್ನು ಬುಡಮೇಲು ಮಾಡಬಲ್ಲ ಇವು ನಿಜಕ್ಕೂ ಬೌದ್ಧಿಕ ಎಚ್ಚರಿಕೆಗೆ ಹಿಡಿದ ಕನ್ನಡಿಗಳಾಗಿವೆ. "ಆ ಕಾಲಕ್ಕೆ ಒಗಟುಗಳು ಆಧ್ಯಾತ್ಮ ಚಿಂತನೆಯ ಫಲಗಳಾಗಿದ್ದರಿಂದ ಅವು ಮಂತ್ರ ಸದೃಶವೆನಿಸಿದ್ದವು. ಅನಿಷ್ಟ ನಿವಾರಣೆಗೆ ಸಾಧನಗಳೆನಿಸಿದ್ದ ಇವು

ಕಾಲಾಂತರದಲ್ಲಿ ಮನರಂಜನೆ ವಿನೋದಗಳೇ ಒಗಟಿನ ವಿಶೇಷ ಲಕ್ಷಣವಾಗಿದ್ದುದಲ್ಲದೇ ಸಾವು ಬದುಕಿನ ಗಂಭೀರ ಸ್ಪರ್ಧೆ, ಜೂಜುಗಳಾಗಿಯೂ ಪಾಂಡಿತ್ಯ ಪ್ರದರ್ಶನ, ಕಲ್ಪನಾಶಕ್ತಿಗೆ ಸವಾಲುಗಳಾಗಿಯೂ ಪ್ರಚಲಿತದಲ್ಲಿದ್ದವು. ಗ್ರೀಕರಲ್ಲಿ ಪ್ರಸಿದ್ಧನಾದ ಹೋಮರ್ ಕವಿಯು ಹೇಸಿಯಡ್ ಹಾಕಿದ ಒಗಟುಗಳನ್ನು ಬಿಡಿಸಲಾಗದೆ ಪ್ರಾಣಕೊಡಬೇಕೆಂಬ ಪ್ರತೀತಿಯಾಗಲೀ ಸ್ಪಿಂಕ್ ಭೂತದ ಸವಾಲನ್ನು ಈಡಿಪಸ್ ಬಿಡಿಸಿದ್ದರಿಂದಲೇ ಸ್ಪಿಂಕ್ಸ್‌ಭೂತ ಸತ್ತು ಆ ಪ್ರದೇಶದಲ್ಲಾಗುತ್ತಿದ್ದ ತೊಂದರೆ ತಪ್ಪಿತೆಂಬ ಸಂಗತಿಗಳಾಗಲೀ ಜಗತ್ಪ್ರಸಿದ್ಧವಾದವುಗಳು" (ಡಾ.ಸೋಮಶೇಖರ ಇಮ್ರಾಪುರ, ಆಯ್ದ ಜನಪದ ಒಗಟುಗಳು: ಪ್ರಸ್ತಾವನೆ). ರಾಜಮಹಾರಾಜರ ಕಾಲಗಳಲ್ಲಿ ಸಾಹಿತ್ಯ ಸ್ಪರ್ದೆಗಳನ್ನು ಏರ್ಪಡಿಸಿ ಒಗಟುಗಳನ್ನು ಒಡ್ಡಲಾಗುತ್ತಿತ್ತು. ಒಗಟುಗಳನ್ನು ಬಿಡಿಸಿದವರಿಗೆ ಬಹುಮಾನವಾಗಿ ಹಣ ಐಶ್ವರ್ಯದ ಜೊತೆ ಆ ರಾಜ್ಯದ ಹೆಣ್ಣುಗಳನ್ನು ಕೊಡಲಾಗುತ್ತಿತ್ತು. ಇಲ್ಲಿ ರಾಜ್ಯದ ಪ್ರತಿಷ್ಠೆ ಅಡಗಿದ್ದುದ್ದರಿಂದ ಒಗಟಿಗೆ ಹೆಚ್ಚಿನ ಮಹತ್ವವಿತ್ತು. ಅಂತಹ ಕೆಲವು ಒಗಟುಗಳು ಇಂದಿಗೂ ಇಲ್ಲಿ ಚಲಾವಣೆಯಲ್ಲಿವೆ.

"ಹಸಿರು ಐದು ರಸಬಾಳೆ ತುಂಡೈದು
ಎಬ್ಬಿದಿರು ತಟ್ಟೈದು ಎಳೆನಾಗರ ಸಡೆಐದು
ಅದ್ನ ಬಿಡಿಸಿದಂತ ರಾಜನ ಮಗನಿಗೆ ಆರು ಸಾವಿರ
ಅಡಿಕೆ ತೋಟ ಏಳುಸಾವಿರ ಎಲೆತೋಟ ಮನಿಕೋಕೆಮಂಚ
ಮೆಗ್ಗಲಿಗೆ ಸೂಳೆ ಸುರಂಗಪಟ್ನ ಗುತ್ತಿಗೆ"

ಈ ಒಗಟು ಪ್ರತಿಷ್ಠೆಯ ಕಾರಣವಾಗಿ ಒಡ್ಡಿದಂತಹ ಒಗಟಾಗಿದೆ. ಇದಕ್ಕೆ ಈಗಲೂ ಉತ್ತರ ಗೊತ್ತಿಲ್ಲ ಅನ್ನುತ್ತಾರೆ ರಾಜಲಕ್ಷ್ಮಿ. "ಇದು ನಮ್ಮಪ್ಪ ನನಗೆ ಹೇಳಿಕೊಟ್ಟಿದ್ರು. ಅವುರ್ಗು ಉತ್ತರ ಗೊತ್ತಿರ್ಲಿಲ್ಲ. ನನಗೂ ಗೊತ್ತಿಲ್ಲ" ಅನ್ನುತ್ತಾರೆ. ಇಂತ ನಿಗೂಢವಾದ ಒಗಟುಗಳು ಬಿಡಿಸಲಾಗದೆ ಕೆಲವು ಇಂದಿಗೂ ನಿಗೂಢವಾಗಿಯೇ ಇವೆ.

ಪ್ರಸ್ತುತ ಪ್ರದೇಶದಲ್ಲಿ ಒಗಟಿನ ಎಲ್ಲಾ ಪ್ರಕಾರಗಳೂ ಕಂಡುಬರುತ್ತವೆ. ಇಲ್ಲಿ ಪರಿಚಿತವಾದ ಮಾಮೂಲು ಒಗಟುಗಳೇ ಅತ್ಯಧಿಕ ಸಂಖ್ಯೆಯಲ್ಲಿವೆ. ಗೀತಾತ್ಮಕ ಒಗಟುಗಳು, ಗಣಿತಾತ್ಮಕ ಒಗಟುಗಳು, ಸರಪಣಿ ಒಗಟುಗಳು ಸಂಭಾಷಣಾತ್ಮಕ ಒಗಟುಗಳು ಮತ್ತು ಕಥನಾತ್ಮಕ ಒಗಟುಗಳು ಇವೆ.

ಕೇವಲ ಹಾಸ್ಯವನ್ನೇ ಗುರಿಯಾಗಿಟ್ಟುಕೊಂಡು ಒಗಟುಗಳು ವಿನೋದಾತ್ಮಕ ಒಗಟುಗಳು, ಪರಿಸರ ಪ್ರಜ್ಞೆ, ಸಾದೃಶ್ಯಜ್ಞಾನ ಇವುಗಳಲ್ಲಿ ಕಾಣಬರುತ್ತದೆಯಾದರೂ ಹಾಸ್ಯೋದ್ದೇಶಕ್ಕಾಗಿ ವಿಚಿತ್ರ ವೇಷಧಾರಣೆ ಮಾಡುತ್ತವೆ.

ಉದಾಹರಣೆಗೆ: "ಪಿಟೀಲು ಪಾಪಣ್ಣ
ಪಲ್ಲಿ ಮಲ್ಲಣ್ಣ
ಗೋಡೆ ಕೆಂಪಣ್ಣ
ಮೂರು ಜನರು ಮನುಷ್ಯನ ಸ್ನೇಹಿತರು"

ಮನುಷ್ಯನ ರಕ್ತವನ್ನು ಹೀರಿ ಕೆಂಪು ಮೈನಿಂದ ಓಡಾಡುತ್ತಾ ಗೋಡೆಯಲ್ಲಿ ಆಶ್ರಯ ಪಡೆಯುವ ತಿಗಣೆ, ಉಡುವ ಹೊದೆಯುವ ವಸ್ತ್ರದಲ್ಲಿರುವ ಕೂರೆ ಮತ್ತು ಸದಾ ರಾಗ ಹಾಡಿ ರಕ್ತಹೀರುವ ಸೊಳ್ಳೆಗಳ ಕುರಿತ ಒಗಟಿದು. ಪಾಪಣ್ಣ ಮಲ್ಲಣ್ಣ ಮತ್ತು ಕೆಂಪಣ್ಣ ಹೆಸರುಗಳು ಅವುಗಳ ಸ್ವರೂಪವನ್ನು ಸೂಚಿಸುತ್ತವೆ.

ಹಾಸ್ಯ, ವಿಡಂಬನೆಗಳೂ ಒಗಟಿನ ಪ್ರಮುಖ ಲಕ್ಷಣಗಳಾಗಿದ್ದು ಬಹುತೇಕ ಒಗಟುಗಳು ಪರಂಪರಾಗತವಾಗಿ ಬೆಳೆದು ಬರಲಿಕ್ಕೆ ಬಲವಾದ ಸಾಧನಗಳಾಗಿವೆ. ಜನಸಾಮಾನ್ಯರಲ್ಲಿಯ ಮೇಲು-ಕೀಳು ಭಾವನೆಗಳು ಒಗಟುಗಳಲ್ಲಿ ಅರ್ಥವತ್ತಾಗಿ ಚಿತ್ರಿಸಲ್ಪಟ್ಟಿದೆ. ಅದಲ್ಲದೆ ನವನಾಗರೀಕತೆಯಿಂದುಂಟಾದ ಒಂದು ರೀತಿಯ ಸಾಂಸ್ಕೃತಿಕ ಅನಾಹುತವನ್ನು ಅದಕ್ಕೆ ಬಲಿಯಾದವರ ಸ್ಥಿತಿಯನ್ನು ಸೂಕ್ಷ್ಮವಾಗಿಯೂ ಸಾರವತ್ತಾಗಿಯೂ ಪ್ರಕಟಗೊಳ್ಳಬಲ್ಲವು.

"ಬಡುವರು ತಗದು ಎಸುದ್ರೆ

ಶ್ರೀಮಂತ್ರು ಜೋಬುಗೆ ಮಡೀಕತರೆ": ಗೊಣ್ಣೆ, ಸಿಂಬಳ.

ಮನುಷ್ಯ ಸಾಮಾನ್ಯವಾಗಿ ಸುಖ, ಸಂತೋಷ ಬಯಸುವವನಾದ್ದರಿಂದ ಹಾಸ್ಯ, ವಿನೋದ, ಮನರಂಜನೆಯ ಮುಖಾಂತರ ಕೆಲವು ಅಶ್ಲೀಲತೆಯ ರೂಪಕ ಭಾಷೆಯಲ್ಲಿ ಪಾಲುಗೊಂಡಿದ್ದಿರಬಹುದು. ಅಶ್ಲೀಲತೆ ಎಂಬುದು ಒಗಟಿನ ವಿಶೇಷ ಲಕ್ಷಣವು ಆಗಿದೆ. ಆದರೆ ಜನಪದರಲ್ಲಿ ಅಶ್ಲೀಲತೆ ಒಂದು ಅಭಿವ್ಯಕ್ತಿ ಮಾಧ್ಯಮದ ಭಾಷೆಯನ್ನಾಗಿ ಮಾಡಿಕೊಂಡಿದ್ದಾರೆ. ಮೂಲ ಮನಸ್ಸಿನ ಭಾವನೆಯಲ್ಲಿರುವುದಿಲ್ಲ ಎಂದೇ ಹೇಳಬಹುದು.

'ಕಚ್ಚೆಕಳಿ ಒಳಕೆ ನಡಿ': ಬಾಳೆಹಣ್ಣು

ಇಲ್ಲಿ ಒಗಟಿಗೂ ಉತ್ತರಕ್ಕೂ ಇರುವ ಸಹಜ ಸಂಬಂಧ ನಿಜಕ್ಕೂ ಅಚ್ಚರಿಯೊಂದಿಗೆ ವಿನೋದವನ್ನು ಹುಟ್ಟಿಸುವಂಥದ್ದು. ಉತ್ತರ ತಿಳಿದಾಗ ಅಶ್ಲೀಲತೆ ತಕ್ಷಣವೇ ಕಳಚಿಹೋಗುತ್ತದೆ.

ಕೆಲವು ಒಗಟುಗಳ ಜೋಡಣೆಯಲ್ಲಿ ಅಶ್ಲೀಲತೆಯಿದ್ದು ಉತ್ತರದಲ್ಲಿ ಅದು ಕಂಡು ಬರುವುದಿಲ್ಲ. ಇನ್ನೂ ಕೆಲವು ರಚನೆಯಲ್ಲಿ ಅಶ್ಲೀಲತೆಯಲ್ಲದಿದ್ದರೂ ಉತ್ತರ ನೀಡುವಾಗ ಅಶ್ಲೀಲತೆಯೇ ಇರುತ್ತದೆ. ಆದರೆ ಜನಪದರು ಲೈಂಗಿಕತೆಯನ್ನು ಬದುಕಿನ ಒಂದು ಭಾಗವಾಗಿ ಸ್ವೀಕರಿಸಿರುವುದರಿಂದ ಅಲ್ಲಿ ಮುಜುಗರಕ್ಕೆ ಎಡೆಯಿಲ್ಲ ಅದೂ ಹಾಸ್ಯದ ಒಳಗೆ ಸೇರಿ ಹೋಗುತ್ತದೆ.

ಇಂಥ ಒಗಟುಗಳ ಸ್ವರೂಪ ವಿಚಾರಕ್ಕೆ ತದ್ವಿರುದ್ಧವಾಗಿರುವ ಒಗಟುಗಳೂ ಉಂಟು. ಅಂಥವುಗಳ ಪದರಚನೆ ತೀರ ಸರಳ ಮತ್ತು ಮುಗ್ಧವಾಗಿದ್ದು ಒಳಾರ್ಥ ಮಾತ್ರ ತೀರ ಅಶ್ಲೀಲವಾಗಿರುವುದುಂಟು. ಈ ಒಗಟುಗಳ ರೂಪಕ ಶಕ್ತಿಗೂ, ಉತ್ತರಕ್ಕೂ ಇರುವ ಅನ್ಯೋನ್ಯ ಮತ್ತು ಅರ್ಥಪೂರ್ಣ ಸಂಬಂಧಗಳು ಪರಿಭಾವಿಸಿದಷ್ಟು ಸಂತೋಷವನ್ನು ಕೊಡಬಲ್ಲವು.

ಉದಾ: 'ಎರಡು ಗುಡ್ಡೆಗಳ ಮದ್ಯದಲಿ ಗೂಬೆ ಕೂಗ್ತದೆ': ಹೂಸು. ಹೀಗೆ ಒಗಟು ಒಳಗೊಳ್ಳುವ ವಿಷಯವೇ ಇಲ್ಲ. ಅದರಂತೆ ಅದರ ಸ್ವರೂಪ ಲಕ್ಷಣಗಳು ವಿಷಯ ವಸ್ತುವಿನ್ಯಾಸಕ್ಕೆ ತಕ್ಕಂತೆ

ರೂಪುಗೊಳ್ಳುವುದುಂಟು. ಕೆಲವು ಒಗಟುಗಳು ಪ್ರಶ್ನೆರೂಪದಲ್ಲಿವೆ. ಅವಕ್ಕೆ ಪ್ರಶ್ನೆರೂಪದಲ್ಲೆ ಉತ್ತರಗಳನ್ನು ಕೊಡುವುದು ವಿಶೇಷವಾಗಿ ಕಾಣುತ್ತದೆ.

ಕರ ಕಟ್ಟಾಕದೆ ಹೊರೆಹುಲ್ಲಾಕದೆ

ಕರ ಯಾಕೆ ಮೇಯ್ತಿಲ್ಲ?

ಮೋಡಗಟ್ಟದೆ ಮೊರೆವಾಗದೆ

ಮಳೆಯಾಕೆ ಹುಯ್ತಿಲ್ಲ?

ಈ ಒಗಟು ಅತ್ತೆ ಅಳಿಯರ ನಡುವಿನ ಸಂಭಾಷಣೆ, ಅಳಿಯ ಆದವನು ಅತ್ತೆಮನೆಗೆ ಹೋಗಿರುತ್ತಾನೆ. ಅತ್ತೆ ಅಳಿಯನಿಗೆ ಊಟಕ್ಕೆ ಇಕ್ಕಿದಳು. ಆದರೆ ಅಳಿಯ ಉಣ್ಣಲಿಲ್ಲ. ಏಕೆಂದರೆ ಅತ್ತೆ ತುಪ್ಪ ಹಾಕಿರಲಿಲ್ಲ. ಅತ್ತೆ ಜಿಪುಣೆ ತುಪ್ಪಬಿಡಲೇ ಇಲ್ಲ ಅಳಿಯ ಸುಮ್ಮನಿದ್ದುದನ್ನು ನೋಡಿ ಪ್ರಶ್ನೆಹಾಕುತ್ತಾಳೆ. ಕರಕಟ್ಟಿ ಹೊರೆ ಹುಲ್ಲಾಕಿದ್ರು ಕರ ಮೇಯ್ತಾ ಇಲ್ಲವಲ್ಲ ಯಾಕೆ' ಕಾರಣ ಏನು? ಕಿಲಾಡಿಯಾದ ಅಳಿಯ ಹೇಗಾದರೂ ಮಾಡಿ ತುಪ್ಪ ಹಾಕಿಸಿಕೊಂಡು ಊಟ ಮಾಡಲೇಬೇಕೆಂದು ಅತ್ತೆ ತುಪ್ಪಕಾಯಿಸಿ ನೆಲುವಿನ ಮೇಲಿಟ್ಟಿದ್ದುದು ಗೊತ್ತಾಗಿದೆ. ಆ ಕಾರಣದಿಂದ ಕಾಯಿಸುವ ಮೊದಲು ತುಪ್ಪ ಹೆಪ್ಪುಕಟ್ಟುವುದು ಸ್ವಾಭಾವಿಕ. ಇಲ್ಲಿ ಮೋಡ ಅದನ್ನು ಸೂಚಿಸುತ್ತದೆ. ಅದನ್ನು ಕಾಯಿಸಿದರೆ ದ್ರವರೂಪವಾಗುತ್ತದೆ. ಮಳೆ ಅದರ ಸೂಚಕ ಅದನ್ನು ಅಳಿಯ ಸೂಚ್ಯವಾಗಿ ಹೇಳುತ್ತಾನೆ.

ಹಾಗೆಯೇ ಅದೇ ರೀತಿ ಮತ್ತೊಂದು ಒಗಟನ್ನು ನೋಡಬಹುದು.

ಒಬ್ಬ: ಗೊತ್ತುಬುಟ್ಟುಟ್ಟು ಕರಬುಟ್ಟುಟ್ಟು ಒಂದು ಹಸ ಬತ್ತೆನಮ್ಮ

ಒಬ್ಳು: ತಾಳು ಬುಟ್ಟುಟ್ಟು ತುದಿ ಬುಟ್ಟುಟ್ಟು ನಡುತಾಳುದ್ ಮೇಯುಕೋಗದೆ ಹೋಗಯ್ಯ

ಇದು ಒಂದು ಗಂಡು ಹೆಣ್ಣಿನ ನಡುವಿನ ಸಂಭಾಷಣೆಯಂತಿದೆ. ಇಲ್ಲಿ ಎರಡೂ ಅಂದರೆ ಇಬ್ಬರ ಪ್ರಶ್ನೆಗಳೂ ಉತ್ತರವೇ ಆಗಿವೆ. ಪ್ರಶ್ನೆಯೊಂದರಿಂದಲೇ ಉತ್ತರ ನೀಡುವ ಪರಿ ಸೋಜಿಗವೇ ಸರಿ.

ಇಬ್ಬರು ವ್ಯಕ್ತಿಗಳ ನಡುವೆ ನಡೆಯುವ ಈ ಸಂಭಾಷಣೆ ತುಂಬಾ ಕುತೂಹಲಕಾರಿಯಾಗಿದೆ. ಈ ಇಬ್ಬರು ವ್ಯಕ್ತಿಗಳ ನಡುವೆ ಕುತೂಹಲವಿಲ್ಲದಿದ್ದರೂ ಇದನ್ನು ಕೇಳುವ ಮೂರನೆಯ ವ್ಯಕ್ತಿಗೆ ಆಶ್ಚರ್ಯ ಕುತೂಹಲ ಎರಡೂ ಆಗುತ್ತದೆ. ಇದಕ್ಕೆ ಉತ್ತರ ಕಬ್ಬು. ಗೊತ್ತು ಮತ್ತು ಕರ ಅಂದರೆ ಮೇಲಿನ ತುದಿ ಮತ್ತು ತಾಳು. ಹಾಗೆ ತಾಳು ಕಬ್ಬಿನ ಬೇರು' ತುದಿ ಕಬ್ಬಿನ ತುದಿಯಲ್ಲಿರುವ ಬೆಂಡು ಗರಿಕೆ. ತಾಳು ತುದಿಯಲ್ಲಿ ಯಾವುದೇ ರಸ ಇರುವುದಿಲ್ಲ ತಾಳು ತುದಿ ತೆಗೆದ ನಂತರವೇ ಕಬ್ಬಿಗೆ ಒಂದು ಬೆಲೆ ಮೌಲ್ಯ. ಆದ್ದರಿಂದ ಈ ಒಗಟು ಕೇಳುಗರಿಗೆ ರಸದೌತಣವೇ ಸರಿ.

ಬುದ್ಧಿವಂತರಿಗೆ ಸವಾಲಾದ ಕೆಲವು ಅತಿ ಬುದ್ಧಿವಂತಿಕೆಯ ಒಗಟುಗಳು ಇವೆ.

'ನೆನ್ನೆ ಸತ್ತ ಮೊಲ ಇವತ್ತು ಸಾರಾಯ್ತು ಈ ಮೊಲ ಹೊಡೆದೋನು ಸತ್ತು ಮೂರುದಿನ ಆಯ್ತು'

ಈ ಒಗಟು ನಿಜವಾಗಿಯೂ ಸವಾಲಾಗಿ ಕಾಣುತ್ತದೆ. ಇದು ಹೇಗೆ ಸಾಧ್ಯ ಎಂದು ಎಲ್ಲರನ್ನೂ ಚಿಂತೆಗೀಡು ಮಾಡುತ್ತದೆ. ಹೆಂಡತಿ ಮತ್ತು ಆಕೆಯ ಮಿಂಡಗಾರ ಇಬ್ಬರೂ ಕೂಡಿ ಆಕೆಯ ಗಂಡನನ್ನು

ಕೊಂದು ಒಂದು ಮರಕ್ಕೆ ನೇಣುಹಾಕಿದ್ದರು. ಮಿಂಡಗಾರ ಬೇಟೆಯಾಡಲು ಕಾಡಿಗೆ ಹೋಯ್ತನೆ ಮೊಲ ಅಟ್ಟಿಸಿಕೊಂಡು ಹೋಗುವಾಗ ಆ ಮೊಲ ಹೆಣವನ್ನು ನೇಣು ಹಾಕಿದ್ದ ಮರದ ಕೆಳಗೆ ಹೋಗಿ ನಿಂತುಕೊಳ್ಳುತ್ತದೆ. ಹಗ್ಗ ಕಟ್ಟಾಗಿಯೋ ಅಥವಾ ಮರ ಮುರಿದೋ ಹೆಣ ಆ ಮೊಲದ ಮೇಲೆ ಬಿದ್ದು ಮೊಲ ಸತ್ತುಹೋಗುತ್ತದೆ. ಮಿಂಡ ಅದನ್ನು ತಂದು ಸಾರ ಮಾಡಲು ಕೊಡುತ್ತಾನೆ.

ಭಾಷಣಾತ್ಮಕ ಒಗಟುಗಳು ಮತ್ತು ಒಗಟು ಕಥೆಗಳು ಎರಡೂ ಒಗಟುಗಳು ಭಿನ್ನವಾದರೂ ಒಂದಕ್ಕೊಂದು ಪೂರಕವಾಗಿ ರಚನೆಗೊಂಡಿವೆ. ಸಂಭಾಷಣಾತ್ಮಕ ಒಗಟಿನ ಗುಣ ಒಗಟಿಗೆ ಒಗಟಿನ ಮೂಲಕ ಉತ್ತರ ಕೊಡುವುದು. ಉದಾ:

ಜೀವದ್ದು ಕೊಲ್‌ಬ್ಯಾಡ

ಸತ್ತಿದ್ದು ತರಬ್ಯಾಡ

ಬೇಟೆ ಇಲ್ದೆ ಮನೆಗ್ ಬರಬ್ಯಾಡ

ಇದಕ್ಕೆ ಉತ್ತರ ಮೀನು. ಗಂಡ ಹೆಂಡತಿ ಮಧ್ಯೆ ನಡೆಯುವ ಈ ಸಂಭಾಷಣಾತ್ಮಕ ಒಗಟುಗಳು ತುಂಬ ಚಮತ್ಕಾರದಿಂದ ವರ್ಣಿತವಾಗಿದೆ. ಇಲ್ಲಿ ಗ್ರಾಮೀಣರ ವೃತ್ತಿ, ಕೆಲಸ, ಹವ್ಯಾಸ, ಅವರ ಜೀವನ ಕ್ರಮವನ್ನು ಒಟ್ಟಾರೆ ಕಾಣಬಹುದು.

ಕಥನಾತ್ಮಕ ಒಗಟುಗಳು ಮೂಲತಃ ಕಥಾಮೂಲದವು ಇಡೀ ಕಥೆಯನ್ನು ತನ್ನಲ್ಲೇ ಇರಿಸಿಕೊಂಡು ಅನಂತರ ಸಾಂಕೇತಿಕ ಪ್ರತಿಮೆ ಉಪಮೆ ಹೀಗೆ ಹಲವು ರೂಪಗಳಲ್ಲಿ ಪ್ರಕಟವಾಗುವವು. ಪ್ರಸ್ತುತದಲ್ಲಿ ಕೆಲವು ಕಥನಾತ್ಮಕ ಒಗಟುಗಳಿದ್ದು ಅವುಗಳಲ್ಲಿ ಅರ್ಥದೊಂದಿಗೆ ಕಥೆ ಬಿಡಿಸಿಕೊಂಡು ಹೋಗುವುದರಿಂದ ವಿಶ್ಲೇಷಣೆಯಾಗಲೀ, ವಿವರಣೆಯಾಗಲೀ, ಅವಶ್ಯಕವಿಲ್ಲದಿದ್ದರೂ ಹೆಚ್ಚು ಕುತೂಹಲಕಾರಿಯಿಂದ ಆಶ್ಚರ್ಯ ಮಹಾದಾಶ್ಚರ್ಯಗಳನ್ನುಂಟುಮಾಡುವ ಶಕ್ತಿ ಈ ಕಥಾ ಒಗಟಿಗಿದೆ. ಇದರ ಕಲ್ಪನೆಯೇ ಒಂದು ಕುತೂಹಲದಿಂದ ಕೂಡಿದುದಾಗಿದೆ. ಇದು ಕಥನಾತ್ಮಕವಾಗಿ ನಡೆದು ಪ್ರತಿಘಟ್ಟದಲ್ಲೂ ಕುತೂಹಲ ಹೆಚ್ಚಾಗುತ್ತದೆಯೇ ಹೊರತು ಕಡಿಮೆಯಾಗುವುದೇ ಇಲ್ಲ. ಕೊನೆವರೆವಿಗೂ ಕೇಳುಗನ ಮನಸ್ಸನ್ನು ಅತ್ತಿತ್ತ ಬಿಡದೆ ಏಕಾಗ್ರತೆಯಿಂದ ಆಲಿಸುವಂತೆ ಮಾಡಿ ಕಲ್ಪನಾಲೋಕಕ್ಕೆ ಕರೆದೊಯ್ದು ಕೊನೆಗೆ ಯಾರು ಹೆಚ್ಚು ಎನ್ನುವುದನ್ನು ಮಾತ್ರ ಹೇಳುತ್ತದೆ. ಒಂದು ಕಥಾ ರೂಪದ ಒಗಟು ಹೀಗಿದೆ.

ಒಬ್ಬ ಮೈಸೂರು ರಾಜ. ಒಬ್ಬ ಬೆಂಗಳೂರು ರಾಜ ಎಂಬ ಇಬ್ಬರು ರಾಜರು. ಮೈಸೂರು ರಾಜ ತನ್ನ ಮಗನಿಗೆ ಹೆಣ್ಣು ನೋಡುಕೆ ಹೋಯ್ತನೆ. ಬೆಂಗಳೂರು ರಾಜ ತನ್ನ ಮಗಳಿಗೆ ಗಂಡುನೋಡುಕೆ ಬತ್ತಾವನೆ. ಇಬ್ರು ಕನಕಪುರದ ಹೊಳೆ (ಅರ್ಕಾವತಿ) ಹತ್ತಿರ ಸೇರ್ತಾರೆ. ಆಕಡೆ ದಡದಲಿ ಬೆಂಗಳೂರು ರಾಜ ಈಕಡೆ ದಡದಲಿ ಮೈಸೂರು ರಾಜ ಅವರವರ ಹೆಣ್ಣು ಗಂಡುಗಳ ಪೋಟೋಗಳನ್ನು ಇಟ್ಟು ಹೊಳೆದಡದಲ್ಲಿ ಅಡುಗೆ ಮಾಡ್ತಾಇರ್ತಾರೆ. ಆಗ ಮೈಸೂರೂರು ಅಪ್ಪ ನೀವು ಯಾವುರೋರು ಅಂತ ಕೇಳ್ತಾರೆ. ಆಗ ನಾವು ಬೆಂಗಳೂರೋರು ನಮ್ಮ ಹೆಣ್ಣಿಗೆ ಒಂದು ಗಂಡು ನೋಡುಕೆ ಮೈಸೂರ್ಗೆ ಹೋಯ್ತಾ ಇವಿ. ನೀವು ಯಾವುರೋರು ಅಂತ ಕೇಳ್ತಾರೆ. ನಾವು ಮೈಸೂರೋರು ನಮ್ಮ ಗಂಡಿಗೆ ಒಂದು ಹೆಣ್ಣು

ನೋಡೋಕೆ ಬೆಂಗಳೂರ್ಗೆ ಹೋಯ್ತಾ ಇವಿ ಅಂತರೆ. ಆಗ ಎಂಗೂ ಇಲ್ಲೆ ಸಟ್ಟಾಯ್ತು, ಗಂಡು ಸಟ್ಟಾಯ್ತು ಅನ್ನುಟ್ಟು ಇಬ್ಬರು ಒಬ್ಬರಿಗೊಬ್ಬರು ಹೇಳ್ಕೊಂಡು ನೀವು ಎಷ್ಟು ಕುಲದವರು, ಎಂತ, ಏನು ಎಲ್ಲ ಕೇಳ್ತಾರೆ. ಆಗ ನಾವು ಇಂಗಿಂಗೆ ಖಂಡುಗ ತೊಗರಿ ಬಿತ್ತಿ ಗಿಡಗಿಡ್ಕು ಕರಕಟ್ಟು ಮನೆ ನಮ್ದು ಅಂತರೆ ಮೈಸೂರೋರು. ಬೆಂಗಳೂರೋರು ಅಕ್ಕಿ ತೊಳೆದ ಕ್ಯಾಸೆನೀರಲಿ ಸಾವಿರ ಖಂಡುಗ ಭತ್ತ ಬೆಳೆಯುವರ ಮನೆ ಹೆಣ್ಣು ಅಂತಾರೆ. ಸರಿ ಎಂಗೋ ಇಲ್ಲೆ ಗಂಡು ಹೆಣ್ಣಿಗೆ ಇಲ್ಲೇ ಮದ್ವೆ ಸೆಟ್ಟಾಯ್ತು ನಡೀರಿ ಅಂತ ಹೊರಡ್ತಾರೆ. ಗಂಡಿನ ಕಡೆಯವರು ಮದ್ವೆ ಸೌದೆಗೆ ಹೋಗಬೇಕು. ನೂರೊಂದು ಜೊತೆ ಗಾಡಿ ಕಟ್ಟಿಸುದ್ರು ಗಾಡಿ ಕಟ್ಟಿಸ್ಕೊಂಡು ಸೌದೆಗೆ ಹೋಯ್ತಾ ಇದ್ರು. ಇಂಗೆ ಹೋಯ್ತಾ ಇರುವಾಗ ಒಬ್ಬ ಗೌಡ ನೂರೊಂದು ಏರು ಕಟ್ಕಂಡು ಹೊಲ ಹೊಲ ಉಳ್ತಾ ಇದ್ದ ಅವನು ಅಯೋ....ಅಯೋ.... ಎಲ್ಲಿಗ್ರಯ್ಯ ಹೊಯ್ತಾ ಇದೀರಿ ಅಂತ ಕೇಳ್ದ ಅದಕ್ಕೆ ಇವರು ಇಂಗಿಂಗೆ ನಾವು ಒಂದು ಖಂಡುಗ ತೊಗರಿಬಿತ್ತಿ ಗಿಡುಗಿಡ್ಕು ಕರಕಟ್ಟಾಕರು ಮನೆ ಗಂಡ್ಸು. ಅಕ್ಕಿ ತೊಳ್ದೆ ಕ್ಯಾಸೆ ನೀರೇಲಿ ಒಂದು ಸಾವಿರ ಖಂಡುಗ ಭತ್ತಬೆಳೆಯೋನ್ಮನೆದು ಹೆಣ್ಣು ನಾವು ಇಂಗೆ ಮದ್ವೆ ಸೌದೆಗೆ ಹೋಯ್ತಾ ಇವಿ ಕಣ್ರಯ್ಯ ಅಂತರೆ. ಅದ್ಕೆ ಆ ಗೌಡ ಲೋ ಬೋರಾ, ಕಾಳ, ಗೌಡ, ನೆನ್ನೆ ಮುರ್ದವು ಬ್ಯಾಡ ಮೊನ್ನೆ ಮುರ್ದವು ಬ್ಯಾಡ ಒತ್ತಾರಿಂದೀಚ್ಗೆ ಮುರ್ದೋದ ನೇಗಿಲ ದಡಿ, ನೊಗಗಳನ್ನು ತುಂಬರ್ಲ್ಲ ಅವರ ಗಾಡಿಗೆ ಅಂತ ಅಂದ. ಅದನ್ನ ನೂರೊಂದು ಜೊತೆಗಾಡಿಗು ತುಂಬಕಂದು ಹೊಡ್ಕೊಂದು ಬತ್ತಾ ಇದ್ರು. ಇಂಗೆ ಬತ್ತಾ ಇರ್ಬೇಕಾದ್ರೆ ಇನ್ನೊಬ್ಬ ಹೊಲ ಉಳಿಸ್ತಾ ಇದ್ದ. ಆ ಹೊಲ ಉಳಿಸುವನ ಸೊಸೆ ಹೊಲಕ್ಕೆ ಇಟ್ಕೊತ್ಕಂದು ಬಂದಿದ್ಲು. ಹಿಟ್ಟ ಮಜ್ಜಿಗೆ ಎಲ್ಲ ತಂದು ಊಟಮಾಡ್ತಾ ಇದ್ರು. ಆಗ ಈ ಸೌದೆಗೋಗಿದ್ದೋರು ಅಯ್ಯಾ, ಅಯ್ಯಾ, ಕುಡೀಕೆ ಮೂರು ನೀರು ಬುಡ್ರಪ್ಪ ಅಂತ ಕೇಳುದ್ರು. ಅದ್ಕೆ ಅವನು ಅಯ್ಯೋ ಎಲ್ಲೋಗಿದ್ರಯ್ಯ ನೀವು ಅಂತಕೇಳ್ದ ಆವಾಗ್ಲು ಇವುರು ಇಂಗಿಂಗೆ ಅಂತ ಎಲ್ಲ ಹೇಳ್ತಾರೆ. ಸೌದೇಗೆ ಹೋಗಿದ್ದು ಇಂಗಾಯ್ತು ನೊಗ ನೇಗ್ಲು ತುಂಬ್ಕಂದು ಬತ್ತಾವಿ ಕುಡಿಕೆ ಮೂರ್ ನೀರು ಬುಡಿ ಅಂತಾರೆ. ಆಗ ಸೊಸೆಗೆ ಏ ಹೈದ್ಲೆ ನೆನ್ನೆ ಕಡ್ದವು ಬ್ಯಾಡ ಮೊನ್ನೆ ಕಡ್ದವು ಬ್ಯಾಡ ಈಗ ಒತರಿಂದೀಚೆಗೆ ಕಡ್ದಲ್ಲ ಆ ಮಜ್ಜಿಗೆ ತಂದು ಬುಟ್ಬುಡು ಅಂತಾನೆ ತಂದು ಬುಡ್ತಾಳೆ. ನೂರೊಂದು ಗಾಡೀವ್ರು ಕುಡಿದ ಮಿಕ್ಕ ಮಜ್ಜಿಗೆಯನ್ನು ಬೊಗ್ಗಿಸ್ತಾಳೆ ಅದು ಕನಕಪುರದ ಹೊಳೆಯಾಗಿ ಹರಿದು ಹೋಯ್ತದೆ, ಗಾಡಿಬರುಕೆ ತಾವಿಲ್ಲ. ಈಚೆದಡದಲ್ಲಿ ಒಬ್ಬ ಮುದುಕಿ ಕೊತ್ತಿ ಸಾಕಂದು ಕುತ್ತಿರ್ತಾಳೆ. ಯಾಕ್ರಯ್ಯ ಅಂತಕೇಳ್ತಾಳೆ. ಇಂಗಿಂಗೆ ನಾವು ಸೌದೇಗೆ ಹೋಗಿದ್ದೊ ಇಂಗೆಲ್ಲ ಆಯ್ತು ಈಗ ಗಾಡಿಹೋಗುಕೆ ತಾವಿಲ್ಲ ಮಜ್ಗೆಹೊಳೆ ಕಟ್ಕಬುಟ್ಟಿದೆ ಅಂತಾರೆ. ಆ ಮುದ್ಕಿ ಅಂತಳೆ ಅವರ ಸೊಸೆಯನ್ನು ಕರೆದ್ಬುಟ್ಟು ಏಯ್ ನೆನ್ನೆ ಈದವ್ ಬ್ಯಾಡ ಮೊನ್ನೆ ಈದವು ಬ್ಯಾಡ ವತಾರಿಂದೀಚೆಗೆ ಈದ ಕೊತ್ತಿ ಮರಿಗಳನ ತಂದು ಬುಡ್ರೆ ಅಂತಳೆ. ಆ ಕೊತ್ತಿಮರಿಗಳು ಬಂದು ಹೊಳೆಲಿ ಹೊಯ್ತಾಇದ್ದ ಮಜ್ಜಿಗೆ ಎಲ್ಲಾ ಕುಡ್ಕೊಂಡೊ. ಆ ಮೇಲೆ ಗಾಡಿ ಈಚೆಗೆ ಬಂದೋ ಬರಬೇಕಾದ್ರೆ ಬೇಕಾದಂಗೆ ಮಳೆಬಿದ್ಬುಡ್ತು.

ಆಗ ಒಬ್ಬ ಮುದ್ಕಿ ಬನ್ನಿ ಅಂತಾಳೆ. ಆಗ ಇವ್ರು ತಾಯಿ ಇಂಗಿಂಗೆ ನಾವು ಮೈಸೂರೋರು. ಮೈಸೂರ್ದು ಗಂಡು ಬೆಂಗಳೂರ್ದು ಹೆಣ್ಣು, ತೊಗರಿಗಿಡಗಿಡ್ಕು ಕರಕಟ್ಟಾಕು ಮನೆದು ಗಂಡು. ಅಕ್ಕಿ

ತೊಳೆದು ಕ್ಯಾಸೆನೀರಲಿ ಸಾವಿರ ಖಂಡುಗ ಬತ್ತ ಬೆಳೀ ಮನೆದು ಹೆಣ್ಣು. ಹಿಂಗಿಂಗೆ ನಾವು ಸೌದೇಗೋದೊ ಅಂತ ಎಲ್ಲಾ ವೃತ್ತಾಂತ ಹೇಳ್ತಾರೆ. ಅಯ್ಯೋ ಬಾ... ಬಾ... ಮಾಮೇರಿ ಮಳೆ ಬಿದ್ಬುಟದೆ ಬಾ.ಬಾ.. ಈಗ ಎಲ್ಲೋದಿರಿ ನೀವು ಬನ್ನಿ' ನಡಟ್ಟಿಗೆ ಸೌದೆಗಾಡಿನೆಲ್ಲ ತಂದು ನಿಲ್ಸು ಅನ್ಬುಟ್ಟು ಅಟ್ಟದ ಮೇಲಿದ್ದ ಒಂದು ಸ್ವಾರೆ ಬುಂಡೇನ ಕೊಟ್ಬುಟ್ಟು ನೋಡ್ರಯ್ಯ ಎತ್ತು ಗಾಡಿ ಎಲ್ಲನು ಇದ್ಕೆ ತುಂಬುಟ್ಟು ನೀವು ಇಲ್ಲಿ ಮನಿಕಬುಡಿ ಅಂದ್ಲು. ಸರಿ ಅನ್ಬುಟ್ಟು ಆ ಸ್ವಾರೆ ಬುಂಡೆನ ನಡಟ್ಟಿಗೆ ತಂದು ಉಳ್ಳುಸ್ಬುಟ್ಟು ಎತ್ತುಗಾಡಿನೆಲ್ಲ ತುಂಬುಟ್ರು ಎಲ್ಲರ್ನು ಮಲಗಿಸ್ಬುಟ್ಟು ಆ ಮುದ್ಕಿ ತಾನು ಮನಿಕಂದ್ಲು. ಒಂದೊತ್ತೇಲಿ ರೀಸಸ್ ಮಾಡುಕೆ ಎದ್ಲು ಸ್ವಾರೆ ಬುಂಡೆ ಪಕ್ಕದ ತೊಟ್ಟೀಲಿ ಕೂತ್ಕಂದು ರೀಸಸ್ ಮಾಡುದ್ಲು. ಯಾವಾಗ ಇವುಳ ರೀಸಸ್ ಮಾಡುದ್ಲು ಅದು ಸಮುದ್ರವಾಗಿ ಈ ಸ್ವಾರೆ ಬುಂಡೆನ ಒತ್ಕಂದು ಕಡದ್ಬುಡ್ತು. ದೊಡ್ಡ ಸಮುದ್ರವಾಗೋಯ್ತು. ಪಕ್ಕದೆಲಿ ಒಂದು ಆಲದ ಮರದ ಮೇಲೆ ಬಂದು ಕೊಕ್ಕರೆ ಕೂತಿತ್ತು. ಆ ಕೊಕ್ಕರೆ ಈ ಸ್ವಾರೆಬುಂಡೆ ಮುಳಿಕಂದು ತೇಲ್ಕಂದು ಹೊಯ್ತಾ ಇತ್ತಲ್ಲ ಅದನ್ನ ನೋಡ್ಬುಟ್ಟು ಒಹೋ ಹೋ ಹೋ...! ಅಲಲಲಲಾ...! ಸರಿಯಾದ ದೊಡ್ಡಮೀನು ಹೋಯ್ತಾದೆ ಅಂತ ಹೋಗಿ ಅದನ್ನೆ ನುಂಗುಬುಡ್ತದೆ. ನುಂಗ್ಬುಟ್ಟು ಬಂದು ಊರರಾಡಬಾಕ್ಲೇಲಿ ಒಂದು ದೊಡ್ಡ ಆಲದಮರ ಇತ್ತು. ಆ ಮರದ ಮೇಲೆ ಬಂದು ಕೊಕ್ಕತದೆ ನೂರೊಂದು ಜೊತೆ ಎತ್ತು ಗಾಡಿ, ಗಾಡಿ ತುಂಬ ಸೌಧೆ ಎಲ್ಲಾ ತುಂಬಿದ್ದ ಆ ಸ್ವಾರೆ ಬುಂಡೆನ ನುಂಗ್ಬುಟ್ಟು ಬಂದು ಯಾವಾಗ ಆ ಆಲದ ಮರದಲಿ ಕೂತ್ಕತ್ತೂ ಆ ಭಾರಕ್ಕೆ ಆಲದಮರ ಬುಡಸ್ಯೆತ ಉಳ್ಳೂಕ್ಕೆ ಸುರುಮಾಡ್ತು. ಆಗ ಆ ಊರ ಗೌಡನ ಸೊಸೆ ಕಸ ಸುರಿಕೆ ಕಸಹೊತ್ಕಂದು ಬತ್ತಿದ್ಲು. ಬತ್ತಿದ್ದಾಗ ಈ ಉಳ್ಳೋಯ್ತಾ ಇದ್ದ ಮರನ ನೋಡ್ಬುಟ್ಟು ಅಲಲಲಾ... ನಾನು ಬಂದಾಕಾಲದಿಂದ್ಲೂ ಈ ಮರ ಉಂಟಿರ್ಲಿಲ್ಲ ಈವಾಗ ಉಂಟೋಯ್ತದಲ್ಲ ಏನು ಕಾರಣಕ್ಕೆ...? ಇದ್ಕೆ ಏನು ಮಾಡುದು ಅನ್ಬುಟ್ಟು ತನ್ನ ತೊಡೆಯಲಿರುವ ರೋಮನೆಲ್ಲ ಕಿತ್ತು ಹುರಿಮಾಡಿ ತೂದು ಎಳ್ಬು ಹಿಂದಕ್ಕೆ ಎಳ್ಬು ಬಿಗಿಯಾಗಿ ಕಟ್ಟಿ ನಿಲ್ಲಿಸ್ಬುಟ್ಟಳು. ಈ ಮೇಲಿಂದ ಇಷ್ಟು ಕೆಲಸ ಎಲ್ಲಾ ಮಾಡಿದ್ರಲ್ಲ ಯಾರು ಹೆಚ್ಚು ಹೇಳಿ?

ಉತ್ತರ: ಕೊನೆಗೆ ತನ್ನ ತೊಡೆ ರೋಮನೆಲ್ಲ ಕಿತ್ತು ರೋಮದಲ್ಲೆ ಹುರಿಮಾಡಿ ಉಂಟೋಯ್ತಾ ಇದ್ದ ಆಲದ ಮರನ ಎಳೆದು ಕಟ್ಟಿನಿಲಿಸಿದ್ಲಲ್ಲ ಅವಳೆ ಹೆಚ್ಚು.

ಒಗಟು ಕಥಾ ಚೌಕಟ್ಟಿನಲ್ಲಿ ಬರುವ ಈ ಅದ್ಭುತ ಕಲ್ಪನೆ ಮಕ್ಕಳಿಗಷ್ಟೇ ಅಲ್ಲ ಪ್ರತಿಯೊಬ್ಬರಿಗೂ ಅದ್ಭುತ, ಆಶ್ಚರ್ಯ ಸೊಗಸೆನಿಸದೆ ಇರದು. ಇಲ್ಲಿ ಗಿಡಗಿಡ್ಕು ಕರಕಟ್ಟುವನು ಹೆಚ್ಚೋ, ಅಕ್ಕಿತೊಳೆದ ನೀರೆಲಿ ಸಾವಿರ ಕಂಡ್ಗ ಭತ್ತ ಬೆಳೆಯೋನು ಹೆಚ್ಚೋ, ನೂರೊಂದು ಗಾಡಿಗೆ ಮುರಿದ ನೇಗಿಲು ನೊಗ ತುಂಬುದೋನು ಹೆಚ್ಚೋ, ನೂರೊಂದು ಜೊತೆ ಎತ್ತುಗಾಡಿ ಜನರೆಲ್ಲ ಕುಡಿದು ಮಿಕ್ಕಿದ ಮಜ್ಜಿಗೆನ ಚೆಲ್ಲಿ ಹೊಳೆಯಾಗಿ ಹರಿಸಿದವಳು ಹೆಚ್ಚೋ, ಹೊಳೆಯಾಗಿ ಹರಿಯುತ್ತಿದ್ದ ಆ ಮಜ್ಜಿಗೆನೆಲ್ಲ ಕುಡಿಯುವಷ್ಟು ಬೆಕ್ಕಿನಮರಿ ಸಾಕಿದ್ಲಲ್ಲ ಆ ಮುದ್ಕಿ ಹೆಚ್ಚೋ. ನೂರೊಂದು ಜೊತೆ ಎತ್ತುಗಾಡಿ, ಸೌದೆ, ಆಳುಕಾಳು ಎಲ್ಲ ತುಂಬಿದ ಆ ಸೋರೆಬುಂಡೆ ಹೆಚ್ಚೋ, ಇಲ್ಲ ಇಷ್ಟೆಲ್ಲಾ ತುಂಬಿದ್ದ ಆ ಸೋರೆ ಬುಂಡೆ ಕೊಚ್ಕುಕೊಂಡು ಹೋಗುವ ಹಾಗೆ ರೀಸಸ್ ಮಾಡುದ್ಲಲ್ಲ ಆ ಮುದ್ಕಿಹೆಚ್ಚೋ, ಇಲ್ಲ ಆ ಸೋರೆಬುಂಡೆನ ನುಂಗಿದ ಕೊಕ್ರೆ

ಹೆಚ್ಚೋ, ಇಷ್ಟೆಲ್ಲ ಭಾರತಡ್ಡಿದ್ದ ಆ ಆಲದಮರ ಹೆಚ್ಚೋ' ಇಲ್ಲ ಬಿದ್ದೋಯ್ತಾ ಇದ್ದ ಮರನ ತನ್ನ ತೊಡೆಯ ರೋಮವನ್ನು ಕಿತ್ತು ಹುರಿಮಾಡಿ ಎಳೆದು ಕಟ್ಟಿದ ಆ ಊರಿನ ಸೊಸೆ ಹೆಚ್ಚೊ? ಎಂಬ ಈ ಒಗಟಿನ ಕಥೆ ಕಲ್ಪನಾ ತೀತವಾಗಿದ್ದು ಇದರ ಉತ್ತರ ಒಗಟಿನ ಒಳಗೆಯೇ ಇದೆ. ಪ್ರಶ್ನೆಯ ರೂಪದಲಿಲ್ಲ. ಕಥಾರೂಪದಲ್ಲಿ ಇರುವುದರಿಂದ ನಿಗೂಡವಾಗಿಲ್ಲದಿದ್ದರೂ ಕಸಿವಿಸಿ ಆಗುವುದಂತೂ ನಿಜ. ಇಷ್ಟೆಲ್ಲಾ ಹೇಳಿ ಕೇಳುಗರ ತೀರ್ಮಾನಕ್ಕೆ ಬಿಟ್ಟು ಅವರನ್ನ ಚಿಂತೆಗೆ ಈಡುಮಾಡುತ್ತದೆ. ಯಾವುದಾದರೊಂದು ಹೇಳಿದರೆ, ಆಗಾದರೆ ಇವ್ರು ಎಂದು ಕೇಳುತ್ತಾರೆ. ಓ ಹೌದೌದು ಅದೇ ಸರಿ ಎಂದು ಒಪ್ಪಿದರೆ ಆಗಾದ್ರೆ ಇವ್ರು ಹೆಚ್ಚಿಲ್ವೋ...! ಎಂದು ಕೇಳುತ್ತಾರೆ. ಎಷ್ಟೆಲ್ಲಾ ಸುತ್ತಿ ಬಳಸಿದ ನಂತರ ಉತ್ತರವನ್ನು ಅವರೇ ಹೇಳುತ್ತಾರೆ. ಇಂತಹ ಕಥಾರೂಪದ ಒಗಟುಗಳು ಹೆಚ್ಚೇನು ಕಾಣಿಸುವುದಿಲ್ಲ. ಒಂದು ಅಥವಾ ಎರಡು ವಾಕ್ಯದಲ್ಲೇ ಬರುವ ಒಗಟೇ ಹೆಚ್ಚಾಗಿವೆ. ಕೆಲವು ಒಗಟುಗಳು ಪ್ರಾದೇಶಿಕವಾಗಿ ವಿಶಿಷ್ಟತೆಯನ್ನು ಹೊಂದಿರುತ್ತವೆ. ಆ ಪ್ರದೇಶದ ವೈಶಿಷ್ಟ್ಯವನ್ನು ಒಳಗೊಂಡಿರುತ್ತವೆ.

"ಕಾಳೇಗೌಡ ಮತ್ತು ಮುದ್ದೇಗೌಡ ಗುದ್ದಾಡ್ಕಂಡು ಗುಹೆ ಸೇರ್‍ತಾರೆ" ಎನ್ನುವುದು ಮುದ್ದೆ ಮತ್ತು ಕಾಳುಗಳು ಊಟದ ಸಮಯದಲ್ಲಿ ಬಾಯಿಗೆ ಸೇರುವುದನ್ನು ಹೇಳುತ್ತದೆ. ಕಾಳೇಗೌಡ ಅಂದರೆ ಅವರೆಕಾಳು ಮುದ್ದೇಗೌಡ ಅಂದರೆ ರಾಗಿಮುದ್ದೆ ಮತ್ತು ಗುಹೆ ಎಂದರೆ ಬಾಯಿ. ಊಟಮಾಡುವಾಗ ಎರಡನ್ನು ಬಾಯಿಗೆ ಹಾಕುವುದನ್ನು ಇಲ್ಲಿ ಗುದ್ದಾಡಿ ತಾಮುಂದು ನಾ ಮುಂದು ಎನ್ನುವ ರೀತಿಯಲ್ಲಿ ಕಲ್ಪಿಸಲಾಗಿದೆ.

ಇದು ಇಲ್ಲಿನ ಪ್ರಾದೇಶಿಕ ವೈಶಿಷ್ಟ್ಯದ ಆಹಾರ ಪದರ್ಥಗಳು. ಇಲ್ಲಿ ರಾಗಿಮುದ್ದೆ ಮತ್ತು ಅವರೆ ಕಾಳುಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಮುಖ್ಯ ಆಹಾರವಾಗಿ ಪ್ರತಿದಿನ ಮುದ್ದೆ ಕಾಳುಗಳಲ್ಲದೆ ಇಲ್ಲಿನ ಜನರ ಊಟ ಮುಗಿಯದು. ಇದನ್ನು ಒಗಟಿನ ಮೂಲಕ ಪ್ರತಿಬಿಂಬಿತವಾಗಿದೆ.

ಜನಪದರು ತಮ್ಮ ರಸಿಕತೆಯನ್ನು ಲೈಂಗಿಕತೆಯ ಜಾಡನ್ನು ಒಗಟಿನ ಮುಖಾಂತರ ಬಳೆತೊಡುವ ಕ್ರಿಯೆಯ ಮೂಲಕ ಹೀಗೆ ಸಾದರಪಡಿಸುತ್ತಾರೆ. ಬಳೆಗಾರನೆದುರು ಯುವತಿ ಬಳೆ ತೊಡಿಸಿಕೊಳ್ಳಲು ಕುಳಿತಿರುವಾಗ ಅವಳ ಕೈಗೆ ಒಪ್ಪುವ ಹಾಗೂ ಚಿಕ್ಕದಾಗಿರುವ ಬಳೆ ಅದೂ ಗಾಜಿನ ಬಳೆಯನ್ನು ಒಡೆಯದಂತೆ ತೊಡುವ ಬಳೆಗಾರನ ಈ ಜಾಣತನವನ್ನು ಮೆಚ್ಚಬೇಕು. ಮೂಳೆಭಾಗವನ್ನು ಅದುಮಿ ಓಡಿದು ಸುತ್ತ ತಿರುವಿ ಸಮಾನವಾಗಿ ಒಳದೂಡಲಾಗುತ್ತದೆ. ಅಂಥ ಸಂದರ್ಭದಲ್ಲಿ ಬಳೆಗಾರ ನೋವು ಮರೆಸಲು ನಿಮ್ಮ ಹಟ್ಟೀಲಿ ಯಾರ್‍ಯಾರಿದ್ದೀರಿ ಇತ್ಯಾದಿಯಾಗಿ ಪ್ರಶ್ನೆ ಕೇಳುತ್ತಾ ಅವಳನ್ನಾ ಅಡ್ಡಗ್ಯಾನ ಮಾಡುತ್ತಾನೆ. ಆ ಸಂದರ್ಭದ ಒಂದು ಒಗಟನ್ನು ಈ ರೀತಿಯಾಗಿ ಕಟ್ಟಿದ್ದಾರೆ.

ಮಾತುಗೀತು ಯಾವಾಗ
ಎದುರು ಬದುರು ಕೂತಾಗ
ನಾಚ್ಗೆ ನೀಚ್ಗೆ ಯಾವಾಗ
ರಸಿಕ ಕೈ ಹಿಡ್ಕೊಂಡಾಗ
ಅಳುಗಿಳು ಯಾವಾಗ

ಅರ್ಧ ಒಳಕ್ಕೆ ಹೋದಾಗ

ನಗಾಗಿಗಾ ಯಾವಾಗ

ಪೂರ್ತಿ ಒಳಕ್ಕೋದಾಗ

ಪ್ರತಿದಿನ ಕಸಮುಸುರೆ ತೊಳೆದು ಬೆಳಗಿ ಗುಡಿಸಿ ಕೆಲಸ ಮಾಡುವ ಗ್ರಾಮೀಣ ಸ್ತ್ರೀಯರ ಕೈಗಳು ತುಸು ಒರಟಾಗೇ ಇರುತ್ತವೆ. ಇಂಥ ಕೈಗೆ ಗಾಜಿನ ಬಳೆ ತೊಡುವಾಗ ಕಷ್ಟವೇ ಆಗಿರುತ್ತದೆ. ಅಂಥ ಸಂದರ್ಭದಲ್ಲಿ ಈ ಗಾದೆಯನ್ನು ಹುಟ್ಟಿಸಿರಬಹುದು.

ಇಲ್ಲಿ ಗಣಿತಾತ್ಮಕ ಒಗಟುಗಳು ಗ್ರಾಮೀಣ ಜನರ ಬುದ್ಧಿವಂತಿಕೆ ಮತ್ತು ಪ್ರತಿಭೆಗೆ ಸಂಕೇತವಾಗಿವೆ. ಕಲಿತ ಜನಕ್ಕೆ ಸವಾಲಿನಂತಿವೆ. ಗಣಿತಶಾಸ್ತ್ರಜ್ಞನೊಬ್ಬ ಎಷ್ಟರ ಮಟ್ಟಿಗೆ ಸುಲಭವಾಗಿ ಬಿಡಿಸಬಲ್ಲನೋ ಅದೇ ರೀತಿಯಲ್ಲಿ ಗ್ರಾಮೀಣರು ಬಿಡಿಸುತ್ತಾರೆ. ಇಂಥ ಒಗಟುಗಳು ಬುದ್ದಿಯ ಕಸರತ್ತಿಗೆ ಸಾಧನವಾಗುತ್ತವೆ. ಮನಸ್ಸಿಗೆ ಸಂತೋಷವನ್ನು ಕೊಡುತ್ತವೆ.

ಉದಾ: ಮುಳುಗಿ ಮುಳಗಿ ಏಳು ಕಾಗೆ

ದಡಕ್ಕೆ ಹತ್ತುಕಾಗೆ

ಮರಕ್ಕೆ ಆರುಕಾಗೆ ಒಟ್ಟು ಎಷ್ಟು ಕಾಗೆ?

ಇಲ್ಲಿ ಏಳು ಕಾಗೆ, ಹತ್ತು ಕಾಗೆ, ಆರು ಕಾಗೆ ಎಂದು ಅವುಗಳನ್ನು ಲೆಕ್ಕ ಹಾಕುವುದು ಸಹಜವಾಗಿರುತ್ತದೆ. ಆದರೆ ಒಂದೇ ಕಾಗೆಯನ್ನು ಮುಳುಗಿ ಏಳು' ಎದ್ದು ದಡಕ್ಕೆ ಬಾ, ಬಂದು ಮರಕ್ಕೆ ಹಾರು ಎಂದು ಒಂದೇ ಕಾಗೆಗೆ ಹೇಳುವುದನ್ನು ಈ ಒಗಟು ತಿಳಿಸುತ್ತದೆ. ಇಂಥ ಗಣಿತಾತ್ಮಕ ಒಗಟುಗಳು ಹಲವಾರು ಸಿಗುತ್ತವೆ.

ಗ್ರಾಮೀಣ ಬದುಕಿನಲ್ಲಿ ಅಕ್ಕಪಕ್ಕದಲ್ಲಿ ಕಾಣುವ ಪ್ರತಿಯೊಂದು ಪ್ರಾಣಿ, ಪಕ್ಷಿ, ಕೀಟ, ಹೂಗಳು ಹೀಗೆ ಸಾಮಾನ್ಯ ವಸ್ತುಗಳು ಜನಪದರಿಂದ ರೂಪಕ ಪಡೆದು ವಿಸ್ಮಯಕಾರಿಯಾಗಿ ಅನಾವರಣಗೊಳ್ಳುತ್ತಾ ಹೋಗುತ್ತವೆ. ಅಂತಹ ಕೆಲವು ಒಗಟುಗಳು

ಸಾಮಂತನ ದಂಡು ಸಿಹಿಪುರದತ್ತ	ಇರುವೆ
ರಾತ್ರಿ ರಾಣಿಗೆ ಬೆಳ್ಳಿ ದೀಪ	ಮಿಂಚು ಹುಳು
ಗೋಡೆಗೆ ಗುದ್ದಣ್ಣ	ತಿಗಣೆ
ಕರಿಕಂಬ್ಳಿನೆಂಟ ಸರೊತ್ತೆಲಿ ಒಂಟ	ಹೆಗ್ಗಣ
ಹಾಡುಗಾರ ಹಮ್ಮೀರನ್ಗೆ ಹೊಗೆಯ ಸನ್ಮಾನ	ಸೊಳ್ಳೆ

ಹೀಗೆ ನೂರಾರು ರೀತಿಯ ಒಗಟುಗಳು ಕ್ರಿಮಿಕೀಟಗಳಿಗೆ ಹೋಲಿಕೆ ಮಾಡಿ ಒಗಟು ಕಟ್ಟಿರುವುದನ್ನು ಕಾಣುತ್ತೇವೆ. ಹಾಗೆಯೇ ಗಿಡ ಮರ ಬಳ್ಳಿಗಳಿಗೆ ಹೋಲಿಸಿ ಕಟ್ಟಿರುವ ಒಗಟುಗಳು ಹಲವಾರು ಇವೆ.

ಒಂಟಿಕಾಲ್‌ಕೊಕ್ರೆಗೆ ನೂರೊಂದು ಮೊಟ್ಟೆ	ಅಡಿಕೆಮರ

ಒಂಟಿಕಾಲೇಲಿ ನಿಂತದೆ ನೂರೊಂದು ಅರಬಿ ಹೊತ್ತದೆ — ತೆಂಗಿನಮರ

ಹೊಟ್ಟೆ ಪುಟ್ಟಿಗೆ ಜುಟ್ಟು ನೆಟ್ಟಿಗೆ — ತೆಂಗಿನಕಾಯಿ

ಪರಂಗಿ ರಾಜ ಪಾತಾಳದೆಲಿ ಪಚ್ಚೆ ಕಿರೀಟ ಹೊರಗೆ — ಮೂಲಂಗಿ

ದೊಣ್ಣೆ ನಾಯಕನ ಹೀರಿ ಹಿಪ್ಪೆ ಮಾಡ್ತಾರೆ — ನುಗ್ಗೆಕಾಯಿ

ಹೀಗೆ ಹತ್ತು ಹಲವು ತಾವು ದಿನನಿತ್ಯ ಬಳಸುವ ಆಹಾರ ಪದಾರ್ಥಗಳ ತರಕಾರಿಗಳು, ಹಣ್ಣುಗಳ ಮೇಲೆ ಒಗಟುಕಟ್ಟಿದ್ದಾರೆ. 'ಹಸಿರು ಕೋಟೆ ಒಳಗೆ ಬಿಳಿ ರಾಜ ಅದ ತಿಂದ್ರೆ ಹೊರಬತ್ತಾನೆ ಕರೀರಾಜ' ಸೀತಾಫಲ.

ಹಜಾರದಲ್ಲಿ ಅಣ್ಣ
ಬಜಾರದಲಿ ಬಣ್ಣ
ತಂದ್ಕೊಡಣ್ಣ
ಬೀಜಿಲ್ದಣ್ಣ

ಬೀಜನೇ ಇಲ್ಲದಿರುವ ಹಣ್ಣಿನ ಬಗ್ಗೆ ಒಗಟನ್ನು ಕಟ್ಟಿದ್ದಾರೆ. ಗೆಣಸು ಇದಕ್ಕೆ ಉತ್ತರವಾಗಿದೆ. ಹಾಗೆಯೇ ಇದಕ್ಕೆ ಆನ್‌ಕಲ್ಲು (ಆಲಿಕಲ್ಲು) ಎಂದು ಹೇಳುತ್ತಾರೆ.

ಕಿರೀಟ ಇದೆ ರಾಜನಲ್ಲ
ಕಾಲು ಇದೆ ಮನುಷ್ಯನಲ್ಲ
ಸಮಯ ಹೇಳ್ತದೆ ಗಡಿಯಾರವಲ್ಲ — ಹುಂಜ

ಹಳ್ಳಿಗಳಲ್ಲಿ ಸಾಮಾನ್ಯವಾಗಿ ಕೋಳಿಕೂಗುವೊತ್ಗೆ ಎದ್ದು ಎಲ್ಲಾ ಕೆಲಸಗಳು ಆರಂಭವಾಗುತ್ತವೆ. ಒಂದೆ ಕೋಳಿಕೂಗಿನಿಂದಲೆ ಸಮಯವನ್ನು ನಿರ್ಧರಿಸುತ್ತಿದ್ದರು. ಮೊದಲನೆ ಕೋಳಿಕೂಗು, ಎರಡನೇ ಕೂಗು, ಮೂರನೇ ಕೋಳಿಕೂಗು ಎಂದು ನಿರ್ಧರಿಸುತ್ತಿದ್ದರು. ಹುಂಜಕ್ಕೆ ತಲೆಯ ಮೇಲೆ ಇರುವ ತುರಾಯಿಯನ್ನು ಕಿರೀಟಕ್ಕೆ ಹೋಲಿಸಿ ರೂಪಕಟ್ಟಿರುವುದು ಇಲ್ಲಿ ದ್ಯೋತಕವಾಗಿದೆ.

ಕೆಲವು ಗೀತಾತ್ಮಕ ಒಗಟುಗಳು ಕಾವ್ಯಗುಣಗಳಿಂದ ಕೂಡಿವೆ. ಅವುಗಳಲ್ಲಿ ಆಧ್ಯಾತ್ಮಿಕ ಹಾಗೂ ತಾತ್ವಿಕ ವಿಚಾರಗಳನ್ನು ಒಳಗೊಂಡರೆ ಮತ್ತೆ ಕೆಲವು ಲೈಂಗಿಕ ಮನೋಭಾವನೆಯುನ್ನು ವ್ಯಕ್ತಪಡಿಸುವಂತವುಗಳಾಗಿವೆ.

ಒಬ್ಬನ್ಗೆ ಕೈಕೊಟ್ಟೆ ಒಬ್ಬನ್ಗೆ ಕಾಲ್ಕೊಟ್ಟೆ
ಒಬ್ಬನ್ಗೆ ಸೀರೆಯ ಎಳೆದು ಕೊಟ್ಟು ಬಿಟ್ಟೆ ಚಲುವ
ಯಾವನ್ಗೆ ಸೀರೆಯ ಎಳೆದುಕೊಟ್ಟೆ ಚೆಲುವೆ
ಬಳೆಗಾರನ್ಗೆ ಕೈಕೊಟ್ಟೆ ಕಂಚುಗಾರುನ್ಗೆ ಕಾಲ್ಕೊಟ್ಟೆ
ಅಗಸುಗಾರುನ್ಗೆ ಸೀರೆಯ ಎಳೆದುಕೊಟ್ಟೆ ಚೆಲುವಾ

ಇಲ್ಲಿ ಪ್ರಶ್ನೋತ್ತರ ರೂಪದಲ್ಲಿ ಇರುವ ಒಗಟಿನ ಪರಿಹಾರವೂ ಉತ್ತರ ರೂಪದಲ್ಲಿದೆ. ಉತ್ತರ ಹೊಳೆಯದಿದ್ದಾಗ ಅದೇ ದಾಟಿಯಲ್ಲಿಯೇ ಮರುಪ್ರಶ್ನೆ ಹಾಕುತ್ತಾರೆ. ಇದು ಗಂಡ ಹೆಂಡತಿ ನಡುವೆ ನಡೆಯುವ ಸಂಭಾಷಣೆಯಾಗಿದ್ದು, ಗಂಡ ಮನೆಯಲ್ಲಿಲ್ಲದಿರುವಾಗ ಅವಳು ಮಾಡಿದ ಕೆಲಸಗಳನ್ನು ಗಂಡನಿಗೆ ಹೇಳುವಂಥದ್ದು ಈ ರೂಪದಲ್ಲಿ ಕಟ್ಟಿದ್ದಾರೆ.

ಇಂತಹ ಹಲವಾರು ಒಗಟುಗಳು ಜನಪದ ಸಾಹಿತ್ಯದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದಿವೆ. ಗ್ರಾಮೀಣರು ತಮ್ಮ ಸಮಸ್ತಭಾವವನ್ನು ಒಗಟಿನಲ್ಲಿ ಹಿಡಿದಿಟ್ಟಿದ್ದಾರೆ. ಇವುಗಳಲ್ಲಿ ನಮ್ಮ ಸಂಸ್ಕೃತಿ ಸಂಪೂರ್ಣ ದರ್ಶನವಿದೆ. ಭಾವೈಕ್ಯದ ಪ್ರಜ್ಞೆ ಇದೆ. ಆಧುನಿಕ ಶಾಸ್ತ್ರಜ್ಞರಿಗೆ ಸವಾಲು ಹಾಕುವ ಎಲ್ಲ ಮೌಲಿಕ ಅಂಶಗಳು ಈ ಒಗಟುಗಳಲ್ಲಿ ಅಡಗಿವೆ. ಜನಪದರಿಗೆ ಶೀಲ-ಅಶ್ಲೀಲದ ತಾರತಮ್ಯವಿಲ್ಲ. ತಮ್ಮ ಬದುಕಿಗೆ ಯಾವುದು ಸಹಜವೋ ಅವೆಲ್ಲ ಮುಕ್ತ, ಬುದ್ಧಿ ಹೇಳಲು ತಾಯಿ ಮಗಳನ್ನು ಬಯ್ಯುವುದು, ತಂದೆ ಮಗನನ್ನು ಬಯ್ಯಲು ಬಳಸುವ ಮಾತುಗಳು ಶೀಲ-ಅಶ್ಲೀಲವಾಗಿ ಕಾಣುವುದಿಲ್ಲ. ಇದು ಬದುಕಿನ ಒಂದು ಅಂಗವಾಗಿರುವುದರಿಂದ ಶೀಲ-ಅಶ್ಲೀಲ ಎಂಬ ಪ್ರಶ್ನೆ ಬರುವುದಿಲ್ಲ. ಹಾಗಾಗಿ ಇಲ್ಲಿನ ಪರಿಸರದಲ್ಲೂ ಎಲ್ಲಾ ರೀತಿಯ ಒಗಟುಗಳು ಚಲಾವಣೆಗೊಳ್ಳುತ್ತಲಿವೆ. ವಾಕ್‌ಸಂಪ್ರದಾಯದ ಈ ಪರಂಪರೆ ಇಂದು ಆಧುನೀಕರಣದಿಂದ ಮಾಯವಾಗುತ್ತಿದೆ. ಸಿನಿಮಾ, ಟಿ.ವಿ, ರೇಡಿಯೋ, ಡಿ.ಟಿ.ಎಸ್‌ನಂತಹ ಅಲ್ಟ್ರಾಬ್ರಾಡ್ ಬಾಂಡ್ ಸೇವೆಗಳು ಹಳ್ಳಿಗಳಲ್ಲೂ ಅತಿ ಸುಲಭವಾಗಿ ದೊರೆಯುತ್ತಿರುವುದರಿಂದ ಜನಪದ ಸಾಹಿತ್ಯ ಮರೆಯುವುದರ ಜೊತೆಗೆ ಉಳಿದ ಸಾಹಿತ್ಯ ಬದಲಾಗುತ್ತಿರುವುದನ್ನು ಕಾಣಬಹುದಾಗಿದೆ.

ಅಧ್ಯಾಯ ೬

ಕಬ್ಬಾಳು ಗ್ರಾಮದ ಆಚರಣೆಗಳು

೬.೧. ಜೀವನಾವರ್ತನ ಆಚರಣೆಗಳು

೬.೨. ವಾರ್ಷಿಕಾವರ್ತನ ಆಚರಣೆಗಳು

೬.೩. ನಂಬಿಕೆಗಳು ಮತ್ತು ವಿಧಿ ನಿಷೇಧಗಳು

ಅಧ್ಯಾಯ ೬

ಕಬ್ಬಾಳು ಗ್ರಾಮದ ಆಚರಣೆಗಳು

( )

ಆಚರಣೆಗಳು ಮತ್ತು ಸಂಪ್ರದಾಯಗಳು ಸಮಾಜವನ್ನು ಒಂದುಗೂಡಿಸುವ ಶಕ್ತಿಯನ್ನು ನೀಡುತ್ತವೆ. ಸಂಸ್ಕೃತಿಯನ್ನು ಪೋಷಿಸಿ ನಾಗರೀಕತೆಯನ್ನು ಬೆಳೆಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಇವು ವ್ಯಕ್ತಿಯ ಬಾಳಿನ ಅವಿಭಾಜ್ಯ ಸಂಗತಿಗಳಾಗಿ ಅವನ ಆಚರಣೆಯ ಬೆನ್ನೆಲುಬು ನಂಬಿಕೆಯ ಸಿದ್ಧಾಂತ ಆಚರಣೆಯನ್ನು ಮುಂದುವರೆಸಿಕೊಂಡು ಹೋಗುವಂತೆ ಮಾಡುತ್ತದೆ. "ಜನಪದ ಸಂಸ್ಕೃತಿಗೆ ಆಚರಣೆಯೆ ಬೆನ್ನೆಲುಬು. ಆಚರಣೆಯಿಲ್ಲದೆ ಯಾವ ಯಾವ ದೈವದ ಅಸ್ಥಿತ್ವವೂ ಇಲ್ಲಿ ಸಾಧ್ಯವಿಲ್ಲ. ಜನಪದ ಧರ್ಮ ಒಂದು ಬಗೆಯಲ್ಲಿ ಆಚರಣೆಯ ಧರ್ಮ ಎನ್ನಬಹುದು. ಆ ಆಚರಣೆ ನಿರ್ಧಿಷ್ಟ ಕಾಲದಲ್ಲಿ ನಿರ್ಧಿಷ್ಟ ವ್ಯಕ್ತಿಯಿಂದಲೇ ಆಗಬೇಕಾದುದು. ದೇವತೆಗೂ ಸಮಾಜಕ್ಕೂ ಇರುವ ಸಂಬಂಧ ಅಭಿನಯಗೊಳ್ಳುವ ಕ್ರಮದ ವಿವರಗಳೇ ಆಚರಣೆಗಳು"(ಡಾ.ಸಿದ್ದಲಿಂಗಯ್ಯ, ಗ್ರಾಮದೇವತೆಗಳು, ಪುಟ.೭೧). ಹೀಗೆ ಆಚರಣೆಗಳು ಮಾನವ ಮತ್ತು ದೇವತೆಗಳ ನಡುವೆ ನಡೆಯುವ ಕೊಡು ಕೊಳ್ಳುವಿಕೆಗಳೇ ಆಗಿವೆ. "ಮತಧರ್ಮಗಳಿಗೆ ಸಂಬಂಧಿಸಿದಂತೆ ಅಗೋಚರ ದೈವಶಕ್ತಿಗಳ ಪ್ರೀತ್ಯಾರ್ಥವಾಗಿ ಮಾನವ ನಡೆಸುತ್ತಾ ಬಂದಿರುವ ಮತಾಚಾರಗಳಿಗೆ ಕರ್ಮವಿಧಿಗಳಿಗೆ ಈ ಹೆಸರಿದೆ" (ಜೀ.ಶಂ.ಪರಮಶಿವಯ್ಯ, ಕನ್ನಡ ವಿಶ್ವಕೋಶ, ಸಂಪುಟ.೧, ಪುಟ.೭೦೩). ಹೀಗೆ ವಿವಿಧ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಸಮುದಾಯವನ್ನು, ಗ್ರಾಮದೇವತೆಗಳನ್ನು ಅಧ್ಯಯನ ಮಾಡಲು ಆಚರಣಗಳೇ ಆಧಾರ. ಹರಕೆ ಬಹಳ ಸಲ ಆಚರಣೆಯ ರೂಪದಲ್ಲಿ ನಡೆಯುತ್ತದೆ. ಆಚರಣೆ ಹರಕೆಗಳನ್ನು ಒಳಗೊಂಡಿರುತ್ತದೆ. ಆಚರಣೆ ಎಲ್ಲರಿಗೂ ಕಡ್ಡಾಯವಾದರೆ ಹರಕೆಯನ್ನು ಹರಸಿಕೊಂಡವರು ಮಾತ್ರ ಒಪ್ಪಿಸುತ್ತಾರೆ. ಆಚರಣೆ ಸಾಮೂಹಿಕವಾದರೆ ಹರಕೆ ವೈಯಕ್ತಿಕವಾದದ್ದು. ಕೊಂಡ ಹಾಯುವುದು, ಸಿಡಿ ಆಡುವುದು, ಕೊಂಡಕ್ಕೆ ಔಡಲ ಹಳ್ಳು ಹಾಕುವುದು, ಈಡುಗಾಯಿ ಒಡೆಯುವುದು ಇವೆಲ್ಲ ಹರಕೆ ರೂಪದ ಆಚರಣೆಗಳು. ಇಂಥ ಆಚರಣೆಗಳು ಐತಿಹಾಸಿಕ ಅಂಶವನ್ನು ಅಭಿನಯಿಸಿ ತೋರುತ್ತವೆ.

ಆಚರಣೆಗಳು ಆಧುನಿಕತೆಯನ್ನು ತನ್ನೊಳಗೆ ಅವಿರ್ಭಸಿಕೊಂಡು ಮಾರ್ಗಗಳು ಬದಲಾದರೂ ಉದ್ದೇಶ ಒಂದೇ ಆಗಿದ್ದು ಬದಲಾವಣೆಗೆ ಒಳಪಟ್ಟಿರುತ್ತವೆ. "ಎಲ್ಲಾ ಧರ್ಮ ಹಾಗೂ ಪಂಥಗಳಲ್ಲೂ ತತ್ವ ಹಾಗೂ ಆಚರಣೆಗಳ ಬಿರುಕು ಇದ್ದೇ ಇರುತ್ತದೆ. ಇದಕ್ಕೆ ಕಾರಣ ಮೂಲದರ್ಶನಕ್ಕೆ ಬೇರೆ ಬೇರೆ ಕಾಲಘಟ್ಟಗಳಲ್ಲಿ

ಉಂಟಾಗುವ ಸೇರ್ಪಡೆಗಳು ಹೊಸ ಚಾರಿತ್ರಿಕ ಸನ್ನಿವೇಶಗಳು ಮೂಲದರ್ಶನವನ್ನು ವರ್ತಮಾನದ ಅಗತ್ಯಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳಲು ಒತ್ತಡ ಹಾಕುತ್ತವೆ. ಹೀಗೆ ಸೇರಿಸುವಿಕೆ ಬದಲಿಸುವಿಕೆಗಳು ನಿರಂತರ ನಡೆಯುತ್ತಾ ಪಂಥವೊಂದರ ದರ್ಶನವು ಪರಿವರ್ತನೆ ಪಡೆಯುತ್ತಾ ಹೋಗುತ್ತದೆ"(ರಹಮತ್ ತರೀಕೆರೆ, ಕರ್ನಾಟಕ ನಾಥಪಂಥ, ಪುಟ.೨೮). ಹೀಗೆ ಪರಿವರ್ತನೆಗೊಂಡರು ಇಂದಿನ ಅತ್ಯಾಧುನಿಕವಾದ ವೈಜ್ಞಾನಿಕ ಯುಗದಲ್ಲೂ ಮನುಷ್ಯನ ಮನವನ್ನಾಧರಿಸಿದ ಅಂಧಶ್ರದ್ಧೆ, ಅರ್ಥಹೀನ ಸಂಪ್ರದಾಯ, ಮೂಢನಂಬಿಕೆಗಳು ಧರ್ಮದ ಹೆಸರಿನಲ್ಲಿ ನಡೆಯುವ ಮಡೆ ಸ್ನಾನದಂತ ಆಚರಣೆಗಳು ಇನ್ನೂ ಮರೆಯಾಗಿಲ್ಲ. ಇಂಥವುಗಳಿಂದ ವೈಜ್ಞಾನಿಕವಾಗಿ ಯಾವುದೇ ರೀತಿಯ ಉಪಯುಕ್ತವಾಗುವುದಿಲ್ಲ. ಇವು ಸಾಮಾನ್ಯಜನರಲ್ಲಿ ಆಳವಾಗಿ ಬೇರುಬಿಟ್ಟಿವೆ. ಅವುಗಳು ಧಾರ್ಮಿಕ ಭಾವನೆಗಳನ್ನು ಉದ್ದೇಶಿಸಿ, ಭಕ್ತಿ ಭಾವನೆಯನ್ನು ಪೋಷಿಸುತ್ತಾ ಬಂದಿವೆ. ಭಾವನಾತ್ಮಕ ಸಂಬಂಧವನ್ನು ಗಟ್ಟಿಗೊಳಿಸುತ್ತಾ ಕೇಂದ್ರಿತ ನೆಲೆಗಳಲ್ಲಿ ಮನುಷ್ಯನನ್ನು ಕಟ್ಟಿಹಾಕುತ್ತವೆ. ಸಂಪ್ರದಾಯಬದ್ಧವಾದ ಜಾತಿ ಶೋಷಣೆ, ದೇವಾಲಯಗಳ ಪ್ರವೇಶ ನಿರಾಕರಣೆ ಹಾಗೂ ಸಾಮಾಜಿಕ ಅಸ್ತಿತ್ವದ ಅಲುಗಾಡುವಿಕೆಗೆ ನಾಂದಿಯಾಗಿ ಬಿಡುತ್ತವೆ.

ಆಚರಣೆಯಲ್ಲಿ ವೈಯಕ್ತಿಕ ಆಚರಣೆಗಳು, ಕೌಟುಂಬಿಕ ಆಚರಣೆಗಳು, ಸಾಮೂಹಿಕ ಆಚರಣೆಗಳು, ಸಾಮಾಜಿಕ ಆಚರಣೆಗಳು, ವ್ಯವಸಾಯಾತ್ಮಕ ಆಚರಣೆಗಳು, ಧಾರ್ಮಿಕ ಆಚರಣೆಗಳು ಹೀಗೆ ವಿವಿಧ ಆಚರಣಾ ಪದ್ಧತಿಗಳು ಇಂಡಿಯಾದ ಸಂಸ್ಕೃತಿಯೊಳಗೆ ಸೇರಿಕೊಂಡಿವೆ. ವೈಯಕ್ತಿಕ ಕಾರಣದಿಂದ ಅಂದರೆ ವ್ಯಕ್ತಿಗತ ನಂಬಿಕೆಯಿಂದ ನಡೆಯುವ ಆಚರಣೆಗಳಾಗಿದ್ದು ಮುಡಿಕೊಡುವುದು, ಕೊಂಡಹಾಯುವುದು, ಸಿಡಿ ಆಡುವುದು ಇತ್ಯಾದಿಗಳು. ಕುಟುಂಬದ ಸಮುದಾಯದ ಯೋಗಕ್ಷೇಮಕ್ಕಾಗಿ ಮಾಡುವುದು ಸಾಮೂಹಿಕ ಆಚರಣೆಗಳು. ಮುನಿಮಾಡುವುದು, ಪರಮಾಡುವುದು, ಜಾತ್ರೆ, ಹಬ್ಬಗಳು ಇತ್ಯಾದಿಗಳು. ಜನರು ನಂಬಿಕೆಯ ಆಧಾರದ ಮೇಲೆ ಹರಕೆಯನ್ನು ಕಟ್ಟುತ್ತಾರೆ. ನಿತ್ಯಜೀವನದಲ್ಲಿ ವ್ಯಕ್ತಿಗತ ಬದುಕು ಅನೇಕ ಸಂಕ್ರಮಣಗಳಿಗೆ ಒಳಗಾಗುತ್ತವೆ. ಇಂತಹ ಸಂಕ್ರಮಣಗಳು ಜೀವನದಲ್ಲಿ ನಡೆಯದಿರುವಂತೆ ಮಾನವ ಎಚ್ಚರ ವಹಿಸುತ್ತಾನೆ. ಇಂತಹ ಎಚ್ಚರಗಳು, ಕಾಳಜಿಗಳೇ ಅನೇಕ ಆಚರಣೆಗಳ ಹುಟ್ಟಿಗೆ ಕಾರಣವಾಗಿವೆ. ಜನಪದರ ಬದುಕು ಹುಟ್ಟಿನಿಂದ ಸಾವಿನವರೆಗೂ ಅನೇಕ ನಂಬಿಕೆಗಳಿಂದ ಕೂಡಿದ್ದು ಆಚರಣೆಗಳ ಮೂಲಕ ಅವನ್ನು ಈಡೇರಿಸುತ್ತಾ ಸಾಗುತ್ತಾರೆ.

ಹೀಗೆ ಸಾಗುವ ಆಚರಣೆಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭಿನ್ನವಾಗಿ ಕಂಡರೂ ಹೆಚ್ಚಾಗಿ ಸಾಮ್ಯತೆಗಳಿಂದ ಕೂಡಿರುತ್ತವೆ. ಕಬ್ಬಾಳಿನ ಪರಿಸರದಲ್ಲಿ ಮುಖ್ಯವಾಗಿ ಕೃಷಿಗೆ ಸಂಬಂಧಿಸಿದ ಮಳೆ, ಬೆಳೆ, ಭೂಮಿಗೆ ಸಂಬಂಧಿಸಿದ ಹಬ್ಬ, ಜಾತ್ರೆ, ಉತ್ಸವಗಳು, ರೋಗ ರುಜಿನಗಳ ನಿವಾರಣೆಗೆ ಸಂಬಂಧಿಸಿದ ಆಚರಣೆಗಳು ಕಂಡುಬರುತ್ತವೆ. ಇವು ವಾರ್ಷಿಕ ಆಚರಣೆ ಮತ್ತು ಜೀವನಾವರ್ತನ ಆಚರಣೆಗೆ ಸಂಬಂಧಿಸಿದವುಗಳು ಎಂದು ವರ್ಗೀಕರಿಸಿಕೊಂಡು ಅಧ್ಯಯನ ಮಾಡಲಾಗಿದೆ.

೬.೧. ಜೀವನಾವರ್ತನ ಆಚರಣೆಗಳು

ವ್ಯಕ್ತಿಯ ಹುಟ್ಟಿನಿಂದ ಸಾವಿನವರೆಗೆ ನಡೆಯುವ ಆಚರಣೆಗಳು ವೈವಿಧ್ಯಮಯದಿಂದ ಕೂಡಿರುತ್ತವೆ. ಒಂದು ಸಮುದಾಯದ ಜನ ಆಚರಿಸುವ ಆಚರಣೆಗಳು ಒಂದೇ ತೆರನಾಗಿರುತ್ತವೆ. ಕೆಲವು ವೇಳೆ ತಮ್ಮ

ಸುತ್ತಮುತ್ತಲಿನ ಬಹುಸಂಖ್ಯಾತ ಜನಾಂಗದಿಂದ ಪ್ರಭಾವಪಡೆದು ಅಲ್ಪಸ್ವಲ್ಪ ವ್ಯತ್ಯಾಸವಾದರೂ ಅವುಗಳು ತಮ್ಮ ಮೂಲವನ್ನು ಹಾಗೆಯೇ ಉಳಿಸಿಕೊಂಡಿವೆ. ಪ್ರತಿಸಾಂದರ್ಭಿಕ ಪರಿಸ್ಥಿತಿಯಲ್ಲಿ ವ್ಯಕ್ತಿಯು ಆಚರಿಸುವ ಆಚರಣೆಗಳಿಗೆ ಜೀವನಾವರ್ತನ ಆಚರಣೆಗಳು ಎಂದು ಕರೆಯಬಹುದು. ಅಂಥವುಗಳಲ್ಲಿ ವೈಯಕ್ತಿಕ ಕೌಟುಂಬಿಕ ಇಲ್ಲವೇ ಸಾಮೂಹಿಕವಾಗಿ ಆಚರಣೆಗಳು ನಡೆಯುತ್ತವೆ. ಇಲ್ಲಿ ಗ್ರಾಮದೈವದ ಆಚರಣೆ ಕೇಂದ್ರ ಬಿಂದುವಾಗಿರುವುದು ಸಾಮಾನ್ಯವಾಗಿರುತ್ತದೆ. ಕಬ್ಬಾಳಮ್ಮ ಗ್ರಾಮದ ಜನತೆಯ ವಿವಿಧ ಆಚರಣೆಗಳಿಗೆ ಮೂಲದೈವವಾಗಿ, ಕುಲದೈವವಾಗಿ, ಗ್ರಾಮದೇವತೆಯಾಗಿ ಭಕ್ತ ಜನರ ಬದುಕಿನೊಳಗೆ ಪೂಜೆಗೆ ಅರ್ಹಳಾಗಿರುವುದು ತಿಳಿದುಬರುತ್ತದೆ.

ಹುಟ್ಟು

ಕಬ್ಬಾಳು ಪರಿಸರದಲ್ಲಿ ಇತ್ತೀಚೆಗೆ ಹೆರಿಗೆಗೆಂದು ಆಸ್ಪತ್ರೆಗೆ ಹೋಗುವುದು ಸಾಮಾನ್ಯವಾಗಿದೆ. ಆದರೆ ೧೫-೨೦ವರ್ಷಗಳ ಹಿಂದೆ ಊರಿನಲ್ಲಿ ಇದ್ದ ಅನುಭವಸ್ಥ ಸ್ತ್ರೀಯರೇ ಸೂಲಗಿತ್ತಿಯರಾಗಿ ಸುಸೂತ್ರವಾಗಿ ಹೆರಿಗೆ ಮಾಡಿಸುತ್ತಿದ್ದುದುಂಟು. ಹೆರಿಗೆಯಾಗುವುದು ಇಲ್ಲಿ 'ನೀರಾಕಂಡ್ಲು' ಎಂಬುದಾಗಿ ಕರೆಯುತ್ತಾರೆ. ಹೆರಿಗೆಯ ನೋವು ಕಾಣಿಸಿಕೊಂಡಂತಹ ಸಂದರ್ಭದಲ್ಲಿ ಬಂಧು-ಬಳಗದವರು, ಅಕ್ಕ-ಪಕ್ಕದ ಮನೆಯವರು, ಅನುಭವವುಳ್ಳ ಸೂಲಗಿತ್ತಿಯರು ಬಂದು ತಿಳುವಳಿಕೆ ಹೇಳಿ ಜೊತೆಗೆ ಧೈರ್ಯತುಂಬುತ್ತಾರೆ. ಹೆಣ್ಣಾಗಲಿ ಗಂಡಾಗಲಿ ಮಗುಹುಟ್ಟಿದ ತಕ್ಷಣ ಎಲ್ಲರಬಾಯಿಗೆ ಸಿಹಿ ಹಾಕುತ್ತಾರೆ.

ಹೆರಿಗೆಯ ದಿನ ಹತ್ತಿರವಾಗುತ್ತಿದ್ದಂತೆ ಸೂಲಗಿತ್ತಿಯರು ಆ ಸಂದರ್ಭದಲ್ಲಿ ಹತ್ತಿರವಿರುತ್ತಾರೆ. ಹೆರಿಗೆಯಾದ ನಂತರ ತಾಯಿ ಮತ್ತು ಮಗುವಿನ ಕರುಳಬಳ್ಳಿ ಅಥವಾ ಹೊಕ್ಕಳು ಬಳ್ಳಿಯನ್ನು ಬ್ಲೇಡಿನಿಂದ ಅಥವಾ ಕುಡುಗೋಲಿನಿಂದ ಕತ್ತರಿಸಿ ಬೇರ್ಪಡಿಸುತ್ತಾರೆ. ನಂತರ ಮಗುವನ್ನು ತಾಯಿಯಿಂದ ಬೇರ್ಪಡಿಸಿ ಮೊರದಲ್ಲಿ ಬಟ್ಟೆಯನ್ನು ಹಾಸಿ ಮೊರಕ್ಕೆ ಹಾಕುತ್ತಾರೆ. ಹುಟ್ಟಿದ ತಕ್ಷಣ ಮಗುವಿಗೆ ಮೆತ್ತಿಕೊಂಡಿದ್ದ ರಕ್ತ ಎಲ್ಲವನ್ನು ಒರೆಸಿ ಮಗು ಉಸಿರಾಡಲು ಅನುವು ಮಾಡುತ್ತಾರೆ. ಕಿವಿ, ಮೂಗು, ಬಾಯಿ ಎಲ್ಲವನ್ನು ಸ್ವಚ್ಛಮಾಡಿ ಕಿವಿಯಲ್ಲಿ ಮೆಲ್ಲಗೆ ಊದುತ್ತಾರೆ. ಮತ್ತು ನೆತ್ತಿಯ ಮೇಲೆ ಬಾಯಿಂದ ಮೆಲ್ಲಗೆ ಊದುತ್ತಾರೆ. ಕಾಲುಗಳನ್ನು ಮೇಲಕ್ಕೆ ಎತ್ತಿ ಜೋತಾಡಿಸುತ್ತಾರೆ. ನಂತರ ಒಂದು ಕಂಚಿನ ತಟ್ಟೆ ಬಡಿದು ಶಬ್ದಮಾಡಿ ಮಗುಹುಟ್ಟಿದ ಸುದ್ದಿ ತಿಳಿಸುತ್ತಾರೆ. ಮಗುವಿನ ಬಾಯಿಗೆ ಸೂಲಗಿತ್ತಿಯರು ಬೆರಳಿಗೆ ಜೇನುತುಪ್ಪ ಸವರಿ ಬಾಯಿಗೆ ಹಾಕುತ್ತಾರೆ.

ಮಗು ಹುಟ್ಟಿದ ಸುದ್ದಿಯನ್ನು ಮೊದಲು ಮಗುವಿನ ತಂದೆಗೆ ತಿಳಿಸುತ್ತಾರೆ. ನಂತರ ಇತರರೆಲ್ಲರಿಗೂ ತಿಳಿಸುತ್ತಾರೆ. ಮಗು, ತಾಯಿ ಇಬ್ಬರಿಗೂ ಸ್ನಾನ ಮಾಡಿಸಿ ಚಳಿ, ಶೀತ ಆಗದೆ ಇರುವ ಹಾಗೆ ನೋಡಿಕೊಳ್ಳುತ್ತಾರೆ. ಕಿವಿಗೆ ಹತ್ತಿಯನ್ನು ಹಾಕಿ ಮೇಲೆ ಚೌಕವನ್ನು ತಲೆ ಕಿವಿಸೇರಿಸಿ ಕಟ್ಟುತ್ತಾರೆ. ಮಗುವಿಗೆ ಬೆಚ್ಚನೆಯ ಬಟ್ಟೆಗಳನ್ನು ಹಾಕಿ ಸೂತಕ ಕಳೆದ ಮೇಲೆ ತೊಟ್ಟಿಲಿಗೆ ಹಾಕುತ್ತಾರೆ. ತಾಯಿ ಮತ್ತು ಮಗುವಿಗೆ ಬಹಳ ಬಿಸಿಯಾದ ನೀರನ್ನು ಹಾಕಿ ಪ್ರತಿದಿನ ಸ್ನಾನ ಮಾಡಿಸುತ್ತಾರೆ. "ಎಳೆ ಮಕ್ಳುಗೆ ಉಗುರ ಬೆಚ್ಚಗಿನ ನೀರು ಹಾಕುದ್ರೆ ಶೀತ ಆಯ್ತದೆ, ಮಕ್ಳು ನೀರುಕುಡುದ್ರೆ ಕೆಮ್ಮು ಶೀತ ಆಗ್ಬುಟ್ರೆ ತಡ್ವವೇನಪ್ಪ ಅದ್ಕೆ ಬಿಸಿ ಬಿಸಿ ನೀರು ಮೈಮೇಲೆ ಜಂಪಾಳ ಊದ್ರೆ ಮಕ್ಳು ಹಾಲುಕುಡಿದು ಸುಮ್ಮನೆ ಮಲ್ಕತಾವೆ" (ಗೌರಮ್ಮ)

ಎನ್ನುತ್ತಾರೆ. ಏಳು ಅಥವಾ ಒಂಭತ್ತು ದಿನಕ್ಕೆ ಸೂತಕ ತೆಗೆಯುತ್ತಾರೆ. ಸೂತಕ ತೆಗೆಯುವಾಗ ಮನೆ ಕೋಣೆ ಎಲ್ಲ ಸಾರಿಸಿ, ಗುಡಿಸಿ, ಬೆಳಗಿ, ತೊಳೆದು, ಮನೆದೇವರನ್ನು ಒಡ್ಡಿಸಿ ಮತ್ತು ಕರಿಯಣ್ಣ ಕೆಂಚಣ್ಣನನ್ನು ಒಡ್ಡಿಸಿ ಮೂರುದೇವರ ಕೂಡಿಸಿ ಕೋಳಿ ಕೂದು ಎಡೆ ಇಟ್ಟು ಸೂತಕ ಕಳೆಯುತ್ತಾರೆ.

ನಾಮಕರಣ

ಕಬ್ಬಾಳು ಪರಿಸರದಲ್ಲಿನ ಜನರು ಹುಟ್ಟಿದ ಮಗುವಿಗೆ ಹೆಸರಿಡುವುದನ್ನು ನಾಮಕರಣ ಎಂದು ಕರೆಯುತ್ತಾರೆ. 'ಹೆಸರು ಕಟ್ಟುವುದು' ಎಂದೂ ಕೂಡ ಕರೆಯುತ್ತಾರೆ. ಹುಟ್ಟಿದಮಕ್ಕಳಿಗೆ ಹೆಸರಿಡುವುದು ಅವಶ್ಯಕವಾದರೆ, ತಮ್ಮ ಮನೆತನದ ಹೆಸರುಗಳು ಮತ್ತು ತಮ್ಮ ಒಕ್ಕಲಿನ ಮನೆದೇವರ ಹೆಸರಿಡುವುದು ಸಂಪ್ರದಾಯವಾಗಿದೆ. ಈ ಹೆಸರಿಡುವ ಶಾಸ್ತ್ರವನ್ನು ಮೂರು ತಿಂಗಳಿಗೋ, ಆರು ತಿಂಗಳಿಗೋ ಅಥವಾ ಒಂದು ವರ್ಷದ ಒಳಗೆ ಶಾಸ್ತ್ರ ಕೇಳಿ ಒಳ್ಳೆಯ ಶುಭದಿನವನ್ನು ನಿಗದಿಮಾಡಿ ಬಂಧುಮಿತ್ರರೆಲ್ಲರಿಗೂ ತಿಳಿಸಿ ನಾಮಕರಣಶಾಸ್ತ್ರವನ್ನು ಮಾಡುತ್ತಾರೆ. ಅಲ್ಲಿಯವರೆಗೆ ತಾಯಿ-ತಂದೆಗೆ ಯಾವ ಹೆಸರು ಪ್ರಿಯ ಎನಿಸುತ್ತದೋ ಆ ಹೆಸರನ್ನು ಚಿನ್ನ, ರನ್ನ, ಪುಟ್ಟ, ಅಪ್ಪಿ, ಚಿಂಟು, ಪಿಂಕಿ, ಬಂಗಾರ ಹೀಗೆ ಅಮ್ಮ ಪ್ರೀತಿಯಿಂದ ಕರೆಯುವುದು ರೂಢಿಯಲ್ಲಿರುತ್ತದೆ.

ನಾಮಕರಣವು ತಂದೆಯ ಮನೆಯಲ್ಲೆ ಆಗಬೇಕು. ಇದು ಈ ಪರಿಸರದಲ್ಲಿ ರೂಢಿಯಲ್ಲಿರುವ ಪದ್ಧತಿ. ಮಕ್ಕಳಿಗೆ ತಂದೆಯ ಮನೆತನದ ಮನೆದೇವರ ಹೆಸರು, ಒಕ್ಕಲುಗಳ ಹೆಸರಿಡುವುದು ಇಂದಿಗೂ ಉಳಿದುಕೊಂಡು ಬಂದಿದೆ. ಸಾಮಾನ್ಯವಾಗಿ ಇಲ್ಲಿ ಬಹುಪಾಲು ಜನರಿಗೆಲ್ಲ ಆಧುನೀಕರಣಗೊಂಡ ನಂತರದಲ್ಲಿ ಎರಡು ಹೆಸರುಗಳು ಚಾಲ್ತಿಯಲ್ಲಿರುತ್ತವೆ. ಒಂದು ಹುಟ್ಟ ಹೆಸರು ಮತ್ತೊಂದು ಅಡ್ಡ ಹೆಸರು. ಹುಟ್ಟ ಹೆಸರು ಮನೆತನದ, ಮನೆದೇವರ ಹೆಸರುಗಳಾಗಿದ್ದರೆ, ಅಡ್ಡ ಹೆಸರು ಇತ್ತೀಚಿಗೆ ಹೆಚ್ಚಾಗಿ ಬಳಕೆಯಾಗುತ್ತಿರುವ ಆಧುನಿಕ ಹೆಸರುಗಳಾಗಿರುತ್ತವೆ. ಈ ಹೆಸರುಗಳಿಗೆ ಯಾವುದೇ ಹಿನ್ನಲೆ ಇಲ್ಲ, ಕರೆಯಲು ಚೆನ್ನಾಗಿದ್ದರೆ ಸಾಕೆನಿಸುತ್ತಾರೆ. ಶಾಲಾದಾಖಲಾತಿಗೆ ಕೊಡುವ ಹೆಸರುಗಳೂ ಕೂಡ ಅಡ್ಡ ಹೆಸರುಗಳನ್ನೇ ದಾಖಲು ಮಾಡುತ್ತಾರೆ. ಇತ್ತೀಚಿಗೆ ಹುಟ್ಟ ಹೆಸರುಗಳು ಅಪ್ಪ-ಅಮ್ಮನ, ಹಿರಿಯರ ಸಮಾಧಾನಕಷ್ಟೆ ಸೀಮಿತವಾಗಿವೆ.

ಮಕ್ಕಳಿಗೆ ಹೆಸರು ಕಟ್ಟಲು ಎಲ್ಲರೂ ಅವರವರ ಮನೆದೇವರ ಹೆಸರಿನಲ್ಲಿ, ಮನೆದೇವರ ದೇವಾಲಯಗಳಲ್ಲಿ ಕಟ್ಟಿಸುತ್ತಾರೆ. ದೇವರಗುಡ್ಡರನ್ನೋ ಅಥವಾ ನೀಲಗಾರರನ್ನೋ, ದಾಸಯ್ಯನವರನ್ನೋ ಯಾವ ದೇವರ ಒಕ್ಕಲಾಗಿರುತ್ತಾರೆ ಆ ಒಕ್ಕಲಿನ ದೇವರ ಗುಡ್ಡರನ್ನು ಕರೆಸಿ, ಮನೆಯ ಹಿರಿಯರ, ಊರಿನ ಎಲ್ಲ ಜನರ ಸಮ್ಮುಖದಲ್ಲಿ ಹೆಸರು ಕಟ್ಟುತ್ತಾರೆ. ಮನೆಯಲ್ಲಿ ದೇವರನ್ನು ಒಡ್ಡಿಸಿ ಗುಡ್ಡರ ಕೈಲಿ ನಾಮಕರಣ ಮಾಡಿಸುತ್ತಾರೆ. ಗುಡ್ಡರು ಇಷ್ಟ ದೈವಗಳಿಗೆ ಪೂಜೆ ಮಾಡಿ ವಿಭೂತಿ ಧಾರಣೆಮಾಡಿ ಮಗುವಿಗೂ, ನೆರೆದಿದ್ದ ಎಲ್ಲರಿಗೂ ವಿಭೂತಿ ಧಾರಣೆಮಾಡಿ ಮಗುವಿನ ಹಣೆಯ ಮೇಲೆ ಮೂರುಸಾರಿ ವಿಭೂತಿ ಇಟ್ಟು, ಮೂರು ಸಾರಿ ಆ ಮಗುವಿಗಿಟ್ಟ ಹೆಸರನ್ನು ಹೇಳುತ್ತಾರೆ. ಅಲ್ಲಿ ನೆರೆದಿದ್ದ ಎಲ್ಲರೂ ಹಾಗೆಯೆ ಹೇಳುತ್ತಾರೆ. ಮಗುವಿನ ತಲೆಸವರಿ ಆಶೀರ್ವಾದ ಮಾಡುತ್ತಾರೆ.

ಇಲ್ಲಿ ಮುಖ್ಯವಾಗಿ ನಾಮಕರಣಕ್ಕೆ ಮಾಂಸದ ಅಡುಗೆ ಮಾಡಿಸುತ್ತಾರೆ. ಮರಿಕೂದು ಹೆಸರು ಕಟ್ಟಬೇಕು ಎನ್ನುವ ಸಂಪ್ರದಾಯ ಇಂದಿಗೂ ಉಳಿದುಕೊಂಡು ಬಂದಿದೆ. ಕೆಲವರು ಸ್ಥಿತಿವಂತರು

ಛತ್ರಗಳಲ್ಲಿ ನಾಮಕರಣ ಮಾಡಿದರೆ ಬಹುಸಂಖ್ಯಾತರು ತಮ್ಮ ತಮ್ಮ ಮನೆಗಳಲ್ಲಿ ಮಾಡುತ್ತಾರೆ. ಕಬ್ಬಾಳು ದೇವಸ್ಥಾನದಲ್ಲಿ ಹೆಸರು ಕಟ್ಟಿಸುತ್ತಾರೆ. ಕೆಲವರು ಹುಡುಗರನ್ನು ಬೇಕೆಂದು ಅವರ ಅಡ್ಡ ಹೆಸರನ್ನು ಅವರ ಆಕೃತಿ, ಪ್ರಕೃತಿಯನ್ನೋ, ರೂಪವನ್ನು ನೋಡಿ ಅಡ್ಡಹೆಸರು ಕರೆಯುವುದು ಉಂಟು. ಅವರು "ಏಯ್ ನಿಮ್ಮಪ್ಪ ಮರಿಕೂದು ಹೆಸ್ರು ಕಟ್ಟಿದುನ್ರುಲ" (ಸುರೇಶ) ಎನ್ನುವ ಮಾತು ಇದಕ್ಕೆ ಪೂರಕವಾಗಿದೆ.

ಇಲ್ಲಿ ಹೆಚ್ಚಾಗಿ ತಮ್ಮ ಕುಲದೈವದ ಹೆಸರುಗಳನ್ನು ಇಡುವುದು ಇಂದಿಗೂ ಇದೆ.

ಕುಲದೇವತೆಗಳು	ಹೆಸರುಗಳು
೧. ಮಂಟೇಸ್ವಾಮಿ, ಸಿದ್ದಪ್ಪಾಜಿ	ಮಂಟೇದಲಿಂಗು, ಜ್ಯೋತಿರ್ಲಿಂಗು, ಸಿದ್ದಪ್ಪಾಜಿ, ಘನನೀಲಿ, ಬಸವಯ್ಯ, ಸಿದ್ದಯ್ಯ, ದೊಡ್ಡಮ್ಮ, ಚೆನ್ನಾಜಮ್ಮ, ಸಿದ್ದರಾಜ, ಸಿದ್ಧರಾಜಿ, ರಾಚಯ್ಯ.
೨. ಕಬ್ಬಾಳಮ್ಮ	ಕಬ್ಬಾಳ, ಕಬ್ಬಾಳಯ್ಯ, ಕಬ್ಬಾಳೇಗೌಡ, ದುರ್ಗ, ದುರ್ಗಿ, ಮಾರೆ, ಮುನಿಮಾರ, ದುರ್ಗಮ್ಮ, ಕಾಳಮ್ಮ, ನಾಗರಾಜ, ನಾಗರತ್ನ, ಕೆಂಪರಾಜಮ್ಮ, ರಾಮದುರ್ಗ, ಚಿನ್ನಮಾರ, ಮಾರಪ್ಪ, ಮಾರೇಗೌಡ
೩. ಚೂಡಲಿಂಗೇಶ್ವರ (ಶಂಬುಲಿಂಗೇಶ್ವರ)	ಚೂಡಲಿಂಗ, ಲಿಂಗೇಗೌಡ, ಮುನಿಚೂಡಯ್ಯ
೪. ಮಹಾದೇಶ್ವರ	ಮಹಾದೇವ, ಮಾದೇವಿ, ಏಳುಮಲೆ, ಪುಟ್ಟಮಾದ, ದೊಡ್ಡಮಾದ, ಚಿಕ್ಕಮಾದ, ಮಾದೇಗೌಡ
೫. ವೈದ್ಯನಾಥೇಶ್ವರ (ಓದೇಶ್ವರ)	ಓದೇಗೌಡ, ಓದಯ್ಯ
೬. ಶಿವನಂಕಾರಿ ದೇವರು	ಶಿವನಂಕಾರಿ, ಶಿವನಂಕಾರಿಗೌಡ
೭. ಆದಿಚುಂಚನಗಿರಿ ಕಾಲಭೈರವ	ಅಂದಾನಿ, ಭೈರವ, ಜೋಗಯ್ಯ

ಮದುವೆ ಸಂಪ್ರದಾಯ

ಕುಟುಂಬ ರಚನೆಯ ಚಾಲನಾಶಕ್ತಿಯೆ ಮದುವೆ. ಹೊಸ ಸಂಬಂಧವಾದಲ್ಲಿ ವಿಭಿನ್ನ ಗೋತ್ರದಲ್ಲಿ ಮದುವೆ ನಡೆಯುತ್ತದೆ. ಅಕ್ಕನ ಮಗಳು, ಸೋದರ ಮಾವನ, ಸೋದರತ್ತೆಯ ಮಗಳು ಮದುವೆಗೆ ಹಿಂದೂ ಸಮಾಜದಲ್ಲಿ ಒಪ್ಪಿಗೆ ಇದೆ. ಅಣ್ಣತಂಗಿಯರ ಮದ್ಯೆ ಮದುವೆ ನಿಷಿದ್ಧ. ಗಂಡು ಹೆಣ್ಣುಗಳ ಜಾತಕ ಸರಿಬಂದರೆ ಮದುವೆಗೆ ಒಪ್ಪಿಗೆ ಸಿಗುತ್ತದೆ. ಮತ್ತು ಇವರಿಬ್ಬರ ಕುಲಗಳು ಒಂದೇ ಆಗಬಾರದು. ಬೇರೆ ಬೇರೆ ಆಗಿರಬೇಕು. ಹಿಂದೆ ರಕ್ತಸಂಬಂಧದಲ್ಲಿ ಹೆಚ್ಚಾಗಿ ಮದುವೆಗಳು ನಡೆಯುತಿದ್ದವು. ಇದರಿಂದ ಸಂಬಂಧಗಟ್ಟಿಗೊಳ್ಳುತ್ತದೆ ಎಂಬ ನಂಬಿಕೆ ಜನಪದರಲ್ಲಿತ್ತು. ಆದರೆ ಇತ್ತೀಚೆಗೆ ರಕ್ತಸಂಬಂಧದಲ್ಲಿ ಮದುವೆಯಾದರೆ ಹುಟ್ಟಿದ ಮಕ್ಕಳು ಅಂಗವೈಕಲ್ಯದಿಂದ ಹುಟ್ಟುತ್ತವೆ ಎಂಬ ವೈಜ್ಞಾನಿಕ ತಿಳುವಳಿಕೆಯಿಂದ ಈ ಸಂಬಂಧ ಕಡಿಮೆಯಾಗಿದೆ. ಹಿಂದೆ ಇದ್ದ ಬಾಲ್ಯವಿವಾಹ ಈಗ ಇಲ್ಲ. ವಿಧುರರಿಗೆ ಮರುಮದುವೆ ಇದೆ. ಆದರೆ ಇತ್ತೀಚಿಗೆ ವಿಧವೆಯರಿಗೂ ಮರುಮದುವೆಯಾಗುತ್ತಿರುವುದು ವಿರಳವಾಗಿ ಕಂಡುಬರುತ್ತದೆ.

ಹಿಂದೆ ಮದುಮಗಳು ಶಾಸ್ತ್ರ ಸಂಪ್ರದಾಯದಂತೆ ಹಳ್ಳಿಯಲ್ಲೇ ಮನೆಯ ಮುಂದೆ ಚಪ್ಪರ ಹಾಕಿ ಹೆಣ್ಣು-ಗಂಡುಗಳನ್ನು ಎತ್ತಿನ ಗಾಡಿಗಳ ಮೇಲೆ ಕೂರಿಸಿ ಮೆರವಣಿಗೆಯ ಮೂಲಕ ಕರೆತಂದು ಶಾಸ್ತ್ರೋಕ್ತವಾಗಿ ಮದುವೆ ಮಾಡುತ್ತಿದ್ದರು. ಇತ್ತೀಚೆಗೆ ಎಲ್ಲರೂ ಛತ್ರಗಳಲ್ಲಿ ಮದುವೆ ಮಾಡುತ್ತಿದ್ದಾರೆ. ಹಿಂದೆ ಎರಡು ಮೂರು ದಿನಗಳ ಕಾಲ ಮಾಡುತ್ತಿದ್ದ ಮದುವೆಗಳು ಇಂದು ಒಂದು ದಿನಕ್ಕೆ ಸೀಮಿತವಾಗಿವೆ. ತುಂಬಾ ಸರಳವಾಗುತ್ತಿರುವ ಮದುವೆಗಳು ಕೆಲವು ಸಂಪ್ರದಾಯಗಳನ್ನು ಕಳೆದುಕೊಳ್ಳುತ್ತಾ ಸಾಗಿವೆ.

ಸೀಮಂತ

ಮನೆಯ ಮಗಳು ಮೊದಲ ಸಲ ಅಂದರೆ ಚೊಚ್ಚಲ ಗರ್ಭಿಣಿಯಾದರೆ ಆಕೆಗೆ ಏಳನೆಯ ತಿಂಗಳಲ್ಲಿ ಅಥವಾ ಎಂಟನೆಯ ತಿಂಗಳಲ್ಲಿ ಸೀಮಂತಕಾರ್ಯ ಮಾಡುತ್ತಾರೆ. ಗರ್ಭಿಣಿ ಮಾನಸಿಕವಾಗಿ ದೈಹಿಕವಾಗಿ ತುಂಬಾ ಸ್ವಸ್ಥವಾಗಿರಬೇಕಾಗುತ್ತದೆ. ಸದಾ ಉಲ್ಲಾಸಿತಳಾಗಿರುವುದರಿಂದ ಹುಟ್ಟುವ ಮಗು ಎಲ್ಲಾ ರೀತಿಯಿಂದಲೂ ಚೆನ್ನಾಗಿರುತ್ತದೆ ಎಂಬ ದೃಷ್ಟಿಯಿಂದ ಗರ್ಭಿಣಿಗೆ ಈ ರೀತಿಯ ಆಚರಣೆಗಳನ್ನು ಮಾಡಿ ಸಂತೋಷಪಡಿಸುವ ಉದ್ದೇಶ ಇದಾಗಿದೆ.

ಈ ಭಾಗದಲ್ಲಿ ಸೀಮಂತವನ್ನು ಅಷ್ಟೊಂದು ಅದ್ದೂರಿಯಾಗಿ ಮಾಡದಿದ್ದರೂ ಶಾಸ್ತ್ರೋಕ್ತವಾಗಿ ಎಲ್ಲರೂ ಮಾಡುತ್ತಾರೆ. ಸೀಮಂತವನ್ನು ಸಾಮಾನ್ಯವಾಗಿ ಇಲ್ಲಿ ತವರಿನ ಮನೆಯವರು ಮಾಡುತ್ತಾರೆ. ಒಂದು ವೇಳೆ ಹೆಣ್ಣುಮಗಳು ಗಂಡನಮನೆಯಲ್ಲಿದ್ದರೆ ಅಲ್ಲೇ ಸೀಮಂತಮಾಡಿ ಕರೆದುಕೊಂಡು ಬರುತ್ತಾರೆ. ಗರ್ಭಿಣಿಯನ್ನು ಕರೆದುಕೊಂಡು ಬರಲು ಶಾಸ್ತ್ರಕೇಳಿ ಒಳ್ಳೆಯ ದಿನ, ಕಾಲ, ಎಲ್ಲವನ್ನು ಕೇಳಿ, ನೋಡಿ ಕರೆದುಕೊಂಡು ಬರುತ್ತಾರೆ. ಕರೆದುಕೊಂಡು ಬರಲು ಏಳುಜನ, ಒಂಬತ್ತು ಜನ ಹೋಗುತ್ತಾರೆ. ಅವರು ಮುತ್ತೈದೆಯರೇ ಆಗಿರುತ್ತಾರೆ. ಅಲ್ಲೇ ಸೋಗಲು ಹೂದು ಅಂದರೆ ಗರ್ಭಿಣಿಗೆ ಹೊಸಸೀರೆ, ರವಿಕೆ, ಕೊಟ್ಟು ಎಲೆ, ಅಡಿಕೆ, ಹೂವು, ಅರಿಸಿಣ, ಕುಂಕುಮ, ಬಟ್ಟೆಗಳು, ಎಲ್ಲತರಹದ ಹಣ್ಣುಗಳನ್ನು ಮೊಡ್ಲಕ್ಕಿ ಕಟ್ಟಿ ಗರ್ಭಿಣಿಯ ಮೊಡ್ಲಿಗೆ ಹಾಕಿ ತಲೆಮೇಲೆ ಅಕ್ಕಿಕಾಳು ಹಾಕಿ ಕೊಬ್ಬರಿ ಬೆಲ್ಲ ತುಂಬಿದ ತಟ್ಟೆಯನ್ನು ನೀಡಿ ಶಾಸ್ತ್ರೋಕ್ತವಾಗಿ ಕಳುಹಿಸುತ್ತಾರೆ. ಗರ್ಭಿಣಿಯು ಬರುವಾಗ ಅಲ್ಲಿರುವ ಪ್ರತಿಯೊಬ್ಬ ಹಿರಿಯರಿಗೂ ಎಲೆ ಅಡಿಕೆ ಕೊಟ್ಟು ಕಾಲಿಗೆ ಬಿದ್ದು ಆಶೀರ್ವಾದ ಪಡೆದುಕೊಂಡು ಬರುತ್ತಾಳೆ. ತವರಿನಲ್ಲಿ ತನ್ನ ಬಯಕೆಗಳನ್ನೆಲ್ಲವನ್ನು ತವರಿನವರು ಪೂರೈಸುತ್ತಾರೆ.

ಸೂತಕ ಕಳೆಯುವುದು

ವ್ಯಕ್ತಿ ಹುಟ್ಟಿದಾಗಲೂ ಮತ್ತು ಸತ್ತಾಗಲು ಇಲ್ಲಿನ ಜನರಿಗೆ ಸೂತಕವಾಗುತ್ತದೆ. ಮಗು ಹುಟ್ಟಿದ ಏಳು ದಿನಗಳೊಳಗೆ ಸೂತಕ ಕಳೆದರೆ ವ್ಯಕ್ತಿ ಸತ್ತಾಗ ಹನ್ನೊಂದು ದಿನಗಳಿಗೆ ಸೂತಕ ತೆಗೆಯುತ್ತಾರೆ. ಸೂತಕ ತೆಗೆಯುವುದೆಂದರೆ ಮನೆಯ ಪ್ರತಿಯೊಂದು ವಸ್ತುಗಳನ್ನು ಸ್ವಚ್ಛಗೊಳಿಸಿ, ಎಲ್ಲಾ ಬಟ್ಟೆಗಳನ್ನು ತೊಳೆದು, ಕಸ, ದುಂಬು ಎಲ್ಲ ಒಡೆದು ಮನೆಯನ್ನೆಲ್ಲ ಸಾರಿಸಿ ಹೊಸನೀರು ತಂದು ಅಡುಗೆಮಾಡಿ ಮನೆದೇವರ ಒಡ್ಡಿ ಪೂಜೆಮಾಡುವುದು.

"ಸೂತ್ಕ ತೆಗೀದು ಮೂರ್ದಿನ ಅಂತಲೇ ಎಲ್ಲಾ ಬಟ್ಟೆ ಬರೆ ಎಲ್ಲವನ್ನು ಒಗೆದು ಮನೆಯಲ್ಲಿ ದುಂಬು-ದೂಳು ಒಡುದು, ಎಲ್ಲಾ ಸಾಮಾನುಗಳನ್ನು ಬೆಳಗಿ-ತೊಳೆದು, ಮನೆ ಕೋಣೆ ಎಲ್ಲ ಸಾರಿಸಿ-ಗುಡಿಸಿ, ಪಡಸಾಲೆ ತೊಳೆದು, ಹಿತ್ಲು-ಗಿತ್ಲು ಎಲ್ಲ ಕಿಲೀನು ಮಾಡಿ, ಮನೆಮುಂದೆ ಸಗಣಿ ಹಾಕಿ ರಂಗೋಲೆ ಬುಟ್ಟು, ಅಂಡೆ-ಬಿಂದ್ಗೆಗೆ ಹುಣಸೆ ಹಣ್ಣಾಕಿ ತೊಳೆದು ಹೊಸ ಮಣ್ಣಿನ ಮಡಿಕೆ ತಂದು, ಹೊಸ ನೀರು ತಂದು ಅಡುಗೆಮಾಡಿ ನಮ್ಮ ಮನೆದೇವ್ರು ಕರೆಸಿ ಎಡೆ ಇಕ್ಕಿ ಪೂಜೆಮಾಡಿ ಒಂದು ಕಾಸುನ್‌ಧೂಪ ಆಕಿ ಮನೆಗೆಲ್ಲ ತೀರ್ಥ ಹಾಕ್ಸುದ್ರೆ ಸೂತ್ಕ ಕಳೀತದೆ" (ವೆಂಕಟಮ್ಮ, ವಕ್ತ) ಇದನ್ನು ಮಡಿಕೆ ಇಕ್ಕುವುದು ಎಂದೂ ಕರೆಯುತ್ತಾರೆ. ಹೀಗೆ ಪ್ರತಿಯೊಂದು ಜನನ ಮತ್ತು ಮರಣ ಹೊಂದಿದಾಗ ಸೂತಕತೆಗೆಯುವುದು ಕಡ್ಡಾಯವಾಗಿದೆ. ಇದು ಅವರವರ ಒಕ್ಕಲಿನಲ್ಲಿ ವಠಾರದಲ್ಲಿ ಅಣ್ಣ ತಮ್ಮ ಸಂಬಂಧಿಕರಲ್ಲಿ ಸತ್ತರೆ ಹುಟ್ಟಿದರೆ ಮಾತ್ರ ಒಕ್ಕಲಿನವರೆಲ್ಲಾ ಸೂತಕ ಕಳೆಯುತ್ತಾರೆ. ಬೇರೆ ಒಕ್ಕಲಿನಲ್ಲಿ ಸತ್ತರೆ ಹುಟ್ಟಿದರೆ ಸೂತಕ ತೆಗೆಯುವುದಿಲ್ಲ.

ಶವಸಂಸ್ಕಾರ ಪದ್ಧತಿ

ಸಂಸ್ಕಾರಗಳು ಒಂದು ಸಮುದಾಯದ ಜಾತಿಯ ಸಂಪ್ರದಾಯಗಳ ಪ್ರಮುಖ ಅಂಗಗಳಾಗಿರುವುದರಿಂದ ಆ ಸಮುದಾಯದ ಸಾಂಸ್ಕೃತಿಕ ಅಧ್ಯಯನದಲ್ಲಿ ಇತರ ಸಂಸ್ಕಾರಗಳಿಗೆ ಕೊಟ್ಟ ಗಮನವನ್ನು ಶವಸಂಸ್ಕಾರಗಳಿಗೂ ಕೊಡಬೇಕಾಗುತ್ತದೆ. ಮನುಷ್ಯನ ದೇಹ ಜನನ ಪೂರ್ವದಿಂದಲೂ ಆಚರಣೆ, ಸಂಸ್ಕಾರಗಳಿಗೆ ಒಳಪಟ್ಟಿದೆ. ಈ ದೇಹದ ಮರಣಾನಂತರವೂ ಅನೇಕ ಸಂಸ್ಕಾರಗಳು ನಡೆಯುತ್ತವೆ. ಇಲ್ಲಿ ಎಲ್ಲಾ ಜಾತಿಗಳಲ್ಲೂ ಈ ಆಚರಣೆಗಳಿದ್ದು ಬಹುಪಾಲು ಎಲ್ಲವೂ ಸಾಮ್ಯತೆಯಿಂದಲೇ ಕೂಡಿವೆ. ಜೀವಂತ ವ್ಯಕ್ತಿಗೆ ಮಾಡುವ ವಿವಿಧ ಕ್ರಿಯಾಚರಣೆಗಳು ಎಷ್ಟು ಮುಖ್ಯವೋ ನಂತರ ಮಾಡುವ ಕ್ರಿಯಾಚರಣೆಗಳು ಅಷ್ಟೇಮುಖ್ಯ. ಏಕೆಂದರೆ ಪಂಚಭೂತಗಳಿಂದಾದ ಕಾರ್ಯವನ್ನು ಪಂಚಭೂತಗಳಿಗೆ ಒಪ್ಪಿಸುವುದಲ್ಲದೆ ದೇಹದಿಂದ ಪರಿತ್ಯಕ್ತವಾದ ಆತ್ಮಕ್ಕೆ ಒಂದು ಉತ್ತಮವಾದ ನೆಲೆಯನ್ನು ಅನುಸಂದಾನ ಮಾಡುವ ಉದ್ದೇಶವೂ ಆಗಿರುತ್ತದೆ. ಆದ್ದರಿಂದ ಅವು ಅಂತ್ಯಕ್ರಿಯಗಳಷ್ಟೇ ಅಲ್ಲ ಅವು ಉತ್ತರಕ್ರಿಯೆಗಳು, ಅವು ಅನೇಕ ಶಾಸ್ತ್ರ ವಿಧಿಗಳಿಂದ ಕೂಡಿರುವುದರಿಂದ ಇದನ್ನು 'ಸಂಸ್ಕಾರ' ಎಂದು ಹೇಳಬಹುದು.

ಸಾಮಾನ್ಯವಾಗಿ ಎಲ್ಲಾ ಸಮುದಾಯದಲ್ಲಿ ವ್ಯಕ್ತಿಯ ಜೀವ ಹೋಗುತ್ತಿದೆ ಎಂದು ತಿಳಿದಾಗ ವ್ಯಕ್ತಿಯ ಬಾಯಿಗೆ ಅವರ ಮಕ್ಕಳಿಂದ ನೀರು, ಹಾಲು ಬಿಡಿಸುತ್ತಾರೆ. ಮಕ್ಕಳು ಯಾರೂ ಹತ್ತಿರ ಇಲ್ಲದಿದ್ದರೆ ಅಲ್ಲಿರುವ ಯಾರಾದರು ಬಿಡುತ್ತಾರೆ. ಶಾಸ್ತ್ರೋಕ್ತವಾಗಿ ಮೂರು ಬಾರಿ ನೀರುಬಿಡುವುದು ಇದೆ. ವ್ಯಕ್ತಿಸಾಯುತ್ತಾಇದ್ದಾನೆ ಎಂದು ತಿಳಿಯುತ್ತಿದ್ದಂತೆ ಅವನನ್ನು ಈಚೆಗೆ ಪಡಸಾಲೆಗೆ ಅಥವಾ ಹೊರಾಂಡಕ್ಕೆ ಹಿಡಿಯುತ್ತಾರೆ. ಇದನ್ನು 'ಈಚ್ಗೆ ಇಡುದ್ಬುಟ್ರಂತೆ' ಎಂಬ ಪದ ಬಳಸುತ್ತಾರೆ. ಅಂದರೆ ವ್ಯಕ್ತಿ ಕೆಲವೇ ನಿಮಿಷಗಳಲ್ಲಿ ಪ್ರಾಣ ತ್ಯಾಗಮಾಡುತ್ತಾನೆ ಎಂದೇ ಅರ್ಥ. ವ್ಯಕ್ತಿ ಮನೆಯ ಒಳಗಡೆ ಸಾಯಬಾರದು ಆ ವ್ಯಕ್ತಿಯ ಉಸಿರು ಮನೆಯಲ್ಲೇ ಸೇರಿಬಿಡುತ್ತದೆ. ಅವರಿಗೆ ಮುಕ್ತಿ ಸಿಗುವುದಿಲ್ಲ ಎಂಬುದು ಇಲ್ಲಿನ ಜನರ ನಂಬಿಕೆ. ಮನೆಯ ಒಳಗಡೆ ಸತ್ತಾಗ ಗಳಿಗೆ ಸರಿಯಿಲ್ಲ ಎಂದು ಶಾಸ್ತ್ರಕೇಳಿ ಗೊತ್ತಾದಾಗ ಮೂರು ತಿಂಗಳು, ಆರು ತಿಂಗಳು, ಒಂದು ವರ್ಷಗಳ ಕಾಲ ಮನೆಯನ್ನು ತೊರೆಯಬೇಕಾಗುತ್ತದೆ. ಆದ ಕಾರಣ ಪ್ರಾಣ ಹೋಗುತ್ತಿದ್ದಂತೆ ಈಚೆಗಿಡಿಯುವುದು ಇಲ್ಲಿನ ಸಂಸ್ಕೃತಿಯಾಗಿದೆ.

ವ್ಯಕ್ತಿ ಸತ್ತಮೇಲೆ ಕಾಲುಗಳು, ಕೈಗಳನ್ನು ಮಡಿಚುತ್ತಾರೆ. ಕೈಗಳನ್ನು ಎದೆಯ ಮೇಲಿಟ್ಟು ಕಣ್ಣುಮುಚ್ಚಿ ಮುಖ ಒರೆಸಿ ವಿಭೂತಿಧಾರಣೆ ಮಾಡುತ್ತಾರೆ. ದಾಸಯ್ಯಗಳಾದರೆ ನಾಮಗಳನ್ನು ಇಡುತ್ತಾರೆ. ಗಂಡ ಸತ್ತರೆ ಹೆಂಡತಿ ಹಣೆಗೆ ಕುಂಕುಮವಿಟ್ಟು ಹೂವನ್ನು ಮುಡಿಸುತ್ತಾರೆ. ಪಕ್ಕದಲ್ಲೆ ಒಂದು ಲೋಟದಲ್ಲಿ ಅಕ್ಕಿ ತುಂಬಿ ಗಂಧದ ಕಡ್ಡಿ ಹತ್ತಿಸಿ ಇಡುತ್ತಾರೆ. ಮನೆಯ ಮುಂದೆ ಅಳೇಕೊಂಟುಗಳಿಂದ ಬೆಂಕಿ ಹಾಕುತ್ತಾರೆ.

ಮನೆಯ ಮುಂದೆ ಬೆಂಕಿ ಹಾಕುವುದು ಯಾರಾದರೂ ಸತ್ತಿದ್ದಾರೆ ಎಂದೇ ಅರ್ಥ. ಶವ ಸಂಸ್ಕಾರ ಆಗುವವರೆಗೂ ಈ ಬೆಂಕಿ ಹೊಗೆಯಾಡುತ್ತಲೇ ಇರಬೇಕು. ನಂತರ ಎಲ್ಲಾ ಬಂಧುಬಾಂಧವರಿಗೆ ತಿಳಿಸುತ್ತಾರೆ. ಎಲ್ಲರೂ ಬರುವವರೆಗೆ ರಾತ್ರಿಯಲ್ಲಾ ದೇವರ ಹಾಡು, ಹರಿಕತೆಗಳನ್ನು ಕೇಳುತ್ತಾ ಬರುವವರಿಗಾಗಿ ಕಾಯುತ್ತಾ ಕುಳಿತುಕೊಳ್ಳುತ್ತಾರೆ. ಈ ನಡುವೆ ಬಂಧು-ಬಾಂಧವರು ಬರುತ್ತಾರೆ, ಗೋಳಾಡುತ್ತಾರೆ. ಸತ್ತವ್ಯಕ್ತಿಯ ಗುಣಗಾನ ಮಾಡುತ್ತಲೇ ಗೋಳಾಡುತ್ತಾರೆ. ಗೋಳಾಡುವವರನ್ನು ಸಂತೈಸಿ ಸಮಾಧಾನಪಡಿಸುತ್ತಾರೆ. ಊರಿನ ಹಿರಿಯರು ಅನುಭವಿಕರು ಮುಂದೆ ನಿಂತು ಶವ ಸಂಸ್ಕಾರಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡುತ್ತಾರೆ.

ನಂತರ ಶವವನ್ನು ಸ್ನಾನ ಮಾಡಿಸುವುದು. ಇದಕ್ಕೂ ಮುಂಚೆ ತಮಟೆಯವರನ್ನು ಕರೆಸಿ ತಮಟೆಬಾರಿಸುತ್ತಾರೆ. ಪ್ರತಿಯೊಂದು ಶಾಸ್ತ್ರ ಮಾಡುವಾಗ ತಮಟೆಯ ಸದ್ದು ಇರಲೇಬೇಕು. ಶಾಸ್ತ್ರಮಾಡಲು ಪ್ರಾರಂಭವಾಗುತ್ತಿದ್ದಂತೆ 'ತಮಟೆ ಸದ್ದುಮಾಡ್ರಿ' ಎಂದು ಹೇಳುತ್ತಾರೆ. ಅದಕ್ಕೂ ಮುಂಚೆ ಚಟ್ಟ ಸಿದ್ಧಪಡಿಸುವುದು.

ಚಟ್ಟ

ಸಾಮಾನ್ಯವಾಗಿ ಹೆಣಹೊರಲು ಮಾಡುವ ಸಾಧನ. ಇದನ್ನು ಬಿದಿರಿಂದಲೇ ಮಾಡುವುದು ವಿಶೇಷ. ಮನೆಯಲ್ಲಿರುವ ಹಳೆಯ ಬಿದಿರಿನ ಗಳಗಳನ್ನು ತೆಗೆದುಕೊಂಡು, ಉದ್ದನೆಯ ಎರಡು ಬೊಂಬುಗಳನ್ನು ತಂದು ಆರು ಏಳಡಿ ಉದ್ದದ ಅಳತೆಗೆ ಸಮಾನವಾಗಿ ಕತ್ತರಿಸಿ ಮೂರಡಿ ಅಗಲಕ್ಕೆ ಸರಿಯಾಗಿ ಗಳಗಳನ್ನು ತುಂಡರಿಸಿಕೊಂಡು ಅವುಗಳನ್ನು ಈ ಎರಡು ಬಿದಿರಿನ ಬೊಂಬುಗಳಿಗೆ ಅಡ್ಡಲಾಗಿ ಜೋಡಿಸಿ ದಾರದಿಂದ ಎಣೆದುಕಟ್ಟುತ್ತಾರೆ. ಅದರ ಮೇಲೆ ವ್ಯಕ್ತಿ ಉಪಯೋಗಿಸುತ್ತಿದ್ದ ಹಾಸಿಗೆಯನ್ನು ರಗ್ಗುಗಳನ್ನು ಹಾಸಿ ದಿಂಬು ಇಡುತ್ತಾರೆ. ಚಟ್ಟಕ್ಕೆ ಕಮಾನಿನ ರೀತಿಯಲ್ಲಿ ನಾಲ್ಕು ಮೂಲೆಯಿಂದ ಸೇರಿಸಿ ಗೋಪುರದ ರೀತಿಯಲ್ಲಿ ಬಿದಿರಿನ ಬೊಂಬಿನಿಂದ ಕಮಾನು ಕಟ್ಟುತ್ತಾರೆ. ಅದರ ತುದಿಗೆ ಕಳಸದಹಾಗೆ ಒಂದು ಹಿತ್ತಾಳೆ ಅಥವಾ ಸ್ಟೀಲ್ ಚೊಂಬು ಸಿಕ್ಕಿಸುತ್ತಾರೆ. ಇದನ್ನು 'ಕುರ್ಜು' ಎಂದು ಕರೆಯುವರು. ಇದಕ್ಕೆ ಸುತ್ತಲೂ ಹೂವಿನಿಂದ ಅಲಂಕಾರಮಾಡಿ ನಾಲ್ಕು ದಿಕ್ಕಿಗೂ ಎಳನೀರನ್ನು ಕಟ್ಟಿ ನಾಲ್ಕು ಬಾಳೆಕಂಬ ಕಟ್ಟುತ್ತಾರೆ.

ಹೆಣಕ್ಕೆ ಶೃಂಗರಿಸುವುದು

ಮನೆಯ ಮುಂದಿನ ಜಾಗದಲ್ಲಿ ಸಣ್ಣದಾಗೆ ಒಂದು ಜಾಗದಲ್ಲಿ ಗುಂಡಿತೋಡಿ ಅಡ್ಡಲಾಗೆ ಒಂದು ಮಣೆಮಡುಗಿ ಅದರ ಮೇಲೆ ಹೆಣ ಕೂರಿಸಿ ಸ್ನಾನಮಾಡಿಸುತ್ತಾರೆ. ಹೆಣಕ್ಕೆ ನೀರುಯ್ಯಲು ಒಂದು ದೊಡ್ಡ ತಾಮ್ರದ ಹಂಡೆಯಲ್ಲಿ ನೀರುಕಾಯಿಸುತ್ತಾರೆ, ಎಲ್ಲಾ ಸಂಬಂಧಿಕರು ಮೂರು ಮೂರು ಚೊಂಬು ನೀರು ಹುಯುತ್ತಾರೆ. ಆ ಹಂಡೆಯಲ್ಲಿ ನೀರನ್ನು ಉಳಿಸದೆ ಎಲ್ಲ ಹೊಯ್ದು ಆಮೇಲೆ ಅಂಡೆ ಮೊಗಚಿಹಾಕುತ್ತಾರೆ. ನಂತರ ಒಂದು ಬೆಂಚಿನ ಮೇಲೆ ಕೂರಿಸಿ ಹೆಣಕ್ಕೆ ಹೊಸಬಟ್ಟೆಧರಿಸಿ, ವಿಭೂತಿಧಾರಣೆ ಮಾಡಿ ಕುಂಕುಮವಿಟ್ಟು,

ಪೇಟಸುತ್ತುತ್ತಾರೆ. ಹೂವಿನಹಾರ ಹಾಕಿ ಎಲ್ಲರೂ ಪೂಜೆಮಾಡುತ್ತಾರೆ. ನಂತರ ಅನ್ನ, ಮೊಸರು, ಕೋಳಿಯ ಮೊಟ್ಟೆ ಬೇಯಿಸಿ ತಂದು ಪಂಚೆಯನ್ನು ಅಡ್ಡ ಇಟ್ಟು ಮರೆಮಾಡಿ ಹೆಣಕ್ಕೆ ಊಟಮಾಡಿಸುವಂತೆ ಮಾಡಿ ಕೊನೆಗೆ ಎಲೆ ಅಡಿಕೆಯನ್ನು ಜಜ್ಜಿ ಪುಡಿಮಾಡಿ ಬಾಯಿಗೆ ತುಂಬುತ್ತಾರೆ. ಧೂಪ ಹಾಕಿ ನಮಸ್ಕರಿಸಿದ ಮೇಲೆ ಹೆಣವನ್ನು ಚಟ್ಟದ ಮೇಲೆ ಮಲಗಿಸುತ್ತಾರೆ. ಕುರ್ಜುಕಟ್ಟಿದ್ದರೆ ಕುರ್ಜಿನಲ್ಲಿ ಕೂರಿಸುತ್ತಾರೆ. ಆ ಕಡೆ ಈ ಕಡೆ ಜಾರದಂತೆ ದಾರದಿಂದ ಬಿಗಿದು ಕಟ್ಟುತ್ತಾರೆ. ನಾಲ್ಕು ಮೂಲೆಯಲ್ಲಿ ನಾಲ್ಕು ಜನರು ನಿಂತು ಒಂದೇ ಸಮನೆ ಚಟ್ಟವನ್ನು ಎತ್ತಿ ಮೂರು ಸುತ್ತು ತಿರುಗಿ ಒಯ್ಯುತ್ತಾರೆ. ದಾರಿಯುದ್ದಕ್ಕೂ ಕಡ್ಲೆಪುರಿ, ಹೂವು, ಕಾಸನ್ನು ಹೆಣದಮೇಲೆ ಎರಚುತ್ತಾರೆ. ಹೆಣದ ಮುಂದೆ ಸತ್ತವನ ಹಿರಿಯ ಮಗ ಗಂಧದ ಕಡ್ಡಿಕೊಳ್ಳಿ ಹಿಡಿದು ಹೋಗುತ್ತಾನೆ. ಊರಾಚೆ ಹೋಗಿ ಮದ್ಯದಾರಿಯಲ್ಲಿ ಚಟ್ಟವನ್ನು ಇಳಿಸಿ ಹೊರುವವರು ಅದಲು ಬದಲಾಗುತ್ತಾರೆ. ಎಲ್ಲರೂ ಒಂದೊಂದು ಸಣ್ಣಸಣ್ಣ ಕಲ್ಲನ್ನು ತೆಗೆದು ಪಕ್ಕದಲ್ಲೇ ಹಾಕುತ್ತಾರೆ. ನಂತರ ಚಟ್ಟವನ್ನು ಮತ್ತೆ ಎತ್ತಿಕೊಂಡು ಸಮಾದಿಕಾಡಿಗೆ ಹೋಗಿ ಸಂಸ್ಕಾರ ಮಾಡುವ ಜಾಗದಲ್ಲಿ ಮೂರು ಸುತ್ತು ಸುತ್ತಿ ತಲೆಯನ್ನು ದಕ್ಷಿಣ ದಿಕ್ಕಿನೆಡೆಗೆ ಮಾಡಿ ಉತ್ತರ ದಿಕ್ಕಿಗೆ ಚಟ್ಟವನ್ನು ಇಳಿಸುತ್ತಾರೆ.

ಈ ಪ್ರದೇಶದಲ್ಲಿ ಹೆಣವನ್ನು ಹೂಳುವ ಮತ್ತು ಸುಡುವ ಎರಡೂ ಸಂಸ್ಕೃತಿಗಳಿವೆ. ಹಿಂದೆ ಎಲ್ಲಾ ಹೆಣವನ್ನು ಹೂಳುತ್ತಿದ್ದರು. ಇತ್ತೀಚೆಗೆ ಎಲ್ಲರನ್ನು ಸುಡುವುದೇ ಹೆಚ್ಚು. ಹೆಣಸುಡುವುದಾದರೆ ಪ್ರತಿಯೊಬ್ಬರ ಮನೆಯಲ್ಲಿ ಸೌದೆಯನ್ನು (ಕಟ್ಟಿಗೆ) ಎತ್ತುತ್ತಾರೆ. ಗಾಡಿಯಲ್ಲಿ ತೆಗೆದುಕೊಂಡು ಹೋಗಿ ಸ್ಮಶಾಸನದಲ್ಲಿ ಹೆಣಸುಡುವ ಜಾಗದಲ್ಲಿ ಲಾಟ್ ಹಾಕಿಬರುತ್ತಾರೆ. ಚಟ್ಟವನ್ನು ಅಲ್ಲಿ ಇಳಿಸಿದ ನಂತರ ಸಮತಟ್ಟಾದ ಜಾಗವನ್ನು ಸಿದ್ಧಮಾಡಿ ಕೆಳಗೆ ದೊಡ್ಡ ದೊಡ್ಡ ಕೊಂಟುಗಳನ್ನಿಟ್ಟು ಅದರ ಮೇಲೆ ಹೆಣ ಇಟ್ಟು ಸುತ್ತಲೂ ಸೌದೆಗಳಿಂದ ಮುಚ್ಚುತ್ತಾರೆ. ಚಟ್ಟದಿಂದ ಹೆಣತೆಗೆದು ಸೌದೆಗಳ ಮೇಲಿಟ್ಟ ಹೆಣಕ್ಕೆ ಮತ್ತೆ ಪೂಜೆ ಮಾಡುತ್ತಾರೆ. ಒಂದು ಕೋಳಿ ಮರಿಯನ್ನು ಅದರೊಳಗೆ ಬಿಡುತ್ತಾರೆ. ದಾಸಯ್ಯಗಳು ಅದನ್ನು ಹಿಡಿದುಕೊಂಡು ಹೋಗುತ್ತಾರೆ. ಆ ಕೋಳಿಯಿಂದ ಹೆಚ್ಚು ಮರಿಗಳಾಗುತ್ತವೆ ಎಂಬ ನಂಬಿಕೆ ಇವರಲ್ಲಿದೆ.

ಕೊಡಲಿ ಪೂಜೆ

ಇದಾದ ಮೇಲೆ ಸೌದೆಗಳನ್ನು ಕಡಿಯಲು ತಂದಿದ್ದ ಕೊಡಲಿಯ ಕಾವನ್ನು ತೆಗೆದು ಹಿಂದು ಮುಂದಾಗಿ ಮೊಕಾಣಾಗೆ ಹಾಕಿ ಅದನ್ನು ನೆಲಕ್ಕೆ ಮೂರುಸಾರಿ ಮುಟ್ಟಿಸಿ ನಂತರ ಸಮಾದಿಯ ಮದ್ಯಕ್ಕೆ ಬಂದು ಸಮಾದಿಯ ಮೇಲಿಂದ ಪೂರ್ವಕ್ಕೆ ಹಿಂದೆ ತಿರುಗಿ ಕೊಡಲಿಯನ್ನು ಎಸೆಯುತ್ತಾನೆ. ಆ ಎದುರು ಪಕ್ಕದಲ್ಲಿ ನಿಂತವನು ತಾನೂ ಹಾಗೆಯೆ ಎಸೆಯುತ್ತಾನೆ. ಹೀಗೆ ಮೂರು ಬಾರಿ ಮಾಡುತ್ತಾರೆ. ನಂತರ ತಂದೆ ಸತ್ತರೆ ಹಿರಿಯ ಮಗನಿಂದ ತಾಯಿ ಸತ್ತರೆ ಕಿರಿಯ ಮಗನಿಂದ ಬೆಂಕಿ ಹಚ್ಚಿಸುತ್ತಾರೆ. ಮಕ್ಕಳಿಲ್ಲದಿದ್ದರೆ ಸಂಬಂಧಿಕರ್ಯಾರಾದರೂ ಕೊಳ್ಳಿ ಇಡುತ್ತಾರೆ.

ನೀರು ಮುಟ್ಟುವುದು

ಕೊನೆಗೆ ಅಲ್ಲಿ ಸೇರಿದವರೆಲ್ಲರಿಗೂ ಎಲೆ ಅಡಿಕೆ ಕೊಡುತ್ತಾರೆ. ಅದನ್ನು ಮನೆಗೆ ಯಾರೂ ತರುವುದಿಲ್ಲ. ಯಾರಾದರೂ ಅಜ್ಜಿ ಸಿಕ್ಕಿದರೆ ಅವರಿಗೆ ಕೊಟ್ಟುಬಿಡುತ್ತಾರೆ. ಇತ್ತೀಚಿಗೆ ಚಾಕೋಲೇಟ್ ಕೊಡುವ ಪದ್ಧತಿ

ಬಂದಿದೆ. ಅಲ್ಲಿಂದ ಬರುವಾಗ ಪ್ರತಿಯೊಬ್ಬರು ನೀರನ್ನು ಮುಟ್ಟಿ ಮುಖ ಕೈ ಕಾಲುತೊಳೆದು ತಲೆಮೇಲೆ ನೀರು ಚುಮುಕಿಸಿಕೊಂಡು ಬರುತ್ತಾರೆ. ದೇವಸ್ಥಾನಕ್ಕೆ ಹೋಗಿ ಎಲ್ಲರೂ ಕೈಮುಗಿದು ನಂತರ ಸತ್ತವನ ಮನೆಯ ಹತ್ತಿರ ಹೋಗುತ್ತಾರೆ. ಶವ ಸಂಸ್ಕಾರಕ್ಕೆಂದು ಮನೆ ಬಾಗಿಲು ಹಾಕಿಕೊಂಡು ಎಲ್ಲರೂ ಹೋಗದೆ ಯಾರಾದರೂ ಹಿರಿಯಾಕೆ ಅಲ್ಲೇ ಇದ್ದುಕೊಂಡು ಮನೆ ಕಸಗುಡಿಸಿ ಸಾರಿಸಿ ಸಗಣಿ ಹಾಕಿ ಹೆಣಮಡುಗಿದ್ದ ಜಾಗದಲ್ಲಿ ಉರಿವದೀಪ ಇಟ್ಟಿರುತ್ತಾರೆ. ಶವ ಸಂಸ್ಕಾರ ಮುಗಿಸಿಕೊಂಡು ಬಂದವರು ಆ ದೀಪ ನೋಡಿ ಕೈ ಮುಗಿದು ತಮ್ಮ ಮನೆಗಳಿಗೆ ಹೋಗುತ್ತಾರೆ. ಮನೆಗಳಿಗೆ ಹೊರಗೆ ಸ್ನಾನ ಮಾಡೇ ಒಳಗೆ ಹೋಗಬೇಕು, ಇಲ್ಲದಿದ್ದರೆ ಒಳಗೆ ಬಿಡುವುದಿಲ್ಲ. ಆ ಮೇಲೆ ನಿಧನ ಹೊಂದಿದ ವ್ಯಕ್ತಿಯ ಮನೆಯರೆಲ್ಲರಿಗೂ ಬಂಧುಮಿತ್ರರ ಮನೆಯಲ್ಲೇ ಸ್ನಾನ, ಊಟ ಮಾಡಿಸುತ್ತಾರೆ.

ತಿಥಿ

ಯಾರೇ ಸತ್ತರು ಇಲ್ಲಿ ಹನ್ನೊಂದು ದಿನಕ್ಕೆ ತಿಥಿಕಾರ್ಯ ಮಾಡುತ್ತಾರೆ. ಸಮಾದಿಯ ಹತ್ತಿರ ಹೋಗಿ ಶಾಸ್ತ್ರೋಕ್ತವಾಗಿ ಎಲ್ಲಾಸಂಪ್ರದಾಯ ನೆರವೇರಿಸಿ ಹಾಲು, ತುಪ್ಪ ಬಿಟ್ಟು ಬರುತ್ತಾರೆ. ತಿಥಿ ದಿನ ಊರಿಗೆಲ್ಲಾ ಅಡುಗೆಮಾಡುತ್ತಾರೆ. ತಿಥಿದಿನ ಮರಿಕಡಿದು ಮಾಂಸಾಹಾರದ ಊಟಮಾಡುವುದು ಕಡ್ಡಾಯವಾಗಿರುತ್ತದೆ. ಇದು ಊರಿನ ಜನರೆಲ್ಲಾ ಸೇರಿ ಒಟ್ಟಿಗೆ ಕಲೆತು ಎಲ್ಲರೂ ಎಲ್ಲಾ ಕೆಲಸದಲ್ಲಿ ಭಾಗಿಯಾಗುತ್ತಾರೆ. ಅಂದು ಎಲ್ಲರೂ ಮುಂಜಾನೆಯಿಂದ ಸಂಜೆತನಕ ಬಿಡುವಿಲ್ಲದ ಕೆಲಸದಲ್ಲಿ ಕೂಡಿರುತ್ತಾರೆ. ಮುಂಜಾನೆಯೇ ಎದ್ದು ಎಲ್ಲರೂ ಕೂಡಿ ಮರಿಗಳನ್ನು ಒಪ್ಪಿಸಿ ಮಾಂಸವನ್ನೆಲ್ಲ ತುಂಡರಿಸಿ ಸಾರು ಮಾಡುತ್ತಾರೆ. ಮುದ್ದೆ, ಅನ್ನ, ಇವು ಸಾಮಾನ್ಯವಾಗಿರುತ್ತವೆ. ಎಲ್ಲವೂ ತಯಾರಾದ ಮೇಲೆ ಮನೆಯಲ್ಲಿ ಮಾಡಿರುವಂತ ಪ್ರತಿಯೊಂದು ಪದಾರ್ಥವನ್ನು ತಿಂಡಿ ತೀರ್ಥ ಎಲ್ಲವನ್ನು ತೆಗೆದುಕೊಂಡು ಸಮಾದಿಯ ಹತ್ತಿರ ಹೋಗಿ ಊರಿನಲ್ಲಿ ಎಷ್ಟು ದೇವರ ಒಕ್ಕಲುಗಳಿವೆ ಆ ಎಲ್ಲ ದೇವರನ್ನು ಕರೆಸುತ್ತಾರೆ. ಎಲ್ಲಾದೇವರನ್ನು ಒಡ್ಡಿ ಎಡೆ ಇಕ್ಕಿ ಪೂಜೆ ಮಾಡುತ್ತಾರೆ. ಹೊಂಬಾಳೆ ತಂದು ಸಮಾದಿಯಲ್ಲಿ ತಲೆಯಕಡೆ ನೆಟ್ಟು ಅದಕ್ಕೆ ಹಾಲು ತುಪ್ಪವನ್ನು ಬಿಡುತ್ತಾರೆ. ಎಲ್ಲಾ ಶಾಸ್ತ್ರಗಳು ಮುಗಿದ ಮೇಲೆ ಹೆಣ ಹೊತ್ತಿದ್ದವರ ಹೆಗಲನ್ನು ತೊಳೆಯುವ ಕಾರ್ಯ. ಎಷ್ಟು ಜನ ಹೆಣ ಹೊತ್ತಿರುತ್ತಾರೆ ಅಷ್ಟು ಜನಕ್ಕೂ ಅಂಗಿ ಬಿಚ್ಚಿಸಿ ಬುಜಗಳಿಗೆ ವಿಭೂತಿ ಬಳಿದು ಒನಕೆಯನ್ನು ಹೆಗಲಮೇಲೆ ಇಟ್ಟು ದಾಸಯ್ಯ ಆದವನು ಸತ್ತವರ ಹೆಸರನ್ನು ಹೇಳಿ ಕುಲದೇವರುಗಳ ಹೆಸರನ್ನು ಹೇಳಿ 'ಕಷ್ಟಕ್ಕೆ ಬಾ ಸುಖಕ್ಕೆ ಬರಬೇಡ ಹೋಯ್ತು ಹೋಯ್ತು ಹೋಯ್ತು' ಎಂದು ಮೂರು ಸಾರಿ ಹೇಳುತ್ತಾನೆ. ಎಲ್ಲರೂ ಹಾಗೆ ಹೇಳುತ್ತಾರೆ ನಂತರ ಗಡಿಗೆ ಒಡೆಸುವ ಶಾಸ್ತ್ರ.

ಗಡಿಗೆ ಒಡೆಯುವ ಶಾಸ್ತ್ರ

ತಂದೆ ಸತ್ತರೆ ಹಿರಿಮಗ, ತಾಯಿ ಸತ್ತರೆ ಕಿರಿಮಗ ಕೊಳ್ಳಿ ಇಡಬೇಕು. ಹಾಗೆಯೇ ತಲೆಗಡಿಗೆ ಒಡೆಯಬೇಕು. ಮಕ್ಕಳಿಲ್ಲದೆ ಹೋದರೆ ಹತ್ತಿರದ ಸಂಬಂಧಿಗಳು ಸಾಕುಮಕ್ಕಳು ಒಡೆಯಬಹುದು. ಯಾರು ತಲೆಗಡಿಗೆ ಒಡೆಯುತ್ತಾರೆ ಅವರಿಗೆ ಸತ್ತವರ ಆಸ್ತಿಯ ಮೇಲಿನ ಹಕ್ಕು ಇರುತ್ತದೆ. ಗಡಿಗೆ ಒಡೆದವನಿಗೆ ತಲೆಬೋಳಿಸಿ ಸ್ನಾನ ಮಾಡಿಸಿ ತಲೆಬುರುಡೆಗೆ ನಾಮ ವಿಭೂತಿ ಧಾರಣೆಮಾಡಿಸಿ ಗಡಿಗೆ ತುಂಬ ನೀರು ತುಂಬಿ ಪೂಜೆ ಮಾಡಿ

ಸತ್ತವನ ಹೆಂಡತಿಯ ಮತ್ತೈದೆತನವನ್ನು ತೆಗೆದು ಕೈಯ್ಯಿನ ಬಳೆ, ಹೂ ಎಲ್ಲ ತೆಗೆದು ಒಡೆದು ಚೂರು ಮಾಡುತ್ತಾರೆ. ನಂತರ ಹಿರಿಮಗನ ಹೆಗಲಮೇಲೆ ಗಡಿಗೆ ಇಟ್ಟು ಎಲ್ಲಾ ದೇವರುಗಳನ್ನು ನೆನೆಯುತ್ತಾ ಗೋವಿಂದನನ್ನು ಕೂಗುತ್ತಾ ಮೂರುಸುತ್ತು ಸುತ್ತಿಸಿ ದಾಸಯ್ಯ ಕುಡುಗೋಲಿನಿಂದ ಪ್ರತಿಸುತ್ತಿಗೂ ಒಂದರಂತೆ ಮೂರು ತೂತುಗಳನ್ನು ಮಾಡುತ್ತಾನೆ. ಕೊನೆಯ ಮೂರನೆಯ ಸುತ್ತು ಬಂದಮೇಲೆ ಗಡಿಗೆಯನ್ನು ಎತ್ತಿಹಾಕಿ ಬಾಯಿ ಬಡಿದುಕೊಂಡು ಹಿಂದೆ ತಿರುಗಿ ನೋಡದೆ ಹಾಗೆಯೇ ಮನೆಗೆ ಬರುತ್ತಾನೆ. ಮನೆಗೆ ಬಂದು ಮನೆಯಲ್ಲಿ ಮಹಾಮಂಗಳಾರತಿ ಮಾಡಿ ಎಲ್ಲರಿಗೂ ಊಟ ಬಡಿಸಿ ಸಂಜೆಯಾದ ಮೇಲೆ ಹರಿಕತೆ ಹಾಡಿಸುತ್ತಾರೆ. ಈ ಎಲ್ಲಾ ಸಂಸ್ಕಾರಗಳನ್ನು ಸಂಪ್ರದಾಯಬದ್ಧವಾಗಿ ಮಾಡಿದರೆ ಸತ್ತವರು ನೇರವಾಗಿ ಸ್ವರ್ಗಕ್ಕೆ ಹೋಗುತ್ತಾರೆ ಎಂಬ ನಂಬಿಕೆ ಇಲ್ಲಿದೆ.

೬.೨. ವಾರ್ಷಿಕಾವರ್ತನ ಆಚರಣೆಗಳು

ಹಬ್ಬ-ಹರಿದಿನಗಳು

ಹಬ್ಬಗಳು ಪ್ರತಿವರ್ಷವು ವಿಶೇಷ ಸಂದರ್ಭಗಳಲ್ಲಿ ಸಾಮಾಜಿಕ ಕ್ಷೇಮಕ್ಕಾಗಿ ಆಚರಿಸಲ್ಪಡುತ್ತವೆ. ಬಂಧು-ಬಳಗವು ಸೇರುವ ರಕ್ತಸಂಬಂಧಿಗಳನ್ನು ಒಟ್ಟುಗೂಡಿಸುವ ಸಂದರ್ಭ, ಊರು ಕೇರಿಗಳನ್ನು ಹತ್ತಿರ ತರುವ ಸಂದರ್ಭ, ಸಂತೋಷದ ಸಂದರ್ಭ, ಪುಣ್ಯದ ಸಂದರ್ಭ ಎಂದು ನಿರ್ಧಿಷ್ಟಪಡಿಸಿದ ದಿನಗಳಲ್ಲಿ ಆಚರಿಸುವ ಶುಭಕಾರ್ಯದ ಸಂಕೇತವಾಗಿ ಹಬ್ಬಗಳು ನಡೆದು ಬಂದಿವೆ ಹಾಗೂ ನಡೆಯುತ್ತಲೇ ಇವೆ. ಊರಿನ ಜನರೆಲ್ಲರಿಗೂ ಬಂಧು ಮಿತ್ರರಿಗೂ ಶುಭಕೋರುವ ಹಬ್ಬಗಳು ಮನೆಯೊಳಗೆ ಆಚರಿಸುವಂತವು. ಕೆಲವು ಹಬ್ಬಗಳು ಊರಿನ ಪ್ರತಿಯೊಂದು ಕೋಮಿನವರನ್ನು ಆಚರಿಸುವಂತೆ ಮಾಡುತ್ತವೆ. ಹಬ್ಬದಲ್ಲಿ ಊಟವೇ ಮುಖ್ಯ. ಅದಕ್ಕೆಂದೇ ಪ್ರಾಶಸ್ತ್ಯವಾದ ಊಟವನ್ನು ಹಬ್ಬದೂಟ ಎಂದು ಕರೆಯುವುದು ವಾಡಿಕೆಯಾಗಿದೆ. "ಕೇವಲ ಉಂಡು, ಉಟ್ಟು, ತೇಗಿ ನಲಿದಾಡುವುದಷ್ಟೇ ಹಬ್ಬಗಳಲ್ಲ. ಪ್ರತಿ ನಿಯಮಗಳನ್ನು ಎಲ್ಲಾ ದಿನಗಳಲ್ಲಿ ಅಲ್ಲದಿದ್ದರೂ ಕೆಲವೊಂದು ವಿಶೇಷ ದಿನಗಳಲ್ಲಿಯಾದರೂ ಪಾಲಿಸಿ ಕಡ್ಡಾಯವಾಗಿ ದೇಹದಂಡನೆಯ ಮೂಲಕ ಅಥವಾ ಹಬ್ಬಕ್ಕೆ ಕಾರಣವಾದ ಸಂಗತಿಯ ಬಗ್ಗೆ ಗೌರವ ಭಾವನೆಯನ್ನು ವ್ಯಕ್ತಪಡಿಸಿ ತನಗೆ ತಾನೇ ಆತ್ಮಸಂಗಾತಿಯಾಗುವ ನಿಯಮಗಳನ್ನೂ ಕಲ್ಪಿಸಿಕೊಡುವಂತಹ ಆಚರಣೆಗಳೇ ಹಬ್ಬಗಳು. ಸ್ನಾನ, ವಂದನೆ, ಜಪ, ತಪ, ಪೂಜೆ ಇತ್ಯಾದಿಗಳೊಂದಿಗೆ ಬಾಹ್ಯ ಹಾಗೂ ಅಂತಃಶುದ್ಧಿಗೊಳ್ಳುವ ಕ್ರಮಗಳನ್ನು ಹಬ್ಬಗಳು ಅರ್ಥೈಸಿಕೊಡುತ್ತವೆ" (ಜನಪದ ಕಾವಡಿ ಹಬ್ಬಗಳು: ಸಾಂಸ್ಕೃತಿಕ ಅಧ್ಯಯನ, ಪುಟ.೫) ಹಾಗೂ ಮನಸ್ಸಿಗೆ ಶಾಂತಿ ಹಾಗೂ ನೆಮ್ಮದಿಯನ್ನು ನೀಡುತ್ತವೆ.

ಜನಪದರ ಬದುಕಿನಲ್ಲಿ ಹೊಸ ಹರುಷ ಹೊಸ ಹುರುಪು ತುಂಬುವ ಹಬ್ಬಗಳು "ಹೊಸ ಇತಿಹಾಸದ ಸೃಷ್ಟಿಗಾಗಿ ನಾವು ನಿಜವಾದ ಇತಿಹಾಸಕ್ಕೆ ಮರಳಬೇಕಾಗಿದೆ. ಮತ್ತು ಜನತೆಯ ಸಾಂಸ್ಕೃತಿಕ ಇತಿಹಾಸವನ್ನು ಬರೆಯಬೇಕಾದರೆ ಜನರ ಮಧ್ಯೆಯೆ ಹೋಗಬೇಕಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಪರಂಪರೆಯನ್ನು ಹೇಗೆ ಅರ್ಥಮಾಡಿಕೊಳ್ಳಬೇಕು, ಭವಿಷ್ಯತ್ತಿನ ಏಳ್ಗೆಗಾಗಿ ಅದರಲ್ಲಿ ಸ್ವೀಕರಿಸುವಂತಹದು ಏನು, ನಿರಾಕರಿಸುವಂತಹುದು ಏನು; ನಾವು ವಿರೋಧಿಸುವ ಯಜಮಾನ ಸಂಸ್ಕೃತಿಗೆ ಪ್ರತಿಯಾಗಿ ಕಟ್ಟಬೇಕೆಂದಿರುವ ಪರ್ಯಾಯ ಸಂಸ್ಕೃತಿಯ

ಸ್ವರೂಪ ಹೇಗಿರಬೇಕು ಎಂಬ ಪ್ರಶ್ನೆಗಳು ಪ್ರಗತಿಪರರನ್ನು ಕಾಡುತ್ತಿರುವ ಇಂದಿನ ಸಾಮಾಜಿಕ ಸಾಂಸ್ಕೃತಿಕ ಸಂದರ್ಭದಲ್ಲಿ ಹಬ್ಬಗಳು ಸ್ವಲ್ಪ ಮಟ್ಟಿಗಾದರು ಮಾರ್ಗದರ್ಶಕವಾಗಿರಬಹುದು"[೨] (ಕರ್ನಾಟಕ ಸಂಸ್ಕೃತಿ ಪರಂಪರೆ ಭಾಗ-೧). ಈ ಹಬ್ಬಗಳು ಯಜಮಾನ ಸಂಸ್ಕೃತಿಯ ಸಾಮ್ರಾಜ್ಯಶಾಹಿ ಏಕಮುಖ ಬೆಳವಣಿಗೆ ಸಂಸ್ಕೃತಿಯ ಪರ್ಯಾಯವಾಗಿ ಬಹುಮುಖಿ ಸಂಸ್ಕೃತಿಯ ಅಡಿಪಾಯದ ಅಡಿಗಲ್ಲುಗಳಾಗಬಲ್ಲವು.

ಸಂಸ್ಕೃತಿಯ ಅಧ್ಯಯನಕ್ಕೆ ಇಂತಹ ಹಲವಾರು ಸಂಗತಿಗಳು ಗಟ್ಟಿ ಆಕರಗಳಾಗಬಲ್ಲವು, ಪರ್ಯಾಯ ಸಂಸ್ಕೃತಿಯನ್ನು ನಿರ್ಮಿಸಲು ಹಿಂದಲ ಪರಂಪರೆಯ ಆಧಾರ ಮತ್ತು ಅರಿವಿರಬೇಕಾದುದು ಅತ್ಯವಶ್ಯಕವಾದುದಾಗಿದೆ. ಹಬ್ಬದ ಶುಭದಿನದಲ್ಲಿ ಆಚರಣೆ, ಆ ಸಮೂಹದ ಸದಸ್ಯರೆಲ್ಲರೂ ಸಂತೋಷವನ್ನು ಹಂಚಿಕೊಂಡು ಆ ಒಂದು ದಿನದ ಮಹತ್ವವನ್ನು ಸ್ವೀಕರಿಸಿಕೊಳ್ಳುತ್ತಾ ಅದನ್ನು ಅಭಿವ್ಯಕ್ತಿಸುತ್ತಾರೆ. "ಅಂದು ಹಾಡಿ ಕುಣಿದ ವಿವಿಧ ಆಚರಣೆಗಳಿಂದ ಹಬ್ಬಕ್ಕೆ ಕಾರಣವಾದ ಪ್ರಕೃತಿ, ದೈವ, ಋಷಿ, ಇಲ್ಲವೆ ಮಾತಾಪಿತೃಗಳ ಋಣವನ್ನು ತೀರಿಸುವ ಸಲುವಾಗಿ ಉತ್ಸುಕರಾಗಿರುತ್ತಾರೆ. ಹಬ್ಬಗಳು ಜನ್ಮತಳೆದಿರುವುದೇ ಇಂತಹ ಕಾರಣಗಳಿಂದಾಗಿ ಎನ್ನಬಹುದು. ಹಬ್ಬ-ಹರಿದಿನಗಳಾಗಿ ದೇವರನ್ನು ನೆನೆಯುವ ಕಾಲವಾಗಿದೆ. ಅದಕ್ಕೆಂದೇ ಜನಪದ ನಾಣ್ಣುಡಿಯಲ್ಲಿ ಜೋಡಿಪದವನ್ನು ಬಳಸಿದ್ದಾರೆ. ಅದೇನೆಂದರೆ ಹಬ್ಬ-ಹರಿದಿನ"(ಜನಪದ ಕಾವಡಿ ಹಬ್ಬಗಳು: ಸಾಂಸ್ಕೃತಿಕ ಅಧ್ಯಯನ, ಪುಟ.೭)ಗಳಲ್ಲಿ ಎಲ್ಲರೂ ಕೂಡಿಕೊಂಡು ಸಂಭ್ರಮ ಸಂತೋಷದಿಂದ ತಮ್ಮ ಇಷ್ಟ ಕುಲದೈವದ ಕೃಪೆಯನ್ನು ಸಂಪಾದಿಸಿಕೊಳ್ಳಲು ಅದರಲ್ಲಿ ಬಾಗಿಯಾಗುವ ಸನ್ನಿವೇಶಗಳೇ ಹೆಚ್ಚು.

ಜನಪದರು ತಮ್ಮ ಮನೆಗಳನ್ನು ಆ ಸಂದರ್ಭಗಳಲ್ಲಿ ದೇವಸ್ಥಾನಗಳೆಂದೇ ಭಾವಿಸಿ ಮನೆಯನ್ನು ಸ್ವಚ್ಛಗೊಳಿಸಿ ಶುಚಿಯಾಗಿಡುತ್ತಾರೆ. ಮನೆಯ ಪ್ರತಿಯೊಬ್ಬ ಸದಸ್ಯರೂ ಕೂಡ ಸ್ನಾನ, ಮಡಿ ಮಾಡಿ ಹೊಸ ಬಟ್ಟೆ ಧರಿಸುತ್ತಾರೆ. ಬಂಧು-ಮಿತ್ರರೊಂದಿಗೆ ಸಂತೋಷವನ್ನು ಹಂಚಿಕೊಂಡು ದೇವಸ್ಥಾನಗಳಿಗೆ ಹೋಗಿ ಹಣ್ಣುಕಾಯಿ ಅರ್ಪಿಸಿ ಭಗವಂತನ ಅನುಗ್ರಹಕ್ಕೆ ಪಾತ್ರರಾಗುತ್ತಾರೆ. "ಬಹುಶಃ ಹಬ್ಬಗಳು ಮೂಲತಃ ವಿಜಯೋತ್ಸವಗಳಾಗಿರಬೇಕು. ದುಷ್ಟಶಕ್ತಿಯನ್ನು ಧಮನಮಾಡಿದುದರ ಜ್ಞಾಪಕಾರ್ತವಾಗಿ ಇವು ಆಚರಣೆಯಲ್ಲಿ ಬಂದಿರಬೇಕು. ಮಾನವ ತನ್ನ ಬದುಕಿನ ಏಕತಾನತೆಯನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿ, ಆತ್ಮೀಯರನ್ನು ಕೂಡಿಕೊಳ್ಳುವುದಕ್ಕಾಗಿ ಸುಖ ಸಂತೋಷವನ್ನು ಹೊಂದುವುದಕ್ಕಾಗಿ, ಕೆಲವು ದಿನಗಳನ್ನು ಗೊತ್ತುಮಾಡಿಕೊಂಡು ಅದನ್ನು ಹಬ್ಬ-ಹರಿದಿನಗಳೆಂದು ಕರೆದುಕೊಂಡಿರಬೇಕು. ಗದ್ದೆ, ಮನೆ, ತೋಟ, ಕ್ಷೇಮ ಸಾಧನೆಗೆ ಅಡ್ಡಿ ಆತಂಕಗಳನ್ನೊಡ್ಡುವ ದುಷ್ಟಶಕ್ತಿಗಳನ್ನು ನಿವಾರಿಸಿ, ತನ್ನನ್ನು ರಕ್ಷಿಸುವ ದೈವವನ್ನು ಸಂಪ್ರೀತಿಗೊಳಿಸುವ ಉದ್ದೇಶಕ್ಕಾಗಿ ಪ್ರಾರ್ಥನೆ ಸಂಪ್ರದಾಯ ಆಚರಣೆಗಳಿಂದ ಫಲವತ್ತತೆಯನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಮಾನವ ಹಬ್ಬಗಳನ್ನು ಆಚರಣೆಯಲ್ಲಿ ತಂದುಕೊಂಡಿರಬಹುದು. ಹಬ್ಬಗಳು ಸಾಮಾನ್ಯವಾಗಿ ಜೀವನದ ಏಕತಾನತೆಯನ್ನು ತಡೆದು ಸಂಭ್ರಮವನ್ನು ತರುತ್ತದೆ. ಹಬ್ಬದ ದಿನಗಳಲ್ಲಿ ಮಾಮೂಲು ಜೀವನದಿಂದ ಬೇರೆ ರೀತಿಯ ದಿನವನ್ನು ಕಳೆಯುತ್ತೇವೆ"(ಜನಪದ ಕಾವಡಿ ಹಬ್ಬಗಳು: ಸಾಂಸ್ಕೃತಿಕ ಅಧ್ಯಯನ, ಪುಟ.೮). ಹೀಗೆ ಹಬ್ಬಗಳು ಜನಪದರ ಬದುಕಿನ ಕಷ್ಟಕಾರ್ಪಣ್ಯಗಳನ್ನು ತೊಡೆದು ಸಂತೋಷವನ್ನುಂಟು ಮಾಡುತ್ತವೆ.

ಹಬ್ಬಗಳು ಜನರ ಧಾರ್ಮಿಕ ಮನೋಭಾವನೆಯನ್ನು ಉದ್ದೀಪನೆಗೊಳಿಸುವಂತೆ ಮಾಡಿ ತನ್ಮೂಲಕ ಪ್ರಚೋದಿತಗೊಂಡು ಭಕ್ತಿಯ ಭಾವಾವೇಶಗಳು ಪ್ರಕಟಗೊಳ್ಳುವ ವೇದಿಕೆಗಳಾಗಿವೆ. ಇದರ ಜೊತೆಗೆ ಜಾತ್ರೆಗಳು ಹಬ್ಬಗಳಿಗೆ ಹೊಸ ಮೆರಗನ್ನು ತಂದುಕೊಟ್ಟಿವೆ. ಕೆಲವು ಹಬ್ಬಗಳು ಜಾತ್ರೆಗಳಾಗಿ ಪರಿವರ್ತನೆಗೊಳ್ಳುವ ಪ್ರಕ್ರಿಯೆಯೂ ಇದೆ. ಆದ್ದರಿಂದ ಹಬ್ಬ ಜಾತ್ರೆಗಳೆರಡೂ ಕೆಲವೊಂದು ಸಂದರ್ಭಗಳಲ್ಲಿ ಬೆಸೆದುಕೊಂಡು ಒಂದೇ ಧ್ಯೇಯೋದ್ದೇಶವನ್ನು ವ್ಯಕ್ತಪಡಿಸುತ್ತವೆ. ಹಬ್ಬಗಳು ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರಣಗಳಿಗಾಗಿ ಜರುಗುತ್ತವಾದರೂ ಅದರಲ್ಲಿ ಅನೇಕ ರೀತಿಯ ಉದ್ದೇಶಗಳಿವೆ. ಕೃಷಿನಿರತ ಜನರು ವರ್ಷಕ್ಕೊಮ್ಮೆ ಅಥವಾ ನಿರ್ದಿಷ್ಟದಿನದಂದು ಹಬ್ಬ ಆಚರಣೆ ಮಾಡಿದಾಗ ಅವರ ಪ್ರಾಥಮಿಕ ಅಗತ್ಯತೆಯನ್ನು ಪುನರುಜ್ಜೀವನಗೊಳಿಸಿಕೊಳ್ಳುತ್ತಾರೆ. ವರ್ಷವಿಡೀ ಧೂಳು ತುಂಬಿದ ಅವರ ಮನೆ ಹಾಗೂ ಮನೆಸುತ್ತಮುತ್ತಲ ಪ್ರದೇಶಗಳನ್ನು ಸ್ವಚ್ಛಗೊಳಿಸಿ ಉಪವಾಸ ಸ್ನಾನಾದಿಗಳೊಂದಿಗೆ ಹೊಸ ಜೀವನಕ್ಕೆ ಅಣಿಯಾಗುತ್ತಾರೆ. ಇಂತಹ ಗ್ರಾಮೀಣ ಜನರ ಹಬ್ಬಗಳಲ್ಲಿ ನಿರ್ದಿಷ್ಟ ಕುಲ, ಜನಸಮೂಹ ಪ್ರಾದೇಶಿಕ ವಿಭಾಗಕ್ಕೆ ಸಂಬಂಧಿಸಿದ ಹಬ್ಬಗಳೂ ಇವೆ. ಆದರೂ ಪರಸ್ಪರ ಸಹಕಾರ ಹೊಂದಾಣಿಕೆ ನೆಲೆಯನ್ನು ರೂಪಿಸಿಕೊಂಡು ಅವರು ಇತರ ಜನಾಂಗದ ಜನರ ಹಬ್ಬಗಳಲ್ಲಿಯೂ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ. ಜಾತಿ ಮತಗಳ ತಾರತಮ್ಯವನ್ನು ತೋರಿಸದೆ ಅನ್ಯರ ದೈವವನ್ನು ತಮ್ಮದೆಂದೇ ಭಾವಿಸಿ ಭಕ್ತಿಯಿಂದ ನಮಿಸುವ ಗ್ರಾಮೀಣರಲ್ಲಿ ಐಕ್ಯತೆ ಕೂಡಿಬರುವುದರಲ್ಲಿ ಮಹತ್ವವಾದ ಬೆಳವಣಿಗೆ ಕಂಡುಬರುತ್ತದೆ.

ಬಹಳ ಹಿಂದಿನಿಂದಲೂ ಜನಪದರು ತಮ್ಮ ಬದುಕಿನ ಏಕತಾನತೆಯನ್ನು ಹೋಗಲಾಡಿಸಿಕೊಳ್ಳಲು ಹಬ್ಬ ಜಾತ್ರೆಗಳನ್ನು ನಡೆಸಿಕೊಂಡು ಬರುತ್ತಾರೆ. ಹಬ್ಬಗಳು ಅವರ ದುಡಿಮೆಯ ಶ್ರಮವನ್ನು ಮರೆಸಿ ಅವರ ಮನಸ್ಸಿಗೆ ನೆಮ್ಮದಿ, ಶಾಂತಿ ಸಮಾಧಾನಗಳನ್ನು ತಂದುಕೊಟ್ಟಿವೆ. ನೇಮ ನಿಷ್ಠೆಗಳನ್ನು ಜೀವಂತಗೊಳಿಸುವುದರ ಮೂಲಕ ಸನ್ನಡತೆಗಳನ್ನು ಕಲಿಸಿಕೊಡುವ ಹಬ್ಬಗಳು ಕುಟುಂಬಗಳ ನಡುವೆ ಸೌಹಾರ್ದ ಸಂಬಂಧವನ್ನು ಗಳಿಸಿಕೊಳ್ಳಲು ಸಮಾಜದಲ್ಲಿ ಭಾವೈಕ್ಯತಾ ಭಾವನೆಯನ್ನು ಮೂಡಿಸಿಕೊಳ್ಳಲು ಸಹಾಯಕವಾಗಿವೆ.

ಹಬ್ಬಗಳ ಸಂದರ್ಭದಲ್ಲಿ ಜಾತಿಯ ಚೌಕಟ್ಟನ್ನು ಮೀರಿ ಅದರ ಕಟ್ಟು ಕಟ್ಟಳೆಗಳನ್ನು ಸಡಿಲಗೊಳಿಸುವಂತಹ ಅನೇಕ ಅಂಶಗಳನ್ನು ಗ್ರಾಮಸಮುದಾಯದ ಚಟುವಟಿಕೆಯಿಂದ ಕಂಡುಕೊಳ್ಳಬಹುದು. ಪರಸ್ಥಳದಿಂದ ಬಂದಂತಹ ವ್ಯಕ್ತಿಗಳನ್ನು ಕರೆದು ಹಬ್ಬಗಳ ಸಂದರ್ಭದಲ್ಲಿ ಹಬ್ಬದೂಟವನ್ನು ಉಣಬಡಿಸಿ ಅವರನ್ನು ಸಂತೋಷಪಡಿಸುತ್ತಾರೆ. ಆ ಮೂಲಕ ಪರಸ್ಪರ ವಿಶ್ವಾಸ ಸಂಬಂಧಗಳು ಬೆಳೆಯುತ್ತವೆ.

ಹಬ್ಬಗಳು ಆರೋಗ್ಯ ದೃಷ್ಟಿಯಿಂದಲೂ ಬಹುಮುಖ್ಯವಾಗುತ್ತವೆ. ಹಬ್ಬದ ಸಂದರ್ಭಗಳಲ್ಲಿ ಇಡೀ ಗ್ರಾಮಸಮುದಾಯದ ಜನರೆಲ್ಲರೂ ತಮ್ಮ ತಮ್ಮ ಮನೆಗಳನ್ನು ದುರಸ್ತಿ ಮಾಡಿ, ಸಾರಿಸಿ, ಗುಡಿಸಿ, ಬೀದಿಗಳನ್ನು ಶುಚಿಗೊಳಿಸುತ್ತಾರೆ. ಮನೆ, ಗುಡಿಗೋಪುರಗಳಿಗೆ ಸುಣ್ಣ ಬಣ್ಣವನ್ನು ಬಳಿಯುತ್ತಾರೆ. ಇಂತಹ ಸಾಮೂಹಿಕ ಶುಚಿತ್ವದ ಹಿಂದೆ ವೈಜ್ಞಾನಿಕ ಅರ್ಥವು ಕೂಡಿಕೊಂಡಿದೆ. ಇಲಿ, ಹೆಗ್ಗಣ, ಕ್ರಿಮಿಕೀಟ, ತಿಗಣೆ, ಹುಳ, ಹುಪ್ಪಟೆಗಳು ಮೊದಲಾದ ಕೆಡಕು ನೀಡುವ ಪ್ರಾಣಿಗಳಿಂದ ರಕ್ಷಣೆ ದೊರೆಯುತ್ತದೆ. ಹಬ್ಬ-ಹರಿದಿನಗಳಲ್ಲಿ ಹಳೆಯ ಬಟ್ಟೆಗಳಿಗೆ ಬದಲಾಗಿ ಹೊಸ ಬಟ್ಟೆ ಉಡುವುದು, ಮಡಿ ಮಾಡುವುದು ಕಂಡುಬರುತ್ತದೆ. ಇಂತಹ

ಕಾರ್ಯಗಳಿಂದ ಜನಪದರು ತಮ್ಮ ಮೈಮೇಲಿನ ಕೊಳೆಯನ್ನು ತೊಳೆದು ಶುದ್ಧವಾಗುತ್ತಾರೆ. ಗ್ರಾಮೀಣರು ತಮ್ಮ ಜೀವನವಿಡೀ ಹೊಟ್ಟೆಯನ್ನು, ಬಟ್ಟೆಯನ್ನು ಸುಧಾರಿಸುವ ಮತ್ತು ಪರದಾಡುವ ಸನ್ನಿವೇಶಗಳೇ ಹೆಚ್ಚಾಗಿರುವ ಕಾರಣ ಅವರ ದುಡಿಮೆಗೆ ಕೆಲ ಕಾಲದ ಬಿಡುವು ಹಬ್ಬಗಳಿಂದ ಸಿಗುತ್ತದೆ.

ಪ್ರಾಚೀನ ಕಾಲದ ಜನರ ಬದುಕಿನಲ್ಲಿ ಅನೇಕ ಅಂಟು ಜಾಡ್ಯಗಳು ಕಾಣಿಸಿಕೊಂಡು ಬಹುತೇಕ ಸಾಮೂಹಿಕ ಮರಣಗಳಿಗೆ ತುತ್ತಾಗುತ್ತಿದ್ದರು. ಇದಕ್ಕೆ ಪ್ರಾಕೃತಿಕ ಕಾರಣಗಳನ್ನು ಅರಿಯಲು ವಿಫಲವಾಗಿದ್ದ ಮುಗ್ಧ ಜನರು ಮಾರಿದೇವಿಯ ಕೋಪ, ಕಾಲರ ಅಮ್ಮನ ಕೋಪ ಎಂದು ಅನೇಕ ರೀತಿಯ ಶಾಂತಿಗಳನ್ನು ವೈಜ್ಞಾನಿಕವಲ್ಲದ ಆಚರಣೆಗಳನ್ನು ಮಾಡುತ್ತಾ ಮೂಢ ನಂಬಿಕೆಯಲ್ಲಿ ಮುಳುಗಿದ್ದರು. ಅವರಲ್ಲಿನ ಕೆಲವರು ಬುದ್ಧಿವಂತರು ಈ ಸಾಂಕ್ರಾಮಿಕ ರೋಗಗಳಿಗೆ ಕಾರಣಗಳನ್ನು ಕಂಡುಹಿಡಿದು ಸಾಮೂಹಿಕ ಶುಚಿತ್ವವನ್ನು ಕೈಗೂಡಿಸಿಕೊಳ್ಳಲು ದೇವರ ಹೆಸರಿನಲ್ಲಿ ಹರಕೆಹೊತ್ತು ಹಬ್ಬ ಮಾಡುವುದರ ಮೂಲಕ ಗ್ರಾಮದ ಶುಚಿತ್ವವನ್ನು ಕಾಪಾಡಿಕೊಂಡರು. ಮನುಷ್ಯನ ಶಕ್ತಿಗಿಂತ ದೇವರು ಬಲಾಢ್ಯನೆಂದು ನಂಬುವ ಜನರು ಶ್ರದ್ಧೆಯಿಂದ ದೈವಕಾರ್ಯ ನೆಪದಲ್ಲಿ ಹಬ್ಬಗಳನ್ನು ಆಚರಿಸುತ್ತಿದ್ದರು. ಜನಪದ ಸಂಸ್ಕೃತಿಯಲ್ಲಿ ಈ ಹಬ್ಬಗಳು ವೈಜ್ಞಾನಿಕ ಆಚರಣೆಗಳೂ ಹೌದು.

ಜನಪದರು ತಮ್ಮ ಜೀವನಕ್ಕೆ ಬೇಕಾದ ಅವಶ್ಯಕವಾದವುಗಳನ್ನು ಪೂರೈಸಿಕೊಂಡು ತಮ್ಮ ಜೀವನಕ್ಕೆ ಶುಭಾಷಯಗಳನ್ನು ವಿನಿಮಯಮಾಡಿಕೊಳ್ಳುತ್ತಾರೆ. ಪೌಷ್ಟಿಕಾಂಶದಿಂದ ಕೂಡಿರುವ ಪದಾರ್ಥಗಳನ್ನು ಬಳಸಿ ಸೇವಿಸುತ್ತಾ ರುಚಿ, ಶುಚಿ ಮತ್ತು ಶಕ್ತಿದಾಯಕ ಆರೋಗ್ಯವನ್ನು ಪಡೆಯುತ್ತಾರೆ. ಹಬ್ಬಗಳು ಧಾರ್ಮಿಕದೃಷ್ಟಿಯಿಂದ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿವೆ. ಪೂಜೆ, ಪ್ರಾರ್ಥನೆ, ಧ್ಯಾನಗಳಿಂದ ಮಾನಸಿಕ ನೆಮ್ಮದಿಯನ್ನು ಕಾಯ್ದುಕೊಳ್ಳಲು ಇವು ಸಹಕಾರಿಯಾಗುತ್ತವೆ. ದೈಹಿಕ ಆರೋಗ್ಯ ಇರುವಂತೆಯೇ ಮಾನಸಿಕ ಆರೋಗ್ಯ ಇರುವಂತಹದು ಮನುಷ್ಯನಿಗೆ ಬಹಳ ಅತ್ಯಂತ ಜೀವನದ ನೆಲೆಗಳಲ್ಲಿ ಅವನ ಮನಸ್ಸು ನಿಶ್ಚೇತನಗೊಂಡಾಗ ಹಬ್ಬಗಳು ಅದಕ್ಕೆ ಪುಷ್ಟಿಯನ್ನು ನೀಡುವುದರಲ್ಲಿ ಸಂದೇಹವೇ ಇಲ್ಲ. ಕಬ್ಬಾಳು ಗ್ರಾಮ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಆಚರಿಸುವಂತ ಮಾಳ್‌ಪಕ್ಷ (ಪಿತೃಪಕ್ಷ), ಸಂಕ್ರಾಂತಿ, ನಾಗರಪಂಚಮಿ, ಆಯುಧಪೂಜೆ, ಯುಗಾದಿ ಮುಂತಾದ ಹಬ್ಬಗಳಲ್ಲಿ ಇದನ್ನು ಕಾಣಬಹುದು.

ಸಂಕ್ರಾಂತಿ

ಸೂರ್ಯನ ಚಲನೆಯ ಹಬ್ಬ ಎಂದೇ ಕರೆಯಲಾಗುವ ಈ ಸಂಕ್ರಾಂತಿ ಹಬ್ಬವನ್ನು ದೇಶದ ವಿವಿಧ ಪ್ರದೇಶಗಳಲ್ಲಿ ಆಚರಣೆಮಾಡಲಾಗುತ್ತದೆ. ಕಬ್ಬಾಳು ಪ್ರದೇಶದಲ್ಲೂ ಈ ಹಬ್ಬವು ಕೆಲವು ವೈಶಿಷ್ಟ್ಯಗಳಿಂದ ಕೂಡಿದೆ. ಜಗತ್ತಿಗೇ ಕಣ್ಣಾದ ಇಂತಹ ಸೂರ್ಯನ ಚಲನೆಯ ಹಬ್ಬ ಸಂಕ್ರಮಣ ಅಥವಾ ಸಂಕ್ರಾಂತಿ. ಸಂಸ್ಕೃತದಲ್ಲಿ "ಕ್ರಮಣ" ಎಂದರೆ 'ಹೆಜ್ಜೆ ಇಡುವಿಕೆ' ಎಂದರ್ಥ. ಸಂಕ್ರಮಣ ಎಂದರೆ ಚೆನ್ನಾಗಿ ಹೆಜ್ಜೆ ಇಡುವಿಕೆ" (ಡಾ.ಎಚ್.ವಿ.ನರಸಿಂಹಮೂರ್ತಿ, ನಮ್ಮ ಹಬ್ಬಗಳು, ಪುಟ.೧೫). ಸೂರ್ಯನು ಒಂದು ರಾಶಿಯಲ್ಲಿ ತನ್ನ ಇರುವನ್ನು ಮುಗಿಸಿ ಇನ್ನೊಂದು ರಾಶಿಗೆ ಹೆಜ್ಜೆ ಇಡುವುದೇ ಸಂಕ್ರಮಣ ಅಥವಾ ಸಂಕ್ರಾಂತಿ. ವರ್ಷಕ್ಕೆ ಹನ್ನೆರಡು ಸಂಕ್ರಮಣಗಳು. ಆದರೆ ಇವುಗಳಲ್ಲಿ ಪ್ರಮುಖವಾದವು ಎರಡು ಮಾತ್ರ. ಸೂರ್ಯನು ಮಿಥುನರಾಶಿಯನ್ನು ಬಿಟ್ಟು, ಕರ್ಕಾಟಕ ರಾಶಿಯನ್ನು ಪ್ರವೇಶಿಸುವ ಕರ್ಕಾಟಕ ಸಂಕ್ರಮಣ ಮತ್ತು ಧನುರಾಶಿಯನ್ನು ಬಿಟ್ಟು

ಮಕರರಾಶಿಯನ್ನು ಸಂಕ್ರಮಿಸುವ ಮಕರ ಸಂಕ್ರಮಣ. ಇವು ಸೂರ್ಯನ ಪಯಣಕ್ಕೆ ಸಂಬಂಧಿಸಿದ ದಕ್ಷಿಣಾಯನ ಮತ್ತು ಉತ್ತರಾಯಣವನ್ನು ಸೂಚಿಸುವುದರಿಂದ ಇವೆರಡಕ್ಕೆ ಮಹತ್ವ.

ಸಂಕ್ರಾಂತಿ ಹಬ್ಬದಲ್ಲಿನ ಬಹುಮುಖ್ಯವಾದ ಆಚರಣೆ ಎಳ್ಳು ಬೀರುವುದು. ಆದ್ದರಿಂದ ಎಳ್ಳು-ಬೆಲ್ಲದ ಹಬ್ಬ ಎಂದೇ ಕರೆಯುತ್ತಾರೆ. ಆದರೆ ಇದಕ್ಕೂ ಬಹುಮುಖ್ಯವಾದುದು ಧಾನ್ಯ ಸಂಪತ್ತಿಗೆ ಕಾರಣವಾದ ಪಶುಗಳಿಗೆ ಕೃತಜ್ಞತೆಯನ್ನು ಸೂಚಿಸುವುದು. ಇಲ್ಲಿ ಸಂಕ್ರಾಂತಿ ಹಬ್ಬವನ್ನು ಎರಡು ದಿನಗಳಲ್ಲಿ ಆಚರಿಸುತ್ತಾರೆ. ಮೊದಲನೆಯದಿನ ಪತ್ರೆಯನ್ನು ಹಾಕುತ್ತಾರೆ. ಮನೆಗಳ ಬಾಗಿಲಿಗೆ ಮತ್ತು ಬಾಗಿಲಿನ ಮುಂದೆ ಮೇಲಿನ ಸೂರಿಗೆ ಹಾಗೂ ತಾವು ರಾಗಿ ಬತ್ತ ಬೆಳೆದು ಕಟಾವು ಮಾಡಿ ಮೆದೆ ಹಾಕಿರುವ ಎಲ್ಲಾ ಮೆದೆಗಳಿಗೆ ಮಾವಿನ ಸೊಪ್ಪು ಪತ್ರೆ, ಹಲಸಿನ ಸೊಪ್ಪು, ಜಮ್ಮುನೇರಳೆ ಸೊಪ್ಪು ಮತ್ತು ಮಾಮೇರಿ ಈ ನಾಲ್ಕು ಪತ್ರೆಗಳನ್ನು ಜೋಡಿಸಿ ಗುಚ್ಛಮಾಡಿ ಮನೆಯ ಬಾಗಿಲಮುಂದಿನ ಸೂರಿಗೆ ಸಿಕ್ಕಿಸುತ್ತಾರೆ. ಮತ್ತು ಮೆದೆಗಳಿಗೆ ನಾಲ್ಕು ದಿಕ್ಕಿಗೂ ಮುಡಿಸುತ್ತಾರೆ. ನಂತರ ಮಾರನೆಯ ದಿನ ಎಲ್ಲರೂ ತಮ್ಮ ತಮ್ಮ ರಾಸುಗಳಿಗೆ ಅಂದರೆ ದನ, ಕರು, ಎತ್ತು, ಎಮ್ಮೆ, ಆಡು, ಕುರಿ ಹೀಗೆ ಎಲ್ಲಾ ಸಾಕುಪ್ರಾಣಿಗಳಿಗೆ ಮೈ ತೊಳೆದು ಕೊಂಬುಗಳನ್ನು ಒರೆದು ನುಣುಪುಮಾಡಿ ಎಲ್ಲಾ ಸಾಕುಪ್ರಾಣಿಗಳಿಗೂ ಹೊಟ್ಟೆಬಿರಿಯುವಂತೆ ಮೇಯಿಸುತ್ತಾರೆ. ಅವುಗಳಿಗೆಲ್ಲ ಬಣ್ಣಗಳಿಂದ ಅಲಂಕಾರ ಮಾಡುತ್ತಾರೆ. ಹೂಗಳನ್ನು ಮುಡಿಸುತ್ತಾರೆ. ಹಸು, ಎತ್ತು, ಎಮ್ಮೆಗಳ ಕೊಂಬುಗಳಿಗೆ ಬಣ್ಣಗಳನ್ನು ಬಳಿದು ಬಣ್ಣ ಬಣ್ಣದ ಗುಲ್ಲಂಪಟ್ಟೆಯನ್ನು ಅಂಟಿಸುತ್ತಾರೆ. ಕೊಂಬುಗಳಿಗೆ ಕಡುನೀಲಿ ಬಣ್ಣವನ್ನು ಹಚ್ಚುವುದು ಸಾಮಾನ್ಯವಾಗಿರುತ್ತದೆ. ಅದರ ಮೇಲೆ ಕೆಂಪು, ಅರಿಸಿನ, ಹಸಿರು ಬಣ್ಣದ ಗುಲ್ಲಂಪಟ್ಟೆಯನ್ನು ಅಂಟಿಸುತ್ತಾರೆ.

ಹಸು ಎತ್ತುಗಳ ಮುಖಕ್ಕೆ ಮೊಕರೊಂಬೆಯನ್ನು ಹಾಕಿ, ಅರಿಸಿನ ಕುಂಕುಮ ಇಟ್ಟು, ಹೂಮುಡಿಸಿ ಕೊರಳಿಗೆ ಹೂವಿನ ಹಾರವನ್ನು ಹಾಕಿ ಗಂಧದಕಡ್ಡಿ ಹಚ್ಚಿ, ಪೂಜೆಮಾಡಿ ಗಂಧದ ಕಡ್ಡಿಯನ್ನು ಮೊಕರೊಂಬೆಗೆ ಸಿಕ್ಕಿಸುತ್ತಾರೆ. ಹಸುಗಳ ಮೈಮೇಲೆ ನೀಲಿಬಣ್ಣದಿಂದ ಎಲ್ಲರಿಗೂ ಶುಭಾಷಯಗಳನ್ನು ಕೋರುವ ಪದಗಳು ರಾರಾಜಿಸುತ್ತವೆ. ಎಮ್ಮೆಗಳ ಕೊಂಬುಗಳಿಗೆ ಮಾತ್ರ ಒಂದು ಕೊಂಬಿಗೆ ಸುಣ್ಣ ಮತ್ತೊಂದು ಕೊಂಬಿಗೆ ಶುದ್ಧಮಣ್ಣಿನ ಉಂಡೆಯ ಬಣ್ಣವನ್ನು ಬಳಿಯುತ್ತಾರೆ. ಹೀಗೆ ಶೃಂಗರಿಸುವಲ್ಲಿ ಸಂಜೆ ಸೂರ್ಯಮುಳುಗಿ ಕತ್ತಲಾಗುತ್ತಿದ್ದ ಹಾಗೆ ಊರಿನ ಹೆಬ್ಬಾಗಿಲಿನ ಸ್ವಲ್ಪದೂರದ ದಾರಿಯ ಬದಿಯಲ್ಲಿ ಸಂಕ್ರಾಂತಿ ಗುಡಿಯೊಂದನ್ನು ಕಟ್ಟಿ ಅದಕ್ಕೆ ಬಿಳಿಯಬಣ್ಣವನ್ನು ಹಚ್ಚಿ ದೀಪವಿಡಲು ಹಸುವಿನ ತೊಪ್ಪೆ ಕೆಳಗೆ ಇಟ್ಟು ಅದರ ಮೇಲೆ ದೀಪ ಇಡುತ್ತಾರೆ. ಆ ದೀಪಕ್ಕೆ ಅಣ್ಣೆ ಹೂ, ಉಗನಿ ಹೂ, ಅವರೇ ಹೂ, ಉತ್ತರಾಣೆಕಡ್ಡಿ, ಒಂದು ರಾಗಿತೆನೆ, ಹಸುವಿನ ಬಾಲದ ಕೂದಲನ್ನು ಜೋಡಿಸಿ ಮುಡಿಸುತ್ತಾರೆ. ಅದನ್ನು ಸಂಕ್ರಮಣಸ್ವಾಮಿ ಎಂದೇ ಕರೆಯುತ್ತಾರೆ. ಅಲ್ಲಿ ಒಂದು ಒಲೆಯನ್ನು ಒಡ್ಡಿ ಒಂದು ಹೊಸ ಮಡಿಕೆಯನ್ನು ತಂದು ಊರಿನ ಎಲ್ಲಾ ಮನೆಗಳಿಂದಲೂ ಒಂದೊಂದು ಪಾವು ಅಕ್ಕಿಯನ್ನು ಒಂದೊಂದು ರೂಪಾಯಿಯನ್ನು ಎತ್ತಿ ಊರೊಟ್ಟಿನಲ್ಲಿ ಎಲ್ಲರೂ ಸೇರಿ ಸಂಕ್ರಾಂತಿ ಗುಡಿಯಹತ್ತಿರ ಪೊಂಗಲು ಅನ್ನಮಾಡುತ್ತಾರೆ. ಆ ಅನ್ನಕ್ಕೆ ಬೆಲ್ಲ, ಒಂದೆರಡು ಉನ್ನಿಗಳನ್ನು ಹಸುಗಳಿಂದ ಕಿತ್ತು ಅದರೊಳಗೆ ಹಾಕುತ್ತಾರೆ. ಅನ್ನವನ್ನು ಮಾಡಿ ತಮಟೆ ನಗಾರಿಗಳೊಂದಿಗೆ ಪೂಜೆಯನ್ನು ಮಾಡುತ್ತಾರೆ. ನಂತರ ಪೊಂಗಲು ಅನ್ನದ ಪ್ರಸಾದವನ್ನು ಎಲ್ಲಾ ರಾಸುಗಳ ಮೇಲೆ ಎರಚುತ್ತಾ ಪೊಂಗ್ಲೋ ಪೊಂಗ್ಲೋ ಎಂದು ಕೂಗುತ್ತಾರೆ. ನಂತರ ದಾರಿಗೆ ಅಡ್ಡಲಾಗಿ ರಾಶಿ ರಾಶಿ ಹುಲ್ಲನ್ನು ಹಾಕಿ ಬೆಂಕಿಹಚ್ಚಿ ತಮ್ಮ ರಾಸುಗಳನ್ನು ತಮಟೆಯ ಸದ್ದಿನೊಂದಿಗೆ ಕಿಚ್ಚು ಹಾಯಿಸುತ್ತಾರೆ.

ಅಂದಿನ ವಿಶೇಷವಾದ ಅಡುಗೆ ಹಸಿ ಅವರೆಬೇಳೆ ಸಾರು ಮಾಡುವುದು ಸಹಜವಾಗಿರುತ್ತದೆ. ಇದು ಸುಗ್ಗಿಯ ಕಾಲದ ಸೂಚಕವಾಗಿರುತ್ತದೆ. ಮನೆಯಲ್ಲಿ ಮನೆದೇವರನ್ನು ಒಡ್ಡಿ ಪೂಜೆಮಾಡಿ ಊಟಕ್ಕೆ ಮೊದಲು ಸಂಕ್ರಾಂತಿ ಹಬ್ಬದಲ್ಲಿ ಎಳ್ಳುಬೆಲ್ಲ ತಿನ್ನುವುದು ವಾಡಿಕೆ. ಅಂದು ಎಳ್ಳಿನ ದಾನ, ಎಳ್ಳಿನ ಹೋಮ, ಎಳ್ಳೆಣ್ಣೆಯ ದೀಪಗಳನ್ನು ಬೆಳಗಿಸುವುದು ವಿಶೇಷವಾಗಿರುತ್ತದೆ. "ಎಳ್ಳು ಯಾವಾಗಲೂ ಪಾಪಗಳನ್ನು ಪರಿಹರಿಸುವುದು ದೇಹದ ಬಲ ಮತ್ತು ಪುಷ್ಟಿಗಳನ್ನು ಬೆಳೆಸುವುದು. ಆದ್ದರಿಂದ ಅದನ್ನು ಈಗ ದಾನ ಮಾಡುತ್ತಿರುವೆನು. ಇದರಿಂದ ನನಗೆ ಶಾಂತಿಯನ್ನು ಕೊಡು ಎಂಬುದು ಎಳ್ಳುದಾನ ಮಾಡುವ ಸಂದರ್ಭದಲ್ಲಿ ಹೇಳುವ ಶ್ಲೋಕದಸಾರ. ಬರಿಯ ಎಳ್ಳನ್ನು ಮಾತ್ರಕೊಡುವುದು ಅಷ್ಟು ಪ್ರಶಸ್ತವಲ್ಲವೆಂದು ಜೊತೆಗೆ ಬೆಲ್ಲವನ್ನು ಸೇರಿಸಲಾಗುವುದು. ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತಾಡು ಎಂಬ ಗಾದೆಯು ಈ ಹಬ್ಬದ ಸಂದರ್ಭದಲ್ಲಿನ ಹಾರೈಕೆಯಾಗಿದೆ" (ನಮ್ಮ ಹಬ್ಬಗಳು, ಪುಟ.೧೭).

ಎಳ್ಳಿನಲ್ಲಿ ಎಣ್ಣೆಯ ಅಂಶ ಹೆಚ್ಚಾಗಿರುವುದರಿಂದ ಚಳಿಗಾಲದಲ್ಲಿ ಇದರ ಉಪಯೋಗ ಅವಶ್ಯಕವಾಗಿರುತ್ತದೆ. ಚಳಿಗಾಲದಲ್ಲಿ ನಮ್ಮ ದೇಹದಲ್ಲಿರುವ ತೈಲ ಅಂದರೆ ಕೊಬ್ಬಿನ ಅಂಶವು ಶಾಖಕ್ಕಾಗಿ ಖರ್ಚಾಗಿ ಕೊರತೆ ಏರ್ಪಡುವುದು. ಇದರ ಜೊತೆಗೆ ಶೀತ-ವಾತ ಸಂಬಂಧಿ ರೋಗಗಳು ಈ ಕಾಲದಲ್ಲಿ ಕಾಣಿಸುವ ಸಾಧ್ಯತೆಗಳಿವೆ. ಎಳ್ಳಿನ ಸೇವನೆ ಈ ಕೊರತೆಯನ್ನು ತುಂಬಿ ಈ ರೋಗಗಳನ್ನು ದೂರಮಾಡಬಲ್ಲುದು. ಇದು ರೂಢಿಯ ವೈದ್ಯಕೀಯ ಹಿನ್ನಲೆಯಾಗಿದೆ. ಎಣ್ಣೆಯ ಅಂಶ ಹೆಚ್ಚಾಗಿರುವ ಒಣ ಕೊಬ್ಬರಿ, ನೆಲಗಡಲೆ ಬೀಜ ಇವುಗಳನ್ನು ಎಳ್ಳಿನ ಜೊತೆಗೆ ಸೇರಿಸಲಾಗುವುದು. ಬೆಲ್ಲದ ಬದಲು ಸಕ್ಕರೆ, ಬರೀಸಕ್ಕರೆಯ ಬದಲು ಸಕ್ಕರೆಯಿಂದ ಮಾಡಿದ ವಿವಿಧ ಆಕಾರದ ಅಚ್ಚುಗಳು, ಕುಸುರಿಕಾಳು, ಹಣ್ಣುಗಳು, ಕಬ್ಬಿನತುಂಡು ಹೀಗೆ ಈ ವೈವಿಧ್ಯಗಳಲ್ಲಿ ಸದಭಿರುಚಿ ಮತ್ತು ಕಲಾವಂತಿಕೆಗಳ ಕುರುಹುಗಳಾಗಿವೆ. ಇವುಗಳನ್ನು ಮನೆ ಮನೆಗೆ ಕೊಂಡೊಯ್ದು ಇಷ್ಟಮಿತ್ರರಿಗೆ ವಿತರಿಸುವುದು ಎಳ್ಳುಬೀರುವುದು ಜೊತೆಗೆ ಸಂಕ್ರಾಂತಿ ಹಬ್ಬದ ಶುಭಾಷಯಗಳನ್ನು ತಿಳಿಸುವುದು ಈ ಹಬ್ಬದ ವಿಶೇಷ.

ಚಳಿಗಾಲದಲ್ಲಿ ಹಗಲು ಕಡಿಮೆ ರಾತ್ರಿ ಹೆಚ್ಚು. ಶೀತವೂ ಹೆಚ್ಚಾಗಿರುತ್ತದೆ. ಹೀಗಾಗಿ ಈ ಸಮಯದಲ್ಲಿ ಜೀವಲೋಕವೆಲ್ಲ ಕುಗ್ಗುವುದು ಸಂಕ್ರಾಂತಿಯ ಈ ಸ್ಥಿತಿ ಮುಗಿದು ಮತ್ತೆ ಹಗಲು ಹೆಚ್ಚಾಗಿ ರಾತ್ರಿ ಕಡಿಮೆಯಾಗಿ ಶೀತವೂ ಕಡಿಮೆಯಾಗಿ ಶಾಖ ಹೆಚ್ಚಿ ಜೀವಲೋಕವು ಹಿಗ್ಗುವುದನ್ನು ಸೂಚಿಸುತ್ತದೆ. ಈ ಸಂತೋಷವನ್ನು ವ್ಯಕ್ತಗೊಳಿಸುವುದೇ ಈ ಹಬ್ಬದ ಸಂಭ್ರಮಗಳ ಅರ್ಥ. ಸುಗ್ಗಿಯ ಸೂಚಕವಾಗಿ ಪೊಂಗಲನ್ನು ಮಾಡುವರು. ಧಾನ್ಯ ಸಂಪತ್ತಿಗೆ ಕಾರಣವಾದ ಪಶುಗಳಿಗೂ ಕೃತಜ್ಞತೆ ಸೂಚಿಸಿ ಬೆಂಕಿಯನ್ನು ಹಾಯಿಸಿ ರೋಗ ನಿವೃತ್ತಿ ಮಾಡುವರು. ಪುರುಷನೊಬ್ಬ ಮೊದಲು ಬೆಂಕಿಯನ್ನು ಹಾಯ್ದು ಹೋಗಿ ಅವನ ಹಿಂದೆ ಪಶುಗಳು ಹಾಯ್ದುಕೊಂಡು ಹೋಗುವುದನ್ನು ಈಗಲೂ ಇಲ್ಲಿ ಕಾಣುತ್ತೇವೆ.

ನಾಗರಪಂಚಮಿ

ಭಾರತೀಯರ ಅದರಲ್ಲೂ ಹಿಂದುಗಳ ಪಾಲಿಗೆ ಹಬ್ಬಗಳೆಲ್ಲ ಒಂದರ್ಥದಲ್ಲಿ ಧಾರ್ಮಿಕ ಉತ್ಸವಗಳೇ. ಧಾರ್ಮಿಕ ಶ್ರದ್ಧೆ ಮತ್ತು ಭಾವನೆಗಳಿಗೆ ಇಲ್ಲಿ ಪ್ರಾಧಾನ್ಯತೆ. ಜೊತೆಗೆ ಸಾಮಾಜಿಕ, ಸಾಂಸ್ಕೃತಿಕ ಅಂಶಗಳು

ಅಲ್ಲಿ ಸೇರಿಕೊಂಡಿವೆ. ನಮ್ಮ ಕೆಲವು ಹಬ್ಬಗಳು ಋತುಗಳ ಸಂವತ್ಸರ ಚಕ್ರದ ಮಾರ್ಗದ ಬದಲಾವಣೆಗೆ ಸಂಬಂಧಿಸಿವೆ. ಮಕರ ಸಂಕ್ರಾಂತಿಯೇ ಇದಕ್ಕೆ ಉದಾಹರಣೆ. ಸಂವತ್ಸರ ಚಕ್ರದ ಋತುಗಳ ಬದಲಾವಣೆಗೆ ಸಂಬಂದಪಟ್ಟ ಹಬ್ಬಗಳು ಮತ್ತೆ ಕೆಲವು ಮಹಾಶಿವರಾತ್ರಿ ದುರ್ಗಾಷ್ಟಮಿಯಂತಹ ಹಬ್ಬಗಳು ದೇವಾನುದೇವತೆಗಳ ಪೂಜೆಗೆ ಮೀಸಲು. ಮಹಾಪುರುಷರ ಅವತಾರವನ್ನು ಸೂಚಿಸುವ ವ್ಯಾಸಪೂರ್ಣಿ, ಬುದ್ಧಜಯಂತಿಯಂತಹ ಹಬ್ಬಗಳು ನಮ್ಮಲ್ಲಿವೆ. ಇಂತಹ ಹಬ್ಬಗಳ ಸಾಲಿನಲ್ಲಿ ನಾಡಿಗೆ ಹಬ್ಬವಾದ ನಾಗರಪಂಚಮಿ ನಾಗನ ಆರಾಧನೆಗೆ ಮೀಸಲಾದ ಹಬ್ಬವಾಗಿದೆ.

ಭಾರತದ ಮೂಲನಿವಾಸಿಗಳಾದ ನಾಗಾಜನಾಂಗದ ಕುರುಹಾಗಿ ನಾಗಾರಾದನೆ ಆರ್ಷೇಯವಾಗಿ ಬೆಳೆದು ಬಂದಿದೆ. ವೇದ, ಪುರಾಣ, ಮಹಾಕಾವ್ಯ, ಜನಪದ ಸಾಹಿತ್ಯ ಇಲ್ಲೆಲ್ಲ ನಾಗನಿಗೆ ಸಂಬಂಧಿಸಿದ ಪಲವಾರು ಉಲ್ಲೇಖಗಳಿವೆ. “ಋಗ್ವೇದದ ಸರ್ಪಸೂಕ್ತದಲ್ಲಿ ನಾಗನ ವರ್ಣನೆಯಿದೆ. ಇಂದ್ರನು ನಾಗಗಳನ್ನು ಧ್ವಂಸಮಾಡಿದನೆಂಬ ಉಲ್ಲೇಖವೂ ಇದೆ. ಹರಪ್ಪ ಸಂಸ್ಕೃತಿಯಲ್ಲಿ ನಾಗಾರಾಧನೆಗೆ ತುಂಬ ಮಹತ್ವ ನೀಡಲಾಗಿದೆ. ಜೈನ, ಬೌದ್ಧ, ಶೈವ, ವೈಷ್ಣವ, ಸೌರ, ಗಣಪತ್ಯ, ಶಾಕ್ತ ಮುಂತಾದ ಮತಗಳಲ್ಲಿಯೂ ನಾಗನಿಗೆ ಪ್ರಾಧಾನ್ಯವಿದೆ. ಅದರಲ್ಲೂ ಬೌದ್ಧ ಧರ್ಮದಲ್ಲಿ ವಿಶೇಷಸ್ಥಾನ ಇತ್ತೆಂದು ಹೇಳಲಾಗಿದೆ. ಪಾರ್ಶ್ವನಾಥ ತೀರ್ಥಂಕರನ ತಲೆಯ ಮೇಲ್ಭಾಗದಲ್ಲಿ ನಾಗನ ಹೆಡೆಯ ಲಾಂಛನವಿದೆ. ನಾಗನು ವಿಷ್ಣುವಿಗೆ ಹಾಸಿಗೆ, ಶಿವನಿಗೆ ಕಂಠಾಭರಣ ಗಣಪತಿಗೆ ಹೊಟ್ಟೆಯಪಟ್ಟಿ, ಸ್ವತಃ ಭೂಭಾರವನ್ನು ಹೊತ್ತವ, ಅಸಾಧಾರಣ ಶಕ್ತಿ ಶಾಲಿಯಾದ ಆದಿಶೇಷ” (ಡಾ.ಎಚ್.ವಿ.ನರಸಿಂಹಮೂರ್ತಿ, ನಮ್ಮ ಹಬ್ಬಗಳು). ಹೀಗೆ ಪ್ರಾಚೀನಕಾಲದಿಂದಲೂ ನಾಗನಿಗೆ ವಿಶೇಷವಾದ ಸ್ಥಾನವಿದ್ದು ಅಂದಿನಿಂದ ಇಂದಿನವರೆಗೆ ಜನಪದರಿಗೆ ಅರಾಧ್ಯದೈವವಾಗಿ ತಮ್ಮ ಕೃಷಿಸಂಬಂಧಿ ಆಚರಣೆಗಳಲ್ಲಿ ಇಂದಿಗೂ ಪ್ರಮುಖವಾಗಿರುವ ನಾಗ ಜನಪದರ ಸಂಸ್ಕೃತಿಯ ಭಾಗವೇ ಆಗಿದ್ದಾನೆ.

ನಾಗಾರಾಧನೆ ಭಾರತದ ಮೂಲನಿವಾಸಿಗಳಾದ ನಾಗಾ ಮತ್ತು ದ್ರಾವಿಡರ ಕುರುಹಾಗಿದೆ. ಪ್ರಪಂಚದಲ್ಲೇ ಶ್ರೇಷ್ಠ ಸಂಸ್ಕೃತಿಯಾದ ಸಿಂದೂ ಬಯಲಿನ ನಾಗರಿಕತೆಯ ಉದಯ ನಾಗಾ ಜನಾಂಗದಿಂದ “ಸಿಂದೂ ಸಂಸ್ಕೃತಿಯ ಅವಶೇಷಗಳಲ್ಲಿ ಸರ್ಪ ಮಿಥುನ ಸಿಕ್ಕಿದ್ದನು ಗಮನಿಸಿದಾಗ ಮಾನವ ಜನಾಂಗದ ಆದಿ ಕಾಲದಿಂದಲೂ ಈ ನಾಗಾರಾಧನೆ ನಡೆದು ಬಂದಿದ್ದು ತಿಳಿಯುತ್ತದೆ. ನಮ್ಮ ದೇಶದಲ್ಲಿ ಶೈವ, ಶಾಕ್ತ, ವೈಷ್ಣವ, ಬೌದ್ಧ, ಜೈನ ಮುಂತಾದ ಎಲ್ಲಾ ಸಂಪ್ರದಾಯಗಳಲ್ಲೂ ನಾಗಾಪೂಜೆ ಬಳಕೆಯಲ್ಲಿದೆ” (ಭಾರತೀಯ ಹಬ್ಬಗಳ ವೈಶಿಷ್ಟ್ಯ, ಪಿ.ಎನ್.ಭಟ್, ಪುಟ.೩೫). ಕಬ್ಬಾಳಿನ ಪ್ರದೇಶದಲ್ಲೂ ಈ ನಾಗಾರಾಧನೆ ಇಂದಿಗೂ ಆಚರಣೆಯಲ್ಲಿದೆ.

ಪ್ರಾಚೀನ ಕಾಲದಲ್ಲಿ ಹಾವಿನ ಭಯಂಕರವಾದ ಪ್ರಾಣಾಂತಿಕ ವಿಷಯವನ್ನು ಅರಿತು ಅವುಗಳ ಬಾಧೆಯಿಂದ ತಪ್ಪಿಸಿಕೊಳ್ಳುವ ಮತ್ತು ಆ ಬಾಧೆ ಬರದಿರಲೆಂಬ ಉದ್ದೇಶದಿಂದ ಈ ಹಬ್ಬ ಆಚರಣೆಗೆ ಬಂದಿತೆಂದು ಊಹಿಸಲಾಗಿದೆ. ಎಲ್ಲೆಲ್ಲೂ ಹಸಿರು ತುಂಬಿ ಕಂಗೊಳಿಸುವ ಮಳೆಗಾಲದಲ್ಲಿ ಬರುವ ಶ್ರಾವಣ ಮಾಸದಲ್ಲಿ ಹಾವುಗಳ ಕಾಟ ಹೆಚ್ಚು. ಈ ವಿಷ ಜಂತುಗಳ ಬಾಧೆ ತಮಗೆ ತಟ್ಟದಿರಲಿ ಎಂಬ ಉದ್ದೇಶ ಪೂಜಾ ರೂಪದಲ್ಲಿ ಪರಿಣಮಿಸಿರಬಹುದು. ಹಾವುಗಳಿದ್ದ ಹೊಲದಲ್ಲಿ ಬೇರೆ ಕ್ರಿಮಿ ಕೀಟಗಳ ಬಾಧೆಯಿಲ್ಲ, ಆದ್ದರಿಂದ ಕ್ಷೇತ್ರಪಾಲಕನ ರೂಪದಲ್ಲೋ ಧನ ಧಾನ್ಯ ರಕ್ಷಕನಾದ ನಿಧಿಪಾಲಕನ ರೂಪದಲ್ಲೋ ನಾಗರ ಪ್ರತಿಮೆಯನ್ನಿಟ್ಟು, ಅದನ್ನು

ಪೂಜಿಸುವ ಪದ್ಧತಿ ಬಳಕೆಗೆ ಬಂದಿರಬಹುದು. ಅದು ಇಂದಿಗೂ ಪ್ರತಿಹಳ್ಳಿ ಪಟ್ಟಣ ನಗರಪ್ರದೇಶಗಳಲ್ಲೂ ನಾಗರಕಟ್ಟೆಗಳಾಗಿ ನಿರ್ಮಿತವಾಗಿ ಪೂಜಿಸುತ್ತಿದ್ದಾರೆ.

ನಾಗರ ಪಂಚಮಿ ಹಬ್ಬವು ಎಲ್ಲಾ ಪ್ರದೇಶಗಳಲ್ಲಿ ನಡೆಯುವ ಸಂದರ್ಭದಲ್ಲೇ ಕಬ್ಬಾಳಿನ ಸುತ್ತಮುತ್ತಲ ಪ್ರದೇಶದಲ್ಲೂ ಆಚರಣೆ ಮಾಡಲಾಗುತ್ತದೆ. ಈ ಭಾಗದಲ್ಲಿ ಈ ಹಬ್ಬವನ್ನು ಗೌರಿಹಬ್ಬದಲ್ಲೇ ಆಚರಿಸುವುದರಿಂದ ಇದನ್ನು ಗೌರಿಹಬ್ಬ ಎಂದೇ ಕರೆಯಲಾಗುತ್ತದೆ. ಆದರೆ ಉತ್ತರ ಕರ್ನಾಟಕದಲ್ಲಿ ನಾಗರಪಂಚಮಿ ಹಬ್ಬವನ್ನು ಗೌರಿಗಣೇಶ ಹಬ್ಬದಲ್ಲಿ ಆಚರಣೆ ಮಾಡುವುದಿಲ್ಲ. ಅದನ್ನು ಬೇರೆ ಸಂದರ್ಭದಲ್ಲಿ ಆಚರಿಸುತ್ತಾರೆ. ಸಾಮಾನ್ಯವಾಗಿ ಈ ಹಬ್ಬವನ್ನು ಉತ್ತರ ಕರ್ನಾಟಕದಲ್ಲಿ ಗೌರಿಹಬ್ಬಕ್ಕೂ ಮೊದಲು ಒಂದು ತಿಂಗಳು ಮೊದಲೇ ಆಚರಿಸುತ್ತಾರೆ. ಪ್ರಸ್ತುತ ಪ್ರದೇಶದಲ್ಲಿ ಗೌರಿಹಬ್ಬವನ್ನೇ ನಾಗರ ಪಂಚಮಿ ಎಂದು ಆಚರಿಸುತ್ತಾರೆ. ನಾಗರ ಪಂಚಮಿ ಮುಖ್ಯವಾಗಿ ಹೆಣ್ಣುಮಕ್ಕಳ ಹಬ್ಬ. ಈ ಹಬ್ಬವು ಹೆಣ್ಣು ಮಕ್ಕಳಿಗೆ ಕಂಕಣಬಲ ಕೊಡುತ್ತದೆ. ಸಂತಾನಪ್ರದವಾಗುತ್ತದೆ ಎಂಬ ನಂಬಿಕೆ ಇದೆ. ನಾಗರ ಪಂಚಮಿ ಹಬ್ಬದ ಬಗ್ಗೆ ಕೆಲವು ದಂತಕಥೆಗಳಿವೆ. ಒಬ್ಬ ರೈತ ತನ್ನ ಹೊಲದಲ್ಲಿ ಉಳುತ್ತಿರುವಾಗ ನಾಗರಹಾವಿನ ಮರಿಗಳು ನೇಗಿಲು ಮೊನೆಗೆ ಸಿಕ್ಕು ಸಾಯುತ್ತವೆ. ಮರಿಗಳ ಸಾವಿನಿಂದ ತಾಯಿ ನಾಗಿಣಿಗೆ ಕೋಪ ಬಂದು ಆ ರೈತನ ಮನೆಗೆ ತೆರಳಿ ಮನೆಯವರನ್ನೆಲ್ಲಾ ಕಚ್ಚಿಸಾಯಿಸುತ್ತದೆ. ಅಷ್ಟಕ್ಕೆ ಬಿಡದೆ ಆ ರೈತನ ಮದುವೆಯಾದ ಮಗಳನ್ನು ಕಚ್ಚಿಸಾಯಿಸಿ ಕುಲಕ್ಷಯಗೊಳಿಸಲು ಅವಳ ಮನೆಯತ್ತ ದಾವಿಸಿದೆ. ನಾಗಿಣಿ ಅಲ್ಲಿಗೆ ಹೋದಾಗ ರೈತನ ಮಗಳು ಮಣ್ಣಿನ ನಾಗರಮಾಡಿ ಹಾಲೆರದು ಪೂಜಿಸಿ ನಮಿಸುತ್ತಿದ್ದಳು. ಅದನ್ನು ಕಂಡು ನಾಗಿಣಿಯ ಕೋಪ ಕರಗಿತು. ಮನಸ್ಸು ಹಿಗ್ಗಿತು. ತನ್ನ ಮರಿಗಳನ್ನು ಕೊಂದಿದ್ದಕ್ಕಾಗಿ ನಿನ್ನ ತವರಿನವರನ್ನೆಲ್ಲಾ ಕಚ್ಚಿ ಸಾಯಿಸಿ ನಿನ್ನನ್ನು ಮುಗಿಸಲು ಇಲ್ಲಿಗೆ ಬಂದಿದ್ದೆ. ಆದರೆ ನೀನು ಮಾಡುತ್ತಿರುವ ಪೂಜೆ ನೋಡಿ ಸಂತೋಷಗೊಂಡಿದ್ದೇನೆ. ನಿನ್ನ ಇಷ್ಟಾರ್ಥ ಈಡೇರಿಸುವೆ. ಬೇಕಾದುದನ್ನು ಕೇಳು ಎಂದಾಗ ಆಕೆ ತನ್ನ ತಂದೆ-ತಾಯಿಗಳನ್ನು, ತವರಿನವರನ್ನು ಬದುಕಿಸುವಂತೆ ಬೇಡಿಕೊಂಡು ನಾಗಿಣಿಯ ಜೊತೆಗೆ ತವರಿಗೆ ಬಂದಳು. ನಾಗಿಣಿ ವಿಷಹೀರಿ ಎಲ್ಲರನ್ನು ಬದುಕಿಸಿತು. ಅಂದು ಶ್ರಾವಣಶುದ್ಧ ನಾಗಪಂಚಮಿಯಾಗಿತ್ತು. ಅಂದು ಬದುಕಿದ ಆ ಮನೆಯವರೆಲ್ಲಾ ಸೇರಿ ನಾಗಾರಾಧನೆ ಮಾಡಿದರು. ಈ ಹಬ್ಬದಂದು ಹೆಚ್ಚಾಗಿ ಹೆಣ್ಣುಮಕ್ಕಳು ತವರಿಗೆ ಹೋಗುವುದು ಅಂದಿನಿಂದ ಪ್ರಾರಂಭವಾಯಿತು ಎಂದು ಹೇಳುತ್ತಾರೆ.

ಹಾಗೆಯೇ ಮತ್ತೊಂದು ದಂತ ಕಥೆಯ ಪ್ರಕಾರ ತುಂಬಾ ಬಡಕುಟುಂಬದಿಂದ ಹುಟ್ಟಿದ ಹೆಣ್ಣುಮಗಳೊಬ್ಬಳು ಸುರಸುಂದರಿಯಾಗಿದ್ದಳು. ಅವಳು ದೈವ ಇಚ್ಛೆಯಿಂದ ಸಿರಿವಂತ ಮನೆಯ ಸೊಸೆಯಾದಳು. ನಾಗರ ಪಂಚಮಿ ಹಬ್ಬಕ್ಕೆ ಅವಳ ಅಣ್ಣ ತವರು ಮನೆಗೆ ಕರೆತರುತ್ತಿದ್ದಾಗ ಅಷ್ಟೈಶ್ವರ್ಯ ಒಡವೆಗಳನ್ನು ಹಾಕಿದ್ದ ತಂಗಿಯನ್ನು ನೋಡಿ ಅವಳನ್ನು ಕೊಡಲು ಬೇಡುತ್ತಾನೆ. ಆದರೆ ಕೊಡಲೊಪ್ಪದ ತಂಗಿಯ ಮೇಲೆ ಕಲ್ಲು ಚಪ್ಪಡಿಯೊಂದನ್ನು ಎತ್ತಿಹಾಕಲು ಎತ್ತುವಾಗ ಅದರಡಿಯಲ್ಲಿದ್ದ ನಾಗಪ್ಪ ಅವನನ್ನು ಕಚ್ಚಿ ಸಾಯಿಸುತ್ತದೆ. ತನ್ನ ಅಣ್ಣನ ಸಾವಿನಿಂದ ನೊಂದ ತಂಗಿ ಅಲ್ಲೇ ನಾಗಪ್ಪನನ್ನು ಬೇಡಿ ಪ್ರಾರ್ಥಿಸಿ ಅಣ್ಣನ ಜೀವ ಮರಳಿ ಪಡೆದಳು. ಆ ದಿನ ಶ್ರಾವಣಶುದ್ಧ ಚೌತಿಯಾಗಿತ್ತು. ಆದ್ದರಿಂದ ಈ ತಿಥಿಗೆ ನಾಗಚೌತಿ ಎಂದಾಯಿತು ಎನ್ನುತ್ತಾರೆ. ಈ ದಂತ ಕಥೆಗಳ ನಂಬಿಕೆ ಸತ್ಯಾಸತ್ಯತೆ ಏನೇ ಇದ್ದರೂ ಇದು ಹೆಣ್ಣುಮಕ್ಕಳು ತನ್ನ ಎಲ್ಲ ಅಕ್ಕ ತಂಗಿಯರು, ಅಣ್ಣ ತಮ್ಮಂದಿರು, ತಾಯಿ ತಂದೆಯರ ಜೊತೆಗೂಡಿ ಸೌಹಾರ್ದತೆಯಿಂದ ಸಂತೋಷದಿಂದ ಕೂಡಿರುವ ಹಬ್ಬವಾಗಿದೆ.

ನಾಗರ ಪಂಚಮಿಯ ಆಚರಣೆಗಾಗಿ ಹೆಣ್ಣುಮಕ್ಕಳು ಗಂಡನ ಮನೆಯಿಂದ ತವರು ಮನೆಗೆ ಹೋಗುತ್ತಾರೆ. ಈ ಹಬ್ಬಕ್ಕೆ ಒಂದು ವಾರ ಮುಂಚಿತವಾಗಿ ಅಣ್ಣ ತಮ್ಮಂದಿರು ಹೋಗಿ ತಮ್ಮ ಅಕ್ಕತಂಗಿಯರನ್ನು ತವರಿಗೆ ಕರೆತರುತ್ತಾರೆ. ಅವರಿಗೆ ಹೊಸ ಹೊಸ ಉಡುಪು ವಸ್ತ್ರ ಕೊಡಿಸಿ ಮುತ್ತೈದೆಯ ಗುರುತಾಗಿ ಕೈತುಂಬ ಬಳೆತೊಡಿಸಿ ಅರಿಸಿನ ಕುಂಕುಮ ಕೊಟ್ಟು, ಹೂ ಮುಡಿಸಿ ಉಣಲಿಕ್ಕೆ ಸಿಹಿತಿನಿಸುಗಳನ್ನು ಮಾಡಿ ಉಣಬಡಿಸುತ್ತಾರೆ.

ಪಂಚಮಿ ಹಬ್ಬ ಉಳಿದಾವ ದಿನ ನಾಕ
ಅಣ್ಣ ಬರಲಿಲ್ಲ ಯಾಕೋ ಕರಿಯಾ....

ಈ ಹಾಡನ್ನು ಹೆಣ್ಣುಮಗಳು ಗೌರಿಹಬ್ಬಕ್ಕೆ ತವರಿಗೆ ಹೋಗಲು ಕಾಯುತ್ತಿರುವುದನ್ನು ಅಣ್ಣನ ದಾರಿಯನ್ನು ಎದುರುನೋಡುತ್ತಿರುವುದನ್ನು ಕಾಣುತ್ತೇವೆ.

ಹಬ್ಬದ ದಿನ ಮನೆಯಲ್ಲಿ ಎಲ್ಲರಿಗೂ ಹರುಷವೋ ಹರುಷ. ಹೆಣ್ಣು ಮಕ್ಕಳಿರುವ ಮನೆ ನಂದನವನವೇ ಸರಿ. ಬೆಳಿಗ್ಗೆ ಎದ್ದಂದಿನಿಂದ ಪ್ರಾರಂಭವಾದ ಅವರ ಕೆಲಸಗಳು ಮನೆಯನ್ನು ಗುಡಿಸಿ ಸಾರಿಸುವುದರಿಂದ ಪ್ರಾರಂಭವಾಗುತ್ತದೆ. ಎಲ್ಲವನ್ನೂ ಸ್ವಚ್ಛಗೊಳಿಸಿ ಸಾರಿಸಿ ರಂಗೋಲಿಬಿಟ್ಟು ಮನೆಮುಂದಿನ ಪಡಸಾಲೆ, ಕಂಬಗಳಿಗೆ ರಂಗೋಲಿಬಿಟ್ಟು ಮನೆಯಲ್ಲಿ ಎಲ್ಲ ವಸ್ತುಗಳನ್ನು ಸ್ವಚ್ಛಗೊಳಿಸಿ ಎಲ್ಲರೂ ಸ್ನಾನ, ಮಡಿ, ಮಾಡಿ ದೇವರ ಮನೆಯನ್ನು ಹೂಗಳಿಂದ ಅಲಂಕರಿಸಿ ನಂತರ ಹೊಸ ನೀರನ್ನು ತರುತ್ತಾರೆ. ಬಿಂದಿಗೆಗಳನ್ನು ಹುಣಸೆಹಣ್ಣಿನಲ್ಲಿ ಬೆಳಗಿ ನೆಲ್ಲಿಗಳ ಹತ್ತಿರ ಹೋಗಿ ಗಂಧದಕಡ್ಡಿ, ಎಲೆ, ಅಡಿಕೆ, ಅರಿಸಿನ, ಕುಂಕುಮ, ಕರ್ಪೂರ, ತೆಂಗಿನಕಾಯಿ, ವಿಭೂತಿ ಎಲ್ಲಾ ಪೂಜೆ ಸಾಮಾನುಗಳನ್ನು ತಂದು ಬಿಂದಿಗೆಗಳಿಗೆ ಹೊಸ ನೀರನ್ನು ತುಂಬಿ, ನೆಲದ ಮೇಲೆ ಸಗಣಿ ನೀರು ಹಾಕಿ, ಮೇಲೆ ರಂಗೋಲಿ ಬಿಟ್ಟು, ಅಲ್ಲಿ ತುಂಬಿದ ಬಿಂದಿಗೆಗಳನ್ನು ಇಟ್ಟು ಹೂ ಮುಡಿಸಿ ವಿಭೂತಿ ಬಳಿದು ಅರಿಸಿನ ಕುಂಕುಮ ಇಟ್ಟು, ಕಾಯಿ ಒಡೆದು ಗಂಧದಕಡ್ಡಿ ಹಚ್ಚಿ ಪೂಜೆಮಾಡಿ ಮನೆಗೆ ಹೊಸ ನೀರನ್ನು ತರುತ್ತಾರೆ.

ನಂತರ ಅಡುಗೆ ಕೆಲಸ ಪ್ರಾರಂಭಿಸಿ ಸಿಹಿ ತಿನಿಸುಗಳನ್ನು ಮಾಡಿ ಪಾಯಸ ಓಳಿಗೆ (ಒಬ್ಬಟ್ಟು), ಕಡುಬು ಮಾಡುವುದು ವಿಶೇಷವಾಗಿರುತ್ತದೆ. ಎಳ್ಳು ಮತ್ತು ಬೆಲ್ಲವನ್ನು ಕುಟ್ಟಿ ಮಾಡಿದ ಎಳ್ಳುತಂಬಿಟ್ಟು ಮತ್ತು ಅಕ್ಕಿ, ಬೆಲ್ಲವನ್ನು ಕುಟ್ಟಿ ಮಾಡಿದ ಅಕ್ಕಿ ತಂಬಿಟ್ಟನ್ನು ಪ್ರತಿಯೊಬ್ಬರ ಮನೆಯಲ್ಲಿ ತಪ್ಪದೆ ತಯಾರಿಸುತ್ತಾರೆ. ಈ ತಂಬಿಟ್ಟು ಇಲ್ಲದೆ ನಾಗಪ್ಪನಿಗೆ ಎಡೆ ಇಡುವುದಿಲ್ಲ. ಕಡ್ಡಾಯವಾಗಿ ಈ ತಂಬಿಟ್ಟನ್ನು ಮಾಡಿ ಹುತ್ತಕ್ಕೆ ಎಡೆಇಟ್ಟು ಪೂಜೆ ಮಾಡುತ್ತಾರೆ. ಜೊತೆಗೆ ಒಂದು ಬಟ್ಟಲು ಹಾಲು ಹಾಗೂ ಪೂಜೆಗೆ ಬೇಕಾದ ನಾಗರ, ಸಾಮಾನು ಮತ್ತು ಇತರ ಪೂಜಾಸಾಮಾಗ್ರಿಗಳ ಸಹಿತ ತಮ್ಮ ತಮ್ಮ ಹೊಲಗಳ ಹತ್ತಿರ ಇರುವ ಹುತ್ತಗಳಿಗೆ ಹೋಗಿ ಸ್ವಚ್ಛಮಾಡಿ ಹೂ ಮುಡಿಸಿ ಅರಿಸಿನ ಕುಂಕುಮ ಇಟ್ಟು ಹತ್ತಿ ಮತ್ತು ಅರಿಸಿನದಿಂದ ಮಾಡಿದ ಹಾರವನ್ನು ಹಾಕಿ ತಂದಿದ್ದ ಎಲ್ಲ ತಿನಿಸುಗಳನ್ನು ಎಡೆ ಇಕ್ಕಿ ಪೂಜೆ ಮಾಡಿ ಹುತ್ತಕ್ಕೆ ಹಾಲೆರದು ಬರುತ್ತಾರೆ.

ನಾರಪಂಚಮಿ ನಾಡಿಗೆ ಹಬ್ಬ
ನಾಗಪ್ಪಗ್ಹಾಲ ಎರೆಯೋಣ| ನನಗಳೆತಿ
ನಾಗರ ಹೆಡೆಯಾಂಗೆ ಹಾಡೋಣ

ಎಂದು ಹಾಡಿ ಹೆಣ್ಣುಮಕ್ಕಳೆಲ್ಲ ಸಂತೋಷದಿಂದ ನಕ್ಕು ನಲಿದಾಡಿ ತಮ್ಮಲ್ಲಿನ ನೋವುಗಳನ್ನು ಮರೆತು ಸಂತೋಷಪಡುವ ದಿನ ನಾಗರಪಂಚಮಿ. ಹೊಸದಾಗಿ ಮದುವೆಯಾದ ಹೆಣ್ಣುಮಕ್ಕಳು ಆಚರಿಸಲೇಬೇಕಾದ ವ್ರತಗಳಲ್ಲಿ ನಾಗರಪಂಚಮಿ ವ್ರತ ಬಹಳಮುಖ್ಯವಾದುದು. ನಾಗನ ಕೋಪಕ್ಕೆ ಒಳಗಾಗಿ ಸರ್ಪಕಚ್ಚಿ ಮರಣಹೊಂದಿದ ಒಂದು ಒಕ್ಕಲಿಗನ ಕುಟುಂಬವನ್ನು ಅದೇ ಸರ್ಪದ ಅನುಗ್ರಹಕ್ಕೆ ಪಾತ್ರಳಾದ ಆ ಮನೆಯ ಹೆಣ್ಣುಮಗಳೊಬ್ಬಳು ಬದುಕಿನ ಉದ್ಧರಿಸಿದ ರಮ್ಯ ಕಥೆಯು ನಮ್ಮ ಜನಪದರು ಈ ಹಬ್ಬದ ಆಚರಣೆಗೆ ಕೊಟ್ಟ ಮಹತ್ವಕ್ಕೆ ಸಾಕ್ಷಿಯಾಗಿದೆ. ಅಕ್ಕ ತಂಗಿಯರು ತಮ್ಮ ಅಣ್ಣ ತಮ್ಮಂದಿರಿಗೆ ಕೈಗೆ ಅರಿಸಿಣಬಣ್ಣದ ಸಾಮಂತಿಗೆ (ಸೇವಂತಿಗೆ) ಹೂವನ್ನು ಕಟ್ಟುತ್ತಾರೆ. ಅಣ್ಣ ತಂಗಿಯರ ಬಂಧನ ಹೀಗೆ ಚಿರಕಾಲ ಇರಲಿ ಎಂಬ ಆಶಯ ಅವರದಾಗಿರುತ್ತದೆ.

ನಾಗರ ಪಂಚಮಿ ನಾ ಹ್ಯಾಂಗೆ ಮರೆಯಲಿ
ನನ್ನ ತವರು ಮನೆಯಾ| ತವರಿನ
ಬಂಕಾಪುರದ ಬಳೆಯಾ

ಶಿರಡಿ ಸೀರೆ ಕುಸುಗಲ್ಲು ಗುಬುಸ
ಬಂಕಪುರದ ಬಳೆಯಾ| ಕೊರಳಿಗೆ
ಅಂಗಾನೂರಿನ ಎಳೆಯಾ

ನೆನೆಯಕ್ಕಿ ನೆನೆಗಡಲೆ ಗೊನೆಯ ಬಾಳೆಹಣ್ಣು
ಬಿಳಿಯ ಬಾಳೆಎಲೆಯಾ| ತವರಲಿ
ನಗೆಯಾ ಹಾಲಿನ ಹೊಳೆಯ

ನಾಗರ ಪಂಚಮಿ ಹಬ್ಬದಲ್ಲಿ ಹೆಣ್ಣುಮಕ್ಕಳಿಗೆ ತವರಿನಲ್ಲಿ ಹೇಗೆ ಸತ್ಕಾರ ಮಾಡುತ್ತಾರೆ, ಆತಿಥ್ಯ ಆದರಗಳು ತಿಂಡಿ ತಿನಿಸುಗಳು ಹೇಗಿರುತ್ತವೆ ಎಂಬುದನ್ನು ಈ ಮೇಲಿನ ಹಾಡಿನ ಮೂಲಕ ತಿಳಿಯಬಹುದು. ಹೆಣ್ಣುಮಕ್ಕಳು ಸೌಭಾಗ್ಯವತಿಯಾಗಿರಲೆಂದು ಎಲ್ಲರೂ ಹರಸುತ್ತಾರೆ. ಬಂಕಾಪುರದಿಂದ ತಂದ ಬಳೆ, ಶಿರಡಿ ಸೀರೆ, ಕುಸುಗಲ್ಲು ಕುಬುಸ, ಕೊರಳಿಗೆ ಅಂಗಾನೂರಿನ ಹಾರ ಎಲ್ಲವೂ ಸೌಭಾಗ್ಯವತಿಯ ಸಂಕೇತವೇ ಸರಿ. ಅವರಿಗೆ ನೆನೆಯಕ್ಕಿ, ನೆನೆಗಡನೆ, ಗೊನೆಬಾಳೆಹಣ್ಣು ಎಲ್ಲವನ್ನು ಬಾಳೆದೆಲೆಯ ಮೇಲಿನ ಊಟ ಈ ಎಲ್ಲವೂ ಸೇರಿ ಸುಖ ಸಂತೋಷದಿಂದ ನೋವುಗಳನ್ನೆಲ್ಲಾ ಮರೆತು ನಗೆಯ ಹಾಲಿನ ಹೊಳೆಯಲ್ಲೇ ತೇಲುತ್ತಾರೆ. ಇದು ತವರಿನ ಸುಖಸಂತೋಷ ನೆಮ್ಮದಿಯನ್ನು ಹೇಳುತ್ತದೆ.

ದೀಪಾವಳಿ

ದೀಪಾವಳಿ ಹಬ್ಬದ ದಿನಗಳಲ್ಲಿ ಎಲ್ಲೆಲ್ಲಿ ನೋಡಿದರೂ ದೀಪಗಳ ಸಾಲು ಕಣ್ತುಂಬುತ್ತವೆ. ಏಕೆಂದರೆ ಕತ್ತಲೆಗೂ ಬೆಳಕಿಗೂ ಯುಗಯುಗಗಳ ಸಂಘರ್ಷ ನಿರಂತರವಾದ ಹೋರಾಟ ನಡೆದೇ ಇರುತ್ತದೆ. ಕತ್ತಲೊಡನೆ ಜಗಳವಾಡಿ ಬೆಳಕು ಗೆಲ್ಲುವುದರ ಸಂಕೇತ ದೀಪಾವಳಿ. ಬೆಳಕು ಎಲ್ಲ ಚೇತನಗಳ ಆಧಾರ ಕ್ರಿಯಾಶಕ್ತಿಯಾಗಿದೆ. ಬೆಳಕೇ ಬದುಕಾಗಿರುವ ಆ ಕರುಣಾಳು ಬೆಳಕಿನ ಆರಾಧನೆಯ ಹಬ್ಬವೇ ಈ ದೀಪಾವಳಿ.

ಜ್ಞಾನದ ಪ್ರತೀಕವಾಗಿರುವ ದೀಪ ಅಜ್ಞಾನದ ಸಂಕೇತವಾಗಿರುವ ಕತ್ತಲನ್ನು ಬಡಿದೋಡಿಸುವ ಸಾಮರ್ಥ್ಯ ಹೊಂದಿದೆ. "ಅಜ್ಞಾನದ ನಿವಾರಣೆಗಾಗಿ ಭಾರತೀಯರ ದಿನನಿತ್ಯದ ಪ್ರಾರ್ಥನೆಯೇ 'ತಮಸೋಮ ಜ್ಯೋತಿರ್ಗಮಯ' ಓ ದೇವಾ ನನ್ನನ್ನು ಕತ್ತಲಿನಿಂದ ಬೆಳಕಿನೆಡೆಗೆ ಕೊಂಡೊಯ್ಯು" (ಡಾ.ಎಚ್.ವಿ.ನರಸಿಂಹಮೂರ್ತಿ, ನಮ್ಮ ಹಬ್ಬಗಳು) ಎಂದು. ಆದ್ದರಿಂದ ಬೆಳಕಿನ ಆರಾಧಕರಾದ ಭಾರತೀಯರಿಗೆ ದೀಪಗಳ ಈ ಹಬ್ಬ ಬಹುಮುಖ್ಯವಾದುದಾಗಿದೆ.

ಶರದೃತುವಿನ ಮದ್ಯಭಾಗದಲ್ಲಿ ಬರುವ ಈ ಹಬ್ಬದ ಸಮಯ ಅನ್ನದೇವರ ಅವತಾರಕಾಲ. ಈ ಹಬ್ಬದ ವೇಳೆಗೆ ಮುಂಗಾರು ಬೆಳೆ ದವಸ ಧಾನ್ಯದ ಲಕ್ಷ್ಮಿರೂಪದಲ್ಲಿ ರೈತನ ಕೈಸೇರುತ್ತದೆ. ಆ ವೇಳೆಗಾಗಲೇ ರೈತರೆಲ್ಲರು ದುಡಿದು ಧಣಿವಾರಿಸಿಕೊಳ್ಳುವ ಸಮಯವಾಗಿರುತ್ತದೆ. ಮನೆಯವರೆಲ್ಲರೂ ಕೂಡಿ ಮನೆ-ಮನೆಯ ಮನಸ್ಸು-ಮನಸ್ಸುಗಳ ಕತ್ತಲೆಯನ್ನು ಹೋಗಲಾಡಿಸುವ ಈ ಹಬ್ಬದಲ್ಲಿ ಕುಟುಂಬದವರೆಲ್ಲ ಕೂಡಿ ಅಣ್ಣ ತಮ್ಮಂದಿರು ಅಕ್ಕ ತಂಗಿಯರೆಲ್ಲರೂ ಸೇರಿದ ಸುಮಧುರವಾದ ಮಿಲನವಾಗಿರುತ್ತದೆ. ಮನೆಮಂದಿ ಎಲ್ಲರೂ ಹೊಸ ಹೊಸ ಉಡುಪು ಧರಿಸಿ ಸಹಿ ತಿನಿಸುಗಳನ್ನು ತಯಾರಿಸಿ ಭಾರಿ ಭೋಜನವನ್ನು ಮಾಡುತ್ತಾರೆ.

ದೀಪಾವಳಿಯಲ್ಲಿ ಪ್ರಮುಖವಾಗಿ ನರಕಚತುರ್ದಶಿ ಮತ್ತು ಬಲಿಪಾಡ್ಯಮಿಯನ್ನು ವಿಶೇಷವಾಗಿ ಆಚರಿಸುತ್ತಾರೆ. "ಬಲಿಚಕ್ರವರ್ತಿ ಮಹಾದಾನ ವೀರ-ಮಹಾವಿಷ್ಣು ಭಕ್ತ ಪ್ರಹ್ಲಾದನ ಮೊಮ್ಮಗನಾದ ಅವನು ಶೋಣಿತಪುರದಲ್ಲಿ ರಾಜ್ಯವಾಳುತ್ತಿದ್ದ ಅವನಲ್ಲಿರುವ ಸದ್ಗುಣಗಳನ್ನು ವಿಷ್ಣುವು ಮೆಚ್ಚಿದ್ದ ಅಶ್ವಮೇಧಯಾಗದಲ್ಲಿ ಯಜ್ಞ ದೀಕ್ಷಿತನಾದ ಬಲಿಚಕ್ರವರ್ತಿ ಕೇಳಿದವರಿಗೆ ಕೇಳಿದ್ದನ್ನು ಕೊಟ್ಟು ಮತ್ತೆ ಕೊಡುವ ಸಂಕಲ್ಪ ಮಾಡಿದ್ದು ಮಹಾನ್‌ದಾನವ ಎನಿಸಿಕೊಂಡಿದ್ದ. ವಾಮನ ರೂಪದಲ್ಲಿ ಅಲ್ಲಿಗೆ ಬಂದ ಭಗವಂತ ಅವನಲ್ಲಿ ಮೂರು ಹೆಜ್ಜೆ ಭೂಮಿ ಬೇಡಿದ ಬಲಿಚಕ್ರವರ್ತಿ ಆಗಲಿ ಎಂದಾಗ ಭಗವಂತ ತನ್ನ ಒಂದು ಹೆಜ್ಜೆಗೆ ಇಡೀ ಆಕಾಶವನ್ನು ಮತ್ತೊಂದು ಹೆಜ್ಜೆಗೆ ಇಡೀ ಭೂಮಿಯನ್ನು ಆವರಿಸಿಕೊಂಡ. ಮೂರನೆ ಹೆಜ್ಜೆಯನ್ನು ಎಲ್ಲಿಡಲಿ ಎಂದು ಕೇಳಿದಾಗ ಎಲ್ಲೂ ಜಾಗವಿಲ್ಲದೆ ತನ್ನ ತಲೆಯ ಮೇಲಿಡು ಎಂದು ಹೇಳುತ್ತಾನೆ. ಆಗ ನರಕಾಸುರನ ತಲೆಯ ಮೇಲೆ ಮೂರನೆ ಪಾದವನ್ನಿಟ್ಟು ಬಲಿತೆಗೆದುಕೊಳ್ಳುತ್ತಾನೆ. ಅವನ ದಾನಶೂರತ್ವವನ್ನು ಮೆಚ್ಚಿದ ಮಹಾವಿಷ್ಣು ಬೇಕಾದ ವರವನ್ನು ಬೇಡು ಎಂದ. ಆಗ ಬಲಿಯು ವರ್ಷದಲ್ಲಿ ಮೂರು ದಿನ ನನ್ನ ರಾಜ್ಯವನ್ನು ನೋಡುವ ಅವಕಾಶ ಕೊಡು ಎಂದ. ಈ ಮೂರು ದಿನ ಯಾರು ದೀಪ ಬೆಳಗುತ್ತಾರೋ ಅವರ ಮನೆಯಲ್ಲಿ ನಿನ್ನ ಸಹಧರ್ಮಿಣಿ ಸ್ಥಿರವಾಗಿ ನೆಲೆಸಲಿ. ಹಾಗೇ ನನ್ನ ಮನೆಯ ಬಾಗಿಲಲ್ಲಿ ಸದಾ ನಿನ್ನ ಸಾನಿಧ್ಯವಿರಲಿ ಎಂದು ಬೇಡಿಕೊಂಡ. ಮಹಾವಿಷ್ಣು ತಥಾಸ್ತು ಎಂದ" (ವಿ.ಎನ್.ಭಟ್, ಭಾರತೀಯ ಹಬ್ಬಗಳ ವೈಶಿಷ್ಟ್ಯ) ಎಂಬ ನಂಬಿಕೆ ಇಲ್ಲಿ ಜನರಲ್ಲಿ ಇಂದಿಗೂ ಇದೆ.

ಹೀಗೆ ನಿಸ್ವಾರ್ಥತನದ ಮನಸ್ಸಿನ ಆಡಿದ ಮಾತಿಗೆ ತಪ್ಪದ ನುಡಿದಂತೆ ನಡೆವ ಬಲಿಚಕ್ರವರ್ತಿ ಇತರರ ಮೋಸದಿಂದ ತನ್ನ ಅಧಿಕಾರ ಕಳೆದುಕೊಂಡರೂ, ಆಸ್ತಿಕರ ಮನೆಗಳಲ್ಲಿ ಸದಾ ಲಕ್ಷ್ಮೀ ಸಾನಿಧ್ಯವಿರುವಂತೆ ಕೇಳಿಕೊಂಡು ಪ್ರಜಾಹಿತ ಬಯಸಿದ ಮಹಾ ವ್ಯಕ್ತಿತ್ವ ಬಲಿಯದು. ಬಲಿಚಕ್ರವರ್ತಿಯನ್ನು ಕೊಂದು ಅಲ್ಪದಲ್ಲಿ ಕಲ್ಪವನ್ನು ತೋರಿದ ದಿನವೇ ಬಲಿಪಾಡ್ಯಮಿ. ಈ ದಿನ ಯಾರು ಯಾರು ಯಾವ ಮನಸ್ಸಿನಿಂದ ಇರುತ್ತಾರೋ

ಅವರು ಇಡೀ ವರ್ಷಪೂರ್ತಿ ಅದೇರೀತಿ ಸುಖ ಅಥವಾ ದುಃಖದಿಂದ ಇರಬೇಕಾಗುತ್ತದೆ ಎಂದು ಕೆಲವರ ನಂಬಿಕೆಯಾಗಿದೆ.

ಉತ್ತರ ಭಾರತದಲ್ಲಿರುವಂತೆ ಇಲ್ಲಿ ಈ ದಿವಸ ಹಿಟ್ಟಿನಿಂದ ಅಥವಾ ಸಗಣಿಯಿಂದ ಮಾಡುವ ಬಲಿ, ಗೋವರ್ಧನ ಗಿರಿ, ಪಾಂಡವರ ಮೂರ್ತಿಗಳು ಮುಂತಾದ ಆರ್ಯ ಪರಂಪರೆಯಾಗಲೀ ಅಥವಾ ದ್ರಾವಿಡ ಪರಂಪರೆಯ ಗೋಪೂಜೆಯಾಗಲಿ ಇಲ್ಲಿನ ಜನರು ಊರು ಹಬ್ಬದಲ್ಲಿ ಮಾಡುವುದಿಲ್ಲ. ಇವರ ದೃಷ್ಟಿಯಲ್ಲಿ ಇದು ನಮಗೆಲ್ಲ ಅನ್ನಕೊಡುವ ಒಕ್ಕಲು ಮಕ್ಕಳ ಹಬ್ಬವಾಗಿದೆ. ಮಳೆಗಾಲದ ಆರ್ಭಟವೆಲ್ಲ ಕಳೆದು ಎಲ್ಲೆಡೆ ಶರಲಕ್ಷ್ಮಿಯ ಚೆಲುವೋ ಚೆಲುವು ಭೂಮಿಯ ಮೇಲೆಲ್ಲಾ ಹಾಲು ಚೆಲ್ಲಿದಂತೆ ರಾತ್ರಿಯ ಬೆಳೆದಿಂಗಳು ಕೃಷಿಕರ ಧಾನ್ಯವೆಲ್ಲ ಹೊಲಗಳಿಂದ ಮನೆಗೆ ಬಂದಿರುತ್ತದೆ. ಈ ಸಮಯದಲ್ಲಿ ಕೊಯಿಲು ಮುಗಿದ ಸಂಭ್ರಮ, ಅನ್ನ ಬ್ರಹ್ಮ ಮನೆ ತುಂಬಿರುತ್ತಾನೆ. ಆದರ ಸಂಕೇತವಾಗಿ ರೈತರು ದೀಪಾವಳಿಯಲ್ಲಿ ಧಾನ್ಯಲಕ್ಷ್ಮಿಯನ್ನು ದೀಪ ಹಚ್ಚಿ ಪೂಜೆ ಮಾಡುವುದೂ ಉಂಟು.

ಈ ಭಾಗದ ಪ್ರದೇಶದಲ್ಲಿ ದೀಪಾವಳಿಯನ್ನು 'ಧೂಪದ ಸಾವೆ' ಎಂದೂ ಕೂಡ ಕರೆಯುತ್ತಾರೆ. ಇಲ್ಲಿ ಹಬ್ಬದ ದಿನ ಎಲ್ಲರ ಮನೆಯಲ್ಲಿಯು ಸಡಗರ ಸಂಭ್ರಮದಿಂದ ಪಟಾಕಿ ಸಿಡಿಸಿ ಸಿಹಿತಿಂದು ಸಂತೋಷಪಡುತ್ತಾರೆ. ಮಹಾದೇಶ್ವರನ ಒಕ್ಕಲಿನವರು ಮಾತ್ರ ಎಲ್ಲರು ಒಟ್ಟುಗೂಡಿ ಪ್ರತಿಮನೆಯಲ್ಲಿ ಇಂತಿಷ್ಟು ಹಣವನ್ನು ವಿಶೇಷ ಪೂಜೆ ಪುನಸ್ಕಾರಗಳನ್ನು ಮಾಡುತ್ತಾರೆ. ಈ ಸಂದರ್ಭದಲ್ಲಿ ಪಂಜಿನ ಸೇವೆಯನ್ನು ಮಾಡುತ್ತಾರೆ. ಸಂಗ್ರಹಿಸಿದ ಹಣದಿಂದ ಹಬ್ಬದ ದಿನ ಮುಂಜಾನೆ ಎದ್ದು ಎಲ್ಲರೂ ಸ್ನಾನ ಮಡಿಮಾಡಿ ಪೇಟೆಗೆ ಹೋಗುತ್ತಾರೆ. ಅಲ್ಲಿ ಹಬ್ಬಕ್ಕೆ ಬೇಕಾದ ಎಲ್ಲ ಸಾಮಾನುಗಳನ್ನು ಕರೀದಿಸಿ ತರುತ್ತಾರೆ. ಪೂಜೆಗೆ ಬೇಕಾದ ಪೂಜಾ ಸಾಮಗ್ರಿಗಳೆಲ್ಲವನ್ನು ತಂದು ಬಹುಮುಖ್ಯವಾಗಿ ಪಂಜಿನಸೇವೆಗೆ ಬೇಕಾದ ಪಂಜು, ಧೂಪ, ಧೂಪಾರ್ಥಿ, ಸಾಮ್ರಾಣಿ, ಕರ್ಪೂರ, ಗಂಧದಕಡ್ಡಿ ಮರೆಯದೆ ತರುತ್ತಾರೆ. ಒಂದೆರಡು ಚೀಲ ಕಡಲೆಪುರಿ, ಹಣ್ಣುಗಳನ್ನು ತರುತ್ತಾರೆ. ಜೊತೆಗೆ ಪಟಾಕಿ, ಮದ್ದು, ಗುಂಡು ತಂದು ಸಂಜೆ ಸೂರ್ಯ ಮುಳುಗಿದ ನಂತರ ಮೆರವಣಿಗೆ ಮಾಡುತ್ತಾರೆ. ಮೆರವಣಿಗೆಯಲ್ಲಿ ಮಾದೇಶ್ವರನ ಗದ್ದುಗೆ, ದೂಪಾರ್ತಿ, ಪಂಜು, ಮತ್ತು ಹೆಣ್ಣು ಮಕ್ಕಳು ಆರತಿಯನ್ನು ಹಿಡಿಯುತ್ತಾರೆ. ಇಡೀ ಊರಲ್ಲಿ ಮೆರವಣಿಗೆ ಮಾಡುತ್ತಾರೆ. ಪ್ರತಿಮನೆಯವರು ಆರತಿ ಕೊಡುತ್ತಾರೆ. ಮೆರವಣಿಗೆ ಉದ್ದಕ್ಕೂ ಧೂಪಸಾಮ್ರಾಣಿಯ ಹೊಗೆ ದಟ್ಟೈಸುತ್ತದೆ. ಮೆರವಣಿಗೆಯುದ್ದಕ್ಕೂ ಮಹಾದೇಶ್ವರನ ಹಾಡುಗಳನ್ನು ಹಾಡುತ್ತಾರೆ. ತಮಟೆ, ನಗಾರಿ, ವಾದ್ಯಗಳೊಂದಿಗೆ ಪಟಾಕಿಸಿಡಿಸಿ ಹರ್ಷದಿಂದ ಕುಣಿದು ಊರಿನವರೆಲ್ಲರೂ ಸಂತೋಷಪಡುತ್ತಾರೆ. ಮೆರವಣಿಗೆ ಮುಗಿದನಂತರ ದೇವರ ಮನೆಯಲ್ಲಿಗೆ ಬಂದು ದೇವರನ್ನು ಇಳಿಸಿ ದೇವರ ಮನೆಯ ಹಜಾರದಲ್ಲಿ ತಾವು ತಂದಂತಹ ಪ್ರಸಾದ ಪದಾರ್ಥಗಳನ್ನು ರಾಶಿಹಾಕುತ್ತಾರೆ. ದೇವರನ್ನು ಒಡ್ಡಿ ಪೂಜೆ ಮಾಡುತ್ತಾರೆ. ದೇವರ ಎದುರಿಗೆ ಕಡಲೆಪುರಿ ಮತ್ತು ಹಣ್ಣುಗಳ ರಾಶಿಹಾಕಿ ಪಂಜಿನ ಸೇವೆ ಮಾಡುತ್ತಾರೆ.

ಪಂಜಿನ ಸೇವೆಯನ್ನು ಮೆರವಣಿಗೆ ಮುಗಿದ ನಂತರ ದೇವರ ಮನೆಯ ಮುಂದೆ ಮೊಳದುದ್ದ ನಾಲ್ಕು ಚಿಕ್ಕ ಚಿಕ್ಕ ಪಂಜುಗಳನ್ನು ತಂದಿರುತ್ತಾರೆ. ಅವುಗಳನ್ನು ಹೊತ್ತಿಸಿ ಎರಡೆರಡು ಪಂಜುಗಳನ್ನು ಜೊತೆಮಾಡಿ ಎರಡೂ ಕೈಗಳಲ್ಲಿ ಹಿಡಿದು ದೇವರ ಗುಡ್ಡರು ಬಾಯಿಗೆ ಬಟ್ಟೆಕಟ್ಟಿ ಮನಸ್ಸಿನಲ್ಲೇ ಮಾದೇವನನ್ನು ನೆನೆಯುತ್ತಾ

ನಾಲ್ಕು ದಿಕ್ಕಿಗೂ ನಡುಬಾಗಿಸಿ ಭೂಮಿಗೂ ಆಕಾಶಕ್ಕೂ ಪಂಜುಹಿಡಿದು ಬೆಳಗುತ್ತಾರೆ. ನಂತರ ಎಲ್ಲರಿಗೂ ವಿಭೂತಿ ತಿಲಕವನ್ನಿಟ್ಟು ಮಾದೇಶ್ವರನಿಗೆ ಎಲ್ಲರೂ ಒಕ್ಕೊರಲಿನಿಂದ ಉಘೇ ಹೇಳುತ್ತಾರೆ.

ಆನುಮಲೇ ಜೇನುಮಲೆ ಎಪ್ಪತ್ತೇಳು ಮಲೆಯಲ್ಲಿ

ನಲಿದು ನಾಟ್ಯವಾಡ್ತಕಂತ ನಮ್ಮಪ್ಪ

ಮಾದಪ್ಪನ ಪಾದಕ್ಕೆ ಒಂದು ಸಾರಿ

ಉಘೇ ಅನ್ನಿ.....

ಉಘೇ.... ಉಘೇ.....

ಹೀಗೆ ಮಾದಪ್ಪನ ಗುಣಗಾನ ಮಾಡಿ ಎಲ್ಲ ಭಕ್ತರು ಒಕ್ಕೊರಲಿನಿಂದ ಉಘೇ ಹೇಳುತ್ತಾರೆ. ನಂತರ ನೆರೆದಿದ್ದ ಎಲ್ಲಾ ಭಕ್ತರಿಗೂ ಪ್ರಸಾದವನ್ನು ವಿನಿಯೋಗ ಮಾಡುತ್ತಾರೆ. ನಂತರ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ತೆರಳುತ್ತಾರೆ. ದೀಪಾವಳಿಯಲ್ಲಿ ಅವರವರ ಕುಲದೇವತೆಯ ಹೆಸರಿನಲ್ಲಿ ದೀಪ ಮತ್ತು ಧೂಪದ ಸೇವೆ ನಡೆಯುವುದು ಇಲ್ಲಿನ ಮತ್ತೊಂದು ವಿಶೇಷ.

ದೀಪಾವಳಿ ಎಂದರೆ ಇಲ್ಲಿನ ಜನರಲ್ಲಿ ಹುಡುಗರಲ್ಲಿ ಮಕ್ಕಳಲ್ಲಿ ಪಟಾಕಿ ಹಬ್ಬ ಎಂದೇ ಗುರುತಿಸುತ್ತಾರೆ. ಪಟಾಕಿ ಸಿಡಿಸುವುದು ಇಲ್ಲಿನ ಯುವಕ ಯುವತಿಯರ ಬಹುಮುಖ್ಯ ಧ್ಯೇಯವಾಗಿದೆ. ಮನೆಯ ಹಿರಿಯರು ಕೂಡ ದೀಪಾವಳಿ ಹಬ್ಬಕ್ಕೆ ಮೀಸಲಾಗಿ ಪಟಾಕಿಚೀಟಿಯನ್ನು ಹಾಕುವುದು ಇಲ್ಲಿ ಸರ್ವೇಸಾಮಾನ್ಯವಾಗಿದೆ. ಪ್ರತಿವರ್ಷ ಪಟಾಕಿ ಹೊಡೆದು ಹಬ್ಬ ಮುಗಿದನಂತರ ಮುಂಬರುವ ವರ್ಷಕ್ಕೆ ಪಟಾಕಿ ಹೊಡೆಯಲು ಈ ವರ್ಷವೇ ಚೀಟಿಹಾಕುತ್ತಾರೆ. ಚೀಟಿ ಅಂದರೆ ತಿಂಗಳಿಗೆ ಇಂತಿಷ್ಟು ಎಂದು ಹಣವನ್ನು ಕಟ್ಟುತ್ತಾರೆ. ಹೀಗೆ ಹನ್ನೆರಡು ತಿಂಗಳು ಸ್ವಲ್ಪ ಸ್ವಲ್ಪ ಹಣವನ್ನು ಕಟ್ಟಿ ವರ್ಷದ ಕೊನೆಯ ಕಂತಿನ ಹೊತ್ತಿಗೆ ಪಟಾಕಿ ಮತ್ತು ಜೊತೆಗೆ ಒಂದು ವಿಶೇಷವಾದ ವಸ್ತುವನ್ನು ನೀಡುತ್ತಾರೆ. ತಾಮ್ರ ಅಥವಾ ಹಿತ್ತಾಳೆ ಹಂಡೆ ಮತ್ತು ಬಿಂದಿಗೆ ಅಥವಾ ಚಿಕ್ಕದಾದ ಬೆಳ್ಳಿಯ ದೀಪ ಇತ್ಯಾದಿಗಳನ್ನು ನೀಡುತ್ತಾರೆ. ಹಬ್ಬದ ದಿನ ಪಟಾಕಿ ಖರೀದಿಸಲು ಹೆಚ್ಚು ಹಣ ನೀಡಬೇಕು ಮತ್ತು ಒಂದೇ ಬಾರಿಗೆ ಅಷ್ಟು ಹಣ ಒದಗಿಸಲು ಸಾಧ್ಯವಾಗದೇ ಇರುವುದರಿಂದ ಹಲವು ಕಂತುಗಳಲ್ಲಿ ಸ್ವಲ್ಪ ಹಣ ಕಟ್ಟುವ ಸುಲಭ ಮತ್ತು ಹೆಚ್ಚು ಹೊರೆ ಎನಿಸದ್ದರಿಂದ ತುಂಬಾ ಸುಲಭವಾಗಿದೆ. ಹೀಗೆ ದೀಪಾವಳಿ ಹಬ್ಬವನ್ನು ಜನರು ವಿವಿಧ ಆಚರಣೆ ಮೂಲಕ ನಡೆಸುತ್ತಾರೆ.

ಯುಗಾದಿ

ಯುಗಾದಿ ಹಬ್ಬ ಇಲ್ಲಿನ ಜನರಿಗೆ ಬಲು ಪ್ರಿಯವಾದ ಹಬ್ಬವಾಗಿದೆ. ಸುದೀರ್ಘವಾದ ಅಂಧಕಾರ ಮತ್ತು ಶೀತಕಾಲ ಕಳೆದು ಸಂತೋಷಪ್ರದವಾದ, ಎಲ್ಲೆಲ್ಲೂ ವಸಂತ ಋತುವಿನಿಂದ ಚಿಗುರಿನಿಂತ ಮರಗಿಡಗಳು ಹೊಸತನ ಬೀರುವ ಕಾಲವೇ ಯುಗಾದಿ ಹಬ್ಬದ ಸಂಕೇತ. ಇದು ನಿದ್ರಿಸುತ್ತಿರುವ ಭೂಮಿತಾಯಿಯನ್ನು ಎಚ್ಚರಿಸುವ ಹಬ್ಬವಾಗಿದೆ. ಋತುಗಳ ರಾಜನೆಂದೇ ಕರೆಯುವ ವಸಂತನಿಗೆ ಸ್ವಾಗತವನ್ನು ಹೇಳುವ ಸುದಿನವಾಗಿದೆ.

ಯುಗಾದಿ ಎಂದಕೂಡಲೇ ನಮಗೆ ನೆನಪಾಗುವುದು ಬೇವು-ಬೆಲ್ಲ. ಬೇವು-ಬೆಲ್ಲ ಬದುಕಿನ ಪ್ರತಿಬಿಂಬಗಳಂತಿವೆ. ಬೇವಿನ ಚಿಗುರಿನ ಕಹಿ ಬೆಲ್ಲದ ಸಿಹಿ ಇವೆರಡು ಬದುಕಿನ ನೋವು-ನಲಿವಿನ ಸಂಕೇತಗಳು.

ದೃಷ್ಟ-ಅದೃಷ್ಟಗಳ ಪ್ರತಿಬಿಂಬ. ಹಿಂದೆ ನಡೆದ ದುಃಖದ ಘಟನೆಗಳನ್ನು ಅರಗಿಸಿಕೊಂಡು ಇಂದಿನ ಸುಖದ ಸವಿಯನ್ನು ಸವಿಯಲು ಯೋಗಬೇಕು. "ನಮ್ಮ ನಾಲಿಗೆ ಸಿಹಿ ಬೇಕು ಕಹಿಬೇಡ ಎನ್ನುತ್ತದೆ, ಆದರೆ ನಾಲಿಗೆಗೆ ಸಿಹಿಯಾದುದು ಹೊಟ್ಟೆಸೇರಿ ಜೀರ್ಣವಾಗುವ ಹೊತ್ತಿಗೆ ಶರೀರಕ್ಕೆ ಕಹಿಯಾದೀತು ಹಾಗೆಯೇ ನಾಲಿಗೆಯ ತುದಿಗೆ ಕಹಿಯಾದ ವಸ್ತು ಮುಂದೆ ಪರಿಣಾಮದಲ್ಲಿ ಸಿಹಿಯನ್ನು ಹಿತವನ್ನು ಉಂಟುಮಾಡುವುದು" (ಡಾ.ಎಚ್.ವಿ.ನರಸಿಂಹಮೂರ್ತಿ, ನಮ್ಮ ಹಬ್ಬಗಳು). ಈ ದೃಷ್ಟಿಯನ್ನು ಇಟ್ಟುಕೊಂಡು ಸಿಹಿ-ಕಹಿಗಳೆರಡನ್ನು ಯುಕ್ತ ಪ್ರಮಾಣದಲ್ಲಿ ಉಚಿತ ಕಾಲಗಳಲ್ಲಿ ಸೇವಿಸುವುದು ಜಾಣತನ. ಆದ್ದರಿಂದ ಬೇವು-ಬೆಲ್ಲ ಎರಡನ್ನು ಜೊತೆಗೆ ತಿನ್ನುತ್ತಾರೆ.

ಯುಗಾದಿ ಹಬ್ಬವನ್ನು ಇಲ್ಲಿ ಎ[illegible]ಡು ದಿನಗಳ ಕಾಲ ಆಚರಿಸುತ್ತಾರೆ. ಮೊದಲ ದಿನ ಸಿಹಿ ಊಟ ಮತ್ತು ಎರಡನೆಯ ದಿನ ಮಾಂಸಾಹಾರದ ಊಟದ ಜೊತೆಗೆ ಚಂದು (ಚಂದ್ರ)ನ ನೋಡುವುದು. ಯುಗಾದಿಯ ಮೊದಲದಿನ ಮುಂಜಾನೆ ಭಗವಂತನನ್ನು ಸ್ಮರಿಸುತ್ತಾ ಎದ್ದು ಮನೆಯವರೆಲ್ಲರೂ ಎಣ್ಣೆ ಅಭ್ಯಂಜನ ಸ್ನಾನ ಮಾಡುತ್ತಾರೆ. ಪುರುಷರು ವಿಶೇಷವಾಗಿ ಹರಳೆಣ್ಣೆಯನ್ನು ದೇಹಕ್ಕೆ ಹಚ್ಚಿಕೊಂಡು ಸ್ವಲ್ಪ ಸಮಯ ಬಿಸಿಲು ಕಾದು ಎಣ್ಣೆಸ್ನಾನ ಮಾಡುತ್ತಾರೆ. ಎಲ್ಲರೂ ಹೊಸ ಹೊಸ ಉಡುಪು ಧರಿಸುತ್ತಾರೆ. ಸ್ತ್ರೀಯರೆಲ್ಲರೂ ಮನೆಯಲ್ಲಿ ಅಡುಗೆ ಕೆಲಸದಲ್ಲಿ ಭಾಗಿಯಾದರೆ ಪುರುಷರು ಮನೆಬಾಗಿಲುಗಳಿಗೆ ಹಸಿರು ತೋರಣ ಕಟ್ಟುವುದು ಬಾಳೆ ಎಲೆ ತರುವುದು ಇತ್ಯಾದಿ ಕೆಲಸಗಳಲ್ಲಿ ತೊಡಗುತ್ತಾರೆ. ಮಾವಿನ ಸೊಪ್ಪನ್ನು ತಂದು ಎಲೆಗಳನ್ನು ಬಿಡಿಸಿ ಪ್ರತಿ ಎಲೆಯನ್ನು ಅರ್ಧಕ್ಕಿಂತ ಸ್ವಲ್ಪ ಕಡಿಮೆ ಭಾಗಕ್ಕೆ ತೊಟ್ಟಿನ ಕಡೆಯಿಂದ ಮಡಿಚಿ ದಾರಕ್ಕೆ ಪೋಣಿಸುತ್ತಾರೆ. ಬಾಗಿಲುಗಳ ಅಳತೆಗೆ ಸರಿಯಾದಷ್ಟು ಪೋಣಿಸಿ ಮನೆಯ ಪ್ರತಿಬಾಗಿಲುಗಳಿಗೆ ಕಟ್ಟುತ್ತಾರೆ.

ಬಾಗಿಲ ಎರಡೂ ಕಡೆಗೆ ಬೇವಿನಸೊಪ್ಪು ಜೊತೆಗೆ ಮಾವಿನ ಸೊಪ್ಪನ್ನು ಕಟ್ಟುತ್ತಾರೆ. ಹಾಗೆಯೇ ವಿಶೇಷವಾಗಿ ಕಕ್ಕೆಯ ಹೂವನ್ನು ತರುವುದು ಈ ಹಬ್ಬದ ವಿಶೇಷ. ಕಕ್ಕೆಯ ಹೂ ಅರಿಶಿಣದ ಬಣ್ಣದಿಂದ ಕೂಡಿದ್ದು ಸುಗಂಧಭರಿತವಾಗಿರುತ್ತದೆ. ಹೂವಿನ ರೆಕ್ಕೆ ಸುಮಾರು ಒಂದು ಮೊಳಕ್ಕಿಂತಲೂ ಉದ್ದವಾಗಿರುತ್ತದೆ. ಒಂದು ರೆಕ್ಕೆತುಂಬ ಸುತ್ತಲೂ ಹೂವಿನ ಎಲೆಗಳಗುಚ್ಛ ಹರಡಿಕೊಂಡು ಹೂವಿನ ಧಳವನ್ನು ಹೊರಚಾಚಿರುತ್ತದೆ. ಕಕ್ಕೆಮರ ಹೂಬಿಟ್ಟಾಗ ಹಸಿರಿನಿಂದ ಕೂಡಿದ ಎಲೆಗಳೇ ಇರುವುದಿಲ್ಲ. ಎಲೆಗಿಂತಲೂ ಹೆಚ್ಚಾಗಿ ಹೂ ತುಂಬಿರುತ್ತದೆ. ಅರಿಸಿಣಬಣ್ಣದ ಚಾಮರಗಳನ್ನು ಮರದ ತುಂಬೆಲ್ಲ ನೇತುಹಾಕಿದಂತೆ ಕಾಣುತ್ತದೆ. ಇಡೀ ಮರವೇ ಅರಿಶಿಣಬಣ್ಣದಿಂದ ಕೂಡಿದ್ದು ದೂರದಿಂದಲೇ ಎಲ್ಲರನ್ನು ತನ್ನತ್ತ ಆಕರ್ಷಿಸುತ್ತದೆ. ಈ ಹೂವನ್ನು ತಂದು ಬಾಗಿಲ ತೋರಣಕ್ಕೆ ಇಕ್ಕೆಲಗಳಲ್ಲಿ ಕಟ್ಟುತ್ತಾರೆ. ಮತ್ತು ಪೂಜೆಗೆ ಈ ಹೂವನ್ನೇ ಬಳಸುತ್ತಾರೆ. ಆದರೆ ಇತ್ತೀಚೆಗೆ ಈ ಹೂ ಸಿಗದೇ ಹೋದರೆ ಪೇಟೆಯಲ್ಲಿ ಸಿಗುವ ಹೂಗಳನ್ನೇ ಪೂಜೆಗೆ ಬಳಸುತ್ತಾರೆ.

ಮುತ್ತುಕದ ಎಲೆ ಈ ಹಬ್ಬದಲ್ಲಿ ಬಳಸುವ ವಿಶೇಷವಾದ ವಸ್ತುಗಳಲ್ಲಿ ಇದು ಒಂದು. ಮನೆಯಲ್ಲಿ ಮಾಡುವ ಕೋಸಂಬರಿ ಪಲ್ಯಗಳನ್ನು ಈ ಎಲೆಗಳಲ್ಲಿ ತಿನ್ನುವುದು ವಾಡಿಕೆಯಾಗಿದೆ. ಎಲ್ಲಾ ಕೆಲಸಗಳು ಮುಗಿದ ಮೇಲೆ ಪೂಜೆಮಾಡುವುದು ಹಿರಿಯೋರಿಗೆ ಎಡೆ ಇಕ್ಕುವುದು ಮುಖ್ಯವಾದ ಭಾಗ. ತಾವು ಮಾಡಿದಂತಹ ಅಡುಗೆಯನ್ನು ಸ್ವಲ್ಪ ಸ್ವಲ್ಪ ಭಾಗವನ್ನು ತೆಗೆದು ಮೀಸಲಿಟ್ಟು ನಂತರ ಎಲ್ಲರೂ ಊಟ ಮಾಡುತ್ತಾರೆ. ಆ

ತೆಗೆದಿಟ್ಟ ಅಡುಗೆಯನ್ನು ತಮ್ಮ ಹೊಲ, ತೋಟಗಳ ಹತ್ತಿರವಿರುವ ಹಿರಿಯರ ಘೋರಿ (ಸಮಾದಿ)ಗಳಲ್ಲಿ ಹೋಗಿ ಅಲ್ಲಿ ಎಲ್ಲವನ್ನು ಸ್ವಚ್ಛಗೊಳಿಸಿ ಸಗಣಿ ನೀರು ಹಾಕಿ ರಂಗೋಲಿಬಿಟ್ಟು ಬಾಳೆ ಎಲೆ ಮೇಲೆ ಎಡೆ ಇಕ್ಕಿ ಪೂಜೆಮಾಡುತ್ತಾರೆ. ಮೊದಲ ದಿನ ಹೋಳಿಗೆ ಒಬ್ಬಟ್ಟಿನ ಊಟ ಎಲ್ಲೆಡೆ ಸಾಮಾನ್ಯ. ನಂತರದ ಮಾರನೆಯ ದಿನ ವರ್ಷತೊಡುಕು ಎಂದು ಕರೆಯುತ್ತಾರೆ. ಈ ದಿನ ಸಾಮಾನ್ಯವಾಗಿ ಲಿಂಗಾಯಿತ ಮನೆಯವರು ಬಿಟ್ಟು ಉಳಿದ ಎಲ್ಲರೂ ಮಾಂಸದ ಅಡುಗೆ ತಯಾರಿಸುತ್ತಾರೆ. ಸಂಜೆ ಮತ್ತೆ ಸಮಾಧಿಗಳ ಹತ್ತಿರ ಹೋಗಿ ಮಾಡಿದ್ದ ಎಲ್ಲಾ ತರದ ಅಡುಗೆಯನ್ನು ಎಡೆ ಇಕ್ಕಿ ಸತ್ತ ಹಿರಿಯರಿಗೆ ಸೇಂದಿ ಕುಡಿಯುವ ಅಭ್ಯಾಸ ಇದ್ದಿದ್ದರೆ ಅದನ್ನು ಎಡೆಗೆ ಇಟ್ಟು ಪೂಜೆ ಮಾಡುತ್ತಾರೆ. ಸತ್ತಿರುವಂತ ಹಿರಿಯರು ವರ್ಷಕ್ಕೊಮ್ಮೆ ಬಂದು ತಮ್ಮ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳುತ್ತಾರೆ ಎಂದು ಇಲ್ಲಿನ ಜನರ ನಂಬಿಕೆ. ಆದ್ದರಿಂದ ತಮ್ಮ ಹಿರಿಯರ ಆಸೆ, ಇಷ್ಟಗಳನ್ನು ಅರಿತಿರುವ ಇವರು ಅವರಿಗೆ ಬೇಕಾದ ಇಷ್ಟವಾದ ಪದಾರ್ಥಗಳನ್ನು ತಂದು ಎಡೆಗೆ ಇಡುತ್ತಾರೆ. ಲಿಂಗಾಯಿತರು ಮತ್ತು ಬ್ರಾಹ್ಮಣರು ಮಾಂಸಾಹಾರ ಮಾಡದೆ ಮೊದಲ ದಿನವೇ ಶಾಖಾಹಾರ ಮಾಡಿ ತಮ್ಮ ಹಿರಿಯರಿಗೆ ಎಡೆ ಇಡುತ್ತಾರೆ.

ವರ್ಷತೊಡುಕಿನ ಸಂಜೆ ಪಂಚಾಂಗ ಶ್ರವಣ ಚಂದ್ರೋದಯ ಕಾಲದಲ್ಲಿ ಪಶ್ಚಿಮ ದಿಗಂತದಲ್ಲಿ ಮೂಡಿಬರುವ ಅಸ್ಪಷ್ಟವಾಗಿ ಒಂದು ಗೆರೆಯಾಕಾರದಲ್ಲಿ ಅರ್ದ ಚಂದ್ರಾಕೃತಿಯನ್ನು ಕಂಡು ನಮಿಸುವುದು. ಆದರೆ ಕೈಬೆರಳಿನಿಂದ ಆ ಚಂದ್ರನನ್ನು ತೋರಿಸಿ ಗುರುತಿಸುವಂತಿಲ್ಲ. ನೋಡಿದ ತಕ್ಷಣ ಗಂಧದ ಕಡ್ಡಿ ಹತ್ತಿಸಿ ಕೈಮುಗಿಯುತ್ತಾರೆ. ಆ ಚಂದ್ರ ಯಾವಕಡೆ ಬಾಗಿರುತ್ತಾನೆ ಯಾವ ಕಡೆ ಮೇಲಕ್ಕೇರಿರುತ್ತಾನೆ ಎನ್ನುವುದರ ಮೂಲಕ 'ಅನ್ನದಕೋಡು' ಮತ್ತು 'ಹಣದ ಕೋಡನ್ನು' ನಿರ್ಧರಿಸುತ್ತಾರೆ. ಎಡಗಡೆ ಮೇಲೆದ್ದು ಬಲಗಡೆ ಕೆಳಗಿದ್ದರೆ ಅದು ಅನ್ನದ ಕೋಡು ಎಂದು, ಈ ವರ್ಷ ಮಳೆ ಬೆಳೆ ಚೆನ್ನಾಗಿ ಆಗುತ್ತದೆ ಎಂದು ತಿಳಿಯುತ್ತಾರೆ. ಒಂದು ವೇಳೆ ಬಲಗಡೆ ಮೇಲಿದ್ದು ಎಡಗಡೆ ಕೆಳಗೆ ಇಳಿದಿದ್ದರೆ ಹಣದಕೋಡು ಎಂದು ನಿರ್ಧರಿಸುತ್ತಾರೆ. ಈ ವರ್ಷ ಮಳೆಬೆಳೆ ಸರಿಯಾಗಿ ಆಗುವುದಿಲ್ಲ ಎಂದೇ ಜನಪದರ ನಂಬಿಕೆಯಾಗಿದೆ.

ಸಂಜೆ ಚಂದ(ಚಂದ್ರ)ನ್ನು ನೋಡಿದ ನಂತರ ತಮ್ಮ ತಮ್ಮ ಹೊಲಗಳಲ್ಲಿ ರಾಗಿ ಒಕ್ಕಲು ಮಾಡಿದ್ದ ಕಣಗಳಲ್ಲಿ ಮೇಟಿಯನ್ನು ಕಿತ್ತು ಗುರುತಿಗೆ ಆ ಜಾಗಕ್ಕೆ ಒಂದು ಕಲ್ಲನ್ನು ನೆಟ್ಟು ಮನೆಗೆ ಬರುತ್ತಾರೆ. ರಾತ್ರಿ ಊಟವಾದ ಮೇಲೆ ಪ್ರತಿಯೊಂದು ಮನೆಗಳ ಮೇಲೆ ಹುಣಸೆಹಳ್ಳು(ಬೀಜ)ವನ್ನು ಎಸೆಯುವ ಸಂಪ್ರದಾಯ ಇದೆ. ಊರಿನಲ್ಲಿನ ಗಂಡು ಮತ್ತು ಹೆಣ್ಣು ಮಕ್ಕಳು, ಹಿರಿಯರು, ಕಿರಿಯರು ಎಲ್ಲರೂ ಸೇರಿ ತಮಗೆ ವರಸೆ ಆಗುವಂತಹ ಅಂದರೆ ಅತ್ತೆಯ ಅಥವಾ ಮಾವನ ಮನೆಯ ಮೇಲೆ ಹುಣಸೆ ಬೀಜವನ್ನು ಎಸೆಯುತ್ತಾರೆ. ಅತ್ತೆಯ ಮಗಳಿದ್ದರೆ ಮಾವನ ಮಗ ಹೋಗಿ ಅವರ ಮನೆ ಮೇಲೆ ಹಳ್ಳನ್ನು ಎಸೆಯುತ್ತಾನೆ. ಹೆಣ್ಣುಮಕ್ಕಳು ಹಾಗೆಯೆ ಮಾಡುತ್ತಾರೆ. ಇದು ಅತ್ತೆಯ ಮತ್ತು ಮಾವನ ಮಕ್ಕಳಿಗೆ ಮದುವೆಯಾಗಲಿ ಎಂಬ ಆಶಯ ನಂಬಿಕೆ ಇದೆ. ಅಳಿಯ ಆಗುವವನಿಗೆ ಅತ್ತೆ ಮತ್ತು ಅತ್ತೆಯ ಮಗಳು ನೀರನ್ನು ಎರಚುತ್ತಾರೆ.

ಹೀಗೆ ಹಲವು ನಂಬಿಕೆ ಸಂಪ್ರದಾಯಗಳಿಂದ ಕೂಡಿರುವ ಯುಗಾದಿ ಹಬ್ಬವು ವೈಜ್ಞಾನಿಕ ದೃಷ್ಟಿಯಲ್ಲಿ ಆಯುರ್ವೇದದ ಪ್ರಕಾರ ವರ್ಷಾಂತಕಾಲದಲ್ಲಿ ತಲೆದೋರುವ ಶಾರೀರಿಕ ರೋಗ-ರುಜಿನಗಳಿಗೆ

ದಿವ್ಯೌಷದವಾಗಿರುತ್ತದೆ. "ಬೇವು-ಬೆಲ್ಲವನ್ನು ತಿನ್ನುವುದು ವೈಜ್ಞಾನಿಕ ದೃಷ್ಟಿಯಿಂದಲೂ ಬಹುಮುಖ್ಯ. ಏಕೆಂದರೆ ಬೇವು ಕ್ರಿಮಿನಾಶಕ, ಉಷ್ಣತೆಯನ್ನು ತಗ್ಗಿಸಿ ಮೈಗೆ ತಂಪು ಒದಗಿಸುವ ಶಕ್ತಿಯೂ ಅದಕ್ಕಿದೆ. ಇದರ ಜೊತೆಗೆ ಸ್ವಲ್ಪ ಉಷ್ಣಗುಣದ ಬೆಲ್ಲವೂ ಸೇರಿದರೆ ದೇಹದಲ್ಲಿ ಸಮತೋಲನ ಸಾದಿಸಲು ಸಾಧ್ಯ. ಶತಾಯುವಾಗಿ ವಜ್ರಕಾಯವನ್ನು ಹೊಂದಿ ಸರ್ವಸಂಪತ್ತು ಪಡೆದು ಸರ್ವಾರಿಷ್ಟಗಳನ್ನು ನಾಶಪಡಿಸಿ ಸುಖವಾಗಿರುವುದಕ್ಕಾಗಿ ಬೇವಿನ ಚಿಗುರೆಲೆಗಳು ತಕ್ಷಣ ಅತ್ಯಾವಶ್ಯಕ" (ಡಾ.ಎಚ್.ವಿ.ನರಸಿಂಹಮೂರ್ತಿ, ನಮ್ಮ ಹಬ್ಬಗಳು, ಪುಟ.೨೭). ಆದ್ದರಿಂದ ಹಳೆಯ ಕ್ಷಣ ಕಳೆದು, ಹೊಸ ಕ್ಷಣ ಮೂಡುವಾಗ ಅದೂ ಒಂದು ಯುಗಾದಿಯೇ. ಹಾಗಾಗಿ ಹೊಸ ವರುಷ ಹೊಸ ಹರುಷದ ಸಂಕೇತ ಪಂಚಾಂಗದ ಹೊಸ ಪುಟವನ್ನು ತೆರೆಯುವಂತೆ ನಮ್ಮ ಬಾಳಿನಲ್ಲಿಯೂ ಹೊಸ ಪುಟವನ್ನು ತೆರೆಯಬೇಕು. ಹೊಸ ಪರಿವರ್ತನೆ ಮೂಡಿಬರಬೇಕು.

ಗಣೇಶ ಚತುರ್ಥಿ

ಭಾದ್ರಪದ ಶುದ್ಧ ಚತುರ್ಥಿ ಹಿಂದುಗಳಿಗೆ ಗಣಪತಿಯ ಹಬ್ಬದ ದಿನ. ಅಂದು ಈ ದೇವರಿಗೆ ವರ್ಷದಲ್ಲೇ ವಿಶೇಷವಾದ ವಾರ್ಷಿಕ ಪೂಜೆ ಇಡೀ ದೇಶದಾದ್ಯಂತ ನಡೆಯುತ್ತಿರುತ್ತದೆ. ಕಬ್ಬಾಳು ಗ್ರಾಮ ಕೂಡ ಇದರಿಂದ ಹೊರತಾಗಿಲ್ಲ. ಈ ದಿನ ಹಿರಿಯ ಕಿರಿಯರಿಂದ ಎಲ್ಲರೂ ಕೂಡಿ ಮಣ್ಣಿನಿಂದ ಮಾಡಿದ ಬಣ್ಣ ಬಣ್ಣದ ಗಣಪತಿ ಮೂರ್ತಿಯನ್ನಿಟ್ಟು ಪೂಜಿಸುತ್ತಾರೆ. ಭಾರತದಲ್ಲಿ ಎಲ್ಲಾ ಹಿಂದೂಗಳಿಗೂ ಈ ಮಣ್ಣಿನ ಮಗನಾದ ಗಣಪ ಆಧರಣೀಯ.

ಗಣೇಶ ಚತುರ್ಥಿ ಭಾದ್ರಪದ ಮಾಸದ ಅಂದರೆ ಆಗಸ್ಟ್ ಸೆಪ್ಟೆಂಬರ್ ತಿಂಗಳಲ್ಲಿ ಬರುತ್ತದೆ. ಈ ವೇಳೆಗಾಗಲೇ ಮಳೆಗಾಲ ಮುಗಿದು ಬಹುತೇಕ ಕಡೆ ನಾಟಿ, ಬಿತ್ತನೆಯಂತ ಕೆಲಸಗಳು ಮುಗಿದಿರುತ್ತವೆ. ಆ ಪೈರು-ಪಚ್ಚೆ ಸಮೃದ್ಧವಾಗಿ ಬೆಳೆಯಲಿ ಎಂಬ ಹರಕೆಯೊಂದಿಗೆ ಪೃಥ್ವೀ ಸ್ವರೂಪದ ಗಣಪತಿಗೆ ಪೂಜೆ ಸಲ್ಲಿಸುತ್ತಾರೆ. ಶ್ರಾವಣ ಕಳೆದ ಅನಂತರ ಬರುವ ಭಾದ್ರಪದ ಮಾಸದ ಚತುರ್ಥಿಯ ದಿನವೇ ಗಣೇಶನನ್ನೇ ಪೂಜಿಸುವ ಪರಿಪಾಟ ಬೆಳೆದುಬಂದಿದೆ.

ಮಹಾರಾಷ್ಟ್ರದ ಪುಣೆ, ಮುಂಬೈ ಮುಂತಾದ ಕಡೆ ಮನೆಮನೆಗೂ ಚಿಕ್ಕ ಚಿಕ್ಕ ಗಣೇಶನನ್ನು ಕೂರಿಸಿದರೆ ಕರ್ನಾಟಕದ ಪ್ರಸ್ತುತ ಈ ಭಾಗದಲ್ಲಿ ಮನೆ ಮನೆಗೆ ಕೂರಿಸದೆ ಸಾಮೂಹಿಕವಾಗಿ ಇಡೀ ಊರಿಗೆ ಒಂದೇ ಜಾಗದಲ್ಲಿ ಒಂದು ದೊಡ್ಡ ಗಣಪನನ್ನು ಕೂರಿಸುತ್ತಾರೆ. ಊರಿನ ಜನರೆಲ್ಲರೂ ಕೂಡಿ ಸಾಮೂಹಿಕವಾಗಿ ಈ ಕಾರ್ಯವನ್ನು ಮಾಡುತ್ತಾರೆ. ಭಾದ್ರಪದ ಶುದ್ಧ ಚತುರ್ಥಿಯ ದಿನ ನಸುಕಿನಲ್ಲಿ ಎದ್ದು ಸ್ನಾನ ಮಡಿಗಳನ್ನು ಪೂರೈಸಿ ಶುಚಿಯಾಗಿ ಜನಿವಾರಧರಿಸದಿದ್ದರೂ ಆದಿನ ಒಂದಿಬ್ಬರು ಜನಿವಾರ ಧರಿಸಿ ಗುಳಿಕಾಲ ನೋಡಿ ಸರಿಯಾದ ಸಮಯಕ್ಕೆ ಗಣೇಶನನ್ನು ಪ್ರತಿಷ್ಠಾಪನೆ ಮಾಡುತ್ತಾರೆ.

ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಪೇಶ್ವೆಗಳ ಕಾಲದಲ್ಲಿ ಗಣೇಶನ ಉತ್ಸವ ಮಾಡಲಾಗುತ್ತಿತ್ತು. ನಂತರ ಕೆಲ ದಶಕಗಳ ಕಾಲ ನಿಂತುಹೋಗಿತ್ತು. ಅದನ್ನು ಮತ್ತೆ ಚಾಲನೆಗೆ ತಂದದ್ದು ಬಾಲಗಂಗಾಧರ ತಿಲಕರು. "ತಿಲಕರು ರಾಷ್ಟ್ರೀಯ ಸಂಘಟನೆಗಾಗಿ ಗಣಪತಿ ಹಬ್ಬವನ್ನು ಬಳಸಿಕೊಂಡು ಸಾರ್ವಜನಿಕ ಗಣೇಶೋತ್ಸವವನ್ನು ಜಾರಿಗೆ ತಂದರು. ಗಣಪತಿಹಬ್ಬಕ್ಕೆ ಸಾರ್ವತ್ರಿಕ ಸಮಾರಂಭದ ರೂಪಕೊಟ್ಟು ಸಾರ್ವಜನಿಕ

ಸ್ಥಳದಲ್ಲಿ ಪ್ರತಿಷ್ಠಾಪಿಸಿದ ಗಣಪತಿಯ ಸನ್ನಿಧಿಯಲ್ಲಿ ಹತ್ತು ಹಲವು ದಿನಗಳ ಕಾಲ ಉಪನ್ಯಾಸ, ಸಂಗೀತ, ನೃತ್ಯ, ನಾಟಕ, ಹರಿಕಥೆ ಮುಂತಾದವುಗಳು ಜರುಗುವಂತೆ ಮಾಡಿ ಆ ಮೂಲಕ ರಾಷ್ಟ್ರಪ್ರಜ್ಞೆ ಜಾಗೃತಗೊಳಿಸಿದರು. ಸ್ವಾಮಿ ವಿವೇಕಾನಂದರು ಇದೇ ರೀತಿ ಬಂಗಾಳದಲ್ಲಿ ರಾಷ್ಟ್ರಪ್ರಜ್ಞೆ ಜಾಗೃತಗೊಳಿಸಿದರು. ಜೊತೆಗೆ ಹಿಂದೂ ಸಮಾಜದ ಸಂಘಟನೆಗೆ ಗಣಪತಿ ಉತ್ಸವವನ್ನು ಬಳಸಿಕೊಂಡರು" (ವಿಎನ್.ಭಟ್, ಭಾರತೀಯ ಹಬ್ಬಗಳ ವೈಶಿಷ್ಟ್ಯಗಳು, ಪುಟ.೩೮).

ಇತ್ತೀಚಿಗೆ ಗಣೇಶೋತ್ಸವಗಳು ಸಂಗೀತ ಕೂಟಗಳಾಗಿ ಎಲ್ಲ ವರ್ಗದವರ ಎಲ್ಲ ವಯಸ್ಸಿನವರ, ಎಲ್ಲ ಧರ್ಮೀಯರ ಕಣ್ಮನ ಸೆಳೆಯುತ್ತಿರುವುದನ್ನು ಎಲ್ಲೆಡೆ ಕಾಣುತ್ತೇವೆ. ಹೀಗೆ ಗಣಪತಿಯು ವಿಘ್ನ ನಿವಾರಕ ಸಿದ್ಧಿ-ಬುದ್ಧಿದಾಯಕನಾಗಿದ್ದಾನೆ. ಆದ್ದರಿಂದಲೇ ಎಲ್ಲಾ ಶುಭ ಕಾರ್ಯಗಳಲ್ಲೂ ಎಲ್ಲಾ ದೇವತೆಗಳ ಪೂಜೆಯ ಆರಂಭದಲ್ಲಿ ಗಣಪತಿಗೆ ಪ್ರಥಮ ಪೂಜೆ ಸಲ್ಲುತ್ತದೆ.

ಗಣೇಶನ ಹಬ್ಬವನ್ನು ಸಾಮಾನ್ಯವಾಗಿ ಇಲ್ಲಿ ಗೌರಿಹಬ್ಬ ಎಂದೇ ಕರೆಯಲಾಗುತ್ತದೆ. ಸಂಪ್ರದಾಯಬದ್ಧವಾಗಿ ಮೊದಲು ಗೌರಿಹಬ್ಬವನ್ನು ಆಚರಿಸಿ ನಂತರದ ದಿನ ಗಣೇಶನನ್ನು ಕೂರಿಸಿ ಆಚರಣೆ ಮಾಡುತ್ತಾರೆ. ಗೌರಿಹಬ್ಬದಲ್ಲೇ ಇಲ್ಲಿ ನಾಗರಪೂಜೆ, ಹುತ್ತಕ್ಕೆ ಹಾಲೆರೆಯುವುದು. ಹಾಗಾಗಿ ಗೌರಿಹಬ್ಬವನ್ನು ಇಲ್ಲಿ ನಾಗರಪಂಚಮಿ ಎಂದು ಕರೆಯುತ್ತಾರೆ. ಗಣೇಶ ಚತುರ್ಥಿಯಲ್ಲಿ ವಿಶೇಷ ಭಕ್ಷ್ಯಭೋಜನಗಳನ್ನು ತಯಾರಿಸುತ್ತಾರೆ. ಕಡುಬು ಗಣೇಶನಿಗೆ ತುಂಬಾ ಪ್ರಿಯವಾದ ಭಕ್ಷ್ಯವಂತೆ. ಆದ್ದರಿಂದ ಎಲ್ಲರ ಮನೆಯಲ್ಲಿ ಸಾಮಾನ್ಯವಾಗಿ ಕಡುಬನ್ನು ಮಾಡುತ್ತಾರೆ. ಅದನ್ನು ದೇವರಿಗೆ ಎಡೆ ಇಡುತ್ತಾರೆ. ಇದರ ಜೊತೆಗೆ ಪಾಯಸ ಕಾಯಾಲು ಮಾಡುತ್ತಾರೆ. ಕಡುಬು ಮತ್ತು ಕಾಯಾಲು ಎರಡೂ ಅದ್ಭುತವಾದ ಹೊಂದಾಣಿಕೆ ಎಂದು ಹೇಳುತ್ತಾರೆ. ಮಕ್ಕಳೆಲ್ಲರೂ ಗಣೇಶನನ್ನು ಕುರಿತು ಹಾಡುತ್ತಾ

ಗಣೇಶ ಬಂದ
ಕಾಯಿ ಕಡುಬು ತಿಂದ
ಚಿಕ್ಕೆರೆಲಿ ಬಿದ್ದ
ದೊಡ್ಡ ಕೆರೇಲಿ ಎದ್ದ

ಎಂದು ಹಾಡುತ್ತಾ ಗಣೇಶನನ್ನು ತಂದು ಕೂರಿಸಿದಂದಿಂದ ಅವನಿಗೆ ಕಾಯಿ ಕಡುಬು ತಿನ್ನಿಸಿ ಕೊನೆಗೆ ನೀರಿನಲ್ಲಿ ವಿಸರ್ಜಿಸುವುದನ್ನು ಈ ಮೇಲಿನ ಹಾಡು ತಿಳಿಸುತ್ತದೆ.

ಗಣೇಶನನ್ನು ಕೂರಿಸುವುದಕ್ಕೂ ಮುಂಚೆ ಸಿದ್ಧತೆಮಾಡಿಕೊಳ್ಳುವುದೇ ಒಂದು ಹಬ್ಬವಿದ್ದಂತೆ. ಗಣೇಶನನ್ನು ಕೂರಿಸಲು ಮುಖ್ಯವಾಗಿ ಹಣ ಕೂಡಿಸುವುದು. ಊರಿನ ಹುಡುಗರೆಲ್ಲರೂ ಕೂಡಿ ರಸ್ತೆಗಳಲ್ಲಿ ತಿರುಗಾಡುವ ವಾಹನಗಳನ್ನು ಅಡ್ಡಗಟ್ಟಿ ಹಣ ಕೇಳಿ ಪಡೆಯುವುದು. ಅಲ್ಲಿರುವ ಅಂಗಡಿ ಮುಂಗಟ್ಟುಗಳಲ್ಲಿ ಕೈಲಾದ ಸಹಾಯವನ್ನು ಪಡೆದು ಹುಡುಗರು ಕೂಡ ತಮ್ಮ ಕೈಯಲ್ಲಿ ಇಂತಿಷ್ಟು ಹಣ ಹಾಕಿ ವ್ಯವಸ್ಥಿತವಾಗಿ ಎಲ್ಲಾ ಕೆಲಸವನ್ನು ಮಾಡುತ್ತಾರೆ. ಎಲ್ಲ ಹುಡುಗರು ಕೂಡು ಕುಟುಂಬದಂತೆ ಕೆಲಸದಲ್ಲಿ ಬಾಗಿಯಾಗುತ್ತಾರೆ. ಪೇಟೆಗೆ ಹೋಗುವವರು ಪೇಟೆಗೆ ಹೋಗಿ ಬೇಕಾದ ಎಲ್ಲಾ ವಸ್ತುಗಳನ್ನು ತರುತ್ತಾರೆ. ಊರಿನಲ್ಲಿರುವವರು ಗಣೇಶನನ್ನು

ಕೂರಿಸಲು ಬೇಕಾದ ಮಂಟಪ ಚಪ್ಪರಗಳನ್ನು ಸಿದ್ಧಗೊಳಿಸುತ್ತಾರೆ. ಬಾಳೆಯ ಕಂಬ, ತೋರಣ, ತೆಂಗಿನಗರಿಗಳ ಚಪ್ಪರ, ಬಣ್ಣಬಣ್ಣದ ಕಾಗದದ ಚಿತ್ರಗಳು ಎಲ್ಲ ಕಟ್ಟಿ ಸಿದ್ದಪಡಿಸಿಟ್ಟುಕೊಳ್ಳುತ್ತಾರೆ. ಇದನ್ನೆಲ್ಲ ನೋಡುವ ಚಿಕ್ಕಮಕ್ಕಳ ಸಂತೋಷಕ್ಕೆ ಪಾರವೇ ಇರುವುದಿಲ್ಲ. ಇನ್ನೂ ಗಣೇಶ ಊರಿಗೆ ಬಂತೆಂದರೆ ಮಕ್ಕಳು ಮನೆಗಳನ್ನು ಸೇರುವುದೇ ಇಲ್ಲ. ಮರತೇ ಬಿಡುತ್ತಾರೆ. ಮೂರು ನಾಲ್ಕು ದಿನಗಳ ಕಾಲ ಶಾಲೆಗೆ ರಜೆಯಾಗುತ್ತದೆ. ಪ್ರತಿದಿನ ಪ್ರತಿ ಕ್ಷಣವು ಹೊಸತನ್ನು ಕಾಣುತ್ತಿರುತ್ತಾರೆ.

ಗಣೇಶನನ್ನು ಮೂರು, ಐದು ಅಥವಾ ಏಳು ದಿನಗಳ ಕಾಲ ಇಡುತ್ತಾರೆ. ಪ್ರತಿದಿನವು ಒಂದೊಂದು ವಿಶೇಷವಾದ ಕಾರ್ಯಕ್ರಮವನ್ನು ಏರ್ಪಡಿಸುತ್ತಾರೆ. ಮಕ್ಕಳಿಗೆ ಆಟಗಳನ್ನು ಆಡಿಸುವುದು, ಹಾಡು ಹೇಳಿಸುವ ಸ್ಪರ್ದೆ, ಒಗಟಿನ ಸ್ಪರ್ಧೆ, ಪ್ರಚಲಿತ ವಿದ್ಯಮಾನಗಳ ರಸ ಪ್ರಶ್ನೆ ಕಾರ್ಯಕ್ರಮ, ಮಡಿಕೆ ಒಡೆಯುವುದು ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಿ ಗೆದ್ದಂತಹ ಮಕ್ಕಳಿಗೆ ಬಹುಮಾನ ನೀಡಿ ಪ್ರೋತ್ಸಾಹಿಸುತ್ತಾರೆ. ಹೀಗೆ ಪ್ರತಿದಿನ ಒಂದೊಂದು ಮನರಂಜನಾ ಕಾರ್ಯಕ್ರಮ ಏರ್ಪಡಿಸುತ್ತಾರೆ. ಗಣೇಶ ವಿಸರ್ಜನೆಯ ಕೊನೆಯ ದಿನ ಟ್ರ್ಯಾಕ್ಟರ್‌ನಲ್ಲಿ ಕೂರಿಸಿ ಅಲಂಕಾರಮಾಡಿ ಊರೆಲ್ಲ ಮೆರವಣಿಗೆ ಮಾಡುತ್ತಾರೆ. ತಮಟೆ ವಾದ್ಯಗಳ ಜೊತೆಗೆ ಮಕ್ಕಳ ನೃತ್ಯಗಳು ಎಲ್ಲರನ್ನು ರಂಜಿಸುತ್ತವೆ. ಕೊನೆಗೆ ಕೆರೆಯ ನೀರಿನಲ್ಲಿ ವಿಸರ್ಜನೆ ಮಾಡಿ ಎಲ್ಲರಿಗೂ ಪ್ರಸಾದ ವಿನಿಯೋಗಿಸುತ್ತಾರೆ. ಆದರೆ ಮಕ್ಕಳಿಗೆ ಈ ಮೊದಲು ಇದ್ದ ಸಡಗರ ಸಂಭ್ರಮ ಇಲ್ಲವಾಗಿ ಕಳೆಗುಂದುತ್ತಾರೆ. ಗಣೇಶನನ್ನು ವಿಸರ್ಜನೆ ಮಾಡುವುದೇ ಅವರಿಗೆ ಇಷ್ಟವಿರುವುದಿಲ್ಲ. ದೊಡ್ಡವರಲ್ಲಿಗೆ ಹೋಗಿ ಇನ್ನು ಎರಡು ದಿನ ಗಣೇಶ ಇರಲಿ ಎಂದು ಬೇಡುವುದು ಮಕ್ಕಳು ಗಣೇಶನ ಮೇಲಿಟ್ಟಿರುವ ಪ್ರೀತಿಯನ್ನು ತೋರುತ್ತದೆ.

ಗಣೇಶನನ್ನು ಕುರಿತು ಅನೇಕ ದಂತಕಥೆಗಳು ಇವೆ. ಶಿವನ ಹೆಂಡತಿ ಪಾರ್ವತಿಯು ಒಮ್ಮೆ ಸ್ನಾನಕ್ಕೆ ಹೊರಟಳು. ಬಾಗಿಲ ಬಳಿ ಕಾವಲಿಗೆ ಯಾರೂ ಇರಲಿಲ್ಲ. ಆದ್ದರಿಂದ ಮಣ್ಣಿನಿಂದ ಮಾನವನ ಆಕೃತಿಯನ್ನು ಮಾಡಿ ಅದಕ್ಕೆ ಜೀವತುಂಬಿ ಸ್ನಾನದ ಬಾಗಿಲ ಬಳಿ ನಿಲ್ಲಿಸಿ ಯಾರು ಬಂದರೂ ಒಳಗೆ ಬಿಡಬ್ಯಾಡ ಎಂದು ಹೇಳಿ ಹೋದಳು. ಸ್ವಲ್ಪ ಹೊತ್ತಿಗೆ ಶಿವ ಅಲ್ಲಿಗೆ ಬಂದ. ಕಾವಲು ನಿಂತಿದ್ದ ಆ ಹುಡುಗ ಶಿವನನ್ನು ಒಳಗೆ ಬಿಡದೆ ಬಾಗಿಲಲ್ಲಿ ತಡೆದು ನಿಲ್ಲಿಸಿದ. ಸಿಟ್ಟಿಗೆದ್ದ ಶಿವ ಕಾವಲುಗಾರನ ತಲೆಯನ್ನು ಕಡಿದ. ಇದನ್ನು ಕಂಡ ಪಾರ್ವತಿಗೆ ತುಂಬಾ ದುಃಖವಾಗಿ ನನ್ನ ಕಂದನನ್ನು ಬದುಕಿಸಿಕೊಡಿ ಎಂದು ಬೇಡಿಕೊಂಡಳು. ಶಿವ ತನ್ನ ಕೃತ್ಯಕ್ಕೆ ಪಶ್ಚಾತ್ತಾಪಪಟ್ಟ ಅನಂತರ ತನ್ನ ಸೇವಕನಿಗೆ ಉತ್ತರ ದಿಕ್ಕಿಗೆ ತಲೆಹಾಕಿಕೊಂಡು ಮಲಗಿರುವ ಯಾವಪ್ರಾಣಿಯಾದರೂ ಸರಿ ಕಡಿದು ತಾ ಎಂದು ಹೇಳುತ್ತಾನೆ. ಆಗ ಸೇವಕ ಆನೆಯ ತಲೆಯನ್ನು ತಂದು ಕೊಡುತ್ತಾನೆ. ಅದನ್ನು ಗಣೇಶನ ದೇಹಕ್ಕೆ ಜೋಡಿಸಿ ಮತ್ತೆ ಜೀವತುಂಬುತ್ತಾನೆ ಶಿವ.

ಎಲ್ಲ ವಿಘ್ನಗಳನ್ನು ಪರಿಹರಿಸುವ ವಿಘ್ನ ನಿವಾರಕನನ್ನು ಯಾವುದೇ ಒಂದು ಕೆಲಸವಿರಲಿ ಗಣಪತಿಯ ಪ್ರಾರ್ಥನೆಯಿಂದಲೇ ಪ್ರಾರಂಭಗೊಳ್ಳುತ್ತದೆ. ಇದಕ್ಕೆ ಸಂಬಂಧಿಸಿದಂತೆ ಪುರಾಣದಲ್ಲಿ ಒಂದು ಕಥೆ ಇದೆ. ಅದೇನೆಂದರೆ ಒಮ್ಮೆ ಎಲ್ಲಾ ದೇವತೆಗಳು ಶಿವ-ಪಾರ್ವತಿಯನ್ನು ನೋಡಲು ಕೈಲಾಸ ಪರ್ವತಕ್ಕೆ ಹೋದರು. ಅವರು ಅಮೃತದಿಂದ ಮಾಡಿದ ಒಂದು ಮೋದಕವನ್ನು ಶಿವ ಮತ್ತು ಪಾರ್ವತಿಗೆ ಕೊಟ್ಟರು. ಅಲ್ಲೇ ಅವರ

ಇಬ್ಬರು ಮಕ್ಕಳಾದ ಗಣೇಶ ಮತ್ತು ಷಣ್ಮುಖರು ಆಟವಾಡುತ್ತಿದ್ದರು. ಮೋದಕವನ್ನು ಕಂಡು ಇಬ್ಬರೂ ಶಿವಪಾರ್ವತಿಯರ ಬಳಿ ಬಂದರು. ಇಬ್ಬರು ಮೋದಕವನ್ನು ಕೇಳಿದರು. ಆದರೆ ಇದ್ದದ್ದು ಒಂದೇ ಒಂದು. ಆಗ ಪಾರ್ವತಿಯು ಉಪಾಯಮಾಡಿ ಇಬ್ಬರಲ್ಲಿ ಯಾರೂ ಮೊದಲು ಇಡೀ ಭೂಮಿಯನ್ನು ಸುತ್ತಿಬರುವರೋ ಅವರಿಗೆ ಮೋದಕ ದೊರೆಯುವುದು ಎಂದು ಹೇಳಿದಳು. ಕೂಡಲೇ ಷಣ್ಮುಖನು ನವಿಲಿನ ಮೇಲೆ ಕುಳಿತು ಭೂಪ್ರದಕ್ಷಿಣೆಗಾಗಿ ಹೊರಟ. ಗಣೇಶನು ಅಲ್ಲಿಂದ ಅಲ್ಲಾಡಲಿಲ್ಲ. ಅವನು ತಂದೆ ತಾಯಿಯ ಪ್ರದಕ್ಷಿಣೆ ಹಾಕಿ ನಮಸ್ಕರಿಸುತ್ತಾನೆ. ಷಣ್ಮುಖ ಬರುವಷ್ಟರಲ್ಲಿ ತಂದೆ ತಾಯಿಗಳನ್ನು ಮೂರು ಸುತ್ತು ಸುತ್ತಿ ಗಣೇಶನೆ ಗೆದ್ದಿದ್ದ. ತಂದೆ-ತಾಯಿಗಿಂತ ಮಿಗಿಲಾದ ಪ್ರಪಂಚ ಇಲ್ಲವೆನ್ನುವುದು ಅವನಿಗೆ ಗೊತ್ತಿತ್ತು. ಕಡೆಗೆ ಗಣೇಶನಿಗೆ ಮೋದಕ ದೊರೆಯಿತು. ಯಾವುದೇ ಹೊಸ ಕಾರ್ಯವನ್ನು ಆರಂಭಿಸುವ ಮೊದಲು ಜನರು ನಿನ್ನನ್ನು ಪ್ರಾರ್ಥಿಸಲಿ ಎಂದು ಶಿವ ಹರಸಿದ.

ಗಣೇಶನ ಹಬ್ಬದ ದಿನ ಯಾರೂ ಚಂದ್ರನನ್ನು ನೋಡುವುದಿಲ್ಲ. ಹಾಗೆ ನೋಡಿದರೆ ಕಳ್ಳತನದ ಅಪವಾದ ಬರುವುದೆಂಬ ನಂಬಿಕೆ ಇದೆ. ಮಾಡಬಾರದೆಂದು ಹೇಳಿದ್ದನ್ನು ಮಾಡುವುದೇ ಮಕ್ಕಳ ಹವ್ಯಾಸ. ಚಂದ್ರನನ್ನು ನೋಡಿ ಮುಂದೇನಾಗುವುದೋ ಎಂಬ ಭಯದಿಂದ ಅವರು ಒದ್ದಾಡುತ್ತಾರೆ. ಪುರಾಣ ಕಥೆಗಳ ಮೇಲೆ ಇಂತಹ ನಂಬಿಕೆ ಬೆಳೆದಿದೆ. ಒಮ್ಮೆ ಗಣಪತಿ ಇಲಿಯ ಮೇಲೆ ಕುಳಿತುಕೊಂಡು ಹೋಗುತ್ತಿದ್ದ. ಗಣಪತಿ ಆಯತಪ್ಪಿ ಕೆಳಗೆ ಬಿದ್ದ. ಇದನ್ನು ನೋಡಿದ ಚಂದ್ರ ಜೋರಾಗಿ ನಕ್ಕುಬಿಟ್ಟ. ಗಣಪತಿಗೆ ಹೊಟ್ಟೆ ಒಡೆದು ಹೋಗಿತ್ತು. ಆಗ ಪಕ್ಕದಲ್ಲೇ ಹರಿಯುತ್ತಿದ್ದ ಹಾವನ್ನು ಎತ್ತಿ ಹೊಟ್ಟೆಗೆ ಕಟ್ಟಿಕೊಂಡ. ಹೀಗೆ ಗಣೇಶನ ಹೊಟ್ಟೆ ಮೇಲೆ ಹಾವುಬಂದಿತು ಎಂದು ಹೇಳುತ್ತಾರೆ. ಗಣೇಶನಿಗೆ ತುಂಬಾಕೋಪಬಂದು ಚಂದ್ರನಿಗೆ ಶಾಪಕೊಟ್ಟ. ಇಂದಿನಿಂದ ನಿನ್ನ ಮುಖ ತೋರಬೇಡ, ತಿಂಗಳಿಗೆ ಹದಿನೈದು ದಿನ ಮಾತ್ರ ಕಾಣಿಸಿಕೊ ಎಂದನಂತೆ. ಅಂದಿನಿಂದ ಚಂದ್ರ ತಿಂಗಳಲ್ಲಿ ಹದಿನೈದು ದಿನ ಮಾತ್ರ ಕಾಣಿಸಿಕೊಳ್ಳುತ್ತಾನೆ. ಅದನ್ನೇ ಅಮವಾಸ್ಯೆ ಹುಣ್ಣಿಮೆ ಎಂದು ಹೇಳುತ್ತಾರೆ.

ಹೀಗೆ ಗಣಪತಿಯ ಬಗ್ಗೆ ಹಲವು ದಂತಕಥೆಗಳಿದ್ದು ಇಂದಿಗೂ ಜನರ ಮನದಲ್ಲಿ ಉಳಿದಿವೆ. ಮೂಲದಲ್ಲಿ ಭಾರತದ ದ್ರಾವಿಡ ಜನಾಂಗದ ಆರಾಧ್ಯ ದೈವವಾಗಿದ್ದ ಗಣಪತಿ ಗಣಗಳಿಗೆ ಒಡೆಯ. ದ್ರಾವಿಡ ಮತ್ತು ನಾಗಾ ಜನಾಂಗದಲ್ಲಿ ಗಣಗಳ ಪರಿಕಲ್ಪನೆ ಇತ್ತು. ಒಂದು ಜನರ ಗುಂಪು ಅಥವಾ ಸಮುದಾಯ, ಕುಲಗಳಿಗೆ ಗಣ ಎಂದು ಕರೆಯಲಾಗುತ್ತಿತ್ತು. ಅಂತಹ ಗಣಗಳ ಗುಂಪಿಗೆ ಒಡೆಯನಾಗಿದ್ದವರನ್ನು ಪತಿ ಎಂದು ಕರೆಯುತ್ತಿದ್ದರು. ಗಣಪತಿ ಎಂಬುದು ದ್ರಾವಿಡರ ಮೂಲದ ಹೆಸರಾಗಿದೆ. ಇಂದಿಗೂ ಅದು ಮುಂದುವರೆದಿರಬಹುದು. ಇಂತಹ ಶ್ರೇಷ್ಠ ಹಿನ್ನಲೆಯಿಂದ ಬಂದ ಗಣಪತಿ ಇಂದು ಇಡೀ ದೇಶದಲ್ಲಿ ಎಲ್ಲಾ ದೈವಗಳಿಗೂ ಮೊದಲಿಗನಾಗಿರುವ ಗಣಪತಿ ಪೂಜೆ ಜನಸಾಮಾನ್ಯರೆಲ್ಲರ ಮನದಲ್ಲೂ ಅಚ್ಚಳಿಯದೆ ಆಚರಣೆಗಳಲ್ಲಿ ಇಂದಿಗೂ ಉಳಿದುಕೊಂಡು ಬಂದಿದೆ.

ಮಾಳ್‌ಪಕ್ಷ (ಪಿತೃಪಕ್ಷ, ಮಾರ್ಲಮಿ)

ಕರ್ನಾಟಕದಾದ್ಯಂತ ಆಚರಿಸುವ ಹಿರಿಯರ ಹಬ್ಬವಾದ ಪಿತೃಪಕ್ಷವನ್ನು ಈ ಭಾಗದ ಜನರು ಮಾಳ್‌ಪಕ್ಷ,

ಮಾರ್ಲಮಿಹಬ್ಬ, ಪಕ್ಷ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ 'ಪಕ್ಷ' ಎಂದೇ ಎಲ್ಲರೂ ಕರೆಯುವ ರೂಢಿಯಿದೆ. ಹೆಚ್ಚಾಗಿ ದಕ್ಷಿಣ ಕರ್ನಾಟಕದಾದ್ಯಂತ ನಡೆಯುವ ಈ ಹಬ್ಬ ಬಹುಮುಖ್ಯವಾದುದಾಗಿದೆ. ಕಬ್ಬಾಳು ಮತ್ತು ಕಬ್ಬಾಳು ಕುಳಿಯ ಪ್ರದೇಶದಲ್ಲಿ ಹೆಚ್ಚು ವಿಜೃಂಭಣೆಯಿಂದ ಆಚರಿಸುತ್ತಾರೆ. ಎಷ್ಟೇ ಕಡುಬಡವರಿದ್ದರು ಈ ಹಬ್ಬವನ್ನು ಸಾಲಮಾಡಿಯಾದರೂ ವೈಭವವಾಗಿಯೇ ಆಚರಣೆ ಮಾಡುತ್ತಾರೆ.

ತಮ್ಮ ಮನೆಯಲ್ಲಿ ಸತ್ತಿರುವಂತಹ ಹಿರಿಯ ವ್ಯಕ್ತಿಗಳ ನೆನಪಿಗಾಗಿ ಅವರನ್ನು ಸಂತೃಪ್ತಿಪಡಿಸಲು ವರ್ಷದಲ್ಲಿ ಒಂದು ದಿನವನ್ನು ಅವರಿಗಾಗಿ ಮೀಸಲಿಡುತ್ತಾರೆ. ಆ ಮೀಸಲಿಟ್ಟ ದಿನವೇ ಈ ಮಾಳ್‌ಪಕ್ಷ. ಸಾಮಾನ್ಯವಾಗಿ ಈ ಹಬ್ಬವು ಮಹಾಲಯ ಅಮಾವಾಸ್ಯೆಯ ಹಿಂದೆ ಅಥವಾ ಮುಂದಿನ ಶುಕ್ರವಾರ ಅಥವಾ ಮಂಗಳವಾರ ನಡೆಯುತ್ತದೆ. ಮತ್ತೆ ಕೆಲವು ಒಕ್ಕಲಿನವರು ಆಯುಧಪೂಜೆಯ ದಿನವೂ ಮಾಡುತ್ತಾರೆ. ಈ ಹಬ್ಬವು ಒಂದೇ ದಿನ ನಡೆದರೂ ವರ್ಷದಲ್ಲಿ ಮಾಡುವ ಹಬ್ಬಗಳ ಪೈಕಿ ದೊಡ್ಡಹಬ್ಬವಾಗಿದೆ. ಕಬ್ಬಾಳಮ್ಮನ ಜಾತ್ರೆಯನ್ನು ಹೊರತುಪಡಿಸಿದರೆ ಪಕ್ಷವೇ ಇವರಿಗೆ ದೊಡ್ಡಹಬ್ಬವಾಗಿದ್ದು ಕಡ್ಡಾಯವಾಗಿ ಎಲ್ಲರೂ ಆಚರಣೆ ಮಾಡುತ್ತಾರೆ.

ಸಾಮಾನ್ಯವಾಗಿ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲಿ ಮಹಾಲಯ ಅಮಾವಾಸ್ಯೆಯ ಸಂದರ್ಭದಲ್ಲಿ ಈ ಹಬ್ಬನಡೆಯುತ್ತದೆ. ನಿಧನರಾಗಿರುವ ತಮ್ಮ ಮನೆಯ ಹಿರಿಯರಾಗಿರುವ ತಂದೆ-ತಾಯಿ ಅಜ್ಜಿ-ತಾತಂದಿರುಗಳಿಗೆ ಗೌರವ ಸಲ್ಲಿಸುವುದೇ ಈ ಹಬ್ಬದ ಮುಖ್ಯ ಉದ್ದೇಶ. ಹಬ್ಬವು ಬಹುಮುಖ್ಯವಾಗಿ ರಾತ್ರಿಯಲ್ಲಿ ಜರುಗುತ್ತದೆ. ನೆಂಟರಿಷ್ಟರೆಲ್ಲರು ಬಂದು ಸೇರುವಷ್ಟರಲ್ಲಿ ಸಂಜೆಯಾಗಿರುತ್ತದೆ. ಎಲ್ಲಾನೆಂಟರು, ಸಂಬಂಧಿಕರು ಈ ಹಬ್ಬಕ್ಕೆ ಬರುವುದು ಸಂಜೆಯ ನಂತರವೇ. ಏಕೆಂದರೆ ಈ ಹಬ್ಬದ ಬಹುಮುಖ್ಯಭಾಗ ಊಟ. ಆದ್ದರಿಂದ ಎಲ್ಲರೂ ಊಟದ ಸಮಯದ ಹೊತ್ತಿಗೆ ಬಂದು ಸೇರುತ್ತಾರೆ. ಪೂಜೆಯ ಹೊತ್ತಿಗೆ ಸರಿಯಾಗಿ ಬಂದು ಪೂಜೆಯಲ್ಲಿ ಭಾಗವಹಿಸಿ ಒಂದು ಕಾಸಿನ ಧೂಪ ಹಾಕಿ ಕೈಮುಗಿಯುತ್ತಾರೆ.

ಹಬ್ಬದ ದಿನ ರಾತ್ರಿ ಎಲ್ಲಾ ಅಡುಗೆ ಕೆಲಸಮುಗಿದ ತಕ್ಷಣ ದೇವರ ಕೋಣೆಯಲ್ಲಿ ಮನೆದೇವರನ್ನು ಒಡ್ಡಿಸಿ, ಆರತಿತಟ್ಟೆಯಲ್ಲಿ ಕಳಸ, ಕನ್ನಡಿ, ಅಕ್ಕಿ, ವಿಭೂತಿ, ಗಂಧದ ಕಡ್ಡಿಯನ್ನು ಇಟ್ಟು ಹಿರಿಯರಿಗೆ ಬೇಕಾದ ಎಲ್ಲಾ ವಸ್ತುಗಳನ್ನು ಪೂಜೆಗೆ ಎಡೆ ಇಡುತ್ತಾರೆ. ಹೊಸಬಟ್ಟೆಗಳು ಪಂಚೆ, ಶಲ್ಯ, ಅಂಗಿ, ಸೀರೆ, ರವಿಕೆ, ಬಾಚಣಿಗೆ, ಸೀರಣಿಗೆ, ಉಡುದಾರ ಹೀಗೆ ಅವರು ಉಪಯೋಗಿಸುತ್ತಿದ್ದ ಪ್ರತಿಯೊಂದು ವಸ್ತುವನ್ನು ಎಡೆಗೆ ಇಡುತ್ತಾರೆ. ಇನ್ನು ಊಟದ ವಿಷಯದಲ್ಲಿ ಹಿರಿಯೋರಿಗೆ ಏನೇನು ಇಷ್ಟವೋ ಅದನ್ನೆಲ್ಲ ಎಡೆಗೆ ಇಡುತ್ತಾರೆ. ಕುರಿ, ಕೋಳಿ, ಮೇಕೆ, ಮೀನು, ಮೊಟ್ಟೆ, ದನದಮಾಂಸ ಹೀಗೆ ಮಾಂಸದಿಂದ ತಯಾರು ಮಾಡಿದ ಬಗೆ ಬಗೆಯ ಅಡುಗೆ ಹಾಗು ಮುದ್ದೆ, ಅನ್ನ, ಒಬ್ಬಟ್ಟು, ವಡೆ, ಕರ್ಜಿಕಾಯಿ, ಚಕ್ಕುಲಿ, ನಿಪ್ಪಟ್ಟು, ಬೋಂಡ, ಬಜ್ಜಿ, ಕಜ್ಜಾಯ, ಚಿಕ್ಕೀನುಂಡೆ, ರವೆಉಂಡೆ, ಕಡ್ಲೆಪುರಿ, ಕಾರಸಾವೆ, ಮೈಸೂರುಪಾಕ್ ಹೀಗೆ ಬಗೆಬಗೆಯ ಸಿಹಿ ತಿನಿಸುಗಳನ್ನು ಮನೆಯಲ್ಲೇ ಮೂರು ನಾಲ್ಕು ದಿನದಿಂದಲೂ ತಯಾರುಮಾಡಿಕೊಳ್ಳುತ್ತಾರೆ. ಕೆಲವನ್ನು ಬೇಕರಿಯಲ್ಲಿ ತಂದು ಎಡೆಗೆ ಇಡುತ್ತಾರೆ. ಹಿರಿಯೋರು ಕುಡಿಯುವ ಅಭ್ಯಾಸವಿದ್ದರೆ ಸಾರಾಯಿ, ಬೀರು, ಬ್ರಾಂದಿ ಬಾಟಲುಗಳು, ಭಂಗಿ, ಹೊಗೆಸೊಪ್ಪು, ಬೀಡಿ, ಸಿಗರೇಟು ಎಲ್ಲವನ್ನು ಇಡುತ್ತಾರೆ. ಇಟ್ಟು ದೇವರ ಗುಡ್ಡರನ್ನು ಕರೆಸಿ ಪೂಜೆಮಾಡುತ್ತಾರೆ. ಗುಡ್ಡರು ಪೂಜೆಮಾಡಿದ ನಂತರ ನೆಂಟರಿಷ್ಟರು ಸಂಬಂಧಿಕರೆಲ್ಲರು

ಪೂಜೆ ಮಾಡಿ ಧೂಪ ಹಾಕುತ್ತಾರೆ. ಎಲ್ಲರಿಗೂ ಗುಡ್ಡರು ವಿಭೂತಿ ಬಳಿದು ಆಶೀರ್ವದಿಸುತ್ತಾರೆ. ನಂತರ ಹತ್ತು ನಿಮಿಷ ದೇವರ ಕೋಣೆಯ ಬಾಗಿಲನ್ನು ಹಾಕಿಕೊಂಡು ಹೊರಗಡೆ ಬರುತ್ತಾರೆ. ಏಕೆಂದರೆ ಆ ಹತ್ತು ನಿಮಿಷದಲ್ಲಿ ತಮ್ಮ ಹಿರಿಯೋರು ಬಂದು ಎಲ್ಲವನ್ನು ನೋಡಿ ತಾವು ಇಟ್ಟಂತ ಎಡೆಯನ್ನು ಸ್ವೀಕರಿಸುತ್ತಾರೆ ಎಂಬ ನಂಬಿಕೆ ಇವರಲ್ಲಿದೆ.

ನಂತರ ಎಲ್ಲ ಬಂಧು ಬಾಂಧವರು, ನೆಂಟರಿಷ್ಟರೆಲ್ಲರು ಕೂಡಿ ಭರ್ಜರಿ ಭೋಜನವನ್ನು ಮಾಡುತ್ತಾರೆ. ಬಂದಿದ್ದ ಎಲ್ಲ ಸಂಬಂಧಿಕರಿಗೂ ದೇವರ ಎಡೆಯ ಪ್ರಸಾದವನ್ನು ಕೊಟ್ಟು ಕಳುಹಿಸುತ್ತಾರೆ. ತಾವು ಮಾಡಿದ್ದ ಎಲ್ಲಾ ತಿಂಡಿಗಳನ್ನು ಸ್ವಲ್ಪ ಹಾಕಿ ಪ್ರತಿಯೊಬ್ಬ ಬಂಧುಗಳಿಗೂ ಕೊಡುತ್ತಾರೆ. ತಮ್ಮ ತಂದೆ-ತಾಯಿಗಳು ಹಿರಿಯೋರ ಜೊತೆಗಿನ ಸಂಬಂಧ ಎಷ್ಟು ಗಾಢವಾಗಿತ್ತು ಎಂಬುದನ್ನು ಈ ಹಬ್ಬ ತೋರಿದರೆ ಮತ್ತೊಂದೆಡೆ ಕೆಲವರು ವ್ಯಕ್ತಿ ಸತ್ತಮೇಲೆ ತೋರುವ ಭಯ, ಭಕ್ತಿಯನ್ನು ಬದುಕಿದ್ದಾಗ ಹಿರಿಯರನ್ನು ಕಡೆಗಣಿಸುವ ಪದ್ಧತಿ ವಿಪರ್ಯಾಸವಾಗಿ ಕಾಣುತ್ತದೆ.

೬.೩. ನಂಬಿಕೆಗಳು ಮತ್ತು ವಿಧಿ-ನಿಷೇಧಗಳು

ಜನಪದರ ಜೀವನದ ವಿವಿಧ ಹಂತಗಳಲ್ಲಿ ಬಳಕೆಯಾಗುತ್ತಾ ಸಾಗುವ ನಂಬಿಕೆಗಳು ಬದುಕಿನ ಬಹುದೊಡ್ಡ ಆಧಾರ ಸ್ತಂಭಗಳು. ಸಂಶಯ ಸಂದೇಶಗಳನ್ನು ದೂರಸರಿಸಿ ಸಾರ್ಥಕತೆಯ ಜೀವನದ ಸಾರವನ್ನು ಸವಿಯಲು ನಂಬಿಕೆಗಳು ಸಹಕಾರಿಯಾಗುತ್ತವೆ. ನಂಬಿಕೆ ಕೆಲವೊಮ್ಮೆ ರಕ್ಷಣೆಯನ್ನು ಒದಗಿಸಿ ಭ್ರಾತೃತ್ವವನ್ನು ಬೆಳೆಸುತ್ತದೆ. ವ್ಯಕ್ತಿಯ ಮನೋಭಾವ ಹೇಗಿರುತ್ತದೆಯೋ ಹಾಗೆಯೇ ಜನರಲ್ಲಿ ಪ್ರಭಾವ ಬೀರುವ ನಂಬಿಕೆಗಳನ್ನು ಮಾನವ ತನ್ನ ಉಳಿವಿಗಾಗಿ ರೂಢಿಸಿಕೊಂಡಿದ್ದಾನೆ. ವ್ಯಕ್ತಿಯ ಬದುಕಿನಲ್ಲಿ ಶ್ರದ್ಧೆಯನ್ನುಂಟು ಮಾಡುವ ನಂಬಿಕೆಯು ಒಂದು ಮಾನಸಿಕ ಸ್ಥಿತಿ. ಇದು ಸಾಂಪ್ರದಾಯಿಕವಾಗಿ ಅಂಗೀಕೃತವಾದ ಒಂದು ಪರಿಕಲ್ಪನೆಯಾಗಿದ್ದು ಕಾರಣ ಮತ್ತು ಪರಿಣಾಮದ ಸಂಬಂಧವನ್ನು ಉಂಟುಮಾಡುತ್ತದೆ. ಭೂತ, ವರ್ತಮಾನ, ಭವಿಷ್ಯತ್ತಿನ ಸಂಗತಿಗಳನ್ನು ಸೃಷ್ಟಿಸಿಕೊಳ್ಳುತ್ತಾ ಹೋಗುತ್ತದೆ. ದೈನಂದಿನ ಆಲೋಚನೆ, ಸಂಪ್ರದಾಯ, ರೂಢಿ, ಆಚಾರ-ವಿಚಾರ ಹೀಗೆ ಪ್ರತಿಯೊಂದು ಕೆಲಸಕಾರ್ಯದ ಕ್ರಮಗಳನ್ನು ಗಮನಿಸಿದಾಗ ನಂಬಿಕೆಗಳು ಒಂದು ರೀತಿಯಲ್ಲಿ ದೈನಂದಿನ ಬದುಕಿನ ಸಮಸ್ಯೆಗಳನ್ನು ನಿವಾರಿಸಲು ಬಳಸುವ ವಿಧಾನಗಳೆಂದೇ ಹೇಳಬಹುದು. ನಂಬಿಕೆಯು ಜನಪದರ ಜೀವನಾನುಭವದ ಉತ್ಪನ್ನ. ಹೀಗಾಗಿ ಮಾನವನ ಬದುಕಿಗೂ ನಂಬಿಕೆಗೂ ಬಿಡಿಸಲಾಗದ ಸಂಬಂಧವಿದೆ. "ನಂಬಿಕೆಗಳು ಜನತೆಯ ಜೀವನವನ್ನು ನೇರವಾಗಿ ಚಿತ್ರಿಸುತ್ತವೆ. ಹಾಗಾಗಿ ಜೀವನಕ್ಕೂ ನಂಬಿಕೆಗೂ ನಿಕಟವಾದ ಸಂಬಂಧವಿದ್ದು ಅವೆರಡೂ ಹಾಸುಹೊಕ್ಕಾಗಿ ಸೇರಿಕೊಂಡಿವೆ. ನಂಬಿಕೆಗಳು ಮಾನವನ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ವ್ಯಾಪಿಸಿವೆ. ಜಾತಿ, ವೃತ್ತಿ, ಅಂತಃಸ್ತುಗಳ ಭೇದವಿಲ್ಲದೆ ಎಲ್ಲರ ಜೀವನದಲ್ಲಿ ಸೇರಿಕೊಂಡಿವೆ" (ಡಾ.ಮಂಜುನಾಥ ಬೇವಿನಕಟ್ಟಿ, ಕನ್ನಡ ಜನಪದ ನಂಬಿಕೆಗಳು, ಪುಟ.೩೧). ಹೀಗೆ ನಂಬಿಕೆಗಳು ವ್ಯಕ್ತಿಯ ಜೀವನದಲ್ಲಿ ಬಹುಮುಖ್ಯವಾದ ಪಾತ್ರವಹಿಸುತ್ತವೆ.

ನಂಬಿಕೆಗಳು ಭಯ ಮತ್ತು ಭಾವನಾತ್ಮಕತೆಯ ಹಿನ್ನಲೆಯಲ್ಲಿ ಬಂದಿದ್ದು ಅವು ಕಲ್ಪನೆಯ ಕಥೆಗಳ ಮೇಲೆ ಹುಟ್ಟಿರಬಹುದು. ನೈಸರ್ಗಿಕ ಚೇಷ್ಟೆಗಳ ಬಗೆಗೆ ತಳೆದ ಮನೋಭಾವ ಆಗಿರಬಹುದು. ಇದರ ಜೊತೆಗೆ ಭಯ, ಭರವಸೆ, ಪೂರ್ವಾಗ್ರಹ, ಭಾವೋದ್ರೇಕ, ಅನುಕರಣೆ, ಜಾತಿ ಅಥವಾ ವರ್ಗದ ಒತ್ತಾಯದ

ಭಾಗವಹಿಸುವಿಕೆಯಂತ ಹಲವಾರು ಕಾರಣಗಳಿಂದ ನಂಬಿಕೆ ಹುಟ್ಟಿರಬಹುದು. ಪ್ರತಿಯೊಂದು ಸಮಾಜ ಮತ್ತು ಸಮುದಾಯವು ತನ್ನದೇ ಆದ ನಂಬಿಕೆಗಳನ್ನು ಆಚರಣೆಯಲ್ಲಿಟ್ಟುಕೊಂಡು ಬಂದಿದೆ. ಕಾಲದೇಶಗಳಿಗನುಗುಣವಾಗಿ ಅವು ಬದಲಾಗುತ್ತಿರುತ್ತವೆ. ನಂಬಿಕೆಗಳು ಮನಶಾಸ್ತ್ರೀಯ ಗುಣ, ವಾಸ್ತವಿಕತೆಯ ಅರಿವು, ಸಾಂಸ್ಕೃತಿಕ ಅಭಿವ್ಯಕ್ತಿ, ಸಾರ್ವತ್ರಿಕ ಮತ್ತು ಪ್ರಾದೇಶಿಕತೆಯ ಹಿನ್ನಲೆಯಲ್ಲಿ, ಪ್ರಾಚೀನತೆಯ ಹಿನ್ನಲೆಯಲ್ಲಿ ಅನುಭವ ಮಾನಸಿಕ ಅನುಭಾವಗಳ ಮಿಳಿತ, ಧಾರ್ಮಿಕ ಮನೋಭಾವವಾಗಿ ಜೀವನ ನಿಯಂತ್ರಣವಾಗಿ ಇವು ಭಾಗಿಯಾಗಿದ್ದು ಹಲವು ರೀತಿಯ ಒತ್ತಡಗಳನ್ನು ನಿರ್ಲಿಪ್ತಗೊಳಿಸುವ ಮತ್ತು ಆತಂಕಗಳಿಂದ ಪಾರುಮಾಡಲು ನಂಬಿಕೆಗಳು ಸಹಕಾರಿಯಾಗಿವೆ.

ನಂಬಿಕೆಗಳು ಕಾಲ, ದೇಶ, ವ್ಯಕ್ತಿಯೊಂದಿಗೆ ಸಾಪೇಕ್ಷ ಸಂಬಂಧ ಹೊಂದಿರುವಂತಹವು. ಒಬ್ಬನಿಗೆ ಅದು ನಂಬಿಕೆಯಾದರೆ ಮತ್ತೊಬ್ಬನಿಗೆ ಅದು ಮೂಢನಂಬಿಕೆಯಾಗಬಹುದು. ನಮ್ಮ ಜನಪದ ಜೀವನದೊಂದಿಗೆ ನಿಕಟ ಸಂಬಂಧವನ್ನು ಹೊಂದಿರುವ ನಂಬಿಕೆಗಳು ಅವರ ಬದುಕಿನ ಎಲ್ಲಾ ಮಗ್ಗುಲುಗಳನ್ನು ಆವರಿಸಿಕೊಂಡಿವೆ. ಕಬ್ಬಾಳಿನ ಪರಿಸರದಲ್ಲಿ ಇಂತಹ ನಂಬಿಕೆ, ವಿಧಿ ನಿಷೇಧಗಳು ಸಂವಿಧಾನದ ನಿಯಮಗಳಂತೆ ಕಟ್ಟುನಿಟ್ಟಾಗಿಯೇ ಇರುತ್ತವೆ. ಇಲ್ಲಿನ ಜನರು ಆ ನಿಯಮಗಳಿಗೆ ಬದ್ಧರಾಗಿ ಅಲ್ಲಿನ ಸಾಮಾಜಿಕ ವ್ಯವಸ್ಥೆಯಲ್ಲಿ ಜೀವಿಸುತ್ತಿದ್ದಾರೆ.

ಯಾವುದೇ ಕೆಲಸ ಕಾರ್ಯಗಳಿಗೆ ಭವಿಷ್ಯವನ್ನು ಕೇಳುವುದು, ಕಬ್ಬಾಳಮ್ಮನಲ್ಲಿ ಹೂ ಕೇಳಿ ನಂತರ ತಮ್ಮ ಕಾರ್ಯಗಳನ್ನು ಕೈಗೊಳ್ಳುತ್ತಾರೆ. ಮಕ್ಕಳಿಗೆ ಮದುವೆ ಮಾಡುವುದಾಗಲಿ, ಮನೆಕಟ್ಟುವುದಾಗಲಿ, ಹೊಸ ವಾಹನಗಳನ್ನು ಕೊಳ್ಳುವುದಾಗಲಿ ಹೀಗೆ ಯಾವುದೇ ವಿಷಯವಿದ್ದರೂ ಕಬ್ಬಾಳಮ್ಮನಲ್ಲಿ ಬಂದು ತಮ್ಮ ಇಷ್ಟಾರ್ಥವನ್ನು ಈಡೇರಿಸುವಂತೆ ಹೂವನ್ನು ಒಡ್ಡಿಸಿ ನಂತರ ತಮ್ಮ ಕೆಲಸ ಮುಂದುವರೆಸುತ್ತಾರೆ. ಇದಕ್ಕೆ ಜನರು ಕಬ್ಬಾಳಮ್ಮನಲ್ಲಿ ಇಟ್ಟಿರುವ ನಂಬಿಕೆಯೇ ಕಾರಣ.

ಶಾಸ್ತ್ರ ಪಂಚಾಂಗವನ್ನು ಇಲ್ಲಿನ ಜನರು ನಂಬುತ್ತಾರೆ. ತಮ್ಮ ಮನೆಗಳಲ್ಲಿ ಏನೇ ಕಾರ್ಯಗಳು ನಡೆದರೂ ಶಾಸ್ತ್ರ, ಪಂಚಾಂಗಗಳ ಆಧಾರದ ಮೂಲಕವೇ ಜರುಗುತ್ತದೆ. ಶಾಸ್ತ್ರ, ಪಂಚಾಂಗ, ಭವಿಷ್ಯ ಹೇಳುವುದನ್ನು ಕೇಳುವುದರಲ್ಲಿ ನಂಬಿಕೆ ಇಟ್ಟಿದ್ದಾರೆ. ಈ ಶಾಸ್ತ್ರದ ಪ್ರಕಾರ, ಮದುವೆ, ಪೂಜೆ, ನಾಮಕರಣ, ದೇವತಾಕಾರ್ಯ ಮುಂತಾದವುಗಳನ್ನು ತಪ್ಪದೆ ಪಾಲಿಸುತ್ತಾರೆ. ಶಕುನಗಳನ್ನು ನಂಬುತ್ತಾರೆ. ಹೊರಹೋಗುವಾಗ ತುಂಬಿದ ಕೊಡ ಎದುರಿಗೆ ಬಂದರೆ ಶುಭ ಶಕುನ, ಖಾಲಿಕೊಡ ಬಂದರೆ ಅಪಶಕುನ, ಸೌದೆ ಹೊರೆ ಎದುರಿಗೆ ಬಂದರೆ ಅಪಶಕುನ, ಹಲ್ಲಿ ಲೊಚಗುಟ್ಟಿದರೆ ಯಾವ ಮೂಲೆಯಿಂದ ಲೊಚಗುಟ್ಟಿತು ಎಂಬುದನ್ನು ನೋಡಿ ಶುಭ, ಅಶುಭವನ್ನು ಹೇಳುತ್ತಾರೆ. ದೇವ ಮೂಲೆ, ಮನೆದೇವರಿರುವ ಗದ್ದಿಗೆ ಮೂಲೆ, ಕಬ್ಬಾಳು ಬೆಟ್ಟದ ಮೂಲೆ ಹೀಗೆ ಮನೆಯಲ್ಲಿ ಶುಭ ಮತ್ತು ಅಶುಭದ ಮೂಲೆಗಳನ್ನು ನಿರ್ಧರಿಸಿಕೊಂಡಿರುತ್ತಾರೆ. ಒಲೆ ಜೋರಾಗಿ ಮೊರೆದರೆ ನೆಂಟರು ಬರುತ್ತಾರೆ ಎನ್ನುವ ನಂಬಿಕೆ. ಕೋಳಿ, ಹುಂಜ ಒಸಲಿನ ಮೇಲೆ ನಿಂತು ಕೂಗಿದರೆ ನೆಂಟರು ಬರುತ್ತಾರೆ. ಆ ನೆಂಟರಿಗೆ ಕೋಳಿ ಕೂದು ಅಡುಗೆ ಮಾಡಬೇಕೆನ್ನುವ ನಂಬಿಕೆಗಳು ಇಲ್ಲಿವೆ.

ನಂಬಿಕೆಯು ಕಬ್ಬಾಳು ಜನರ ಬದುಕಿಗೆ ಸೂಚನೆ, ನಿಯಮ, ಆಜ್ಞೆ, ಆದೇಶ, ನಿಷೇಧ ಹಾಗೂ ನಿರ್ದೇಶನ ರೂಪದಲ್ಲಿ ನಿತ್ಯ ಬದುಕಿನೊಂದಿಗೆ ಸಂಬಂಧವನ್ನೇರ್ಪಡಿಸಿ, ಜನಪದರ ಕೆಲಸ, ಆಲೋಚನೆ, ಜೀವನಕ್ರಮ, ಆಚರಣೆ ಸಂಪ್ರದಾಯಗಳೆಲ್ಲವೂ ಮೂಲಭೂತವಾಗಿ ನಂಬಿಕೆಗಳಿಂದ ಪ್ರೇರಿತವಾದವುಗಳು.

ಕಬ್ಬಾಳು ಪರಿಸರದ ಜನರ ಬದುಕಿನ ಲೌಕಿಕ ಕ್ರಿಯೆಯನ್ನು ಗಟ್ಟಿಗೊಳಿಸಲು ಅಥವಾ ನಿಷೇಧಿಸಲು ನಂಬಿಕೆಗಳು ಅದಕ್ಕೆ ಧಾರ್ಮಿಕ ಚೌಕಟ್ಟನ್ನು ಒದಗಿಸುವುದುಂಟು. ಅಂತಹ ನಂಬಿಕೆಗಳಲ್ಲಿ ಕೆಲವು ಇಲ್ಲಿವೆ.

* ಮದುವೆ ಸೌದೆ ತರಲೆಂದು ಎಲ್ಲರೂ ಕಾಡಿಗೆ ಹೋಗಿದ್ದಾಗ ಜಗಳಗಂಟಿಮರ ಕಡಿದರೆ ಮದುವೆಯಲ್ಲೂ ಜಗಳವಾಗುತ್ತದೆ ಎಂಬ ನಂಬಿಕೆ.
* ಮದುವೆಯ ಅಕ್ಕಿಯನ್ನು ಸೋಸುವಾಗ ಅಕ್ಕಿ ತಿಂದರೆ ಮದುವೆಯಲ್ಲಿ ಮಳೆ ಬರುತ್ತದೆ ಎಂಬುದು.
* ಸಂಜೆಹೊತ್ತಲ್ಲಿ ಕಸಗುಡಿಸಿ ಹೊರ ಹಾಕುವುದರಿಂದ ಲಕ್ಷ್ಮಿಹೊರ ಹೋಗುತ್ತಾಳೆ.
* ಊಟಮಾಡುವಾಗ ತುಟಿಕಚ್ಚಿಕೊಂಡರೆ ಮಾಂಸ ತಿನ್ನುವ ಬಯಕೆ ಎಂದು.
* ಬಾಗಿಲಿನ ಒಸಲಿನ ಮೇಲೆ ನಿಂತುಕೊಂಡರೆ ಸಾಲಜಾಸ್ತಿ ಆಗುತ್ತದೆ.
* ಊಟ ಮಾಡುವಾಗ ನೆತ್ತಿ ಹತ್ತಿದರೆ ಯಾರೋ ಬೈಯ್ಯುತ್ತಿದ್ದಾರೆ.
* ಆಕಳಿಸಿದರೆ ಯಾರೋ ನೆನೆಸಿಕೊಳ್ಳುತ್ತಿದ್ದಾರೆ ಎನ್ನುವುದು.
* ಗಂಡಸರಿಗೆ ತಲೆಯಲ್ಲಿ ಎರಡು ಸುಳಿ ಇದ್ದರೆ ಇಬ್ಬರು ಹೆಂಡತಿಯರಾಗುತ್ತಾರೆ.
* ಮನೆಯಲ್ಲಿ ಸಿಳ್ಳೇ ಹೊಡೆದರೆ ತಿಗಣೆ ಹೆಚ್ಚುತ್ತವೆ.
* ಹೊಸ ಮನೆಗೆ ಹೋಗುವಾಗ ಹಾಲುಕ್ಕಿಸಿ ಹೋಗಬೇಕು.
* ಅಂಗಾಲು ಅಂಗೈ ಕಡಿತವಾದರೆ ಜಗಳವಾಗುತ್ತದೆ.
* ಮಕ್ಕಳು ವೀಳ್ಯದೆಲೆ ತಿನ್ನಬಾರದು.
* ಆರು ಬೆರಳಿದ್ದರೆ ಅದೃಷ್ಟ

ಕಾಲ್ಗುಣ

ಕಾಲ್ಗುಣವನ್ನು ಹೆಣ್ಣಿಗೆ ಹೋಲಿಸಲಾಗಿದೆ. ಮನೆಗೆ ಸೊಸೆಯಾಗಿ ಬಂದಂತಹ ಸಂದರ್ಭದಲ್ಲಿ ಶುಭಕಾರ್ಯಗಳು ನಡೆದರೆ ಒಳ್ಳೆಯದು ಎನ್ನುತ್ತಾರೆ. ಮನೆಯಲ್ಲಿದ್ದ ಮೈದುನನಿಗೆ ಸರ್ಕಾರಿ ನೌಕರಿ ಸಿಕ್ಕಿದರೆ, ನಾದಿನಿಗೆ ಮದುವೆಯಾದರೆ, ಅತ್ತೆಮಾವಂದಿರಿಗೆ ಆರೋಗ್ಯ ಸರಿಹೊಂದಿದರೆ, ಕೃಷಿ ಬೆಳೆ ಲಾಭದಾಯಕವಾದರೆ ಇವೆಲ್ಲಾ ನಮ್ಮ ಸೊಸೆ ಬಂದಾಗಿನಿಂದ ಬಂದಂತಹ ಭಾಗ್ಯ ಅವಳ ಕಾಲ್ಗುಣ ಎಂದು ಹೊಗಳುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ ಎಲ್ಲಾ ಕೆಲಸದಲ್ಲು ತೊಂದರೆಯಾದರೆ ಮನೆಯಲ್ಲಿ ಯಾರಾದರು ತೀರಿಕೊಂಡರೆ ಅದಕ್ಕೂ ಸೊಸೆ ಬಂದ ಕಾಲ್ಗುಣ ಸರಿಯಿಲ್ಲ ಎಂದು ನಂಬುತ್ತಾರೆ.

ವಿಧವೆಯರಿಗೆ ನಿಷೇಧ

ಗಂಡ ಸತ್ತ ಮೇಲೆ ಹೆಂಡತಿ ವಿಧವೆಯಾಗುತ್ತಾಳೆ. ಯಾವುದೇ ಶುಭಕಾರ್ಯಗಳಲ್ಲಿ ಮುತ್ತೈದೆಯರಿಂದಲೇ ಪೂಜೆಮಾಡಿಸುತ್ತಾರೆ. ಮದುವೆ ಗಂಡಿಗೆ ನೀರು ಹುಯ್ಯುವಾಗ ಹೆಣ್ಣಿಗೆ ಸೋಗಲು ಹುಯ್ಯುವಾಗ, ಸೋಬಾನೆ ಪದ ಹಾಡುವಾಗ, ಮದುವೆಯ ಶುಭಕಾರ್ಯ ನಡೆಯುವಾಗ ಹೀಗೆ ಎಲ್ಲ ಶುಭ ಸಂದರ್ಭದಲ್ಲಿ ವಿಧವೆಯರಿಗೆ ಅವಕಾಶವಿಲ್ಲ, ಅಪಶಕುನವಾಗುತ್ತದೆ ಎಂಬ ನಂಬಿಕೆಯಿದೆ.

ಬೆಕ್ಕು

ಬೆಕ್ಕು ಸಾಮಾನ್ಯವಾಗಿ ಅಶುಭದ ಸಂಕೇತವಾಗಿಯೇ ಕಾಣುತ್ತದೆ. ಎಲ್ಲಿಗಾದರೂ ಹೊರಟಾಗ ಬೆಕ್ಕು

ಅಡ್ಡಬಂದರೆ ಅಶುಭವಾಗುತ್ತದೆ. ಹೋದ ಕೆಲಸ ಸಾದು ಆಗುವುದಿಲ್ಲ. ಬೆಳಿಗ್ಗೆ ಎದ್ದ ತಕ್ಷಣ ಬೆಕ್ಕಿನ ಮುಖ ನೋಡಬಾರದು. ನೋಡಿದರೆ ಆ ದಿನವೆಲ್ಲ ಒಳ್ಳೆಯದಾಗುವುದಿಲ್ಲ. ಒಂದು ವೇಳೆ ಬೆಕ್ಕಿನ ಮುಖ ನೋಡಿದರೆ ಮತ್ತೆ ಸ್ವಲ್ಪ ಹೊತ್ತು ಮಲಗಿ ಬಲಮಗ್ಗುಲಾಗೆ ಏಳಬೇಕು. ಬೆಕ್ಕು ವಿಚಿತ್ರವಾಗಿ ಕೂಗುವ ಅಥವಾ ಅಳುವ ಶಬ್ದ ಒಳ್ಳೆಯದಲ್ಲ ಎಂಬ ನಂಬಿಕೆ ಇಲ್ಲಿದೆ.

ಹಲ್ಲಿ ಶಕುನ

ಇಲ್ಲಿನ ಜನರು ಹಲ್ಲಿ ಲೊಚಗುಟ್ಟಿದರೆ ಒಳ್ಳೆಯದು ಮತ್ತು ಕೆಟ್ಟದ್ದು ಎರಡೂ ಆಗುತ್ತವೆ ಎಂಬ ನಂಬಿಕೆ ಇದೆ. ಯಾವುದಾದರು ಒಳ್ಳೆಯ ವಿಷಯ ಮಾತಾಡುವಾಗ ಹಲ್ಲಿ ಲೊಚಗುಟ್ಟಿದರೆ ಒಳ್ಳೆಯದು ಎಂದು ಕೆಟ್ಟಸುದ್ದಿ ಮಾತಾಡುತ್ತಿದ್ದಾಗ ಲೊಚಗುಟ್ಟಿದರೆ ಕೆಟ್ಟದಾಗುತ್ತದೆ ಎಂಬ ನಂಬಿಕೆ ಇದೆ. ಹಲ್ಲಿ ಲೊಚಗುಟ್ಟುವುದು ಯಾವ ಯಾವ ದಿಕ್ಕಿನಲ್ಲಿ ಲೊಚಗುಟ್ಟಿದರೆ ಒಳ್ಳೆಯದು ಮತ್ತು ಕೆಟ್ಟದ್ದು ಎಂದು ನಿರ್ಧರಿಸುತ್ತಾರೆ. ದೇವಮೂಲೆ, ಮನೆದೇವರಗದ್ದಿಗೆ ಇರುವ ಮೂಲೆ, ಕಬ್ಬಾಳು ಬೆಟ್ಟ ಇರುವ ದಿಕ್ಕು ಈ ಮೂಲೆಗಳಿಂದ ಹಲ್ಲಿ ಲೊಚಗುಟ್ಟಿದರೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಇವರಲ್ಲಿದೆ.

ವಿಧಿ-ನಿಷೇಧಗಳು

ಭಯ ಮತ್ತು ಭಾವನಾ ಮೂಲವಾದ ನಂಬಿಕೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಅಥವಾ ಬಲಗೊಳಿಸುವಂತಹದು ನಿಷೇಧ. ಇದನ್ನು ಮಾಡಬಾರದು ಇದು ಕೆಡಕು ಎನ್ನುವ ಸಾಮಾಜಿಕ, ಧಾರ್ಮಿಕ ಪ್ರತಿಬಂಧಕವೇ ನಿಷಿದ್ಧ ಎನ್ನಲಾಗುತ್ತದೆ. ಹೀಗಾಗಿ ಲಿಖಿತ ಕಾನೂನನ್ನು ಮೀರಿಸುವಂತಹ ಶಕ್ತಿ ನಿಬಂಧನೆಯಾಗಿ ನಿಷೇಧಕಾರ್ಯ ನಿರ್ವಹಿಸುತ್ತದೆ. ಕಬ್ಬಾಳು ಪರಿಸರದಲ್ಲಿ ವಿಧಿ ನಿಷೇಧಗಳು ವಿಭಿನ್ನವಾಗಿ ವಿಶಿಷ್ಟವಾಗಿ ಕಂಡುಬರುತ್ತವೆ. ನಿಷೇಧದ ಮೂಲ ಮಾತಿನಲ್ಲಿದೆ. ಸಕಾರಾತ್ಮಕ ಆಚರಣೆಗಳಿಗಿರುವಂತೆ ನಕಾರಾತ್ಮಕವಾದವೂ ಉಂಟು. ಸಕಾರಾತ್ಮಕವಾದವುಗಳನ್ನು ಮಾತ್ರ ವಿಧಿಗಳೆಂದು ನಕಾರಾತ್ಮಕವಾದವುಗಳನ್ನು ನಿಷೇಧಗಳೆಂದು ಕರೆಯಬಹುದು. ಇಲ್ಲಿನ ಕೆಲವು ನಿಷೇಧಗಳನ್ನು ಸಮುದಾಯಗಳಲ್ಲಿ ಪಾಲಿಸದೇ ಹೋದ ವ್ಯಕ್ತಿಯನ್ನು 'ಅಪವಿತ್ರ' ಎಂದು ವಿಧಿಗಳಿಗೆ ವಿರುದ್ಧವಾಗಿ ನಡೆದುದರಿಂದ ದೋಷಖಂಡಿತ ಎಂದು ಭಾವಿಸುತ್ತಾರೆ.

ನಿಷೇಧಗಳ ಸಕಾರಾತ್ಮಕ ಕ್ರಮಗಳು

ನಿಷೇಧಗಳನ್ನು ಸ್ವಾರ್ಥಕ್ಕಾಗಿ ಮಾಡಿಕೊಂಡರೂ, ಹೆಚ್ಚಿನ ನಿಷೇಧಗಳು ಸಾಮಾಜಿಕ ಸಂರಕ್ಷಣೆಗಳಿಗಾಗಿ ಮಾಡಿಕೊಂಡ ನಿಷೇಧಗಳಾಗಿವೆ. ಈ ನಿಷೇಧಗಳು ಹಲವಾರು ಸಕಾರಾತ್ಮಕ ಕ್ರಮಗಳನ್ನು ನಿರ್ವಹಿಸುತ್ತವೆ.

*ಅಂತರಕನಾಗಿ ಮಲಗಿ ನೀರು ಕುಡಿಯಬಾರದು.

*ಊಟಮಾಡುವಾಗ ಮಾತಾಡಬಾರದು, ನಗಬಾರದು.

*ಮಾಂಸದ ಊಟ ಉಂಡಮೇಲೆ ಮಜ್ಜಿಗೆಯನ್ನು ಉಣ್ಣಬಾರದು.

*ಊಟಮಾಡುವಾಗ ಮದ್ಯೆ ಕರೆಂಟ್ ಹೋದರೆ ಊಟ ನಿಲ್ಲಿಸಬಾರದು.

*ಊಟದ ತಟ್ಟೆಯನ್ನು ದಾಟಬಾರದು

*ರಾತ್ರಿವೇಳೆ ಊಟ ಮಾಡದೆ ಮಲಗಬಾರದು

*ಊಟ ಮಾಡುವಾಗ ಕಾಲು ಕುಣಿಸಬಾರದು

*ಊಟವಾದ ಮೇಲೆ ಮೈ ಮುರಿಯಬಾರದು

*ಊಟಮಾಡುವಾಗ ತಲೆಮೇಲೆ ಕೈಹೊತ್ತುಕೊಳ್ಳಬಾರದು.

*ಊಟಮಾಡುವಾಗ ನೆಲಕ್ಕೆ ಕೈಯನ್ನು ಊರಬಾರದು, ಊರಿದರೆ ಊಟ ನೆಲಕ್ಕೆ ಹೋಗುತ್ತದೆ.

*ಕುಕ್ಕುರುಗಾಲಲ್ಲಿ ಕೂತು ಉಣ್ಣಬಾರದು.

*ಊಟ ಆದ ಮೇಲೆ ತಟ್ಟೆ ನೆಕ್ಕಬಾರದು, ಕೈಯನ್ನು ನೆಕ್ಕಬಾರದು.

*ಊಟಮಾಡಿದ ಮೇಲೆ ಕೈ ಒಣಗಿಸಬಾರದು. ಒಣಗಿದರೆ ಗಂಡಸರ ಎದೆ ಒಣಗುತ್ತದೆ.

*ಗಂಡಸರು ಕೋಳಿ ತಲೆ ತಿಂದ್ರೆ ತಲೆ ನಿಲ್ಲಲ್ಲ. ಕಾಲು ತಿಂದ್ರೆ ಕಾಲು ನಡುಕ.

ಇಂತಹ ನೂರಾರು ನಿಷೇಧಗಳು ಕಬ್ಬಾಳಿನ ಪರಿಸರದಲ್ಲಿ ಕಂಡುಬರುತ್ತವೆ. ಇವುಗಳನ್ನು ಗಮನಿಸಿದಾಗ ನಿಷೇಧಗಳು ಹಲವು ಉದ್ದೇಶ ಗುರಿಗಳನ್ನು ಇಟ್ಟುಕೊಂಡು ಬಳಕೆಗೆ ಬಂದಿರುವುದು ಕಂಡುಬರುತ್ತವೆ. ಸಾಮಾನ್ಯವಾಗಿ ಮುಖಂಡರು ಪೂಜಾರಿಗಳು ಮೊದಲಾದ ಪ್ರಮುಖ ರಕ್ಷಣೆಗೆ ಮತ್ತು ಹಾನಿಗೆ ವಿರುದ್ಧವಾದ ಅಂಶಗಳು ನಿಗೂಢ ಶಕ್ತಿಗಳ ಪ್ರಭಾವದಿಂದ ಸಾಮಾನ್ಯ ಮಾನವರ ರಕ್ಷಣೆ, ಕೆಲವೊಂದು ಆಹಾರ ಸೇವನೆಯ ಮೂಲಕ ಉಂಟಾಗಬಹುದಾದ ಅಪಾಯಗಳನ್ನು ನಿವಾರಿಸುವುದು. ಒಟ್ಟಿನಲ್ಲಿ ಪರಂಪರಾಗತವಾಗಿ ಬಂದಿದೆ ಎನ್ನುವ ಭಾವುಕತೆಯಿಂದ ನಿಷೇಧಗಳನ್ನು ಅಪ್ಪಿಕೊಳ್ಳುವ ಕುರುಡುತನ ಸಲ್ಲದು. ಒಟ್ಟಿನಲ್ಲಿ ಇಲ್ಲಿನ ನಿಷೇಧಗಳ ಸಕಾರಾತ್ಮಕ ಕ್ರಮಗಳು ವೈಚಾರಿಕ ಮತ್ತು ವೈಜ್ಞಾನಿಕ ದೃಷ್ಟಿಯಿಂದ ನೋಡಿದರೂ ವ್ಯಕ್ತಿ ಮತ್ತು ಸಮಾಜಕ್ಕೆ ಒಳ್ಳೆಯದೇ ಆಗಿದೆ. ಆದರೂ ನಿಷೇಧವೊಂದರ ಪ್ರಸ್ತುತ ಅಗತ್ಯ ಅರ್ಥವನ್ನು ಶೋಧಿಸಿಯೇ ಅದರ ಆಯ್ಕೆ ಹಾಗೂ ಅಳವಡಿಕೆ ಆಗಬೇಕಾಗಿದೆ.

ನಂಬಿಕೆ-ವಿಧಿ-ನಿಷೇಧಗಳು

೧. ಬರೀ ತೊಟ್ಟಿಲನ್ನು ತೂಗಿದರೆ ಮಕ್ಕಳಿಗೆ ಹೊಟ್ಟೆನೋವಾಗುತ್ತದೆ.

೨. ದೇವರಲ್ಲಿ ಹೂ ಕೇಳಿದಾಗ ಬಲಗಡೆ ಕೊಟ್ಟರೆ ಒಳ್ಳೆಯದು, ಎಡಗಡೆ ಕೊಟ್ಟರೆ ಅಶುಭ ಯಾವುದೇಕಾರ್ಯ ಆಗುವುದಿಲ್ಲ ಎಂಬ ನಂಬಿಕೆ.

೩. ಮಂಗಳವಾರ, ಶುಕ್ರವಾರ ಹೊರಗಿನವರಿಗೆ ಹಣ ಕೊಡಬಾರದು, ಲಕ್ಷ್ಮಿ ಹೊರಹೋಗುತ್ತಾಳೆ.

೪. ಬೆಕ್ಕು ಮುಖ ತೊಳೆದರೆ ಶುಭವಾಗುವುದು.

೫. ಕಂಬ ಸುತ್ತಬಾರದು

೬. ರಾಗಿಕಲ್ಲು ಒಳಕಲ್ಲು ಕಾಲಿನಲ್ಲಿ ಒದಿಯಬಾರದು.

೭. ಯಾರಾದರೂ ಮಲಗಿರುವಾಗ ದಾಟಬಾರದು, ದಾಟಿದರೆ ದಾಟಿದ ಹಾಗೆಯೇ ವಾಪಸ್ಸು ಬರಬೇಕು.

೮. ಹೋಗುತ್ತೇನೆ ಎನ್ನಬಾರದು, ಹೋಗಿ ಬರುತ್ತೇನೆ ಎನ್ನಬೇಕು.

೯. ಹುಟ್ಟಿದ ದಿನ, ಮಂಗಳವಾರ, ಅಮಾವಾಸ್ಯೆ ದಿನ ಕೂದಲು ಕಟಿಂಗ್, ಕ್ಷೌರ ಮಾಡಿಸಬಾರದು.

೧೦. ಹೊಸ್ತಿಲನ್ನು ಕಾಲಿನಲ್ಲಿ ತುಳಿಯಬಾರದು ಮತ್ತು ಹೊಸ್ತಿಲಿನ ಮೇಲೆ ಕುಳಿತು ಕೊಳ್ಳಬಾರದು, ಹೊಸ್ತಿಲಿನ ಮೇಲೆ ನಿಂತು ಸೀನಬಾರದು.

೧೧. ಒಂಟಿಶೀನು ಅಪಶಕುನ ಜೋಡಿ ಶೀನು ಶುಭಶಕುನ.

೧೨. ಅಕ್ಕಿ ಸೋಸುವಾಗ ತಿನ್ನಬಾರದು. ತಿಂದರೆ ಅವರ ಮದುವೆಯಲ್ಲಿ ಮಳೆಬರುತ್ತದೆ.

೧೩. ಬೆಕ್ಕು ಕೆಟ್ಟ ದನಿಯಲ್ಲಿ ಕೂಗಬಾರದು, ಹಾಗೆ ಕೂಗಿದರೆ ಓಡಿಸಬೇಕು.

೧೪. ಬೆಕ್ಕು ಮುಖ ನೆಕ್ಕಿದರೆ, ಕಾಗೆ ಮನೆ ಮುಂದೆ ಕೂಗಿದರೆ ಮನೆಗೆ ನೆಂಟರು ಬರುತ್ತಾರೆ.

೧೫. ಹೊಸ್ತಿಲ ಮೇಲೆ ಕುಳಿತರೆ ಸಾಲ ಹೆಚ್ಚಾಗುತ್ತದೆ.

೧೬. ಬಿಸಿಲಿನಲ್ಲಿ ಮಳೆಬಂದರೆ ನರಿ, ಕಾಗೆ, ಗೂಬೆ, ಮದುವೆ ಆಗುತ್ತದೆ.

೧೭. ಶುಭಕಾರ್ಯಕ್ಕೆ ಮೂವರು ಹೋಗಬಾರದು, ಹೋದರೆ ಜೇಬಿನಲ್ಲಿ ಅಡಿಕೆ ತಿಟ್ಟ ಇಟ್ಟುಕೊಂಡು ಹೋಗಬೇಕು.

೧೮. ಶುಭಕಾರ್ಯಕ್ಕೆ ಹೋಗುವಾಗ ಬೆಕ್ಕು, ವಿಧವೆ, ಹಾರೆ, ಗುದ್ಲಿ, ಖಾಲಿಬಿಂದಿಗೆ, ಕ್ಷೌರಿಕ, ಒಂಟಿಬ್ರಾಹ್ಮಣ ಅಡ್ಡಬರಬಾರದು.

೧೯. ಹೊರಗೆ ಹೋಗುವಾಗ ತುಂಬಿದ ಕೊಡ ಎದುರು ಬಂದರೆ ಒಳ್ಳೆಯದು.

೨೦. ಎಲ್ಲಿಗಾದರೂ ಹೋಗುವಾಗ ಮುಂಗುಸಿ ಅಡ್ಡಬಂದರೆ, ಆಕಳು ಬಂದರೆ ಶುಭಶಕುನ.

೨೧. ಶವಸಂಸ್ಕಾರ ಮುಗಿಸಿ ಬರುವವರು ಎದುರು ಬರಬಾರದು. ಹಾಗೆ ಬಂದರೆ ಪಕ್ಕಕ್ಕೆ ಸರಿದು ನಿಲ್ಲಬೇಕು.

೨೨. ಬೆಳಿಗ್ಗೆ ಎದ್ದ ತಕ್ಷಣ ಎರಡು ಅಂಗೈಗಳನ್ನು ಉಜ್ಜಿಕೊಂಡು ದೇವರ ಫೋಟೋ ಹಾಗೂ ತಂದೆ-ತಾಯಿಯನ್ನು ನೋಡಬೇಕು.

೨೩. ಗಂಡನ ತಟ್ಟೆಯಲ್ಲಿ ಹೆಂಡತಿ ಊಟಮಾಡಿದರೆ ಗಂಡನ ಪ್ರೀತಿ ಆಯಸ್ಸು ಹೆಚ್ಚಾಗುತ್ತದೆ.

೨೪. ಮುಸ್ಸಂಜೇಲಿ ಮಲಗಬಾರದು.

೨೫. ಬೆಳಿಗ್ಗೆ ಎದ್ದ ತಕ್ಷಣ ಹಸುವಿನ ಮುಖ ತೆಂಗಿನ ಮರ ನೋಡಬೇಕು.

೨೬. ಮಕ್ಕಳು ಮಲಗಿರುವಾಗ ಮುತ್ತು ಕೊಡಬಾರದು.

೨೭. ಹೆಂಡತಿ ಗರ್ಭಿಣಿ ಆಗಿದ್ದರೆ ಗಡ್ಡ ಮತ್ತು ತಲೆಗೂದಲು ಕಟ್ ಮಾಡಿಸುವ ಹಾಗಿಲ್ಲ.

೨೮. ಊಟಮಾಡುವಾಗ ಊಟದ ತಟ್ಟೆಯನ್ನು ದಾಟಬಾರದು, ಊಟ ಮಾಡುವಾಗ ಮೈ ಮುರಿಯಬಾರದು.

೨೯. ಬಂಗಾರ ಸಿಕ್ಕರೆ ಬಂಗು ಬಿಡಿಸುತ್ತದೆ. ಆದಕಾರಣ ಅದನ್ನು ಐನೋರಿಗೆ ಕೊಡಬೇಕು.

೩೦. ಯಾರಿಗಾದರೂ ನೀರು ಚುಮುಕಿಸಿದರೆ ಹೋಯ್ತು ಅಥವಾ ಒಳ್ಳೆದು ಅನ್ನಬೇಕು. ಇಲ್ಲದಿದ್ದರೆ ಉಗುರು ಸುತ್ತು ಆಗುತ್ತದೆ.

೩೧. ಮೈಮೇಲಿನ ಬಟ್ಟೆಯನ್ನು ಹೊಲಿಯಬಾರದು.

೩೨. ಎರಡೂ ಅಂಗೈಗಳನ್ನು ಜೋಡಿಸಿ ಹಿಡಿದಾಗ ಬೆರಳಿನ ಸಂದಿಗಳಲ್ಲಿ ತೂತುಗಳು ಕಾಣಿಸಿದರೆ ಹಣ ಉಳಿಯುವುದಿಲ್ಲ.

೩೩. ಹುಡುಗರು ಕಪ್ಪು ಇರುವೆ ಗೂಡಿನಲ್ಲಿ ನಿಂತುಕೊಂಡು ಇರುವೆಗಳು ಜೋರಾಗಿ ಮೈಮೇಲೆ ಹತ್ತಿದರೆ ಪಾಸಾಗುತ್ತಾರೆ.

೩೪. ಅಣ್ಣೆಕಲ್ಲು ಆಡಿದರೆ ಮಳೆ ಬರೊಲ್ಲ.

೩೫. ಬಿಕ್ಕಳಿಕೆ ಬಂದರೆ ಯಾರಾದರೂ ನೆನೆಸಿಕೊಳ್ಳುತ್ತಿದ್ದಾರೆ ಎಂದರ್ಥ.

೩೬. ದೇವಸ್ಥಾನದಲ್ಲಿ ದೇವರ ದರ್ಶನವಾದ ಮೇಲೆ ಸ್ವಲ್ಪ ಹೊತ್ತು ಕುಳಿತು ಆಮೇಲೆ ಹೋಗಬೇಕು.

೩೭. ಶವಸಂಸ್ಕಾರ ಮಾಡುವಾಗ ಹಿಂದೆ ತಿರುಗಿ ನೋಡಬಾರದು.

೩೮. ಹೊರಗೆ ಹೋಗುವಾಗ ಎಲ್ಲಿಗೆ ಎಂದು ಕೇಳಬಾರದು.

೩೯. ಒಲೆ ಉರಿಯುವಾಗ ಜೋರಾಗಿ ಮೊರೆದರೆ ನೆಂಟರು ಬರುತ್ತಾರೆ.

೪೦. ನಾಯಿ ಮುಗಿಲಿಗೆ ಮುಖಮಾಡಿ ಕೂಗಿದರೆ ಮಳೆ ಬರುವ ಸಂಭವ.

೪೧. ಹೊಸ ಮನೆಗೆ ಹೋಗುವಾಗ ಹಾಲು ಉಕ್ಕಿಸಿ ಹೋಗಬೇಕು.

೪೨. ಗಂಡನ ಊಟವಾದ ಮೇಲೆ ಹೆಂಡತಿ ಊಟಮಾಡಬೇಕು.

೪೩. ಮುಟ್ಟಾದವರು ಎಳೆಯ ಮಕ್ಕಳು, ದೇವರನ್ನು ಮುಟ್ಟಬಾರದು.

೪೪. ಮುಟ್ಟಾದವರು ಮಲ್ಲಿಗೆ ಗಿಡ ಮುಟ್ಟಬಾರದು. ಮುಟ್ಟಿದರೆ ಗಿಡ ಒಣಗುತ್ತೆ.

೪೬. ಒಂಟಿಕಾಲಲ್ಲಿ ನಿಲ್ಲುವುದು, ಕಾಲನ್ನು ಬೇರೆಯವರಿಗೆ ತಾಗಿಸಬಾರದು.

೪೭. ಹೆಂಗಸರು ಅವಳಿ ಬಾಳೆ ಹಣ್ಣು ತಿನ್ನಬಾರದು.

೪೮. ಮನೆಮುಂದೆ ತುಳಸಿ ಗಿಡ ಇದ್ರೆ ಕಾಯಿಲೆ ಬರುವುದಿಲ್ಲ.

೪೯. ಗೂಬೆ ಮನೆ ಮುಂದೆ ಕೂಗಿದರೆ ಸಾವಿನ ಸೂಚನೆ.

೫೦. ಮನೆಯಲ್ಲಿ ಸಿಳ್ಳೇ ಹೊಡೆದರೆ ತಿಗಣೆ ಹೆಚ್ಚುತ್ತವೆ.

೫೧. ಮನೆಯಲ್ಲಿ ನಾಲಿಗೆ ತೆಗೆಯಬಾರದು.

೫೨. ಮನುಷ್ಯರನ್ನು, ಹಸುಗಳನ್ನು ಕಸಬರಲಿನಿಂದ ಹೊಡೆಯಬಾರದು.

೫೩. ಊಟಮಾಡುವಾಗ ಮಾತಾಡಬಾರದು, ಅಳಬಾರದು.

೫೪. ಮದುವೆಯಾದ ವರ್ಷ ದಂಪತಿಗಳ ಸಮೇತ ಜಾತ್ರೆ ನೋಡಬೇಕು.

೫೫. ಮಕ್ಕಳು ವೀಳ್ಯದೆಲೆ ಹಾಕಬಾರದು.

೫೬. ಆರು ಬೆರಳಿದ್ದವರು ಅದೃಷ್ಟವಂತರು.

೫೭. ಮುತ್ತೈದೆಯರು ಗಾಜಿನ ಬಳೆ, ಮಾಂಗಲ್ಯ ಇಲ್ಲದೆ ಬಹಳ ಹೊತ್ತು ಇರಬಾರದು.

೫೮. ರಾತ್ರಿ ಹೊತ್ತು ಉಪ್ಪು ಹೊರಗಡೆ ಕೊಡಬಾರದು.

೫೯. ಆಪರಾಣಿಯನ್ನು ಹೂತಾಕಿದರೆ ಹಣ ಸಿಗುತ್ತದೆ.

೬೦. ಗೂಬೆ ಮನೆಮುಂದೆ ಕೂತು ಕೂಗಿದರೆ ಸಾವಿನ ಸೂಚನೆ.

೬೧. ನಕ್ಷತ್ರ ಬಿದ್ದರೆ ಯಾರಾದರೂ ದೊಡ್ಡವರು ಸಾಯುತ್ತಾರೆ. ಇದನ್ನು ನೋಡಿದರೆ ತಕ್ಷಣ ಹಸಿರು ನೋಡಬೇಕು.

೬೨. ಗಂಡಿಗೆ ತಲೆಯಲ್ಲಿ ಎರಡು ಸುಳಿ ಇದ್ದರೆ ಎರಡು ಮದುವೆಯೋಗ.

೬೩. ನಾಲಿಗೆಯ ಮೇಲೆ ಮಚ್ಚೆ ಇದ್ದವರು ಆಡಿದ ಮಾತು ನಿಜವಾಗುತ್ತದೆ.

೬೪. ಮನೆಮುಂದೆ ತುಳಸಿಗಿಡ ಇದ್ದರೆ ಕಾಯಿಲೆ ಬರುವುದಿಲ್ಲ.

೬೫. ಅಂಗಾಲು ಅಂಗೈ ಕಡಿದರೆ ಜಗಳವಾಗುತ್ತದೆ.

೬೬. ಹೆಣ್ಣಿಗೆ ಎಡಗಣ್ಣು ಗಂಡಿಗೆ ಬಲಗಣ್ಣು ಹಾರಿದರೆ ಒಳ್ಳೆಯದು.

೬೭. ಕಾಲನ್ನು ತೊಳೆಯುವಾಗ ಹಿಮ್ಮಡಿ ಪೂರ್ತಿ ತೊಳೆಯಬೇಕು. ಇಲ್ಲದಿದ್ದರೆ ಶನಿ ಹಿಡಿಯುತ್ತದೆ.

೬೯. ಯಾವುದೇ ಶುಭ-ಅಶುಭ ಕಾರ್ಯಗಳಿಗೆ ಪಂಚಾಂಗ ಕೇಳುವುದು.

೭೦. ಬೆಳಿಗ್ಗೆ ಏಳುವಾಗ ಬಲಮಗ್ಗುಲಲ್ಲಿ ಏಳಬೇಕು.

೭೧. ಮನೆಯಲ್ಲಿ ಯಾರಾದರೂ ಸತ್ತರೆ ಸತ್ತವರ್ಷವೇ ಮದುವೆಯಾಗಬೇಕು. ಇಲ್ಲದಿದ್ದರೆ ಮೂರು ವರ್ಷ ಮದುವೆಯಾಗುವುದಿಲ್ಲ.

೭೨. ಮಗುವಿಗೆ ಕನ್ನಡಿ ತೋರಿಸಬಾರದು, ಮಾತು ಬರುವುದಿಲ್ಲ.

೭೩. ಕೈಯಲ್ಲಿ ಗರುಡರೇಖೆ ಇರುವವರು ಕಂಡರೆ ನಾಗರಹಾವು ಹೆದರುತ್ತದೆ.

೭೪. ಮಕ್ಕಳಿಗೆ ಬೇಗ ಹಲ್ಲು ಬರದಿದ್ದರೆ ಬತ್ತದ ಮೊನೆಯಿಂದ ಕೀಚಬೇಕು.

೭೫. ಮಕ್ಕಳಿಗೆ ಜೊಲ್ಲು ಸುರಿದರೆ ಬೇಗ ಮಾತು ಬರುತ್ತದೆ.

೭೬. ಮಕ್ಕಳಿಗೆ ಹಲ್ಲು ಬಿದ್ದರೆ ತೊಪ್ಪೆ ಉಂಡೆ ಕಟ್ಟಿ ಹಸಿರು ಕಳ್ಳಿ ಮೇಲೆ ಎಸೆಯಬೇಕು.

೭೭. ಮನೆಯೊಳಗೆ ಕಾಗೆ ಬರಬಾರದು.

೭೮. ಯಾವುದೇ ಕೃಷಿ ಚಟುವಟಿಕೆಗಳಲ್ಲಿ ಮೊದಲು ಕಾಯಿ ಒಡೆದು ಪೂಜೆ ಮಾಡಬೇಕು.

೭೯. ಯಾರನ್ನಾದರೂ ಕುರಿತು ಮಾತನಾಡುವಾಗ ಅವರು ಅಲ್ಲಿಗೆ ಬಂದರೆ ಅವರಿಗೆ ನೂರು ವರ್ಷ ಆಯುಸ್ಸು.

೮೦. ಮಲಗಿದ್ದವರ ಮುಖಕ್ಕೆ ನಾಮ, ಬೊಟ್ಟು ಇಡಬಾರದು.

೮೧. ಮಲಗುವಾಗ ಕಾಲನ್ನು ಚಕಲಬಕಲು ಹಾಕಿಕೊಂಡು ಮಲಗಬಾರದು.

೮೨. ಅರೆ ನಿದ್ರೆ ಮಾಡಿಸಬಾರದು.

೮೩. ಮುಸ್ಸಂಜೇಲಿ ಮಲಗಬಾರದು.

೮೪. ಮೊಕಾಣಾಗಿ ಮಲಗಬಾರದು.

೮೫. ಬೆಳಗಿನ ಜಾವ ಬಿದ್ದ ಕನಸು ನಿಜವಾಗುತ್ತದೆ.

೮೬. ಸ್ವಪ್ನದಲ್ಲಿ ಅಣಬೆ ಕಾಣಬಾರದು ಕಂಡರೆ ಬೆಳಿಗ್ಗೆ ಹೆಣ ಕಾಣುತ್ತದೆ.

೮೭. ಮುಟ್ಟಾದರೆ ಮೂರು ದಿನ ಹೊರಗಿರಬೇಕು.

೮೮. ರಾಗಿ ಬೀಸುವ ಕಲ್ಲನ್ನು, ಒರಳುಕಲ್ಲನ್ನು ಒದೆಯಬಾರದು.

೮೯. ಮಕ್ಕಳ ಮೊದಲ ಕೂದಲನ್ನು ಮನೆದೇವರಿಗೆ ಮುಡಿ ಕೊಡಬೇಕು. ಕಟಿಂಗ್ ಮಾಡಿಸುವಂತಿಲ್ಲ.

೯೦. ಮಲಗಿರುವ ಮಕ್ಕಳಿಗೆ ಅಲಂಕಾರ ಮಾಡಬಾರದು.

೯೧. ಬಂಜೆಯರು ಮಕ್ಕಳನ್ನು ಮುಟ್ಟಬಾರದು.

೯೨. ತೊಲೆಯ ಕೆಳಗೆ ಮಲಗಬಾರದು.

೯೩. ಹೊಸ್ತಿಲ ಮೇಲೆ ಕುಳಿತುಕೊಳ್ಳಬಾರದು.

೯೪. ರಾತ್ರಿಹೊತ್ತು ತಲೆಬಾಚಿಕೊಳ್ಳಬಾರದು.

೯೫. ಬೆಕ್ಕು ಅಡ್ಡಬಂದ್ರೆ ಪ್ರಯಾಣ ನಿಷಿದ್ದ.

೯೬. ತಲೆಗೆ ಕಾಗೆ ಸೋಕಿದರೆ ಶನಿ ಹೆಗಲೇರುತ್ತಾನೆ.

೯೭. ಗೂಬೆಯ ಕೂಗು ಅಪಶಕುನ

೯೮. ಬೆಳಗಿನ ಸಮಯ ನರಿ ಮುಖ ನೋಡಿದರೆ ಶುಭ.

೯೯. ಗರ್ಭಿಣಿ ಆಗಿದ್ದಾಗ ಬಾಳೆಹಣ್ಣು ಪರಂಗಿಹಣ್ಣು ತಿನ್ನುವಂತಿಲ್ಲ.

೧೦೦. ಶುಕ್ರವಾರ ಸೊಸೆ ಕಳಿಸುವುದಿಲ್ಲ. ಮಂಗಳವಾರ ಮಗಳ ಕಳಿಸುವುದಿಲ್ಲ.

೧೦೧. ಸತ್ತಿರುವ ವ್ಯಕ್ತಿಗೆ ಉಡುದಾರ ತೆಗೆಯುವುದು.

೧೦೨. ಶವಸಂಸ್ಕಾರಕ್ಕೆ ಹೋದವರು ಸ್ನಾನಮಾಡಿಯೇ ಮನೆಗೆ ಬರಬೇಕು.

೧೦೩. ದೀಪವನ್ನು ಆರಿಸುವಾಗ ಬಾಯಿಂದ ಆರಿಸಬಾರದು.

೧೦೪. ದೀಪವನ್ನು ಆರಿಸುವಾಗ ದೀಪಕೆಡಿಸು ಅನ್ನುವಂತಿಲ್ಲ, ದೀಪದೊಡ್ಡದು ಮಾಡು ಅನ್ನಬೇಕು.

ಅಧ್ಯಾಯ ೭

ಕಬ್ಬಾಳು ಗ್ರಾಮ ಮತ್ತು ಸಮಕಾಲೀನತೆ

ಅಧ್ಯಾಯ ೭

ಕಬ್ಬಾಳು ಗ್ರಾಮ ಮತ್ತು ಸಮಕಾಲೀನತೆ

ಬದಲಾದ ಸನ್ನಿವೇಶಗಳ ನಡುವೆ ಯಾವುದೇ ಪದ್ಧತಿ, ಸಮಾಜ, ಸಂಸ್ಕೃತಿ ಪ್ರತ್ಯೇಕವಾಗಿ ಉಳಿಯಲು ಸಾಧ್ಯವಿಲ್ಲ. ಇಂದು ತೀವ್ರತರವಾಗಿ ವೈಜ್ಞಾನಿಕ, ವಾಣಿಜ್ಯ ಮತ್ತು ಆಧುನಿಕ ವಿದ್ಯಮಾನಗಳು ಪ್ರತಿಯೊಂದು ಕ್ಷೇತ್ರವನ್ನು ಬದಲಾವಣೆ ಪ್ರಕ್ರಿಯೆಗೆ ಒಳಗುಮಾಡಿವೆ. ಹಿಂದಿನದು ಹಳೆಯ ಪರಂಪರೆ ಎನಿಸಿದರೆ ಇಂದಿನದು ಆಧುನಿಕವೆಂದು ಪರಿಗಣಿಸಲ್ಪಡುತ್ತದೆ. ಬದುಕಿನಲ್ಲಿ ಹಿಂದೆ ಇದ್ದಂತಹ ನಡೆನುಡಿಗಳು ತರುವಾಯ ಸುದಾರಣೆಗೊಳ್ಳುತ್ತ ಆಧುನಿಕತೆಯ ಕಾಲ ನಿರ್ಮಾಣವಾಗುತ್ತದೆ. ಇದು ಗತಕಾಲದ ತಿಳುವಳಿಕೆಯ ಕ್ರಮವನ್ನು ಬದಲಾಯಿಸುವುದರೊಂದಿಗೆ ಅಲ್ಲಿನ ಜನರ ಜೀವನದಲ್ಲು ಬದಲಾವಣೆಗಳನ್ನು ತರುತ್ತದೆ. ಈ ಬದಲಾವಣೆಗೆ ಜನರ ಜೀವಿನ ವಿಧಾನ, ಚಿಂತನೆ, ಮೌಲ್ಯಗಳು, ಆಚರಣೆಗಳು, ಸಂಪ್ರದಾಯ, ಆಚಾರ-ವಿಚಾರ, ಸಾಮಾಜಿಕ ಸಂದರ್ಭಗಳಲ್ಲಿಯೂ ಪರಿವರ್ತನೆ ಕಂಡುಬರುತ್ತದೆ. ಪ್ರಸ್ತುತ ಕಬ್ಬಾಳು ಪರಿಸರ ಈ ಎಲ್ಲ ವಿಧದ ಬದಲಾವಣೆಗೊಳಪಟ್ಟು, ಬದಲಾಗುತ್ತಿರುವ ಕಾಲದ ಜೊತೆಗೆ ಹೊಂದಾಣಿಕೆಯನ್ನು ಮಾಡಿಕೊಂಡಿದೆ.

ಹಾಗಾಗಿ ಆಧುನಿಕ ಕೃಷಿ ಪಂಡಿತರು ಜನಸಂಖ್ಯೆ ಹೆಚ್ಚಾದಂತೆಲ್ಲ ಕೈಗಾರಿಕಾ ಉತ್ಪನ್ನಮುಖಿಗಳಾಗದೆ ಮಾನವ ಸಂಪನ್ಮೂಲ ಬಳಕೆಯ ಶ್ರಮ ಸಲಕರಣೆಗಳ ಸಾಧ್ಯತೆಗಳತ್ತ ಗಮನಹರಿಸಬೇಕು. ಆಗ ಹೆಚ್ಚುತ್ತಿರುವ ಮಾನವನ ಸಂಪನ್ಮೂಲದ ಸದ್ಬಳಕೆ ಸ್ವಲ್ಪವಾದರೂ ಸರಿಯಾದ ಕ್ರಮದಲ್ಲಿ ಉಪಯೋಗಕ್ಕೆ ಬರುತ್ತದೆ. ಹಾಗು ದುಡಿಯುವವರೆಲ್ಲರಿಗೂ ಕೃಷಿಯ ಬಗ್ಗೆ ಅರಿವು ಮತ್ತು ಆಸಕ್ತಿಮೂಡಿಸಿ ಅವಕಾಶ ನೀಡುವಂತಾದರೆ ನಿರುದ್ಯೋಗ ಸಮಸ್ಯೆ ನಿವಾರಣೆಯಾಗಿ ಆಹಾರದ ಸಮಸ್ಯೆ ಪರಿಹರಿಸಬಹುದು. ಭೂಮಿ ಮತ್ತು ಮಾನವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಳ್ಳಲು ಕೃಷಿಯಿಂದ ಸಾಧ್ಯವಾಗುತ್ತದೆ.

ದೇಸೀಯ ಸತ್ವವನ್ನು ಮನಗಂಡು ನೆಲಮೂಲ ಸಂಸ್ಕೃತಿಯನ್ನು ಗೌರವಿಸಿ, ವಿಸ್ತರಿಸಿ, ಉಳಿಸಿ, ಬೆಳೆಸುವ ಅರಿವು ನೀಡುವುದು ಮತ್ತು ಈ ನೆಲದ ಮೂಲ ಬೀಜ, ತಳಿಗಳ ನಿರಾಕರಣೆಯನ್ನು ಬಿಟ್ಟು ಅವುಗಳ ಸಂವರ್ದನೆ ಮತ್ತು ಬಲವರ್ದನೆಗೆ ಹೆಚ್ಚಿನ ಆದ್ಯತೆ ಮತ್ತು ಆಸಕ್ತಿ ವಹಿಸುವುದು ಅನಿವಾರ್ಯವಾಗಿದೆ. ಸಹಜ ಕೃಷಿಯು ನಿಸರ್ಗಧರ್ಮಕ್ಕೆ ಕೆಡಕಾಗದಂತೆ ಬದುಕನ್ನು ಅರಿಯುವ, ಬದುಕನ್ನು ಬಾಳುವ ಜೀವನಮಾರ್ಗವನ್ನು ತೋರುವ, ತಾನೂ ಬದುಕಿ ಜೀವ ಜಗತ್ತನ್ನು ಬದುಕಿಸುವಂತೆ ತನ್ನ ನಡೆಯನ್ನು ನಿಯಂತ್ರಿಸಿಕೊಳ್ಳುವ ಜೀವನ ಮಾರ್ಗವಾದ 'ಮಧ್ಯಮ ಮಾರ್ಗ'ದಲ್ಲಿ ನಡೆಯುವ ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ಅನುಸರಿಸುವುದು ಉತ್ತಮ ಮಾರ್ಗವಾಗಿದೆ.

ಕಬ್ಬಾಳು ಪರಿಸರದ ಕೇಂದ್ರಬಿಂದು ಗ್ರಾಮದೇವತೆ ಕಬ್ಬಾಳಮ್ಮ. ಸುಮಾರು ವರ್ಷಗಳ ಹಿಂದೆ ಕಬ್ಬಾಳಮ್ಮ ಅಷ್ಟು ಪ್ರಸಿದ್ಧಿ ಪಡೆದಿರಲಿಲ್ಲ. ಕಬ್ಬಾಳು ದೇವಸ್ಥಾನಕ್ಕೆ ಹೋದರೆ ಪೂಜೆ ಮಾಡಿಸಲು ಪೂಜಾರಿಗಳೇ ಇರುತ್ತಿರಲಿಲ್ಲ. ಪೂಜಾರಿಗಳು ಹೊಲದ ಕೆಲಸಗಳಲ್ಲಿ ತೊಡಗುತಿದ್ದರು. ಪೂಜೆ ಮಾಡಿಸಲು ಹೋಗಿ ಕರೆದರೆ ಹೊಲ ಊಳುವುದನ್ನು ಬಿಟ್ಟು ಬಂದು ಪೂಜೆಮಾಡಿ ಮತ್ತೆ ಹೊಲ ಊಳುವ ಕೆಲಸ ಮುಂದುವರೆಸುತ್ತಿದ್ದರು. ಇವರ ಮುಖ್ಯ ಉದ್ಯೋಗ ಕೃಷಿಯೇ ಆಗಿತ್ತು. ಇಂದು ಇವರ ಉದ್ಯೋಗವೇ ಪೂಜೆ ಮಾಡುವುದಾಗಿದೆ. ಕಬ್ಬಾಳಮ್ಮನ ಭಕ್ತರು ದಿನೇ ದಿನೇ ಹೆಚ್ಚಾಗುತ್ತಿದ್ದಾರೆ ಎಂಬುದು ಮುಖ್ಯವಾಗುತ್ತದೆ. ಪೂಜಾರಿಗಳಿಗೆ ಬರುವ ಆದಾಯವೂ ಹೆಚ್ಚಾಗುತ್ತಿದೆ. ಮುಂದೆ ಪೂಜೆ ಮಾಡಿಸಲು ಕಾಯ್ದಿರಿಸುವ ವ್ಯವಸ್ಥೆ ಬರಬಹುದು.

ಹಿಂದೆ ಕಬ್ಬಾಳಮ್ಮನ ಜಾತ್ರೆಯಲ್ಲಿ ಕೊಂಡಕ್ಕೆ ಸೌದೆಗಳನ್ನು ಎಳವಾರ ಕಟ್ಟಿಕೊಂಡು ಮೆರವಣಿಗೆ ಮಾಡಿಕೊಂಡು ಹೋಗುತ್ತಿದ್ದರು. ನಂತರ ಎತ್ತು ಗಾಡಿಗಳಲ್ಲಿ ಸೌದೆಗಳನ್ನು ತುಂಬಿಕೊಂಡು ಹೋಗುತ್ತಿದ್ದರು. ಇಂದು ಟ್ರ್ಯಾಕ್ಟರ್‌ಗಳಿಗೆ ಪೂಜೆ ಮಾಡಿ ಕೊಂಡಕ್ಕೆ ಸೌದೆಗಳನ್ನು ತುಂಬಿಕೊಂಡು ಕೊಂಡಕ್ಕೆ ಹಾಕುತ್ತಾರೆ. ಟಾಟಾಸುಮೋದಂತಹ ಕಾರು ಜೀಪುಗಳ ಮೇಲೆ ಎರಡು ಸೌದೆಗಳನ್ನು ಕಟ್ಟಿಕೊಂಡು ಕೊಂಡಕ್ಕೆ ಹಾಕುವ ಸಂಸ್ಕೃತಿ ಬೆಳೆದು ಬಂದಿದೆ. ಇಲ್ಲಿ ಎಷ್ಟೇ ಆಧುನಿಕತೆಯ ಪ್ರಭಾವ ಬೀರಿದ್ದರು ಇವರ ಆಚರಣೆ ಶೈಲಿ ಬೇರೆ ಬೇರೆ ರೂಪ ಪಡೆಯುತ್ತಿದ್ದರು ಆಚರಣೆಯ ಉದ್ದೇಶ, ಗುರಿ, ಆಶಯ ಒಂದೇ ಆಗಿದೆ. ಆಚರಣೆಗಳು ಆಧುನಿಕತೆಯನ್ನು ತನ್ನೊಳಗೆ ಹಿಡಿದಿಟ್ಟುಕೊಳ್ಳುತ್ತಿವೆ. ಎಂತಹ ಅತ್ಯಾಧುನಿಕತೆಯು ಬಂದರು ಇಲ್ಲಿನ ಆಚರಣೆಗಳಿಗೆ, ನಂಬಿಕೆಗಳಿಗೆ ತಲೆಬಾಗಿದಂತಿದೆ. ಕಬ್ಬಾಳಮ್ಮನ ಮೇಲಿನ ಭಕ್ತಿ, ನಂಬಿಕೆ ಜನರಲ್ಲಿ ಮತ್ತಷ್ಟು ಹೆಚ್ಚಾಗಿದೆ.

ಇಲ್ಲಿ ಅಪಾರವಾದ ಜನಪದ ಸಾಹಿತ್ಯ ಜನರಲ್ಲಿ ತುಂಬಿದೆ. ಇಂದು ಅದರ ಪ್ರಭಾವ ಕ್ಷೀಣಿಸುತ್ತಿದೆ. ಜಾನಪದ ಸಾಹಿತ್ಯ ತುಂಬಿದ್ದರೂ ಅದರ ಬಳಕೆ ಕಡಿಮೆಯಾಗುತ್ತಿದೆ. ಇಂದಿನ ಆಧುನಿಕತೆಯ ಪ್ರಭಾವದಿಂದ ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆ ಹೆಚ್ಚಾಗುತ್ತಿದೆ. ಜನಪದ ಕಥೆ, ಗಾದೆ ಮತ್ತು ಒಗಟುಗಳ ಸ್ಥಾನವನ್ನು ಟೀವಿ, ರೇಡಿಯೋ, ಮೊಬೈಲ್‌ಗಳು ಆಕ್ರಮಿಸಿಕೊಳ್ಳುತ್ತಿದೆ. ಜಾನಪದ ಸಾಹಿತ್ಯ ಸಂಪತ್ತು ತುಂಬಿದ್ದರು ಅದು ವ್ಯಕ್ತವಾಗುವ ಸಂದರ್ಭಗಳು ಕಡಿಮೆಯಾಗುತ್ತಿವೆ. ತಿಥಿಗಳ, ಹಬ್ಬಗಳ ಸಂದರ್ಭಗಳಲ್ಲಿ ಮಾಡಿಸುತ್ತಿದ್ದ ಹರಿಕಥೆಗಳ ಬದಲಾಗಿ ವೀಡಿಯೋ ಪ್ರದರ್ಶನ ಮಾಡುವುದು ಬಂದಿದೆ. 'ಉತ್ತರ ಕ್ರಿಯಾದಿ ಭೂಶಾಂತಿ' ಅಂದರೆ ತಿಥಿಯ ಕಾರ್ಡುಗಳಲ್ಲಿ ಹಿಂದೆ ರಾತ್ರಿ ೮.೦೦ಗಂಟೆಗೆ ಹರಿಕಥೆ ಎಂದು ಮುದ್ರಿಸಲಾಗುತ್ತಿತ್ತು. ಇಂದು ವೀಡಿಯೋ ಪ್ರದರ್ಶನವಿದೆ ಎಂದು ಮುದ್ರಿಸಲಾಗುತ್ತದೆ. ಇದಕ್ಕೆ ಜನರ ಆಸಕ್ತಿ ಕಡಿಮೆಯಾಗುತ್ತಿದೆ ಎಂಬುದು ಒಂದು ಕಾರಣವಾದರೆ, ಹರಿಕಥೆ ಮಾಡಿಸಲು ದುಬಾರಿ ಹಣ ಖರ್ಚಾಗುತ್ತದೆ ಎನ್ನುವುದು ಮತ್ತೊಂದು ಕಾರಣವಾಗಿದೆ. ಆದರೆ ಮುಂದೆ ಹರಿಕಥೆ ಮಾಡಿಸುವುದು ಒಂದು ದೊಡ್ಡಸ್ತಿಕೆಯಾಗುತ್ತದೆ. ಆದರೆ ಟೀವಿ ಮಾಧ್ಯಮದಲ್ಲೇ ಆಗಲಿ ರೇಡಿಯೋ ಮೂಲಕವೇ ಆಗಲಿ ಇಂತ ಸಂದರ್ಭದಲ್ಲಿ ಜಾನಪದ ರಂಗು, ಗುಂಗು ಮಾಸುವುದಿಲ್ಲ. ಎಲೆಕ್ಟ್ರಾನಿಕ್ ಉಪಕರಣಗಳು ಅಮೇರಿಕಾ, ಚೀನಾ, ಜಪಾನ್‌ನಂತಹ ಪ್ರತಿಷ್ಠಿತ ದೇಶಗಳವೇ ಆದರೂ ನಮ್ಮ ಜನಪದರ ಸೊಲ್ಲನ್ನೇ ಹೇಳುತ್ತವೆ. ಕಬ್ಬಾಳಮ್ಮನ ಗುಣಗಾನ ಮಾಡುತ್ತಲಿರುತ್ತವೆ.

ಕಬ್ಬಾಳು ಪರಿಸರದ ಕೃಷಿ ಪದ್ಧತಿ ಸಾಂಪ್ರದಾಯಿಕ ಮತ್ತು ಆಧುನಿಕ ಕೃಷಿಪದ್ಧತಿಯ ಎರಡರ ಮಿಶ್ರಣವನ್ನು ಒಳಗೊಂಡಿದೆ. ಬದಲಾವಣೆಗೆ ಒಳಗಾಗಿ ಇದರಿಂದ ದೂರ ಸರಿಯಲಿಕ್ಕೆ ಸಾಧ್ಯವಾಗದೆ ಶೀಘ್ರಗತಿಯಲ್ಲಿ ಪರಿವರ್ತನೆಗಳಿಗೆ ಪಕ್ಕಾಗಿದೆ. ಈ ಭಾಗದಲ್ಲಿ ಹೆಚ್ಚಿನ ರೀತಿಯಲ್ಲಿ ನಗರೀಕರಣ ಯಾಂತ್ರಿಕ ಅವಲಂಬನೆ, ಔದ್ಯೋಗಿಕರಣಗಳು ಅಧಿಕವಾಗಿರುವ ಕಾರಣ ಪರಿವರ್ತನೆಯ ವೇಗವೂ ಹೆಚ್ಚಾಗಿದೆ.

ನೇಗಿಲು, ಕುಂಟೆ, ಹಲುಬೆ, ಕೂರಿಗೆ ಮುಂತಾದ ವ್ಯವಸಾಯ ಸಾಮಗ್ರಿಗಳ ಬದಲು ಟ್ರ್ಯಾಕ್ಟರ್, ಟಿಲ್ಲರ್‌ಗಳು ಬಂದಿದ್ದು ಬಡರೈತರಿಂದ ದೂರ ಉಳಿದಿವೆ. ಬಡರೈತರು ಇತ್ತ ಆಧುನಿಕ ವ್ಯವಸಾಯಕ್ಕೂ ಇತ್ತ ಸಾಂಪ್ರದಾಯಿಕ ವ್ಯವಸಾಯಕ್ಕೂ ವಲ್ಲದೆ ತ್ರಿಶಂಕು ಸ್ಥಿತಿಯಲ್ಲಿದ್ದಾರೆ. ಕಣಜ, ವಾಡೆ, ಹಳಗೆ, ಗುಡಾಣ, ಗುಳಿ, ಹಗೇವು ಮುಂತಾದ ಸಾಂಪ್ರದಾಯಿಕ ಶೇಖರಣಾ ವ್ಯವಸ್ಥೆ ಅಳಿದು ಹೋಗಿ ಗೋಣಿಚೀಲಗಳು, ಗೊಬ್ಬರದ ಪಾಲಿಥೀನ್ ಚೀಲಗಳು ದಾಸ್ತಾನು ಮಾಡಲು ಬಳಕೆಯಾಗುತ್ತಿದ್ದು, ಹಿಂದಿನ ಕೌಶಲ್ಯಗಳು ದೂರಸರಿದು ತಾನು ಬೆಳೆದ ದವಸವನ್ನು ಇಟ್ಟುಕೊಳ್ಳುವುದಕ್ಕೂ ಹಣ ತೊಡಗಿಸಬೇಕಾಗಿದೆ. ಪಾಲು, ಗುತ್ತಿಗೆ, ಮುಯ್ಯಾಳು, ಮನೆಗೆಲಸಗಳು ತಪ್ಪಿಹೋಗುತ್ತಿವೆ. ಕೃಷಿ ಕೆಲಸಗಳನ್ನು ಕೈಗಾರಿಕೆಗಳ ರೀತಿಯಲ್ಲಿ ಗಡಿಯಾರ ನೋಡಿ ಕೆಲಸ ಮಾಡುವ ಸ್ಥಿತಿ ಬಂದಿದೆ. ಹೀಗಾಗಿ ಇಂದು ಕೃಷಿಕನಿಗೆ ಪರಂಪರಾಗತ ಕೃಷಿ ಪದ್ಧತಿಯಿಂದ ದೊರೆಯುತ್ತಿದ್ದ ತೃಪ್ತಿ, ಸಮಾದಾನ, ನೆಮ್ಮದಿಗಳು ಮಾಯವಾಗಿ ವ್ಯವಹಾರಿಕ ದೃಷ್ಟಿಕೋನ ಹೆಚ್ಚು ತೀಕ್ಷ್ಣವಾಗಿ ಕೆಲಸಮಾಡುತ್ತಿದೆ. ಕೃಷಿ ಸಂಬಂಧಿತವಾದ ಆಚರಣೆಗಳು, ಹಬ್ಬಗಳು ಅರ್ಥ ಕಳೆದುಕೊಳ್ಳುತ್ತಿವೆ. ಅವು ನಡೆದರೂ ಸಹ ಸಾಮುದಾಯಿಕ ಕ್ರಿಯೆಗಳಾಗಿರದೆ ವೈಯಕ್ತಿಕವಾದ ಪ್ರತಿಷ್ಠೆಗಳು ಹೆಚ್ಚಾಗಿವೆ. ಆಧುನಿಕ ಶಿಕ್ಷಣ, ಕೃಷಿ ಪದ್ಧತಿಯಿಂದಾಗಿ ಆಚರಣೆಗಳ ಸ್ಥಾನದಲ್ಲಿ ಕ್ರಿಮಿನಾಶಕಗಳು ವೈಜ್ಞಾನಿಕ ವಿಧಾನಗಳು ಬಳಕೆಯಾಗುತ್ತಿದೆ.

ದನಗಳ ಹಬ್ಬವಾದ ಸಂಕ್ರಾಂತಿ ಮನುಷ್ಯರಿಗಷ್ಟೇ ಸೀಮಿತವಾಗುವ ಸಂದರ್ಭ ಬಂದಿದೆ. ಸಂಪ್ರದಾಯ, ಸಹಕಾರ, ಅಡಿಗೆ, ಆಚರಣೆಗಳು ಸಾಂಕೇತಿಕವಾಗುತ್ತಿವೆ. ಉತ್ಪಾದನೆ ಹೆಚ್ಚಿಸುವ ದೃಷ್ಟಿಯಿಂದ ಸುದಾರಿತ ಬಿತ್ತನೆ ಬೀಜಗಳನ್ನು ಬಿತ್ತಿ ಹುಲ್ಲಿನ ಬೆಳೆಗಳನ್ನು ನಿರ್ಲಕ್ಷಿಸಿ ಹುಲ್ಲಿನ ಅಭಾವವುಂಟಾಗಿ ದನಕರುಗಳ ಮೇವಿಗೆ ಕತ್ತರಿ ಬಿದ್ದಿದೆ. ಪ್ರತಿ ಮನೆಗಳ ಮುಂದೆ ದನಕರುಗಳನ್ನು ಕಟ್ಟುತ್ತಿದ್ದುದು ಬದಲಾಗಿ ಸ್ಕೂಟರ್‌ಗಳು ನಿಲ್ಲುತ್ತಿವೆ. ದುಬಾರಿ ಬಿತ್ತನೆ ಬೀಜ ರಸಗೊಬ್ಬರ ಕ್ರಿಮಿನಾಶಕಗಳ ಬಳಕೆ ಹೆಚ್ಚಾಗಿದೆ. ಜೊತೆಗೆ ಕೃಷಿ ಕಾರ್ಮಿಕರ ಕೊರತೆಯನ್ನು ಅನುಭವಿಸಬೇಕಾಗಿ ಬಂದು ಸಕಾಲಕ್ಕೆ ಮಳೆಬಾರದಂತಾಗಿ ಲಾಭದಾಯಕವಲ್ಲದ ಬೇಸಾಯಕ್ಕೆ ಬದಲಾಗಿ ಕೃಷಿಕರ ಮಕ್ಕಳು ಬೇರೆ ಬೇರೆ ಕೆಲಸಗಳನ್ನು ಹರಸುತ್ತಾ ನಗರಗಳ ಕಡೆ ಮುಖ ಮಾಡಿದ್ದಾರೆ.

ಕಬ್ಬಾಳು ವ್ಯಾಪಾರ ಕೇಂದ್ರವಾಗಿ ಮಾರ್ಪಟ್ಟಿದ್ದು, ಮಾರಾಟ ಸಂಸ್ಕೃತಿಯ ಮೋಹಕ ದೃಶ್ಯಗಳು ಕಾಣುತ್ತವೆ. ದೇವಾಲಯದ ಬೀದಿಗಳಲ್ಲಿ ಹೂವು, ಹಣ್ಣು, ಕಾಯಿ, ಪೂಜಾವಸ್ತುಗಳ ಕರೀದಿಯ ಬರಾಟೆ ನಡೆದರೆ, ಉಳಿದೆಲ್ಲ ಕಡೆ ಬೇರೆಯದೇ ರೀತಿ. ದಿನಸಿ, ಮದ್ಯ, ಮಾಂಸದ ಅಂಗಡಿಗಳ ಗಿಜಿಗುಟ್ಟುವ ಜನರ ಗುಂಪುಗಳು ಎಲ್ಲಿ ನೋಡಿದರಲ್ಲಿ ಬಾಟಲಿ ಪೇಯಗಳು, ಪ್ಲಾಸ್ಟಿಕ್ ವಸ್ತುಗಳು, ಕೂಗಾಡುವ ವಾಹನಗಳು, ಅಪರಿಚಿತ ಮುಖಗಳು ಬದಲಾಗುತ್ತಿರುವ ಗ್ರಾಮೀಣ ಸಮಾಜದ ಪ್ರತಿಬಿಂಬಗಳಾಗಿ ಕಾಣುತ್ತವೆ.

ಹಣವೇ ಪ್ರಾಮುಖ್ಯತೆಯನ್ನು ಪಡೆದಿರುವ ಆಧುನಿಕ ಸಮಾಜದಲ್ಲಿ ಹಣ ಗಳಿಸುವ ಶ್ರೀಮಂತಿಕೆಯನ್ನು ಮೆರೆಯುವ ಜೀವನಶೈಲಿ ಹೆಚ್ಚಾಗುತ್ತಿದೆ. ರಿಯಲ್ ಎಷ್ಟೇಟ್ ಉದ್ಯಮಿ ಮತ್ತು ವಾಣಿಜ್ಯ ಉದ್ಯಮಿಗಳಿಗೆ ವ್ಯವಹಾರ ಮತ್ತು ಮನರಂಜನೆಯ ತಾಣವಾಗುತ್ತಿದೆ.

ಜನರ ಜೀವನ ಅಲ್ಲಿನ ಆರ್ಥಿಕ, ಸಾಮಾಜಿಕ ಸ್ಥಿತಿಗತಿಯನ್ನು ಅವಲಂಬಿಸಿದೆ. ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಅಸಮಾನತೆ ಇರುವ ವ್ಯವಸ್ಥೆಯಲ್ಲಿ ಸಾಂಸ್ಕೃತಿಕ ವೈರುಧ್ಯ ಇದ್ದೇ ಇರುತ್ತದೆ. ಇಲ್ಲಿಯೂ ಆ ಅಸಮಾನತೆ ಇದೆ. ಅದರಿಂದ ಜನರ ಜೀವನ ವಿಧಾನದಲ್ಲೂ ಅಸಮಾನತೆ ಎದ್ದು ಕಾಣುತ್ತದೆ. ಆರ್ಥಿಕವಾಗಿ ಪ್ರಬಲರಾದವರು ಸಮಾಜದಲ್ಲಿ ಪ್ರತಿಷ್ಠಿತರಾಗಿದ್ದಾರೆ. ಈ ಪ್ರತಿಷ್ಠೆ ಅವರ ಮನೆಗಳು, ಕುಟುಂಬ, ಆಹಾರ ಪದ್ಧತಿ, ಆಚಾರಗಳಲ್ಲು ಕಾಣುತ್ತದೆ. ಈ ಪ್ರತಿಷ್ಠೆ ಕಾಲಕ್ಕೆ ತಕ್ಕಂತೆ ಬದಲಾಗುತ್ತಲೇ ಇದೆ. ಹಿಂದೆ ಮನೆಗಳನ್ನು ಕಂಬದಮನೆ, ತೊಟ್ಟಿಯ ಮನೆಗಳು ಎಂದು ಕರೆಯುತ್ತಿದ್ದರು. ಇವು ಕೂಡ ಗೌರವವನ್ನು ತಂದುಕೊಡುವಂತಹವಾಗಿದ್ದವು. ಇಂದು ಇವುಗಳ ಚಹರೆ ಬದಲಾಗಿದೆ. ಇದು ಎಲ್ಲ ಸಮುದಾಯಗಳು ಕಂಡುಬರುತ್ತದೆ. ಕಂಬದ ಮನೆ, ತೊಟ್ಟಿಯ ಮನೆಯ ಜಾಗದಲ್ಲಿ ದೊಡ್ಡ ಬಿಲ್ಡಿಂಗ್‌ಗಳು ತಲೆ ಎತ್ತುತ್ತಿವೆ. ಇವು ಪ್ರತಿಷ್ಠೆಯ ಸಂಕೇತದಂತಿವೆ. ಇದು ಕಬ್ಬಾಳು ಗ್ರಾಮದ ಮೇಲೆ ನಗರೀಕರಣ ಪ್ರಭಾವ ಬೀರಿರುವುದರ ಸಂಕೇತವಾಗಿದೆ. ಹಿಂದೆ ಮನೆಗಳ ನಿರ್ಮಾಣದಲ್ಲಿ ಹೆಚ್ಚು ಪ್ರಕೃತಿದತ್ತವಾಗಿ ದೊರಕುತ್ತಿದ್ದ ವಸ್ತುಗಳನ್ನೇ ಉಪಯೋಗಿಸುತ್ತಿದ್ದರು. ಮರ, ಹುಲ್ಲು, ಗರಿ, ಬಿದಿರುಗಳಿಂದ ಮನೆಮಾಡುಗಳನ್ನು ನಿರ್ಮಿಸುತ್ತಿದ್ದರು. ಇಂದು ಕೃತಕವಾಗಿ ತಯಾರಿಸಿದ ವಸ್ತುಗಳೇ ಮನೆಯ ನಿರ್ಮಾಣದಲ್ಲಿ ಬಹುಮುಖ್ಯಪಾತ್ರವಹಿಸುತ್ತಿವೆ. ಕಬ್ಬಿಣ, ಸಿಮೆಂಟ್ ಇಲ್ಲದೆ ಮನೆಗಳ ನಿರ್ಮಾಣ ಅಸಾಧ್ಯವಾಗಿದೆ.

ಕುಟುಂಬ ಎಂಬುದು ಎಲ್ಲ ಸಮಾಜಗಳಲ್ಲಿ ಕಂಡುಬರುವ ಒಂದು ಮೂಲಭೂತ ಘಟಕ. ಅದನ್ನು ಸಮಾಜಶಾಸ್ತ್ರಜ್ಞರು ವ್ಯಕ್ತಿಯ ಪ್ರಾಥಮಿಕ ಸಮೂಹವೆಂಬುದಾಗಿಯೂ ಗುರುತಿಸಿದ್ದಾರೆ. ಪ್ರಸ್ತುತ ಪರಿಸರದಲ್ಲಿ ಸಮಾಜದ ಕನಿಷ್ಟ ಘಟಕವಾದ ಕುಟುಂಬವು ಆಧುನಿಕತೆಯ ಸ್ವಾರ್ಥತನದ ಪ್ರಭಾವದಿಂದ ತನ್ನ ಸ್ವರೂಪವನ್ನು ಬಹುಪಾಲು ಬದಲಾಯಿಸಿಕೊಂಡಿದೆ. ಅವಿಭಕ್ತ ಕುಟುಂಬದ ಸ್ಥಾನದಲ್ಲಿ ವಿಭಕ್ತ ಕುಟುಂಬಗಳು ಸ್ಥಾಪನೆಯಾಗಿವೆ. ಇತ್ತೀಚಿನ ದಿನಗಳಲ್ಲಿ ಅವಿಭಕ್ತ ಕುಟುಂಬಗಳು ತುಂಬಾ ವಿರಳವಾಗಿವೆ. ಆಧುನಿಕತೆಯ ಕಾಲಘಟ್ಟದಲ್ಲಿ ಅವಿಭಕ್ತ ಕುಟುಂಬದ ಪರಿಕಲ್ಪನೆಯೇ ಅಪ್ರಸ್ತುತವಾಗಿ ಮಾರ್ಪಟ್ಟಿದೆ. ಹೀಗಾಗಿ ಕುಟುಂಬದ ವ್ಯಾಪ್ತಿಗೆ ಸೇರಿದ ಮೌಲ್ಯಗಳು, ಆಚರಣೆಗಳು, ಸಂಪ್ರದಾಯಗಳು ಸಹಜವಾಗಿಯೇ ಕಡಿದುಹೋಗಿವೆ. ಯಜಮಾನನ ಮತ್ತು ಸಂಪತ್ತಿನ ಪರಿಕಲ್ಪನೆ ಪೂರ್ಣವಾಗಿ ಬದಲಾಗಿದೆ. ಮೊದಲಿಗೆ ಮನೆಯಲ್ಲಿ ಹಿರಿಯ ವ್ಯಕ್ತಿ ಯಜಮಾನನಾಗಿದ್ದು ದುಡಿಮೆಯಲ್ಲಿ ತೊಡಗುವ ಕುಟುಂಬದ ಸದಸ್ಯರು, ದನಕರುಗಳು, ದವಸ, ಧಾನ್ಯ, ಭೂಮಿ ಮುಂತಾಗಿ ಎಲ್ಲವೂ ಆಸ್ತಿಯೆಂಬುದಾಗಿ ಪರಿಗಣಿಸುತ್ತಿದ್ದರು. ಇಂದು ಕೇವಲ ದುಡಿದು ಸಂಪಾದನೆ ಮಾಡುವವನಿಗೆ ಮಾತ್ರ ಕುಟುಂಬದಲ್ಲಿ ಸ್ಥಾನವಿದ್ದು ಹಣಕ್ಕೆ ಹೆಚ್ಚು ಪ್ರಾಮುಖ್ಯತೆ ಇದೆ. ಹಣಮಾತ್ರ ಸಂಪತ್ತು ಎಂಬುದಾಗಿ ಪರಿಣಮಿಸುವಂತಿದೆ.

ಎರಡು ದಶಕಗಳ ಹಿಂದೆ ಇದ್ದಂತಹ ಸಂಪ್ರದಾಯಗಳು ಇಂದು ಇಲ್ಲವಾಗುತ್ತಿವೆ. ಜನರು ಸಮಯಕ್ಕೆ ಹೆಚ್ಚು ಒತ್ತು ಕೊಡುವಲ್ಲಿ ಸಂಪ್ರದಾಯಗಳು ತಮ್ಮ ಮಹತ್ವವನ್ನು ಕಳೆದುಕೊಳ್ಳುತ್ತಿವೆ. ಹಿಂದೆ ಐದು

ದಿನ, ಮೂರುದಿನಗಳ ಕಾಲ ನಡೆಯುತ್ತಿದ್ದ ವಿವಾಹ ಸಂಪ್ರದಾಯಗಳು ಇಂದು ಒಂದು ದಿನಕ್ಕೆ ಸೀಮಿತಗೊಂಡಿವೆ. ಮದುವೆಗೆ ಗಂಡು ಹೆಣ್ಣುಗಳನ್ನು ಅಣಿಗೊಳಿಸುತ್ತಿದ್ದುದು ಕಣ್ಮರೆಯಾಗಿದೆ. ಒಂಬತ್ತು ದಿನ, ಏಳುದಿನ, ಐದುದಿನಗಳು ಇರುವಾಗಲೇ ಹೆಣ್ಣುಗಂಡುಗಳಿಗೆ ಅರಿಸಿಣದ ಸ್ನಾನ, ಮಡಿ, ಪೌಷ್ಟಿಕಾಂಶಗಳಿಂದ ಕೂಡಿದ ಆಹಾರಗಳನ್ನು ಕೊಡುತ್ತಿದ್ದರು. ಪ್ರತಿದಿನ ಅರಿಸಿಣ ಸ್ನಾನ ಮಾಡಿಸುವಾಗ ಶೋಬಾನೆ ಪದಗಳನ್ನು ಹಾಡುತ್ತಿದ್ದರು. ಇಂದು ಅರಿಶಿಣದ ಸ್ನಾನ ಮಾಡಿಸುವುದು ಒಂದು ಎರಡು ದಿನಗಳಲ್ಲೇ ಮುಗಿಯುತ್ತದೆ. ಕೆಲವು ಒಂದೇ ದಿನದಲ್ಲೇ ಮುಗಿದುಹೋಗುತ್ತದೆ. ಇದೆಲ್ಲ ಗ್ರಾಮಗಳಲ್ಲೇ ತಮ್ಮ ಮನೆ ಮುಂದೆ ಮಧುವೆಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಆಚರಣೆಯಲ್ಲಿದ್ದವು. ಇಂದು ಚೌಲ್ಟ್ರಿಗಳಲ್ಲಿ ಮದುವೆಗಳು ನಡೆಸುವುದರಿಂದ ಈ ಸಂಪ್ರದಾಯಗಳು ಮರೆಮಾಚಿ ಹೋಗುತ್ತಿವೆ. ಅದರ ಜೊತೆಗೆ ಜನಪದ ಸಾಹಿತ್ಯವು ಮರೆತು ಹೋಗುತ್ತಿದೆ. ಚೌಲ್ಟ್ರಿಗಳಲ್ಲಿ ಮದುವೆಗಳು ಹೆಚ್ಚಾಗಿ ನಡೆಯುವುದರಿಂದ ಹಳ್ಳಿಗಳಲ್ಲಿ ಮದುವೆಯ ಶಾಸ್ತ್ರಗಳು ಕಡಿಮೆಯಾಗುತ್ತಿವೆ. ಮನೆಮುಂದೆಯ ಚಪ್ಪರಗಳು ಇಲ್ಲವಾಗಿವೆ.

ಮದುವೆಗಳಲ್ಲಿ ಹಿಂದೆ ಮಾಡುತ್ತಿದ್ದ ಅಡುಗೆಗಳಿಗೂ ಮತ್ತು ಇಂದು ಮಾಡುತ್ತಿರುವ ಅಡುಗೆಗಳಲ್ಲಿ ತುಂಬಾ ಬದಲಾವಣೆಗಳಾಗಿವೆ. ಹಿಂದೆ ಆ ಪ್ರದೇಶದ ಪ್ರಾದೇಶಿಕ ಆಹಾರವೇ ಇರುತ್ತಿತ್ತು. ಅವರೆಕಾಳು ಸಾರು ಮತ್ತು ರಾಗಿಮುದ್ದೆ ಹೆಚ್ಚಾಗಿ ಮಾಡುತ್ತಿದ್ದರು. ಇಂದು ಅದರ ಬದಲಿಗೆ ನಗರಪ್ರದೇಶ ಊಟದ ಸಂಸ್ಕೃತಿ ಕಾಲಿಟ್ಟಿದೆ. ಆದರು ಮದುವೆಯಂತ ಸಂದರ್ಭದಲ್ಲಿ ಊಟದ ಬದಲಾವಣೆಗಳು ಕಂಡುಬಂದರು ಪ್ರತಿನಿತ್ಯ ಇಲ್ಲಿನ ಜನರು ರಾಗಿಮುದ್ದೆಯನ್ನೇ ತಿನ್ನುತ್ತಾರೆ. ಆದರೆ ಹಳ್ಳಿಗಳಲ್ಲಿರುವ ರಾಗಿಮುದ್ದೆ, ಉಪ್ಸಾರು ಊಟ ಬೆಂಗಳೂರಿಗರನ್ನು ಆವರಿಸಿಕೊಂಡಿದೆ. ಊಟ ಮಾಡಲು ಪ್ರಕೃತಿದತ್ತವಾದ ಬಾಳೆ ಎಲೆಗಳನ್ನು ಬಳಸುತ್ತಿದ್ದವರು ಇಂದು ಪೇಪರ್, ಪ್ಲಾಸ್ಟಿಕ್ ಕವರ್‌ಲೇಪಿತ ಇಸ್ತ್ರಿಗಳು, ಪ್ಲಾಸ್ಟಿಕ್ ಲೋಟಗಳು ಬಟ್ಟಲುಗಳ ಬಳಕೆ ಹೆಚ್ಚಾಗಿದೆ. ಪರಿಸರ ಕಲುಷಿತಗೊಳ್ಳುವಲ್ಲಿ ಇದರ ಪ್ರಭಾವ ಹೆಚ್ಚಾಗಿದೆ.

ಇಂದಿನ ಕಬ್ಬಾಳು ಗ್ರಾಮೀಣ ಪ್ರದೇಶವೇ ಆಗಿದ್ದು, ಕೃಷಿಗೆ ಯೋಗ್ಯವಾದ ಭೂಮಿ ಮತ್ತು ಪರಿಸರವನ್ನು ಹೊಂದಿದೆ. ಸಾಂಪ್ರದಾಯಿಕ ಕೃಷಿಪದ್ಧತಿ ಮತ್ತು ಆಧುನಿಕ ಕೃಷಿ ಪದ್ಧತಿ ಎರಡೂ ಈ ಪ್ರದೇಶದಲ್ಲಿ ಅನುಸರಿಸುತ್ತಿದ್ದಾರೆ. ಜಾಗತೀಕರಣದ ಮಾಯಾಜಾಲಕ್ಕೆ ಒಳಗಾಗುತ್ತಿರುವ ಇಂದಿನ ಜೀವನ ಗತಿಯಲ್ಲಿ ಕೃಷಿ ಎಂಬುದು ಕೈಸುಟ್ಟುಕೊಳ್ಳುವ ಕರ್ಮಕಾಂಡವಾಗಿದೆ. ಕೃಷಿಕಾಯಕವನ್ನು ಬಿಡಲೂ ಆಗದೆ, ಕಟ್ಟಿಕೊಳ್ಳಲೂ ಆಗದೆ ಸಂದಿಗ್ಧದಲ್ಲಿ ರೈತನ ಬದುಕು ಡೋಲಾಯಮಾನವಾಗಿದೆ. ಈ ಜನರಿಗೆ ಕೃಷಿ ಎಂಬುದು ಕೇವಲ ಹೊಟ್ಟೆಪಾಡಿನ ಕೆಲಸವಾಗಿಲ್ಲ. ಅದೊಂದು ಸಂಸ್ಕೃತಿಯಾಗಿತ್ತು. ಅದು ಮನುಷ್ಯನ ಬದುಕಿಗೆ ಮಾತ್ರ ಸೀಮಿತವಾಗಿರಲಿಲ್ಲ. ನಿಸರ್ಗ ಧರ್ಮವನ್ನು ಗೌರವಿಸಿದಂತೆ ಕಟ್ಟಿಕೊಂಡ ಕೆಲಸವಾಗಿದೆ. ದೇಸೀ ಜ್ಞಾನಕ್ಕೆ ಪೂರಕವಾಗುವ ಮತ್ತು ನಿಸರ್ಗದ ಸಮತೋಲನಕ್ಕೆ ಕಾರಣವಾಗುವ ಸಹಜವಾದ ಕೃಷಿ, ಸಾಂಪ್ರದಾಯಿಕ ಕೃಷಿ ಒಂದೆಡೆಯಾದರೆ ಪ್ರಕೃತಿಧರ್ಮಕ್ಕೆ ವಿರುದ್ಧವಾಗಿ, ಕೃತಕವಾಗಿ ಮಾಡುವ ಆಧುನಿಕ ಕೃಷಿ ಮತ್ತೊಂದೆಡೆ ಇದೆ.

ಕೃಷಿಯಲ್ಲಿ ಸಾಂಪ್ರದಾಯಿಕ ಕೃಷಿಯನ್ನೇ ಹೆಚ್ಚಾಗಿ ಅನುಸರಿಸುವ ಇಲ್ಲಿನ ಜನರು ಕೃಷಿಯಲ್ಲಿನ ಸಂಪ್ರದಾಯಗಳನ್ನೆಲ್ಲ ಆಚರಿಸುತ್ತಾ ಬಂದಿದ್ದಾರೆ. ಹೊನ್ನೇರು ಕಟ್ಟುವುದು, ಮಾಚೆ ಮಾಡುವುದು, ಬಿತ್ತುವಾಗ

ಕೂರಿಗೆ ಪೂಜೆ ಮಾಡುವುದು, ಹೊಲಕುಯ್ಯುವಾಗ ಹೆಚ್ಚು ಮಾಡವುದು. ಕಟ್ಟುವಾಗ, ಒಕ್ಕುವಾಗ ಎಲ್ಲಾ ಸಂಪ್ರದಾಯಗಳನ್ನು ಆಚರಿಸುತ್ತಾ ಬಂದಿದ್ದಾರೆ. ಆದರೆ ಆಧುನಿಕತೆಯು ಇದರ ಜೊತೆಗೆ ಮೈಗೂಡಿಸಿಕೊಳ್ಳುತ್ತಿದೆ. ಬಿತ್ತನೆ ಮಾಡಲು ಎತ್ತು, ಏರುಗಳನ್ನೇ ಬಳಸುವ ಇವರು ಬಿತ್ತನೆಗೂ ಮೊದಲು ಹೊಲಗಳ ಉಳುಮೆಗೆ ಟ್ರ್ಯಾಕ್ಟರ್‌ಗಳನ್ನು ಬಳಸುತ್ತಿದ್ದಾರೆ. ಟ್ರ್ಯಾಕ್ಟರ್ ಬಂದಮೇಲೆ ಎತ್ತಿನಗಾಡಿ ಮೂಲೆ ಸೇರಿವೆ. ಗೊಬ್ಬರಗೋಡು ಹೊಡೆಯಲು ಗಾಡಿಯ ಬದಲು ಟ್ರ್ಯಾಕ್ಟರ್‌ಗಳ ಬಳಕೆ ಹೆಚ್ಚಾಗಿದೆ. ಎತ್ತಿನಗಾಡಿಗಳಲ್ಲಿ ಗೊಬ್ಬರ ಗೋಡು ಹೊಡೆಯಲು ದಿನಗಳೇ ಬೇಕಾಗುತ್ತದೆ. ಟ್ರ್ಯಾಕ್ಟರ್‌ಗಳಾದರೆ ಒಂದು ಅಥವಾ ಎರಡು ಬಾರಿಗೆ ಎಲ್ಲ ಕೆಲಸ ಮುಗಿಯುತ್ತದೆ ಎನ್ನುತ್ತಾರೆ. ಆದರೆ ಟ್ರ್ಯಾಕ್ಟರ್‌ಗಳು ಹೆಚ್ಚು ಹೆಚ್ಚು ಜಮೀನುಗಳನ್ನು ಹೊಂದಿದವರಿಗೆ ಅನುಕೂಲವಾಗುತ್ತದೆಯೇ ಹೊರತು ಸಣ್ಣ ಸಣ್ಣ ತುಂಡು ಭೂಮಿ ಹೊಂದಿದವರಿಗೆ ಅಲ್ಲ. ಇದು ಸಣ್ಣ ಜಮೀನುದಾರರಿಗೆ ಹೆಚ್ಚು ಖರ್ಚು, ದುಬಾರಿಯಾಗಿದೆ. ಸಣ್ಣ ಜಮೀನುದಾರರೇ ಬಹುಸಂಖ್ಯಾತರಾಗಿದ್ದು ಇವರು ಆಧುನಿಕತೆಗೆ ಹೊಂದಿಕೊಳ್ಳಲಾಗದೆ ಇತ್ತ ಸಾಂಪ್ರದಾಯಿಕ ಕೃಷಿಯಲ್ಲೂ ತೊಡಗದೆ ಮಿಶ್ರಕೃಷಿ ತಂತ್ರಜ್ಞಾನ ಅಳವಡಿಸಿಕೊಂಡಿದ್ದಾರೆ.

ಗೊಬ್ಬರಗಳ ಬಳಕೆಯಲ್ಲೂ, ಕೊಟ್ಟಿಗೆ ಗೊಬ್ಬರ ಮತ್ತು ರಾಸಾಯನಿಕ ಗೊಬ್ಬರ ಎರಡನ್ನು ಬಳಸುತ್ತಿದ್ದಾರೆ. ಕೊಟ್ಟಿಗೆ ಗೊಬ್ಬರ ಹೆಚ್ಚಾಗಿ ದೊರಕಿದರೆ ಅದನ್ನೇ ಬಳಸುತ್ತಾರೆ. ಅದರ ಅರಿವು ಇಲ್ಲಿನ ಜನರಿಗಿದೆ. ಆದರೆ ದೊರಕುವುದಿಲ್ಲ. ಏಕೆಂದರೆ ದನ, ಎತ್ತು, ಎಮ್ಮೆಗಳ ಸಾಕಾಣೆ ಕಡಿಮೆಯಾಗುತ್ತಿದೆ. ಜಾನುವಾರುಗಳ ಸಂಖ್ಯೆ ಕಡಿಮೆಯಾದರೆ ಗೊಬ್ಬರ ಎಲ್ಲಿಂದಬರಬೇಕು? ಜಾನುವಾರಗಳ ಸಾಕಾಣಿಕೆಗೆ ಆಳುಗಳು(ಕೃಷಿ ಕೆಲಸಗಾರರು) ಹೆಚ್ಚಾಗಿರಬೇಕು. ಅವರ ಸಂಖ್ಯೆ ಕಡಿಮೆಯಾಗುತ್ತಿದೆ. ಶಾಲಾ ಕಾಲೇಜು ಕಲಿತ ವಿದ್ಯಾವಂತ ಯುವಕರೆಲ್ಲ ನಗರಪ್ರದೇಶಗಳತ್ತ ಮುಖಮಾಡಿದ್ದಾರೆ. ಅವರಿಗೆ ಕೃಷಿಯಲ್ಲಿ ಆಸಕ್ತಿ ಇಲ್ಲ. ಸರ್ಕಾರಿ ಕೆಲಸಗಳನ್ನು ಅರಸಿ ಊರುತೊರೆಯುತ್ತಿದ್ದಾರೆ. ಒಂದು ವೇಳೆ ಊರಿನಲ್ಲೇ ಉಳಿದರು ಅಂಗಡಿಗಳನ್ನು ಹಾಕಿಕೊಂಡು ವ್ಯಾಪಾರದತ್ತ ಇವರ ಒಲವಾಗಿದೆ. ಹೀಗಾಗಿ ಕೃಷಿಯಲ್ಲಿ ತೊಡಗಲು ಕೆಲಸಗಾರರ ಅತ್ಯವಶ್ಯಕತೆ ಇದೆ. ಕೃಷಿ ಕೆಲಸಗಾರರಿಲ್ಲದೆ ಜಾನುವಾರುಗಳ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದೆ. ಹಾಗೆ ಕೊಟ್ಟಿಗೆ ಗೊಬ್ಬರ ಕಡಿಮೆಯಾಗುತ್ತದೆ. ಆಗ ಅನಿವಾರ್ಯವಾಗಿ ಕೃಷಿಕರು ರಾಸಾಯನಿಕಗೊಬ್ಬರಗಳ ಮೊರೆ ಹೋಗುತ್ತಾರೆ. ಮತ್ತು ಕಬ್ಬಾಳು ಪ್ರದೇಶ ಹೆಚ್ಚಾಗಿ ಮಳೆಆಶ್ರಿತ ಪ್ರದೇಶವಾಗಿರುವುದರಿಂದ ಸರಿಯಾದ ಸಮಯಕ್ಕೆ ಮಳೆ ಬೀಳದಿದ್ದರೆ ಬೆಳೆಯಾಗುವುದಿಲ್ಲ. ಬೆಳೆಯಾಗದಿದ್ದರೆ ಜಾನುವಾರುಗಳಿಗೆ ಮೇವು ದೊರಕುವುದಿಲ್ಲ. ಜಾನುವಾರುಗಳಿಗೆ ಮೇವು ಇಲ್ಲದಿದ್ದರೆ ಅವು ಬದುಕುವುದಾದರೂ ಹೇಗೆ "ಮನುಸುರ್ದೇನೋ ಎಂಗೋ ಆಗೋಯ್ತದೆ ಕನಪ್ಪ ಹೊಟ್ಟೆಗಿಲ್ಲ ಅಂದ್ರೆ ಇನ್ನೊಬ್ರತ್ರ ಕೇಳಿ ತಗಂಡು ತಿನ್‌ಬೋದು ಪಾಪ ಅವೇನ್‌ಮಾಡವು? ಅದ್ಕೆ ಮೊದ್ಲು ಅವ್ಕೆ ನೋಡ್ಬೇಕು ಇಲ್ದೇ ಇದ್ರೆ ನಮ್ಗೆ ಇಟ್ಟು ನೀರು ಇಳಿಯಲ್ಲು. ಮಳೆಬ್ಯಾರೆ ಇಂಗ್ ಮಾಡ್ತದೆ ಕೈಕೊಡ್ತದೆ ಎಂಗ್‌ನಂಬುದು, ಅದ್ಕೆ ಮಾರ್‌ಬುಡ್ತ ಅಂತಿಷ್ನಿ? ಮೇವು ನೀರಿಲ್ದೆ ಇವುಗಳ ಗೋಳ್ ನಾವು ಕೇಳುಕಾಗೋಲ್ಲು"(ಕರಿಯಣ್ಣ) ಎನ್ನುತ್ತಾರೆ. ಕೆಲವು ಸಂದರ್ಭದಲ್ಲಿ ಜಾನುವಾರುಗಳಿಗೆ ಮೇವು ಒದಗಿಸಲಾರದೆ ಬಸವನ ಬೆಟ್ಟಕ್ಕೆ ಹೊಡೆಯುವುದು ಇದೆ. ಹೀಗೆ ಕೃಷಿಗೆ ನಾನಾ ತೊಂದರೆಗಳು ಕಾಡುತ್ತಿವೆ. ಇನ್ನು ಮೂರು ನಾಲ್ಕು ದಶಕಗಳು ಕಳೆದರೆ ಕೃಷಿಯ ಸ್ಥಿತಿ ಊಹಿಸಲು ಸಾಧ್ಯವಿಲ್ಲ. ಆದರೆ ಕೃಷಿ ಇಲ್ಲದೆ ಬದುಕಲು ಸಾಧ್ಯವಿಲ್ಲ.

ರೇಷ್ಮೆ ಇಲ್ಲಿನ ಬಹುಮುಖ್ಯ ವಾಣಿಜ್ಯ ಬೆಳೆ ಮತ್ತು ಹೆಚ್ಚು ಆದಾಯ ತರುವ ಬೆಳೆಯಾಗಿದೆ. ನೀರಾವರಿ ಇದ್ದರೆ ಈ ಬೆಳೆಗೆ ಯಾವುದೇ ತೊಂದರೆ ಕಾಡುವುದಿಲ್ಲ. ಇದಕ್ಕೆ ಎತ್ತು ಏರುಗಳ ಬಳಕೆ ಕಡಿಮೆ. ಆದರೆ ಗೊಬ್ಬರ ಅವಶ್ಯಕ. ಗೊಬ್ಬರಕ್ಕೆ ಬದಲಾಗಿ ರಾಸಾಯನಿಕ ಗೊಬ್ಬರ ಬಳಕೆ ಹೆಚ್ಚಾಗಿದೆ. ವೈಜ್ಞಾನಿಕ ಬೆಳವಣಿಗೆಯಿಂದ ಹೊಸ ತಂತ್ರಜ್ಞಾನದ ಅಳವಡಿಕೆಯಿಂದ ಸುಲಭವಾಗಿ ಕೆಲಸಗಾರರ ಅವಶ್ಯಕತೆ ಕಡಿಮೆಯಾಗಿ ಬೆಳೆಯನ್ನು ಬೆಳೆಯುತ್ತಿದ್ದಾರೆ. ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆಯು ಸಿಗುತ್ತದೆ. ಮತ್ತೆ ಛತ್ರಗಳು ಇಲ್ಲಿನ ಆದಾಯದ ಮತ್ತೊಂದು ಮೂಲವಾಗಿದೆ. ಅನೇಕರು ತಮ್ಮ ಜಮೀನಿನಲ್ಲಿ ಛತ್ರಗಳನ್ನು ಕಟ್ಟಿಸಿ ಆದಾಯ ಪಡೆಯುತ್ತಿದ್ದಾರೆ. ಕೃಷಿ ಜಮೀನು ಛತ್ರ, ಅಂಗಡಿ ಮುಂಗಟ್ಟುಗಳಾಗಿ ಪರಿವರ್ತನೆಯಾಗುತ್ತಿವೆ. ಕಬ್ಬಾಳಮ್ಮನ ಶ್ರೀಕ್ಷೇತ್ರಕ್ಕೆ ಬಾರುಗಳು ಲಗ್ಗೆ ಇಟ್ಟಿವೆ. ಮೂರು ಬಾರುಗಳು ವಸತಿ ಗೃಹಗಳು ಇವೆ. ಇವರಿಗೆ ಆದಾಯದ ಮೂಲ ಮುಖ್ಯವೇ ಹೊರತು ಶಾಂತಿ, ನೆಮ್ಮದಿ, ಬಕ್ತಿಯ ಕಡೆ ಗಮನವೇ ಇಲ್ಲ. ಹಣಕಾಸಿನಲ್ಲಿ ಪ್ರಬಲವಾಗಿರುವವರು ತಮ್ಮ ಮಕ್ಕಳಿಗೆ ಒಳ್ಳೆಯ ಪ್ರತಿಷ್ಠಿತ ಖಾಸಗಿ ಶಾಲೆಯಲ್ಲಿ ಶಿಕ್ಷಣ ಕೊಡಿಸುತ್ತಾರೆ. ಇಲ್ಲದವರು ಸರ್ಕಾರಿ ಶಾಲೆಯಲ್ಲೇ ಓದಿಸುತ್ತಾರೆ. ಹಿಂದೆ ಸಾಂಪ್ರದಾಯ ಶಿಕ್ಷಣವನ್ನು ಪಡೆಯುತ್ತಿದ್ದರು. ಇಂದು ವಿಜ್ಞಾನ, ತಂತ್ರಜ್ಞಾನದ ಕೋರ್ಸ್‌ಗಳಿಗೆ ತಮ್ಮ ಮಕ್ಕಳನ್ನು ಸೇರಿಸುತ್ತಿದ್ದಾರೆ. ಕಬ್ಬಾಳಿನಲ್ಲಿ ರಾಜಕೀಯ ಪ್ರಬಲವಾಗೇ ಇದೆ. ದೇವಸ್ಥಾನದಲ್ಲೂ ರಾಜಕೀಯ ಪ್ರವೇಶವಾಗಿರುವುದು ವಿಷಾದನೀಯವಾಗಿದೆ. ಸಾಮಾಜಿಕವಾಗಿ, ಬೇರೆ ಬೇರೆ ಸಮುದಾಯಗಳ ನಡುವೆ ಇದ್ದಂತ ಸಾಮಾಜಿಕ ಸಂಬಂಧಗಳು ಬದಲಾವಣೆಯಾದರೂ, ಜಾತೀಯ್ಯತೆಯ ಸ್ವರೂಪ ಬೇರೆಯಾಗಿದೆ. ಅದರ ಅಂತರ ಮಾತ್ರ ಇಂದೂ ಹಾಗೇ ಇದೆ. ಮುಟ್ಟುವ, ಮಾತನಾಡುವ, ಜೊತೆಯಲ್ಲಿ ಓಡಾಡುವ, ಕೆಲಸಮಾಡುವ ಸ್ವಾತಂತ್ರವಿದ್ದರೂ ಮದುವೆಯಂತಹ ಸಂದರ್ಭದಲ್ಲಿ ಕೊಡುಕೊಳುವಿಕೆಯು ನಿಷಿದ್ಧ.

ಸಾಂಪ್ರದಾಯಿಕ, ಸಾವಯ ಕೃಷಿ ಸಹಜ ಕೃಷಿ ಪದ್ಧತಿಗಳಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡುವ ಮುಯ್ಯಾಳು ಪದ್ದತಿ ಇತ್ತು. ಕೆಲಸಗಳನ್ನು ಎಲ್ಲರೂ ಒಟ್ಟಿಗೆ ಕೂಡಿ ಮಾಡುತ್ತಿದ್ದುದರಿಂದ ಸುಲಭವೂ, ಸಂತೋಷದಾಯಕವಾಗಿಯೂ ಸರಾಗವಾಗಿ ಮುಗಿಯುತ್ತಿತ್ತು. ಅಲ್ಲಿ ಎಲ್ಲರೂ ಒಂದೇ ಕುಟುಂಬದವರಾಗಿ ಮುತುವರ್ಜಿ ವಹಿಸುತ್ತಿದ್ದರು ಹಾಗೂ ಕೆಲಸಗಳು ಸಕಾಲಕ್ಕೆ ಸರಿಯಾಗಿ ಮುಗಿಯುತ್ತಿತ್ತು. ಅಲ್ಲಿ ಕಥೆ, ಗೀತೆ, ಒಗಟು, ಗಾದೆಗಳು ಜೀವಂತವಾಗಿರುತ್ತಿದ್ದವು. ಆದರೆ ಇಂದು ಆಧುನಿಕ ಕೃಷಿಪದ್ಧತಿಯಿಂದ ಆಧುನೀಕರಣದ ಪ್ರಬಾವದಿಂದ ಸಹಕಾರ, ಸಹಾಯ, ಕೃಷಿ ಪದ್ಧತಿ ಕಡಿಮೆಯಾಗಿ ಜನರಲ್ಲಿ ಹಂಚಿಕೆಯ ಸ್ವಭಾವ ಕಡಿಮೆಯಾಗಿ ಪ್ರೀತಿ, ವಿಶ್ವಾಸ, ನಂಬಿಕೆಗಳು ಮಾಯವಾಗುತ್ತಿವೆ. ಜೊತೆಗೆ ಜಾನಪದ ಸಾಹಿತ್ಯವು ನಿರ್ಜೀವವಾಗುತ್ತಿದೆ.

ಒಟ್ಟಾರೆ ಕಬ್ಬಾಳು ಗ್ರಾಮ ಸಮಾಜವು ಸಂಪನ್ನ ಕ್ಷೇತ್ರವಾಗಿದೆ ಎನ್ನಬಹುದು. ನೂರಾರು ವರ್ಷಗಳಷ್ಟು ಪುರಾತನವಾದ ಸಾಂಸ್ಕೃತಿಕ ಪರಂಪರೆ ಹೊಂದಿರುವ ಗ್ರಾಮ ಸಮಾಜ ತುಂಬಾ ಸಂಕೀರ್ಣವಾದುದಾಗಿದೆ. ಇಲ್ಲಿನ ಸಮುದಾಯ ಮತ್ತು ಜನಾಂಗಗಳು ಕಟ್ಟಿದ ಸಾಮಾಜಿಕ ಸಂಸ್ಥೆಗಳು ಈ ಗ್ರಾಮದ ಜನಜೀವನವನ್ನು, ಸಂಸ್ಕೃತಿಯನ್ನು ರೂಪಿಸುವುದರ ಜೊತೆ ಜೊತೆಗೆ ದೇಶದ ಸಂಸ್ಕೃತಿ ಕಟ್ಟಲು ಆಧಾರ ಸ್ತಂಭಗಳಾಗಿವೆ.

ಕುಟುಂಬ, ಜಾತಿ, ಧರ್ಮ, ಶಿಕ್ಷಣ, ರಾಜ್ಯಾಂಗ ಮುಂತಾದ ಅನೇಕ ಸಂಸ್ಥೆಗಳು ವಿವಿಧ ಕಾಲಘಟ್ಟಗಳಲ್ಲಿ ವಿವಿಧ ರೀತಿಯಲ್ಲಿ ಈ ದೇಶದ ಜನಜೀವನವನ್ನು ಪ್ರಭಾವಿಸಿವೆ. ಪರಿವರ್ತನೆಯ ಈ ಯುಗದಲ್ಲಿ ಜಾಗತೀಕರಣದ, ಆಧುನೀಕರಣದ ಹಾಗು ನಗರೀಕರಣದ ಸುಳಿಯಲ್ಲಿ ಸಿಲುಕಿರುವ ಈ ಪ್ರದೇಶವು ಹೊಸ ಸಾಮಾಜಿಕ ಸಂಸ್ಥೆಗಳನ್ನು ಜೀವನ ಪದ್ಧತಿಯನ್ನು ತನ್ನದಾಗಿಸಿಕೊಳ್ಳುತ್ತ ಹಲವು ವೈರುದ್ಯಗಳನ್ನು ವಿರೋಧಾಭಾಸಗಳನ್ನು ಮತ್ತು ಪರಸ್ಪರ ಪೂರಕಾಂಶಗಳನ್ನು ಏಕಕಾಲದಲ್ಲಿ ಹೊಂದುತ್ತಾ ಪರಿವರ್ತನ ಹಾದಿಯಲ್ಲಿ ಸಾಗಿದೆ.

ಅಧ್ಯಾಯ ೮

ಉಪಸಂಹಾರ

ಅಧ್ಯಾಯ ೮

ಉಪಸಂಹಾರ

ಸಂಸ್ಕೃತಿ ಎಂದರೆ ಜನರ ಜೀವನ ವಿಧಾನ. ಅಂದರೆ ಜನಸಮುದಾಯದ ಬದುಕಿನ ಆಚರಣೆಗಳು, ರೀತಿ-ನೀತಿಗಳು ಇವುಗಳನ್ನೆಲ್ಲ ಒಳಗೊಂಡು ಅರ್ಥೈಸುವ ಪದವೇ ಸಂಸ್ಕೃತಿ. ಬದುಕನ್ನು ಬೆಳಗಲು, ವಿಕಾಸಗೊಳಿಸಲು ಬದುಕಿಗೆ ಅನೇಕ ರೀತಿಗಳು ಮಹತ್ವವಾಗುತ್ತವೆ. ಜನಪದರ ಬದುಕಿನ ಭಾಗವಾಗಿರುವ ಆಚಾರ, ವಿಚಾರ, ಆಚರಣೆ, ಸಂಪ್ರದಾಯಗಳು, ನಂಬಿಕೆ, ದೇವರು, ದಿಂಡರು, ನಡೆ, ನುಡಿ, ಕಥೆ, ಗೀತೆ, ರೀತಿ ನೀತಿ ಇನ್ನು ಮುಂತಾದವೆಲ್ಲವುಗಳನ್ನು ಸೇರಿಸಿಕೊಂಡು ಸಂಕೀರ್ಣವಾಗಿ ಬೆಳೆಯುವಂಥದ್ದು ಸಂಸ್ಕೃತಿ.

ಸಂಸ್ಕೃತಿ ಸಂಘರ್ಷದಿಂದಲೇ ಕೂಡಿದೆ. ಭಾರತದ ಸಾಂಸ್ಕೃತಿಕ ವೈರುಧ್ಯತೆಗಳು ಇಂದು ನಿನ್ನೆಯದಲ್ಲ. ಅದು ಅನಾದಿಕಾಲದಿಂದಲೂ ಇರುವಂತಹದಾಗಿದೆ. ದ್ರಾವಿಡರ ಜೀವನ ವಿಧಾನಗಳಿಂದ ಪ್ರಾರಂಭವಾದ ಈ ದೇಶದ ಸಂಸ್ಕೃತಿ ಸಮನ್ವಯತೆಯಿಂದ ಕೂಡಿದ್ದು ಆರ್ಯರ ಆಗಮನದ ನಂತರ ಸಮಾಜದಲ್ಲಿ ವರ್ಣ, ಜಾತಿವ್ಯವಸ್ಥೆಯ ಏಣಿ ಶ್ರೇಣೀಕರಣ ಉಂಟಾಗಿ ಶೋಷಣೆ ಮತ್ತು ಘರ್ಷಣೆ ಅಧಿಕೃತವಾಗಿ ಪ್ರಾರಂಭವಾಗುತ್ತವೆ. ಅಂದಿನಿಂದ ಪ್ರಾರಂಭವಾದ ವೈರುಧ್ಯತೆ ಇಂದಿನವರೆಗೂ ಬೇರೆ ಬೇರೆ ಹಂತಗಳಲ್ಲಿ ಭೂತಾಕಾರವಾಗಿ ಬೆಳೆದು ಪ್ರತಿಹಳ್ಳಿ ಗ್ರಾಮಗಳಲ್ಲು ಬೇರುಬಿಟ್ಟಿದೆ. ಅದು ಕಬ್ಬಾಳು ಗ್ರಾಮವನ್ನು ಒಳಗೊಂಡಿದೆ.

ಇಲ್ಲಿ ಮುಖ್ಯವಾಗಿ ಒಂದು ಜನಸಮುದಾಯದ ಜೀವನ ವಿಧಾನ ರೂಪುಗೊಳ್ಳುವುದು ಅಲ್ಲಿಯ ಆರ್ಥಿಕ, ಸಾಮಾಜಿಕ ಸ್ಥಿತಿಯನ್ನು ಅವಲಂಬಿಸಿರುತ್ತದೆ. ಆರ್ಥಿಕ, ಸಾಮಾಜಿಕ, ಅಸಮಾನತೆ ಇರುವ ವ್ಯವಸ್ಥೆಯಲ್ಲಿ ಸಾಂಸ್ಕೃತಿಕ ವೈರುದ್ಯತೆ ಇದ್ದೇ ಇರುತ್ತದೆ. ಸಮಾಜ ವ್ಯವಸ್ಥೆಯಲ್ಲಿ ಅಸಮಾನತೆ ಇದ್ದಾಗ ಜನತೆಯ ಜೀವನ ವಿಧಾನದಲ್ಲಿಯೂ ಅಸಮಾನತೆ ಎದ್ದು ಕಾಣುತ್ತದೆ. ಆಗ ಅನೇಕ ವೈರುದ್ಯದ ಗೋಡೆಗಳು ಕಟ್ಟಲ್ಪಡುತ್ತವೆ. ಆಗ ಪಟ್ಟಭದ್ರ ಜಾತಿವಾದಿಗಳ ಸಂಸ್ಕೃತಿಯೇ ಇಡೀ ದೇಶದ ಸಂಸ್ಕೃತಿಯಾಗಿ ಹೇರಲ್ಪಟ್ಟು ಅದು ಪೊಳ್ಳುಸಂಸ್ಕೃತಿಯಾಗುತ್ತದೆ. ಈ ಎಲ್ಲಾ ವೈರುದ್ಯಗಳನ್ನೊಳಗೊಂಡಿರುವ ಕಬ್ಬಾಳು ಗ್ರಾಮದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಮತ್ತು ಧಾರ್ಮಿಕ ಸ್ಥಿತಿಗತಿಗಳು ವ್ಯತ್ಯಾಸಗಳಿಂದ, ಸಂಘರ್ಷದಿಂದ ಕೂಡಿದೆ.

ಯಾವುದೇ ಒಂದು ಪ್ರದೇಶದ ಹಾಗೂ ಆ ಪ್ರದೇಶದ ಜನಸಮುದಾಯಗಳ ಸಾಂಸ್ಕೃತಿಕ ಹಿನ್ನೆಲೆಯನ್ನು ನೋಡಬೇಕಾದರೆ ಭೂಮಿಯ ಮೇಲೆ ಮನುಷ್ಯನ ಆದಿಮ ನೆಲೆಗಳು ಹಾಗೂ ಆತನ ಜೀವನ ವಿಧಾನ ಮತ್ತು ನಿಸರ್ಗದೊಡನೆ ಆತನ ಸಂಬಂಧ, ಅಲ್ಲಿನ ಪರಿಸರ, ವಾಯುಗುಣ, ಸಸ್ಯಸಂಪತ್ತು, ಪ್ರಾಣಿಸಂಪತ್ತು ಇವೆಲ್ಲವನ್ನು ಗಮನಿಸಬೇಕು. ಹಾಗಾಗಿ ಕಬ್ಬಾಳು ಪ್ರದೇಶದ ಪರಿಸರ ನೋಡಿದಾಗ ಭೌಗೋಳಿಕವಾಗಿ ಇದಕ್ಕೆ ಕಬ್ಬಾಳುದುರ್ಗದ ಹಿನ್ನೆಲೆಯಿದೆ. ಕೆರೆ, ತೋಟ, ಹಳ್ಳ, ಹೊಲ, ಗದ್ದೆಗಳನ್ನು ತನ್ನ ಸುತ್ತಮುತ್ತಲಿರಿಸಿಕೊಂಡಿದೆ. ಚಾರಿತ್ರಿಕವಾಗಿ ಕರ್ನಾಟಕವನ್ನಾಳಿದ ಹಲವಾರು ರಾಜಮನೆತನಗಳ ಪ್ರಭಾವ ಇದರ ಮೇಲಾಗಿದೆ. ಮೈಸೂರು ಅರಸರಿಂದ ಟಿಪ್ಪುಸುಲ್ತಾನನವರೆಗೆ ಕಬ್ಬಾಳು ಒಂದು ಸೈನಿಕ ನೆಲೆಯಾಗಿತ್ತು ಎಂಬುದಕ್ಕೆ ಬೆಟ್ಟವೇ ನಿದರ್ಶನವಾಗಿದೆ. ವಿಜಯನಗರ ಅರಸರ ಕಾಲದ ಶಾಸನದಲ್ಲಿ ಕಬ್ಬಾಳಮ್ಮನನ್ನು ಕಾಳಿಕಾದೇವಿ ಎಂದು ಕರೆದಿರುವುದು ವಿಜಯನಗರ ಸಾಮ್ರಾಜ್ಯದ ಪ್ರಭಾವವನ್ನು ತಿಳಿಸುತ್ತದೆ.

ಕಬ್ಬಾಳು ಗ್ರಾಮ ವಿವಿಧ ಜಾತಿ ಜನ ಸಮುದಾಯಗಳನ್ನು ಹೊಂದಿದ್ದು, ಗ್ರಾಮದ ಸಾಂಸ್ಕೃತಿಕ ಸಮೃದ್ಧಿಗೆ ಎಲ್ಲರ ಕೊಡುಗೆ ಇದೆ. ಪ್ರತಿಸಮುದಾಯಗಳಿಗೂ ಬೇರೆ ಬೇರೆ ಬೀದಿಗಳಿದ್ದು, ಮನೆಗಳು ಅವರ ಅಂತಸ್ತಿಗೆ ತಕ್ಕಂತೆ ಕಟ್ಟಿಕೊಂಡಿದ್ದಾರೆ. ತುಂಬ ಹಳೆಯ ಕಾಲದ ಮನೆಗಳು ಎಂಬ ನಾಟಿ (ಕೈ) ಹಂತಿನ ಮನೆಗಳೂ ಇವೆ. ಹಾಗೂ ಆಧುನಿಕದ ಪ್ರತೀಕದಂತಿರುವ ಭವ್ಯವಾದ ನಗರದ ಮನೆಗಳಾಗಿರುವ ಬಿಲ್ಡಿಂಗ್‌ಗಳು ಹೆಚ್ಚುತ್ತಿವೆ. ಇವು ಸುಸಜ್ಜಿತ ಸುವ್ಯವಸ್ಥೆಯನ್ನು ಹೊಂದಿವೆ. ಇವು ನಗರದ ಶ್ರೀಮಂತರನ್ನು ನಾಚಿಸುತ್ತವೆ. ಕುಟುಂಬವೇ ಸಮಾಜದ ಮೂಲ ಕೇಂದ್ರ. ಸಮಾಜದಲ್ಲಿರುವ ಎಲ್ಲಾ ಸಂಸ್ಥೆಗಳು ತಮ್ಮ ಸಂಬಂಧದ ಹುಟ್ಟು ಪಡೆದಿರುವುದೇ ಕುಟುಂಬದಿಂದ. ನನ್ನವರು ಬೇರೆಯವರು ನೆರೆ-ಹೊರೆ, ಬಂಧು-ಬಳಗ, ಸ್ನೇಹಿತರು, ಶತ್ರುಗಳು, ರಕ್ತಸಂಬಂಧಿಗಳು, ಗಂಡು-ಹೆಣ್ಣು ಮುಂತಾದ ಸಾಮಾಜಿಕ ಬೇಧಗಳು ಹುಟ್ಟು ಪಡೆದಿರುವುದು ಕುಟುಂಬ ಜೀವನದಿಂದ. ತಂದೆ-ತಾಯಿ, ಮಗ-ಸೊಸೆ, ಮಗಳು-ಅಳಿಯ, ಅತ್ತೆ-ಮಾವ, ಅಣ್ಣ-ತಮ್ಮ, ಅಕ್ಕ-ತಂಗಿ ಮುಂತಾದ ಬಂಧುವಾಚಕ ಶಬ್ದಗಳು ಇಲ್ಲಿನ ಕುಟುಂಬ ವ್ಯವಸ್ಥೆಯಲ್ಲಿದೆ. ಮಾತೃಪ್ರಧಾನ ಮತ್ತು ಪಿತೃಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಪಿತೃಪ್ರಧಾನವೇ ಪ್ರಾಬಲ್ಯದಿಂದ ಕೂಡಿದೆ. ಮೂಲದಲ್ಲಿ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯಿಂದ ಕೂಡಿದ್ದ ಕಬ್ಬಾಳು ಆಧುನಿಕ ಕಾಲಗಟ್ಟದಲ್ಲಿ ಪಿತೃಪ್ರಧಾನ ವ್ಯವಸ್ಥೆಗೆ ಬದಲಾಗಿದೆ. ತಂದೆಯೆ ಮನೆಯ ಯಜಮಾನನಾಗಿದ್ದಾನೆ. ಕುಟುಂಬದಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳುವಲ್ಲಿ ತಂದೆಯ ಪಾತ್ರ ಮುಖ್ಯವಾಗುತ್ತದೆ.

ವಿವಾಹ ಮತ್ತು ಕುಟುಂಬ ಇಲ್ಲಿನ ಸಮಾಜದ ಮೂಲಭೂತ ಅವಶ್ಯ ಮತ್ತು ಅನಿವಾರ್ಯ ಸಂಸ್ಥೆಗಳು. ಪ್ರಸ್ತುತ ಪರಿಸರದಲ್ಲಿನ ವಿವಾಹ ಪದ್ಧತಿಗಳು ಹಲವು ವೈಶಿಷ್ಟ್ಯ ಮತ್ತು ವೈವಿಧ್ಯಪೂರ್ಣವೂ ಆಗಿವೆ. ಸಾಂಸ್ಕೃತಿಕ ದೃಷ್ಟಿಯಿಂದ ತುಂಬ ಉಪಯುಕ್ತವಾಗಿವೆ. ಕಬ್ಬಾಳು ಗ್ರಾಮವು ಹಲವು ಜಾತಿಗಳಿಂದ ಕೂಡಿದ್ದರು ದ್ರಾವಿಡರಾಗಿರುವುದರಿಂದ ಎಲ್ಲಾ ಸಂಪ್ರದಾಯಗಳು ಸಾಮ್ಯತೆಯಿಂದ ಕೂಡಿವೆ. ಮದುವೆಗಳು ಅವರವರ ಯೋಗ್ಯತೆಗನುಸಾರವಾಗಿ ಮಾಡುವುದು ಅವರ ಅಂತಸ್ತನ್ನು ಒಳಗೊಂಡಿರುತ್ತದೆ. ಇಲ್ಲಿಯು ಪಿತೃಪ್ರಧಾನ ಸಂಸ್ಕೃತಿ ಇದ್ದು ಅದರ ಪ್ರಾಬಲ್ಯ ಹೆಚ್ಚಾಗಿದೆ. ಹಿಂದಿನಿಂದ ನಡೆದು ಬಂದಿರುವ ಸಂಪ್ರದಾಯಗಳು

ಇಂದಿಗೂ ಉಳಿದಿವೆ. ಆದರೆ ಕೆಲವು ಮಾತ್ರ ಆಚರಣೆಯಲ್ಲಿ ಬದಲಾವಣೆಗಳಾಗಿವೆ. ಹಿಂದೆ ಮೂರು ದಿನಗಳಾಗುತ್ತಿದ್ದ ವಿವಾಹಗಳು ಇಂದು ಒಂದು ದಿನಕ್ಕೆ ಬಂದಿವೆ.

ಪ್ರಾದೇಶಿಕವಾಗಿ, ಭೌಗೋಳಿಕ, ವಾಯುಗುಣಗಳಿಗೆ ತಕ್ಕಂತೆ ಮನುಷ್ಯನ ಜೀವನಾಶ್ಯಕತೆಯುಳ್ಳ ಊಟೋಪಚಾರ, ವಸ್ತ್ರವಿನ್ಯಾಸಗಳಲ್ಲಿ ಬದಲಾವಣೆಗಳು ಕಂಡುಬರುತ್ತವೆ. ಈ ಪ್ರದೇಶದ ಮುಖ್ಯ ಆಹಾರ ರಾಗಿಮುದ್ದೆ, ಅವರೆಕಾಳಿನ ಸಾರು, 'ಎತ್ತೇರಿ ಹಿಟ್ಮೇಲೆ ಅವರೇ ಕಾಳ್' ಎಂಬ ನಾಣ್ನುಡಿ ರಾಗಿ ಮುದ್ದೆ(ಹಿಟ್ಟು) ಮತ್ತು ಅವರೆಕಾಳಿನ ಮಹತ್ವವನ್ನು ತಿಳಿಸುತ್ತದೆ. ಈ ಪ್ರದೇಶದಲ್ಲಿ ಬೆಳೆಯುವ ಪ್ರಮುಖ ಬೆಳೆಗಳೂ ಸಹ ರಾಗಿ, ಅವರೆ ಎಂಬುದು ಮುಖ್ಯವಾದ ಸಂಗತಿ. ಇಲ್ಲಿನ ಆಹಾರ ಆಯಾಯ ಸಂದರ್ಭ ಸನ್ನಿವೇಶಗಳಿಗೆ ಅನುಗುಣವಾಗಿ, ಮದುವೆ, ಹಬ್ಬ, ಜಾತ್ರೆ ಮುಂತಾದ ಸಂದರ್ಭಗಳಲ್ಲಿ ವಿವಿದತೆಯಿಂದ ಕೂಡಿರುತ್ತದೆ.

ಕೃಷಿ, ಹೈನುಗಾರಿಕೆ, ವ್ಯಾಪಾರ ಕಬ್ಬಾಳು ಗ್ರಾಮದ ಬಹುಮುಖ್ಯ ಆರ್ಥಿಕ ಮೂಲಗಳಾಗಿವೆ. ಕೃಷಿ ಬಹುಜನರ ಜೀವನಾಧಾರ. ಕೃಷಿಯಲ್ಲಿ ಸಾಂಪ್ರದಾಯಿಕ ಕೃಷಿ ಮತ್ತು ಆಧುನಿಕ ಕೃಷಿ ಎರಡರ ಸಮ್ಮಿಶ್ರಣಗೊಂಡಿದೆ. ಕಬ್ಬಾಳು ಕೃಷಿಗೆ ಯೋಗ್ಯವಾದ ಭೂಮಿಯಾಗಿದೆ. ಗ್ರಾಮದೇವತೆಯ ಉಗಮವೇ ಕೃಷಿಯ ಮೂಲದಿಂದ. ಕಬ್ಬಾಳಮ್ಮ ತಮಿಳುನಾಡಿನಿಂದ ವಲಸೆಬಂದು ಅಚ್ಚಲು ಬೆಟ್ಟದ ಮೇಲೆ ನಿಂತು ತನಗೆ ಸರಿಯಾದ ಜಾಗವನ್ನು ನೋಡಿ ಆರಿಸಿಕೊಳ್ಳುವುದು ಬಹುಶಃ ಕೃಷಿಗೆ ಇಲ್ಲಿ ಯೋಗ್ಯವಾದ ಭೂಮಿ ಇದೆ ಎಂದು ಇರಬೇಕು. ದೇಸೀ ಜ್ಞಾನಕ್ಕೆ ಪೂರಕವಾದ ನಿಸರ್ಗದ ಸಮತೋಲನಕ್ಕೆ ಕಾರಣವಾಗುವ ಮಾನವರ ವಿಕಾಸಕ್ಕೆ ಮತ್ತು ಅವನ ಸುತ್ತಲ ಪರಿಸರಕ್ಕೆ ಮತ್ತು ಅದರ ವಿಕಾಸಕ್ಕೆ ಕಾರಣವಾಗುವ ಸಾಂಪ್ರದಾಯಿಕ ಕೃಷಿ ಪದ್ಧತಿ ಇಂದಿಗೂ ಇದೆ. ಆದರೆ ಇದರಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಹಸು, ಎತ್ತು, ನೇಗಿಲುಗಳಿಂದ ಉಳುಮೆ ಮಾಡುವುದು ಕಡಿಮೆಯಾಗಿದೆ. ಟ್ರ್ಯಾಕ್ಟರ್‌ಗಳ ಬಳಕೆ ಹೆಚ್ಚಾಗಿದೆ. ಹೊಲಗಳಿಗೆ ಬಳಸುವ ಗೊಬ್ಬರ ರಾಸಾಯನಿಕವಾಗಿದೆ. ಕೊಟ್ಟಿಗೆ ಗೊಬ್ಬರದ ಬಳಕೆ ಕಡಿಮೆಯಾಗುತ್ತಿದೆ.

ಸಾಂಪ್ರದಾಯಿಕ ಕೃಷಿ ಪದ್ಧತಿಯಿಂದ ಬೆಳೆಯುವ ಬೆಳೆಗಳಾದ ರಾಗಿ, ಭತ್ತ, ಜೋಳ, ಅವರೆ, ಹುರುಳಿ ಮುಂತಾದವು ಮುಖ್ಯವಾಗಿವೆ. ಇವು ಈ ಪ್ರದೇಶದ ಮುಖ್ಯ ಆಹಾರ ಬೆಳೆಯಾಗಿವೆ. ಇದರ ಜೊತೆಗೆ ವಾಣಿಜ್ಯ ಕೃಷಿಯು ಈ ಪ್ರದೇಶದ ಆರ್ಥಿಕತೆಯ ಮೂಲವಾಗಿದೆ. ರೇಷ್ಮೆ, ಎಳ್ಳು, ತರಕಾರಿ, ಹಣ್ಣು, ಹೂಗಳು ಇಲ್ಲಿನ ಪ್ರಮುಖ ವಾಣಿಜ್ಯ ಬೆಳೆಯಾಗಿವೆ. ಮಾವು ಬೆಳೆ ಈ ಭೂಮಿಯಲ್ಲಿ ಬೆಳೆಯುವ ಮತ್ತೊಂದು ವಾಣಿಜ್ಯ ಬೆಳೆಯಾಗಿದೆ. ಬಿತ್ತನೆ ಮಾಡುವುದರಿಂದ ಹಿಡಿದು ಒಕ್ಕುವುದರ ತನಕ ಸಾಂಪ್ರದಾಯಿಕ ಆಚರಣೆಗಳು ಕೆಲವು ಬದಲಾವಣೆಗಳೊಂದಿಗೆ ಇಂದಿಗೂ ಜೀವಂತವಾಗಿವೆ. ಹೈನುಗಾರಿಕೆ ಮತ್ತೊಂದು ಆರ್ಥಿಕ ಮೂಲವಾಗಿದ್ದು ಇಲ್ಲಿನ ಜನರ ಜೀವನದ ನಿರ್ವಹಣೆಗೆ ಮೂಲವಾಗಿದೆ. ಇಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘ ಇರುವುದು ಇಲ್ಲಿನ ಹಾಲಿನ ಉತ್ಪಾದನೆಯ ಪ್ರತೀಕವಾಗಿದೆ.

ವ್ಯಾಪಾರ ಕಬ್ಬಾಳಿನ ಆದಾಯದ ಮೂಲ. ಕಬ್ಬಾಳಮ್ಮನ ದೇವಸ್ಥಾನಕ್ಕೆ ಪ್ರತಿನಿತ್ಯ ಬೇಟಿನೀಡುವ ಭಕ್ತಾದಿಗಳು ದಿನೇ ದಿನೇ ಹೆಚ್ಚುತ್ತಿದ್ದಾರೆ. ವಾರಗಳಲ್ಲಿಯಂತು ಭಕ್ತರ ಸಂಖ್ಯೆ ಸಾವಿರ, ಸಾವಿರ ಸಂಖ್ಯೆದಾಟುತ್ತದೆ. ಹೂ, ಹಣ್ಣು, ಪೂಜಾ ವಸ್ತುಗಳು ಅತ್ಯವಶ್ಯಕವಾಗಿ ಮಾರಾಟವಾಗುತ್ತದೆ. ಇಲ್ಲಿ ಬಲಿ ಇರುವುದರಿಂದ ವ್ಯಾಪಾರದ ಭರಾಟೆ ಭರದಿಂದ ಸಾಗುತ್ತದೆ.

ಕಬ್ಬಾಳು ಪ್ರದೇಶದ ಶೈಕ್ಷಣಿಕ ಸ್ಥಿತಿಗತಿ ಸಾದಾರಣವಾಗಿದೆ. ಯಾವುದೇ ಖಾಸಗಿ ಶಾಲೆ ಕಾಲೇಜುಗಳಿಲ್ಲ, ಸರ್ಕಾರಿ ಶಾಲೆಗಳಿವೆ. ಸರ್ಕಾರಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿದ್ದು ಒಂದು ಸರ್ಕಾರಿ ಅನುದಾನಿತ ಪ್ರೌಢಶಾಲೆ ಇದೆ. ಊರಿನ ಎಲ್ಲ ಮಕ್ಕಳಿಗೂ ಶಿಕ್ಷಣ ದೊರೆಯುತ್ತಿದೆ. ರಾಜಕೀಯವಾಗಿ ಈ ಊರಿನ ಯಾವುದೇ ಶಾಸಕ, ಸಚಿವರಿಲ್ಲ. ಆದರೂ ಶಾಸಕರು, ಸಂಸದರು, ಸಚಿವರು ಇಲ್ಲಿಗೆ ಬೇಟಿನೀಡುತ್ತಾರೆ. ಅದು ಕಬ್ಬಾಳಮ್ಮನ ಮಹಿಮೆಯಿಂದ. ಇಲ್ಲಿನ ಜನರು ತಮ್ಮ ಇಹಪರ ಬದುಕಿನಲ್ಲಿ ಧಾರ್ಮಿಕ ಸಂಪ್ರದಾಯಗಳನ್ನು ಮರೆತಿಲ್ಲ.

ಸಂಸ್ಕೃತಿಯ ಜೀವಂತ ಪಳೆಯುಳಿಕೆಯೇ ಜಾನಪದ. ಗ್ರಾಮ ದೇವತೆಯ ಜೊತೆಗೆ ಆಚರಣೆಗಳು, ಸಂಪ್ರದಾಯಗಳು ಈ ಪಳೆಯುಳಿಕೆಯ ಪ್ರಮುಖ ಅಂಗ. ಆದಿಮಾನವನ ಕಾಲದಿಂದಲೂ ದೇವರ ಕಲ್ಪನೆ ಬೆಳೆದು ಹಂತಹಂತವಾಗಿ ಅದರ ಸ್ವರೂಪವು ಬದಲಾಗಿ ಜನಪದ ಬದುಕಿನ ಜೀವಂತ ಪಳಯುಳಿಕೆಯಾಗಿದೆ. ಅಂದು ವಿಜ್ಞಾನದ ಕುರುಹೇ ಇಲ್ಲದಿರುವ ಕಾಲದಲ್ಲಿ ಪ್ರಕೃತಿಯಲ್ಲಿ ಎದುರಾದ ಸಾಂಕ್ರಮಿಕ ರೋಗಗಳು ಪ್ರಕೃತಿಯ ಭೀಕರತೆ ಮನುಷ್ಯನನ್ನು ಕಾಡುತ್ತಿದ್ದ ಸಂದರ್ಭ, ಅವುಗಳಿಂದ ರಕ್ಷಣೆ ಪಡೆಯಲು ಮಾನವ ಪ್ರಕೃತಿಯ ಕಾಣದ ಶಕ್ತಿಯನ್ನು ನಂಬಿ ಪೂಜಿಸುತ್ತಾ ದೃಢಮನಸ್ಕನಾಗಿ ಜೀವನ ಸಾಗಿಸಲು ತೊಡಗಿದ ಕಾಲ. ಅಲ್ಲಿಂದ ಪ್ರಾರಂಭವಾದ ದೇವರ ಕಲ್ಪನೆ ಮರ, ಗಿಡ, ಕಲ್ಲು, ಮಣ್ಣುಗಳಿಂದ ಮನುಷ್ಯನ ಸ್ವರೂಪ ಪಡೆಯಿತು.

ಗ್ರಾಮದೇವತೆಯು ಕೃಷಿತಾಂತ್ರಿಕ ಹಿನ್ನೆಲೆಯಿಂದ ಕೂಡಿರುವುದಾಗಿದ್ದು, ಮಾತೃಪ್ರಧಾನ ಸಂಸ್ಕೃತಿಯ ಪ್ರತೀಕವಾಗಿದೆ. ಗ್ರಾಮದೇವತೆಯ ಕಲ್ಪನೆ ಏಕಕಾರಿಯಾದುದಲ್ಲ. ಜನಪದರ ದೈವತ್ವದ ಕಲ್ಪನೆ ಇಂದು ಮಾರುಕಟ್ಟೆಯ ಪದಾರ್ಥವೆಂಬಂತೆ ಆಗಿರುವ ದೈವತ್ವದ ಕಲ್ಪನೆಗೂ ಯಾವ ಸಂಬಂಧವೂ ಇಲ್ಲ. ಇಂದು ದೈವತ್ವದ ಎಲ್ಲಾ ನೆಲೆಗಳು ವ್ಯಾಪಾರಿ ಸಂಸ್ಕೃತಿಯ ಭಾಗವಾಗಿಬಿಟ್ಟಿದೆ. ಕಬ್ಬಾಳಮ್ಮ ಜನಪದರಿಗೆ ಎಲ್ಲವನ್ನು ನೀಡುವ ಸಮೃದ್ಧ ದೇವತೆಯಾಗಿದ್ದಾಳೆ. ಅವಳ ಬಳಗ ಬಹುದೊಡ್ಡದಿದೆ. ಅವಳು ಶಕ್ತಿದೇವತೆ. ಆದರೆ ಕಬ್ಬಾಳಿನ ಸಂದರ್ಭದಲ್ಲಿ ಕಬ್ಬಾಳಮ್ಮನ ದೈವತ್ವದ ನೆಲೆಗಳು ವ್ಯಾಪಾರಿ ಸಂಸ್ಕೃತಿಯ ಭಾಗವಾಗಿವೆ. ಅಷ್ಟೇ ಅಲ್ಲದೆ ನಿರಂತರ ಹಣಕೇಂದ್ರಿತವಾದ, ರಾಜಕೀಯ ಕೇಂದ್ರಿತವಾದ, ಪ್ರಚಾರ ಸಾಧನಗಳಾಗಿವೆ. ಜನಪದರ ಸಹಜ ಅಭಿವ್ಯಕ್ತಿಯ ಎದುರು ವೈಭವದ ವರ್ಣರಂಜಿತ ಲೋಕವನ್ನು ಸೃಷ್ಟಿಸಿಬಿಟ್ಟಿದೆ. ದೈವತ್ವದ ಕಲ್ಪನೆ ಅಸಮಾನತೆ ಮತ್ತು ದೌರ್ಜನ್ಯಗಳನ್ನು ಪೋಷಿಸುತ್ತಿರುವ ವಲಯ ಒಂದು ಕಡೆಯಾದರೆ, ಕೆಳವರ್ಗದ ದೈವತ್ವದ ಕಲ್ಪನೆಯಲ್ಲಿ ಮಾನವೀಯ ಕಂಪನಗಳು ಜೀವಂತಿಕೆಯನ್ನು ತುಂಬಿವೆ.

ಕಬ್ಬಾಳಮ್ಮ ಊರಿನ ಕೇಂದ್ರಬಿಂದುವಾಗಿದ್ದು, ಜನರ ಜೀವನ ಕಬ್ಬಾಳಮ್ಮನನ್ನು ಆಧರಿಸಿದೆ. ಮಾರಮ್ಮ, ಸತ್ಯಮ್ಮ, ಭೀಮೇಶ್ವರ, ಬಸವೇಶ್ವರ ದೇವರುಗಳಿದ್ದರು, ಕಬ್ಬಾಳಮ್ಮನ ಮುಂದೆ ಇವರೆಲ್ಲ ಗೌಣರಾಗಿದ್ದಾರೆ. ಕೊಂಡ, ಬಂಡಿ, ಸಿಡಿ. ಮುಡಿ, ಬಲಿ, ಹರಕೆ ಇಲ್ಲಿನ ಪ್ರಮುಖ ಆಚರಣೆಗಳು. ಇವೆಲ್ಲವು ದೈವತ್ವದ ಕಲ್ಪನೆಯನ್ನು ಹೊಂದಿದೆ. ಆರ್ಥಿಕ ಪ್ರತಿಷ್ಠೆಯ ಭಾಗವಾಗಿ ಇಂದಿನ ಪ್ರಸಾರ ಮಾಧ್ಯಮದ ಮೂಲಕ ಹೆಚ್ಚು ಪ್ರಚಾರವನ್ನು ಪಡೆಯುತ್ತಿದ್ದು ಜನಪದರ ಜೀವನ ಕ್ರಮದಲ್ಲಿ ತಲ್ಲಣಗಳು ಉಂಟಾಗುತ್ತಿವೆ. ಇಂತ

ಆಧುನಿಕ ಕಾಲದಲ್ಲೂ ಗ್ರಾಮದೇವತೆ ಇಂದಿಗೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಇಂದಿನ ಆಧುನಿಕ ಜಗತ್ತಿನಲ್ಲಿ ಕೈಗಾರೀಕರಣ, ಕಂಪ್ಯೂಟರೀಕರಣವಾಗಿರುವ ಬೆಂಗಳೂರಿನಂತ ಮಹಾನಗರಗಳ ಜನರಲ್ಲಿ ಕಬ್ಬಾಳಮ್ಮನಲ್ಲಿ ಇರುವ ನಂಬಿಕೆ, ಭಕ್ತಿ, ಭಯ, ಆಚಾರ, ಸಂಪ್ರದಾಯಗಳು ಇನ್ನೂ ಜೀವಂತವಾಗಿವೆ. ಎಷ್ಟೇ ಆಧುನಿಕತೆ ಬಂದರು ಆಧುನಿಕತೆಯನ್ನೇ ತನ್ನ ತೆಕ್ಕೆಗೆ ತೆಗೆದುಕೊಂಡಿದ್ದಾಳೆ. ಸ್ಕೋಡಾ, ಬೆಂಜ್, ಇನ್ನೋವಾದಂತಹ ವಿಲಾಸಿಕಾರು, ಸ್ಕೂಟರ್‌ಗಳಿಗೂ ಕಬ್ಬಾಳಮ್ಮನ ಆಶೀರ್ವಾದ ಬೇಕಾಗಿದೆ.

ಕಬ್ಬಾಳಿನ ಸಂಪತ್ತುಗಳಲ್ಲಿ ಜಾನಪದ ಸಾಹಿತ್ಯವು ಒಂದು. ಜನಪದ ಸಾಹಿತ್ಯವೇ ಜಾನಪದ ಅಧ್ಯಯನಕ್ಕೆ ನಾಂದಿ ಎನ್ನಬಹುದು. ಇಲ್ಲಿರುವ ಜನಪದ ಸಾಹಿತ್ಯ ಎಲ್ಲರ ಮನಸ್ಸನ್ನು ತನ್ನತ್ತ ಸೆಳೆಯುತ್ತದೆ. ಇದು ಒಂದು ಸಂಸ್ಕೃತಿಯ ಸಮೃದ್ಧಿಯ ಸಂಕೇತ. ಕತೆ, ಗಾದೆ, ಒಗಟು, ಗೀತೆಗಳು ಎಥೇಚ್ಛವಾಗಿ ತುಂಬಿದೆ. ಇವು ಇಲ್ಲಿನ ಪ್ರತಿಯೊಂದು ಮಜಲುಗಳನ್ನು ಒಳಗೊಂಡಿದೆ. ಊರಿನ ಭೌತಿಕ ಪರಿಸರದಿಂದ ಹಿಡಿದು ಗ್ರಾಮದೇವತೆ, ಕೃಷಿಸಂಪ್ರದಾಯಗಳು, ಆಚಾರ ವಿಚಾರಗಳು, ಅಡುಗೆ, ಹಬ್ಬಗಳು, ಎಲ್ಲವನ್ನು ಬಿಂಬಿಸುವ ಒಂದು ಮಾದ್ಯಮವಾಗಿದೆ. ಆದ್ದರಿಂದ ಜನಪದ ಸಾಹಿತ್ಯ ನಿತ್ಯ, ನಿರಂತರ ಜೀವಂತಿಕೆಯನ್ನು ಹೊಂದಿದೆ.

ಮನುಷ್ಯನ ಹುಟ್ಟಿನಿಂದ ಅವನ ಹುಟ್ಟಿನ ಜೊತೆಗೆ ತಾನು ಹುಟ್ಟಿ ಅವಿಭಾಜ್ಯ ಅಂಗವಾಗಿ ಬೆಳೆದು ಬಂದಿರುವಂತಹದ್ದು ಜನಪದ ಸಾಹಿತ್ಯ. ಇಲ್ಲಿನ ಕೃಷಿ, ಮಳೆ, ಭೂಮಿ, ಸೂರ್ಯ, ಚಂದ್ರಾದಿಯಾಗಿ ಭೂಮಿಯ ಮೇಲಿನ ಎಲ್ಲಾ ಭೌತಿಕ ವಸ್ತುಗಳನ್ನು ಕುರಿತು ಜನಪದ ಸಾಹಿತ್ಯ ರಚನೆಯಾಗಿದೆ. ಜನಪದ ಗೀತೆ, ಕಥೆ, ಗಾದೆ, ಒಗಟು ಒಟ್ಟಾರೆ ಜನಪದ ಸಾಹಿತ್ಯದಲ್ಲಿ ಹೆಣ್ಣುಮಕ್ಕಳೆ ಪ್ರಧಾನಪಾತ್ರವಹಿಸುತ್ತಾರೆ. ಗೀತೆಗಳಲ್ಲಿ ದೇವರ ಸ್ತುತಿಪದಗಳು, ಕಬ್ಬಾಳಮ್ಮನ ಕುರಿತು, ಮಂಟೇಸ್ವಾಮಿ, ಮಲೆಮಹದೇಶ್ವರ, ಮುತ್ತತ್ರಾಯ, ಬಸವಣ್ಣ ಕುರಿತ ಗೀತೆಗಳನ್ನು ಹಾಡುತ್ತಾರೆ.

ಕೃಷಿ ಮಾಡುವಾಗ ಭೂಮಿತಾಯಿ ನೆನೆಯುವುದು, ಹೊಲ ಬಿತ್ತುವ ಸಂದರ್ಭದಲ್ಲಿ ಅಣ್ಣ ತಂಗಿಯರ ಹಾಡು, ಮಳೆರಾಯನನ್ನು ಕುರಿತ ಹಾಡು, ರಾಗಿ ಬೀಸುವ, ಕುಟ್ಟುವ ಮುಂತಾದವುಗಳು ಬಹುಸಂಖ್ಯೆಯಲ್ಲಿವೆ. ಮದುವೆ ಸಂದರ್ಭದಲ್ಲಿ ಹಾಡುವ ಸೋಬಾನೆ ಪದಗಳು, ಧಾರೆ ಎರೆಯೋ ಪದ, ಜರಿಯುವ ಪದ, ಇಳ್ಳೇವ್ ತಿದ್ದುವ ಪದ, ಗುರುಗಳ ಕುರಿತ ಹಾಡು ಮುಂತಾದವುಗಳಿವೆ. ಇವು ಇಲ್ಲಿನ ಜನರ ಸಂಸ್ಕೃತಿಯನ್ನು ಪರಿಚಯಮಾಡಿಕೊಡುವ ಮೂಲಕ ಇಲ್ಲಿನ ಜನರ ಸಾಂಸ್ಕೃತಿಕ ಶ್ರೀಮಂತಿಕೆ ಹೊರಹೊಮ್ಮುತ್ತದೆ.

ಗಾದೆಗಳು ವೇದಕ್ಕಿಂತ ಸತ್ವಯುತವಾದವುಗಳಾಗಿದ್ದು ಅರ್ಥ ಮತ್ತು ಅನುಭವದ ಮಾತುಗಳೇ ಗಾದೆಗಳು. ಗಾದೆಯು ಸಾಹಿತ್ಯದ ಒಂದು ಪ್ರಕಾರವಾಗಿ ಒಡೆದು ಕಾಣುವ ಗುಣ ಸರಸ, ಅದು ಆಕಾರದಲ್ಲಿ ಚಿಕ್ಕದು ಕೇಳಿಕೆಯಲ್ಲಿ ದೊಡ್ಡ ಅರ್ಥ ನೀಡುತ್ತದೆ. ಇಲ್ಲಿನ ಜನರ ಸ್ಥಿತಿ, ಜೀವನ ಅಲ್ಲಿನ ಗಾದೆಗಳಲ್ಲಿ ಬಯಲಾಗುತ್ತದೆ. ಗಾದೆಗಳು ಮಾನವನ ವೈಚಾರಿಕ ಭಾವನಾತ್ಮಕ ನೆಲೆಯಲ್ಲಿ ರೂಪಗೊಂಡ ಜೀವನಾನುಭವದ ಗಟ್ಟಿಗಳಾಗಿವೆ. ಹಾಗೆಯೇ ಒಗಟು ಇಲ್ಲಿನ ಸಾಹಿತ್ಯ ಪ್ರಕಾರಗಳಲ್ಲಿ ಒಂದು. ಇವುಗಳ ಪ್ರಧಾನಗುರಿ ಬುದ್ಧಿಯ ಕಸರತ್ತಾಗಿದೆ. ಹಾಸ್ಯ ವಿಡಂಬನೆ ಒಗಟಿನ ಪ್ರಮುಖ ಲಕ್ಷಣಗಳಾಗಿದ್ದು, ಇವು ಪರಂಪರಾಗತವಾಗಿ ಬೆಳೆದು ಬಂದಂತವಾಗಿವೆ. "ಕಾಳೇಗೌಡ, ಮುದ್ದೇಗೌಡ, ಗುದ್ದಾಡ್ಕಂದು ಗುಹೆಸೇರ್‍ತಾರೆ" ಇದು ರಾಗಿಮುದ್ದೆ

ಮತ್ತು ಅವರೆ ಕಾಳುಗಳ ಕುರಿತ ಒಗಟು. ಇಂತಹ ಒಗಟುಗಳನ್ನು ಎಲ್ಲಾ ರಂಗದಲ್ಲೂ ರಚಿಸಿದ್ದಾರೆ. ಇದು ಆ ಪ್ರದೇಶದ ವಿಶೇಷತೆಯನ್ನು ತೋರುತ್ತದೆ.

ಜನಪದ ಸಾಹಿತ್ಯದ ಬಹುಮುಖ್ಯ ಪ್ರಕಾರ ಜನಪದ ಕಥೆ. ಈ ಪ್ರದೇಶದಲ್ಲಿ ಕಥೆಗಳು ಹೆಚ್ಚಾಗಿ ಮಹಿಳೆಯರಿಂದಲೇ ಹೇಳಲ್ಪಡುತ್ತಿವೆ. ಈ ಕತೆಗಳಲ್ಲಿ ಮಹಿಳೆಯರ ಸಾಮಾಜಿಕ ಸ್ಥಾನಮಾನಗಳನ್ನು ಗುರುತಿಸಬಹುದು. ಬದುಕಿನ ವಿನೋದ, ಹಾಸ್ಯ, ಆಧ್ಯಾತ್ಮ, ಕುಟುಂಬ, ಮದುವೆ, ದುರಂತ, ಸಾಹಸ, ಕಷ್ಟಪರಂಪರೆಯ ಸಂಗತಿಗಳನ್ನು ಇಲ್ಲಿನ ಕತೆಗಳಲ್ಲಿ ಕಾಣಬಹುದು. ಇಲ್ಲಿದೊರೆಯುವ ಕತೆಗಳನ್ನು ಜಾನಪದ ಕಥಾ ಪ್ರಕಾರಗಳಲ್ಲಿ ಹಲವು ಭಾಗಗಳಾಗಿ ವಿಂಗಡಿಸಬಹುದು. ಒಟ್ಟಾರೆ ಇಲ್ಲಿ ದೊರೆಯುವ ಜನಪದ ಸಾಹಿತ್ಯ ಪ್ರಕಾರಗಳು ಒಂದು ಭಾವ ಪ್ರಧಾನ, ಇನ್ನೊಂದು ಕಲ್ಪನಾಪ್ರಧಾನ, ಮತ್ತೊಂದು ತತ್ವ ಪ್ರಧಾನ, ಮಗದೊಂದು ಚಿಂತನಾ ಪ್ರಧಾನವಾಗಿದೆ. ಒಂದಕ್ಕೊಂದು ಹತ್ತಿರದ ನಂಟಿದೆ. ಒಟ್ಟಾರೆ ಜನಪದರ ಸಂಸ್ಕೃತಿ ಮತ್ತು ಸಂವೇದನೆಯನ್ನು ಜನಪದ ಸಾಹಿತ್ಯ ಕಟ್ಟಿಕೊಡುತ್ತದೆ. ಕಥೆ, ಗಾದೆ, ಒಗಟು, ಗೀತೆ ಎಲ್ಲವೂ ಸಮಾಜಮುಖಿಯಾದರೂ ಅವುಗಳು ಬಯಸುವ ಲಯಗಾರಿಕೆಯನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಇಂದು ಇಲ್ಲಿ ದೊರೆಯುವ ಕಬ್ಬಾಳಮ್ಮನ ಕಥೆ, ಗೀತೆಗಳನ್ನು ಬಳಸಿಕೊಂಡು ಅದನ್ನು ಉದ್ಯಮ ಮಾಡಿಕೊಂಡಿದ್ದಾರೆ. ಕ್ಯಾಸೆಟ್‌ಮಾಡಿ ಅವುಗಳನ್ನು ಮಾರಿ ಹಣಸಂಪಾದಿಸುವ ಭರದಲ್ಲಿ ಅಲ್ಲಿ ದೊರೆಯುವ ಸಾಹಿತ್ಯವನ್ನು ಮರೆಮಾಚಿ ಅವರ ಅನುಕೂಲಕ್ಕೆ ತಕ್ಕ ಹಾಗೆ ರಚಿಸಿಕೊಂಡು ಹಣಸಂಪಾದನೆಗಿಳಿದಿದ್ದಾರೆ. ಇಲ್ಲಿಯೂ ಕೂಡ ಪೈಪೋಟಿ ನಡೆಯುತ್ತಿದೆ. ಕಥೆ, ಕಾವ್ಯ, ಗೀತೆಗಳನ್ನು ಹೇಳಿ ಮಾಹಿತಿಕೊಡುವ ಕೆಲವು ಭಕ್ತರು ಹಣದ ದೃಷ್ಟಿಯಿಂದಲೇ ಗೀತೆಗಳನ್ನು ಹೇಳುವುದು ಪೈಪೋಟಿಯಿಂದಲೇ ಕೂಡಿದೆ.

ಯುವ ಪೀಳಿಗೆಯ ಬರಹಗಾರರು, ಹನಿಗವನ, ಕತೆ, ಕಾವ್ಯ, ಕಾದಂಬರಿ, ಕವಿತೆಗಳ ರಚನೆಗೆ ಮುನ್ನ ಜನಪದರ ಆಡುನುಡಿಯ ಸೊಗಸಿನಲ್ಲಿ ಬೆರೆತು ಜನಪದರ ಸಾಹಿತ್ಯವನ್ನು ಅರಗಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ.

ಆಚರಣೆಗಳು ಮತ್ತು ಸಂಪ್ರದಾಯಗಳು ಸಮಾಜವನ್ನು ಒಂದುಗೂಡಿಸುವ ಶಕ್ತಿಯನ್ನು ನೀಡುತ್ತವೆ. ಸಂಸ್ಕೃತಿಯನ್ನು ಪೋಷಿಸಿ ನಾಗರೀಕತೆಯನ್ನು ಬೆಳೆಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಇವು ವ್ಯಕ್ತಿಯ ಬಾಳಿನ ಅವಿಭಾಜ್ಯ ಸಂಗತಿಗಳಾಗಿವೆ. ಇಲ್ಲಿನ ಸಮುದಾಯವನ್ನು, ಗ್ರಾಮದೇವತೆಗಳನ್ನು ಅಧ್ಯಯನ ಮಾಡಲು ಆಚರಣೆಗಳೇ ಆಧಾರ. ಹರಕೆ ಬಹಳ ಸಲ ಆಚರಣೆಯ ರೂಪದಲ್ಲಿ ನಡೆಯುತ್ತದೆ. ಆಚರಣೆ ಹರಕೆಗಳನ್ನು ಒಳಗೊಂಡಿದೆ. ಆಚರಣೆ ಸಾಮೂಹಿಕವಾದರೆ ಹರಕೆ ವೈಯಕ್ತಿಕವಾದದ್ದು. ಆಚರಣೆಗಳು ಆಧುನಿಕತೆಯನ್ನು ತನ್ನೊಳಗೆ ಆವಿರ್ಭವಿಸಿಕೊಂಡು ಮಾರ್ಗಗಳು ಬದಲಾದರೂ ಉದ್ದೇಶ ಒಂದೇ ಆಗಿದ್ದು ಬದಲಾವಣೆಗೆ ಒಳಪಟ್ಟಿರುತ್ತದೆ.

ಪ್ರಸ್ತುತ ಪ್ರದೇಶದ ಆಚರಣೆಯಲ್ಲಿ ವೈಯಕ್ತಿಕ ಆಚರಣೆಗಳು ಕೌಟುಂಬಿಕ ಆಚರಣೆಗಳು, ಸಾಮೂಹಿಕ ಆಚರಣೆಗಳು, ಸಾಮಾಜಿಕ ಆಚರಣೆಗಳು, ವ್ಯವಸಾಯಾತ್ಮಕ ಆಚರಣೆಗಳು ಹೀಗೆ ವಿವಿಧ ಆಚರಣಾ ಪದ್ಧತಿಗಳು ಇಲ್ಲಿನ ಸಂಸ್ಕೃತಿಯೊಳಗೆ ಸೇರಿಕೊಂಡಿವೆ. ವೈಯಕ್ತಿಕ ಕಾರಣದಿಂದ ಅಂದರೆ ವ್ಯಕ್ತಿಗತ

ನಂಬಿಕೆಯಿಂದ ನಡೆಯುವ ಆಚರಣೆಗಳಾಗಿದ್ದು ಮುಡಿಕೊಡುವುದು, ಕೊಂಡಹಾಯುವುದು, ಸಿಡಿ ಆಡುವುದು ಇತ್ಯಾದಿಗಳು. ಕುಟುಂಬದ ಸಮುದಾಯದ ಯೋಗಕ್ಷೇಮಕ್ಕಾಗಿ ಮಾಡುವುದು ಸಾಮೂಹಿಕ ಆಚರಣೆಗಳು. ಮುನಿಮಾಡುವುದು, ಪರಮಾಡುವುದು, ಜಾತ್ರೆ ಹಬ್ಬಗಳು ಇತ್ಯಾದಿಗಳು. ಜನರು ನಂಬಿಕೆಯ ಮೇಲೆ ಹರಕೆಯನ್ನು ಕಟ್ಟುತ್ತಾರೆ ನಿತ್ಯ ಜೀವನದಲ್ಲಿ ವ್ಯಕ್ತಿಗತ ಬದುಕು ಅನೇಕ ಸಂಕ್ರಮಣಗಳಿಗೆ ಒಳಗಾಗುತ್ತವೆ. ಜನಪದರ ಬದುಕು ಹುಟ್ಟಿನಿಂದ ಸಾವಿನವರೆಗೂ ಅನೇಕ ನಂಬಿಕೆಗಳಿಂದ ಕೂಡಿದ್ದು ಆಚರಣೆಗಳ ಮೂಲಕ ಅವನ್ನು ಈಡೇರಿಸುತ್ತಾ ಸಾಗುತ್ತಾರೆ.

ಈ ಪರಿಸರದಲ್ಲಿ ಮುಖ್ಯವಾಗಿ ಕೃಷಿಸಂಬಂಧಿ ಆಚರಣೆಗಳಾದ ಮಳೆ, ಬೆಳೆ, ಭೂಮಿಗೆ ಸಂಬಂಧಿಸಿದ ಹಬ್ಬ, ಜಾತ್ರೆ, ಉತ್ಸವಗಳು ಆಚರಣೆಯಲ್ಲಿವೆ. ಆದರೆ ಜನಪದರನ್ನು ಜನಪದರ ಬದುಕನ್ನು ಆಕ್ರಮಿಸುತ್ತಿರುವ ಕೈಗಾರೀಕರಣ, ಜಾಗತೀಕರಣದ ಆರ್ಥಿಕ ಅಕ್ರಮಗಳು ಗ್ರಾಮಜೀವನದ ಅನನ್ಯತೆಯನ್ನು ಅದರ ಗುಣಲಕ್ಷಣ ಚಹರೆಗಳನ್ನು ಅಳಿಸಿ ಹಾಕುತ್ತಲಿವೆ. ಭೂಮಿ ಮತ್ತು ರೈತನ ಸಂಬಂಧಗಳಿಂದ ಹಿಡಿದು ಅವನ ನಿತ್ಯ ಜೀವನದ ಎಲ್ಲಾ ಸೂಕ್ಷ್ಮಗಳನ್ನು ಪಲ್ಲಟಗೊಳಿಸುತ್ತಿವೆ. ಇಂಥ ಪಲ್ಲಟ ನಿರಂತರವಾಗಿ ನಡೆಯುತ್ತಿರುವುದರಿಂದ ಗ್ರಾಮ ಸಂಸ್ಕೃತಿಯ ಅಧ್ಯಯನ ಅನೇಕ ಸವಾಲುಗಳಿಂದ ಕೂಡಿದೆ.

ಅಧ್ಯಯನದ ಫಲಿತಗಳು

೧. ಕಬ್ಬಾಳು ಪರಿಸರ ಹಿಂದೂ ಧರ್ಮದ ಭಾಗಗಳಾದ ಶೈವ ಮತ್ತು ವೈಷ್ಣವ ಧರ್ಮದ ಪ್ರಭಾವವಿದ್ದರು ಅಲ್ಲಿನ ಆಚರಣೆಗಲಲ್ಲಿ ಬೌದ್ಧ ಧರ್ಮದ ಸಂಸ್ಕೃತಿ ಹೆಚ್ಚಾಗಿದೆ.

೨. ಕಬ್ಬಾಳಮ್ಮನ ಮೂಲ ಹೆಸರು ಕಾಳಿ, ಕಾಳಿಕಾದೇವಿಯಾಗಿದ್ದು, ಕಬ್ಬಾಳು ಊರಿನಿಂದ ಕಬ್ಬಾಳಮ್ಮ ಎಂದು ಹೆಸರು ಬಂದಿದೆ.

೩. ಕಬ್ಬಾಳಮ್ಮನ ಮೇಲಿನ ಭಕ್ತಿ, ನಂಬಿಕೆ, ಆಚರಣೆ ಮತ್ತು ಸಂಬಂಧಗಳಿಂದ ಹುಟ್ಟಿರುವ ಜನಪದ ಗೀತೆಗಳು ಶಿಷ್ಟಪದವಾಗಿ ಪರಿವರ್ತನೆಗೊಳ್ಳುತ್ತಿದೆ. ಕಬ್ಬಾಳಮ್ಮನನ್ನು ಶಿಷ್ಟದೇವತೆ ಎಂದು ಬಿಂಬಿಸಲಾಗುತ್ತಿದೆ.

೪. ಕಬ್ಬಾಳಮ್ಮ ಮಾತೃಪ್ರಧಾನ ಸಂಸ್ಕೃತಿಯವಳಾಗಿದ್ದು ಇಲ್ಲಿನ ಪ್ರದೇಶದಲ್ಲಿ ಪಿತೃಪ್ರಧಾನ ಮತ್ತು ಮಾತೃಪ್ರಧಾನ ಎರಡು ಸಮ್ಮಿಲನಗೊಂಡಿದೆ.

೫. ಕಬ್ಬಾಳಮ್ಮ ದ್ರಾವಿಡ ಮೂಲ ದಲಿತ ದೇವತೆಯಾಗಿದ್ದು ಅವಳನ್ನು ಸ್ಪೃಶ್ಯಳೆಂದು ಬಿಂಬಿಸಲಾಗುತ್ತಿದೆ.

೬. ಆಧುನಿಕ ಕೃಷಿ ಪದ್ಧತಿ ಹೆಚ್ಚಿದಂತೆಲ್ಲ ಇಲ್ಲಿನ ಗ್ರಾಮೀಣ ಸಮಾಜ ಪರಾವಲಂಬಿಯಾಗುತ್ತಿದೆ.

೭. ಎಷ್ಟೇ ಆಧುನಿಕತೆ, ನಗರೀಕರಣದ ಪ್ರಭಾವವಿದ್ದರು, ಇವರ ಆಚರಣಾ ಶೈಲಿ ಬದಲಾಗಿದ್ದರು, ಆಚರಣೆಯ ಉದ್ದೇಶ, ನಂಬಿಕೆ, ಶ್ರದ್ಧೆ, ಭಕ್ತಿ, ಭಕ್ತಾದಿಗಳ ಮುಗ್ಧ ಮನಸ್ಸೇ ಇಲ್ಲಿ ಕೆಲವರ ಆರ್ಥಿಕ ಬಂಡವಾಳವಾಗಿದೆ. ಕೆಲವು ಭಕ್ತಾದಿಗಳಿಗೆ ಮನರಂಜನೆಯ ತಾಣವಾಗಿದೆ.

೮. ಈ ಪ್ರದೇಶವು ಬಹುಪಾಲು ಮಳೆಯಾಶ್ರಿತ ಕೃಷಿ ವ್ಯವಸ್ಥೆಯನ್ನು ಅವಲಂಬಿಸಿದೆ. ಅಂತರ್ಜಲ ಕೊಳವೆಬಾವಿಗಳಿಂದ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತಿದೆ.

೯. ಸಾಟಿ ಪದ್ಧತಿ ಇಲ್ಲವಾಗಿದೆ. ಊರೊಟ್ಟಿನ ಕೆಲಸಗಳು ಜಾತ್ರೆಯ ಸಂದರ್ಭದಲ್ಲಿ ಇನ್ನು ಗಟ್ಟಿಯಾಗಿ ಉಳಿದುಕೊಂಡಿವೆ.

೧೦. ವಿಭಕ್ತ ಕುಟುಂಬಗಳು ಹೆಚ್ಚಾಗಿವೆ. ಕುಟುಂಬದಲ್ಲಿ ಪಿತೃಪ್ರಧಾನ ವ್ಯವಸ್ಥೆ ಇದೆ.

೧೧. ಕಬ್ಬಾಳು ಧಾರ್ಮಿಕ ಕೇಂದ್ರವಾಗಿದ್ದು, ಕೆಲವು ಸಂದರ್ಭದಲ್ಲಿ ರಾಜಕೀಯ ತಾಣವಾಗಿ ಕಾಣಿಸುತ್ತದೆ.

೧೨. ವಿವಾಹ ಪದ್ಧತಿಯಲ್ಲಿ ಪಿತೃಪ್ರಧಾನ ವ್ಯವಸ್ಥೆ ಇದೆ.

೧೩. ಇಲ್ಲಿನ ಜನರ ಮುಖ್ಯ ಆಹಾರ ರಾಗಿಮುದ್ದೆ. ಈ ಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯುವ ಬೆಳೆಯೂ ರಾಗಿಯಾಗಿದೆ.

೧೪. ಇಲ್ಲಿ ಮಿಶ್ರ ಬೇಸಾಯ ಪದ್ಧತಿ ಇದೆ.

೧೫. ಎತೇಚ್ಛವಾದ ಜಾನಪದ ಸಾಹಿತ್ಯ ತುಂಬಿದೆ

೧೬. ರಾಗಿ ಕಲ್ಲುಗಳು, ರುಬ್ಬುಗುಂಡುಗಳು ಮಾಯವಾಗಿ, ಪ್ಲೋರ್‌ಮಿಲಗಳು, ಮಿಕ್ಸಿಗಳು ಬಂದಿವೆ. ಇವುಗಳು ಜನರನ್ನು ಸೋಮಾರಿಗಳನ್ನಾಗಿ ಮಾಡುವುದರ ಜೊತೆಗೆ ರೋಗನಿರೋಧಕ ಶಕ್ತಿ ಕುಂದಿಸುತ್ತಿವೆ.

೧೭. ನಾಟಿ ಹಸುಗಳ ಬದಲು ಸೋಮಾರಿ ಸೀಮೆಹಸುಗಳು ಮಲಗಿವೆ.

೧೮. ದನಗಳ ಹಬ್ಬವಾಗಿದ್ದ ಸಂಕ್ರಾಂತಿ ಹಬ್ಬ ಜನಗಳಿಗೆ ಸೀಮಿತವಾಗುತ್ತಿದೆ.

೧೯. ದನಗಳ, ಕುರಿಗಳ ಸಂಖ್ಯೆಗಿಂತಲು ಇಲ್ಲಿ ನಾಯಿಗಳ ಸಂಖ್ಯೆ ಹೆಚ್ಚುತ್ತಿದೆ.

೨೦. ದನಗಳ ಜಾತ್ರೆ ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಿದೆ. ದನಗಳ ಸಂಖ್ಯೆ ಕಡಿಮೆಯಾಗಿದೆ. ಹಿಂದೆ ಬೀದಿಯ ಎರಡು ಬದಿಗಳಲ್ಲಿ ಪ್ರತಿಮನೆಯ ಮುಂದೆ ದನ, ಎತ್ತು, ಎಮ್ಮೆಗಳು ಸಾಲು ಗಟ್ಟಿರುತ್ತಿದ್ದವು. ಊರಿಗೆ ಹೊಸಬರನ್ನು ಅವುಗಳೇ ಸ್ವಾಗತಿಸುತ್ತಿದ್ದವು. ಇಂದು ಸ್ಕೂಟರ್, ಟ್ರ್ಯಾಕ್ಟರ್‌ಗಳೇ ಕಣ್ಣಿಗೆ ರಾಚುತ್ತಿವೆ. ಬಾನುವಾರದಂದು ನಗರದಲ್ಲಿರುವ ಎಲ್ಲಾ ರತಹದ ಸ್ಕೂಟರ್ ಕಾರುಗಳು ಇಲ್ಲಿ ಬಂದು ಸೇರುತ್ತವೆ. ಅದು ಕಾರು, ಸ್ಕೂಟರ್‌ಗಳ ಜಾತ್ರೆಯೇ ಸರಿ.

೨೧. ಕೃಷಿ ಉತ್ಪಾದನೆಯ ದೃಷ್ಟಿಯಲ್ಲಿ ಇಲ್ಲಿನ ಜನರು ಜೀವಕ್ಕಿಂತ ಜೀವನ ಮುಖ್ಯ ಎಂಬ ಸ್ಥಿತಿಯಲ್ಲಿದ್ದಾರೆ.

೨೨. ಜನರ ಜೀವನ ಶೈಲಿ ಬದಲಾಗಿದ್ದರೂ ಜೀವನದ ಮೌಲ್ಯ ಇಂದಿಗೂ ಉಳಿದಿದೆ.

೨೩. ಸಾಠಿಪದ್ಧತಿ ಅಥವ ವಸ್ತುವಿನಿಮಯ ಪದ್ಧತಿ ಇಲ್ಲವಾಗಿ ಹಣದ ಮೌಲ್ಯವೇ ಎಲ್ಲವನ್ನು ನಿರ್ಧರಿಸುತ್ತಿದೆ.

೨೪. ಆಧುನಿಕತೆಯ ಪ್ರಭಾವದಿಂದ ಇಲ್ಲಿನ ಜನರು ನಗರಗಳತ್ತ ಮುಖಮಾಡುತ್ತಿದ್ದಾರೆ.

ಅನುಬಂಧಗಳು

೧. ಜನಪದ ಕಥೆ

೨. ಜನಪದ ಗೀತೆ

೩. ಸಾಂಸ್ಕೃತಿಕ ಪದಕೋಶ

೪. ಗ್ರಂಥಸೂಚಿ

೫. ನಕ್ಷೆ

೬. ಛಾಯಾಚಿತ್ರ

ಜನಪದ ಕಥೆ

ಬ್ರಾಹ್ಮಣರ ಕಥೆ

ಒಂದೂರೆಲಿ ಒಬ್ಬ ಬ್ರಾಹ್ಮಣ ಇರ್ತಾನೆ. ಅವರ ಮನೇಲಿ ಕೆಲಸಮಾಡೂಕೆ ಒಬ್ಬುನ್ನ ಸಂಬಳ ಇರುಸ್ಕೊಂಡು ಹೊಲಮನೆ ಕೆಲಸ ಮಾಡಿಸ್ತಾ ಇರ್ತಾನೆ. ಹೀಗೆ ಇವರ ಮನೇಲಿ ಕೆಲಸ ಮಾಡುವ ಸಂಬಳದಾರರ ಜೊತೇಲಿ ಒಂದು ಕರಾರು ಮಾಡಿಸ್ಕೊಂಡಿರ್ತಾರೆ. ಆ ಒಪ್ಪಂದದ ಪ್ರಕಾರ ನೀನು ಒಂದು ವರ್ಷ ಸರಿಯಾಗಿ ತಪ್ಪದೆ ಕೆಲಸಮಾಡಿದ್ರೆ ನಿಂಗೆ ದುಡ್ಡು ಇಲ್ಲದೇ ಇದ್ರೆ ನಿನ್ನ ಮೂಗುಕೂದು ಕೊಡಬೇಕು, ಅಂತ ಒಪ್ಪಂದ ಮಾಡಿಸ್ಕಂದು ಇರ್ತಾರೆ. ಸಂಬಳಕ್ಕೆ ಬರೂರೆಲ್ಲ ಒಂದು ವರ್ಷ ಸರಿಯಾಗಿ ಕೆಲಸಮಾಡದೆ ನಡಂತ್ರದೆಲಿ ಹೋದ್ರೆ ತಮ್ಮ ಮೂಗ ಕೂದು ಕೊಟ್ಟುಬಿಟ್ಟು ಹೋಗಬೇಕು ಅಂತ ಒಪ್ಪಂದ ಮಾಡಿಕ್ಕೊಂಡಿರ್ತಾರೆ. ಸಂಬಳಕ್ಕೆ ಸೇರ್ಕೋರೆಲ್ಲ ನಡೆಂತ್ರದಲಿ ಕೆಲಸಮಾಡುಕಾಗದೆ ತಮ್ಮ ತಮ್ಮ ಮೂಗ ಕುಯ್ಕೊಟ್ಟುಬುಟ್ಟು ಹೊಯ್ತಾಇರ್ತಾರೆ. ಆಗ ದೇವರಿಗೆ ಇವರನ್ನು ನೋಡಿ ಕರುಣೆ ಬತ್ತದೆ. ಈ ಬ್ರಾಹ್ಮಣ ಇವರಿಗೆ ಇಷ್ಟೊಂದು ಕಷ್ಟಕೊಟ್ಟು ಅವರು ಕೆಲಸಮಾಡ್ದೆ ಇರುಂಗೆ ಮಾಡಿ ಬಡವರ ಮೂಗೆಲ್ಲ ಕೂದಾಕ್ತಾವನಲ್ಲ ಅಂದ್ಬುಟ್ಟು, ಇವನಿಗೆ ಸರಿಯಾಗಿ ಬುದ್ದಿಕಲಿಸ್ಬೇಕು ಅಂತ ಹೇಳಿ ದೇವ್ರು ಸಂಬಳಗಾರನ ವೇಷದಲ್ಲಿ ಬ್ರಾಹ್ಮಣ ಮನೆಗೆ ಸಂಬಳ ಸೇರ್ಕೋಕೆ ಬತ್ತದೆ. ಸ್ವಾಮಿ ನಾನು ಹಿಂಗೆ ತುಂಬಾ ಬಡುರು ನಿಮ್ಮನೆಗೆ ಸಂಬಳ ಸೇರ್ಕತಿನಿ ಒಂದೂತ್ತ ಊಟ ಆಕ್ರಿ ಅಂತಾನೆ. ಆಗ ಬ್ರಾಹ್ಮಣ ಅಗ್ರಿಮೆಂಟು ಬರ್ಕೊಡು ಅಂತಾನೆ. ಏನಂತಸ್ವಾಮಿ ಅಂತ ಕೇಳ್ತಾನೆ. ಹಿಂಗಿಂಗೆ ನಮ್ಮನೇಲಿ ದಿನಾಲು ಕುದ್ರೆಗೆ ಹೊಟ್ಟೆತುಂಬ ಮೇಸುಬೇಕು. ಕೀರೆ ಎಲೆ ಮೇಲೆ ನೀರುನಿತ್ಕವಂಗೆ ನೀರುಯ್ಯಬೇಕು. ಒಂಬತ್ತು ಕಟ್ಟಿನ ಒಂದೊರೆ ಸೌದೆ ತರ್ಬೇಕು ಅಂತ ಹೇಳ್ತಾನೆ. ಆ ಮೇಲೆ ಒಂದೆಲೆ ತುಂಬ ಊಟ ಕೊಡ್ತೀನಿ ಅಂತ ಹೇಳ್ತಾನೆ. ಆಯ್ತು ಸ್ವಾಮಿ ಅಂತಾನೆ ಬಡವ. ಆಮೇಲೆ ಒಂದೊರ್ಷದಲಿ ಮಧ್ಯ ಕೆಲ್ಸ ಬುಟ್ಬುಟ್ರೆ ನಿನ್ನ ಮೂಗು ಕೂದುಕೊಡ್ಬೇಕು ಅಂತ ಹೇಳ್ತಾನೆ. ಆಯ್ತು ಸ್ವಾಮಿ ಅಂತ ಒಪ್ಪಂದ ಮಾಡ್ಕಂಡು ಕೆಲಸಮಾಡ್ತಾ ಇರ್ತಾನೆ.

ಬಡವನ ಹೆಸರು ನಾರಾಯಣ ಅಂತ. ಈ ನಾರಾಯಣ ಕೆಲಸಕ್ಕೆ ಸೇರಿದ ಮೇಲೆ ಅಮ್ಮನೋರೆ ಅಮ್ಮನೋರೆ ಒಂದು ಬಿಂದಿಗೆ ಕೊಡಿ ನೀರಾಕ್ಬೇಕು ಕೀರೆಮಡಿಗೆ ಅಂತಾನೆ. ಒಂದು ಬಿಂದಿಗೆ ಕೊಟ್ಟು ಕಳಿಸ್ತಾಳೆ. ನಾರಾಯಣ ಒಂದು ಬಿಂದಿಗೆ ನೀರು ತಕಂದೋಗಿ ಕೀರೆಮಡಿಲಿ ಕೀರೆ ಎಲೆಮೇಲೆಲ್ಲ ಚುಮುಕಿಸ್ಬುಟ್ಟು ಬತ್ತನೆ. ಆಗ ಅಮ್ನೋರು ಇದೇನೋ ನಾರಾಯಣ ಒಂದೇ ಒಂದು ಬಿಂದಿಗೇಲಿ ಚುಮ್ಕಿಸುಬುಟ್ಟು ಬತ್ತಿದಿಯಲ್ಲ ಅಂತಾಳೆ. ನಾರಾಯಣ ನೀವೇ ಹೇಳುದ್ರಲ್ಲ ಅಮ್ನೋರು ಕೀರೆ ಎಲೆಮೇಲೆ ನೀರು ನಿಂತ್ಕಬೇಕು ಅಂತ ಹಾಕಿವ್ನಿ ನೋಡಿ ಕೀರೆ ಎಲೆಮೇಲೆಲ್ಲ ನೀರು ನಿಂತದೆ ಅಂತಾನೆ. ಅವಳು ಹೋಗ್ನಿ

ಅಂತ ಸುಮ್ನೆ ಆಯ್ತಾಳೆ. ಕಾಡ್ಗೋಗಿ ಸೌದೆ ತಕ್ಕಬಾ ಅಂತಾರೆ ಇವನು ಸರಿ ಅನ್ಬುಟ್ಟು ಕಾಡ್ಗೋಗಿ ಎರಡು ದೊಡ್ಡ ಜೊಳ್ಳೆ ಕಡ್ಕಂಡು ಅವ್ಕೆ ಒಂಬತ್ತು ಕಟ್ಟು ಹಾಕ್ಬುಟ್ಟು ಎತ್ಕ ಬಂದು ಮನೆಗೆ ಆಕ್ತಾನೆ. ಸೌದೆ ತಂದೇನೋ ನಾರಾಯಣ ಅಂತಾರೆ ಊ ತಂದೆ ಅಂತಾನೆ. ನೋಡ್ತಾರೆ ನೋಡುದ್ರೆ ಎರಡೇ ಎರಡು ಜೊಳ್ಳೆ ತಂದಿರ್‍ತಾನೆ. ಇದೇನೋ ನಾರಾಯಣ ಒಂಬತ್ತು ಕಟ್ಟಿನ ಹೊರೆ ಸೌದೆ ತಕಬಾ ಅಂದ್ರೆ ಇಂಗೆ ತಂದಿದ್ದೀಯಲ್ಲ ಅಂತ ಕೇಳ್ತಾರೆ. ಅದ್ಕೆ ಇವನು ನೋಡಿ ನೀವೇಳ್ದುತ್ತು ಒಂಬತ್ತು ಕಟ್ಟಿನ ಒಂದು ಒರೆ ನೋಡಿ ಒಂಬತ್ತು ಕಟ್ಟು ಅಂತ ತೋರಿಸ್ತಾನೆ. ಹೋಗ್ಲಿ ಅಂತ ಸುಮ್ಮನೆ ಆಯ್ತಾರೆ. ಸರಿ ಸರಿ ಕುದ್ರೇನ ಚೆನ್ನಾಗಿ ಹೊಟ್ಟೆ ತುಂಬ ಮೇಸ್ಕ ಬಾ ಅಂತಾರೆ. ಸರಿ ಅಂದ್ಬುಟ್ಟು ಕುದ್ರೇನ ಸರಿಯಾಗಿ ಮೇಸ್ದೆನೆ ಬಡುಕ್ಲು ಮಾಡಾಕ್‌ಬುತ್ತಾನೆ. ಇಂಗೆ ಮಾಡ್ತಾಇರ್‍ತಾನೆ ಬ್ರಾಹ್ಮಣರಿಗೆ ಕೋಪಬಂದು ಮಡುಕ್ತದೆ. ಇವನ ಕರ್‍ದುಬುಟ್ಟು ಬಾರೋ ನಾರಾಯಣ ಊಟ ಮಾಡ್ಕೊವೆ ಎಲೆಕಿತ್ಕಬರೋಗೊ ಅಂತಾರೆ. ಅವನು ಒಂದು ದೊಡ್ಡ ಬಾಳೆ ಎಲೆ ಕಿತ್ಕಬತ್ತಾನೆ, ಕಿತ್ಕಬಂದು ಊಟಕ್ಕೆ ಕುತ್ಕತಾನೆ ಮೊದ್ಲೆ ಒಪ್ಪಂದ ಆಗಿತ್ತಲ್ಲ ಎಲೆತುಂಬ ಊಟ ಅಂತ ಆಗವರು ಮನೆಯವರಿಗೆಲ್ಲ ಮಾಡಿದ್ದ ಅಡಿಗೆ ಎಲ್ಲ ಇವನಿಗೆ ಹಾಕ್ತಾರೆ. ಇವನು ಚೆನ್ನಾಗಿ ತಿನ್ನುವಷ್ಟು ತಿಂದು ನಾಯಿಗೆಲ್ಲ ಹಾಕ್ತಾನೆ. ಇದನ್ನು ನೋಡಿ ಬ್ರಾಹ್ಮಣನಿಗೆ ಕ್ವಾಪಬಂದು ಇವನ ಕೆಲಸದಿಂದ ತಗುದುಬುಡ್ವ ಅಂದ್ರೆ ಇನ್ನ ಒಂದು ವರ್ಷ ಆಗ್ಲಿಲ್ಲ ಆಮೇಲೆ ನಮ್ಮ ಮೂಗು ಕುಯ್ಕೊಡಬೇಕಾಯ್ತದಲ್ಲ ಅಂತ ಸುಮ್ಮನೆ ಇರ್‍ತಾರೆ. ಅಮ್ಮನೋರು ನಾರಾಯಣನ ಕರೆದ್ಬುಟ್ಟು ನಾರಾಯಣ ಸಂತೆಗೆ ಹೋಗಿ ವಸಿ ತರಕಾರಿ ತಕಬರೋಗೋ ಅಂತ ಕಳಿಸ್ತಾರೆ. ಅವನು ತಂದು ಕೊಡ್ತಾನೆ. ಎಲ್ಲ ಅಡುಗೆ ಮಾಡಿ ಚೆನ್ನಾಗಿ ತಿಂದುಬುಟ್ಟು ಅವರು ಮನೆವರೆಲ್ಲ ಕೂತ್ಕಂದು ಮಾತಾಡ್ತಾ ಇರ್‍ತಾರೆ. ಅಮ್ನೋರು ನಮ್ಮ ನಾರಾಯಣ ಕೆಲಸಮಾಡ್ಡೆಹೋದ್ರು ತರಕಾರಿ ಮಾತ್ರ ಚೆನ್ನಾಗಿ ತಂದಿದ್ದ ಎಲ್ಲಾ ಚೆನ್ನಾಗಿತಿಂದೊ ಬಲೇ ಚೆನ್ನಾಗಿತ್ತು ಅಂತ ಪಕ್ಕದ ಮನೆಯವರ ಜೊತೆ ಮಾತಾಡ್ತಾಇರ್‍ತಾರೆ. ಅದನ್ನು ಕೇಳಿಸ್ಕಂದ ನಾರಾಯಣ ಮದ್ಯಹೋಗ್ಬುಟ್ಟು, ಅದನ್ನ ಏನಂತ ತಿಳಿದಿದ್ದೀರಿ ಕೆರೆಲಿ ಬೆಸ್ತ್ರು ಇಡಿತಾರಲ್ಲ ಸೀಗಡಿ ಮೀನು ಅಂತ ಅಂತನೆ. ಅದು ಎಲ್ಲಾರ್‍ಗು ಗೊತ್ತಾಗಿ ನೀವು ನಮ್ಮ ಬ್ರಾಹ್ಮಣಕುಲ್ಕೆ ಅವಮಾನ ಮಾಡಿದೀರಿ. ಮೀನು ಸೀಗಡಿ ತಿಂದಿದ್ದೀರಿ ಅದನ್ನು ಸರಿಮಾಡೋಕೆ ಹೋಮ ಅವನ ಮಾಡಿ ಊರಿಗೆಲ್ಲ ಊಟಕೊಡಬೇಕು ಅಂತೇಳಿ ಅದಕ್ಕೊಂದು ಹತ್ತು ಹದಿನೈದು ಸಾವಿರ ರೂಪಾಯಿನ ಖರ್ಚು ಮಾಡಿಸ್ತಾನೆ ನಾರಾಯಣ. ಯಜಮಾನ ಏನುಮಾಡೂದು ಇವನಿಗೆ ನಮ್ಮ ಮಾನ ಮರ್‍ಯಾದೆ ಕಳೀತನಲ್ಲ ಅನ್ಬುಟ್ಟು ನೋಡೋ ನಾರಾಯಣ ನೀನು ಕೆಲ್ಸ ಮಾಡದೇ ಇದ್ರೂ ಪರವಾಗಿಲ್ಲ ನೀನು ಎಲೆಮರೆಕಾಯಿ ಅಂಗೆ ಇದ್ದುಬುಡು ಅಂತಾನೆ. ಅದಕ್ಕೆ ಇವನು ಹಿತ್ತ್ಲೇಲಿ ಕುಂಬಳುದ ಎಲೆಮರೆಯಾಗಿ ಕುತ್ಕಬುಡ್ತಾನೆ. ಏನುಮಾಡೂದು ಇವನಿಗೆ ಕೀರೆಮಡಿ ಗೆಡ್ಡೆಅತ್ತಿಸುಬುಟ್ಟು, ಕುದುರೆಗೆ ಮೇವಿಲ್ಲದೆ ಸಾಯಿಸ್ಬುಟ್ಟ ಇವನು ಸ್ವಲ್ಪದಿನವಾರು ನನ್ನ ಮಗಳ ಮನೇಲಿ ಒಂದು ಆರು ತಿಂಗಳಿರಲಿ ಅಂದುಬುಟ್ಟು ಕರಕೊಂಡು ಹೋಯ್ತಾ ಇರ್‍ತಾನೆ ಮಧ್ಯ ಒಂದು ಕೆರೆ ಸಿಕ್ತಂತೆ ಅಲ್ಲಿ ಸ್ನಾನಮಾಡುಕೆ ಕುತ್ಕತರೆ. ಸ್ನಾನ ಮಾಡಬೇಕಾದ್ರೆ ಬಟ್ಟೆಯೆಲ್ಲ ಒಗದು ಒಣಾಕ್ಬುಟ್ಟು ಸ್ನಾನಮಾಡ್ತಾ ಇರ್‍ತಾರೆ. ಬ್ರಾಹ್ಮಣ ಸ್ನಾನ ಮಾಡಾದ್ಮೇಲೆ ಹರಿನಾರಾಯಣ ಹರಿನಾರಾಯಣ ಅಂತ ಜಪಮಾಡ್ತಾ ಇರ್‍ತಾನೆ. ಏರಿಮ್ಯಾಲೆ ಕುತ್ಕಂದು ನಾರಾಯಣ ಒಣಾಕಿದ್ದ ಬಟ್ಟೆನೆಲ್ಲ ಹರಿದುಹರಿದು ಚೂರು ಚೂರು ಮಾಡ್ತುಡ್ತನೆ.

ಬ್ರಾಹ್ಮಣ ಸ್ನಾನ ಎಲ್ಲ ಮಾಡಾದಮೇಲೆ ನಾರಾಯಣ ಬಟ್ಟೆತಕ್ಕಬಾರೋ ಅಂತಾನೆ. ಅದಕ್ಕೆ ನಾರಾಯಣ ಏನ್‌ಸ್ವಾಮಿ ತಮಾಸೆ ಮಾಡ್ತಾ ಇದೀರ ಇವಾಗ್ತಾನೆ ಹರಿನಾರಾಯಣ ಹರಿನಾರಾಯಣ ಅಂದ್ರಿ ನಾನು ಎಲ್ಲ ಹರಿದು ಮಡಿಗಿನ್ನಿ ಇವಾಗ ಬಟ್ಟೆ ತಗೊಂಡ್ ಬಾ ಅಂದ್ರೆ ಎಲ್ಲಿಂದ ತರಾನೆ ಅಂತಾನೆ. ಅಯ್ಯೋ ಏನಪ್ಪ ಮಾಡೂದು ಅಂದ್ಬುಟ್ಟು. ನಾರಾಯಣ ನನ್ನ ಮಗಳ ಮನೆ ಇಲ್ಲೇ ಪಕ್ಕದಲ್ಲೇ ಅದೆ ಹೋಗಿ ಬಟ್ಟೆ ಈಸ್ಕಂದು ಬಂದ್ಬುಡಪ್ಪ ಅಂತಾನೆ. ಆಯ್ತು ಅಂದ್ಬುಟ್ಟು ಬಟ್ಟೆ ಈಸ್ಕಂದು ಬರುವಾಗ ಅಯ್ಯೋ ನಿಮ್ಮಪ್ಪರಿಗೆ ಏನೋ ಸಾನೆ ದಣುವಾಗಿದ್ದದಂತೆ ಅದ್ಕೆ ಒಂದು ಬಿಂದಿಗೆಗೆ ಒಂದು ಬಿಲ್ಲೆ ಹುಣಸೆಅಣ್ಣಾಕಿ ಒಂದಚ್ಚು ಬೆಲ್ಲ ಹಾಕಿ ಪಾನ್ಕ ಮಾಡಬೇಕಂತೆ ಅಂತ ಹೇಳ್ಬುಟ್ಟು ಬತ್ತಾನೆ. ಇವರು ಹೋಗುವತ್ಗೆ ಸಂದೆ ಆಗೋಯ್ತದೆ ಮಗಳು ಒಂದು ತಾಮ್ರದ ಬಿಂದಿಗೆಗೆ ಹುಣಿಸೆಹಣ್ಣಿನ ಪಾನಕ ಕಲಸಿ ಮಡುಗಿರ್ತಾಳೆ ಅದ್ರೆಲಿದ್ದ ಕಿಲುಬೆಲ್ಲ ಬುಟ್ಬುಟ್ಟಿರ್ತದೆ. ಹೋಗೊತ್ತಿಗೆ ಸಂದೆ ಆಗಿತ್ತು ಕೊಟ್ಟ ತಕ್ಷಣ ಎಲ್ಲ ಕುಡ್ದುಬುಡ್ತನೆ ಪಾನ್ಕನ. ರಾತ್ರಿ ಆಯ್ತದೆ ಅವರಪ್ಪನಿಗೆ ಒಂದುರೂಂ ಕೊಡ್ತಾರೆ. ಅವರೊಂದು ರೂಮಲಿ ಮನಿಕತರೆ ನಾರಾಯಣನ ಜಗಲಿ ಮೇಲೆ ಮಲಗಿಸ್ತಾರೆ. ನಾರಾಯಣ ಈ ಕಡೆಯಿಂದ ಬೀಗ ಆಕಬುಡ್ತಾನೆ. ಬ್ರಾಹ್ಮಣನಿಗೆ ರಾತ್ರಿಯೆಲ್ಲ ಹೊಟ್ಟೆ ಗೊಡಗೊಡ ಅಂದು ನಾರಾಯಣನ ಕರೀತಾನೆ ಬಾಗುಲು ತೆಗೆಯೋ ಅಂತಾನೆ. ನಾರಾಯಣ ಏನು ನಾನು ಕೆಲಸಮಾಡಬೇಕಾಗಿರುವುದು ವತ್ತಾರೇಲಿ ರಾತ್ರೋತ್ತಲ್ಲ ಅಂತಾನೆ. ಏನು ಇಲ್ಲ ಕಣಪ್ಪ ನಾನು ಅತಾಗೋಗಬೇಕು ಅಂತಾನೆ ನಾನೇನು ಮಾಡಾನೆ ನಿಮ್ಮ ಮಗಳು ಅಳಿಯ ಬೀಗ ಹಾಕಂದು ಹೋಗವರೆ ಅಂತಾನೆ. ನನಗೆ ತುಂಬ ಅರ್ಜೆಂಟ ಅಂತಾನೆ ನಾನೇನು ಮಾಡಾನೆ ಅಲ್ಲೆ ಒಳಗೆ ಬಿಂದಿಗೆ ಅವೆ ಅದಕ್ಕೆ ಹೋಗ್ರಿ ನಾನು ಬೆಳಿಗ್ಗೆ ತಕೊಂಡು ಹೋಗಿ ಸರುದುಬುಡ್ತಿನಿ ಅಂತಾನೆ. ಅವನು ಅಂಗೆನೆ ಎರಡೂ ಬಿಂದಿಗೆಗೆ ಹೋಗ್ಬುಟ್ಟು ತುಂಬಿಸ್ಬುಟ್ಟಿರ್ತಾನೆ. ಕೋಳಿಕೂಗ್ತು ನಾರಾಯಣ ಬರ್ಲಿಲ್ಲ ಇನ್ನೇನು ಬೆಳಗಾಯ್ತದೆ ನಾರಾಯಣ ನಾರಾಯಣ ಅಂತ ಕೂಗ್ತನೆ. ಏನುಸ್ವಾಮಿ ಅಂತಾನೆ. ಅಲ್ಲಕಣೋ ಇದ ವತರಾಕೆ ಒತ್ಕೊ ಹೋಯ್ತಿನಿ ಅಂದಲ್ಲ... ಏನ್ನ..? ನಾನೇಕೆ ಹೊತ್ಕೊಹೋಗಾನೆ ನಾನೇನು ಅಗ್ರಿಮೆಂಟ್ ಬರ್ಕೊಟ್ಟಿದ್ದನೆ ಹೊತ್ಕೊ ಹೊಯ್ತಿನಿ ಅಂತ ಬೇಕಾದ್ರೆ ನೀವೆ ಹೊತ್ಕೊಹೋಗ್ರಿ ಅಂತಾನೆ. ಆಯ್ತು ಬಾಕ್ಲು ತೆಗಿಯಪ್ಪ ನಾನೆ ಹೊತ್ಕೊವೋಯ್ತೀನಿ ಅಂತಾನೆ. ಸರಿ ಅನ್ಬುಟ್ಟು ಬಾಕ್ಲು ತೆಗಿತಾನೆ. ಮಗಳ ಮನೆಯಲ್ಲೆ ಅಳಿಯ ಬೀಗುರು ಎಲ್ಲ ಇರ್ತಾರೆ. ಮಾನ ಹೋಯ್ತದೆ ಅಂದ್ಬುಟ್ಟು ಒಂದು ಪಂಚೆನ ತಲೆಮೇಲೆ ಮುಚ್ಕೊಂಡು ಎರಡು ಕಂಕಳಿಗೂ ಒಂದೊಂದು ಬಿಂದಿಗೆನ ಇರಿಕಂದು ಹೊಯ್ತಾಇರ್ತಾನೆ ಪಂಚೆ ಹೊದ್ಕಂದು. ನಾರಾಯಣ ಮಗಳು ಮತ್ತು ಅಳಿಯನ್ನ ಕರೆದ್ಬುಟ್ಟು ಅಯ್ಯೊಯ್ಯೋ ನಿಮ್ಮಪ್ಪರು ಅಲ್ಲಿಮುನಿಸ್ಕಂಡು ಹೋಯ್ತಾವ್ರೆ ನೀವಿನ್ನು ಮನಿಗಿದ್ದೀರಾ ಅಂತಾನೆ. ಮಗಳು ಅಳಿಯ ಇಬ್ಬರು ಹೋಗಿ ಇಬ್ಬರು ಒಂದೊಂದು ಕೈಹಿಡಿದು ಎಳಿತಾರೆ ಎರಡು ಬಿಂದಿಗೆನೂವೆ ದಬಾರ್ನೆಬಿದ್ದು ಒಡೆದೋಗಿ ಏನು ಗಬ್ಬುನಾಥ ಹೊಡಿತದೆ. ಮಾವನಮಾನ ಎಲ್ಲ ಅಳಿಯ ಮಗಳು ಮುಂದೆ ಹೋಯ್ತದೆ.

ಬ್ರಾಹ್ಮಣ ಹಿಂದೆ ನಡೆದ ವಿಷಯ ಎಲ್ಲ ಅಳಿಯ ಮಗಳ ಹತ್ರ ಹೇಳ್ತಾನೆ. ಇಂಗಿಂಗೆ ಇವನು ಕೆಲ್ಸಕೆ ಬಂದಾ ತಾಪಿಂದ ನಮ್ಮನೇಲಿ ಆಗಬಾರದು ಆಗ್ತಾದೆ. ಇವನು ಬಂದು ಕುದುರೆಗೆ ಹುಲ್ಲು ನೀರಿಲ್ದೆ ಸಾಯಿಸ್ಬುಟ್ಟ. ಕೀರೆಮಡಿ ಗೆಡ್ಡೆ ಹತ್ತಿಸ್ಬುಟ್ಟ. ಸೌದೆ ತಕಬಾ ಅಂದ್ರೆ ಎರಡು ಕಡ್ಡಿ ತತ್ತಾನೆ. ಹುಲ್ಲು ತಕಬಾ

ಅಂದ್ರೆ ಒಂದಿಡಿ ತತ್ತಾನೆ. ಸಂತೆಗೆ ಹೋಗಿ ತರಕಾರಿ ತಕ್ಕಬಾ ಅಂದ್ರೆ ಸೀಗಿಡಿ ಕರಿಮೀನು ತಂದು ನಮಗೆಲ್ಲ ತಿನ್ನಿಸಿಬುಟ್ಟ ಊರೋರ್ ಮುಂದೆಯಲ್ಲ ಮಾನಕಳ್ದ. ಅದಕ್ಕೆ ಇಲ್ಲಾದ್ರು ವಸಿ ದಿನ ಇರುಸುವ ಅಂದ್ರೆ ಇಲ್ಲಿ ಇಂಗಾಯ್ತು ಅಂತ ನೊಂದು ನಡೆದ ಎಲ್ಲಾ ಘಟನೆಯನ್ನು ಹೇಳ್ತಾನೆ. ನೀವೇನು ಎದ್ರುಬೇಡಿ ಮಾವ ಇವನಿಗೆ ಒಂದು ಗತಿ ಕಾಣಿಸ್ತೀವಿ ಅಂತ ಅನ್ಬುಟ್ಟು ನೋಡಪ್ಪ ನಾರಾಯಣ ಇವತ್ತು ನೀನು ಕೊಟಗೇಲಿ ಎಮ್ಮೆಕರ ಅದಲ್ಲ ಅಲ್ಲೆ ಮಲಿಕಬುಡು ಇವತ್ರಾತ್ರಿಗೆ ಅಂತ ಹೇಳ್ತಾನೆ. ಸರಿ ಆಯ್ತು ಯಜಮಾನ್ರೆ ಅನ್ಬುಟ್ಟು ಹೋಗಿ ಮಲಿಕತನೆ. ಇವನು ದೇವರಾಗಿದ್ದುದರಿಂದ ಎಲ್ಲ ಗೊತ್ತಾಯ್ತು. ಇವನು ಎಮ್ಮೆಕರ ಮಲಗಾದ್ಮೇಲೆ ಎಮ್ಮೆಕರಿಗೆ ಪಂಚೆನ ಹೊದ್ದಿಸ್ಬುಟ್ಟು ಹೊಂಟೋಗಿರ್ತಾನೆ. ಮಧ್ಯರಾತ್ರೇಲಿ ಅಳಿಯ ಬಂದು ಪಂಚೆ ಹೊದ್ದು ಮಲಗಿದ್ದ ಎಮ್ಮೆಕರನ ಇವನೆ ನಾರಾಯಣ ಅಂತ ತಿಳ್ಕಂದು ಎಮ್ಮೆ ಕತ್ತು ಚೊರ ಚೊರ ಅಂತ ಕೂಯ್ತಾ ಇರತಾನೆ, ನಾರಾಯಣ ಬ್ರಾಹ್ಮಣರ ಮನೇಲಿ ಎಮ್ಮೆ ಕೂಯ್ತಾವರೆ ಬನ್ನಿ ಬನ್ನಿ ಅಂತ ಎಲ್ರುನ್ನು ಕರದ್ಬುಡ್ತನೆ. ಎಲ್ಲಾರು ಬಂದು ಎಮ್ಮೆ ಕೂಯ್ತಾ ಇರುದ ದಿಟನೆ ಅಂತ ಬ್ರಾಹ್ಮಣಕುಲಕ್ಕೆ ಅವಮಾನ ಮಾಡಿದಿರಿ. ಬ್ರಾಹ್ಮಣರು ಎಮ್ಮೆ ಕೂದವರೆ ಅಂದ್ರೆ ಹುಡುಗಾಟದ ಮಾತೆ ಅಂತರೆ, ಅದ್ಕೆ ಅವನು ಹೋಮ ಹವನ ಮಾಡಿ ಮೊದ್ಲು ಕುಲಕೂಡಿಸಿ ಊರಿಗೆಲ್ಲ ಊಟಹಾಕುಸ್ತಾನೆ. ಸುಮಾರು ಐವತ್ತುಸಾವಿರ ಖರ್ಚಾಯ್ತದೆ. ಅವರ ಅಳಿಯ ಮಾವನಿಗೆ ನಿಮ್ಮಪಾದ ಇವನ ನಿಮ್ಮೂರಿಗೆ ಕರಕೊಂಡು ಹೊಟ್ಬೋಗಿ ಅಂತಾನೆ. ಮಾವ ನಾರಾಯಣನ್ನ ಊರಿಗೆ ಕರಕೊಂಡ್‌ಬತ್ತಾನೆ. ಮನೆಗೆ ಬಂದಮೇಲೆ ನಾರಾಯಣನಿಗೆ ನೋಡಪ್ಪ ನಾರಾಯಣ ನೀನು ಕೆಲಸ ಮಾಡದೇ ಇದ್ರು ಪರವಾಗಿಲ್ಲ. ನೀನು ಎಲೆಮರೆ ಕಾಯಿ ಅಂಗೆ ಇದ್ದುಬುಡಪ್ಪ ನಿಂಗೆ ಕೈಮುಗಿತಿನಿ ಅಂತಾನೆ. ಆಯ್ತು ಅನ್ಬುಟ್ಟು ನಾರಾಯಣ ಹಿತ್ಲೇಲಿರು ಕುಂಬಳಗಿಡದ ಎಲೆಮರೆಲಿ ಹೋಗಿ ಕುತ್ಕಂಡಿರ್ತಾನೆ. ಬ್ರಾಹ್ಮಣನ ಹೆಂಡ್ತಿ ಹಿತ್ಲು ಕಡೆಗೆ ಒಂದಕ್ಕೆ ಹೋಯ್ತಾಳೆ. ಆಗ ನಾರಾಯಣ ಅಯ್ಯೋ ನೀನು ಎಲೆಮರೆಕಾಯಂಗಿರು ಅನ್ಬುಟ್ಟು ನಾನು ಎಲೆಮರೆಲಿರುವಾಗ ನಿನ್ನ ಇಂಡ್ರು ಕಳಿಸಿದ್ಯ ಅಂತ ಜಗಳಕ್ಕೆ ಬಿದ್ಬುಡ್ತಾನೆ. ಎಲ್ಲರಿಗೂ ಹೇಳ್ಬುಟ್ಟು ಮಾನ ಎಲ್ಲ ಹೋಯ್ತದೆ. ಆಗ ಬ್ರಾಹ್ಮಣ ನಾನು ಮಾಡುತ್ತು ತಪ್ಪು ನಾನು ಜನಗಳನೆಲ್ಲ ಹೊಟ್ಟೆ ಉರಿಸ್ತಾ ಇದ್ದೆ ನೀನು ಬಂದು ನನಗೆ ಒಳ್ಳೆ ಪಾಠ ಕಲಿಸಿ ನನ್ನ ತಪ್ಪನ್ನ ನನಗೆ ಅರಿವು ಮಾಡಿಸಿದೆ. ಯಾರಪ್ಪನೀನು ಅಂತ ಕೇಳ್ತಾನೆ ಆಗ ನಾನು ದೇವ್ರು ನೀನು ಮಾಡ್ತಾ ಇದ್ದ ತಪ್ಪುಗಳನ್ನು ಜನಗಳಿಗೆ ಕೊಡ್ತಿದ್ದ ಕಷ್ಟಗಳನ್ನು ಸಂಬಳ ಇರಿಸ್ಕೊಂಡು ಅವರಿಗೆ ಕೊಡ್ತಿದ್ದ ಕಷ್ಟಗಳನ್ನು ನೋಡಿ ನಿನಗೆ ನಾನೊಂದು ಪಾಠ ಕಲಿಸಬೇಕು ಅಂತ ನಾನೆ ಬಂದೆ. ಇನ್ನು ಮುಂದೆ ಯಾರಿಗೂ ಇಂತ ಕಷ್ಟಗಳನ್ನು ಕೊಡಬ್ಯಾಡ ಎಂದು ಹೇಳ್ತಾನೆ. ಆಗ ಬ್ರಾಹ್ಮಣ ತನ್ನ ಮೂಗನ್ನು ಕುಯ್ದು ದೇವರಿಗೆ ಕೊಡ್ತಾನೆ. ಅದಕ್ಕೆ ಬ್ರಾಹ್ಮಣರಿಗೆಲ್ಲ ಮೂಗು ತುಂಡ ಕಪರುಮೂಗು ಅದೆ ಅಂತ ಹೇಳುತ್ತಾರೆ ಕತೆಗಾರರು.

ಅವರೆ ಹುಳುವಿನ ಕಥೆ

ಒಂದೂರೆಲಿ ಒಬ್ಬ ಅಜ್ಜಿ ಇದ್ಲಂತೆ. ಅಜ್ಜಿ ಮನೆಯಲ್ಲಿ ಒಂದು ಮಗು ಇತ್ತಂತೆ. ಆ ಅಜ್ಜಿ ಪಡಸಾಲೆಲಿ ಕೂತ್ಕಂಡು ಅವರೆಕಾಯಿ ಎಡಿತಾ ಇದ್ಲಂತೆ. ಅವರೆಕಾಯಿ ಎಡಿವಾಗ ಅವರೆಹುಳ ಒಂದು ಸಿಕ್ತಂತೆ ಅದನ್ನ ನೋಡಿದ ಆ ಮಗು ಅಜ್ಜಿ ಅಜ್ಜಿ ನನಗೆ ಆ ಅವರೆಹುಳು ಬೇಕು ಕಣಜ್ಜಿ ಅಂತ ಹಠ ಇಡಿತಂತೆ. ಅಜ್ಜಿ ಅವರೆ ಹುಳವನ್ನು ಹಿಡಿದು ಮಗೀಗೆ ಕೊಡ್ತಾಳೆ. ಮಗು ಅವರೆ ಹುಳುವಿನ ಜೊತೆಯಲ್ಲಿ ಆಟ ಆಡ್ತಾ ಇತ್ತು. ಹೀಗೆ ಆಟ ಆಡ್ತಾ ಆಡ್ತಾ ದಿನಗಳು ಕಳೆದಂಗೆ ಮಗು ದೊಡ್ಡದಾಯ್ತು. ಹಾಗೆ ಅವರೆ ಹುಳಾನು ಮಗುವಿನ ಜೊತೆಯಲ್ಲೇ ಆಡಿ ಬೆಳೆದು ಅದು ದೊಡ್ಡದಾಯ್ತು. ಮಗುವಿನ ಹತ್ತಿರನೇ ಸೇರಿಕೊಂಡು ಆ ಹುಳ ದೊಡ್ಡದಾಯಿತು. ಆ ಹುಡುಗ ಅವನು ತಿನ್ನುವ ಊಟವೆಲ್ಲಾನು ಆ ಹುಳಿಗೆ ಹಾಕಿ ಬೆಳೆಸಿದ. ಕೊನೆಗೆ ಆ ಹುಳ ಆ ಹುಡಗನನ್ನು ಎಲ್ಲೂ ಬಿಟ್ಟಿರಲಿಲ್ಲವಂತೆ. ಎಲ್ಲೇ ಹೋದ್ರು ಜೊತೆ ಜೊತೆಯಲ್ಲೇ ತಿರುಗುತ್ತಿತ್ತಂತೆ. ಹೊಲತಾಕೆ ಹೋದ್ರು ಜೊತೆಲಿ, ಕೆರೆತಕೆ ಹೋದ್ರು ಜೊತೇಲೇ ಹೊಯ್ತಿತ್ತಂತೆ. ಹಿಂಗೆ ಯಾವಾಗ್ಲೂ ಜೊತೇಲಿ ತಿರುಗುದ್ರೆ ನಾನೇನು ಮಾಡುದು ಅಂದ್ಬುಟ್ಟು ಇದನ್ನು ತಪ್ಪಿಸುಬುಟ್ಟು ನಾನು ಎಲ್ಲಾದ್ರು ಹೊರಟು ಹೋಗಬೇಕು ಅಂತ ಆ ಹುಳಿಗೆ ಬೇಕಾದಷ್ಟು ಊಟ ಎಲ್ಲವನ್ನು ಕೊಟ್ಬುಟ್ಟು ಮನೆಯಿಂದ ಆಚೆಗೆ ಆ ಹುಡುಗ ಹೊರಟೋಗ್ತಾನೆ. ಹಿಂಗೆ ಬಿದ್ದಿ ಕೆಡೆದು ಆ ಹುಡುಗ ತಪ್ಪಿಸಿಕೊಂಡು ಹೊಯ್ತಾ ಇದ್ನಂತೆ. ಈ ಹುಳ ಆ ಹುಡುಗನ ಹಿಂದೆ ಹಿಂದೇನೆ ಗೇಣಿಕ್ಕಂದು ಗೇಣಿಕ್ಕಂದು ಹಿಂಚರೆನೆ ಹೊಂಟೋಯ್ತಂತೆ. ಆ ಹುಡುಗ ಹೋಯ್ತ ಹೋಯ್ತ ದಾರಿಲಿ ಸಿಗೋ ಎಲ್ರುಗು ಹಿಂಗಿಂಗೆ ನನ್ನಿಂದೆ ಒಂದು ಹುಳ ನನ್ನ ಬಿಡದೆನೆ ಬತ್ತಾ ಅದೆ ಅದು ಕೇಳಿದ್ರೆ ಹೇಳಬೇಡಿ ಅಂತಹೇಳ್ತಿದ್ನಂತೆ. ಆದ್ರು ಆ ಹುಳ ಬುಡದೆ ಅವನಿಂದೇನೇ ಬತ್ತನೇ ಇತ್ತಂತೆ. ಹಿಂಗೆ ದಾರಿಲಿ ಹೋಗುವಾಗ ಆ ಹುಡುಗನಿಗೆ ಇಬ್ಬರು ದಾರಿಲಿ ಸತ್ತೆ ಸಿದಕಲು ಕಡಿದು ಬೆಂಕಿಹಾಕಿ ಬೇಸ್ತಾಯಿರುರು ಸಿಕ್ಕುದ್ರಂತೆ.

ಆ ಹುಡುಗ ಹೋಗೋದ್ನ ನೋಡಿ ಆ ಮುದುಕರು ಯಾಕಪ್ಪ ಮಗ ಹಿಂಗೆ ಓಡೋಯ್ತ ಇದ್ಯಲ್ಲ ಯಾಕೆ ಏನಾಯ್ತು ಅಂತ ಕೇಳಿದ್ರಂತೆ. ಆಗ ಆ ಹುಡುಗ ತಾತಾ ತಾತಾ ಹಿಂಗೆ ನಾನು ಚಿಕ್ಕವನಿದ್ದಾಗ ನಮ್ಮಜ್ಜಿ ಪಡಸಾಲೆಲಿ ಕುತ್ಕಂದು ಅವರೆಕಾಯಿ ಎಡೀತಾಇದ್ಲು, ಅವರೆಕಾಯಿ ಎಡೀವಾಗ ಒಂದು ಅವರೆಹುಳ ಸಿಕ್ತು ಅದನ್ನ ನಾನು ಈಸ್ಕಂದು ಆಟ ಆಡ್ತಾ ಆಡ್ತಾ ಬೆಳ್ಸಿ, ನನಗೆ ಕೊಟ್ಟ ಊಟನೆಲ್ಲ ಅದಕೂ ಕೊಟ್ಟು ತಿನಿಸ್ದೆ ಅದು ದೊಡ್ಡದಾಯ್ತು, ಈಗ ನಾನು ಎಲ್ಲೋದ್ರು ಜೊತೆಯಲ್ಲೇ ಬತ್ತದೆ ಕೆರೆತಕೆ ಹೊಲ್ತಾಕೆ, ಮನೆತನಕೆ ಎಲ್ಲಿಗೋದ್ರು ಜೊತೇಲಿ ಬತ್ತದೆ ಎಲ್ಲು ಬುಟ್ಕೊಡ್ತಾ ಇಲ್ಲ. ಜೊತೆ ಜೊತೆಲೆ ಬತ್ತಾದೆ ಅಂದ್ನಂತೆ. ಅದಕ್ಕೆ ಆ ಮುದುಕರು ಓಹೋ ಅಂಗಾರೆ ನೀನು ಇಲ್ಲಿಂದ ಒಂಟೋಗು ಆ ಹುಳ ಬಂದು ಏನಾದ್ರು ನಿನ್ನ ಕೇಳುದ್ರೆ ಈ ಬೆಂಕಿಲಿ ಬಿದ್ದು ಸತ್ತೋಗ್ಬುಟ್ಟ ಅಂತ ಹೇಳ್ತೀವಿ ಅಂತಾರೆ. ನೀನು

ಹೋಗು ಎಲ್ಲಾರ ಬದ್ಕೋಗು ಅಂತ ಕಳಿಸ್ತಾರೆ. ಹಿಂದೆ ಆ ಹುಳ ಗೇಣಿಕ್ಕಂದು ಗೇಣಿಕ್ಕಂದು ಮೀಟ್ಕಂದು ಮೀಟ್ಕಂದು ಬತ್ತಂತೆ. ಅಡ್ಡ ಬೆಂಕಿ ಉರಿತಾ ಇದ್ದುದನ್ನು ನೋಡಿ ಆ ಬೆಂಕಿ ಹಬೆಗೆ ಅಲ್ಲೆ ನಿತ್ಕತಂತೆ. ಅಲ್ಲಿದ್ದ ತಾತಂದಿರು ಈ ಹುಳನ ನೋಡ್ಬುಟ್ಟು ಯಾರು ಬೇಕಪ್ಪ ಅಂತ ಅಂದ್ರಂತೆ. ಆ ಹುಳ ನನಗೆ ನನ್ನ ಒಡೆಯನಾದ ಆ ಹುಡುಗ ಬೇಕು ಅಂದಾಗ ಅವರು ಆಹುಡುಗ ಈ ಬೆಂಕಿಲಿಬಿದ್ದು ಸತ್ತೋಗ್ಬುಟ್ಟ ಅಂದ್ರಂತೆ. ಆಗ ಈ ಹುಳಾನು ನಾನು ಬದುಕೋದಿಲ್ಲ ಅಂತ ಹೇಳಿ ಆ ಹುಳನು ಬೆಂಕಿಗೆ ಬಿದ್ದು ಸತ್ತೋಯ್ತಂತೆ. ಆ ಜಾಗದಲ್ಲಿ ಒಂದು ಸುಂದರವಾದ ಹೂವಿನ ಗಿಡವಾಗಿ ಬೆಳಿತಂತೆ. ದಾರಿಲಿ ಹೋಗೋ ಜನರೆಲ್ಲಈ ಹೂವಿನ ಗಿಡನೋಡಿ ಎಂತ ಹೂವಿನಗಿಡ ಇಷ್ಟೊಂದು ಚೆನ್ನಾಗಿ ಹೂವ ಬುಟ್ಟಾದಲ್ಲ ಅನ್ನುರಂತೆ. ಆಗ ಆ ತಾತ ಇಲ್ಲಿ ಇಂಗಿಂಗೆ ಒಂದು ಹುಳ ಬಂದು ಬೆಂಕಿಲಿ ಬಿದ್ದು ಸತ್ತೋಯ್ತು. ಆ ಜಾಗದಲ್ಲಿ ಈ ಹೂವಿನ ಗಿಡ ಆಗಿಹುಟ್ಟದೆ ಅಂತ ಹೇಳಿದ್ರಂತೆ. ಯಾರೊಬ್ಬರು ಆ ಹೂವುಗಳನ್ನು ಕಿತ್ಕೊಂಡು ಕಿತ್ಕೊಂಡು ಹೋಗುರಂತೆ.

ಕಾಡಕ್ಕಿ ಕಥೆ

ಒಂದೂರೆಲಿ ಒಂದು ಕಾಡಕ್ಕಿ ಹೊಯ್ತಾ ಇತ್ತಂತೆ ಹೊಯ್ತಾ ಹೊಯ್ತಾ ಒಂದು ಕಾಸು ಸಿಕ್ತಂತೆ. ಸಂತೆಗೆ ಹೋಗಿ ಒಂದು ಊಬತ್ತಿ ಉಂಡೆ ತಕ್ಕಂಡು ತಿಕ್ಕೆ ಮೊಕ್ಕೆ ಬಳ್ಕತ್ತಂತೆ. ಬಳ್ಕಂದು ಹಾರುಬುಟ್ಟು ಪಾದ್ರಿಮರದ ಮೇಲೆ ಕುತ್ಕಂತಂತೆ. ಶಿವ ಈ ಹಕ್ಕಿ ಕುತ್ತಿತ್ತ ನೋಡ್ಬುಟ್ಟು ಒಂದು ಜಾಗಟೆ ಬುಟ್ನಂತೆ. ಆ ಜಾಗಟೆತಕ್ಕಂಡು ಉತ್ತುಕ್ಕೆ ಕೈ ಹಾಕ್ತು. ನಾಗಪ್ಪ ನಾಲ್ಕು ಬೆರಳಿಗೂ ನಾಲ್ಕು ಉಂಗುರ ಹಾಕ್ತದೆ. ಆ ಉಂಗುರ ಹಾಕಂದು ಕೆರೆತಡಿಗೆ ಹೋಯ್ತು, ಕೆರೆ ತಡಿಗೆ ಹೊಯ್ತಲೆ ಗಂಗಮ್ಮ ಕುದುರೆ ಕೊಟ್ಟ ಕುದುರೆ ಇಡ್ಕಂಡು ಬತ್ತಾ ಇತ್ತು. ಈ ಹಕ್ಕಿ ಇಷ್ಟೊಂದು ಬಂಗಾರ ಸಂಪತ್ತು ಎಲ್ಲ ಆಕಂಡು ಇರುದನ್ನು ನೋಡ್ದ ಇನ್ನೊಂದು ಹಕ್ಕಿ ಓಹೋ ಭಾವ ಎಲ್ಲೋಗಿದ್ದಪ್ಪ ಇಂತ ಸಂಪತ್ತು ಬಂದದಲ್ಲ ನಿನಗೆ... ನನಗು ಹೇಳ್ಕೊಡು ಅಂತ ಕೇಳ್ತದೆ. ಈ ಕಾಡಕ್ಕಿ ನೋಡಪ್ಪ ನಾನು ದಾರಿಲಿ ಹೊಯ್ತಾ ಇದ್ದೆ ಒಂದು ಕಾಸು ಸಿಕ್ತು, ಆ ಕಾಸು ತಕ್ಕಂದು ಸಾತನೂರ್ ಸಂತೇಗೋದೆ. ಅಲ್ಲಿ ಒಂದು ಊಬತ್ತಿ ಉಂಡೆ ತಕ್ಕಂದು ತಿಕ್ಕೆಮೊಕ್ಕೆ ಬಳ್ಕಂದೆ ಬಳ್ಕಂದು ಒಂದು ಪಾದ್ರಿ ಮರದೆಲ್ಲಿ ಹೋಗಿ ಕುತ್ಕಂದಿ. ಆಗ ನಾರಾಯಣ ನನಗೆ ಒಂದು ಜಾಗಟೆ ಕೊಟ್ಟ' ಜಾಗಟೆ ತಕ್ಕಂದು ಬತ್ತಾ ಇದ್ದೆ. ಅಲ್ಲಿ ಒಂದು ಉತ್ತ ಸಿಕ್ತು, ಉತ್ತದ ಒಳಕೆ ಕೈಯಾಕ್ದೆ. ನಾಗಪ್ಪ ನಾಕು ಬೆಟ್ಟುಗು ನಾಕು ಉಂಗುರ ಕೊಟ್ಟ. ಆ ಉಂಗುರ ತಕ್ಕಂದು ಕೆರೆತಡಿಗೆ ಬಂದೆ. ಗಂಗಮ್ಮ ಒಂದು ಕುದುರೆ ಕೊಟ್ಟ ಕುದುರೆ ಇಡ್ಕಂದು ಬಂದೆ ಕಣಪ್ಪ ಅಂತದೆ. ಇದನ್ನ ಕೇಳ್ದ ಇನ್ನೊಂದು ಹಕ್ಕಿ ಅಂಗೆ ದಾರಿಲಿ ಹೊಯ್ತಾ ಇರ್ತದೆ. ಕಾಸು ಸಿಕ್ಲಿಲ್ಲ ಕಾಸು ಸಿಕ್ದೇನೆ ಏನ್ಮಾಡ್ತು ತಿಪ್ಪೆಮೇಲೆ ಬೂದಿ ಹೂದಿದ್ರಲ್ಲ ಆ ಬೂದಿನ ಎತ್ಕಂದು ತಿಕ್ಕೆ ಮೊಕ್ಕೆ ಬಳ್ಕತು. ಬಳ್ಕಂದು ಅಂಗೆ ಹೋಗಿ ಚುಜ್ಜಿಲಿ ಮರದ ಮೇಲೆ ಕೂತ್ಕತ್ತು. ಚುಜ್ಜಲಿ ಮರದೆಲಿ ಏನು ಸಿಕ್ಕಲಿಲ್ಲ ಆ ಮೇಲೆ ಹೋಗಿ ಒಂದು ಹುತ್ತ ಸಿಕ್ತು ಆ ಹುತ್ತಕ್ಕೆ ಕೈ ಆಕ್ತು. ಆಗ ನಾಗಪ್ಪ ನಾಲ್ಕು ಬೆಟ್ಟನ್ನು ಕಚ್ಕತ್ತು ನಾಕು ಬೆಟ್ಟ ಕಚ್ಕಂದ ಮೇಲೆ ಅಂಗೆ ಕೆರೆತಡಿಗೋಯ್ತು. ಕೆರೆತಡಿಗೆ ಹೊಯ್ತ್ಲೆ ಗಂಗಮ್ಮ ಕಾಲಿಡುದು ಎಳ್ಕಂದ.

ದೊರೆ ಕಥೆ

ಒಂದೂರೆಲಿ ಒಬ್ಬ ದೊರೆ. ಆ ದೊರೆಗೆ ಒಂದು ಗಂಡು ಒಂದು ಹೆಣ್ಣು ಮಕ್ಕಳಿದ್ರಂತೆ. ಇಬ್ರುಗು ಮದ್ವೆ ಮಾಡಿ ತಾಯಿ ತಂದೆ ಇಬ್ರು ಸತ್ತೋದ್ರು. ತಾಯಿ ತಂದೆ ಇಬ್ರು ಸತ್ತೋದ ಮೇಲೆ ತಂಗಿಯನ್ನು ಮದ್ವೆ ಮಾಡಿ ಕಳಿಸಿದ ಮೇಲೆ ತಂಗಿನ ಕರಕಂದು ಬರ್ಲಿಲ್ಲ. ಅಣ್ಣನ ಮನೆಗೆ ತಂಗೆನು ಬರ್ಲಿಲ್ಲ. ತಂಗಿ ಮನೆಗೆ ಅಣ್ಣನು ಹೋಗ್ಲಿಲ್ಲ. ಒಂದಿನ ಸಾತನೂರು ಸಂತೆಗೆ ತಂಗಿನು ಬಂದಿದ್ಲು ಅಣ್ಣನು ಹೋಗಿದ್ದ. ಹನ್ನೆರಡು ವರ್ಷದ ನಂತರ ಇಬ್ರು ಒಬ್ರುಗೊಬ್ರು ಸಿಕ್ಕವರೆ. ಈ ಇಬ್ರು ಅಳ್ತವರೆ, ಹನ್ನೆರಡು ವರ್ಷದಿಂದ ನನ್ನ ನೋಡುಕೆ ಬರ್ಲಿಲ್ಲ ಯಾಕಣ್ಣ ನೀನು ಅಂತ ತಂಗಿ ಗೊಳೋ ಅಂತ ಅಳ್ತಾವಳೆ. ಇವರು ಅಳ್ತಾ ಇರುದ್ನ ಜನ ಎಲ್ಲ ನೋಡ್ಬುಟ್ಟು ಅಯ್ಯೋ ಯಾಕೆ ಇಂಗೆ ಅಳ್ತಾ ಇದಿರಿ ಅಷ್ಟೊರ್ಷದಿಂದ ನೀವು ನೋಡುಕೆ ಹೋಗ್ಲಿಲ್ಲ ಅಂದ್ರೆ ಇವಾಗ ಮನೆಗೆ ಕರಕೊಂದು ಹೋಗಿ ವಸಿಜಿನ ಇರುಸ್ಕಂದು ಇದ್ದು ಆಮೇಲೆ ಕಳ್ಸು ಅಂತಾರೆ. ಸರಿ ಅಂತ ಇವನು ತಂಗಿನ ಕರಕಂದು ಮನೆಗೆ ಹೋಯ್ತಾವನೆ. ಸುಮಾರು ಊರತ್ರದ ಕೆರೆಮೇಲೆ ಬತ್ತಾಇದ್ರು ಇವರು ಬರುದು ನೋಡ್ದ ದನಮೇಸುವ ಹೈಕುಳಗಳು ನಿನಗಂಡ ನಿನ್ನ ನಾದ್ನಿ ಕರಕಂದು ಬತ್ತಾವನೆ ಅಂತ ಅವಳ ಹೆಂಡ್ತಿಗೆ ಹೋಗಿ ಹೇಳ್ತಾರೆ. ಇವರು ಬತ್ತಾ ಇದ್ದಂಗೆನೆ ನನಗೆ ತಲೆನೋವು ಅಂತ ಮಲಿಕತಳೆ ಅವನ ಗಂಡ ಬಂದು ಯಾಕೆ ಇಂಗೆ ಮಲಿಕದಿಂದಿಯೆ ಅಂತ ಕೇಳ್ತಾನೆ. ನಂಗೆ ತಲೆನೋವು ಬಂದ್ಬುಟದೆ ಅದು ಹೋಯ್ತಾನೇ ಇಲ್ಲ ಅಂತಾಳೆ. ತಲೆನೋವಾದ್ರೆ ಆಸ್ಪತ್ರೆಗೆ ಹೋಗುವ ನಡಿ ಅಂದ. ಇವುಳು ಇಲ್ಲ ಇಲ್ಲ ಇದು ಆಸ್ಪತ್ರೆಗೆ ಹೋಗೋ ತಲೆನೋವಲ್ಲ ನಿನ್ನ ತಂಗಿನ ತಲೆಕಡ್ದು ಆ ರಕ್ತನ ತಂದು ನನ್ನ ತಲೆಗೆ ಸಾವುರುದ್ರೆ ನನ್ನ ತಲೆನೋವು ವಾಸಿ ಆಯ್ತದೆ ಅಂತಾಳೆ. ಇನು ಏನು ಮಾಡುದು ಅಂತ ಯೋಚನೆ ಮಾಡಿ ಕೊನೆಗೆ ತನ್ನ ಹೆಂಡ್ತಿನ ಉಳಿಸ್ಕಬೇಕು ಅಂತ ಹೆಂಡ್ತಿ ಮಾತು ಕೇಳ್ತಾನೆ. ತಂಗಿಗೆ ತಾಯಿ ಮುಂಗೈತೋರದ ಮೂರು ಬುತ್ತಿ ಕಟ್ಟುವ್ವ ಅಂತಾನೆ. ಹೆಂಡ್ತಿ ಬೇರೆ ತಲೆನೋವು ಅದ್ಕಂದು ಮಲಗವಳೆ ತಂಗಿನೆ ಅಡಿಗೆ ಮಾಡಿ ಬುತ್ತಿ ಕಟ್ಟವಳೆ. ಸರಿ ಬುತ್ತಿ ಕಟ್ಕಂದು ತಾಯಿ ದೊಡ್ಡವ್ವರ ಊರಿಗೆ ಹೋಗಬರುವ ನಡಿ ಅಂತ ಕರಕಂದು ಹೋಯ್ತಾ ಹೋಯ್ತಾ ಕಾಡಾದಿಗೆ ಕರಕಂದು ಹೋಯ್ತಾವನೆ. ಇದ್ಯಾಕಣ್ಣ ಊರಾದಿ ಬುಡ್ಬುಟ್ಟು ಕಾಡಾದಿಗೆ ಹೋಯ್ತಾ ಇದಿಯಲ್ಲ ಅಂದ. ಇಲ್ಲೇಕಣಬಾರವ್ವ ತಂಗಿ ಹೋಗುದು ಅಂದ. ಚಂದ್ರಾಯ್ತು ಯಾಕಣ್ಣ ಅಂದ್ಲು ತಾಯಿ ಅಲ್ಲಿ ಹುಲಿ, ಕರಡಿ, ಆನೆ ಎಲ್ಲ ಇರ್ತಾವೆ ಅದಕೆ ಕಣ ಬಾ ತಾಯಿ ಅಂತ ಅಂದ. ಹೋದ್ರು ಹೋದ್ರು ಆನಂದ ಅಡವಿಗೆ ಹೋದ್ರು ಎರಡ್ಕಾಲು ಒಪ್ಪಳೆ ಬಂದೊ ಬೀಸಿದ ತೋಳು ಬೆರಗಾಯ್ತು. ಅಲ್ಲಿ ಕಾಡು ನಡುಕಾಡಿಗೆ ಹೋದ್ರು ಆನಂದ ಅಡಿವಿ ಚದರದ ಮದ್ಯದಲಿ ಒಂದು ನೀರು ತುಂಬಿರೊ ಕೊಣಸಿಕ್ತು. ತಾಯಿ ಇಲ್ಲಿ ಬುತ್ತಿ ಬಿಚ್ಚು ಊಟಮಾಡವ್ವ ನಾನು ಚಂದ್ರಾಯ್ತು ಮಸಿತಿನಿ ನೀನು ಊಟಮಾಡು ಇನ್ನ ಮುಂದೆ ಆನೆ, ಹುಲಿ, ಕರಡಿ ಎಲ್ಲ ಎದ್ರಾಯ್ತಾವೆ

ಅದಕ್ಕೆ ನಾನು ಚಂದ್ರಾಯ್ದನ ಮಸಿತಿನಿ ನೀನು ಊಟಮಾಡು ಅಂತಾನೆ. ಇವಳು ಹೋಗಿ ನೀರುಕೊಳದಲ್ಲಿ ಕೈತೊಳಕಂದು ಹಾಲುಕೊಳದಲಿ ಒಂದು ಬೊಗಸೆ ಹಾಲು ಕುಡುಕಂದು ಬಂದು ಬುತ್ತಿಬಿಚ್ಚಿ ಬಾಯಿಗೆ ಒಂತುತ್ತು ಹಾಕದ್ಲು ಅಣ್ಣ ಹಿಂದ್ಗಡೆಯಿಂದ ಒಂದು ಚಂದ್ರಾಯ್ದದಲಿ ಕಚಕ್‌ನೆ ಅವಳ ಕತ್ತ ಕತ್ತರಿಸಿಬುಟ್ಟ. ಚಂದ್ರಾಯ್ದದಲಿ ರಕ್ತನ ತಂದು ಅವನ ಹೆಂಡತಿ ತಲೆಗೆ ತಂದು ಸವುರ್‍ದ ಅವಳು ನನಗೆ ತಲೆ ನೋವು ಹೋಯ್ತು ಅಂತ ಎದ್ದೇಳ್ತಾಳೆ. ಆಗ ತಂಗಿ ಕಡ್ಡಿದ್ದ ಜಾಗದಲ್ಲಿ ಎಲ್ಲೆಲ್ಲಿ ರಕ್ತ ಹಾರಿತ್ತು ಕಾಲು ಕೈಗಳು ಎಲ್ಲೆಲ್ಲಿ ಬಿದ್ದಿತ್ತು ಅಲ್ಲೆಲ್ಲ ಹೂವಿನ ಗಿಡಗಳು ಹುಟ್ಟಿ ಗಿಡದ ತುಂಬ ಹೂವುಬುಟ್ಟು ಅರಳಬುಟ್ವೊ. ಮಾವನಮನೆಲಿ ಸೊಸೆಹೋಗಿ ಹದಿನೈದು ದಿನಗಳು ಆಗೋಯ್ತು ಅವರಣ್ಣ ಕರಕಂದೋದೋನು ಸಂತೆಗೆಹೋಯ್ತಿನಿ ಅಂತ ಹೋದೋಳು ಇನ್ನ ಕರಕಂದು ಬರ್‍ಲಿಲ್ಲವಲ್ಲ ಅಂತ ಅವಳ ಮೈದುನನ್ನ ಕಳಿಸ್ತಾರೆ. ಹೋಗಪ್ಪ ನಿಮ್ಮತ್ತಿಗೆ ಹೋಗಿ ಹದಿನೈದು ದಿನ ಆಯ್ತು ಹೋಗಿ ಕರಕಂದು ಬರೋಗಪ್ಪ ಅಂತ ಕಳಿಸ್ತಾರೆ. ಸರಿ ಅಂತ ಅವಳ ಮೈದ ಅದೇ ದಾರಿಲಿ ಬತ್ತಾ ಇದ್ದ ಹೂವ ಏನ್ಮಾಡ್ತು ಅಂದ್ರೆ ಮೈದುನ್ನ ನೋಡ್ಬುಟ್ಟು ಕಿಲಕಿಲನೆ ನಗಿದು ಮ್ಯಾಕಾರುದು, ಕೆಳಕೆಬೀಳುದು ನಗಿಯೋದು ಮಾಡ್ತಾದೆ. ಮೈದುನ ಏನು ಈ ಹೂವ ಇಂಗೆ ಮಾಡ್ತಾದಲ್ಲ ಇಷ್ಟೊಂದು ಚೆನ್ನಾಗದಲ್ಲ ನಮ್ಮ ಅತ್ತಿಗೆಗೆ ತಕ್ಕನಾದ ಹೂವ ಇದು. ಇದ್ನ ಕಿತ್ಕೊಂದೋಗಿ ನಮ್ಮತ್ತಿಗೆಗೆ ಮುಡಿಸಿ ಮುಂದೆ ಬುಟ್ಕಂದು ನಾನು ಹಿಂದೆ ಬರಬೇಕು ಅಂತ ಆ ಹೂವನ ಕಿತ್ಕೋಕೆ ಹೋಯ್ತಾನೆ. ಆ ಹೂವ ಅಂತದೆ 'ಮುಟ್ಟಬ್ಯಾಡ ಮುಟ್ಟಬ್ಯಾಡ ಮೈದಯ್ಯ ಮುಟ್ಟುದ್ರೆ ಬಾಡೋಯ್ತದೆ ಮೈದಯ್ಯ ಕೈಲೊಂತುತ್ತ ಬಾಯಲ್ಲಿ ಒಂತ್ತುತ್ತು ಕಚಕನೆ ಕಡ್ದ ನಮ್ಮಣ್ಣ ಅಂತದೆ. ಓ ಹೋ ಇದೇನು ಇಂಗಂತದಲ್ಲ ಈ ಹೂವ ಅನ್ಬುಟ್ಟು ಮನೆಗೋಗಿ ಕಳಿಸಯ್ಯ ಭಾವ ನಮ್ಮ ಅತ್ತಿಗೆನ ಅಂತಾನೆ. ಅಯ್ಯೋ ನಮ್ಮ ದೊಡ್ಡವ್ವರ ಊರಿಗೆ ಹೋಗಿ ಹತ್ತನ್ನೆರಡು ವರ್ಷ ಆಗಿತ್ತು. ಇನ್ನೊಂದು ವಾರಕ್ಕೆ ನಿಮ್ಮ ತಂಗಿ ಕಳಸೋಗಯ್ಯ ಕಳಸ್ಬುಡ್ತೀನಿ ಜೊತೆಲಿ ಅಂದ. ಅವನು ಒಂಟೊದ ಇನ್ನೊಂದು ವಾರ ಆಯ್ತು ಅವಳ ನಾದ್ನಿ ಬತ್ತಾ ಇದ್ಲು ಅದೇ ದಾರೀಲಿ ಬರುವಾಗ ಆ ಹೂವನ ನೋಡುದ್ಲು ಆ ಹೂವ ನಾದ್ನಿನ ನೋಡ್ಬುಟ್ಟು ಮ್ಯಾಕಾರುದು ಕೆಳಕೆ ಬೀಳುದು ನಗಿಯೂದ ಮಾಡ್ತದೆ ಓಹೋ ಏನು ಈ ಹೂವ ಇಷ್ಟೊಂದು ಚೆನ್ನಾಗದಲ್ಲ ಈ ಹೂವನ ನಮ್ಮ ಅತ್ತಿಗೆಗೆ ತಕೊಂದು ಮುಡಿಸ್ಕೊಂಡು ನಮ್ಮ ಅತ್ತಿಗೆನ ಮುಂದೆ ಬುಟ್ಕಂಡು ನಾನು ಹಿಂದೆ ಬರಬೇಕು ಅಂತ ಅದನ್ನ ಕಿತ್ಕೋಕೆ ಹೋಯ್ತಾಳೆ. ಆಗ ಆ ಹೂವ ಅಂತದೆ ಮುಟ್ಟಬ್ಯಾಡ ಮುಟ್ಟಬ್ಯಾಡ ನಾದನಮ್ಮ ಮುಟ್ಟುದ್ರೆ ಬಾಡೋಯ್ತದೆ ನಾದ್ನಮ್ಮ ಕೈಲೊಂದು ತುತ್ತು ಬಾಯಲ್ಲಿ ಒಂತುತ್ತು ಕಚುಕನ್ ಕಡ್ದ ನಮ್ಮಣ್ಣ ಅಂತದೆ ಓಹೋ ಏನು ಇಂಗಂತಲ್ಲ ಅಂತ ಕಿತ್ಕಳದೇನೆ ಬಂದುಬುಟ್ಲು. ಕಳುಸು ಮಾವ ನಮ್ಮ ಅತ್ತಿಗೆನ ಅಂತ ಅಂದ್ಲು. ಅವುಳು ನಮ್ಮ ದೊಡ್ಡವ್ವರ ಊರಿಗೋಗಿ ಹನ್ನೆರಡು ವರ್ಷ ಆಗಿತ್ತು. ಕರಕಂದು ಒಂಟೋಗವರೆ ಇನ್ನೊಂದು ವಾರ ಬುಟ್ಕಂಡು ನಿಮ್ಮಪ್ಪನ್ನ ಕಳ್ಸೋಗವ್ವ ಬಂದು ಕರಕಂದು ಹೋಗ್ಲಿ ಅಂದ. ಸರಿ ಅಂತ ಅವುಳು ಒಂಟೋದ್ಲು. ಇನ್ನು ಒಂದುವಾರ ಆಯ್ತು ಅವರ ಮಾವ ಅದೇ ದಾರಿಲಿ ಬತ್ತಾ ಇದ್ದ ಆಗ ಆ ಹೂವ ಜೇಕಾದಂಗೆ ಕಾಡೆಲ್ಲ ಹಬ್ಬುಬಿಟ್ಟಿತ್ತು. ಅವರ ಮಾವನ್ನ ನೋಡ್ಬುಟ್ಟ ಮ್ಯಾಕಾರುದು ಕೆಳಕೆಬೀಳುದು ನಗಿಯುದ ಇಂಗೆಲ್ಲ ಮಾಡ್ತಾ ಇರ್‍ತದೆ. ಮಾವ ನೋಡ್ತಾನೆ ನೋಡ್ಬುಟ್ಟು ಇಷ್ಟೊಂದು ಚೆನ್ನಾಗಿ ತರವಾಗಿ

ಅದಲ್ಲ ಅಂತ ಕಿತ್ಕೊಕೆ ಹೋಯ್ತಾನೆ ಆಗ ಹೂವ ಮುಟ್ಟಬ್ಯಾಡಿ ಮುಟ್ಟಬ್ಯಾಡಿ ಮಾವಯ್ಯ ಮುಟ್ಟಿದ್ರೆ ಬಾಡೋಯ್ತದೆ ಮಾವಯ್ಯ ಕೈಲೊಂದು ತುತ್ತು ಬಾಯಲ್ಲೊಂದು ತುತ್ತು ಕಚುಕನೆ ಕಡ್ದ ನಮ್ಮಣ್ಣ ಅಂತದೆ ಇದೇನು ಈ ಹೂವ ಇಂಗಂತಲ್ಲ ಅಂತ ಕಿತ್ಕದನೆ ಅಂಗೆ ಹೊಂಟೋಯ್ತಾನೆ. ಕಳಸಯ್ಯ ನನ್ನ ಸೊಸೆನ ಅಂತಾನೆ. ಇನ್ನೊಂದು ವಾರಬುಟ್ಕಂದು ಅವರತ್ತೆನ ಕಳಿಸಿ ಇಂಗಿಂಗೆ ನಮ್ಮ ದೊಡ್ಡವ್ವರ ಊರಿಗೆ ಕರಕಂದು ಹೋಗವರೆ ಕಳಿಸ್ಬುಡ್ತಾರೆ ಅಂದ. ಸರಿ ಅಂತ ಆ ಮಾವನು ಹಿಂದ್ಕೆ ಬಂದ್ಬುಟ್ಟ ಒಂದುವಾರ ಬುಟ್ಕಂದು ಅವರತ್ತೆ ಹೋದ್ಲು ಅವರತ್ತೆಗು ಆಹೂವ ಅಂಗೆ ಅಂತು ಮುಟ್ಟಬ್ಯಾಡಿ ಮುಟ್ಟಬ್ಯಾಡಿ ಅತ್ತಮ್ಮ ಮುಟ್ಟುದ್ರೆ ಬಾಡೋಯ್ತದೆ ಅತ್ತಮ್ಮ ಕೈಲಿ ಒಂತ್ತುತ್ತು ಬಾಯಲ್ಲೊಂದು ತುತ್ತು ಕಚುಕ್‌ನೆ ಕಡಿದ ನಮ್ಮಣ್ಣ ಅಂತದೆ ಇದೇನು ಇಂಗತಲ್ಲ ಅಂತ ಅವಳು ಅಂಗೆ ಹೋಯ್ತಳೆ. ಹೋಗಿ ಕಳಿಸಪ್ಪ ನನ್ ಸೊಸೆನ ಅಂದ. ಅತ್ತೆ ಅತ್ತೆ ಇಂಗಿಂಗೆ ನಮ್ಮ ದೊಡ್ಡವ್ವರ ಊರ್ಗೆ ಒಂಟೋಗವಳೆ ಇನ್ನೊಂದು ವಾರಬುಟ್ಕಂದ ನಿಮ್ಮ ಮಗನ ಕಳುಸ್ಬುಡಿ ಕರಕಂದು ಹೋಗ್ಲಿ ಅಂತಾನೆ. ಒಂದುವಾರ ಆಯ್ತು ಅವಳ ಗಂಡನು ಅದೇ ದಾರಿಲಿ ಬತ್ತಾ ಇದ್ದ ಈ ಹೂವ ಎಲ್ಲರ್ಗಿಂತ ಹೆಚ್ಚಾಗಿ ಮೇಕಾರುದು ಕೆಳಕೆ ಬೀಳುದು ನಗಿಯೋದು ಮಾಡ್ತಾ ಇತ್ತು ಅವಳ ಗಂಡ ಅದನ್ನ ನೋಡ್ಬುಟ್ಟು ಏನು ಈ ಹೂವ ಇಷ್ಟೊಂದು ಚೆನ್ನಾಗದಲ್ಲ ಇದ್ನ ಕಿತ್ಕಂದು ಹೋಗಿ ನನ್ನ ಹೆಂಡ್ತಿಗೆ ಮುಡಿಸ್ಕಂದು ಮುಂದುಕ್ಕೆ ಬುಕ್ಕಂಡು ನಾನು ಹಿಂದೆ ಬರಬೇಕು. ನನ್ನ ಹೆಂಡ್ತಿಗೆ ತಕ್ಕನಾದ ಹೂವ ಇದು ಅಂತ ಕಿತ್ಕೊಕೆ ಹೋಯ್ತಾನೆ. ಮುಟ್ಟಬ್ಯಾಡ ಮುಟ್ಟಬ್ಯಾಡ ಗಂಡಯ್ಯ ಮುಟ್ಟದ್ರೆ ಬಾಡೋಯ್ತದೆ ಗಂಡಯ್ಯ ಕೈಲ್ಲೊಂದು ತುತ್ತು ಬಾಯಲ್ಲಿ ಒಂತುತ್ತು ಕಚ್ಚಕ್‌ನೆ ಕಡ್ದ ನನ್ನಣ್ಣ ಅಂತದೆ. ಅಲಲ ಇದೇನು ಇಂಗತದಲ, ಇದ್ರೇಲಿ ಏನೋ ಮರ್ಮ ಅದೆ ಅಂತ ಹೋಯ್ತಾನೆ. ಸರಿ ಕಳ್ಸು ಬಾವ ನನ್ನ ಹೆಂಡ್ತಿನಿ ಅಂತಾನೆ. ಇವನು ಎಲ್ಲಿಂದ ಕಳಸನು ಕಡ್ಬುಬುಟ್ಟವನಲ್ಲ ಗಂಡ ಏನ್ಮಾಡ್ದ ಊರಿಗೆ ಬಂದು ಊರು ಜನನೆಲ್ಲ ಕರೆದ. ಆ ಊರು ಜನನೆಲ್ಲ ಕರಕಂದ ಅಪ್ಪ ಅವ್ವ ಅಣ್ಣ ತಂಗಿ ಭಾವ ಅವನ ಹೆಂಡ್ತಿ ಎಲ್ಲರನ್ನು ಕರಕಂದು ಆ ಹೂವ ಇರೂತಕೆ ಬಂದ್ರು. ಬಂದು ಇವನು ಆ ಹೂವನ ಮುಟ್ಟುಕೋದ ಮುಟ್ಟಬ್ಯಾಡ ಮುಟ್ಟಬ್ಯಾಡ ಗಂಡಯ್ಯ ಮುಟ್ಟುದ್ರೆ ಬಾಡೋಯ್ತದೆ ಗಂಡಯ್ಯ ಕೈಲೊಂದುತ್ತುತ್ತು ಬಾಯಲ್ಲೊಂತುತ್ತು ಕಚುಕನೆ ಕಡ್ಪ ನಮ್ಮಣ್ಣ ಅಂತದೆ. ಕೇಳುದ್ರ ಅಂತ ಊರು ಜನಕೆಲ್ಲ ಹೇಳ್ತಾನೆ ಕೇಳ್ಕೊ ಅಂತಾರೆ. ಆ ಮೇಲೆ ಅವರಣ್ಣ ಕೈಲಿ ಮುಟ್ಟಿಸ್ತಾರೆ ಆಗ ಅದು ಮುಟ್ಟಬ್ಯಾಡ ಮುಟ್ಟಬ್ಯಾಡ ಪಾಪ್ಗೇಡಿ ಮುಟ್ಟುದ್ರೆ ಬಾಡೋಯ್ತದೆ ಪಾಪ್ಗೇಡಿ ಕೈಲೊಂದುತುತ್ತು ಬಾಯಲ್ಲಿ ಒಂದು ತುತ್ತು ಕಚಕ್‌ನೆ ಕಡ್ದೆ ನೀನೀಗ ಅಂತದೆ. ಕೇಳುದ್ರ ಅಂತಾನೆ ಕೇಳ್ಕೋ ಅಂತಾರೆ ಊರಜನ. ಆ ಮೇಲೆ ಅವರ ಅತ್ತಿಗೆ ಕೈಲಿ ಮುಟ್ಟಿಸ್ತಾರೆ ಆಗ ಮುಟ್ಟಬ್ಯಾಡ ಮುಟ್ಟಬ್ಯಾಡ ಪಾಪಗೇಡಿ ಮುಟ್ಟುದ್ರೆ ಬಾಡೋಯ್ತದೆ ಪಾಪ್ಗೇಡಿ ಕೈಲೊಂತುತ್ತು ಬಾಯಿಲೊಂತುತ್ತು ಕಚುಕನೆ ಕಡಿಸ್ದೆ ನೀನೀಗ ಅಂತದೆ. ಊರಜನರೆಲ್ಲ ಕೇಳ್ತಾರೆ. ನ್ಯಾಯಗಾರರೆಲ್ಲ ಏನೇಳ್ತಾರೆ ಅಂದ್ರೆ ನೋಡಪ್ಪ ನಿನ್ನ ಹೆಂಡ್ತಿ ಹೋದೋಳು ಇನ್ನು ಬಂದಳೆ ನೀನು ಈ ಹೂವಿನ ಗಿಡನ ಹೂ ಕಾಯಿ ಪೀಚು ಒಂದು ಕಡ್ಡಿನು ಬುಡ್ದಂಗೆ ಕಿತ್ಕಂದು ಒಂದು ಬುತ್ತಿ ಕಟ್ಕೋ ಕಟ್ಕಂಡು ನಿಮ್ಮೂರಿನ ಕೆರೆ ಏರಿಮ್ಯಾಲೆ ಹೋಗಿ ಈ ಬುತ್ತಿ ಮಡುಗಿ ಸ್ನಾನ ಮಡಿ ಮಾಡಿ ಸೂರ್ಯದೇವನಿಗೆ ನಮಸ್ಕಾರ ಮಾಡಿ ಜಪಮಡಿ ಮಾಡಿ

ಅಲ್ಲಿ ಒಂದು ಸುರ ಹೊನ್ನೇಮರ ಅದೆ ಅದರ ಕೆಳಗೆ ಆ ಬುತ್ತಿ ಮಡುಗಿ ಬುತ್ತಿ ಬಿಚ್ಚು ನಿನ್ನ ಹೆಂಡ್ತಿ ಎದ್ದು ಬತ್ತಳೆ ಅಂತಾರೆ ನ್ಯಾಯಗಾರರೆಲ್ಲರು. ಇವನು ಆ ನ್ಯಾಯಗಾರರು ಹೇಳ್ದಂಗೆ ಹೂವಕಾಯಿ ಮೊಗ್ಗು ಪೀಚು ಒಂದು ಕಡ್ಡಿನು ಬುಡ್ದಂಗೆ ಕಿತ್ಕಂದು ಒಂದು ಬುತ್ತಿ ಕಟ್ಕಂದು ಕೆರೆಏರಿಮ್ಯಾಕೆ ಬಂದು ಸ್ನಾನಮಡಿ ಮಾಡಿ ಸೂರ್ಯನಿಗೆ ನಮಸ್ಕಾರ ಮಾಡಿ ಏರಿಮ್ಯಾಲಿರೊ ಸುರ ಹೊನ್ನೆ ಮರದ ಕೆಳಗೆ ಆ ಬುತ್ತಿನ ಬಿಚ್ಚುತ್ತಾನೆ. ಆಗ ಹಸ್ಸೂ... ಅಂತ ಎದ್ದು ಕೂತ್ಕತಳೆ ಎದ್ದು ನಮ್ಮಪ್ಪನ ಮನೆ ನಿಂದರ್‍ದ್ದೋಯ್ತು ಅಂತ ದೂಳು ಎತ್ತಿ ಹೂದುಬುಟ್ಟು ಅವನ ಗಂಡನ ಜೊತೆಲೆ ಹೋಯ್ತಾಳೆ ಸುಖವಾಗಿರ್ತಾರೆ.

ದಾನ ಧರ್ಮ

ಒಂದೂರೆಲಿ ಇಬ್ಬರು ವಾರಾರುಗಿತ್ತಿರು ಇರ್ತಾರೆ. ಸಿದ್ದಮ್ಮ ಮತ್ತು ಗೌರಮ್ಮ ಅವರ ಹೆಸರು. ಗೌರಮ್ಮ ಬಡವೆ ಆದ್ರೂನು ದಾನ ಧರ್ಮ ಮಾಡಬೇಕೆಂದು ತುಂಬಾ ಇಷ್ಟ. ಬಡವರಾದ್ರೂನು ತಮ್ಮಲ್ಲಿ ಇರೂದನ್ನು ಕೊಡಬೇಕು ಅಂತ ಆಸೆ. ಆದ್ರೆ ಸಿದ್ದಮ್ಮನ ಹತ್ತಿರ ಬೇಕಾದಷ್ಟಿದೆ. ಆದ್ರೆ ದಾನಮಾಡು ಬುದ್ಧಿಮಾತ್ರ ಇಲ್ಲ. ಗೌರಮ್ಮ ದಾನಧರ್ಮ ಮಾಡಿ ಪೂರ್ತಿ ಬಡವರಾದ್ರು. ಆದರೆ ಸಿದ್ದಮ್ಮ ಜಿಪುಣತನ ಮಾಡಿ ಶ್ರೀಮಂತರಾದ್ರು. ಆಗ ಈಶ್ವರ ಇವರನ್ನು ನೋಡಿ ಇವರ ಸತ್ಯ ಪರೀಕ್ಷೆ ಮಾಡಬೇಕು ಅಂತ ಗೌರಮ್ಮನ ಮನೆಗೆ ಬತ್ತನೆ. ಬಂದು ಭಿಕ್ಷ ಕೊಡವ್ವ ಅಂತ ಕೇಳ್ತಾನೆ, ಸ್ವಾಮಿ ನಮ್ಮನೆವ್ರು ಬಿಕ್ಷುಕೆ ಹೋಗವರೆ ಅವರು ಬರುವರೆಗು ಇಲ್ಲ ಮನೇಲಿ ಏನೂ ಇಲ್ಲ ಸ್ವಾಮಿ ಅಂತಾಳೆ. ತಿನ್ನುಕೆ ಏನು ಮಾಡ್ಕಲಿಲ್ಲವೆ ಅಂತಾನೆ ಶಿವ. ಸೊಪ್ಪು ಬೇಯಿಸ್ಕಂಡ್ ಇದ್ದೆ ಸ್ವಾಮಿ ತಿಂದಿರ ಅಂತಾಳೆ ಗೌರಮ್ಮ. ಸರಿ ಅದೇ ಕೊಡವ್ವ ಅಂತಾನೆ. ಆಯ್ತು ಅನುಬುಟ್ಟು ತಂದು ಕೊಡ್ತಾಳೆ. ತಿಂತಾರೆ ಸ್ವಾಮಿ. ಮನೇಲಿ ಇನ್ನೇನು ಇಲ್ವೇನವ್ವ ನೋಡು ಏನಾರು ಇರಬೇಕು ನೋಡವ್ವ ಅಂತಾರೆ. ಇನ್ನೇನು ಇಲ್ಲ ಸ್ವಾಮಿ ಬೆಂಕಿಕೆಂಡ ಮಾತ್ರ ಅದೆ ಅದುಬುಟ್ರೆ ಇನ್ನೇನು ಇಲ್ಲ ಸ್ವಾಮಿ ಅಂತಾಳೆ. ಅದನ್ನೆ ಜೋಳ್ಗೆಗೆ ಹಾಕವ್ವ ತಂದು ಅಂತಾನೆ. ಗೌರಮ್ಮ ಒಂದು ಮೊರತುಂಬಿಕೊಂಡು ಬಂದು ಹಾಕ್ತಾಳೆ. ಎಲ್ಲ ಕರಿ ಆಗೋಯ್ತದೆ. ಆ ಕರಿನ ತಂದು ಮನೆತುಂಬ ಎರೆಚುಬುಡ್ತಾರೆ. ಮನೆತುಂಬ ಬೇಕಾದಂಗೆ ಒಡವೆ ವಸ್ತ್ರ ಐಶ್ವರ್ಯನೆ ತುಂಬಿ ತುಳುಕ್ತದೆ. ಇದನ್ನು ನೋಡಿದ ವಾರಗಿತ್ತಿ ಸಿದ್ದಮ್ಮನಿಗೆ ಹೊಟ್ಟೆ ಉರಿ ಬಂದು ಎಂಗೆ ಇಷ್ಟ ಬಿರ್ನೆ ಇಷ್ಟೊಂದು ಐಶ್ವರ್ಯ ತುಂಬದಲ್ಲ ಅಂತ ಆಶ್ಚರ್ಯ ಆಯ್ತದೆ. ಆಗ ಗೌರಮ್ಮನ ಕರೆದ್ಬುಟ್ಟು, ಗೌರಿಗೌರಿ ನೀನು ಅಂಗಿದ್ದಲ್ಲ. ಇಷ್ಟು ಬಿರ್ನೆ ಎಂಗಿಂಗಾದೆ ಅಂತಕೇಳ್ತಾಳೆ. ಲಕ್ಕ ನಿನ್ನೊಂದಿಗೆ ಏನು ಸುಳ್ಳು ಯಾರೋ ಒಬ್ಬ ಜೋಗಪ್ಪ ಬಂದು ಮನೇಲಿ ಬಿಕ್ಷಕೇಳಿದ್ರು ನಮ್ಮನೇಲಿ ಏನು ಇಲ್ಲ ಅಂದೆ. ಮನೇಲಿ ಬೆಂಕಿಯಾರ ಆಕ್ಲಿಲ್ಲವೆ ಆ ಬೆಂಕಿ ಕೆಂಡನೆ ತಂದು ಉಯ್ಯಿಮಗಳೆ ಅಂದ್ರು. ನಾನು ತಂದು ಊದೆ ಅವರು ಮನೆಗೆಲ್ಲ ಎರ್ಚುದ್ರು ಆಗ ಇಂಗೆಲ್ಲ ಆಗೋಯ್ತು ಅಂತಾಳೆ. ಸಿದ್ದಮ್ಮ ಏನ್ಮಾಡ್ತಾಳೆ ಅಂದ್ರೆ ಗಂಡನಿಗೆ ರೀ ರೀ ನೀನು ಹೋಗ್ಬುಟ್ಟು ಒಬ್ಬ ಜೋಗಪ್ಪನ್ನ ಕರಕಂಡು ಬಾ ಅವರಿಲ್ದೇ ಇದ್ರೆ ಊರೇಲಿ ಐನೋರವರೆ ಹೋಗಿ ಕರ್ಕೋಬರೋಗಿ ನಮ್ಮನೆಲು ಸಿರಿ ಸಂಪತ್ತು ಬರುವಂಗೆ ಮಾಡ್ಕಬುಡ್ವ ಅಂತಾಳೆ. ಗಂಡ ಹೋಗ್ಬುಟ್ಟು ಐನೋರ್ನ ಕರೀತಾನೆ ಸ್ವಾಮಿ ಸ್ವಾಮಿ ನನ್ನಿಂಡ್ರು ಕರೆತವಳೆ ಬನ್ನಿ ಅಂತಾನೆ. ಅಲ್ಲ ಕಣಯ್ಯ ನನ್ನನ್ನು ಯಾಕಯ್ಯ ನಿನ್ನಿಂಡ್ರು ಕರೀಬೇಕು ಅಂತಾರೆ. ಅದೇನೋ ನನಗೆ ಗೊತ್ತಿಲ್ಲ ಸ್ವಾಮಿ, ನೀವು ನಮ್ಮನೆಗೆ ಬರ್ಲೇಬೇಕು ಇವತ್ತು. ಅಂತ ಹಿಂಸೆಮಾಡ್ತಾನೆ. ಸರಿ ಅಂತ ಬತ್ತರೆ ಐನೋರು. ಏನಮ್ಮ ಸಿದ್ದಮ್ಮ ಕರದಂತಲ್ಲ ಅಂತರೆ. ಸ್ವಾಮಿ ಅಲ್ಲೆ ನಿಂತ್ಕಳ್ಳಿ ಸ್ವಾಮಿ ಹೂ ನಿಂತ್ಕಂದೆ. ಬಿಕ್ಷೆ ಕೇಳಿಸ್ವಾಮಿ, ಅಲ್ಲಕಣಮ್ಮ ನನಗೇನಮ್ಮ ದರಿದ್ರ ನಿಮ್ಮನೇಲಿ ಭಿಕ್ಷಕೇಳುಕೆ ಅಂತಾರೆ. ಸ್ವಾಮಿ ನೀವೇನು ತಿಳ್ಕಬೇಡಿ ಭಿಕ್ಷೆ ಹಾಕಮ್ಮ ಅನ್ನಿ ಸ್ವಾಮಿ, ಸರಿ ಆಯ್ತು ಭಿಕ್ಷ ಹಾಕಮ್ಮ ಅಂತಾರೆ. ಭಿಕ್ಷ ಇಲ್ಲ ಸ್ವಾಮಿ, ಭಿಕ್ಷ ಇಲ್ಲೇರೆ ನಾನೇನಮ್ಮ,

ಮಾಡಾನೆ. ಸ್ವಾಮಿ ನಿಮ್ಮನೇಲಿ ಏನು ಇಲ್ಲವೇನಮ್ಮ ಅಂತ ಕೇಳಿ ಸ್ವಾಮಿ, ಆಯ್ತುಕಣಮ್ಮ ನಿಮ್ಮನೇಲಿ ಏನು ಇಲ್ಲವೇನಮ್ಮ. ನಮ್ಮನೇಲಿ ಏನು ಇಲ್ಲಸ್ವಾಮಿ, ಕೆಂಡಹುಯ್ಯಿ ಅನ್ನಿಸ್ವಾಮಿ ಅಲ್ಲಕಣಮ್ಮ ಕೆಂಡ ಊದ್ರೆ ನಾನು ಉದ್ಧಾರ ಆದನಮ್ಮ ಬೇಡಕಣಮ್ಮ... ಬೇಡಕಣಮ್ಮ... ಅಂತಾರೆ. ಅವರು ಹೇಳುಕುಮುಂದಾಗೆ ಒಂದು ಮೊರ ಕೆಂಡತುಂಬಿ ಮಡಿಕೊಂಡು ಇರ್ತಾಳೆ. ಅನ್ನಿಸ್ವಾಮಿ ಅನ್ನಿಸ್ವಾಮಿ ಅಂತಾಳೆ. ಅವರು ಓಡ್ತಾ ಇರ್ತಾರೆ. ಇವುಳು ತಕಳಿಸ್ವಾಮಿ ತಕಳಿಸ್ವಾಮಿ ಅಂತ ಹಿಂದಿಂದೆ ಓಡ್ತಾಳೆ.

ಇಲ್ಲಿ ಭಿಕ್ಷುಕದ ರೂಪದಲ್ಲಿ ದೇವರು ಬಂದು ಕೆಂಡ ಹುಯ್ಸಿಕೊಂಡು ಕರಿ ಆಯ್ತು. ಆದರೆ ಐನೋರಿಗೆ ಕೆಂಡ ಹೂದ್ರೆ ಅದದೆ. ಬಲವಂತದಿಂದ ಭಾಗ್ಯ ಬರುವುದಿಲ್ಲ. ಅದು ತಾನಾಗೆ ಒಲಿದು ಬರಬೇಕು ಅನ್ನುದೇ ಈ ಕಥೆಯ ಆಶಯವಾಗಿದೆ.

ಚಿಕ್ಕೋನಿ ದೊಡ್ಡೋನಿ

ಒಬ್ಬ ರಾಜನಿಗೆ ಸುಮಾರು ವರ್ಷದಿಂದ ಮಕ್ಕಳೇ ಇರ್‍ಲಿಲ್ವಂತೆ. ಆಗ ಅಪರೂಪಕ್ಕೆ ಇವನೆಂಡ್ತಿ ಬಸ್ರಿ ಆಗಿರ್‍ತಾಳೆ. ಬಸ್ರಿ ಆಗಿದ್ದಾಗ ತೆಂಬಿಟ್ಟು ತಿನ್ನಬೇಕು ಅಂತ ಆಸೆ ಆಯ್ತುದೆ ಅವಳಿಗೆ ಕುಟ್ತಾ ಇರ್‍ತಾಳೆ. ಕುಟ್ತಾ ಇದ್ದಾಗ ಕುಟ್ತಾ ಇದ್ದುದ್ದ ಬುಟ್ಬುಟ್ಟು ಏನೋ ತರುಕೆ ಒಳಕೆ ಹೋಯ್ತಾಳೆ, ನಾಯಿ ಮಲ್ಗಿರ್‍ತದೆ. ನಾಯಿನು ಬಸ್ರಿ ಆಗಿರ್‍ತದೆ. ಅದು ಏನ್ಮಾಡ್ತದೆ ಒಳಾಕೆ ಬಂದು ನೆಕ್ಬುಡ್ತದೆ. ಅವಳು ನಾಯಿ ನೆಕ್ಬುಡ್ತಲ್ಲ ಅಂತ ಪರ್ಕೆ ತಕಂದು ಓಡಿಸ್ಕೊಂದು ಹೋಯ್ತಾಳೆ ಒಡ್ದುಬುಡ್ತಾಳೆ. ಮೇಲೆ ಈಶ್ವರ ಹೋಯ್ತಾ ಇರ್‍ತಾನೆ. ನಾಯಿಗೆ ಒಡ್ದುತ್ತದ ನೋಡ್ಬುಡ್ತಾನೆ. ಈಸ್ಪರ ಏನ್ಮಾಡ್ತಾನೆ ನಾಯಿ ಹೊಟ್ಟೆಲಿರುವ ಮಕ್ಕಳು ದೊರೆ ಹೆಂಡ್ರುಗೆ ದೊರೆ ಹೆಂಡ್ರು ಹೊಟ್ಟೇಲಿರುವ ಮಕ್ಕಳು ನಾಯಿ ಹೊಟ್ಟೆಗೆ ಬರ್‍ದುಬುಟ್ಟು ಹೊಟ್ಕೋಯ್ತಾನೆ. ಆಗ ದೊರೆ ಹೆಂಡ್ರು ನೀರಾಕತಳೆ ನಾಯಿಮರಿ ಹುಟ್ತಾವೆ. ಆಗ ಜನರೆಲ್ಲ ದೊರೆಹೆಂಡ್ರು ನಾಯಿಮರಿ ಹೆತ್ತವಳೆ ಅಂತ ಎಲ್ಕ ಹೇಳ್ತಾರೆ. ಇಂಗಾಗೋಯ್ತಲ್ಲ ಅಂತ ದೊರೆ ನಾವು ಯಾವ ಜನ್ಮದಲ್ಲಿ ಮಾಡಿದ ಕರ್ಮನೋ ಅಂತ ಯೋಚನೆ ಮಾಡ್ತಾ ಇರ್‍ತಾನೆ. ದೊರೆಹೆಂಡ್ರು ಹಿತ್ಲುಗೆ ಹೋಯ್ತಾಳೆ ಹಿತ್ಲುಗೋದಗ ನಾಯಿಮರಿಗೆ ಎರಡು ಹೆಣ್ಮಕ್ಳು ಹುಟ್ಟಿರ್‍ತಾವೆ ಇದೇನಿದು ಆಶ್ಚರ್ಯ ಅಂತ ನಾಯಿ ಇಲ್ದೇ ಇದ್ದಾಗ ಎತ್ಕಬಂದ್ಬುಡ್ತಾಳೆ. ನಾಯಿ ಬಂದು ನೋಡ್ತದೆ ಮಕ್ಕಳು ಇರಲ್ಲೋ ಬಡ್ಕತಾ ಇರ್‍ತದೆ ನನ್ಮಕ್ಳು ಇಲ್ಲ ಅಂತ, ಆವಾಗ ದೊರೆ ಮನೇಲಿ ಮಕ್ಳು ಬಡ್ಕತಾ ಇದ್ದ ಶಬ್ದಕೇಳಿಸ್ಕತದೆ. ಗೊತ್ತಾಗೋಯ್ತದೆ ನಾಯಿಗೆ ಅವು ನನ್ಮಕ್ಳೆ ಅಂತ. ಅವಳು ಇಲ್ದೇ ಇರು ಟೈಮು ನೋಡ್ಕಂಡು ಹೆಣ್ಮಕ್ಳುನ ಎತ್ಕಂದು ದೊಡ್ಡ ಕಾಡ್ಗೆ ಒಂಟೋಯ್ತದೆ. ಅಲ್ಲಿ ಸಾಕ್ತಾ ಇರ್‍ತದೆ. ಮಕ್ಳು ದೊಡ್ಡೋರಾಯ್ತಾರೆ ಹತ್ತನ್ನೆರಡು ವರ್ಷದ ಮಕ್ಳಾಯ್ತವೆ. ಇವರ್‍ಗೆ ಹೆಸರು ಕೆಟ್ತದೆ ಚಿಕ್ಕೋನ್ನಿ, ದೊಡ್ಡೋನ್ನಿ ಅಂತ ಹೆಸರು ಕಟ್ತದೆ. ದೊಡ್ಡೋನ್ನಿ ಅನ್ನುಳು ತುಂಬ ಬುದ್ದಿವಂತೆ ಒಳ್ಳೇವ್ಳು ಕನಿಕರ ಜಾಸ್ತಿ. ಆದರೆ ಚಿಕ್ಕೋನ್ನಿ ಅನ್ನುಳಿಗೆ ಸ್ವಲ್ಪನು ಇಲ್ಲ ನಾವು ಎಲ್ಲೆಲ್ಲೊ ನಾಯಿ ಹೊಟ್ಟೆಲಿ ಹುಟ್ಟಿದವಲ್ಲ ನಾಯಿ ನಮ್ಮವ್ವ ಅಂದ್ರೆ ಜನ ಆಡ್ಕತರೆ ಅಂತ ಚಿಕ್ಕೋನಿ ಯೋಚನೆ. ದೊಡ್ಡೋಳು ನಾಯಿ ಆದ್ರು ನಮ್ಮ ತಾಯಿ ಅಲ್ವೆ ತಪ್ಪೇನು ಅಂತ ಅನ್ಕತಳೆ. ಇಂಗೇ ಬೆಳಿತಾ ಇರಬೇಕಾದ್ರೆ ತುಂಬಾ ದಾವಾಗೋಯ್ತದೆ ನೀರೇ ಇಲ್ಲ. ಒಂದು ಆಲದ ಮರದ ಅಂಡೇಲಿ ಮಲಗಿರ್‍ತಾರೆ. ರಾಜರ ಜೊತೇಲಿ ಕರಕಂದೋಗಿದ್ದ ನಾಯಿಗಳು ನೀರಿರು ಜಾಗಕ್ಕೆ ಹೋಗಿ ಒದ್ದಾಡ್ಬುಟ್ಟು ಬಂದಿರ್‍ತವೆ. ಇಬ್ರು ಅಕ್ಕತಂಗೇರು ಸ್ನಾನಮಾಡು ಕೊಳಕ್ಕೆ ಹೋಗಿ ಒದ್ದಾಡ್ಬುಟ್ಟ ಬಂದಿರ್‍ತಾವೆ. ಒದ್ದಾಡುವಾಗ ಅವರ ತಲೆ ಕೂದ್ಲು ನಾಯಿ ಕತ್ತಿಗೆ ಸುತ್ಕಬುಟ್ಟಿರ್‍ತವೆ. ನಾಯಿಗಳು ಎಲ್ಲಿ ಹೋಗಿ ನೀರುಡಿಕಂದು ಒದ್ದಾಡ್ಕ ಬಂದವಲ್ಲ ನಮ್ಗೆ ಕುಡೀಕೆ ನೀರಿಲ್ಲ ಇವು ನೋಡುದ್ರೆ ನೀರ ಹುಡುಕ್ಬುಟ್ಟವಲ್ಲ ಅಂತ ನಾಯಿ ಮೈಯ್ಯ ಸವರ್‍ತಾ ಇರ್‍ತಾನೆ. ರಾಜ ಹಿಂಗೆ ಸವರ್‍ತಾ ಇರಬೇಕಾದ್ರೆ ನಾಯಿಕತ್ತೆಲಿ ಅವರ ತಲೆಕೂದ್ಲು ಸುತ್ಕಂದಿರುವುದು ಸಿಕ್ಕದೆ ಅದ್ನ ಅಳ್ತಮಾಡ್ತಾರೆ

ಏಳುಮಾರು ಇರ್ತದೆ. ಓಹೋ ಈ ತಲೆಕೂದ್ಲೆ ಇಷ್ಟೊಂದು ದೊಡ್ಡದಾಗಿ ಸುಂದರವಾಗಿ ಅದಲ್ಲ ಇನ್ನು ಈ ತಲೆಕೂದ್ಲು ಹೊತ್ತಿರೋ ಆ ಹೆಣ್ಣುಗಳು ಇನ್ನೆಷ್ಟು ಸುಂದರವಾಗಿರಬೇಕು ಅಂತ ಅನ್ಬುಟ್ಟು ಇಲ್ಲ ಅವರ್ನ ಹುಡುಕ್ಬೇಕು ಅಂತ ಮಾತಾಡ್ಕತರೆ ಸುತ್ತಾನೋಡ್ತಾರೆ ಗೊತ್ತಾಗಲ್ಲು. ಒಂದು ಜಾಗದಲಿ ಒಂದು ಸೂಜಿ ಗಾತ್ರ ಹೊಗೆಯಾಡುದು ಕಾಣಿಸ್ತದೆ. ಅಲ್ಲಿ ಯಾರಾದ್ರು ಮನುಸ್ರು ಇರಬೇಕು ಅಂತ ಗೊತ್ತಾಯ್ತದೆ. ಅಲ್ಲಿಗೋಯ್ತಾರೆ ಅವ್ವ ಯಾರವ್ವ ಮನೇಲಿ ಅಂತಾರೆ ಮೂರು ನೀರು ಕೊಡ್ರವ ಅಂತಾರೆ. ಆಗ ದೊಡ್ನೋನಿ ತಕಬಂದು ಕೊಡ್ತಾಳೆ ಕುಡಿತರೆ ಸರಿ ಕುದ್ರೆ ಮ್ಯಾಲೆ ಕುತ್ಕಳಿ ನಮ್ಮ ದೇಶಕ್ಕೆ ಹೋಗ್ಬ ಈ ಕಾಡೇಲಿ ಯಾಕಿದ್ದೀರಿ ಅಂತಾರೆ. ನಾವು ಬರುದಿಲ್ಲ ಅಂತ ದೊಡ್ನೋಳು ಅಂತಳೆ. ಚಿಕ್ಕೋಳು ಏ ಅಕ್ಕಾ ಈ ನಾಯಿ ಜೊತೇಲಿದ್ದು ನಾವೇನು ಮಾಡ್ಬೇಕಿಲ್ಲಿ ಬಾ ನಾವು ದೊರೆಮಕ್ಕಳ ಜತೇಲಿ ಒಂಟೋಗ್ಬ ಊರ ಸೇರ್ಕವ ಅಂತಳೆ. ಚಿಕ್ಕೋಳು ತುದಿಗಾಲೆಲಿ ನಿಂತಿರ್ತಾಳೆ ಹೋಗುಕೆ ದೊಡ್ನೋಳು ಕೊನೆಗೆ ನಮ್ಮ ಅವ್ವನಾದ್ರು ನೋಡ್ಕಂದು ಹೋಗಬೇಕಲ್ಲ ಅಂತಾಳೆ. ಚಿಕ್ಕೋನಿ ಹೋಗಿ ಕುದ್ರೆ ಮ್ಯಾಕೆ ಕುತ್ಕಬುಡ್ತಾಳೆ. ಆದರೆ ದೊಡ್ನೋನಿ ಬತ್ತೀನಿ ಇರ್ರಿ ಅನ್ಬುಟ್ಟು ಹಿತ್ಲುಗೆ ಹೋಗಿ ಒಂದು ಮೊಡ್ಲು ಹೂವ ಕೊಯ್ಕತಳೆ ಕುಯ್ಕಂದು ದೊರೆಗೆ ಗೊತ್ತಿಲ್ಲದಂಗೆ ಹಿಂಚರೆ ಏಕ ಹೂವನ ಬುಟ್ಕಂದು ಬುಟ್ಕಂದು ಮನೆಗೋಗು ತನ್ಕ ಬುಟ್ಕಂದು ಒಟ್ಬೋಯ್ತಾಳೆ. ನಾಯಿ ಬತ್ತದೆ ನೋಡ್ತದೆ ಮಕ್ಕಳು ಇರೋಲ್ರು ಇಷ್ಟು ವರ್ಷ ಸಾಕಿದ ಮಕ್ಳು ಇಲ್ಲ ಅಂದ್ರೆ ಎಂತ ತಾಯಿಗಾದ್ರು ನೋವಾಯ್ತದೆ.

ನಾಯಿ ಬಂದು ಅಳ್ತದೆ ಅತ್ತು ಅತ್ತು ಕೊನೆಗೆ ಹೂವ ಏಕ ಬುಟ್ಕೊಂದು ಹೋಗಿರುವುದು ಕಾಣಿಸ್ತದೆ. ಇದ್ರೇಲಿ ಏನೋ ಅದೆ ಅನ್ಬುಟ್ಟು ಆ ಹೂವ ತಿಬ್ಬನೆ ಹೋಯ್ತದೆ ದೊಡ್ನೋನಿ ಮನೆತಕೆ ಹೋಗಿ ಸೇರ್ತದೆ. ನೋಡ್ತಾಳೆ ಅವಳಿಗೆ ಇದು ನಮ್ಮ ಅವ್ವ ಅಂತ ಗೊತ್ತಾಯ್ತದೆ. ಅವ್ವ ಅಂತ ಹೇಳ್ಕಂದ್ರೆ ಜನ ಎಲ್ಲ ಆಡ್ಕತರೆ ಯಾರು ಒಪ್ಪುದಿಲ್ಲ ಏನ್ಮಾಡುದು ಅಂದ್ಬುಟ್ಟು ರೀರೀ ಇಲ್ಲಿ ಒಂದು ಹೊಸಾದು ಒಂದು ನಾಯಿ ಬಂದದೆ ಅದ್ನ ನಾವೆ ಸಾಕವ ಅಂತಾಳೆ ಅವನು ನಾಯಿತಾನೆ ಅದ್ಕೇನು ಒಂತುತ್ತು ಇಟ್ಬಾಕುದ್ರೆ ಇಲ್ಲೇ ಇರ್ತದೆ ಅದ್ಕೆ ನನ್ನ ಕೇಳಬೇಕೆ ಸಾಕೋ ಅಂತಾನೆ. ಚೆನ್ನಾಗಿ ಸಾಕ್ತಾಳೆ. ಅದಕ್ಕೆ ಒಬ್ಬ ತಾಯಿಗೆ ಏನೇನೆಲ್ಲ ಮಾಡಿ ಊಟ ಹಾಕಿ ಸಾಕಬೇಕೋ ಹಾಗೇನೆ ಸಾಕ್ತಾಳೆ ಚೆನ್ನಾಗಿರ್ತದೆ. ಒಂದು ಹದಿನೈದು ದಿನ ಕಳಿತದೆ. ಅವ್ವನಿನ್ನೇನೋ ನೋಡ್ತೆ ಯಾಕೊ ಚಿಕ್ಕಮಗಳ್ನ ನೋಡಬೇಕು. ಗ್ಯಾನ ಆಯ್ತದೆ ಅಂತದೆ. ಇವಳು ಬ್ಯಾಡ ಅಲ್ಲಿಗೆ ಹೋಗಬ್ಯಾಡ ಇಲ್ಲೇಇರು ನೀನು ಅಂದ ಬೇಕಾದಷ್ಟು ಹೇಳ್ತಾಳೆ. ಆದ್ರೆ ನಾಯಿ ಇಲ್ಲ ಕಣ್ವ ಹೋಗಿ ಬಂದ್ಬುಡ್ತೀನಿ, ನಿನ್ನ ಹತ್ತಿದ್ದಿ ಅವಳ್ನ ಕಕ್ಕಿದ್ನೆ ಎಷ್ಟೇ ಆಗ್ಲಿ ನನ ಮಗಳಲ್ವೆ ಅಂತದೆ. ಆಯ್ತು ಸರಿ ಹೋಗಿಬವ್ವ ಅಂತಳೆ. ಹೋಯ್ತದೆ ತಾಯಿ ತಾಯಿ ಅಂತದೆ. ಅವಳು ನೀನೇನು ಇಲ್ಲಿಗೂ ಬಂದಿದಿಯಲ್ಲ ಜನ ಆಡ್ಕೊವಂಗೆ ಮಾಡುಕೆ ಬಂದಿದ್ದಿಯಾ ಏನನ್ಕಂಡರು ಯಾಕೆಬಂದೆ ಇಲ್ಲಿಗೆ ಅಂತಾಳೆ. ನಿನ್ನ ನೋಡ್ಕೊ ಹೋಗುವ ಅಂತ ಬಂದಿ ಕಣವ್ವ ಅಂತದೆ. ನೀರುಕೊಡವ್ವ ಮೂರ ಅಂತದೆ. ಆಯ್ತು ಹಂತ್ಕೊ ಹುಯ್ತಿನಿ ಅಂತಳೆ. ಅ.. ಅ... ಅಂತ ಹತ್ಕಂದಾಗ ಕಾದಿರು ಸಲಾಕೆ ತಂದು ಗಂಟ್ಲುಗೆ ಹಾಕುಬುಟ್ಟು ನೀರೂದ್ಬುಡ್ತಾಳೆ ಏನು ಏಕ ಬೆಂಗೋಯ್ತದೆ. ಆಗ ಬಡ್ಕಂದು ದೊಡ್ನೋನ್ನಿ ಮನೆತನಕೆ ಬಂದು ಜೀವ ಬುಟ್ಬುಡ್ತದೆ. ಇದ್ಮಿದ್ವಂಗೆ ನಾಯಿ ಸತ್ತೋಯ್ತು. ಇದ್ನ

ಏನು ಮಾಡುದು ಇದ್ನ ಬಿಸಾಕುಕು ಮನ್ಸು ಬರಲ್ತು ಮಣ್ಣು ಮಾಡ್ವ ಅಂದ್ರೆ ಜನ ನೆಗಿತರೆ ಏನ್ಮಾಡುದು ಅಂತ ಒಂದು ಕಬ್ಣದ ಪೆಟ್ಗಿತಕಬಂದು ಅದ್ಕೆ ಹಾಕ್ಬುಟ್ಟು ಇವರ್‍ಯಾರು ಇಲ್ದೇ ಇದ್ದಾಗ ನನ್ನ ತಾಯಿನ ನೆನೆಸ್ಕಂದು ಅಳಬೇಕು ಅಂತ ಎತ್ತಿ ಹಟ್ಟದ ಮ್ಯಾಕೆ ಬಿಸಾಕ್ಬುಡ್ತಾಳೆ. ಅವುಳಿಗೆ ನೋಡುಕೆ ಅವಕಾಶನ ಸಿಗಲ್ತು ಮನೆತುಂಬ ಜನ ಇರ್‍ತಾರೆ. ಆಗೇವಲ್ದು. ಒಂದು ವಾರ ಹದಿನೈದಿನ ಆಯ್ತದೆ. ಗಂಡ ಮನಿಕಂದು ನೋಡ್ತಾ ಇರ್‍ತಾನೆ. ಇದೇನು ನಮ್ಮನೇಲಿ ಒಂದು ಕಬ್ಬಿಣದ ಪೆಟ್ಗೆ ಅದಲ್ಲ ನಾನು ನೋಡಿರ್‍ಲೆ ಇಲ್ವಲ್ಲ. ಅದ್ರೇಲಿ ಏನಿದ್ದದು ನಾನು ನೋಡ್ಬೇಕಲ ಅಂತಾನೆ. ಅಯ್ಯೋ ಅದೇನು ಅಳೆಪೆಟ್ಗೆ ಕಬ್ಬಣ ಎಲ್ಲ ಹಾಕಿ ಇಟ್ಟೇವ್ನಿ ಅಂತಾಳೆ. ಇವನು ಊಹೂನಾನು ನೋಡ್ಬೇಕು ತಗಿ ಅಂತಾನೆ. ಅಯ್ಯೋ ಭಗವಂತನೆ ಏನಪ್ಪ ನನಗೆ ಇಂತ ಸ್ಥಿತಿ ಕೊಟ್ಬುಟ್ಟೆ ಒಳಗೆ ನಾಯಿ ಮಡಿಕಂದು ವಾಸ್ನೆಬಂದು ಬುಟ್ರೆ ಯಾಕೆ ಅಂತಕೇಳುದ್ರೆ ನಾನು ಏನಂತ ಉತ್ತರಕೊಡನೆ ಅಂತಾಳೆ. ದೇವರ ಮೇಲೆಬಾರ ಹಾಕ್ಬುಟ್ಟು ತೆಗೀತಳೆ ಪೆಟ್ಗೆಲಿ ನಾಯಿ ಇದ್ದುದೆಲ್ಲ ಚಿನ್ನ ಆಗ್ಬುಟ್ಟಿರ್‍ತದೆ. ಆಗ ಇದೆಲ್ಲಿಂದ ಬತ್ತು ಅಂತಾನೆ. ಅವಳು ನಮ್ಮಪ್ಪನ ಮನೇಲಿ ನಾನು ಬರಬೇಕಾದ್ರೆ ಇದ್ನ ತಕ್ಕಬಂದೆ ಅಂತಾಳೆ. ಇಂತ ಚಿನ್ನ ಬೆಳ್ಳಿ ಮಡಗಿರುವ ತವರುಮನೆ ಎಂಗಿದ್ದುದು ನಾನು ನೋಡಬೇಕು ನನ್ನ ಕರಕಂದೋಗು ಅಂತ ಹಿಂಸೆಕೊಟ್ಟಾಕ್ಬುಡ್ತನೆ. ಸರಿ ತೋರಿಸಬೇಕು ಇಲ್ಲ ಅನ್ನುಕಾಗಲ್ತು ಸರಿ ಬಾ ಅಂತ ಕುದುರೆ ಮ್ಯಾಲೆ ಕುತ್ಕಂದು ಕರಕಹೊಯ್ತಾಳೆ. ಏಳೂರು ಎಲ್ಲೆ ತುಂಬ ಒಂದು ಆಲದ ಮರ ಆ ಆಲದ ಮರದಂಡೆಲಿ ಧಣಿವಾರಿಸಿಕೊಳ್ಳೊಕೆ ಕುದುರೆ ಕಟ್ಟಾಕ್ಬುಟ್ಟು ಕುತ್ಕತರೆ ಅವನು ನಿದ್ದೆ ಮಾಡ್ತಾನೆ. ಇವಳಿಗೆ ನಿದ್ದೆಬರಲ್ತು. ಯೋಚನೆ ಇಲ್ದೇ ಇರು ತವರು ಮನೆನ ಎಲ್ಲಿಂದ ತಂದು ತೋರಿಸ್ನೆ ಅಂತ ಯೋಚನೆ ಗಂಡನಿಗೆ ಬ್ಯಾರೆ ಸುಳ್ಳೇಬುಟ್ಟೇವ್ನಿ ಆ ಮೇಲೆ ಹೋಗೋ ಜೀವ ಈಗ್ಲೆ ಹೋಗ್ಲಿ ಅಂತ ಹುತ್ತುಕ್ಕೆ ಕೈ ಆಕ್ಬುಡ್ತಾಳೆ. ಆ ನಾಗಪ್ಪನಿಗೆ ಕಿವಿಲಿ ಕರ್ಣದಲ್ಲಿ ಕುರ ಆಗ್ಬುಟ್ಟು ನರಳ್ತಾ ಇರ್‍ತದೆ. ಇವಳು ಕೈ ಹಾಕ್ದಾಗ ಕೈಸೋಕಿ ಆಕುರ ಹೊಡೆದು ಕೀವೆಲ್ಲ ಸೋರಿ ನಾಗಪ್ಪನಿಗೆ ಸರಾಗಿ ಆಗಿ ಈಚೆಗೆ ಬತ್ತದೆ. ಯಾರವ್ವನೀನು ಅಂತದೆ ನನ್ನ ಕಷ್ಟ ಪಾರು ಮಾಡ್ದೆ ನಿನ್ಗೆ ಏನು ವರ ಬೇಕು ಕೇಳು ಅಂತದೆ. ಅವಗ ನಡೆದುದ್ನೆಲ್ಲ ಹೇಳ್ತಾಳೆ ನನ್ನ ಗಂಡನಿಗೆ ಇಲ್ದೇ ಇರು ಅರಮನೆ ಎಲ್ಲಿಂದ ತೋರ್‍ಸನೆ ಅಂತಾಳೆ. ಆಗ ನಾಗಪ್ಪ ತನ್ನ ನಾಗಲೋಕನೆ ಸೃಷ್ಟಿ ಮಾಡ್ಬುಡ್ತಾನೆ. ಇದು ಧರಮ್ಯಾಲೆ ತುಂಬ ಹೊತ್ತು ಇರಲ್ತು. ಇದ್ರೆ ಒಂದು ರಾತ್ರಿ ಎರಡು ಹಗಲು ಇರ್‍ತದೆ. ಅಷ್ರೇಲಿ ನಿನಗಂಡನ ಕರಕಂದು ಹೊರಗಡೆ ಬಂದ್ಬುಡು ಅದು ಕೈಲಾಸಕ್ಕೆ ಹೋಗುಕೆ ಸರಿ ಹೋಯ್ತದೆ ಅಂತದೆ. ಆ ಮೇಲೆ ನಾಗಪ್ಪ ಮಾಯ ಆಗುಬುಡ್ತದೆ. ಇವರು ಅರಮನೆಗೆ ಹೋದ ತಕ್ಷಣ ಮಂಚದಲಿ ಹಾಕಿ ತೂಗತರೆ. ಇವನ್ಗೆ ಇಂತ ಅರಮನೆ ಬುಟ್ಟು ನನ್ನ ಜೊತೆ ಬಂದವಳಲ್ಲ ನಾನು ಇಲ್ಲೆ ಇರ್‍ತೀನಿ ಅಂತಾನೆ. ಬರುಕೆ ಒಲ್ಲ. ಏನಾದ್ರುಮಾಡಿ ನಮ್ಮನೆಗೊಂಟೋಗವ ಬನ್ರಿ ಅಂತ ಹಿಂಸೆ ಮಾಡಿ ಕರಕಬತ್ತಳೆ. ನಾಗಪ್ಪ ನೀವೋಗುವಾಗ ಅರಮನೆ ಬೆಂದೋಯ್ತದೆ. ಹಿಂದುಕೆ ತಿರುಗಿ ನಮ್ಮಪ್ಪನ ಮನೆ ಬೆಂದೋಯ್ತು ಅನ್ಬುಡು ಅಂತನೆ. ಆಲದ ಮರತ್ತಕ್ಕೆ ಬತ್ತಳೆ. ಅರಮನೆ ಮೇಲುಕ್ಕೆ ಹೋಗುವಾಗ ಬೆಂದೋಯ್ತದೆ. ಇವಳು ಅಯ್ಯೋ ನಮ್ಮಪ್ಪನ ಮನೆ ಬೆಂದೋಯ್ತು ಅಂತ ಬಾಯ್ ಬುಡ್ಕಬುಡ್ತಾಳೆ. ಅಯ್ಯೋ ಅಯ್ಯೋ ಅಂತ ಅರಮನೆ ಬೆಂದೋಯ್ತೆ ನೀರಾಕಿ ಕೆಡ್ಸುವ ನಡಿಯೆ ಅಂತಾನೆ. ಆಗಲ್ತು ಕೆಡ್ಸುಕೆ ಮನೆಗೊಂಡೋಗವ ಬನ್ನಿ ಅಂತ ಕರಕಂದು ಬಂದ್ಬುಡ್ತಾಳೆ. ಆಗ ಚಿಕ್ಕೋನಿ

ಕೇಳ್ತಳೆ ಎಂಗಾಯ್ತು ಲಕ್ಕ ಏನಾಯ್ತು ಅಕ್ಕ ಅಂತ ಕೇಳ್ತಾಳೆ. ಎಲ್ಲ ಹೇಳ್ತಾಳೆ ಇಂಗಿಂಗೆ ಅಲ್ಲಿ ದೊಡ್ಡ ಹಾಲದ ಮರ ಸಿಕ್ತದೆ ಅಲ್ಲಿ ಇಂಗೆಲ್ಲ ಆಯ್ತು ಅಂತ ಹೇಳ್ತಾಳೆ. ಇವುಳು ನನ್ಗು ಅಂಗೆ ಆಗಬೋದು ಅಂತ ಬರದೇ ಇರು ಗಂಡನ ಬಲವಂತವಾಗಿ ಕರಕಂದೋಗಿ ಅಲ್ಲಿದ್ದ ಉತ್ತದಲ್ಲಿ ಕೈ ಹಾಕ್ತಾಳೆ ನಾಗಪ್ಪನಿಗೆ ಯಾವ ಕುರ ಗಿರ ಏನು ಆಗಿರಲ್ತು ಸರಿಯಾಗಿ ಕಚ್ತದೆ. ಇವಳು ಸತ್ತೋಯ್ತಾಳೆ. ಅವನಗಂಡ ಅಯ್ಯೋ ಅಲ್ಲಿಂದ ಬಂದು ಇಲ್ಲಿ ಸತ್ಲಲ್ಲ ನನ್ನೆಂಡ್ತಿ ಅಂತ ಹೇಳಿ ಊರುಗೆ ತಂದು ಮಣ್ಣು ಮಾಡ್ತಾರೆ.

ಈ ಕಥೆ ಧರ್ಮ ಧರ್ಮನೆ ಕರ್ಮ ಕರ್ಮನೆ ನಿಜನಿಯತ್ತಿಗೆ ಯಾವತ್ತು ಬೆಲೆ ಇದ್ದೇ ಇರ್ತದೆ.

ನೆಲ್ಲೂರಿಂದ ಕಲ್ಲೂರಿಗೆ

ಒಂದೂರೆಲಿ ಇಬ್ರು ಅಣ್ಣ ತಮ್ಮರಿರ್ತಾರೆ. ಹೊಲ ಉಳ್ತಾ ಇರ್ತಾರೆ. ಅಣ್ಣ ಮುಂದೆಗಡೆ ಏರು ತಮ್ಮ ಹಿಂದೆಗಡೆ ಏರು ಕಟ್ಕಂದು ಉಳ್ತಾ ಇರ್ತಾರೆ. ಒಬ್ಬ ಮಾವ ಏನ್ಮಾಡ್ತಾನೆ. ಸೊಸೆನ ಆಶಾಡ ಮುಗಿಸ್ಕಂದು ಊರಿಗೆ ಕರ್ಕಂದು ಹೋಯ್ತಾ ಇರ್ತಾನೆ. ಹಿಂದೆಗಡೆ ಉಳ್ತಾ ಇದ್ದ ತಮ್ಮ ಅವಳ್ನ ನೋಡ್ತಾನೆ. ಅವ್ರುಳು ಇವನ್ನ ನೋಡ್ತಾಳೆ. ಇಬ್ರುಗು ಇಷ್ಟ ಆಗೋಯ್ತದೆ. ಇಬ್ರುಗು ಮಾತಾಡಬೇಕು ಅನಿಸ್ತದೆ. ತಮ್ಮ ಮಾತಾಡುವ ಅಂದ್ರೆ ಅಣ್ಣ ಅವನೆ ಅವಳು ಮಾತಾಡಿಸುವ ಅಂದ್ರೆ ಮಾವ ಜೊತೆಲಿ ಅವನೆ ಇಬ್ರುಗು ಮಾತಾಡುಕೆ ಆಗೋಲ್ಲು ಅವಳು ಏನ್ಮಾಡ್ತಾಳೆ, ಇಂಗೆ ಪಕ್ಕದೆಲಿ ಒಂದು ಮರ ಇರ್ತದೆ. ಆಮರದ ಕೆಳಗೆ ಕುತ್ಕತಳೆ ಆಮೇಲೆ ಎದ್ದು ಒಂಟೋಯ್ತಾಳೆ. ಇವನಿಗೆ ಅನುಮಾನ ಬತ್ತದೆ. ಇವಳ್ಯಾಕೆ ಅಲ್ಲಿ ಕುಂತಿದ್ದು ಎದ್ದೋದ್ಲು ಅಂತ. ಸರಿ ಅನ್ಬುಟ್ಟು ಏರೆಲ್ಲ ಬುಟ್ಟಾದಮೇಲೆ ಹೋಗಿ ನೋಡ್ತಾನೆ ಅವಳು ಏನುಮಾಡುವಳೆ ಹುಲ್ಲ ಸಿಂಬಿ ಹೂಡ್ಬುಟ್ಟು ಮ್ಯಾಲೆ ಒಂದು ಕಲ್ಲು ಮಡುಗ್ಬುಟ್ಟು ಹೊಂಟೋಗಿರ್ತಾಳೆ. ಇದನ್ನ ಅವನು ನೋಡ್ತಾನೆ. ಅರ್ಥ ಆಗಲ್ಲು. ಏನು ಇರಬಹುದು ಇದರ ಅರ್ಥ ಅಂತ ಯೋಚ್ನೆ ಮಾಡಿ ಮಾಡಿ ಕೊರಗಿ ಕೊರಗಿ ಸಣ್ಣ ಆಗೋಯ್ತನೆ. ಇದರ ಅರ್ಥ ಯಾರ್ಗು ಗೊತ್ತಿಲ್ಲ. ಆಗ ಅವರಣ್ಣನಿಗೆ ಅನುಮಾನ ಬಂದು ಯಾಕೆ ನನತಮ್ಮ ಇಂಗೆ ಕೊರಗಿ ಕೊರಗಿ ಸಣ್ಣ ಆಗ್ಬುಟ್ಟ ಅಂತ ಅವನ ಸ್ನೇಹಿತನಿಗೆ ಕರುದ್ಬುಟ್ಟು ನೋಡಪ್ಪ ನನತಮ್ಮ ಇತ್ತೀಚ್ಗೆ ತುಂಬಾ ಯೋಚ್ನೆ ಮಾಡಿ ಕೊರಗಿ ಕೊರಗಿ ಸಣ್ಣ ಆಗ್ಬುಟವ್ನೆ ನನ್ನತ್ರನೂ ಏನೂ ಹೇಳಲ್ಲ. ಇಲ್ಲ ಮನೆವ್ರತ್ರನೂ ಏನೂ ಹೇಳಲ್ಲ. ನೀನಾದ್ರು ಏನೂ ಅಂತ ವಸಿ ವಿಚಾರ್ಸು ಕೇಳು ಅಂತ ಹೇಳ್ತಾನೆ. ಅಂಗೆ ಅವನಗೆಳೆಯ ಅವನ ವಿಚಾರಣೆ ಮಾಡ್ತಾನೆ. ಆಗ ಅವನ ತಮ್ಮ ಹೇಳ್ತಾನೆ. ಇಂಗಿಂಗೆ ನಾನು ಅವತ್ತು ಹೊಲ ಉಳ್ತಾ ಇದ್ದೆ. ಆಗ ದಾರೀಲಿ ಒಂದು ಹುಡುಗಿ ಹೋಯ್ತಾ ಇದ್ಲು. ಅವ್ರುಳು ನನ್ನ ನೋಡುದ್ಲು ನಾನು ನೋಡ್ದೆ ಆದರೆ ಮಾತಾಡುಕೆ ಆಗ್ಲಿಲ್ಲ. ಈ ಮರದ ಕೆಳಕೆ ಕುಂತಿದ್ದು ಈ ರೀತಿ ಹುಲ್ಲ ಸಿಂಬಿ ಹೂಡ್ಬುಟ್ಟು ಮ್ಯಾಲೆ ಒಂದು ಕಲ್ಲು ಮಡುಗ್ಬುಟ್ಟುಹೊಂಟೋಗವಳೆ. ಅವತಿಂದ ನನಗೆ ಅದೇ ಚಿಂತೆ ಆಗ್ಬುಟದೆ. ನಾನು ಅವಳ್ನ ನೋಡಬೇಕು ಇಲ್ಲ ಅಂದ್ರೆ ನಾನು ಸತ್ತೋಯ್ತಿನಿ ಅಂತಾನೆ. ಸರಿ ಬಾ ಆಮರ ತೋರ್ಸು ಅಂತಾನೆ ಅವನ ಗಹೆಳೆಯ. ಸರಿ ಅಂತ ತೋರಿಸ್ತಾನೆ. ನೋಡ್ತಾ ಗೆಳೆಯ ಓಹೋ ಇದರ ಅರ್ಥ ನೆಲ್ಲೂರಿಂದ ಕಲ್ಲೂರಿಗೆ ನನ್ನ ಕೊಟ್ಟದೆ ಅಂಥ ಅರ್ಥ ಅಂತಾನೆ. ಅವಳನ್ನ ನಾನು ನೋಡ್ಲೇಬೇಕು ಇಲ್ದಿದ್ರೆ ನಾನು ಸತ್ತೋಯ್ತಿನಿ ಅಂತಾನೆ. ಸರಿ ಆಯ್ತು ನಡಿ ಅಂತ ಹುಡಿಕಂದು ಹೋಯ್ತಾರೆ. ಇವನು ಅವ್ರುಳ್ನ ನೋಡವನೆ ಆದ್ರೆ ಗೆಳೆಯನಿಗೆ ಅವಳು ಗೊತ್ತಿಲ್ಲ ಎಂಗಿದಳು ಅಂತ. ಮನೆಗೋದ್ರೆ ಜನ ಬುಟ್ಟಾರೆ ಯಾರು ಅಂತಾನು ಹೆಸ್ರು ಕುಲಗೊತ್ತಿಲ್ಲ ಏನ್ಮಾಡುದು ಅಂತ ಒಂದು ಬುದ್ಧಿ ಓಡಿಸ್ತಾರೆ. ಹೆಂಗಸುರು ನೀರುಗೋಗೋ ಜಾಗದೆಲಿ ಕುಂತ್ಕತರೆ ಊರಿನ ಹೆಂಗ್ಸಲ್ರು ನೀರಿಗೆ

ಬತ್ತರೆ. ಅವನ ಗೆಳೆಯ ಇವಳೆ. ಇಲ್ಲ ಇವಳೆ ಇವಳೆ ಅಂತ ಕೇಳ್ತಾನೆ. ಇವುನು ಇಲ್ಲ, ಇಲ್ಲ ಇವಳಲ್ಲ ಅಂತಾನೇ ಹೇಳ್ತಾನೆ. ಅವಳು ಲಾಸ್ಟೇಲಿ ಬತ್ತಾಳೆ ಅವಳು ಇವನ ನೋಡ್ತಾಳೆ ಇವುನು ಅವಳನ್ನ ನೋಡ್ತಾನೆ. ಅವಳ ಹಿಂದೇನೆ ಹೋಯ್ತಾರೆ. ಹೋಗಿ ಅವರ ಎದುರುಗಡೆ ಮನೆ ಪಡಸಾಲೇಲಿ ತೆಂಗತರೆ. ಇವಳು ಏನ್ಮಾಡ್ತಾಳೆ ಒಳಕೋಗುದು ಈಚುಗ್ಬರುದು ಮೊಕತೊಳೆದು ಹಿಂಗೆ ಮಾಡ್ತಾ ಇರ್ತಾಳೆ. ಇವನಿಗೆ ಗೊತ್ತಾಗೊಲ್ಲು. ಆವಾಗ ಅವನ ಸ್ನೇಹಿತ ಹೇಳ್ತಾನೆ ಇವಳಗಂಡ ಬಣ್ಣ ಹಾಕಂದು ನಾಟಕಕ್ಕೆ ಹೋದನಂತೆ ಅಂತ ಹೇಳ್ತಾನೆ. ಸರಿ ಅಂತ ನಾಟಕ ಹಾಡುಕೆ ಗಂಡ ಹೊಂಟೋಯ್ತಾನೆ. ಮನೇಲಿ ಎಲ್ರು ನಾಟಕ ನೋಡುಕೆ ಹೊಂಟೋಯ್ತಾರೆ. ಅವಳು ನಾನು ಬರಲಿ ಅಂತ ಮನೇಲಿ ಉಳ್ಕತಳೆ. ಸರಿ ನಿನ್ನ ಮನರೋಗ ವಾಸಿ ಆಗಬೇಕಂದ್ರೆ ನೀನು ಹೋಗಿ ಅವಳ ಜೊತೆ ಮಾತಾಡ್ಕಂದು ಬರೋಗಪ್ಪ ಅಂತ ಅವನ್ನ ಅವಳ ಮನೆಗೆ ಕಳಿಸ್ತಾನೆ. ಇವನು ಪಡಸಲೇಲಿ ಮಲಿಕತನೆ ಕೋಳಿಕೂಗು ಹೊತ್ತಾಯ್ತದೆ. ಇವನು ಅವಳ್ನ ಎಬ್ರಿಸ್ದೆ ಇವನೊಬ್ಬನೆ ಎದ್ದು ಬಂದು ಬುಡ್ತಾನೆ. ಆ ಮೇಲೆ ಅವಳ ಗಂಡ ಬಂದು ಪಕ್ಕದೆಲಿ ಮನಿಕತನೆ ಇವಳಿಗೆ ಗೊತ್ತಿಲ್ಲ. ಆಮೇಲೆ ಎಚ್ಚರ ಆಗಿ ಎದ್ದೇಳು ಟೈಮಾಗೋಯ್ತು ನನ್ನ ಗಂಡ ಬಂದು ಬುಡ್ತಾನೆ ಎದ್ದೇಳು ಅಂತ ಏಳಿಸ್ತಿರ್ತಾಳೆ ಗಂಡನಿಗೆ ಅನುಮಾನ ಬಂದುಬುಡ್ತದೆ. ಅವನೇನ್ಮಾಡ್ತಾರೆ ಏಳಳ್ಳಿವುರ್ನ ನ್ಯಾಯಕ್ಕೆ ಕುಂಡ್ರಿಸ್ತಾನೆ. ಯಾಕಿಂಗೆ ಅಂದ್ಲು ಯಾಕೆ ಅಂಗೆ ಇವುಳು ಅಂದ್ಲು ಅಂತ ಕೇಳ್ತಾನೆ. ಇವುನ ಇವನ ಗೆಳೆಯ ದಾರಿಲಿ ನಡ್ಕಂದು ಹೋಯ್ತಾ ಹೋಯ್ತಾ ಗೆಳೆಯ ಕೇಳ್ತಾನೆ. ಬರುವಾಗ ಅವಳನ್ನ ನೀನು ಎಬ್ರುಸುಬುಟ್ಟು ಬಂದ ಅಂತಾನೆ ಇವನು ಇಲ್ಲ ಅಂತಾನೆ ಅಯ್ಯೋ ಬುಟ್ಟರೇನೋ ಅವಳ್ನ ನಿನ್ನಿಂದ ಅವಳ ಸಂಸಾರ ಆಳಾಯ್ತದೆ. ಇಂಗೆ ಮಾಡ್ಬುಟ್ಟು ಬಂದಿದಿಯಲ್ಲ ನೀನು ಬಾ ಅಂತ ತಿರ್ಬಲ ಕರಕಂದು. ಅವನ ಇಂಗಿಂಗೆ ಆಗಿರ್ತದೆ ಅಲ್ಲಿ ಅನ್ಬುಟ್ಟು ಮೂರು ಈಬತ್ತಿ ಉಂಡೆ ತಕ್ಕೊಟ್ಟು ಮಣಿ ರುದ್ರಾಕ್ಷಿ ಮಾಲೆ ಧರಿಸಿ ಕಾವಿ ಕಮಂಡಲ ಎಲ್ಲನು ಇವನ್ಗೆ ಕೊಟ್ಟು ನೀನು ಅಲ್ಲಿಗೆ ಹೋಗಿ ಮಕ್ಳು ಮರಿ ಹೆಂಗಸ್ರು ಗಂಡುಸ್ರು ಯಾರನ್ನು ಬಿಡ್ದೆ ಈಬತ್ತಿ ಇಕ್ಕಬಂದುಬುಡು ಆಗ ಅವಳಿಗೆ ಮಾತಾಡುಕೆ ಸರಿ ಹೋಯ್ತದೆ ಅಂತ ಹೇಳಿಕಳಿಸ್ತಾನೆ. ಇವನು ಅಂಗೇ ಮಾಡ್ತಾನೆ. ಮಕ್ಳುಮರಿ ಚಿಕ್ಕೋರು ದೊಡ್ಡೋರು ಹೆಂಗಸ್ರು ಗಂಡುಸ್ರು ಅಂದೇನೆ ಎಲ್ರುಗು ಈಬತ್ತಿ ಇಕ್ಕಂದು ಬಂದು ನಿಂತಕತನೆ. ಅವಳಿಗೆ ಇಕ್ಕುವಾಗ ಅವಳನ್ನ ನೋಡ್ತಾನೆ. ಅವುಗಳಿಗೆ ಗೊತ್ತಾಯ್ತದೆ. ಈಬತ್ತಿ ಇಕ್ಬುಟ್ಟು ಸುಮ್ಮನೆ ಬಂದು ನಿಂತ್ಕತನೆ. ಅರಳಿ ಮರದ ಕಟ್ಟೆ ಹತ್ರ ನ್ಯಾಯ ಮಾಡ್ತ ಇರ್ತಾ ಅಲ್ಲಿ ಯಾರು ಕೂಡ ಸುಳ್ಳೇಳಬಾರದು ಸತ್ಯವನ್ನೇ ಹೇಳಬೇಕು. ಆಗ ಪಂಚಾಯ್ತಿಲಿ ಕೇಳ್ತಾರೆ ಯಾಕಮ್ಮ ಅಂಗೆಮಾಡ್ದೆ ನೀನು ಯಾರನಮ್ಮ ಅಂದೇನೀನು ಅಂತ ಕೇಳ್ತಾರೆ. ಇವಳು ಸ್ವಾಮಿ ಸತ್ಯವಾಗ್ಲು ನಾನು ಈಬತ್ತಿಧಾರಣೆ ಮಾಡ್ದೋರು ಬುಟ್ಟು, ನನ್ನ ಗಂಡನ್ನ ಬುಟ್ಟು ನಾನು ಒಬ್ರುನ್ನು ಮುಟ್ಟಿಲ್ಲ ಸ್ವಾಮಿ ಅಂತ ಹೇಳ್ತಾಳೆ. ಆಗ ಪಂಚಾಯ್ತಿಲಿದ್ದೋರೆಲ್ಲ ಓಹೋ ನೋಡ್ರಾ ಇಂತ ಸತ್ಯವಂತೆ ಮ್ಯಾಲೆ ನೀನು ದೂರು ಕೊಡ್ತಿಯಲ್ಲ ಇಂತ ಅನ್ಯಾಯ ಮಾತಾಡ್ತಿಯಲ್ಲ ನಿನಗೆ ಧರ್ಮನೆ ಅನ್ಬುಟ್ಟು ಅವಳ ಗಂಡನಿಗೆ ಬೋದಿ ಕಳಿಸ್ತಾರೆ. ಆಗ ಅವರ ಸಂಸಾರನು ಚೆನ್ನಾಗಿರ್ತದೆ. ಇವನ ಮನೋರೋಗವು ಹೋಯ್ತಾದೆ ಎಲ್ರು ಚೆನ್ನಾಗಿರ್ತಾರೆ.

ಕಬ್ಬಾಳಮ್ಮನ ಹಾಡು

ಜಾಲಾದೂವಿನ ಜಡೆಯೋಳೆ ಕಾಳವ್ವ
ಜಾಣೆ ಕುಂತವಳೆ ಗರಡೀಲಿ
||ಎದ್ದು ಬಾರೆ||
ಕಬ್ಬಾಳಮ್ಮನಿಗೆ ಕಬ್ಬುಣದ ಉಯ್ಯಾಲೆ
ಗುಬ್ಬಿ ಮಾಣುಕುದ ಅರುಳೋಲೆ
||ಎದ್ದು ಬಾರೆ||
ಕೊಂಡಾದ ಸುತ್ತ ಇಂಡೆಮ್ಮೆ ಮೇಯ್ಯೂಳೆ
ಅಂಡೇಲಿ ಹಾಲ ಕರೆಯೋಳೆ
ಅಂಡೇಲಿ ಹಾಲ ಕರೆಯೋಳೆ ಕಾಳವ್ವ
ಅಂಡೆತುಂಬಿ ಹಾಲು ಹರಿದಾವೋ
ಅಂಡೆತುಂಬಿ ಹಾಲು ಹರಿದಾವೋ ಕಾಳವ್ವ
ನಿನಕೊಂಡ ತುಂಬಿ ಹಾಲು ಹರಿದಾವೋ
||ಎದ್ದು ಬಾರೆ||
ಕೊಂಡಾದ ಸುತ್ತಾ ಇಂಬೀಯ ಗಿಡ ಹುಟ್ಟಿ
ಕಳ್ಳಾರು ಕುಯ್ಯುವಾಗ ಕಸುಗಾಯಿ
ಕಳ್ಳರು ಕುಯ್ಯುವಾಗ ಕಸುಗಾಯಿ ಕಾಳವ್ವ
ನಿನ ಗಂಡ ಕುಯ್ಯುವಾಗ ಗಜನಿಂಬಿ
||ಎದ್ದು ಬಾರೆ||
ಹಿತ್ಲು ಮನೆಯೋಳೆ ಈರೆಕಾಯಿನ ನರಿಯೋಳೆ
ಸುತ್ತು ಚಾವಡಿಯ ಮನೆಯೋಳೆ
ಸುತ್ತಾಚಾವಾಡಿ ಮನೆಯೋಳು ಕಬ್ಬಾಳಮ್ಮ
ನಾನು ಸುತ್ತಿ ಬರುಲಾರೆ ಧನಿತೋರೆ
||ಎದ್ದು ಬಾರೆ||

ಕಬ್ಬಾಳಮ್ಮ

ಹೆಸರಿಲ್ಲದ ಕಬ್ಬಾಳು ಹೆಸರೆತ್ತುಕೆ ನೀರಿಲ್ಲ
ಕುಶುಲಾದ ಶಿವುಡು ಬರಿಬಿಂದಿಗೆ ಮಲೆಯಕಾಳಿ
ಬಿಸಿಲೆಲಿ ಕಾಳವ್ವನ ನೆನೆದೇನು
ಬಿಸಿಲೆಲಿ ಕಾಳವ್ವನ ನೆನೆದ ಕಾರಣದಿಂದ
ಕೆರೆಗೆ ಕಾರಂಜಿ ಕರಿತಾಳೆ

ಕೊಂಡಾದ ಸುತ್ತ ಯಿಂಬೀಯ ಗಿಡಹುಟ್ಟಿ
ಕಂಡೋರು ಕೂದಾರೆ ಕಸಿಕಾಯಿ
ಕಂಡೋರು ಕೂದಾರೆ ಕಸಿಕಾಯಿ ಮಲೆಯಕಾಳಿ
ನಿನ್ನ ಗಂಡ ಕೂದಾರೆ ಗಜನಿಂಬೆ

ಮೂಗುತಿ ಮುಂಬಾರ ಎಣೆಗಂಟು ಹಿಂಬಾರ
ಎಂಟೆಳೆಗುಂಡು ಎದೆಬಾರ
ಎಂಟೆಳೆಗುಂಡು ಎದೆಬಾರ ಮಲೆಯಕಾಳಿ
ನಿನ್ನಸಣ್ಣಂಚಿನ ಸೀರೆ ನರಿಬಾರ

ರುದ್ರಗ್ಯಾಪ್ಪಿಂದ ಒದ್ನಲ್ಲೆ ದಾರಾಂದ
ನುಗ್ಗುನುರಿಯಾದೊ ಮರದಲಗೆ
ನುಗ್ಗುನುರಿಯಾದೊ ಮರದಲಗೆ ಮಲೆಯಕಾಳಿ
ನಿನ್ನರುದ್ರುಗ್ಯಾಪಾಕೆ ಎದುರುವ್ವ

ನೆತ್ತಿಮ್ಯಾಲೆ ಸಿವುಲೂಡಿ ಪೊತ್ತಾಳ್ ಹೊನ್ನೇಕಳಸ
ಎತ್ತಗೋಗಿದ್ದವ್ವ ಹೊಸಕಾಂತಿ
ಎತ್ತಗೋಗಿದ್ದವ್ವ ಹೊಸಕಾಂತಿ ಕಬ್ಬಾಳಮ್ಮ
ನೀ ಹುಟ್ಟೇರು ತಳವ ಹೆಸರೇಳವ್ವ
ನಾ ಹುಟ್ಟೇರುದು ಕೊಂಗರಾಜ್ಯ
ಬೆಳೆವೂದು ಕಬ್ಬಾಳು
ನಾಳೆ ಹೋದಂತ ಹುಯ್ಲೇಲಿ

ನಾಳೆ ಹೋದಂತ ಹುಯ್ನೋಲಿ ಮಲೆಯಕಾಳಿ
ಆಗ ಬಂದಿ ಭೀಮಯ್ಯನ ದುರ್ಗಾಕೆ
ದುರ್ಗಾದ ಸುತ್ತ ದುರ್ಗಿ ಅನ್ನಿಗಂಡಿ
ನಡುರಾಜ್ಯದಲ್ಲಿ ನೆಲೆಗೊಂಡಿ
ಸತ್ತಿಗ್ ಸವಾರ ಮುತ್ತಿನಕೋಲು ಮುನ್ನೂರು
ಪಂಜೀನ ಕೋಲು ಎಂಬೈನೂರು
ಪಂಜೀನ ಕೋಲು ಎಂಬೈನೂರು ಸವಾರಾ
ರಂಬೆ ಒಳಮೆಟ್ಟಿ ಬರುವಾಗ
ಹೊಂಬಾಳೆ ಉದುರೀವೋ ಥಾಣ ಜಗ್ರಿಸೀವೋ
ತುಂಬಿದ್ದ ಗಿಂಡಿ ತುಳುಕೀವೋ
ತುಂಬಿದ್ದ ಗಿಂಡಿ ತುಳುಕೀವಲ್ಲೇ ಮಲೆಯಕಾಳಿ
ನಿನ ರಂಬೆ ಹೊಳೆಮೆಟ್ಟಿ ಬರುವಾಗ
ಪೂಜಿ ಹೊತ್ತೋಯ್ತು, ಪೂಜಾರೆಲ್ಲಿಗೋದ
ಚೂಜಿಮಲ್ಲೀಗೆ ವನಕೋದ
ಚೂಜಿ ಮಲ್ಲೀಗೆ ವನಕೋದ ಪೂಜಾರಿ
ಚೂಜೀಲಿ ಮುತ್ತ ಸರದಾರೊ
ಕುಂಬಾರ್ ಗೇರಿಗಾಣೆ ರಂಬೆಹೋದ ಮಲೆಯಕಾಳಿ
ಕುಂಬಾರ್‌ರ ಮಗನ ಕರೆದಾಳೋ
ಕುಂಬಾರ್‌ರ ಮಗನ ಕರೆದು ಏನೆಂದಾಳೋ
ಬಾಮವಾಗಿ ಮಾಡು ಹಸಿಕರಗ

(ಏಳುಜನ ಮಕ್ಕಳು ಸೇರಿ ಹಸಿಕರಗ ತರುತ್ತಾರೆ. ಕೋಳಿ ಕೂಗೊ ಹೊತ್ತಿಗೆ ಕೇಲ್(ಹಸಿಕರಗ) ತರುತ್ತಾರೆ. ಏಳುಜನ ಹಸುಮಕ್ಕಳು ಜೀರಂಗದ ಧರಿಸಿ ಮಡಕೆಯಿಂದ ಮಜ್ಜಣದ ಕೋಣದಿಂದ ಕರಗವನ್ನು ತರುತ್ತಾರೆ. ಮಕ್ಕಳು ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳು ಎಲ್ಲರೂ ಸೇರಿ ತರುತ್ತಾರೆ).

ಬೀದಿ ಮನೆಯೋಳೆ ಬೀಸಣಿಗೆ ನರಿಯೋಳೆ
ಜಾಲಾದೂವಿನ ಜೆಡೆಯೋಳೆ
ಜಾಲದೂವಿನ ಜೆಡೆಯೋಳೆ ಮಲೆಯಕಾಳಿ
ನಿನ್ನ ಜಡೆಯಲ್ಲಿ ಮುತ್ತು ಜಲಿರೆಂದೊ
ಕೈಲಿ ಬೆತ್ತದ ಕೋಲು ಕಂಕಳಲ್ಲಿ ಕೊರವಂಜಿ ಗೂಡು
ಕಣಿವೆ ಸಾಲಲ್ಲಿ ಬರುವೋಳೆ
ಕಣಿವೆ ಸಾಲಲ್ಲಿ ಬರುವೋಳೆ ಮಲೆಯಕಾಳಿ

ನಿನ್ನ ಕಣೆಯ ಕೇಳೂರು ಗಡಿಯಿಲ್ಲ

ಎಲ್ಲಾರಾಡೀರೊ ನೆಲ್ಲಕ್ಕಿ ಪಗಡೇಯ
ನಲ್ಲರೈನ ಮಗಳು ಮಲೆಯಕಾಳಿ
ನಲ್ಲರೈವ ಮಗಳು ಮಲೆಯಕಾಳಾಡೀಳೋ
ತನುಗೆಂಡದಲ್ಲಿ ಪಗಡೇಯ

ಬಿದಿರ ಕಾಳಿ ತಾಳೆಹೂವಲ್ಲ ತೆರೆಯಬಣ್ಣ
ತಾಳೆಹೂವಲ್ಲ ತೆರೆಯಬಣ್ಣ ತಂದೀವ್ನಿ
ಚಿನ್ನಾದ ಚಿಲ್ಕ ಸಡಿಲಿಸವ್ವ

ಬಾಣ್ತ ಮಲೆಯಕಾಳಿ ಬಾಕಿಲೀಗೆ ನಾಹೋದೆ
ಮೇಗದಿಂದಿಟ್ಟ ಚಿಲಕಾನ
ಮೇಗ ದಿಂದಿಟ್ಟ ಚಿಲಕ ಚಿನ್ನದ ಬಟ್ಟ
ಸೋಗುಲಗೆ ಹೋದ ಸುರೆಹೊನ್ನ
ಮಜ್ಜನಕೆ ಮಗಳಾದ ಚಜ್ಜಣಕೆ ಸೊಸೆಯಾದೆ
ನಿನ್ನ ಪಾದದೂಳ್‌ತೆಗೆ ಮನೆಮಗಳು
ನಿನ್ನ ಪಾದದೂಳತೆಗೆ ಮನೆಮಗಳು ಕಬ್ಬಾಳಿ
ನೀ ಒಪ್ಪೀದ ವರವ ಕೊಡುನಗೆ
ಕರಿ ಅಂಚಿನ ಸೀರೆ ಕಣಕಾಲಿಗೆ ಹರಿಸೀನ
ಕೆಣಕಿನೋಡವಳ ಕಿಡಿಗಣ್ಣ
ಕೆಣಕಿನೋಡವಳ ಕಿಡಿಗಣ್ಣ ಮಲೆಯಕಾಳಿ
ಮರತೋರ ಮನೆಯ ಮುರುದೋಳ

ಉದ್ರಂಡ ಮಲ್ಲಿ(ಮನೇಲಿ) ನಿದ್ರೆ ಮಾಡೋಳ್ಯಾರೆ
ಮುಗ್ಗು ತಂದೀವ್ನಿ ಮುಡಿಬವ್ವ
ಮುಗ್ಗುತಂದೀವ್ನಿ ಮುಡಿಬವ್ವ ಮಲೆಯಕಾಳಿ
ನಾ ಗೆಜ್ಜೆ ತಂದೀವ್ನಿ ದರಸೇಳು

ಕರಗದ ಮನೆಯಿಂದ ಕಡೆದು ಬಾರೆ ಮಲೆಯಕಾಳಿ
ಕಾದು ನಿಂತವರೆ ನಿನಮಕ್ಕಳು
ಕಾದುನಿಂದವರೆ ನಿನ ಮಕ್ಕು ಏಳಳ್ಳಿವ್ರು
ದೂಳು ಗೊಂಡಾಕೆ ಇದುರಾಗಿ
ಈರು ಮಕ್ಕಾಳು ಕೀರು ಗಂಧಾ ಧರಿಸಿ

ಉಂಡುಂಡು ಇಳ್ಳೇವ ಎಳೆದಾರೋ
ಉಂಡುಂಡು ಇಳ್ಳೇವ ಎಳೆದಾರೋಮಲೆಯಕಾಳಿ
ನಿನ ಕೊಂಡಾಕೆ ಎಳೆವಾರ ಹೊಡೀತಾರೆ

ಸೊಸೆಯರಾರೂತಿ ಹೆಸಳು ತುಂಡಾವಂದ
ಮುಂದಾಲಾಡುವ ಹೆಣ್ಣುಮಗಳು
ಮುಂದಾಲಾಡುವ ಹೆಣ್ಣಮಗಳ ಆರುತಿ
ಮುಂಗಾರು ಮಿಂಚು ಹೊಳದಂಗೆ

ಕಬ್ಬಾಳ ಕಣಿವೇಲಿ ಕಾರೇಯ ತಾಳೇಲಿ
ಬಾಳೇಯ ಕಟ್ಟೆಯ ಬಯಲಲ್ಲಿ
ಬಾಳೇಯ ಕಟ್ಟೆ ಬಯಲಲ್ಲಿ ಕಾಳವ್ವ
ಜೂಜಾಡಿ ಗೆದ್ದ ದುರುಗಾವ
ದುರ್ಗಾವ ಏರಿ ದುರುದುರನೆ ನೋಡಾಳೊ
ನೊರನೊರನೆ ಅಲ್ಲ ಕಡಿದಾಳೊ
ನೂರನೊರನೆ ಹಲ್ಲ ಕಡಿದಾಳೊ ಕಾಳವ್ವ
ನನ್ನೆಚ್ಚಳದ ಬಂಡಿ ಬರಲಿಲ್ಲ

ಭೀಮ ದೇವರ ತಂಗಿ ಬಿತ್ತರಕಾತಿ ಮಲೆಯಕಾಳವ್ವ
ಬೇವಿನಸೊಪ್ಪು ಮಡಿಲೆಲಿ
ಬೇವಿನಸೊಪ್ಪು ಮಡಿಲೆಲಿ ತುಂಬಿಕೊಂಡು ಕಾಳವ್ವ
ಭೀಮದೇವರ ದಂಡ ತಡದಾಳೊ

ಉಂಗುರದ ಕಾಲ ಊರೂತ ಜಾರುತ
ಬಂಗಾರದ ನಡುವ ಬಳೂಕೂತ
ಬಂಗಾರದ ನಡುವ ಬಳೂಕೂತ ಕಾಳವ್ವ
ಬಂದಾಳೋ ಬಳೆಯ ಕೇರಿಗೆ
ಬಂದಾಳೊ ಬಳೆಯ ಕೇರಿಗೆ ಕಾಳವ್ವ
ಬೇಕಾದ ಬಳೆಯ ಧರಿಸಾಳೊ

ಕಬ್ಬಾಳಮ್ಮನ ಹಾಡು

ಉಯ್ಯೋ ಮಳೆಯೇ ಹೂವಿನ ಮಳೆಯೇ
ಅನ್ನಕೊಡುವಂತ ಚಿನ್ನದ ಮಳೆಯೇ ಉಯ್ಯೋ ಮಳೆಯೇ
ಕಬ್ಬಾಳಮ್ಮನ್ಗೇ ಕಬ್ಬುಣದ ಉಯ್ಯಾಲೆ
ವಜ್ರುದಗಿಂಡ ತಲೆ ಮ್ಯಾಲೆ ಉಯ್ಯೋ ಮಳೆಯೆ
ವಜ್ರುದಾಗಿಂಡೀ ತಲೆಮ್ಯಾಲೆ ಒತ್ತಿಕೊಂಡೊ
ಹೊಳೆ ಮೆಟ್ಟಿ ತಾಯಿ ಬರುವಾಗ ಉಯ್ಯೋ ಮಳೆಯೆ
ಒಳೆಮಟ್ಟೀ ತಾಯೀ ಬರುವಾಗ ಕಾಳವ್ವ
ಇಟ್ಟಾಡಿ ಬಂದೊ ಈಡುಗಾಯಿ ಉಯ್ಯೋ ಮಳೆಯೆ
ಉಯ್ಯೋ ಮಳೆಯೋ ಹೂವಿನ ಮಳೆಯೇ
ಅನ್ನ ಕೊಡುವಂತ ಚಿನ್ನದ ಮಳೆಯೆ ಉಯ್ಯೇ ಮಳೆಯೇ
ಇಟ್ಟಾಡಿ ಬಂದೋ ಈಡುಗಾಯಿ ಕಾಳವ್ವ
ತಟ್ಟಾಡಿ ಬಂದೊ ಕೈಯ್ಯಾ ಪಂಜು ಉಯ್ಯೆ ಮಳೆಯೇ
ಕರಗುದ ಮನೆಯೋಳೇ ಕರೆದರೆ ಮಾತಾಡೋಳೇ
ಕರಗಾಬಂದಾವೆ ಹೊರುಬಾರೆ ಉಯ್ಯೋ ಮಳೆಯೇ
ಕರಗ ಬಂದಾವೇ ಹೊರುಬಾರೆ ಕಾಳವ್ವ
ಕಬ್ಬಾಳು ಬೀದಿಲಿ ಮೆರೀಬಾರೆ ಉಯ್ಯೋ ಮಳೆಯೇ
ಕಬ್ಬಾಳು ಕಾಡಿನಲಿ ಕಾರೇಯ ತಾಳೇಲೀ
ಬಾಳೇಯ ಕಟ್ಟೆ ಬಯಲೇಲಿ ಉಯ್ಯೋ ಮಳೆಯೋ
ಬಾಳೆಯಾ ಕಟ್ಟೆ ಬಯಲೇಲಿ ಉಯ್ಯೋ ಮಳೆಯೋ
ಬಾಳೆಯಾ ಕಟ್ಟೀ ಬಯಲೇಲಿ ಕೂತಿಕೊಂಡು
ನೂರೊಂದು ಜಡೆಯ ಒದುರಾವಳೆ ಉಯ್ಯೋ ಮಳೆಯೆ
ನೂರೊಂದು ಜಡೆಯಾ ಒದುರಾವಳೆ ಕಾಳವ್ವ
ವಾಲಾಡಿ ಮಂಡೆ ಒದುರವಳೆ ಉಯ್ಯೋ ಮಳೆಯೇ
ವಾಲಾಡಿ ಮಡೆ ಒದುರಾಳೋ ಕಾಳವ್ವ
ಜೂಜಾಡಿ ಗೆದ್ದು ದುರುಗಾವ ಉಯ್ಯೋ ಮಳೆಯೇ

ದಲ್ಲಾಳಿ ಬಣಜಿಗ

ದಲ್ಲಾಳಿ ಬಣಜಿಗ ಎಳ್ಳು ಕೊಳ್ಳೋಕೆ ಬಂದ
ಎಳ್ಳುಂಟೆನಾರಿ ಮದನ ಸುಂದಾರಿ
ನಾರೀಗೆ ನಾರಿ ಮದನ ಸುಂದಾರಿ
ಏಲಕ್ಕಿ ಜಾರಿ ಎಳಿಯೊಳೆ ನಾರಿ
ಮೂಡುಲು ದಿಕ್ಕೀಗೆ ಮೂಡಲು ಕೆಬ್ಬೇ ಹೊಲ
ಕಾರಂಜಿಯಂತೆ ಕಾರೆಳ್ಳು ನಾರಿ
ಕಾರಂಜಿಯಂತೆ ಕಾರೆಳ್ಳ ತೋರಿವಿನಿ
ದಾರಾಣೆಕೇಳಿ ಬರೋಗಯ್ಯ ನಾರಿ
||ನಾರೀಗೆ ನಾರಿ||

ದಾರಾಣೆ ಕೇಳಿವ್ನಿ ಧರ್ಮರ ಕೊಳಗ ತಂದಿವ್ನಿ
ಹೊಸಕೋಟೆಯಿಂದ ಹೊಸಗೋಣಿ ನಾರಿ
ಹೊಸಕೋಟಿಯಿಂದ ಹೊಸಗೋಣೆ ತಂದಿವ್ನಿ
ಕುಸುಬಾಲೆ ಎಳ್ಳ ಅಳೆಯೋಳೆನಾರಿ
||ನಾರೀಗೆ ನಾರಿ||

ಕುಸುಬಾಲೆ ಎನ್ನಬ್ಯಾಡ ದೆಸವಂತ ಬಣಜಿಗ
ಅಸಮಾನಗಾರ ಮೈಯ್ಯದಯ್ಯ ನಾರಿ
ನನ್ನಸಮಾನಗಾರ ಮೈದಯ್ಯ ಕಂಡರೆ
ಒಸಲೀಗೆ ಶಿರುಸ ಕಡಿಯೋರು ನಾರಿ
||ನಾರೀಗೆ ನಾರಿ||

ಒಸಲೀಗೆ ಶಿರುಸ ಕಡಿವ್ಹೋರು ಬಣಜಿಗ
ದಂಡತರುವ್ಹೋರಂದರ ಮನೆಗೆ ನಾರಿ
ದಂಡ ತರುಸುದುರೆ ಹಿಂಡೆಮ್ಮೆ ಒಡೆಯುವೆ
ನನ್ನಿಂಡುರು ಮಕ್ಕಳುಗೆ ಕೈಯಸೋರೆ ನಾರಿ
ನನ್ನಿಂಡುರು ಮಕ್ಕಳುಗೆ ಕೈಸೋರೆ ಕೊಟ್ಟರೆ

ದುಂಡೀ ನಿನತೋಳ ಬಿಡಲಾರೆ ನಾರಿ

||ನಾರೀಗೆ ನಾರಿ||

ಚಿತ್ತರುದ ರಂಗೋಲೆ ಚಿಕ್ಕಂಕುಣದಾ ಅಟ್ಟೆ
ಚಿಕ್ಕ ಕಲ್ಲುಬಾವಿ ಒಳಗಿರುವನಾರಿ
ಚಿಕ್ಕ ಕಲ್ಲುಬಾವಿ ಒಳಗಿರುವ ಒಕ್ಕಲುಗಿತ್ತಿ
ಚಿಕ್ಕೆಣ್ಣೆ ನೀರ ಕೊಡಬಾರೆ ನಾರಿ

||ನಾರೀಗೆ ನಾರಿ||

ನೀರು ಕೊಡುವೋಕೆ ನೀನ್ಯಾರೊ ನಾನ್ಯಾರೊ
ಹೋಗಯ್ಯ ಹರಿವ ಜಲದಿಗೆ ನಾರಿ
ಕೆರೆನೀರು ಕೆಂಬದಿ ಬಾವಿನೀರು ಬಗೆಬಗೆ
ನಿನ ಕಡುಗದ ಕೈನೀರು ಕಡುರುತಿನಾರಿ

||ನಾರೀಗೆ ನಾರಿ||

ನನ್ನ ಕೈನೀರು ನಿನಗೆಲ್ಲಿ ಸಲುಹುದು
ಲಕ್ಷಾಂಪತಿ ಎಂಬ ಪತಿ ದೇವರಿಗೆ ನಾರಿ
ನನ್ನ ಲಕ್ಷಾಂಪತಿ ಎಂಬ ಪತಿದೇವರಿಗೆ ಕೊಟ್ಟರೆ
ನನ್ನೆತ್ತ್ತೋರಿಗೆ ಧರ್ಮ ಬರುವುದು ನಾರಿ

||ನಾರೀಗೆ ನಾರಿ||

ಆರುಬೆರಳಿಗೆ ಮಾಡಿಸಿದ ಹೊನ್ನುಂಗರ
ಹೋರೀಗೆ ಹುಲ್ಲ ಎಳೆವೋರು ನಾರಿ
ಹೋರೀಗೆ ಹುಲ್ಲು ಎಳೆವಾನಮ್ಮ ರಾಯರ
ಆಯ್ಕಟ್ಟ ನೋಡೋ ಬಣಜಿಗ ನಾರಿ

||ನಾರೀಗೆ ನಾರಿ||

ಹತ್ತು ಬೆರಳಿಗೆ ಕೆತ್ತಿಸುದ ಹೊನ್ನುಂಗುರ
ಎತ್ತೀಗೆ ಹುಲ್ಲ ಎಳೆಯೋರು ನಾರಿ
ಎತ್ತೀಗೆ ಹುಲ್ಲ ಎಳೆವಾ ನಮ್ಮ ರಾಯರ
ಅಚ್ಚುಕಟ್ಟು ನೋಡೋ ಬಣಜಿಗ ನಾರಿ

||ನಾರೀಗೆ ನಾರಿ||

ಜಾಲಾದ ವಲಕೆ ಕೂಳೂ ಕೊಂಡೊಯ್ಯೋಳೆ
ಚಿಕ್ಕದುರುಬೀನ ಕಡುಚೆಲುವೆ ನಾರಿ

ಚಿಕ್ಕದುರುಬೀನ ಕಡುಚೆಲುವೆ ಒಕ್ಕಲಗಿತ್ತಿ
ಇತ್ತೊಂದು ತುತ್ತ ದಯವಿಡೆ ನಾರಿ
||ನಾರೀಗೆ ನಾರಿ||

ಒಬ್ಬುರುಗಟ್ಟಡುಗೆ ಇಬ್ಬರೂಗೆ ಆಗುವುದೆ
ಇಬ್ಬಂದಿ ತಾರ ಬಣಜಿಗ ನಾರಿ
ಇಬ್ಬಂದಿ ತಾರ ಬಣಜಿಗ ನಮ್ಮ ತಾಯಿತಂದೆ
ಒಬ್ಬುರುಗೆ ದಾರೆ ಎಳೆದವರೆ ನಾರಿ
||ನಾರೀಗೆ ನಾರಿ||

ಎಲ್ಲದರಲ್ಲೂ ಗೆದ್ದೆ ಬಲ್ಲವಳು ಒಕ್ಕಲಗಿತಿ
ಕೊಳ್ಳೆ ನನಕೈನಾ ಅಡಿಕೆ ಎಲೆ ನಾರಿ
ಕೊಳ್ಳೆ ನನ ಕೈನ ಅಡಿಕೆ ಎಲೆ ಒಕ್ಕಲಗಿತ್ತಿ
ಅಳ್ಳಾದಿಂದಾಚೆ ನೆನಕೊಳೆನಾರಿ
||ನಾರೀಗೆ ನಾರಿ||

ನಾನೆನೆವೆ ನನ್ನಪ್ಪನ ನಾನೆನೆವೆ ನಮ್ಮವ್ವನಾ
ನಾನೆನೆವೆ ನನ್ನೆಹಳ ಬಣಜಿಗ ನಾರಿ
ನಾನೆನೆವೆ ನನ್ನೆಹಳ ಬಳಗಾನ ಬಣಜಿಗ
ನಿನ್ಯಾಕೊ ನೆನೆಯಲಿ ನನ್ನ ಹೊಸನಾಯಿ ನಾರಿ
||ನಾರೀಗೆ ನಾರಿ||

ಸಿದ್ದಪ್ಪಾಜಿ ಹಾಡು

"ಕಣ್ಣೆತ್ತಿ ನೋಡಿರವ್ವಾ ಕಂಡಾಯ್ದು ಮೂರುತಿಯಾ
ಕಣ್ಣಾರೆ ಕಂಡು ಕೈಯಮುಗಿದು ದಾನಾವ ನೀಡಿರವ್ವ"
ಸಿದ್ದಯ್ಯನ ಮೊಕದಲ್ಲೀ ಎದ್ದೂ ಬೀಸುವನ್ಯಾರೋ
ಸಿದ್ದಯ್ಯನ ತಂಗಿ ಶಿವಶರಣೆ ಕಣ್ಣೆತ್ತಿ ನೋಡಿರವ್ವ
ಸಿದ್ದಯ್ಯನ ತಂಗಿ ಶಿವಶರಣೆ ಚೆನ್ನಾಜಮ್ಮ
ಅವಳೆದ್ದು ಶಿರರಿಯ ನೆನೆದಾಳೋ ಕಣ್ಣೆತ್ತಿ ನೋಡಿರವ್ವ
||ಕಣ್ಣೆತ್ತಿ||

ಭಂಗಿ ಸಿದ್ಧಯ್ಯ ಲಿಂಗಾದ ಗೆಜ್ಜೇಮ್ಯಾಲೇ
ಇಂಬಿ ವನಗೋಳು ಗಿಣಿಗೋದೋ ಕಣ್ಣೆತ್ತಿ ನೋಡಿರವ್ವ
||ಕಣ್ಣೆತ್ತಿ||

ಬನ್ನಿ ಸಿದ್ದಯ್ಯಾ ಬಂದೇಕೆ ಹೋದೀರಿ...
ಮಂದಲಿಗೆ ಅವೆ ಮಡಿ ಆವೆ ಕಣ್ಣೆತ್ತಿ ನೋಡುರವ್ವ
ಕೊಟ್ಟೇರು ಕಂದ ತೊಡೆಮ್ಯಾಲೆ ಮಡಿಕೊಂಡು
ನಿನಗೊಪ್ಪೀದ ಹೆಸರ ಕೆರೆಯಯ್ಯಾ ಕಣ್ಣೆತ್ತಿ ನೋಡಿರವ್ವ
||ಕಣ್ಣೆತ್ತಿ||

ಭೂಮಿ ಸಿದ್ದಯ್ಯಾ ಭೂಮಿ ಎದ್ದೋದೀರೋ
ಭೂಮಿ ಕೂಗುದರೆ ತರಸುಂಟೇ ಕಣ್ಣೆತ್ತಿ ನೋಡುರವ್ವ
ಭೂಮಿ ತೂಗುದರೇ ತರಸುಂಟಿ ದೊಡ್ಡವರೂ
ಅವರು ಭೂಮಿಗೆ ದೊಡ್ಡವರು ಒರಗವರೇ ಕಣ್ಣೆತ್ತಿ ನೋಡಿರವ್ವ
||ಕಣ್ಣೆತ್ತಿ||

ರಾಚುರಾಯರೆನ್ನೂರು ರಾಜ್ಯೇಕೆ ದೊಡ್ಡೋರೂ
ಅವರು ಬಾಕು ಧರಿಸವರೆ ಬಲದೇಲಿ ಕಣ್ಣೆತ್ತಿ ನೋಡಿರವ್ವ
ಬಾಕುಧರಿಸವರೇ ಬಲದೇಲಿ ರಾಚುರಾಯರೂ...
ರೇಖೆ ದರಿಸವರೆ ಹಣೆಮೇಲೇ ಕಣ್ಣೆತ್ತಿ ನೋಡಿರವ್ವ
||ಕಣ್ಣೆತ್ತಿ||

ಒಂದು ಗುಂಡ ಆಸವರೇ ಒಂದುಗುಂಡ ಹೊದ್ದವರೇ
ಅವರು ನಿದ್ದಾರೆ ಬಂದು ಎದೆಯ ಮೇಲೆ ಕಣ್ಣೆತ್ತಿ ನೋಡಿರವ್ವ
ಮಿಕ್ಕಿದಾಗುಂಡೊ ಎದೆಮ್ಯಾಲೆ ಎಳೆಕೊಂಡೊ
ಅವರು ನಿದ್ದಾರೆ ಬಂದು ಒರಗವರೇ ಕಣ್ಣೆತ್ತಿನೋಡುರವ್ವ
||ಕಣ್ಣೆತ್ತಿ||

ಹಾವೀನ ಆಸೀಗೇ ಚೌಳೀನ ತಲೆದಿಂಬು
ಹೆಬ್ಬಾವ್ನ ಕಂತೆ ಹೆಗಲಮೇಲೆ ಕಣ್ಣೆತ್ತಿ ನೋಡಿರವ್ವಾ
ಹೆಬ್ಬಾವ್ನ ಕಂತೇ ಹೆಗಲಮ್ಯಾಲೆ ಎಳುಕಂದೂ
ಅವರು ನಿದ್ದಾರೆ ಬಂದು ಒರುಗವರೇ ಕಣ್ಣೆತ್ತಿ ನೋಡಿರವ್ವಾ
||ಕಣ್ಣೆತ್ತಿ||

ಭೂಮಿ ಹುಟ್ಟುಕುಮುಂದೇ ಭೂಲೋಕ ಹುಡೋಕುಮುಂದೇ
ಅವರು ತಾವೇ ಹುಟ್ಟಿದರೂ ಬಸವಣ್ಣಾ ಕಣ್ಣೆತ್ತಿ ನೋಡಿರವ್ವ
ತಾವೇ ಹುಟ್ಟಿದರೂ ಬಸವಣ್ಣ ಅವರೀಗ
ಅವರು ಭೂಮಿಗ್ ದೊಡ್ಡವರು ಒರುಗವರೇ ಕಣ್ಣೆತ್ತಿ ನೋಡಿರವ್ವ
||ಕಣ್ಣೆತ್ತಿ||

ರಾಚುರಾಯ್ರು ತಂದಣ್ಣಾ ಯಾಕೊಲ್ಲೆ ದೊಡ್ಡಮ್ಮ
ಅವರು ಜಾತಿ ಬರದವರೆ ಸರಗೀಗ ಕಣ್ಣೆತ್ತಿ ನೋಡಿರವ್ವ
ಜಾತಿ ಬರೆದವರೇ ಸರಗೀಗೆ ದೊಡ್ಡಮ್ಮಾ
ಅವಳು ಜ್ಯೋತಿ ಎರಡೆಡೆಗೆ ಉರುದಾವ್ರೋ ಕಣ್ಣೆತ್ತಿ ನೋಡಿರವ್ವ
||ಕಣ್ಣೆತ್ತಿ||

ಹಿಂಬೀಯಾ ಮರದಾ ರೊಂಬೋ ಮುರುದೋರ್ಯಾರೋ
ಅವಳು ರೊಂಬೆ ದೊಡ್ಡಮ್ಮನ ಸೊಸೆಯೋರು ಕಣ್ಣೆತ್ತಿ ನೋಡುರವ್ವಾ
ರಂಬೆ ದೊಡ್ಡಮ್ಮನ ಸೊಸೆಯೋರು ಹೆಣ್ಣುಮಕ್ಕಳು
ಅವರು ಬಿಂದೀಗೆ ತುಳುಕ ಮುರಿದಾರೋ ಕಣ್ಣೆತ್ತಿ ನೋಡಿರವ್ವ
||ಕಣ್ಣೆತ್ತಿ||

ಹಸಿಯಾ ಗೋಡೆ ಮೇಲೇ ಮಸಿಯಾರೆ ಬರೆದೋರೂ
ಹಸಿಯಾ ದೊಡ್ಡಮ್ಮನ ಸೊಸೆಯೋರೂ ಕಣ್ಣೆತ್ತಿ ನೋಡಿರವ್ವಾ
ಹಸಿಯಾ ದೊಡ್ಡಮ್ಮನ ಸೊಸೆಯೋರು ಹೆಣ್ಣುಮಕ್ಕಳು
ಅವರು ಹೆಸಳೊಡ್ಡಿ ಹಸೆಯಾ ಬರೆದಾರೊ ಕಣ್ಣೆತ್ತಿ ನೋಡಿರವ್ವ
||ಕಣ್ಣೆತ್ತಿ||

ಕ್ವಾಣೆಲಿ ಕೂತುಕೊಂಡು ಏನ್ಮಾಡಿಯೆ ದೊಡ್ಡಮ್ಮ
ಸಾಲು ದೀವೀಗೆ ಬೆಳಕೇಲಿ ಕಣ್ಣೆತ್ತಿ ನೋಡುರವ್ವ
ಸಾಲು ದೀವೀಗೆ ಬೆಳಕೇಲಿ ಕೂತೀಕಂಡೂ
ಅವಳ ತಾಲೀಗೆ ಮುತ್ತ ಬಿಗಿದಾಳೋ ಕಣ್ಣೆತ್ತಿ ನೋಡುರವ್ವಾ

||ಕಣ್ಣೆತ್ತಿ||

ಚಿಕ್ಕಲ್ಲೂರು ಚೆಂದಾ ಹಿಪ್ಪೇನೇರಲು ಚೆಂದಾ
ಚಿಕ್ಕಲ್ಲೂರೆಯ್ಯನ ಮಠಚೆಂದಾ ಕಣ್ಣೆತ್ತಿ ನೋಡಿರವ್ವಾ
ಚಿಕ್ಕಲ್ಲೂರಯ್ಯನ ಮಠಚೆಂದ ಮಠದ ಮೇಲೆ
ಬಸವನ್ನಾರಮ್ಮ ಬರೆದೋರು ಕಣ್ಣೆತ್ತಿ ನೋಡಿರವ್ವ

||ಕಣ್ಣೆತ್ತಿ||

ವಾಜುರು ಕಟ್ಟುದ ಮಠವಾ ಚೋಜುಗ ನೋಡುವ ಬನ್ನೀ
ಚೂಜೇಲಿ ಮುತ್ತು ಬಿಗಿಸೂರ ಕಣ್ಣೆತ್ತಿ ನೋಡಿರವ್ವ
ಚೂಜಿಲೀ ಮುತ್ತಾ ಬಿಗಿಸೂವ ಸಿದ್ದಯ್ಯನಾ
ಬೆಲ್ಲಾದಾರುತಿಯ ಬೆಳಗೂವ ಕಣ್ಣೆತ್ತಿ ನೋಡುರವ್ವ

||ಕಣ್ಣೆತ್ತಿ||

ಹಸಿರು ಬರೆಯೋಳೇ ಹೆಸರು ಚೆಂದಾದೋಳೇ
ಅಸಮಾನು ಗಾತಿ ದೊಡ್ಡಮ್ಮ ಕಣ್ಣೆತ್ತಿ ನೋಡಿರವ್ವ
ಅಸಮಾನಾಗತೀ ದೊಡ್ಡಮ್ಮ ಆದಾರೆ
ಅವರು ಸೊಸೆಯೋರು ಬಾಳೋದು ಅಸಮಾನ ಕಣ್ಣೆತ್ತಿ ನೋಡಿರವ್ವ

||ಕಣ್ಣೆತ್ತಿ||

ಅರುಸೆ ದೊಡ್ಡಮ್ಮ ಪುರುಷಾರೆಲ್ಲೀಗೋದ್ರು
ಅವರು ನರಸೀ ಪುರದ ನಡುಹೊಳೇ ಕಣ್ಣೆತ್ತಿ ನೋಡಿರವ್ವ
ನರಸೀಯಾ ಪುರುದಾ ನಡುಹೊಳೇ ತೋಪಿನಲೀ
ಅವರು ಪರುಷೆ ತದಾಡಿ ಬರುತಾರೆ ಕಣ್ಣೆತ್ತಿ ನೋಡುರವ್ವ

||ಕಣ್ಣೆತ್ತಿ||

ಹರವಳೇ ತೋಪೇಲಿ ಹವಳಾದ ಗುಡಾರಹೂದೊ
ನನ್ನ ಹರಸೆ ದೊಡ್ಡಮ್ಮನ ಬರಹೇಳಿ ಕಣ್ಣೆತ್ತಿ ನೋಡಿರವ್ವಾ
ಹರಸೆ ದೊಡ್ಡಮ್ಮನ ಬರಹೇಳಿ ರಾಚೂರಾಯ್ರು
ಅವರು ಹವಳಾದ ಉಂಗುರುವ ಕಳುಹವರೇ ಕಣ್ಣೆತ್ತಿ ನೋಡಿರವ್ವಾ

||ಕಣ್ಣೆತ್ತಿ||

ಮುಟ್ನಳಿ ತೋಪೇಲೀ ಮುತ್ತಿನ ಗುಡಾರ ಹೂದೊ
ಅವರು ಹರಸೆ ದೊಡ್ಡಮ್ಮ ಬರಹೇಳಿ ಕಣ್ಣೆತ್ತಿ ನೋಡಿರವ್ವ
ಹರಸೆ ದೊಡ್ಡಮ್ಮನ ಬರಹೇಳಿ ರಾಚೂರಾಯ್ರು
ಹವಾಳದುಂಗುರುವ ಕಳುಹವರೇ ಕಣ್ಣೆತ್ತಿ ನೋಡಿರವ್ವ

||ಕಣ್ಣೆತ್ತಿ||

ಮುತ್ತಿನ ಅಣಬಟ್ಟು ಮುದುರಾಕ್ತ ಹೆಣಗಂಟು
ಉತ್ತುಮರ ದಿನಸು ಮೈಯಗೆಂಪು ಕಣ್ಣೆತ್ತಿ ನೋಡುರವ್ವಾ
ಉತ್ತಮರ ದಿನಸು ಮೈಗೆಂಪು ದೊಡ್ಡಮ್ಮ
ಅವಳು ಉತ್ತಕ್ಕೆ ತನಿಯ ಎರೆದಾಳೋ ಕಣ್ಣೆತ್ತಿ ನೋಡಿರವ್ವಾ

||ಕಣ್ಣೆತ್ತಿ||

ಸಾದೀನ ಅಣಬಟ್ಟು ಸಾವರಾಕ್ತ ಹೆಣಗಂಟೂ
ಹಾರೋವರ ದಿನಸು ಮೈಯಗೆಂಪು ಕಣ್ಣೆತ್ತಿ ನೋಡುರವ್ವ
ಹಾರೋವರ ದಿನಸು ಮೈಗೆಂಪು ದೊಡ್ಡಮ್ಮ
ಅವಳು ನಾಗರಿಗೆ ತನಿಯ ಎರೆದಾಳು ಕಣ್ಣೆತ್ತಿ ನೋಡಿರವ್ವಾ

||ಕಣ್ಣೆತ್ತಿ||

ನಾಗಪ್ಪನಂತೆ ಮಗಬೇಕು ದೊಡ್ಡಮ್ಮ
ಸೀತಮ್ಮನಂತೆ ಸೊಸೆಬೇಕು ಕಣ್ಣೆತ್ತಿ ನೋಡಿರವ್ವ
ಸೀತಮ್ಮನಂತೆ ಸೊಸೆಬೇಕು ದೊಡ್ಡಮ್ಮ
ಜ್ಯೋತಮ್ಮನಂತೆ ಬೆಳಕು ಬೇಕು ಕಣ್ಣೆತ್ತಿ ನೋಡಿರವ್ವ

||ಕಣ್ಣೆತ್ತಿ||

ಅಂದದ ಕಪ್ಪಾಡೀ ಚಂದಾಕೆ ಬೊಪ್ಪಣ ಪುರಾ
ಮೂರನೇ ಕೈಲಾಸ ಚಿಕ್ಕಲ್ಲೂರು ಕಣ್ಣೆತ್ತಿ ನೋಡುರವ್ವಾ
ಮೂರನೆ ಕೈಲಾಸ ಚಿಕ್ಕಲ್ಲೂರ ಗುಡಿಯ ಮುಂದೇ
ಅವರು ಕಂದನ ಬೇಡೂದು ಗಡವಿಲ್ಲ ಕಣ್ಣೆತ್ತಿ ನೋಡಿರವ್ವ

||ಕಣ್ಣೆತ್ತಿ||

ರಾಗಿಕಲ್ಲಿನ ಪದ

ಇಂಬೀಯಾ ಬನಾದ ಮ್ಯಾಗಳ
ಚಂದ್ರಾಮ ಚಂಡಾಡಿದಾ ಇಂಬಿಯಾ...
ಎದ್ದಾರೆ ನೆನೆದೇನೋ ಏಳುತಲೇ ನೆನೆದೇನೋ
ಗದ್ದೀಗೆಲಿರುವ ಬಸವಾನ ಇಂಬೀಯಾ
ಗದ್ದೀಗೆ ಮೇಲಿನ ಬಸವಾನ ನೆನೆದಾರೆ
ನಾ ಒದ್ದಿದ್ದ ಪಾಪ ಪರಿಹಾರ ಇಂಬೀಯಾ
||ಇಂಬೀಯಾ||

ಎದ್ದಾರೆ ನಿಮಗ್ಯಾನ ಏಳುತಲೀ ನಿಮಗ್ಯಾನ
ಸಿದ್ದಾರಗ್ಯಾನ ಶಿವಾಗ್ಯಾನ ಇಂಬೀಯಾ
ಸಿದ್ದಾರಗ್ಯಾನ ಶಿವಗ್ಯಾನ ಮಹಾಶಿವನೇ
ನಿದ್ರುಗಣ್ಣೇಲಿ ನಿಮ್ಮಗ್ಯಾನ ಇಂಬೀಯಾ
||ಇಂಬೀಯಾ||

ಎದ್ದಾರೆ ನೆನೆದೇನು ಏಳುತಲೀ ನೆನೆದೇನು
ಎಳ್ಳು ಜೀರಿಗೆ ಬೆಳೆಯೋಳ ಇಂಬೀಯಾ
ಕಲ್ಲು ಕಟ್ಟೋವನಿಗೆ ಎಲ್ಲಾ ಭಾಗ್ಯವು ಬರಲಿ
ಫಲ್ಲಕ್ಕಿ ಮ್ಯಾಲೆ ಮಗ ಬರಲಿ ಇಂಬಿಯಾ...
||ಇಂಬೀಯಾ||

ಪಲ್ಲಕ್ಕಿ ಮ್ಯಾಲೆ ಮಗ ಬರಲಿ ಆ ಮನೆಗೆ
ಮಲ್ಲೀಗೆ ಮುಡಿವ ಸೊಸೆ ಬರಲಿ ಇಂಬಿಯಾ...
ಕಲ್ಲವ್ವ ತಾಯಿ ಮೆಲ್ಲವ ರಾಗೀಯ
ಜಲ್ಲಾ ಜಲ್ಲಾನೆ ಉದುರವ್ವ ಇಂಬೀಯಾ
||ಇಂಬೀಯಾ||

ಜಲ್ಲಾನೆ ಜಲ್ಲಾನೆ ಉದುರುವ್ವ ಸಂಸತಿಯೆ
ಬೆಲ್ಲಾದಾರತಿಯ ಬೆಳಗಿನೋ ಇಂಬೀಯಾ

ಹಾಲುಂಡಾ ತವರೀಗೆ ನಾನೆಂದು ಹಾಡಾಲಿ
ಹೊಳೆದಂಡೇಲಿರುವ ಗರಕೀಯಾ ಇಂಬೀಯಾ
||ಇಂಬೀಯಾ||

ಹೊಳೆದಂಡೇ ಮೇಲಿರುವ ಗರಕೇಯ ಕುಡಿಯಾಂಗೆ
ಹಬ್ಬಾಲಿ ಅವರ ರಾಜಬಳಗ ಇಂಬೀಯಾ
ಕಲ್ಲುಬಂದೆರಗಿ ಕಡೆಗಾಗಿ ಎಲೆಮನವೆ
ಶಿವನೆಂಬ ಶಬುದ ಬಿಡಬ್ಯಾಡ ಇಂಬೀಯಾ
||ಇಂಬೀಯಾ||

ಮಂದೀ ಮಂದೀ ಎಂದು ಮಂದಿನಂಬಲಿಹೋದೆ
ಮಂದೀ ಬಿಟ್ಟಾರು ನಡುನೀರ ಇಂಬೀಯಾ
ಮಂದೀ ಬಿಟ್ಟಾರು ನಡುನೀರಾ ಮಲ್ಲಯ್ಯ
ತಂದೀ ನನಕೈಯ್ಯ ಬಿಡುಬ್ಯಾಡ ಇಂಬೀಯಾ
||ಇಂಬೀಯಾ||

ರಾಗೀ ಬೀಸುವ ಕಲ್ಲೇ ರನ್ನ ಮುತ್ತಿನ ಕಲ್ಲೇ
ನಮ್ಮಪ್ಪಾನ ಮನೆಯ ಪದಗಲ್ಲೆ ಇಂಬೀಯಾ
ನಮ್ಮಪ್ಪಾನ ಮನೆಲಿರುವ ಪದಗಲ್ಲು ಪಚ್ಚೇಕಲ್ಲೆ
ನಾ ಹಿಡಿದ ಕಲ್ಲೇ ತೆರೆ ಹುಯ್ಯೋ ಇಂಬೀಯಾ
||ಇಂಬೀಯಾ||

ಅಕ್ಕೀ ಬೀಸುವ ಕಲ್ಲೇ ಚಕ್ಕಾರೆ ಒಡೆಗಲ್ಲೆ
ನಮ್ಮಣ್ಣನ ಮನೆಯ ಪದಗಲ್ಲೆ ಇಂಬೀಯಾ
ನಮ್ಮಣ್ಣಾನ ಮನೆಯ ಪದಗಲ್ಲು ಪಚ್ಚೇಕಲ್ಲೆ
ರಾಜಾ ಬೀದೀಲಿ ಮರೆದಾವೋ ಇಂಬೀಯಾ
||ಇಂಬೀಯಾ||

ಅಕ್ಕಿ ಕುಟ್ಟುವ ಪದ

ಆಚರಿ ಕಲ್ಬಾವಿ ಈಚಾರಿ ಕಲ್ಬಾವಿ
ಕಲ್ಬಾವಿ ಸುತ್ತ ಪಲ್ಲಕ್ಕಿ ದಿಂಡು
ನಡುಮನೆಗೆ ಹೋದರೆ ನಂದಿಯಾ ಕಂಬ
ನಡುಮನೆಗೆ ಹೋದರೆ,,, ನಂದಿಯಾ ಕಂಬ
ಅಗ್ಗು ತುಂಬಿದರೆ ಗುಗ್ಗು ನೀರಿಲ್ಲ
ಬಳದಿ ತುಂಬಿದರೆ ಅರುವಾಣ ತುಂಬಲಿಲ್ಲ
ಕೆಳಕೆಳಗೆ ಬೆಳದೋ ಕೆಂಬತ್ತಿ ರಾಜಣ
ನೆತ್ತಿಮೇಲೆ ಬೆಳೆದೊ ಮುತ್ತತ್ತಿ ರಾಜಣ
ಅಂಚಿಗೌ ಪಿಂಚಿಗೌ ಕಂಚುಗಲು ರಾಣಕ
ಮದ್ದೂರು ಸೀಮೆ ಗೆದ್ದು ಬಾ ಮಗನೆ
ಕೂಡ್ಲೂರು ಕೆರೆಗೆ ಕೋಡಿಯಾ ಕಟ್ಟಿ
ಸಾತನೂರು ಕೆರೆಗೆ ಏತಾವ ನಿಲ್ಲಿಸಿ
ಬಾರಪ್ಪ ಮಗನೆ ಬಲಚಾರೆಲ್ ಕಂಡೆ
ಎಡಚಾರೆಲ್ ಕಂಡೆ ಅಕ್ಕ ಗೌರಿ ಕಂಡೆ
ಅಕ್ಕಗೌರಿ ಕೊರಳೇಲಿ ಮತ್ತೇನುಕಂಡೆ
ಮೂರು ಲೋಕಾದ ಮೂಗೂತಿ ಕಂಡೆ
ಆರು ಲೋಕಾದ ಐರ್ಗಾಲಿ ಕಂಡೆ
ಅವರಕ್ಕ ತಂಗೇರು ಕೂದಿದ್ರು ರಾಜಣ
ಅವರಣ್ಣ ತಮ್ಮದೀರು ಒಕ್ಕಿದ್ರು ರಾಜಣ
ಚಿನ್ನದ ಕಣಜಾಕೆ ತುಂಬಿದ್ರು ರಾಜಣ
ರನ್ನದ ಬೀಗಾನೆ ಆಕಿದ್ರು ರಾಜಣ
ಅಂಚಿಗೌ ಪಿಂಚಿಗೌ ಪಂಚಗಲ್ ರಾಣಕ
ಮದ್ದೂರು ಸೀಮೆ ಗೆದ್ದು ಬಾ ಮಗನೆ
ಕೂಡ್ಲೂರು ಕೆರೆಗೆ ಕೋಡಿಯಾ ಕಟ್ಟಿ
ಸಾತನೂರು ಕೆರೆಗೆ ಏತವಾ ನಿಲ್ಲಿಸಿ

ಬಾರಪ್ಪ ಮಗನೆ ಬಲಚಾರಲ್ ಕಂಡೆ
ಬಲಚಾರೇಲೇನ್ ಕಂಡೆ ಅಕ್ಕಗೌರಿಕಂದೆ
ಎಡಚಾರಲೇನ್‌ಕಂಡೆ ಬ್ರಹ್ಮದೇವರ ಕಂಡೆ
ಅಕ್ಕತಂಗೇರ ಕೊರಳೇಲಿ ಮತ್ತೇನು ಕಂಡೆ
ಮೂರು ಲೋಕಾದ ಮೂಗುತಿ ಕಂಡೆ
ಆರು ಲೋಕಾದ ಐರ್ಗಾಲಿ ಕಂಡೆ
ಶೋಬ ಶೋಬಾನಾ...
ಚಿಕ್ಕಗೋಡೆ ಮೇಲೆ ದೊಡ್ಡಬೆಲ್ಲ ಮಡಗಿ
ದೊಡ್ಡಬೆಲ್ಲದೊಳಗೆ ದಪ್ಪಮುಳ್ಳೂಬಂದೊ
ದಪ್ಪ ಮುಳ್ಳು ಒಳಗೆ ಸಣ್ಣಮುಳ್ಳು ಬಂದೊ
ಸಣ್ಣಮುಳ್ಳು ಒಳಗೆ ಪನ್ನೀರು ಬಂದೊ
ಪನ್ನೀರು ಕುಡಿಯೋಕೆ ಗಿಳಿಹಿಂಡು ಬಂದೊ
ಗಿಳಿಹಿಂಡು ಓಡ್ಸೋಕೆ ಬ್ಯಾಟಗಾರ ಬಂದ
ಬ್ಯಾಟಗಾರನ ಕೈಲಿ ಚೋಟುದ್ದ ಕುಡ್ಲು
ಚೋಟುದ್ದ ಕುಡ್ಲುಗೆ ಮಾರುದ್ದ ಹುಲ್ಲು
ಮಾರುದ್ದ ಹುಲ್ಲಿಗೆ ಮನೆತ್ಬಾರೆಮ್ಮೆ
ಮನೆತ್ಬಾರೆಮ್ಮೆಗೆ ಗುಂಬುತ್ಬಾರ ಕೆಚ್ಚಲು
ಗುಂಬುತ್ಬಾರದ ಕೆಚ್ಚಲಿಗೆ ಕಂಬತ್ಬಾರ ಎದೆ
ಕಂಬತ್ಬಾರ ಎದೆಲಿ ಚೂಜಿ ಗಾತ್ರಹಾಲು
ಚೂಜಿಗಾತ್ರ ಹಾಲ ಗುಳಗುಳನೆ ಕಾಸಿ
ಚಿನ್ನಾದ ಚೂಡುದೊಳೆ ಇಕ್ಕು ಬಾರತ್ತೆ
ರನ್ನದ ಚೂಡುದೊಳೆ ಇಕ್ಕುಬಾರತ್ತೆ
ಶೋಬ ಶೋಭಾನಾ...

ತವರುಮನೆ ಹಾಡು

ನಾಗರ ಪಂಚಮಿ ನಾಹ್ಯಾಂಗ ಮರೆಯಲಿ ನನ್ನ ತವರುಮನೆಯಾ
ನನ್ನ ತವರು ಮನೆಯಾ ತವರಿನ ಬಂಕಾಪುರದ ಬಳೆಯಾ
ಸಿರಡಿ ಸೀರೆ ಕುಸುಗಲು ಗುಬುಸ ಬಂಕಪುರದ ಬಳೆಯಾ
ಬಂಕಾಪುರದ ಬಳೆಯಾ ಕೊರಳಿಗೆ ಅಂಗನೂಲಿನ ಎಳೆಯಾ
ನೆನೆಯೆಕ್ಕಿ ನೆನಗಡಲೆ ಗೊನೆಯ ಬಾಳೆಹಣ್ಣು ಬಿಳಿಯಬಾಳೆ ಎಲೆಯಾ
ಬಿಳಿಯ ಬಾಳೆಎಲೆಯಾ ತವರಲಿ ನಗೆಯ ಹಾಲಿನ ಹೊಳೆಯಾ
ನಾಗರ ಪಂಚಮಿ ನಾಹ್ಯಾಂಗ ಮರೀಲವ ನನ್ನ ತವರು ಮನೆಯಾ
ನನ್ನ ತವರು ಮನೆಯಾ ತವರಿನ ಬಂಕಾಪುರದ ಬಳೆಯಾ
ಮಾರ್ಲಮಿ ತೀರುದು ಮಾರನೆಗೆ ಬರುತಾನೆ ನನ್ನಣ್ಣ ಕರೆಯೋಕ್ಕೆ
ನನ್ನಣ್ಣ ಕರೆಯೋಕ್ಕೇ ನನ್ನವರ ಪ್ರೀತಿಯ ಗಳಿಸೋಕೆ
ಮಗಳು ಬರುವಳೆಂದು ಉಂಡೆ ಕಟ್ಟುವಳು ನಮ್ಮವ್ವ ಬೆಳತನಕಾ
ನಮ್ಮವ್ವ ಬೆಳೆತನಕಾ ಮಗಳಿಗೆ ತಿನ್ನಲಿಕ್ಕೆ ಕೊಡುವುದಕಾ
ನಾಗರ ಪಂಚಮಿ ನಾಹ್ಯಾಂಗ ಮರೆಯಲಿ ನನ್ನ ತವರುಮನೆಯಾ
ನನ್ನ ತವರು ಮನೆಯಾ ತವರಿನ ಬಂಕಾಪುರದ ಬಳೆಯಾ

ಜೋಗಯ್ಯ

ಅಪರ ಹರ ಹರಣದೈಸೋ ನನ್ನಯ್ಯ ಪುರುಮಾಗ್ಯಾದೌರದೈಸೊ
ಹರಹರ ಪುರುಮಗೆ ದೌರದೈಸೋ
ಕರುಣಿಸಿ ಎನ್ನೊಡೆಯ ಕಾಮಾಕ್ಷಿ ಬಲದೋನ ಜೋಗಿ ನಂಜುಂಡ ದೈಸೋ...
ಕಲಿಪಾರ್ತಜೋಗಿ ನಂಜುಂಡ ದೈಸೋ
ನಮ್ಮ ಬೆಟ್ಟಕ್ಕೆ ಬಿದುರ ಆಸೇ ನಮ್ಮ ದೇವರಿಗೆ ಬಿದಿರನ್ನೊ ಎಲೆಯ ಆಸೆ...
ಸಣ್ಣಪೈರೀಗೆ ಮಳೆ ಆಸೆ ಜೋಗಪ್ಪ ನಿನ್ನ ಆಸೆ ನಮಗೆ ಅನುಗಾಲ ಜೋಗಯ್ಯ
ಅಪ್ಪಾ ಬೆಟ್ಟಮ್ಯಾಗಳ ಬಿದಿರೋ
ನಮ್ಮಯ್ಯನು ಬೇಲಿಮ್ಯಾಗಾಳ ಸ್ವಾರೇ...ಆ...ಆ|

ಅಡಗಲ್ಲಿನಾಮ್ಯಾಲೆ ಹದಮಾಡ್ಯತಂತಿ
ತನಿಗೆಂಡದಲ್ಲಿ ನಲಿಯುವಾತಂತಿ
ಮಾತನಾಡಾ ಕಿನ್ನಡೀ... ಆಜೋಗೀಗೆ ಮಾತನಾಡ ಕಿನ್ನಡೀ...
ಜೋಗಪ್ಪ ಬಾಳೆಯ ತ್ವಾಟದಲ್ಲೀ...
ಜೋಗಪ್ಪ ಬಾಳ ಸುಂದರದ ಗಿಣಿಯೋ...|

ಆಡಿದರ ಅರಗಿಣಿಯೋ...
ಜೋಗಪ್ಪ ನಲಿದಾರೆ ನವಿಲುಗರಿಯೋ...|

ನಲಿದಾರೆ ನಲಿವು ಮರಿಯೋ...
ಜೋಗಪ್ಪ ಹೆತ್ತವ್ವ ಹ್ಯಾಗಿರವಳೋ...|

ಹೆತ್ತವ್ವ ಹ್ಯಾಗಿರುವಳೋ...
ನಿನ್ನ ಸನ್ನೇಸಿ ಮಾಡಬಹುದೇ... ದರೆಯಲ್ಲಿ|

ಸನ್ನೇಸಿ ಮಾಡಬೋದೆ... ದರೆಯಲ್ಲಿ
ದೇಶಾಂತ್ರ ಕಳಗಬಹುದೇ...|

ಜೋಗಪ್ಪನ ಹೆತ್ತಮ್ಮ ಇರುವರೇನು...|
ಜೋಗಪ್ಪ ನಿನಗಣ್ಣಾದಿರುವರೇನೋ...

ನಿನಗೆ ತಂಗೇಯರಿರುವರೇನೋ...

ನಿಮ್ಮವ್ವನಿಗೆ ಹೆಣ್ಣಮಕ್ಕಳಿರುವರೇನೋ...|

ಜೋಗಪ್ಪ ಎಲ್ಲಾ ಇದ್ದಾರೇನೋ ಜೋಗಪ್ಪ

ಹೌದು ತಾಯಿ ಅವರೆ ತಾಯಿ

ನಮ್ಮವ್ವ ಕಣ್ಣು ಕಾಣಾದ ಮುದ್ಕಿ

ನಮ್ಮವ್ವನ್ಗೆ ಕಿವಿಯು ಕೇಳಾದ ತಾಯೀ...

ತಾಯೊಬ್ಳು ಇರುವಳವ್ವೋ...

ನನಗೆ ತಂದೇಯು ಇಲ್ಲವವ್ವಾ... ತಂದೇಯ ಇಲ್ಲವವ್ವೋ...

ನನಗೆ ಅಣ್ಣಾದಿರುವರವ್ವೋ...

ನನಗೆ ತಮ್ಮಾದಿರುವರವ್ವಾ...|

ತಮ್ಮದಿರುರವ್ವೋ ನಮ್ಮವ್ವನಿಗೆಣ್ಣುಮಕ್ಕಾಳು ಇಲ್ಲಾ...|

ನಮಗೆ ಹುಟ್ಟೋರು ಐದು ಜನ...

ನಾವು ಲೆಕ್ಕಾಕೆ ನಾಕು ಜನಾ...|

ಲೆಕ್ಕಾಕ್ಕೆ ನಾಕುಜನ ಆದರೆ ಜೋಗಪ್ಪ

ಇನ್ನೊಬ್ಬ ಎಲ್ಲಿಗೋದಾ... ಜೋಗಪ್ಪ|

ನಾವು ಅಂಗೈ ಕಂಕಣವ ಧರಿಸಿ...

ಜೋಗಪ್ಪ ಮುಂಗೈ ಜೋಳಿಗೆಯ ಧರಿಸೀ...|

ಬಾರಿಯಾ ತಿರುಸುಲವ ಗಟ್ಟಿಸಿ ಬೆನ್ನಿಗೆ ಕಟ್ಟಿ...

ಜೋಗಿಯ ಯಾಸತಾಳ್ದ... ಜೋಗಿಯ...|

ಜೋಗಿಯ ಯಾಸತಾಳಿ ನಮ್ಮಣ್ಣ

ಇಂದುಕ್ಕನ್ನೆರಡೆ ವರುಷಾ... ಜೋಗಪ್ಪ...|

ಹನ್ನೆರಡ ವರುಷಾದಿಂದ ಜೋಗಪ್ಪ

ಕಂಡೋರು ಯಾರು ಇಲ್ಲಾ...

ಜೋಗಪ್ಪ...|

ನಿನ್ನ ಊರು ಯಾವಾದೋ ಜೋಗಿ

ನಿನ್ನ ಕೇರಿಯಾವಾದೋ ಜೋಗಿಯೋ...|

ಇದ್ದಾರೆ ಈಊರವ್ವೋ ಕೊಂತಮ್ಮ ನಡೆದಾರೆ ಮುಂದಾಲೂರೂ...|

ನಾ ನಾಡಿನಾ ಮ್ಯಾಲೆ ತಿರುದುಣ್ಣೊಸನ್ಯೇಸಿ ಜೋಗೀಗೆ ಯಾವ ಊರೇಳಲವ್ವೋ...|

ಕೊಂತಮ್ಮ ಯಾವ ಊರೇಳವ್ವಾ...
ಕೊಕ್ರೇಗೆ ಗೂಡುಂಟು, ಕೊರಮನಿಗೆ ಬಿಲವುಂಟು, ಇಲಿಗೆ ಗೂಡುಂಟು
ಕಾಗೆಗೇ ಕಡ್ಜುನ್ಗೇ ಗೂಡುಂಟು ಜೋಗಪ್ಪ
ಕೋಳಿಗೇ ಗೂಡುಂಟು, ಗೋರ್ಕುನ್ಗೇ ಗೂಡುಂಟು
ಹಕ್ಕೀಗೇ ಗೂಡುಂಟು, ಪಕ್ಷಿಗೆ ಗೂಡುಂಟು
ನಾನಾ ಬಡವರಿಗೆ ಮನೆಯುಂಟು, ಶ್ರೀಮಂತ್ರುಗೆ ಮನೆಯುಂಟು
ನಿನಗೇಕೆ ಗೂಡು ಇಲ್ಲಾ ನಿನಗ್ಯಾಕೆ ತಳವು ಇಲ್ಲ

ಮಹಾದೇಶ್ವರ

ಸ್ವಾಮಿ ಲಿಂಗಾವೇ ಶೋಸಿದ ಚಿನ್ನಾವೇ
ರಂಗು ಮಾಣೆಕುದಾ ರತುನವೇ||

ಬೆಟ್ಟುಕ್ಕೊಗುರುಗೆ ಅಟ್ಟಿ ಹಂಬಲವೇನೂ
ಬೆಟ್ಟದ ಮಾದಯ್ಯಾ ಗತಿ ಎಂದು
ಬೆಟ್ಟದ ಮಾದೇವ ಗತಿ ಎಂದು ಹೋಗುರುಗೇ
ಬೆಟ್ಟದಲ್ಲೇ ಅರುವಾ ಕೊಡುತರೆ

||ಸ್ವಾಮಿ ಲಿಂಗವೇ||

ಹಾಲಳ್ಳದಲ್ಲಿ ಓಲೆ ಬೆಳಗುಳ್ಯಾರೋ
ಕೀಲು ಕಡುಗಾದಾ ಮರು ಬಾಲೇ

||ಸ್ವಾಮಿ||

ಕೀಲು ಕಡುಗಾದಾ ಮರುಕಲಕ ಮಡಗಿತ್ತೇ
ಮಾದಯ್ಯ ಇರುವೋದು ಏಳುಸುತ್ತಿನ ಕೋಟೇ
ಮ್ಯಾಲೆಡೊಂಕಾಣೇ ಹುಲಿಮಠ
ಮ್ಯಾಲೆ ಡೊಂಕಾಣಿ ಹುಲಿಮಠ ಹೂವಿನತೋಟಾ
ಮಾದಯ್ಯ ಇರುವೋದು ಕೈಲಾಸ

||ಸ್ವಾಮಿ||

ಪತ್ರೆ ತೋಟಕ್ಕೆ ಎಪ್ಪತ್ತು ಬಾಕಾಲೂ
ತಪ್ಪದೇನೆ ಬರುವಾ ಶರಣರು
ತಪ್ಪದೆ ಬರುವ ಶರಣರು ಮತ್ತಾರು
ನನ್ನ ಪತ್ರೇಯಾ ಒಡೆದೀ ಶರಣೆಂದೆ

||ಸ್ವಾಮಿ||

ಮರುಗದ ತ್ಯಾಟಾಕೆ ನಲವತ್ತು ಬಾಗೀಲೂ
ಅರಿಯದೇ ಬರುವಾ ಶರಣರು

||ಸ್ವಾಮಿ||

ಅರಿಯಾದೆ ಬರುವ ಶರಣರು ಭಗುತರಿಗೇ
ಮರುಗವಾ ಮಡುಗೀ ಶರಣೆಂದೆ

||ಸ್ವಾಮಿ||

ಹಾಲು ಒಲೆಮ್ಯಾಲೇ ಬಾಲ ತೊಡೇಮ್ಯಾಲೇ
ಸ್ವಾಮಿ ಮಾದೇವಾ ಮಣೆಮ್ಯಾಲೆ
ಸ್ವಾಮಿ ಮಾದೇವ ಮಣೆಮ್ಯಾಲೆ ಕೂತುಕೊಂಡು
ಬಾಲನೀಗೆಸರಾ ಕರೆದರೋ

||ಸ್ವಾಮಿ||

ತುಪ್ಪ ಒಲೆಮ್ಯಾಲೆ ಪುತ್ರ ತೊಡೆಮ್ಯಾಲೇ
ಅಪ್ಪ ಮಾದೇವಾ ಮಣೆಮ್ಯಾಲೆ

||ಸ್ವಾಮಿ||

ಅಪ್ಪಾ ಮಾದೇವಾ ಮಣೆಮ್ಯಾಲೆ ಕುತೂಕೊಂಡೇ
ಪುತ್ರ ನೀಗೆಸರಾ ಕರೆದರೋ

||ಸ್ವಾಮಿ||

ಬೆಟ್ಟದ ಬಿದುರಾಸೆ ಬಿದುರಿಗೆ ಎಲೆ ಆಸೇ
ಅಪ್ಪ ಮಾದೇವಾ ನಮಗಾಸೆ

||ಸ್ವಾಮಿ||

ಒಕ್ಕಳುರುಗೆಜ್ಜೆ ಒಕ್ಕಳ ಸರುಗೆಜ್ಜೇ
ಚಕ್ಕ ಬೆಳ್ಳೀಯಾ ಮಕರಂಬೆ
ಚಕ್ಕಬೆಳ್ಳಿಯಾ ಮಕರಂಬೆ ಮಾದೇವಾ
ನಿನ ಬಾಕಲೇಲಿರುವಾ ಬಸವನಿಗೆ

||ಸ್ವಾಮಿ||

ನಾಗಾಳುರು ಗೆಜ್ಜೆ ನಾಗಾರಾಸರುಗೆಜ್ಜೆ
ನಾಗಳು ಬೆಳ್ಳಿಯಾ ಮೊಕರಂಭೆ

||ಸ್ವಾಮಿ||

ಕಾಡೇಲಿರುವೋನಾ ರೂಢಿ ನೋಡುವ ಬನ್ನೀ
ಮೋಡದ ಬಿಸುಲಿಗೆ ಬೆವರೋನ
ಮೋಡದ ಬಿಸುಲಿಗೆ ಬೆವರೋನ ಮಾದೇವಾ
ನಿನ್ನ ರೂಢಿ ಒಬ್ಬರಿಗೇ ತಿಳಿಯದೂ

||ಸ್ವಾಮಿ||

ಅಕ್ಕ-ತಂಗಿಯರು

ನನ್ನೂರ ಮ್ಯಾಲೆ ನೆನ್ನೆ ಹೋದೋನ್ಯಾರೊ
ಮುನ್ನೂರು ಕುದುರೆ ಮೊನೆಗಾರ
ಮುನ್ನೂರು ಕುದುರೆ ಮೊನಗಾರಣ್ಣಯ್ಯ
ನನ್ನೂರಿಗೆ ಯಾಕೆ ಬರಲಿಲ್ಲ

ನನ್ನಣ್ಣ ಬಂದ ನನಗೆ ಬಣ್ಣ ತಂದ
ನಿನಗೇನು ತಂದನವ್ವ ಕಿರಿಯೋಳೆ
ನಿನಗೇನು ತಂದನವ್ವ ಕಿರಿಯೋಳೆ ತಂಗಮ್ಮ
ಬೆನ್ನೆಲೆ ತಂದವನೆ ಬಿಡುಮುತ್ತ

ಗಂಧಾ ಗಮ್ಮಂದೋ ಎಡಚಾರಿ ಜೋಬೆಲಿ
ಗಂಧಾಗಮ್ಮಂದೋ ಗರಡೀಲಿ
ಗಂಧಾಗಮ್ಮಂದೋ ಗರಡೀಲಿ ತಮ್ಮಯ್ಯ
ನಿನ್ನಂಗಿ ಗಂಮ್ಮಂದೋ ಸಭೆಯಲ್ಲೀ

ಅಕ್ಕಾತೆಂಗೇರಾಟಾ ಅಪ್ಪಾನ ಮನೆಯಲ್ಲಿ
ದೇವಮಾನ್ಯೇವ ರಾವಾ ಕೆರೆಯಲ್ಲಿ
ದೇವಮಾನ್ಯೇವ ರಾಟಾ ಕೆರೆಯಲ್ಲಿ ತಮ್ಮಯ್ಯ
ನಿನ್ನಾಟಾ ಸೂಳೇ ಅರಮನೆಲಿ

ಅಕ್ಕ ತಂಗೇರು ಚಿಕ್ಕ ಮುತ್ತೈದೇರು
ಅಕ್ಕ ನೋಡಕ್ಕ ತವರೂರ
ಅಕ್ಕ ನೋಡಕ್ಕ ತವರೂರ ಬೀದೀಯ
ಕಂಚೀನ ತೇರು ಹರಿದಾವೋ

ಹರಿದಾರೆ ಹರಿಯೂಲಿ
ಮುರಿದಾರೆ ಮುರಿಯೂಲಿ
ನಾಮುಂದೂರಿಗೆ ಸೊಸೆಯಾದೊ ಅಕ್ಕಮ್ಮ
ತವರೂರ ಸುದ್ದಿ ನಮಗೇನು

ಅಣ್ಣ-ತಂಗಿ

ಹತ್ತೇರು ಕಟ್ಟಿ ಎತ್ತಿನ ಪಾದ ತೊಳೆದು
ಅಕ್ಕ ಭೂಮಿ ತಾಯಿ ಗತಿ ಎಂದು
ಅಕ್ಕ ಭೂಮಿತಾಯಿ ಗತಿ ಎಂದು ಅಣ್ಣಯ್ಯ
ಸಾಲ್ಕವಾಸಿ ಶರಣೆಂದ

ಆರೇರು ಕಟ್ಟಿ ಹೋರಿ ಪಾದ ತೊಳೆದು
ದೆಸವಂತ ಭೂಮಿತಾಯಿ ಗತಿ ಎಂದು
ದೆಸವಂತ ಭೂಮಿತಾಯಿ ಗತಿ ಎಂದು ಅಣ್ಣಯ್ಯ
ಸಾಲ್ಯೆವಾಸಿ ಶರಣೆಂದ

ಕೂರ್ಗೆ ಹೊಡುವ್ರೋನ್ಗೆ ಕುಮಟಿ ಚೆಲ್ಲಾಣವ್ರೋ
ನಾಗುಭೂಷಣದ ನಡುಕಟ್ಟು
ನಾಗುಭೂಷಣದ ನಡುಕಟ್ಟು ಅಣ್ಣಯ್ಯ
ನೀ ಕೂರ್ಗೆ ಹೊಡೆವ್ರೋದು ಸಮಕಟ್ಟು

ಹೊನ್ನೇರು ಕಟ್ಟುವಾಗ ನುಡಿದವು ಹೊನ್ನಾಗವಳಿ
ಹನ್ನೆರಡು ಅರಬಿ ಇದುರಾದೋ
ಹನ್ನೆರಡು ಅರಬಿ ಇದುರಾದೋ ಅಣ್ಣಯ್ಯ
ನಿನ್ನ ಹೊಲರಕೆ ಹೊನ್ನೇರ ಹೊಡಿವಾಗ

ಅಣ್ಣ-ತಂಗಿಯರು

ನನ್ನೊಬ್ಬಣ್ಣಾ ಚೆಂದಾ ಕಬ್ಬುನಗದ್ದೆ ಚಂದಾ
ನನ್ನೊಬ್ಬಣ್ಣಾ ತರುವ ಮುಯ್ಯುಚೆಂದ
ಒಬ್ಬಣ್ಣಾ ತರುವೋ ಮುಯ್‌ಚೆನ್ನೊ ಮುಗ್ಗಿನರವಕೇ
ಬಗ್ಗುದುರೇ ಮುಗ್ಗು ಸುರುದಾವ್ರೋ

ಎಲ್ಲಿ ಒಲಿಸ್ದೋ ನೀನ್ಯಾತಾವು ತಗುದಣ್ಣೋ
ಅಂಗೀ ಗೆಷ್ಟಣ್ಣಾ ಬೆಲೇಹೇಳೂ
ಒಲಿಸ್ತು ಮೈಸೂರೂ ತಂಗೆ ತಗದುತ್ತು ಬೆಂಗಳೂರು
ಸರಿಯೇನು ತಂಗೆಮ್ಮ ಮೈಯ್ಯೂತುಂಬಾ

ನನ್ನಣ್ಣಾಬಂದಾ ನನ್ನಾ ಊರಿಗೆ ಬಂದಾ
ಅವರನ್ನೇಕಾರರು ಕಳುಹಲ್ರೂ
ಅನ್ನೇಕಾರರೂ ಕಳಗಲ್ರು ಲಣ್ಣಯೋ
ಕನ್ನಾವಾ ಒಡೆದು ಕಾರಾಕಳೋ

ಕನ್ನ ಒಡೆದರೇ ಕಳ್ಳಾರು ಅನ್ನುತಾರೆ
ಇನ್ನಾರು ತಿಂಗ್ಳು ತಡೀ ತಂಗೇ
ನಾಳೆಯಾ ಬರುವಾ ಗೌರೀ ಹಬ್ಬಕ್ಕೇ
ನಿನ್ನಾಳಾಗಿ ನಾನು ಬರುತೀನೀ

ಆಳಾಗಿ ಬರುಬ್ಯಾಡ ನೀ ಅರಸಾಗಿ ಬಾರಣ್ಣೋ
ನನ್ನ ವರ್ಷೂಕೊಂದ್ಸಾರಿ ಕರೀ ಅಣ್ಣೋ
ವರ್ಷಕ್ಕೊಂದ್ಸಾರೀ ಕರೀಯಣ್ಣಾ ನೀನೀಗಾ
ಬಂದೆನು ಅಣ್ಣಯ್ಯ ತವರೀಗೆ
ವಾಲೆ ಒಳ್ಳೆದು ಒಳಗೇ ಚಿನ್ನಾವಿಲ್ಲ
ಸೀರೇ ಒಳ್ಳೆದು ಸರುಗಿಲ್ಲ
ಸೀರೆ ಒಳ್ಳೆದೂ ಸರುಗಿಲ್ಲ ಲಣ್ಣಯ್ಯೋ
ನಿನ್ನ ಮಡದಿ ಒಳ್ಳೇವ್ನು ಗುಣವಿಲ್ಲ

ಲಣ್ಣಯ್ಯಾ ಚೆಂದಾ ಮಲ್ಲೀಗೆ ತ್ವಾಟ ಚೆಂದಾ
ನನ್ನ ಬರುವ ಅಣ್ಣಯ್ನ ದಾರೀ ಚೆಂದಾ
ಬರುವ ಅಣ್ಣಯ್ಯನ ದಾರೀಲಿ ಬರುವಾಗ
ಚೆಲ್ಲಿದೋರ್‍ಯಾರೆ ರತ್ನೀರಾ...
ಚೆಲ್ಲಿದೋರ್‍ಯಾರೇ ರತ್ನೀರ ನಮ್ಮಣ್ಣನ ಮ್ಯಾಲೇ
ಮುನ್ನೂರು ಕುದುರೆ ಮೊನಗಾರ
ಮುನ್ನೂರು ಕುದುರೆ ಮೊನಗಾರ ಒಡಕಂಡು
ಅಣ್ಣ ನನ್ನೂರಿನಮ್ಯಾಲ್ಯಾಕೋ ಬರಲಿಲ್ಲ
ಅವ್ವ ನಿನ್ನೂರಿನಮ್ಯಾಲೆ ಬರುವುಕೇ ನಿನಗೇಬಣ್ಣಾವಿಲ್ಲೋ
ನಿನ್ನ ಮಗಳಿಗೆ ಮಾಗಾಯಿ ಹರಳಿಲ್ಲ
ಮಗಳಿಗೆ ಮಾಗಾಯೀ ಹರಳಿಲ್ಲ ತಂಗಮ್ಮೋ...
ನಾಳೆ ಬರುತೀನಿ ನಿನ್ನ ಊರಿಗೇ...
ಹುಸ್ಕೂರು ವಂದಲಗೆರೆ ಬೀಸೋರಿ ಕಲ್ಲಿನಮ್ಯಾಲೆ
ಹಾಸುಗಂಡು ಓಲೆ ಬರೆಯೋರೆ
ಹಾಸುಗಂಡು ಓಲೆ ಬರೆಯೋನೆ ಅಣ್ಣಯ್ಯಾ
ನಿನ್ನ ದೆಸರ ಮೈಸೂರಿಗೆ ಹೆಸರಾದೋ...
ಅರಕೇರೆ ಬನ್ನಳ್ಳಿ ಸರಕಾರುದ ಕೋಡಳ್ಳಿ
ಸರಕಾರಕೋಗಿ ಬರುವೋನೆ
ಸರಕಾರಕೋಗಿ ಬರುವೋನೆ ತಮ್ಮಯ್ಯಾ
ಸರಿಕಾಣೋ ನಿನ್ನ ದೊರೆತಾನ
ಬಾಳೆಮರ ಹುಟ್ಟಿಲಣ್ಣ ಬಾಳುರುಗೆ ನೆರಳಾದೋ
ನಾನುಟ್ಟೀ ಲಣ್ಣ ಪರಊರುಗೆ
ನಾನುಟ್ಟೀಲಣ್ಣ ಪರಊರುಗೆ ಸೊಸೆಯಾದೆ
ಅಣ್ಣ ನೀನುಟ್ಟೀ ಮನೆಗೆ ದೊರೆಯಾದೆ
ಒಬ್ಬಣ್ಣಾ ಹುಟ್ಟಾ ಗೆಜ್ಜುಗದ ಕುಡಿಯಾದಾ
ನಾವಕ್ಕ ತಂಗೇರಿಗೆ ತವುರಾದ
ಅಕ್ಕಾ ತಂಗೇರಿಗೆ ತವುರಾದ ಅಕ್ಕಯ್ಯೋ
ನಾವು ತವುರೀಗೆ ಹೋಗುದು ಬಲು ಚೆಂದಾ
ಯಾರು ಬಕ್ಕೋರೇನೇ ದಾರೇ ಚಿಕ್ಕಾದರೇನೇ

ನನ್ ದೀರವತಿಯಂತಾ ನನ್ನಿರಿಯಣ್ಣ ಬತುಗುದ್ರೆ
ದೀರಾವು ಉಂಟು ಮನೇಯಲ್ಲೀ
ನನ್ನ ಅಣ್ಣಯ್ಯೋ ನನ್ನಾ ಊರಿಗೆ ಬಂದಾ
ನಿನಗೆಲ್ಲೇ ಬಂದ ಹಿರಿಯೋಳೇ
ನಮ್ಮಣ್ಣ ಬಂದಾ ನನ್ನಾ ಊರಿಗೆ ತಂದಾ
ನಮ್ಮಣ್ಣ ಬಂದ ಕಿರಿಯೋಳೆ
ಅಣ್ಣಯ್ಯ ಬರುವಾಗ ಮಲ್ಲೀಗೆ ಘಮ್ಮೆಂದೋ
ನನ್ನಣ್ಣ ಊರಿಗೆ ಬರುವಾಗ
ನನ್ನಣ್ಣ ಊರಿಗೆ ಬರುವಾ ಚೆಂದಾನೋಡಿ
ಚೆಲ್ಲಿದರೋ ಕಾಣೆ ರತ್ನೀರ
ಚೆಲ್ಲಿದರೊ ಕಾಣೇ ರತ್ನೀರ ಅಣ್ಣಯ್ಯೋ
ನಿನ್ನೆ ವಲ್ಲೀ ವಸ್ತ್ರಣ ಅರುಸುಣ
ಅಕ್ಕಾ ತಂಗೇರು ಲೆಕ್ಕಾಕ್ಕೆ ನಾಲುರೊ
ಚಿಕ್ಕಾಬೆಟ್ಟಾಕ್ಕೆ ಸೌವುದೀಗೆ
ಚಿಕ್ಕಾಬೆಟ್ಟಾಕ್ಕೆ ಸೌವುದೀಗೆ ನಾ ಹೋಗಿ
ಸಿಕ್ಕೀಸಿಕೊಂಡ ಮಳೆರಾಯ
ಮಳೆಬುಡ್ತು ಮರದಾ ಹನಿ ಬುಡದು ಅಣ್ಣಯ್ಯೋ
ನೀಬುಟ್ರು ಜನರ ನುಡಿ ಬುಡದು
ನನ್ನ ತಂಗಮ್ಮ ನೀ ಸುಂದರದ ಗೌರಮ್ಮ
ಗಂಧಾ ಗಜಲಿಂಬೆ ವನದಲ್ಲಿ
ಗಂಧ ಗಜಲಿಂಬಿ ವನದಲ್ಲಿ ಹೇಳಿದಮಾತು
ತಂದೇಳೂಬ್ಯಾಡ ತವರಿಗೆ
ತಂದೇಳು ಬ್ಯಾಡ ತವರೀಗೆ ತಂಗಮ್ಮ
ಹಾಲುನಂತೇ ತವುರು ಹಾಗೇ ಅದೂ
ಅಕ್ಕಾ ತಂಗೇರಾಟಾ ಅಪ್ಪಾನ ಅರುಮಲ್ಲೀ
ಶಿವಗಂಗೇರಾಟ ಹೊಳೆಯಲ್ಲೀ
ಪಾಳ್ಯದಾರೀಲಿ ಕಣ್ಣಲ್ಲೇ (ಕಂಡನಲ್ಲೇ) ಅಣ್ಣಯ್ಯನ
ಕಾಗನುರುಮಾಲು ಕಡಚೆಲುವ
ಕಾಗನುರುಮಾಲು ಕಡುಚೆಲುವ ಅಣ್ಣಯ್ಯ

ವಾಲ್ಗವಾಮಾಡಿ ಬರುತಾರೇ
ನನ್ನ ಊರಿಗೇ ನಾನು ಬಂದೆ ಅಣ್ಣಯ್ಯೋ
ನನಗೇನು ಕೊಟ್ಟಿಯೋ ಹಿರಿ ಅಣ್ಣಾ
ಕರಿಎಮ್ಮೆ ಕೊಡುವೇ ಕೆಂದ ಹಸುವ ಕೊಡುವೇ
ಚೊಜುಗೊಂಬೇನ ಹಸಕೊಡುವೇ
ಕರಿಎಮ್ಮೆ ಬ್ಯಾಡಾ ಅಣ್ಣ ಕೆಂದ್ಗಡಸ್ನ ಹಸಬ್ಯಾಡ
ಚೊಜೂಗೊಂಬೀನ ಹಸ ಬ್ಯಾಡಾ
ಚೊಜೂಗೊಂಬಿನ ಹಸಬ್ಯಾಡ ಅಣ್ಣಯ್ಯೋ
ಸಣ್ಣಗದ್ದೇ ಬಯಲು ಸಮಪಾಲು
ಸಣ್ಣಗದ್ದೇ ಬಯಲು ಸಮಪಾಲು ಕೊಟ್ಟರೆ
ನಾನುಣ್ಣುಣ್ಣುತಾ ತೌವುರ ನೆನೆದೇನು
ಉಣ್ಣುಣ್ಣುತಾ ತೌವುರ ನೆನೆದೇನು ಅಣ್ಣಯ್ಯ
ನೆಗ ನೆಗ್ತಾ ಅಕ್ಕಿ ತೋಳಿಸೇನು
ಚಿಕ್ಕಣ್ಣ ಚೀಟಿಗಾರ ಲಣ್ಣ ಚಿನ್ನಾದೇಲಿ ಮೋಜುನದಾರ
ಚಿಕ್ಕೆಂಡ್ರು ಬುಟ್ಬೂ ಇರಲಾರ
ಚಿಕ್ಕೆಂಡ್ರು ಬುಟ್ಟು ಇರಲಾರ ಲಣ್ಣಯ್ಯೋ
ಸಿಕ್ಕೊಡದೀ ಮಂಡೆ ಒದರುಳಾ
ದೊಡ್ಡಕ್ಕನೂರಿಗೆ ಒಡ್ಡುಗಲ್ಲು ಮರೆಯಾದೋ
ಇಡ್ಡುರುಗಾತಿ ಹಿರಿಯಕ್ಕ
ಇಡ್ಡುರುಗಾತಿ ಹಿರಿಯಕ್ಕನೂರಿಗೆ
ಗೊಡ್ಡುಣಸೇ ಮರ ಮರೆಹಾಯ್ತು

ಉತ್ತರ ದೇವಿ

ನೀರಿಗೋಯ್ತಿನಿ ಅತ್ತೆ ನಿಜಗಲ್ಲು ದುರ್ಗಕ್ಕೆ ತಡವಾದರತ್ತೆ ಬಯ್ಯಾಬ್ಯಾಡಿ ಸುವ್ವೀ
ತಡವಾದರತ್ತೆ ಬಯ್ಯಬ್ಯಾಡಿ ಗೀಯ್ಯಬ್ಯಾಡಿ ಗಿಳಿಬಂದು ನೀರಕಲಕೇವ್ವೋ ಸುವ್ವೀ
ಕಲಕುದ್ರೆ ಕಲಕಲಿ ಕುಲುಕುದ್ರೆ ಕಲಕಾಲಿ ನರಿಗ್ಯಾಕೆ ಎಣ್ಣೀ ಸಡಲೀವ್ವೋ ಸುವ್ವೀ
ಮಾವಯ್ಯ ತ್ವಾಟದ ಜಾಜಿಕುಯ್ಯುಕೋಗಿ ಬಾಳೇಯ ಮುಳ್ಳು ಬಣಚಿಡಿದೋ ಸುವ್ವೀ
ಬಾಳುಗ್ ಮುಳ್ಳುಂಟೆ ಬದನೇಗೆ ಭೇಗುಂಟೆ ಬಾಲೆ ನಿನ್ನ ಮಾತು ನಿಜವುಂಟೆಸುವ್ವೀ
ಎತ್ತುಗೆ ಮಾತುಂಟೆ ಕತ್ತೆಗೆ ಕೊಂಬುಂಟೆ ಅತ್ತಮ್ಮ ನಿನಮಾತು ನಿಜವುಂಟೆ ಸುವ್ವೀ
ನಾನು ಬಂದಾಗ ನೀನು ಚಿಕ್ಕೋಳಲ್ಲೇ ಎಲ್ಲಾಡಿ ಕಲಿತೆ ಹೊಸಮಾತ ಸುವ್ವೀ
ಹಾಕುದು ಮಲ್ಲಿಗೆ ಹಾಕದಂಗೆ ಇದ್ದಾವೆ ಮತ್ತೊಂದು ಚೋಟು ಬೆಳೇವಲ್ತೇ ಸುವ್ವೀ
ಮತ್ತೊಂದು ಚೋಟು ಬೆಳಿಯೊಲ್ತೆ ಅತ್ತಮ್ಮ ಮತ್ತೊಬ್ಬ ರಾಜ ಮುಡಿಯೊಲ್ನೇ ಸುವ್ವೀ
ಅತ್ತೆ ಸೊಸೇರಿಗೆ ಅತ್ತೀತು ಕದನವೂ ಹಿತ್ತಾಲೇಲೋಗಿ ಒಲೆ ಹೂಡೀ ಸುವ್ವೀ
ಹಿತ್ತಾಲೆಲೋಗಿ ಒಲೆ ಹೂಡಿ ಅಡಿಗೆ ಮಾಡಿ ಉತ್ತಬಂದ ಮಗನಿಗೆ ಉಣಲಿಕ್ಕಿ ಸುವ್ವೀ
ಉತ್ತಬಂದ ಮಗನಿಗೆ ಉಣಲಿಕ್ಕಿ ಏನೆಂದಾಳೋ ಉತ್ತರದೇವಿ ನಮಗೆ ತರವಲ್ಲ ಸುವ್ವೀ
ಉತ್ತರದೇವಿ ನಮಗೆ ತರವಲ್ಲ ಕಂದಮ್ಮ ಬುಟ್ಟುಬುಡವಳ ತವರೀಗೆ ಸುವ್ವೀ
ಬುಟ್ಟು ಬುಡೋಕೆ ಎತ್ತಲ್ಲ ಎಮ್ಮೆಯಲ್ಲ ಹತ್ತುವರಕೊಟ್ಟು ಸಭೇಸೇರಿ ಸುವ್ವೀ
ಎತ್ತು ಮೂರೂನಿ ಸಭೆಸೇರಿ ಬಂದೋಳ ಮೆಚ್ಚಾರೆ ತಾಯಿ ಕುಲದೋರು ಸುವ್ವೀ
ಹತ್ತುವರಕೊಟ್ಟ ಪದಕವ ಮಾಡ್ಸೂನಿ ಮತ್ತೊಬ್ಬ ರಾಣಿನ ತರುವೇನು ಸುವ್ವೀ
ಮತ್ತೊಬ್ಬ ರಾಣಿ ತರುವೇನು ಕಂದಮ್ಮ ಬುಟ್ಟು ಬುಡವಳ ತವರೀಗೇ ಸುವ್ವೀ
ಹಂದೀ ಮಾರೂನಿ ಬಂಧೀಯ ಮಾಡಸೂನಿ ಇನ್ನೊಬ್ಬರಾಣಿಯ ತರುವೇನು ಸುವ್ವೀ
ಇನ್ನೊಬ್ಬ ರಾಣಿ ತರುವೇನು ಕಂದಮ್ಮ ಬುಟ್ಟು ಬುಡವಾಳ ತವರೀಗೆ ಸುವ್ವೀ
ನಾನು ಬಂದಾಗ ಬಾಳೆಯಲ್ಲ ಕಿರುಸೊಸಿ ಬಾಳುಗೆ ನೀರೂದೂ ಸಲವೇನು ಸುವ್ವೀ
ಬಾಳುಗೆ ನೀರೂದು ಸಲುಹಿದ್ದಿ ಸೊಸಿಗೋಳೆ ಹೊಯ್ತೀನಿ ನನ್ನ ತವರೀಗೆ ಸುವ್ವೀ
ನಾನು ಬಂದಾಗ ಇಂಬಿಯಲ್ಲ ಕಿರುಸೊಸಿ ಇಂಬಿಗೆ ನೀರೂದು ಸಲಹುವೇನು ಸುವ್ವೀ
ಇಂಬಿಗು ನೀರೂದು ಸಲವಿದ್ದ ಸೊಸುಗೋಳೆ ಹೊಯ್ತೀನಿ ನನ್ನ ತವರೀಗೆ ಸುವ್ವೀ
ಅಟ್ಟದ ಮ್ಯಾಲಿರುವ ಬಟ್ಟಲು ಗುಂಬಳದಣ್ಣ ಅಟ್ಟಾರು ಉಣ್ಣೆ ಸೊಸೆ ಮುದ್ದೇ ಸುವ್ವೀ
ನೀನಾರ ಉಣ್ಣು ನಿನ್ನ ಮಗನುಗಾದರು ಇಕ್ಕು ಮುಂದು ಬರುವ ಸೊಸೆಗಿರುಸೇ ಸುವ್ವೀ

ಅಟ್ಟದ ಮ್ಯಾಲಿರುವ ಪುಟ್ಟಾಣಿ ಸೀರೇನಾ ಉಟ್ಟಾರು ಹೋಗೆ ಸೊಸೆ ಮುದ್ದೆ ಸುವ್ವೀ

ನೀನಾದರು ಉಡು ನಿನ ಸೊಸೆಗಾದರು ಉಡುಸೆ ಮುಂದುಬರುವ ಸೊಸೆಗೆ ಮಡುಗಿರುಸೇ ಸುವ್ವೀ

ದಾರೀರೇಕಾಯ ನಾರುತಗದು ಈಡಾಡಿ ಒಳ್ಳೆಣ್ಣೆ ಬುಟ್ಟು ಹದಗೂಡಿ ಸುವ್ವೀ

ಹೊಳ್ಳೆಣ್ಣೆ ಬುಟ್ಟು ಹದಗೂಡಿದ ತಾಳುದ್ಸ ಮಾಡಾರ ಉಣ್ಣೆ ಸೊಸೆ ಮುದ್ದೇ ಸುವ್ವೀ

ನೀನಾದ್ರು ಉಣ್ಣೆ ನಿನ್ನ ಮಗಳಗಾದ್ರು ಇಕ್ಕೆ ಮುಂದುಬರುವ ಸೊಸೆಗಿರುಸೇ ಸುವ್ವೀ

ಎತ್ತಳು ಕಂದಾನ ಇರುಕಾಳು ಚಾಪೇಯ ಅವರಪ್ಪನ ಮನೆ ಪಡುಂದಾರೀ ಸುವ್ವೀ

ಅವರಪ್ಪನಯ ಪಡಂದಾರಿ ಬಾಗುಲಿಗೆ ಮುತ್ತೀನ ಕೀಲು ಸಡಲಿವ್ರೋ ಸುವ್ವೀ

ಅಪ್ಪ ಬಾಗಿಲತೆಗಿಯೋ ನನ್ನೆತ್ತಪ್ಪ ನನಗೆ ಕದಾತೆಗೆಯೋ ಸುವ್ವೀ

ಹಾಸಿಗೆ ಹಾಸಾವೆ ದೀಪಾವು ಲೇಸಾವೇ ನಿನ್ನ ಚಿಕ್ಕಮ್ಮತೋಳಲ್ಲಿ ಒರುಗಳೇ ಸುವ್ವೀ

ನಿನ್ನ ಚಿಕ್ಕಮ್ಮ ತೋಳಲೆ ಒರಗವಳೆ ಕಂದಮ್ಮ ಹೋಗಮ್ಮ ನಿನ್ನಣ್ಣನ ಅರಮನೆಗೆ ಸುವ್ವೀ

ಅಣ್ಣಬಾಕುಲ ತೆಗೆಯೋ ನನ್ನಣ್ಣ ಬಾಗಿಲು ತೆಗೆಯೋ ನನ್ನ ಒಂದುಗುಟ್ಟುದೋನೆ ಕದಾತೆಗೆಯೋ ಸುವ್ವೀ

ಹಾಸಿಗೆ ಆಸಾವೇ ದೀಪಾವು ಲೇಸಾವೆ ನಿಮ್ಮತ್ತಿಗಮ್ಮ ತೋಳೇಲಿ ಒರುಗವಳೆ ಸುವ್ವೀ

ಅಕ್ಕ ಬಾಕುಲು ತೆಗಿಯೆ ನನ್ನಕ್ಕ ಬಾಕುಲು ತೆಗಿಯೆ ನನ್ನ ಒಂದುಗುಟ್ಟುದೋಳೆ ಬಾಕುಲು ತೆಗೆಯೇ ಸುವ್ವೀ

ಹಾಸಿಗೆ ಆಸಾವೆ ದೀಪವು ಲೇಸಾವೇ ನಿಮ್ಮ ಮಾವಯ್ಯ ತೋಳೇಲಿ ಒರುಗವರೇ ಸುವ್ವೀ

ಅವ್ವ ಬಾಕುಲು ತೆಗೆಯೆ ನನ್ನವ್ವ ಬಾಕುಲತೆಗಿಯೇ ನನ್ನೆತ್ತವ್ವ ನನಗೆ ಕದಾತೆಗೆಯೇ ಸುವ್ವೀ

ಕದವ ತೆಗೆಯಾಕೆ ನಿಮ್ಮಪ್ಪನ ಮನೆಯಲ್ಲ...

ಗಂಡನ ಮನೆಯಿಂದ ಹೊರಬಂದ ಉತ್ತರದೇವಿಗೆ ತವರಿನಲ್ಲಿ ಕೂಡ ಅವಳನ್ನು ಸಲುಹಲು ಯಾರೂ ಬರುವುದಿಲ್ಲ. ಅಪ್ಪ, ಅವ್ವ, ಅಣ್ಣ, ಅಕ್ಕ ಎಲ್ಲರೂ ಬೇರೆ ಕಾರಣ ಹೂಡಿ ಅವಳಿಗೆ ಬಾಗಿಲು ತೆಗೆಯುವುದಿಲ್ಲ. ಕೊನೆಗೆ ತನ್ನ ಗೆಳತಿಯ ಮನೆಗೆ ಹೋಗುತ್ತಾಳೆ. ಗೆಳತಿ ಅತ್ಯಾಧಾರಗಳಿಂದ ಅವಳ ಸಂಕಟವನ್ನು ಕೇಳಿ ಸಹಾಯ ಮಾಡುತ್ತಾಳೆ. ಕೊನೆಗೆ ಉತ್ತರದೇವಿ ಉತ್ತರೆ ಮಳೆಯಾಗಿ ಹೋಗುತ್ತಾಳೆ. ಮಗ ಜೇಷ್ಠ ಮಳೆಯಾಗಿ ಹೋಗುತ್ತಾನೆ.

ಸರ್ವಜ್ಞ

ಅರಗು ಅಳ್ಳಿಕೆ ಲೇಸು ಗುಡುಗು ಮಿಂಚಿಗೆ ಲೇಸು
ಸಡಗಾರ ಲೇಸಯ್ಯ ಮದುವೇಗೆ
ಅಯ್ಯ ಸಡಗರ ಲೇಸಯ್ಯ ಮದುವೇಗೆ ಊರ್‍ಗೊಬ್ಬ
ಅನುಭವಿ ಲೇಸಯ್ಯ ಸರುವಗುನು
ತಂದನ್ನತಾನೋ ತಂದರತಂದಾನಾನಾನೂ
ತಂದನ್ನ ತಾನೋ ತಂದರುನಾನೋ

ಬತ್ತ ಬತ್ತಗೆ ಲೇಸು ಮುತ್ತು ಕೊರಳಿಗೆ ಲೇಸು
ನಕುಸತ್ರ ಲೇಸಯ್ಯ ಗಗನಕ್ಕೆ
ಅಯ್ಯ ನಕುಸತ್ರ ಲೇಸಯ್ಯ ಗಗನಕ್ಕೆ ಊರ್‍ಗೊಬ್ಬ
ಅನುಭವಿ ಲೇಸಯ್ಯ ಸರುವಗುನು
||ತಂದನ್ನ ತಾನೋ||

ಆಡು ಹಳ್ಳಗೆ ಲೇಸು ಗೋಡೇ ಸುಣ್ಣಗೆ ಲೇಸು
ಕಾಡೀಗೇ ಲೇಸಯ್ಯ ಕಣ್ಣೀಗೆ
ಅಯ್ಯ ಕಾಡೀಗೆ ಲೇಸಯ್ಯ ಕಣ್ಣೀಗೆ ಊರ್‍ಗೊಬ್ಬ
ಅನುಭವಿ ಲೇಸಯ್ಯ ಸರುವಗುನು
||ತಂದನ್ನ ತಾನೋ||

ಅಜ್ಜ ಅಜ್ಜಿಗೆ ಲೇಸು ಮಜ್ಜಣಕೆ ಮಡಿಲೇಸು
ಕಜ್ಜಾಯ ತುಪ್ಪ ಉಣಲೇಸು
ಅಯ್ಯ ಕಜ್ಜಾಯ ತುಪ್ಪ ಉಣಲೇಸು ಊರ್‍ಗೊಬ್ಬ
ಅನುಭವಿ ಲೇಸಯ್ಯ ಸರುವಗುನು
||ತಂದನ್ನ ತಾನೋ||

ಈಗ ಬಾ ಆಗ ಬಾ ಹೋಗಿ ಬಾ ಅನ್ನುದಲೆ
ಆಗಲೇ ಕರೆದು ಕೊಡುವವನ
ಅಯ್ಯ ಆಗಲೇ ಕರೆದು ಕೊಡುವವನ ಧರ್ಮ
ಹೊನ್ನಾಗದೆ ಬಿಡದಯ್ಯ ಸರುವಗುನು
||ತಂದನ್ನ ತಾನೋ||

ಸಾಂಸ್ಕೃತಿಕ ಪದಕೋಶ

ಹಳ್ಳು ಹಾಕುವುದು	:	ಹರಕೆ ಹೊತ್ತವರು ಹರಳು (ಔಡಲ)ನ್ನು ಕೊಂಡಹಾಯುವ ಸಂದರ್ಭದಲ್ಲಿ ಕೊಂಡಕ್ಕೆ ಹಾಕುತ್ತಾರೆ.
ಈಡುಗಾಯಿ	:	ನೀರು ತುಂಬಿದ ತೆಂಗಿನಕಾಯಿಯನ್ನು ಕಬ್ಬಾಳಮ್ಮನ ಪೂಜೆಕುಣಿತ, ಏರುಗಳ ಮುಂದೆ, ದೇವಸ್ಥಾನದ ಮುಂದೆ ಒಡೆಯುವುದು
ಪರಮಾಡುವುದು	:	ಊರಿನವರೆಲ್ಲ ಒಟ್ಟಾಗಿ ಸೇರಿ ದೇವರ ಹರಕೆ ತೀರಿಸುವುದು
ಮುನಿಮಾಡುವುದು	:	ಕುಟುಂಬದವರು ಮಾತ್ರ ಸೇರಿ ಅವರ ಹೊಲಗಳ ಹತ್ತಿರದ ಉತ್ತಗಳಿಗೆ ಕೋಳಿಕೂದು ಎಡೆ ಇಟ್ಟು ಪೂಜೆ ಮಾಡುವುದು.
ನೀರಾಕಂಡ್ಲು	:	ಹೆರಿಗೆಯಾಗುವುದು
ಹೆಸರು ಕಟ್ಟುವುದು	:	ನಾಮಕರಣ
ಮರಿಕೂದು	:	ಆಡು ಕುರಿ ಬಲಿಕೊಡುವುದು, ಬೇಟೆ ಕೊಡುವುದು
ಸೋಗಲು	:	ಹೆಣ್ಣಿಗೆ ಉಡಿತುಂಬುವುದು, ಮೊಡ್ಲು ಕಟ್ಟುವುದು
ದುಂಬು	:	ಧೂಳು, ಮಣ್ಣಿನ ಕಣದ ಕಸ
ಸೂತ್ಕ ತೆಗೆಯುವುದು	:	ಮಕ್ಕಳು ಹುಟ್ಟಿದಾಗ, ಯಾರಾದರೂ ಸತ್ತಾಗ ಮಾಡುವ ಸ್ವಚ್ಛತಾಕಾರ್ಯ ದೇವರ ಪೂಜೆ
ಹೊಸನೀರು	:	ಸೂತ್ಕ ತೆಗೆಯುವ ಸಂದರ್ಭದಲ್ಲಿ ಪೂಜೆಗೆ ಮೊದಲು ಕೆರೆ, ಭಾವಿ, ಕೊಳಾಯಿಯ ಹತ್ತಿರದಿಂದ ಹೊಸ ಗಡಿಗೆಗಳಿಂದ ನೀರುತರುವುದು
ದೇವರು ಒಡ್ಡಿಸು	:	ಪೂಜೆ ಮಾಡುವ ಸಂದರ್ಭದಲ್ಲಿ ಮನೆದೇವರನ್ನು ಇಟ್ಟು ಪೂಜೆ ಮಾಡುವುದು
ಪಡಸಾಲೆ	:	ಮನೆಯ ಮುಂದಿನ ಜಗಲಿ
ಬೀದಿ	:	ಕೇರಿ, ರಸ್ತೆ, ರೋಡು
ಈಚ್ಗೆ ಇಡುದ್ಬುಟ್ರಂತೆ	:	ವ್ಯಕ್ತಿಯ ಸಾವು ಖಚಿತ ಎಂದು ತಿಳಿದಾಗ ಅವನನ್ನು ಮನೆಯಿಂದ ಪಡಸಾಲೆಗೋ, ಮನೆಯ ಮುಂದಿನ ಜಾಗಕ್ಕೊ ತಂದು ಮಲಗಿಸುತ್ತಾರೆ.
ಕುರ್ಜು	:	ಚಟ್ಟಕ್ಕೆ ಗೋಪುರದ ಆಕಾರದಲ್ಲಿ ಕಟ್ಟಿ ಅದರೊಳಗೆ ಸತ್ತವ್ಯಕ್ತಿಯನ್ನು ಕೂರಿಸುತ್ತಾರೆ.

ಸೌದೆ	:	ಕಟ್ಟಿಗೆ
ಚಟ್ಟ	:	ಸತ್ತ ವ್ಯಕ್ತಿಯನ್ನು ಹೊತ್ತೊಯ್ಯಲು ಬಿದಿರು ಬೊಂಬುಗಳಿಂದ ಕಟ್ಟಿರುವುದು.
ತಿಕಮೊಕಣಾಗೆ	:	ಉಲ್ಟಾಪಲ್ಟಾ, ಹಿಂದು ಮುಂದು
ಮೆದೆ	:	ಹುಲ್ಲಿನ ಬಣವೆ
ಊರೊಟ್ಟು	:	ಊರಿನ ಎಲ್ಲರು ಒಟ್ಟುಗೂಡುವುದು
ಚಿದುಕ್ಬೇಳೆ	:	ಇದುಕುಬೇಳೆ, ಹಸಿ ಅವರೆ ಕಾಳುಗಳನ್ನು ಸಿಪ್ಪೆ ತೆಗೆದಿರುವುದು
ಪತ್ರೆ	:	ಹಸಿರು ಎಲೆಗಳು(ಮಾವು, ಹಲಸು, ನೇರಳೆ, ಮಾವೇರಿ ಮುಂತಾದವು)
ಎಳ್ತಂಬಿಟ್ಟು	:	ಎಳ್ಳು, ಬೆಲ್ಲ ಕುಟ್ಟಿಮಾಡಿದ ಉಂಡೆ
ಸಾಮಂತ್ಗೆ	:	ಸೇವಂತಿಗೆ
ವಸ್ತುಡುಕು	:	ವರ್ಷದತೊಡಕು, ಯುಗಾದಿಹಬ್ಬದ ಎರಡನೇ ದಿನದ ಹಬ್ಬ, ಮಾಂಸಾಹಾರದ ದಿನ
ಚಂದು	:	ಚಂದ್ರ
ಕಳ	:	ಕಣ, ರಾಗಿ ಹೊಕ್ಕುವ ಕಣ
ಕಡುಬು	:	ಅಕ್ಕಿಯ ಇಟ್ಟಿನಿಂದ ಮಾಡುವ ಆಹಾರ ಪದಾರ್ಥ
ಕಾಯಾಲು	:	ತೆಂಗಿನಕಾಯನ್ನು ರುಬ್ಬಿ ಬೆಲ್ಲಹಾಕಿ ತಯಾರಿಸಿದ ದ್ರವರೂಪದ ಕಾದ್ಯ
ಮಾಳ್‌ಪಕ್ಷ	:	ಮಾರ್ಲಮಿಹಬ್ಬ, ಮಹಾನವಮಿ, ಪಿತೃಪಕ್ಷ
ಬಾಚಣಿಗೆ	:	ತಲೆಕೂದಲನ್ನು ಬಾಚಿಕೊಳ್ಳಲು ಬಳಸುವ ವಸ್ತು, ಕೂಂಬ್
ಸೀರಣಿಗೆ	:	ತಲೆಯಲ್ಲಿನ ಏನು ಮೊಟ್ಟೆಗಳನ್ನು ಹಿಡಿಯಲು ಮರದಿಂದ ತಯಾರಿಸಿದ ವಸ್ತು.
ಇಟ್ಟು	:	ರಾಗಿಮುದ್ದೆ
ನಿಪ್ಪಟ್ಟು	:	ಹಪ್ಪಳದ ರೀತಿಯ ಕಾರದ ತಿಂಡಿ
ಕಜ್ಜಾಯ	:	ಅಕ್ಕಿಯ ಹಿಟ್ಟು, ಬೆಲ್ಲದಿಂದ ತಯಾರಿಸಿದ ಕರಿದ ತಿಂಡಿ
ಗದ್ದಿಗೆ	:	ದೇವರನ್ನು ಇಡುವ ಸ್ಥಳ
ಸಡ್ಡು	:	ಗುಡಿಸಲು

ನೆರ್ಕೆ	:	ಬಿದಿರು ಮತ್ತು ತೆಂಗಿನಗರಿಗಳಿಂದ ಮಾಡಿದ ತಡಿಕೆ
ದೊಡ್ಡುಟ್ಟು	:	ದೊಡ್ಡಬಳಗ, ದೊಡ್ಡಕುಟುಂಬದಿಂದ ಬಂದ
ಬಾವುಣಿಸು	:	ಎಲ್ಲರನ್ನು ಪ್ರೀತಿಯಿಂದ ನೋಡಿಕೊಳ್ಳುವುದು
ಅನುಸರುಸ್ಕಂದು	:	ಸರಿತಪ್ಪು, ಕಷ್ಟಸುಖ ಎಲ್ಲವನ್ನು ಅರಿತು ಹೊಂದಾಣಿಕೆಯಿಂದ ಇರುವುದು.
ಮುಸ್ಸಿ	:	ಮೂತಿ
ಹಿಂದುಕ್ ತಿರ್ಬಾಕಂದು	:	ಪ್ರತ್ಯುತ್ತರ ನೀಡುವುದು, ಮಾತಿಗೆ ಮಾತು ಬೆಳೆಸುವುದು.
ಹಸೀಟು	:	ರಾಗಿಯ ಹಸಿ ಇಟ್ಟು
ವರಸೆ	:	ಅಕ್ಕ, ಮಾವ, ಅತ್ತೆಯ ಮಕ್ಕಳು ಮದುವೆ ಮಾಡಿಕೊಳ್ಳುವುದಕ್ಕೆ ವರಸೆ
ಮನೆವಾಳುಕ್ತನ	:	ಮನೆ ಅಳಿಯನನ್ನಾಗಿ ಮಾಡಿಕೊಳ್ಳುವುದು
ಎಕ್ಕಡ	:	ಜೋಡು, ಚಪ್ಪಲಿ
ರಾತಾಗಿ	:	ಹೆಚ್ಚು ಹೊಳೆಯುವ
ಕಾದ್ನೀರು	:	ಬಿಸಿನೀರು, ಕಾಯಿಸಿದ ನೀರು
ಜಿನ	:	ದಿನ
ನಾಗಬೆತ್ತ	:	ದೇವರು ಪೂಜೆ ಮಾಡಲು ಬಳಸುವ ಕೋಲು
ಎಡೆಬಟ್ಲಪ	:	ದೇವರಗುಡ್ಡರು ಮನೆಗಳಲ್ಲಿ ದೇವರನ್ನು ಒಡ್ಡಿಸಿದಾಗ ದೇವರಿಗೆ ಪ್ರಸಾದವನ್ನು ತುಂಬಿಡುವ ಅಕ್ಷಯ ಪಾತ್ರೆ.
ಮುಯ್ಯಿ	:	ಪ್ರತಿಯಾಗಿ ನೀಡುವುದು
ನೆರವಿ	:	ಬೀಗರ ಊಟ
ಒಪ್ಪೊತ್ತು	:	ಅರ್ಧದಿನ
ಮದ್ದೀನ	:	ಮದ್ಯಾಹ್ನ
ಎಡೊತ್ತು	:	ಮದ್ಯಾಹ್ನ ನಂತರದ ಸಮಯ
ಮುಂಗಾರು	:	ವರ್ಷದ ಮೊದಲು ಬೀಳುವ ಮಳೆ (ಮೇ, ಜೂನ್ ತಿಂಗಳಲ್ಲಿ)
ಹಿಂಗಾರು	:	ಸೆಪ್ಟೆಂಬರ್, ಅಕ್ಟೋಬರ್ ತಿಂಗಳಲ್ಲಿ ಬೀಳುವ ಮಳೆ
ಮುದುವಾದಿ	:	ಬಿತ್ತನೆಯನ್ನು ಮುಂಗಾರಿನ ಮಳೆಗೆ ಬಿತ್ತದರೆ, ಬೆಳೆ ಬೇಗ ಬಂದರೆ ಮುದುವಾದಿ

ಎಳವಾದಿ	:	ಬಿತ್ತನೆ ಮಾಡುವುದು ಹಿಂಗಾಲವಾದರೆ ತಡವಾಗಿ ಬೆಳೆಯುವ ಬೆಳೆ.
ಬಿತ್ತು	:	ಹೊಲಕ್ಕೆ ಬಿತ್ತನೆ ಮಾಡುವುದು.
ಚೆಲ್ಲುವುದು	:	ಹೊಲ ಬಿತ್ತನೆ ಮಾಡುವುದು
ಕೈಚೆಲ್ಲೆ	:	ಕೂರ್ಗೆ ಉಪಯೋಗಿಸದೆ ಬರಿಯ ಕೈಯಲ್ಲೇ ರಾಗಿ ಬಿತ್ತುವುದು.
ಹೆಣ್ಣಾಳು	:	ಮಹಿಳಾ ಕೂಲಿ ಕೆಲಸದವರು
ಗಂಡಾಳು	:	ಪುರುಷ ಕೂಲಿ ಕೆಲಸದವರು
ಮುಯ್ಯಾಳು	:	ಕೆಲಸಕ್ಕೆ ಪ್ರತಿಯಾಗಿ ಕೆಲಸ ಮಾಡುವವರು.
ಹದ	:	ಸರಿಯಾದ ಸಮಯ, ಹವಣಿಸು
ಅಣೆ	:	ರಾಗಿ ಹುಲ್ಲಿನ ಮೆದೆ (ಬಣವೆ)ಗಳಿಗೆ ಕೆಳಗೆ ಗೆದ್ದಲು ಬರದ ರೀತಿಯಲ್ಲಿ ಕೊಡುವ ತಳಪಾಯ.
ಸಾಮಾನು	:	ವಸ್ತುಗಳು
ಕರಬೆ	:	ಮೊದಲನೆ ಬಾರಿಗೆ ಉಳುವ ಹೊಲ
ಮೊಗಚಣೆ	:	ಎರಡು ಅಥವಾ ಮೂರನೇ ಬಾರಿ ಉಳುವುದು
ಗಾಳು ಸಾಲು	:	ಮೊದಲು ಅಥವಾ ಮುಂದಿನ ಸಾಲು
ಕೋಳು ಸಾಲು	:	ಕೊನೆಯ ಅಥವಾ ಹಿಂದಿನ ಸಾಲು
ಪಸ್ಮೆ	:	ಸ್ವಲ್ಪ ಹಸಿ ಹಸಿ ಇರುವುದು
ಕೊನೆ	:	ಎಳವಾರದ ಕೊನೆ, ಸೌದೆ, ಕೊಂಡಕ್ಕೆ ಹಾಕಲು ಎಳವಾರಕ್ಕೆ ಕಟ್ಟುವ ಕಟ್ಟಿಗೆ, ಕಡೆಯ
ಮೊಕರೊಂಬೆ	:	ಹಸು, ಎತ್ತು, ಎಮ್ಮೆ, ಕೋಣಗಳ ಮುಖವನ್ನು ಅಂದಗೊಳಿಸುವ ಹಗ್ಗದಿಂದ ಎಣೆದಿರುವ ಒಂದು ಅಲಂಕಾರ ವಸ್ತು.
ಗೌಸು	:	ಹಸು, ಎತ್ತು, ಎಮ್ಮೆ, ಕೋಣಗಳಿಗೆ ಅಲಂಕರಿಸುವ, ಬಣ್ಣದ ಚಿತ್ರಗಳಿಂದ ಕೂಡಿದ ಮೈಮುಚ್ಚುವ ಬಟ್ಟೆ
ಕತ್ನುರಿ	:	ಎಲ್ಲಾ ಜಾನುವಾರುಗಳ ಕತ್ತಿಗೆ ಕಟ್ಟುವ ಹಗ್ಗ
ತಾಣ	:	ಸ್ಥಳ, ತಳ
ತಣಿಗೆ	:	ತಟ್ಟೆ, ಊಟಮಾಡುವ ತಟ್ಟೆ

ಅರಬಿ	:	ಮಣ್ಣಿನ ಗಡಿಗೆ
ವಾಮ	:	ನಿಯಮ
ಗಿಂಡಿ	:	ಕಬ್ಬಾಳಮ್ಮನ ಕರಗ, ಅರಬಿ, ಗಡಿಗೆ
ಗಳಾಸು	:	ನೀರು ಕುಡಿಯಲು ಬಳಸುವ ಲೋಟ
ಒಕ್ಕುವುದು	:	ರಾಗಿಯನ್ನು ತೆನೆಗಳಿಂದ ಬೇರ್ಪಡಿಸುವುದು
ಕುಯಿಲು	:	ಬೆಳೆದ ರಾಗಿಯನ್ನು ಕಟಾವು ಮಾಡುವುದು
ಕಟ್ಣೆ	:	ಕಟಾವು ಮಾಡಿದ ರಾಗಿಯ ಹುಲ್ಲನ್ನು ಮೆದೆ (ಬಣವೆ) ಹಾಕುವುದು
ಮುತುವರ್ಜಿ	:	ಜೋಪಾನ
ರಾಸು	:	ಜಾನುವಾರುಗಳು
ಸೂಲು	:	ಜಾನುವಾರುಗಳು ಕರುಗಳನ್ನು ಹಾಕುವುದಕ್ಕೆ ಸೂಲು
ಕಡಸು, ಕನ್ನಗಡಸು	:	ಇದುವರೆಗೂ ಒಂದೂ ಕರವನ್ನು ಹಾಕದಿರುವ ಹಸು
ಹೆಂಗರ	:	ಹೆಣ್ಣುಕರ
ಹೋರ್ಕರ	:	ಗಂಡುಕರ
ಗಿಡ್ಡ	:	ಹೋರಿ
ಬಿತ್ತನೆ ಹೋರಿ	:	ಹಸುಗಳ ಬಿತ್ತನೆಗೆಂದೇ ಮೀಸಲಿರುವ ಹೋರಿ
ಇರುಳು	:	ಹಸು, ಎತ್ತು, ಎಮ್ಮೆ, ಕೋಣಗಳ ಭುಜ, ಗೋಪುರ
ಬಸವ	:	ದೇವರ ಹೆಸರಲ್ಲಿ ದೇವರಿಗೆಂದೇ ಮೀಸಲಾಗಿ ಬಿಡುವ ಹಸು, ಎತ್ತುಗಳು.
ಸಾಲು	:	ಅವರೆ, ತೊಗರಿ, ಜೋಳ, ತರಗುಣಿ, ಹುಚ್ಚೆಳ್ಳು ಮುಂತಾದ ದ್ವಿದಳ ಧಾನ್ಯಗಳನ್ನು ರಾಗಿ ಹೊಲದ ಮದ್ಯದಲ್ಲಿ ಒಂದು ಮಾರಿಗೆ ಒಂದರಂತೆ ಇರುವ ಬೆಳೆ
ಇಂಗಾಲ	:	ಬಿತ್ತನೆ ಮಾಡುವ ಸಮಯ ಮೀರಿ, ನಂತರ ಬಿತ್ತನೆ ಮಾಡಿದರೆ ಅದನ್ನು ಇಂಗಾಲ ಎನ್ನುತ್ತಾರೆ.
ತಗಾ	:	ಕಷ್ಟ, ಕಷ್ಟದ ಕೆಲಸ
ಓಪ್ಪುನೇರಳೆ	:	ರೇಷ್ಮೆ ಗಿಡಗಳು
ಕಡ್ಲೆಕಾಯಿ	:	ನೆಲಗಡಲೆ, ಶೇಂಗ

ರಾಜಣ	:	ರಾಗಿ
ವತ್ತಾರೆ	:	ಮುಂಜಾನೆ, ಬೆಳಗಿನ ಸಮಯ
ಹೊಳೆ	:	ನದಿ
ಮೂರ್	:	ಸ್ವಲ್ಪ, ಕೆಲವು
ಕೊತ್ತಿ	:	ಬೆಕ್ಕು
ನಳ್ಳಿ	:	ಏಡಿಕಾಯಿ
ನಚ್ಚಿರ	:	ಇರುವೆ
ಹಕ್ಕಿ	:	ಪಕ್ಷಿ
ಕೆರೆತಡಿ	:	ಕೆರೆಯ ದಡ
ಕುತ್ತಿತ್ತ	:	ಕುಳಿತು ಕೊಂಡಿದ್ದ
ಗಂಗಮ್ಮ	:	ನೀರು
ಬೆಟ್ಟು	:	ಬೆರಳು
ನಾಗಪ್ಪ	:	ನಾಗರಹಾವು
ನಡಂತ್ರದಲ್ಲಿ	:	ಮದ್ಯದಲ್ಲಿ
ಸಂಬಳಕ್ಕೆ	:	ಜೀತ ಮಾಡುವುದು
ಇಂಡ್ರು, ಹೆಂಡ್ರು	:	ಹೆಂಡತಿ
ಚೂರಿ	:	ಚಾಕು
ಕೊರಬಾಡು	:	ಹಸಿಮಾಂಸವನ್ನು ಸಣ್ಣದಾಗಿ ಕತ್ತರಿಸಿ ಚೆನ್ನಾಗಿ ಒಣಗಿಸುತ್ತಾರೆ.
ತೆವರಿ	:	ಹೊಲಗದ್ದೆಗಳ ಬದುಗಳು
ವಾಡೆ	:	ದವಸ ದಾನ್ಯ ತುಂಬುವ ಮಣ್ಣಿನಿಂದ ಮಾಡಿರುವುದು
ಮೂಡೆ	:	ಬಿತ್ತನೆ ಬೀಜಗಳನ್ನು ಶೇಖರಣೆ ಮಾಡಲು ಬಳಸುವುದು
ಅರಿ	:	ಕುಯ್ದು ರಾಗಿ ಹುಲ್ಲನ್ನು ಜೋಡಿಸಿ ಇಡುವುದು
ರೋಜ್‌ವಾರ್‌ಗಿಡ	:	ಗಿಡ್ಡಿಮೆಳೆ
ಜಂಬಾಗಿ	:	ಹುಲುಸಾಗಿ, ಉದ್ದವಾಗಿ ಬೆಳೆಯುವುದು

ಬುರ್ಲೆ	:	ಹುಲುಸಾಗಿ ಬೆಳೆಯದ, ಕೆಂಚಿಡಿದಿರುವ ಹುಲ್ಲು
ಅರೆ	:	ವಿಶಾಲವಾದ ಕಲ್ಲು ಬಂಡೆ
ನಿಲೆತ್ತುವುದು	:	ಒಕ್ಕಣೆಮಾಡಿದ ರಾಗಿಯನ್ನು ಮಣ್ಣಿನ ದೂಳು ತೆಗೆಯುವುದು
ಹೊರಸೂಕು	:	ಆರೋಗ್ಯ ತಪ್ಪುವುದು
ಎಜ್ಜ	:	ತೂತು, ರಂದ್ರ
ಬೀಡು	:	ಸರದಿ, ಕೋಳಿ ಒಂದು ಸಾರಿ ಮೊಟ್ಟೆ ಇಕ್ಕಿ ಮರಿ ಮಾಡಿದರೆ ಅದು ಒಂದು ಬೀಡು. ಮಾವಿನ ಮರ ವರ್ಷದಲ್ಲಿ ಬಿಡುವ ಮಾವಿನ ಕಾಯಿಗೂ ಬೀಡು ಎನ್ನುತ್ತಾರೆ.
ವಲ್ಲದೆ	:	ಇಷ್ಟವಿಲ್ಲದೆ
ತೊಟ್ಟಿಹಟ್ಟಿ	:	ಮನೆಯ ಮದ್ಯ ತೊಟ್ಟಿ ಇರುವ ಮನೆ
ಹಂಚಿ ಹುಲು	:	ನಾಲೆ ಹುಲ್ಲು
ಅವ್ವ	:	ತಾಯಿ
ಅಪ್ಪ	:	ತಂದೆ
ಬಳ್ಳ	:	ಎರಡು ಇಬ್ಬಳಿಗೆ, ಹತ್ತು ಸೇರು
ನೆನಿಹಾಕು(ನೆನಾಕು)	:	ಕಾಳುಗಳನ್ನು ನೀರಿನಲ್ಲಿ ನೆನೆಸುವುದು
ನಾಕ್ನಾಕು	:	ನಾಲ್ಕು ನಾಲ್ಕು
ಹಸ್ಕಲ್ಲು	:	ಹಸೆಕಲ್ಲು, ರಾಗಿ ಮುದ್ದೆ ಕಟ್ಟುವ, ಕಾರ ಅರೆಯುವ ಚಪ್ಪಟೆಯಾಕಾರದ ಕಲ್ಲು
ತರುಗುಣಿ	:	ಹಲಸಂದೆ
ಅಡ್ಲುಕಾಯಿ	:	ಪಡವಲಕಾಯಿ
ಸಾಸಾರು	:	ಬಟ್ಟಲು
ಮಳ್ಳು	:	ಕುದಿತ, ಕುದಿಯುವುದು, ಉಕ್ಕುವುದು
ಗೌರಿ	:	ಗೌರಿಹಬ್ಬ
ಒಬ್ಬಟ್ಟು	:	ಹೋಳಿಗೆ
ಸೋರಾಕು	:	ನೀರು ಮತ್ತು ಕಾಳುಗಳನ್ನು ಬೇರ್ಪಡಿಸುವುದು

ವಕ್ತೃ ವಿವರ

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಊರು	ಜಾತಿ	ಶಿಕ್ಷಣ
೧.	ಸಾತಗಿರಿಗೌಡ	೭೨	ಒಕ್ಕಲುತನ	ಕಬ್ಬಾಳು	ಒಕ್ಕಲಿಗ	
೨.	ನಾರಾಯಣಪ್ಪ	೬೦	ಒಕ್ಕಲುತನ	ಕಬ್ಬಾಳು	ಒಕ್ಕಲಿಗ	
೩.	ಮಾರೇಗೌಡ	೫೬	ಗ್ರಾ.ಪಂ.ಅ. ಪೂಜಾರಿ	ಕಬ್ಬಾಳು	ಒಕ್ಕಲಿಗ	
೪.	ಕರಿಯಣ್ಣ	೭೦	ಒಕ್ಕಲುತನ	ಹೊಸಕಬ್ಬಾಳು	ಒಕ್ಕಲಿಗ	
೫.	ಕಾಳೇಗೌಡ	೬೮	ಒಕ್ಕಲುತನ	ಕಬ್ಬಾಳು	ಒಕ್ಕಲಿಗ	
೬.	ಲಕ್ಷ್ಮಣ	೭೦	ಮರಗೆಲಸ	ಕಬ್ಬಾಳು	ಒಕ್ಕಲಿಗ	
೭.	ಸಣ್ಣಯ್ಯ	೬೫	ಒಕ್ಕಲುತನ	ಹೊಸಕಬ್ಬಾಳು	ಪ.ಜಾ.	
೮.	ಬೋರಮ್ಮ	೬೮	ಕೂಲಿ	ಹೊಸಕಬ್ಬಾಳು	ಪ.ಜಾ.	
೯.	ಕೆಂಪಮ್ಮ	೬೫	ಒಕ್ಕಲುತನ	ಹೊಸಕಬ್ಬಾಳು	ಒಕ್ಕಲಿಗ	
೧೦.	ಕಬ್ಬಾಳೇಗೌಡ	೬೦	ಒಕ್ಕಲುತನ	ಹೊಸಕಬ್ಬಾಳು	ಒಕ್ಕಲಿಗ	
೧೧.	ಮಾಧವಶರ್ಮ	೬೫	ಒಕ್ಕಲುತನ	ಹೊಸಕಬ್ಬಾಳು	ಬ್ರಾಹ್ಮಣ	
೧೨.	ಮಹೇಶ್	೪೦	ರೇಷ್ಮೆಕೃಷಿ	ಅಚ್ಚಲು	ಒಕ್ಕಲಿಗ	ಪಿ.ಯು.ಸಿ.
೧೩.	ಚೌಡಯ್ಯ	೮೦	ಒಕ್ಕಲುತನ	ಬೊಮ್ಮನಹಳ್ಳಿ	ಪ.ಜಾ.	
೧೪.	ಪ್ರೇಮಮ್ಮ	೬೫	ಒಕ್ಕಲುತನ	ಹೊಸಕಬ್ಬಾಳು	ಪ.ಜಾ.	
೧೫.	ಮಾದೇಗೌಡ	೫೬	ದೇವಸ್ಥಾನದ ಕೆಲಸ	ಕಂಸಾಗರ	ಒಕ್ಕಲಿಗ	
೧೬.	ವೆಂಕಟೇಶ	೩೮	ದೇವಸ್ಥಾನದ ಕೆಲಸ	ಬೊಮ್ಮನಹಳ್ಳಿ	ಛಲವಾದಿ	೬ನೇ ತರಗತಿ
೧೭.	ಕೆಂಪಯ್ಯ	೭೦	ಒಕ್ಕಲುತನ	ಹೊಸಕಬ್ಬಾಳು	ಪ.ಜಾ.	
೧೮.	ರಘು	೩೭	ವ್ಯಾಪಾರಿ	ಕಬ್ಬಾಳು	ಒಕ್ಕಲಿಗ	ಎಸ್.ಎಸ್.ಎಲ್.ಸಿ

೧೯.	ಕೆಂಪಹೊನ್ನಮ್ಮ	೭೬		ಬೊಮ್ಮನಹಳ್ಳಿ	ಪ.ಜಾ.	
೨೦.	ರಾಜಣ್ಣ	೫೨	ಒಕ್ಕಲುತನ	ಹೊಸಕಬ್ಬಾಳು	ಪ.ಜಾ.	
೨೧.	ಕೆಂಪಮ್ಮ	೭೦	ಒಕ್ಕಲುತನ	ಹೊಸಕಬ್ಬಾಳು	ಪ.ಜಾ.	
೨೨.	ಪೆಚ್ಚಮ್ಮ	೬೯	ಒಕ್ಕಲುತನ	ಹೊಸಕಬ್ಬಾಳು	ಪ.ಜಾ.	
೨೩.	ಶಿವಸ್ವಾಮಿ	೨೭	ಅರ್ಚಕ	ಕಬ್ಬಾಳು	ಒಕ್ಕಲಿಗ	ಪಿ.ಯು.ಸಿ.
೨೪.	ಗೌರಮ್ಮ	೫೫	ಒಕ್ಕಲುತನ	ಬೊಮ್ಮನಹಳ್ಳಿ	ಪ.ಜಾ	
೨೫.	ಜಯ್ಯಮ್ಮ	೫೮	ಒಕ್ಕಲುತನ	ಹೊಸಕಬ್ಬಾಳು	ಪ.ಜಾ.	
೨೬.	ವೆಂಕಟಮ್ಮ	೬೦	ಒಕ್ಕಲುತನ	ಬೊಮ್ಮನಹಳ್ಳಿ	ಪ.ಜಾ.	
೨೭.	ಮರಿಯಪ್ಪ	೭೦	ಒಕ್ಕಲುತನ	ಹೊಸಕಬ್ಬಾಳು	ಒಕ್ಕಲಿಗ	
೨೮.	ಗುಂಡಮ್ಮ	೬೦	ಗುರುಮಗಳು ಜನಪದಗೀತೆ ಹಾಡುಗಾರ್ತಿ	ಕುರುಬಳ್ಳಿ	ಪ.ಜಾ.	
೨೯.	ಚೆನ್ನಬಸವಮ್ಮ	೫೦	ಕೂಲಿ	ಹೊಸಕಬ್ಬಾಳು	ಪ.ಜಾ.	
೩೦.	ರಾಜಮ್ಮ	೩೮	ಗಾರ್ಮೆಂಟ್ಸ್	ಬೊಮ್ಮನಹಳ್ಳಿ	ಪ.ಜಾ.	
೩೧.	ದೊಡ್ಡತಾಯಮ್ಮ	೭೮		ಬೊಮ್ಮನಹಳ್ಳಿ	ಪ.ಜಾ.	
೩೨.	ಅಭಿ ಎಚ್.	೧೮	ವಿದ್ಯಾಭ್ಯಾಸ	ಕಬ್ಬಾಳು	ಒಕ್ಕಲಿಗ	ಪಿ.ಯು.ಸಿ.
೩೩.	ಗೋವಿಂದ	೨೨	ಪೂಜಾಕುಣಿತ	ಅಚ್ಚಲು	ಒಕ್ಕಲಿಗ	ಪಿ.ಯು.ಸಿ.
೩೪.	ಕರೀಗೌಡ	೮೦	ಒಕ್ಕಲುತನ	ತೋಟಹಳ್ಳಿ	ಒಕ್ಕಲಿಗ	
೩೫.	ಸಿದ್ದಯ್ಯ	೫೫	ತಮಟೆವಾದ್ಯ	ಅಚ್ಚಲು	ಪ.ಜಾ.	
೩೬.	ಶಿವಚೆನ್ನಯ್ಯ	೪೦	ಗುಮಾಸ್ತರು	ತೋಟಹಳ್ಳಿ	ಪ.ಜಾ.	
೩೭.	ಜಗದೀಶ	೩೮	ಪೂಜಾಕುಣಿತ	ತೋಟಹಳ್ಳಿ	ಅಗಸ	SSLC
೩೮.	ಚೆನ್ನಬಸವೇಗೌಡ	೫೫	ಒಕ್ಕಲುತನ	ತೋಟಹಳ್ಳಿ	ಒಕ್ಕಲಿಗ	
೩೯.	ರಂಗಪ್ಪ	೭೦	ಕಲ್ಲುಕೆಲಸ	ವಡ್ಡರದೊಡ್ಡಿ	ಬೋವಿ	
೪೦.	ಕಾಳದುರ್ಗಣ್ಣ	೫೦	ಒಕ್ಕಲುತನ	ಬೊಮ್ಮನಹಳ್ಳಿ	ಪ.ಜಾ	

೪೧.	ಮಾದಯ್ಯ	೫೫	ಒಕ್ಕಲುತನ	ಹೊಸಕಬ್ಬಾಳು	ಪ.ಜಾ	
೪೨.	ವೆಂಕಟಗಿರಿಯಪ್ಪ	೬೬	ಒಕ್ಕಲುತನ	ಕಬ್ಬಾಳು	ಒಕ್ಕಲಿಗ	
೪೩.	ಗೋವಿಂದ	೩೩	ಪೂಜಾಕೆಲಸ	ಕಬ್ಬಾಳು	ಒಕ್ಕಲಿಗ	SSLC
೪೪.	ಚಿಕ್ಕರಾಚಮ್ಮ	೪೫	ಕೂಲಿ	ಬೊಮ್ಮನಹಳ್ಳಿ	ಪ.ಜಾ.	
೪೫.	ಮುನಿರಾಜಯ್ಯ	೫೦	ಒಕ್ಕಲುತನ	ಹೊಸಕಬ್ಬಾಳು	ಪ.ಜಾ.	
೪೬.	ಕಾಳೇಗೌಡ	೬೦	ಒಕ್ಕಲುತನ	ಬೊಮ್ಮನಹಳ್ಳಿ	ಒಕ್ಕಲಿಗ	
೪೭.	ಕುಳ್ಳಮ್ಮ	೬೮	ಒಕ್ಕಲುತನ	ಹೊಸಕಬ್ಬಾಳು	ಪ.ಜಾ	
೪೮.	ಮಹಾದೇವು	೩೮	ಪಾನಿಪುರಿ ಅಂಗಡಿ	ಕಬ್ಬಾಳು	ಒಕ್ಕಲಿಗ	
೪೯.	ಜಗದೀಶ	೩೨	ಶಿಕ್ಷಕ	ಹೊಸಕಬ್ಬಾಳು	ಪ.ಜಾ	ಎಂ.ಎ.
೫೦.	ಜ್ಯೋತಿ ಲಕ್ಷ್ಮಿ	೩೮	ಮಾಜಿ.ಗ್ರಾ.ಅ.	ಹೊಸಕಬ್ಬಾಳು	ಪ.ಜಾ	SSLC
೫೧.	ಗೋವಿಂದ	೨೪	ವಿದ್ಯಾಭ್ಯಾಸ	ಕಬ್ಬಾಳು	ಒಕ್ಕಲಿಗ	PUC
೫೨.	ಶಿವಲಿಂಗೇಗೌಡ	೬೫	ರೇಷ್ಮೆಕೃಷಿ	ಚೆಲ್ಲಪತ್ರಮ್ಮನದೊಡ್ಡಿ	ಒಕ್ಕಲಿಗ	
೫೩.	ಸಿದ್ದಮ್ಮ	೬೦	ಕೂಲಿ	ಬೊಮ್ಮನಹಳ್ಳಿ	ಪ.ಜಾ.	
೫೪.	ನಾಥಯ್ಯ	೬೦	ಒಕ್ಕಲುತನ	ಬೊಮ್ಮನಹಳ್ಳಿ	ಪ.ಜಾ.	
೫೫.	ಮರಿಗೌಡ	೬೫	ಒಕ್ಕಲುತನ	ಹತ್ತಿಹಳ್ಳಿ	ಒಕ್ಕಲಿಗ	
೫೬.	ಕಾಳಯ್ಯ	೪೫	ಬ್ಯಾಂಕ್ ಉದ್ಯೋಗಿ	ಹೊಸಕಬ್ಬಾಳು	ಪ.ಜಾ.	
೫೭.	ದೇವೇಗೌಡ	೪೫	ಬಿಲ್‌ಕಲೆಕ್ಟರ್	ಕಬ್ಬಾಳು	ಒಕ್ಕಲಿಗ	
೫೮.	ಸಿದ್ದರಾಮಯ್ಯ	೫೦	ಅಡುಗೆಕೆಲಸ	ಕಂಸಾಗರ	ಪ.ಜಾ.	
೫೯.	ರಾಜು	೪೦	ರೇಷ್ಮೆಕೃಷಿ	ಬಾಪೂಜಿಕಾಲೋನಿ	ಪ.ಜಾ.	
೬೦.	ಸಣ್ಣೈದಪ್ಪ	೪೫	ರೇಷ್ಮೆಕೃಷಿ	ಗೇರಹಳ್ಳಿ	ಪ.ಜಾ.	
೬೧.	ಚಿನ್ನಗಿರಿ	೪೦	ಸಮಾಜಕಾರ್ಯ	ಗೇರಹಳ್ಳಿ	ಪ.ಜಾ.	
೬೨.	ಮೊರಳೆಸಿದ್ದಮ್ಮ	೮೫		ಗೇರಹಳ್ಳಿ	ಪ.ಜಾ.	
೬೩.	ಸಿದ್ದಯ್ಯ	೭೫	ಒಕ್ಕಲುತನ	ಬೊಮ್ಮನಹಳ್ಳಿ	ಪ.ಜಾ.	
೬೪.	ಕರಿಸಿದ್ದಯ್ಯ	೪೫	ಒಕ್ಕಲುತನ	ಬೊಮ್ಮನಹಳ್ಳಿ	ಪ.ಜಾ.	

೬೫.	ಗಿರೀಶ್	೩೮	ಅರ್ಚಕರು	ಕಬ್ಬಾಳು	ಲಿಂಗಾಯತ	
೬೬.	ನಾಗರಾಜು	೩೯	ದೇವಸ್ಥಾನ ಕೆಲಸ	ತೋಟಹಳ್ಳಿ	ಒಕ್ಕಲಿಗ	
೬೭.	ತಮಟೆಕೃಷ್ಣಣ್ಣ	೫೦	ತಮಟೆವಾದ್ಯ	ಬೊಮ್ಮನಹಳ್ಳಿ	ಪ.ಜಾ.	
೬೮.	ಮಾರಪ್ಪ	೪೦	ದೇವಸ್ಥಾನದ ಕೆಲಸ	ಬೊಮ್ಮನಹಳ್ಳಿ	ಪ.ಜಾ.	
೬೯.	ಚೂಡಮಣಿ	೨೮	ಶಿಕ್ಷಕಿ	ಹೊಸಕಬ್ಬಾಳು	ಒಕ್ಕಲಿಗ	ಎಂ.ಎ.
೭೦.	ಕಾಂತಮ್ಮ	೫೦	ಒಕ್ಕಲುತನ	ಹೊಸಕಬ್ಬಾಳು	ಒಕ್ಕಲಿಗ	
೭೧.	ಕುಮಾರ	೩೫	ಕ್ಯಾಸೆಟ್ ಅಂಗಡಿ	ಕಬ್ಬಾಳು	ಒಕ್ಕಲಿಗ	ಪಿ.ಯು.ಸಿ.
೭೨.	ರಘು	೨೬	ಹೂವಿನ ಅಂಗಡಿ	ಕಬ್ಬಾಳು	ಒಕ್ಕಲಿಗ	ಪಿ.ಯು.ಸಿ.
೭೩.	ಬಸವಲಿಂಗ	೩೩	ಬಸ್‌ಡ್ರೈವರ್	ಹೊಸಕಬ್ಬಾಳು	ಪ.ಜಾ.	೬ನೇ ತರಗತಿ
೭೪.	ಪಟೇಲ್‌ವೇಲಪ್ಪ	೭೦	ಒಕ್ಕಲುತನ	ವಡೇರಹಳ್ಳಿ	ಒಕ್ಕಲಿಗ	ವಿದ್ಯಾವಂತರು
೭೫.	ಕೊಣೆಯಪ್ಪ	೭೦	ಒಕ್ಕಲುತನ	ಹೊಸಕಬ್ಬಾಳು	ಪಜಾ	
೭೬.	ಕೆಂಪಾಜಮ್ಮ	೫೦	ಒಕ್ಕಲುತನ	ಹೊಸಕಬ್ಬಾಳು	ಪಜಾ	
೭೭.	ಪುಟ್ಟಣ್ಣ	೪೫	ಅಚ್ಚಲು ದೇವಸ್ಥಾನ ಪೂಜಾರಿ	ಅಚ್ಚಲು	ಒಕ್ಕಲಿಗ	
೭೮.	ಶಿವಣ್ಣ	೫೫	ಒಕ್ಕಲುತನ	ಅಚ್ಚಲು	ಒಕ್ಕಲಿಗ	
೭೯.	ಕೆಂಪಯ್ಯ	೫೦	ಕೃಷಿ	ಹೊಸಕಬ್ಬಾಳು	ಪಜಾ	
೮೦.	ಬೀರಣ್ಣ	೬೦	ಕೃಷಿ	ಹೊಸಕಬ್ಬಾಳು	ಪಜಾ	
೮೧.	ಪ್ರಮೀಳ	೧೮	ವಿದ್ಯಾಭ್ಯಾಸ	ಹೊಸಕಬ್ಬಾಳು	ಪಜಾ	ಪಿ.ಯು.ಸಿ.
೮೨.	ರಾಜು	೨೨	ವಿದ್ಯಾಭ್ಯಾಸ	ಕಬ್ಬಾಳು	ಒಕ್ಕಲಿಗ	
೮೩.	ರಾಮಮೂರ್ತಿ	೨೮	ಪೂಜೆ ಸಾಮಾನು ಅಂಗಡಿ	ಕಬ್ಬಾಳು	ಒಕ್ಕಲಿಗ	
೮೪.	ಅಂದಾನಿ	೪೦	ಗ್ರಾಮಸಹಾಯಕ	ತೋಟಹಳ್ಳಿ	ಪಜಾ	
೮೫.	ರಾಮಣ್ಣ	೩೫	ಒಕ್ಕಲುತನ	ಹೊಸದೊಡ್ಡಿ	ಪಜಾ	

ಗ್ರಂಥಸೂಚಿ

೧. ಇಮ್ರಾಪುರ ಎಸ್.ಜಿ., ಜನಪದ ಒಗಟುಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೯.

೨. ಈರಯ್ಯ ಕಿಲ್ಲೇದಾರ, ಸಾಂಪ್ರದಾಯಿತ ಒಕ್ಕಲುತನ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಬೆಂಗಳೂರು, ೨೦೦೮.

೩. ಕಾಳೇಗೌಡ ನಾಗವಾರ, ಡಾ.ಅಂಬಳಿಕೆ ಹಿರಿಯಣ್ಣ, ಜೀ.ಶಂ.ಪ. ಅವರ ಜಾನಪದ ಬರಹಗಳು, ಸಂಪಾದಕರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ ರಸ್ತೆ, ಬೆಂಗಳೂರು. ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ (ಭಾಗ-೨)

೪. ಕಾಳೇಗೌಡ ನಾಗವಾರ, ಬೀದಿಮಕ್ಕಳು ಬೆಳೆದೋ, ಸಪ್ನ ಬುಕ್ ಹೌಸ್ (ಪಿ) ಲಿಮಿಟೆಡ್, ಆರ್ಜ ನಂ.೧೧, ೩ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು, ೧೯೭೭.

೫. ಕ್ಯಾತನಹಳ್ಳಿ ರಾಮಣ್ಣ ಸಂ., ಕಬ್ಬಾಳು ಕುಳಿಯಲ್ಲಿ ಹುಲಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೫.

೬. ಕೃಷ್ಣಪ್ಪ ಕೆ., ಹೊಸಕೋಟೆ ತಾಲೂಕು ಒಂದು ಸಾಂಸ್ಕೃತಿಕ ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ ಅಪ್ರಕಟಿತ, ಬೆಂಗಳೂರು ವಿಶ್ವವಿದ್ಯಾನಿಲಯ, ೨೦೦೭.

೭. ಕೋಟಗಾನಹಳ್ಳಿ ರಾಮಯ್ಯ, ಸಿಂದ್ ಮಾದಿಗರ ಸಂಸ್ಕೃತಿ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೮. ಗದ್ದಗಿಮಠ ಬಿ.ಎಸ್., ಗದ್ದಿಮಠ ಬರಹಗಳು, ಕನ್ನಡ ಅಧ್ಯಯನ ಕೇಂದ್ರ, ಮಾನಸಗಂಗೋತ್ರಿ, ಮೈಸೂರು.೧೯೮೮.

೯. ಗೋಪಾಲರಾವ್ ಎಚ್.ಎಸ್., ಜಿ.ಅಬ್ದುಲ್ ಬಷೀರ್, ಕನಕಸಿರಿ, ಅಖಿಲ ಭಾರತ ೬೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸಂಸ್ಮರಣ ಸಂಪುಟ, ಸಂಗ್ರಹ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯.

೧೦. ಚಿಕ್ಕಣ್ಣ ಯಣೆಕಟ್ಟೆ, ತುಮಕೂರು ಜಿಲ್ಲೆ ಜಾನಪದೀಯ ಅಧ್ಯಯನ, ಗಡಿನಾಡ ಜಾನಪದ ಸಂಪರ್ಕ ಕೇಂದ್ರ, ಕಾಳಿದಾಸನಗರ, ಸಿರಾ, ೨೦೦೧.

೧೧. ಚಂದ್ರಶೇಖರ ಬಿ.ದಾಮ್ಲೆ, ಭಾರತೀಯ ಸಾಮಾಜಿಕ ಅಧ್ಯಯನ, ನವೀನ ಪ್ರಕಾಶನ, ನಂ.೨, ಸೆಕೆಂಡ್ ಕ್ರಾಸ್, ಮುನೇಶ್ವರ ಬ್ಲಾಕ್, ರಾಜಮಹಲ್ ಗುಟ್ಟಹಳ್ಳಿ, ಬೆಂಗಳೂರು.೦೨

೧೨. ಚಂದ್ರಬಾಬು ಮುಳುಬಾಗಿಲು ವೈ., ಜನಪದ ಕಾವಡಿ ಹಬ್ಬಗಳು: ಸಾಂಸ್ಕೃತಿಕ ಅಧ್ಯಯನ, ಅಂಜಲಿ ಪ್ರಕಾಶನ, ಮುಳುಬಾಗಿಲು, ಕೋಲಾರ ಜಿಲ್ಲೆ-೨೦೧೧.

೧೩. ಜಮ್ನಾದಾಸ್ ಕೆ., ಅನುವಾದ.ಹೊ.ಬ.ನಾಗಸಿದ್ಧಾರ್ಥ ಹೊಲೆಯಾರ್, ತಿರುಪತಿ ಬಾಲಾಜಿ ಒಂದು ಬುದ್ಧ ವಿಹಾರ, ಬೌದ್ಧ ಸಾಹಿತ್ಯ ಸಂಘ(ರಿ), ಗಾಯಿತ್ರಿಪುರಂ, ನಜರ್‌ಬಾದ್ ಮೊಹಲ್ಲಾ, ಮೈಸೂರು, ೨೦೧೩.

೧೪. ಜಯಲಕ್ಷ್ಮೀ ಸೀತಾಪುರ, ಒಗಟು ಪ್ರಚಾರ ಪುಸ್ತಕ ಮಾಲೆ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು, ೨೦೦೯.

೧೫. ತಿಪ್ಪೇಸ್ವಾಮಿ ಜಿ.ಆರ್., ಜಾನಪದ ಸಿದ್ಧಾಂತಗಳು-೨, ಡಾ.ರಂಗಾರೆಡ್ಡಿ ಕೋಡಿರಾಂಪುರ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೩

೧೬. ದೇವಿಪ್ರಸಾದ್ ಚಟ್ಟೋಪಾಧ್ಯಾಯ, ಸಂಗ್ರಹಾನುವಾದ, ಜಿ.ರಾಮಕೃಷ್ಣ, ಲೋಕಾಯುತ, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು, ೨೦೧೧.

೧೭. ನರಸಿಂಹಮೂರ್ತಿ ಎಚ್.ವಿ., ನಮ್ಮ ಹಬ್ಬಗಳು, ನವದುರ್ಗಾ ಲೇಸರ್‌ಟೆಕ್ ಹೊನ್ನಪದ್ಮ ಪ್ರಿಂಟರ್ಸ್, ಉಡುಪಿ, ೨೦೦೨.

೧೮. ನಾಗರಾಜಯ್ಯ ಹಂಪ, ಕರ್ನಾಟಕ ಜಾತ್ರೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೯. ನಾಗೇಗೌಡ ಎಚ್.ಎಲ್., ಪ್ರಧಾನ ಸಂಪಾದಕರು, ಮಹಾದೇವಯ್ಯ ಟಿ.ಆರ್, ಕನ್ನಡ ಜಾನಪದ ಕೋಶ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು, ೧೯೯೮.

೨೦. ನಾಯಕ ಹಾ.ಮಾ., ಜಾನಪದ ಸ್ವರೂಪ, ಟಿ.ವಿ.ಮೆಮೋರಿಯಲ್ ಸಿರಿಸ್ ಮೈಸೂರು, ೧೯೭೧.

೨೧. ನೆಹರೂ ಬಾಲ ಪುಸ್ತಕಾಲಯ ಸಂಕಲನ: ಭಾರತದ ಹಬ್ಬಗಳು, ನಿರ್ದೇಶಕರು, ನ್ಯಾಷನಲ್ ಬುಕ್‌ಟ್ರಸ್ಟ್ ಇಂಡಿಯಾ ಎ-೫ ಗ್ರೀನ್‌ಪಾರ್ಕ್, ಹೊಸ ದೆಹಲಿ ಇವರಿಂದ ಪ್ರಕಟಿತ, ೧೯೮೨.

೨೨. ಪ್ರಶಾಂತ್ ಎಚ್.ಡಿ., ಸಂವಾದ ಮಾಸ ಪತ್ರಿಕೆ (ಸಂಪಾದಕ ಇಂದೂಧರ ಹೊನ್ನಾಪುರ), ಸಂಪುಟ ೧೧, ಸಂಚಿಕೆ ೮, ಜೂನ್ ೨೦೧೩ರ ಹಳ್ಳಿಮಕ್ಕಳ ಆತಂಕಗಳು ಮತ್ತು ಸವಾಲುಗಳು ಲೇಖನ, ಸ್ಫೂರ್ತಿಧಾಮ, ಅಂಜನಾನಗರ, ಮಾಗಡಿ ರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು.೯೧.

೨೩. ಪರಮಶಿವಯ್ಯ ಜಿ.ಶಂ., ಕನ್ನಡ ಜನಪದ ಕಥೆಗಳು, ಚೇತನ ಬುಕ್ ಹೌಸ್, ಮೈಸೂರು.೧೯೮೮.

೨೪. ಪಾಟೀಲ ಬಿ.ಪಿ., ಗ್ರಾಮದೇವತೆಗಳು(ಉಪನ್ಯಾಸ ಗ್ರಂಥಮಾಲೆ), ಕರ್ನಾಟಕ ವಿಶ್ವವಿದ್ಯಾಲಯ, ಪ್ರಸಾರಾಂಗ, ಧಾರವಾಡ, ೧೯೯೬.

೨೫. ಪುಟ್ಟಪ್ಪ ಕೆ.ವಿ., **ಕನ್ನಡ ಒಗಟುಗಳ ಸಮೀಕ್ಷೆ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ, ಮೈಸೂರು, ೧೯೭೬.

೨೬. ಬಸವರಾಜು ತೋಟಹಳ್ಳಿ, **ಗ್ರಾಮದೇವತೆಗಳ ಅಧ್ಯಯನ ಒಂದು ಸಾಂಸ್ಕೃತಿಕ ಶೋಧ**, ದೇವಿಪ್ರಕಾಶನ, ವಿನಾಯಕನಗರ, ಬೆಂಗಳೂರು, ೨೦೦೭.

೨೭. ಬಸವರಾಜ ಸಬರದ, **ಸಮುದಾಯ ಮತ್ತು ಸಂಸ್ಕೃತಿ**, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, ೨೦೦೨.

೨೮. ಬಾಬಾ ಸಾಹೇಬ್ ಡಾ.ಬಿ.ಅಂಬೇಡ್ಕರ್, **ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹ ಮತ್ತು ಭಾಷಣಗಳು**, ಸಂಪುಟ ೫,೯,೪, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕಲಾಗ್ರಾಮ, ಜ್ಞಾನ ಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ ಮಲ್ಲತ್ತಹಳ್ಳಿ, ಬೆಂಗಳೂರು, ೨೦೧೦.

೨೯. ಬಾಲಗೋಪಾಲ್ ಕೆ. ಮೂಲ., ಅನುವಾದ. ಎಚ್.ಎಸ್.ಶ್ರೀಮತಿ, **ಪ್ರಾಚೀನ ಭಾರತದ ಚರಿತ್ರೆ**, ಡಿ.ಡಿ.ಕೋಸಂಬಿಯವರ ಚಿಂತನೆಗಳು, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ೨೦೧೨.

೩೦. ಭಗವಾನ್ ಕೆ.ಎಸ್., **ಶಂಕರಾಚಾರ್ಯ ಮತ್ತು ಪ್ರತಿಗಾಮಿತನ**, ಮಹಿಮಾ ಪ್ರಕಾಶನ, ಕುವೆಂಪುನಗರ, ಮೈಸೂರು, ಹದಿನಾರನೆಯ ಮುದ್ರಣ, ೨೦೧೩.

೩೧. ಭೈರೇಗೌಡ ಎಂ., ತಾ.ಸಿ.ತಿಮ್ಮಯ್ಯ, **ಅರ್ಕಾವತಿ**, ಅಖಿಲ ಭಾರತ ೭೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ, ಕನಕಪುರ ಸಂಗ್ರಹ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯.

೩೨. ಭಂಡಾರಿ ಆರ್.ವಿ., **ವರ್ಣದಿಂದ ವರ್ಗದ ಕಡೆಗೆ**, ಕನ್ನಡ ಪುಸ್ತಕ ಪ್ರಾಧಿಕಾರ, ಚಾಮರಾಜಪೇಟೆ, ಬೆಂಗಳೂರು, ೨೦೦೩.

೩೩. ಮಲ್ಲಿಕಾರ್ಜುನ ಹೊಸಪಾಳ್ಯ, **ದೇಸೀ ಕೃಷಿಜ್ಞಾನ ಸಂಪುಟ-೪**, ಈ ನೆಲದ ಬದುಕು, ಕೃಷಿ ಆಚರಣೆಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು, ೨೦೦೮.

೩೪. ಮೂರ್ತಿರಾವ್ ಎ.ಎನ್, **ದೇವರು**, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು, ೨೦೧೧.

೩೫. ಮೈಲಹಳ್ಳಿ ರೇವಣ್ಣ, **ಜಂಬುನೇರ್ಲೆ ಹಣ್ಣು ಜಗ್ಗಿಬಿದ್ದಾವೆ, ಒಗಟುಗಳ ಸಂಕಲನ**, ಎನ್.ಆರ್.ಎ.ಎಂ,ಎಚ್.ಪ್ರಕಾಶನ, ಕೋಟೇಶ್ವರ, ೧೯೯೨.

೩೬. ಮಂಜುನಾಥ ಬೇವಿನಕಟ್ಟಿ, **ಕನ್ನಡ ಜನಪದ ನಂಬಿಕೆಗಳು**, ಜ್ಯೋತಿಪ್ರಕಾಶನ, ಮೈಸೂರು, ೨೦೦೭.

೩೭. ಮಂಜುನಾಥ ಬೇವಿನಕಟ್ಟಿ, ಮಲಿಯಮ್ಮ ನಿನ್ನಾಲ್ಕುದೋ... ಉಧೋ.... ಅಂಬಿಕಾ ಪ್ರಕಾಶನ, ಹೊಸಪೇಟೆ, ೧೯೯೪.

೩೮. ರಘೋತ್ತಮ ಹೊ.ಬ. ಅಂಬೇಡ್ಕರ್ ಎಂಬ ಕರಗದ ಬಂಡೆ, ಸಾಂಚಿ ಪುಸ್ತಕ ೧೩/೧೮೪, ೨ನೇ ಕ್ರಾಸ್, ಅಂಬೇಡ್ಕರ್ ಬಡಾವಣೆ, ಚಾಮರಾಜನಗರ, ೨೦೧೨.

೩೯. ರಂಗಾರೆಡ್ಡಿ ಕೋಡಿರಾಂಪುರ, ಜಾನಪದ ೧೯೯೩, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೫

೪೦. ರಹಮತ್ ತರಿಕೆರೆ, ಕರ್ನಾಟಕ ನಾಥಪಂಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೪೧. ಲೂಯಿಸ್ ರೈಸ್ ಬಿ., ಎಫಿಗ್ರಫಿ ಕರ್ನಾಟಕ, ಸಂಪುಟ.೯, ಬೆಂಗಳೂರು ಜಿಲ್ಲೆಯಲ್ಲಿರುವ ಶಾಸನಗಳು, ಮೈಸೂರು ಸರ್ಕಾರ ಕೇಂದ್ರ ಮುದ್ರಣ, ಮೈಸೂರು ಆರ್ಕಿಯಾಜಿಕಲ್ ಸಿರೀಸ್, ೧೯೦೫.

೪೨. ವಿದ್ವಾನ್ ವಿ.ಎನ್.ಭಟ್, ಭಾರತೀಯ ಹಬ್ಬಗಳ ವೈಶಿಷ್ಟ್ಯ, ವಿಶ್ವನಾಥ ಪ್ರಕಾಶನ, ಜ್ಞಾನದೀಪ ಸಹ್ಯಾದ್ರಿನಗರ, ಮೂರನೇ ಹಂತ, ವಿನೋಬಾನಗರ ಎಕ್ಸ್‌ಟೆನ್ಷನ್, ಶಿವಮೊಗ್ಗ.೨೦೦೨.

೪೩. ವೀರಣ್ಣ ದಂಡೆ, ಡಾ.ಶ್ರೀಪಾದಶೆಟ್ಟಿ, ಸುವರ್ಣ ಜಾನಪದ ಲೇಖನಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರೋಡ್, ಬೆಂಗಳೂರು, ೨೦೦೬.

೪೪. ವೆಂಕಟಾಚಲಾಶಾಸ್ತ್ರಿ ಟಿ.ವಿ., ಕನಕಪುರ ಎಂಬ ಕಾನಕಾನ ಹಳ್ಳಿಯ ಚರಿತ್ರೆ, ಪೂರ್ಣಿಮಾ ಪ್ರಿಂಟರ್ಸ್, ಚಾಮರಾಜನಪೇಟೆ, ಬೆಂಗಳೂರು, ೨೦೦೭.

೪೫. ಸಿದ್ಧಲಿಂಗಯ್ಯ, ಗ್ರಾಮ ದೇವತೆಗಳು, ಮೂಲಭಾರತಿ ಪ್ರಕಾಶನ, ಮೂರನೆ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು, ೧೯೯೭.

೪೬. ಸೂರ್ಯನಾಥ ಕಾಮತ್, ಕರ್ನಾಟಕ ರಾಜ್ಯ ಗ್ಯಾಜೆಟಿಯರ್, ಬೆಂಗಳೂರು, ಗ್ರಾಮಾಂತರ ಜಿಲ್ಲೆ, ಕರ್ನಾಟಕ ಸರ್ಕಾರ, ಕರ್ನಾಟರ ರಾಜ್ಯ ಸರ್ಕಾರ ಪ್ರಕಟಣೆ, ೧೯೮೯.

೪೭. ಸೋಮಶೇಖರ ಇಮ್ರಾಪುರ, ಆಯ್ದ ಜನಪದ ಒಗಟುಗಳು, ಚಿತ್ತಾರ, ಚೇತನಾ ಪ್ರಕಾಶನ, ೧೨ನೇ ಅಡ್ಡರಸ್ತೆ, ನಿರ್ಮಲಾನಗರ, ಧಾರವಾಡ, ೧೯೯೮.

೪೮. ಹಿರೇಮಠ ಎಸ್.ಎಸ್., ಜಾತ್ರೆಗಳು, ಸಮತಾ ಪ್ರಕಾಶನ, ಬಿ.ವೆಂಕೋಬ, ಮುದಿಯಪ್ಪನ ಗುಡಿ ಹತ್ತಿರ, ಹೊಸಪೇಟೆ, ೧೯೯೩.

೪೯. ಹಿರೇಮಠ ಎಸ್.ಎಸ್., ಕರ್ನಾಟಕ ಸಂಸ್ಕೃತಿ ಪರಂಪರೆ(ಭಾಗ-೧), ಹಬ್ಬಗಳು, ಸಮತಾ ಪ್ರಕಾಶನ, ಹರಪನಹಳ್ಳಿ, ೧೯೯೨.

ಪತ್ರಿಕೆ ಮಾಧ್ಯಮಗಳು

೧. ಪ್ರಜಾವಾಣಿ, ಕನ್ನಡ ದಿನಪತ್ರಿಕೆ, ಬೆಂಗಳೂರು, ಕರ್ನಾಟಕ

೨. ಸಂವಾದ ಮಾಸ ಪತ್ರಿಕೆ, ಸಂಪುಟ ೧೧, ಸಂಚಿಕೆ ೮, ಸಂಪಾದಕ ಇಂದೂಧರ ಹೊನ್ನಾಪುರ.


೩. ಜಾನಪದ ಜಗತ್ತು, ಜಾನಪದಕ್ಕೆ ಮೀಸಲಾದ ಪತ್ರಿಕೆ, ಸಂಪುಟ ೩೫, ಸಂಚಿಕೆ ೫, ಅಕ್ಟೋಬರ್ ಡಿಸೆಂಬರ್, ೨೦೧೦, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು

೪. ಟಿ.ವಿ.೯, ಕನ್ನಡ ದೃಶ್ಯ ಮಾಧ್ಯಮ (ನ್ಯೂಸ್ ಚಾನೆಲ್) ಕರ್ನಾಟಕ

English Books

1. Thursto E., Castes and tribes of south India, Volumes 2-VI-105, Madras-1909.
2. Ethrenfels O.R, Mother Right in India, hyderabad-1941

ಕಬ್ಬಾಳು ನಕ್ಷೆ





೧. ಕಬ್ಬಾಳು ಗ್ರಾಮದ ಹೆಬ್ಬಾಗಿಲು



೨. ಕಬ್ಬಾಳಮ್ಮನ ದೇವಾಲಯ



೩. ಬೆಟ್ಟದ ಮೇಲಿಂದ ಕಾಣುವ ಕಬ್ಬಾಳು ಗ್ರಾಮ



೪. ಕಬ್ಬಾಳು ಬೆಟ್ಟ



೫. ಕಬ್ಬಾಳಮ್ಮನ ವಿಗ್ರಹ



೬.ಕಂಬದರಾಯ(ಕಬ್ಬಾಳಮ್ಮನ ಅಣ್ಣ)



೭. ಬೆಟ್ಟದ ಮೇಲಿನ ಮದ್ದಿನ ಮನೆ



೮. ರಂಗಸ್ವಾಮಿ(ಕಬ್ಬಾಳಮ್ಮನ ಗಂಡ)



೯. ಕಲ್ಲಾಗಿರುವ ಬಿಸಿಲಮ್ಮನ ಮಕ್ಕಳು



೧೦. ಯಳವಾರ



೧೧. ಕೊಂಡ ಹಾಯುತ್ತಿರುವುದು



೧೨. ಸಿಡಿ ಆಡುತ್ತಿರುವುದು



೧೩. ತಂಬಿಟ್ಟಿನ ಆರತಿ



೧೪. ಬಲಿ ಕೊಡುತ್ತಿರುವುದು



೧೫. ಕಬ್ಬಾಳಮ್ಮನನ್ನು ಕುಣಿಸುತ್ತಿರುವುದು



೧೬. ನಗಾರಿ



೧೭. ಪೂಜಾ ವಸ್ತುಗಳ ಅಂಗಡಿ



೧೮. ಭಕ್ತರನ್ನು ದಾಟುತ್ತಿರುವ ಬಸವ



೧೯. ಛತ್ರಗಳು



೨೦. ರಾಗಿ ಮುದ್ದೆ ತಯಾರಿಸುತ್ತಿರುವುದು



೨೧. ಉಪ್ಸಾರು ರಾಗಿ ಮುದ್ದೆ



೨೨. ವಕ್ತೃಗಳಿಂದ ಮಾಹಿತಿ ಸಂಗ್ರಹಣೆ



೨೩. ಕಬ್ಬಾಳಿನ ಕೋಣ



೨೪. ರಾಗಿ ಹೊಲ ಹರಗುತ್ತಿರುವುದು



೨೫. ರಾಗಿ ಹೊಲ



೨೬. ರಾಗಿ ಮೆದೆ



೨೭. ಒಕ್ಕಣೆ ಕೆಲಸ ಮಾಡುತ್ತಿರುವುದು



೨೮. ಅರಿಗೆ(ಕರಿಯಣ್ಣ-ಕೆಂಚಣ್ಣ)



೨೯. ದೇವರು ತರುತ್ತಿರುವುದು



೩೦. ಗಂಡು ಕರೆತರುತ್ತಿರುವುದು